# ಸ್ವಾತಂತ್ರ್ಯ ಶರಣ್ಯರು



ಸಂಪಾದಕ

**ಮೋಹನ ನಾಗಮ್ಮನವರ**

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

# ಸ್ವಾತಂತ್ರ್ಯ ಶರಣ್ಯರು

*ದಿ. ಶ್ರೀಮತಿ ಶಕುಂತಲಾ ದಾಬಡೆ ಹಾಗೂ*
*ಶ್ರೀ ನರಸಿಂಹ ದಾಬಡೆಯವರ ಆತ್ಮ ವೃತ್ತಾಂತ*

*ಸಂಪಾದಕ :*

**ಮೋಹನ ನಾಗಮ್ಮನವರ**

*ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ*

***SWATANTRYA SHARANYARU :*** An autobiography of Late Smt. Shakuntala Dabade and Shri Narasimha Dabade. Edited by **Mohan Nagammanavar,** 2775, Navodaya Nagara, DHARWADA - 580 003 (Karnataka). Tel : 0836-2446263 Cell : 9448746951

First Impression : 2005

Pages : xxii + 210

© : Editor

Price : Rs. 100/-

Publisher : Karnataka Vidyavardhaka Sangha
Dharwada - 580 001.
KARNATAKA
☎ : 0836 - 2440283

Printed by : B. G. Printers
Opp. Corporation,
Dharwad - 580 001.
☎ : 0836 - 2444948

ಪ್ರಥಮ ಮುದ್ರಣ : ೨೦೦೫

ಪುಟಗಳು : xxii + ೨೧೦

ಹಕ್ಕುಗಳು : ಸಂಪಾದಕರು

ಬೆಲೆ : ರೂ. ೧೦೦/-

ಪ್ರಕಾಶಕರು : ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ - ೫೮೦ ೦೦೧.
ಕರ್ನಾಟಕ
☎ : ೨೪೪೦೨೮೩

ಮುದ್ರಕರು : ಬಿ. ಜಿ. ಪ್ರಿಂಟರ್ಸ್
ಧಾರವಾಡ - ೫೮೦ ೦೦೧.
☎ : ೨೪೪೪೯೪೮

# ಅರ್ಪಣೆ

ಸ್ವಾತಂತ್ರ್ಯ ಹೋರಾಟ,
ಕರ್ನಾಟಕದ ಏಕೀಕರಣ, ಗೋಕಾಕ್ ಚಳುವಳಿ,
ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಸೇರಿದಂತೆ
ನಾಡು ನುಡಿಯ ಏಳ್ಗೆಗಾಗಿ ನಿರಂತರ ಹೋರಾಟ ನಡೆಸುತ್ತಿರುವ
ನಾಡೋಜ **ಡಾ. ಪಾಟೀಲ ಪುಟ್ಟಪ್ಪ**ನವರಿಗೆ

ಮತ್ತು

ಅವರೆಲ್ಲ ಕ್ರಿಯೆಗಳ ಹಿಂದೆ ನೆರಳಾಗಿ ನಿಂತು ಕೈಗೂಡಿಸಿದ
ಅವರ ಸಹಧರ್ಮಿಣಿ
ಮಾತೋಶ್ರೀ **ಇಂದುಮತಿ** ಅವರಿಗೆ

# ಮುನ್ನುಡಿ

ಮಹಾತ್ಮಾ ಗಾಂಧೀಯವರ ಭಾರತ ಸ್ವಾತಂತ್ರ್ಯ ಚಳುವಳಿಯು ವೈಶಿಷ್ಟ್ಯ-ಪೂರ್ಣವಾದದ್ದು. ಸಂಧಾನ, ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕವೇ ಸ್ವಾತಂತ್ರ್ಯವನ್ನು ಗಳಿಸಬೇಕೆಂಬುದು ಅವರ ಅಚಲ ತತ್ತ್ವವಾಗಿತ್ತು. ಈ ಮಾರ್ಗದಿಂದಲೇ ಸ್ವಾತಂತ್ರ್ಯ ಪಡೆಯಲು ಅವರು ಸಾಕಷ್ಟು ಸತ್ಯಾಗ್ರಹಗಳನ್ನು ನಡೆಸಿದರು, ಕೊನೆಗೂ ಯಶಸ್ವಿಯಾದರು. ಆ ಸತ್ಯಾಗ್ರಹಗಳಲ್ಲಿ ಮುಖ್ಯವಾದವು 1941ರ ವೈಯಕ್ತಿಕ ಸತ್ಯಾಗ್ರಹ, ಆಮೇಲೆ 1942 ರಲ್ಲಿ ಕೊನೆಯ 'ಕ್ವಿಟ್ ಇಂಡಿಯಾ' ಸ್ವಾತಂತ್ರ್ಯ ಚಳುವಳಿ.

ಶ್ರೀ ನರಸಿಂಹ ದಾಬಡೆಯವರು ಈ ಎರಡೂ ಚಳುವಳಿಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದ್ದರು. ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗಿಯಾಗಲು ಗಾಂಧೀಜಿಯವರ ಅನುಮತಿ ಪಡೆಯಬೇಕಿತ್ತು. ಆಚಾರ್ಯ ವಿನೋಬಾ ಭಾವೆ ಅವರು ಗಾಂಧೀಜಿಯವರಿಂದ ಆರಿಸಲ್ಪಟ್ಟ ಮೊದಲನೆಯ ಸತ್ಯಾಗ್ರಹಿ, ಎರಡನೆಯವರು ಜವಾಹರಲಾಲ ನೆಹರೂ ಅವರು.

ವೈಯಕ್ತಿಕ ಸತ್ಯಾಗ್ರಹದ ಕಾಲಕ್ಕೆ ಶ್ರೀ ದಾಬಡೆಯವರಿಗೆ 26 ವರ್ಷ. ವಿಷಯಗಳನ್ನು ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಬಿಸಿನೆತ್ತರದ ಉತ್ಸಾಹದ ವಯಸ್ಸು. ಮೊದಲಿನಿಂದಲೂ ಗಾಂಧೀಜಿಯವರ ತತ್ತ್ವಗಳಲ್ಲಿ ಅವರಿಗೆ ಅಚಲವಾದ ನಂಬಿಕೆ. ಅವರಿಗೆ 1941 ರ ಸತ್ಯಾಗ್ರಹದಲ್ಲಿ ಭಾಗಿಯಾಗಬೇಕೆಂಬ ಉತ್ಕಟ ಆಸೆ. ಅದಕ್ಕಾಗಿ ಶ್ರಮಪಟ್ಟು ಗಾಂಧೀಜಿಯವರನ್ನು ಭೇಟಿಮಾಡಿ ಸತ್ಯಾಗ್ರಹದಲ್ಲಿ ಭಾಗಿಯಾಗಲು ಅವರಿಂದ ಅನುಮತಿ ಪಡೆಯಲು ಯಶಸ್ವಿಯಾದರು. ಆಗ ಬೆಳಗಾವಿ ಜೇಲಿನಲ್ಲಿ ಮೂರು ತಿಂಗಳ ಸಶ್ರಮ ಶಿಕ್ಷೆಯನ್ನು ಅನುಭವಿಸಿದರು.

1942 ರ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಅವರ ಪಾತ್ರ ರೋಮಾಂಚನವನ್ನುಂಟು ಮಾಡುವಂಥದ್ದು. 1942 ರ ಆಗಸ್ಟ್ 7, 8 ದಿನಗಳಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯು ಮುಂಬೈಯಲ್ಲಿ ಸೇರಿತ್ತು. ಆ ಸಭೆಯಲ್ಲಿ ಗಾಂಧೀಜಿಯವರು 'ಕ್ವಿಟ್ ಇಂಡಿಯಾ' (ಭಾರತ ಬಿಟ್ಟು ತೊಲಗಿ) ಚಳುವಳಿಯನ್ನು ಘೋಷಿಸಿದರು. ಆಗ ಶ್ರೀ ದಾಬಡೆಯರು ಮುಂಬೈಯಲ್ಲಿದ್ದು ಈ ಸಭೆಯಲ್ಲಿ ಭಾಗವಹಿಸಿದ್ದರು. ಈ ಚಳುವಳಿಯನ್ನು ವಿದ್ಯುಕ್ತವಾಗಿ ಘೋಷಿಸುವ ಮುಂಚೆಯೇ ಗಾಂಧೀಜಿ ಮತ್ತು ನಾಯಕರನ್ನು 9 ನೇ ತಾರೀಖು ಬೆಳಗಿನ ಜಾವ ಬಂಧಿಸಿ, ವಿವಿಧ ಜೇಲುಗಳಿಗೆ ರವಾನಿಸಿದರು. ದೇಶ ಅಲ್ಲೋಲ - ಕಲ್ಲೋಲವಾಯಿತು. ವ್ಯವಸ್ಥಿತ

ಮಾರ್ಗದರ್ಶಕರ ಅಭಾವ ಎದ್ದು ಕಾಣುತ್ತಿತ್ತು. ಜಯಪ್ರಕಾಶ ನಾರಾಯಣರಂಥ ಕೆಲವು ನಾಯಕರು ಭೂಗತರಾಗಿ ಸತ್ಯಾಗ್ರಹಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಶ್ರೀ ನರಸಿಂಹ ದಾಬಡೆಯವರೂ ಕೂಡ ಭೂಗತರಾಗಿ ಅದೇ ಕೆಲಸವನ್ನೇ ಶ್ರದ್ಧೆಯಿಂದ ಮಾಡಿದರು. ಪೊಲೀಸ್‌ನವರ ಕಣ್ತಪ್ಪಿಸಿಕೊಂಡು ಹದಿನೆಂಟು ತಿಂಗಳು ಭೂಗತವಾಸವನ್ನು ಯಶಸ್ವಿಯಾಗಿ ನಡೆಸಿದ್ದು ಸುಲಭದ ಕೆಲಸವೇನಲ್ಲ. ಅವರು ಭೂಗತರಿದ್ದಾಗಲೇ ಕೈದು ಮಾಡಲ್ಪಟ್ಟು ಮೂವತ್ತು ತಿಂಗಳು ಸಶ್ರಮ ಶಿಕ್ಷೆ ವಿಧಿಸಲಾಯಿತು. ವಿಸಾಪೂರ ಮತ್ತು ಬೆಳಗಾವಿ ಜೇಲುಗಳಲ್ಲಿ ಈ ಅವಧಿಯನ್ನು ಕಳೆದರು. ಜೇಲಿನ ದಿನಚರಿಯನ್ನು ಅವರು ಚೆನ್ನಾಗಿ ವಿವರಿಸಿದ್ದಾರೆ. ಬೆಳಿಗ್ಗೆ ಗಂಜಿ, ಮಧ್ಯಾಹ್ನ ಸಂಜೆ ರೊಟ್ಟಿ ಮತ್ತು ಸೊಪ್ಪಿನ ಪಲ್ಲೆ. ಅವರ ಜೇಲಿನ ದಿನಚರಿಯನ್ನು ಓದಿದಾಗ, 1943 ರಲ್ಲಿನ ಪೂನಾದ ಯರವಾಡಾ ಸೆಂಟ್ರಲ್ ಜೇಲಿನಲ್ಲಿಯ ನನ್ನ ಅನುಭವಗಳು ಸಹಜವಾಗಿಯೇ ಜ್ಞಾಪಕಕ್ಕೆ ಬಂದವು. ಸ್ವಲ್ಪ ಹೆಚ್ಚು - ಕಡಿಮೆ ಒಂದೇ ಥರದ ಅನುಭವಗಳು. ದಾಬಡೆಯವರು ವಿವಿಧ ಜೇಲ್ ಸುಪರಿಂಟೆಡೆಂಟ್‌ರ ಉಸ್ತುವಾರಿಯಲ್ಲಿದ್ದರು. ಒಬ್ಬರಲ್ಲಿ ಮಾನವೀಯತೆ, ರಾಷ್ಟ್ರೀಯತೆ ಕಂಡರು. ಇನ್ನೊಬ್ಬ ಸುಪರಿಂಟೆಂಡೆಂಟ್‌ರಿಂದ ದಬ್ಬಾಳಿಕೆಯ ಬಿಸಿಯನ್ನು ಅನುಭವಿಸಿದರು. ಜೇಲು ಅಧ್ಯಯನಕ್ಕೆ ಒಳ್ಳೆಯ ಸ್ಥಳವೆಂದು ಹೇಳಿದ್ದಷ್ಟೇ ಅಲ್ಲ, ಅದನ್ನು ಅವರು ಸದುಪಯೋಗ ಮಾಡಿಕೊಂಡರು.

ಕಾಲರಾ ಉಪದ್ರವ ಜೇಲಿನಲ್ಲಿ ವ್ಯಾಪಕವಾಗಿ ಹರಡಿ ಸತ್ಯಾಗ್ರಹಿಗಳ ದೂರುಗಳಿಗೆ ಅಧಿಕಾರಿಗಳು ಗಮನ ಕೊಡದಿದ್ದಾಗ, ಪರಿಸ್ಥಿತಿ ವಿಕೋಪಕ್ಕೆ ತಿರುಗಿ, ಸತ್ಯಾಗ್ರಹಿಗಳನ್ನು ತಡೆಗಟ್ಟಲು ಮಿಲಿಟರಿಯವರು ಬಂದೂಕ ಸಹಿತ ಪ್ರವೇಶಿಸಿದಾಗ "ಕರ್ನಾಟಕದ ಸಿಂಹ" ಎಂದು ಹೆಸರು ಪಡೆದ, ಅಲ್ಲಿಯೇ ಜೇಲಿನಲ್ಲಿದ್ದ ಶ್ರೀ ಗಂಗಾಧರರಾವ ದೇಶಪಾಂಡೆಯವರು ಬಂದೂಕುಗಳ ಮುಂದೆ ಎದೆಯೊಡ್ಡಿ ಬಲಿಯಾಗಲು ಸಿದ್ಧರಾದರು. ಆಗ ಮಿಲಿಟರಿ ಅಧಿಕಾರಿ ಧೃತಿಗೆಟ್ಟರು. ಆಗಿನ ಕಾಲದಲ್ಲಿ ಆತ್ಮಾರ್ಪಣೆ ಮಾಡಲು ಹಿಂಜರಿಯದ ಧೀರ ಸತ್ಯಾಗ್ರಹಿಗಳಿದ್ದರು. ಇಂಥದ್ದೇ ಒಂದು ಸನ್ನಿವೇಶದಲ್ಲಿ ಆಂಧ್ರದ ಟಿ. ಪ್ರಕಾಶಂ ಕೂಡಾ ಒಂದು ಸಾರ್ವಜನಿಕ ಸಭೆಯಲ್ಲಿ ತುಪಾಕಿಗಳಿಗೆ ಎದೆಯೊಡ್ಡಿದರು, ಅಂದಿನಿಂದ ಅವರು 'ಆಂಧ್ರ ಕೇಸರಿ' ಆದರು.

ಸದ್ದುಗದ್ದಲವಿಲ್ಲದೆ ತೆರೆಯ ಹಿಂದೆ ಆಗ ಸ್ತ್ರೀಯರು ಮಾಡಿದ ತ್ಯಾಗವನ್ನು ಶ್ರೀ ದಾಬಡೆಯವರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಆದರೆ, ದಾಬಡೆಯವರ ಹೆಂಡತಿ ಕಂಕುಳಲ್ಲಿ ಮಗುವನ್ನು ಎತ್ತಿಕೊಂಡು ಚಳುವಳಿಯಲ್ಲಿ ಧುಮುಕಿ ನಾಲ್ಕು ತಿಂಗಳ ಕಾರಾವಾಸವನ್ನು ಅನುಭವಿಸಿದರು. ಹೆಂಡತಿಯ ತಾಯಿ ಈ ಚಳುವಳಿಯಲ್ಲಿ ನೆರವಾದಳೆಂದು ಹದಿನೈದು ದಿವಸ ಕಾರಾಗೃಹವಾಸದ ಉಡುಗೊರೆಯನ್ನು ಸ್ವೀಕರಿಸಬೇಕಾಯಿತು.

ಶ್ರೀ ದಾಬಡೆಯವರು ಭೂಗತರಿದ್ದಾಗ ಮಗಳ ಜನನದ ವಾರ್ತೆ ಬರುತ್ತಲೇ ರಾಷ್ಟ್ರೀಯತೆಯ ಸಂಕೇತವಾದ "ಭಾರತಿ" ಎಂಬ ಹೆಸರಿಡಬೇಕೆಂದು ತಮ್ಮ ಇಚ್ಛೆಯನ್ನು

ವ್ಯಕ್ತಮಾಡಿದರು. ಅದರಂತೆಯೇ ಅವರ ಹೆಂಡತಿ ಮಗಳಿಗೆ ಅದೇ ನಾಮಕರಣ ಮಾಡಿದಳು. ಆ ಭಾರತಿಯು ತಾಯಿಯ ಸಂಗಡ ನಾಲ್ಕು ತಿಂಗಳು ಜೇಲಿನಲ್ಲಿ ಕಳೆದಳು.

ಶ್ರೀ ದಾಬಡೆಯವರ ಈ "ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು" ಎಂಬ ಚಿಕ್ಕ ಪುಸ್ತಕವನ್ನು ಎಲ್ಲರೂ ಓದಬೇಕು. ಮುಖ್ಯವಾಗಿ ಇಂದಿನ ವಿದ್ಯಾರ್ಥಿಗಳು ಮತ್ತು ಯುವಕರು ಓದಿದಾಗ, ಸಹಸ್ರಾರು ಮಂದಿ ಮಾಡಿದ ತ್ಯಾಗ, ಬಲಿದಾನ ಮತ್ತು ಅನುಭವಿಸಿದ ಕಷ್ಟನಷ್ಟಗಳ ಫಲವೇ ಈ ನಮ್ಮ ಸ್ವತಂತ್ರ ಭಾರತ ಎಂಬುದು ವೇದ್ಯವಾಗುತ್ತದೆ. ಶ್ರೀ ನರಸಿಂಹ ದಾಬಡೆಯವರು ಧನ್ಯರು. ಸ್ವಾತಂತ್ರ್ಯ ಗಳಿಸಲು ಶಕ್ತಿಮೀರಿ ಶ್ರಮಿಸಿದ್ದಾರೆ. ಅವರು ಗಾಂಧೀಜಿಯವರಿಗೆ ಹಿಂದೆ ಮಾತು ಕೊಟ್ಟಂತೆ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಈ ಐವತ್ತು ವರ್ಷಗಳಿಂದ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ. ಮುಖ್ಯವಾಗಿ ಖಾದಿ ಗ್ರಾಮೋದ್ಯೋಗ ಕೈಗಾರಿಕಾ ಕ್ಷೇತ್ರದಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಸರ್ವೋದಯ ಮತ್ತು ಇತರ ಸಮಾಜ ಸೇವಾ ಕ್ಷೇತ್ರದಲ್ಲಿಯೂ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ನರಸಿಂಹ ದಾಬಡೆಯವರಿಗೆ ಚಿಕ್ಕಂದಿನಿಂದಲೂ ಒಳ್ಳೆಯ ಅಭ್ಯಾಸಗಳಿವೆ. ಶಿಸ್ತು ಸಂಯಮದ ಜೀವನ. ಒಳ್ಳೆಯ ಆರೋಗ್ಯದಿಂದ ಕೂಡಿ ಈ ಎಂಬತ್ತೊಂದರ ವಯಸ್ಸಿನಲ್ಲಿಯೂ ಸಕ್ರಿಯವಾಗಿ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ಅವರದು ಎಲ್ಲರಿಗೂ ಸ್ಫೂರ್ತಿ ಕೊಡುವ ಸಾರ್ಥಕ ಜೀವನ.

ಬೆಂಗಳೂರು
1-2-1996

● ಎಚ್. ನರಸಿಂಹಯ್ಯ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

# ಸಾಹಸಿಗೆ ಶತನಮನ

ನನ್ನ ಚಿಕ್ಕ ಸೋದರ ಪ್ರಿಯ ನರಸಿಂಹ ದಾಬಡೆಯವರು ಈ 'ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು' ಎಂಬ ಸಂವೇದನೆಗಳಿಂದ ತುಂಬಿದ ಸಾಹಸದ ಸತ್ಯಕಥೆಯನ್ನೂ ಅದರೊಂದಿಗೆ ಹಾಸು ಹೊಕ್ಕಾಗಿ ಬರುವ ಭಾರತ ಸ್ವಾತಂತ್ರ್ಯ ಯಜ್ಞದ ವೀರಚರಿತವನ್ನೂ ಓದಿ ಪುಲಕಗೊಂಡಿದ್ದೇನೆ ! ಸ್ಫೂರ್ತಿಗೊಂಡಿದ್ದೇನೆ ! ಅಭಿಮಾನ ತಳೆದಿದ್ದೇನೆ ! ಆನಂದಭಾಷ್ಪ ಸುರಿಸಿದ್ದೇನೆ ! ಶೋಕ ಭಾಷ್ಪಗಳನ್ನೂ ಸುರಿಸಿದ್ದೇನೆ !

ಎಂತಹ ನಿಸ್ಪೃಹಿ ನಮ್ಮ ದಾಬಡೆ !
ಎಂತಹ ಧೈರ್ಯಶಾಲಿ ನಮ್ಮ ದಾಬಡೆ !!
ಎಂತಹ ಸ್ಥಿರ ಸಂಕಲ್ಪಿ ನಮ್ಮ ದಾಬಡೆ !!!

ಎಂದೆಲ್ಲ ಉದ್ಗಾರಗಳು ಈ ಗ್ರಂಥದ ಪುಟ ಪುಟಗಳಲ್ಲಿ ತಿರುವಿ ಹಾಕುತ್ತಿದ್ದಂತೆ ಪುಟಿದು ಬರುತ್ತಿದ್ದವು.

ದೇಶಭಕ್ತಿ ದಾಬಡೆಯವರ ರಕ್ತದಲ್ಲಿದೆ. ಗಾಂಧೀಜಿ ತತ್ತ್ವ ಇವರಲ್ಲಿ ಮೈಗೂಡಿದೆ. ಗಾಂಧೀಜಿಯನ್ನು ಪ್ರಥಮ ಬಾರಿಗೆ ಕಂಡು ತಮ್ಮ ಮನದಾಸೆಗಳ್ನ ಅವರ ಮುಂದಿಟ್ಟು ತಮ್ಮನ್ನು ಸ್ವಾತಂತ್ರ್ಯ ಸಂಗ್ರಾಮದ ಯೋಧರನ್ನಾಗಿ ಸ್ವೀಕರಿಸಬೇಕೆಂದು ತ್ಯಾಗ, ಮನೋಭಾವ ಉಕ್ಕಿ ಅವರ ಅನುಯಾಯಿತ್ವದ ಭಿಕ್ಷೆ ಬೇಡಿದಾಗ ಗಾಂಧೀಜಿ ಕೇಳಿದ ಒಂದು ಪ್ರಶ್ನೆಗೆ ಮನೋವಚನ ಕಾಯಕಗಳಿಂದ ಒಪ್ಪಿ ವಾಗ್ದಾನ ಮಾಡಿದರು. ಅವರು ವಿಧಿಸಿದ ವಿಧಾಯಕ ಕಾರ್ಯಕ್ರಮಕ್ಕೆ ಅಚಲ ಭಾವದಿಂದ ಅಂಟಿಕೊಳ್ಳುವುದಾಗಿ ಅಭಿವಚನವಿತ್ತರು. ಹೀಗೆ 1941 ರಲ್ಲಿ ಗಾಂಧೀ ದೀಕ್ಷೆ ಪಡೆದರು.

ಅಂದಿನ ಆರಂಭ ಶ್ರೀ ನರಸಿಂಹ ದಾಬಡೆಯವರ ಹೋರಾಟ್ಟ ಜೇಲಿನ 'ಹಸಿರಾಣಿ'ಯ ಆಹಾರ ಸೇವನೆ, ಸ್ವಾತಂತ್ರ್ಯದ ಉಸಿರಾಟ, ಈ ಹೋರಾಟದ ಕಟು - ಮಧುರ ಅನುಭವಗಳ ಆಖ್ಯಾನ-ವ್ಯಾಖ್ಯಾನಗಳೇ ಇಲ್ಲಿ ವಿಸ್ತರಿಸಿವೆ. ಇವರ ಜೇಲು ಜೀವನದ ಒಂದು ವಿಚಿತ್ರ ಅನುಭವವೆಂದರೆ, ಯಾವುದೇ ಜೇಲಿನಲ್ಲಾಗಲಿ ಅದು ವಿಸಾಪೂರ ಜೇಲೇ ಇರಲಿ, ಹಿಂಡಲಗಾ ಜೇಲೇ ಇರಲಿ ಅಲ್ಲಿಯ ಊಟ, ನಿತ್ಯದ ದಿನಚರಿಗಳು, ಮೇಲಿನವರ ಅಧಿಕಾರದ ಒತ್ತಡಗಳು

ಇವರನ್ನು ಯಾವುದೇ ರೀತಿ ಕಲಕಿಲ್ಲ. ಹೋದಲ್ಲೆಲ್ಲ ಇವರು ಸ್ನೇಹಜೀವಿಗಳು. ಅಲ್ಲಿಯ ಶಿಸ್ತಿಗೆ ಒಳಪಟ್ಟು, ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡಿದ್ದರು. ಮನೆ, ಜೇಲು ಎರಡನ್ನೂ ಒಂದೇ ಸಮನಾಗಿ ಕಂಡಿದ್ದಾರೆ. ಈ ಒಂದು ಯೋಗಸಿದ್ಧಿ ನಮ್ಮ ದಾಬಡೆಯವರದು. ಬೆಳಗಾವಿ ಜೇಲಿನಲ್ಲಿ ಇವರ ಕಣ್ಣೆದುರಿಗೇ ಫಾಶೀ ಹೋಗುವ (ನೇಣುಗಂಬ ಏರುವ) ಸೆರೆಯಾಳುಗಳನ್ನು ಕಾಣುವುದು, ಅವರಿಗೆ ಕ್ಷಣ ಆದರೂ ಇಂಥವನ ನೋವು ಸಹಿಸಿಕೊಂಡು ಜೇಲುವಾಸದಲ್ಲಿ ಯೋಗಸುಖವನ್ನು ಕಂಡರು.

ಆ ಕಾಲಕ್ಕೆ ನಮ್ಮ ನರಸಿಂಹ ದಾಬಡೆಯವರ ಪತ್ನಿ ಪಟ್ಟ ಸಾಂಸಾರಿಕ ತಾಪತ್ರಯದ ತೀಕ್ಷ್ಣ ಸೂಕ್ಷ್ಮ ವೇದನೆಯನ್ನು ಇವರ ಪತ್ನಿಯ ಬರವಣಿಗೆಯಲ್ಲಿಯೇ ಕಾಣಬೇಕು. ಒಂದು ರೀತಿಯ ಜೇಲು ಕಂಡ ಯೋಧರಿಗಿಂತ ಅವರ ಧರ್ಮಪತ್ನಿಯ ಸಾಂಸಾರಿಕ ಹೋರಾಟವೇ ಹೆಚ್ಚು ತ್ಯಾಗ ಮೌಲ್ಯದ್ದು ಎನ್ನಬೇಕು. ಇವರ ಧರ್ಮಪತ್ನಿಯು ಒಂದು ದಿನ ಬಿಳಿಯರ ಕಾಯ್ದೆ ಮುರಿದು ಸೆರೆಮನೆಯನ್ನು ಪ್ರವೇಶಿಸಿ, ಅಲ್ಲಿಯ ಸುಪ್ಪತ್ತಿಗೆಯ ಸುಖವನ್ನನುಭವಿಸುವಷ್ಟು ಸಮಾಧಾನದಿಂದ ಇರುತ್ತಾರೆ. ಅಲ್ಲಿಂದ ಬಿಡುಗಡೆಯಾದರೆ ಅವರಿಗೆ ತೃಪ್ತಿಯಿಲ್ಲ. ಮುಂದೆ ವಿಸಾಪೂರ (ಅಹಮ್ಮದನಗರ ಜಿಲ್ಲೆ 1944) ಜೇಲಿನವರೆಗೂ ಪ್ರವಾಸ ಮಾಡಿ ಪತಿಯ ದರ್ಶನ ಪಡೆದ ಅನುಭವವನ್ನೋದಿದಾಗ ಓದುಗನ ಜೀವವು ಸಹಾನುಭೂತಿಯಿಂದ ಮಿಡಿಯುತ್ತದೆ.

ಶ್ರೀ ದಾಬಡೆಯವರು ಉಕ್ಕಿ ಬರುವ ತಮ್ಮ ಅನುಭವಗಳನ್ನು ನಿರೂಪಿತೊಡಗಿದಾಗ ಅನುಗುಣವಾದ ಭಾಷಾ ಭವ್ಯತೆ ತಾನೇ ರೂಪುಗೊಂಡು ಬಂದಿದೆ. ಅಂತೆಯೇ ಇದೊಂದು ಉತ್ತಮ ವೀರರಸದ ಇತಿಹಾಸವುಳ್ಳ ಸಾಹಿತ್ಯ ಗ್ರಂಥದ ಒಂದು ಅಪರೂಪದ ಕೊಡುಗೆ. ಹೀಗೆ ಈ ಸ್ವಾತಂತ್ರ್ಯ ಹೋರಾಟ, ಸಾಂಸಾರಿಕ ಹೋರಾಟ ಎರಡೂ ಸಮಾಂತರದಲ್ಲಿ ಚಿತ್ರಿತವಾಗಿವೆ ಈ ಗ್ರಂಥದಲ್ಲಿ.

ಇವರ ಸ್ವಾತಂತ್ರ್ಯ ಹೋರಾಟದಲ್ಲಿ 1942ರ 'ಚಲೇಜಾವ್' ಚಳುವಳಿಯ ಭೂಗತ ಹೋರಾಟದ ಮಿಂಚಿನಂತಹ ರೋಮಾಂಚಕ ಕಥೆಯನ್ನು ಇಲ್ಲಿಯೇ ಓದಿ ಪುಲಕ ಪಡೆಯಬೇಕು. ಸರ್ವಶ್ರೀ ರಂಗನಾಥ ದಿವಾಕರ, ದ. ಪ. ಕರಮರಕರ, ಹುಕ್ಕೇರಿಕರ, ದಾಬಡೆ ಇವರೆಲ್ಲರೂ ಮುಂಬೈ ಕಾಳಬಾ ದೇವಿಯ ಒಂದು ಕತ್ತಲ ಕೋಣೆಯಲ್ಲಿ ಬರೀ ಬ್ರೆಡ್ ತಿಂದೇ ಉದರ ಯಾತ್ರೆಯ ನೀಗಿ ತಮ್ಮ ಗುಟ್ಟಿನ ಬುಲಿಟನ್‌ಗಳನ್ನು ಹೊರಡಿಸುವುದಲ್ಲದೆ ಇತರ ಭೂಗತ ಚಟುವಟಿಕೆಗಳನ್ನು ನಡೆಸಿದರು. ಈ ನಿರೂಪಣೆಯನ್ನು ಓದಿದಾಗ ಈ ಸ್ವಾತಂತ್ರ ಯಜ್ಞದಲ್ಲಿ ಎಷ್ಟು ಜನರು ಎಷ್ಟೊಂದು ತ್ಯಾಗದ ತುಪ್ಪವನ್ನು ಸುರಿದಿದ್ದಾರೆಂಬುದನ್ನು ಓದಿದಾಗ ಇಂದಿನ ಅಧಿಕಾರ ದಾಹದ, ದೂರ್ವಾಸರಂಥ ರಾಜಕಾರಣಿಗಳ ಸ್ವಾರ್ಥದ ನಾಟಕವನ್ನು ನೋಡಿದಾಗ ಹೇಸಿಗೆಯಾಗುತ್ತದೆ.

ನಮ್ಮ ಬುರ್ಲಿ ಬಿಂದುಮಾಧವರು ಕಟ್ಟಾ ಮಾಧ್ವ ಬ್ರಾಹ್ಮಣರಾಗಿದ್ದರೂ ವಿಸಾಪೂರ ಜೇಲಿನಲ್ಲಿ ತಮ್ಮ ಜನಿವಾರವನ್ನು ದೇಶಕ್ಕಾಗಿ ಗೂಟಕ್ಕೆ ಹಾಕಿ ಎಲ್ಲ ಜಾತಿಯವರೊಡನೆ

'ಸಹನೌ ಭುನಕ್ತು ಸಹವೀರ್ಯಂ ಕರವಾವಹೈ' ಎಂಬ ಮಂತ್ರದ ಅನುಷ್ಠಾನ ಮಾಡುತ್ತಿದ್ದುದನ್ನು ನೆನೆದಾಗ ಇಂಥವರಿಗೆ ದೊರೆತ ಪ್ರಶಸ್ತಿಯೇನು ? ಅವರು ಪಡೆದ ಲಾಭವೇನು ? ಒಂದು ಅಧಿಕಾರವೆ ? ಒಂದು ಮಂತ್ರಿಪಟ್ಟವೆ ? ದುಡಿದು ಮಡಿದವರು ಯಾರೋ ! ಅದರ ಫಲ ಭೋಗಿಸಿ ಐಷಾರಾಮದಲ್ಲಿ ಮೆರೆಯುವವರಾರೋ !!

ಇಂಥ ದೇಶವು ಸ್ವಾತಂತ್ರ್ಯವಾಗಿ ಐವತ್ತು ವರ್ಷಗಳಾದರೂ ಸಾಧಿಸಿದ್ದೇನು ? ಇದಕ್ಕೆ ಇತಿಹಾಸವೇ ಉತ್ತರಿಸಬೇಕು. ಒಟ್ಟಾರೆ ನಮ್ಮ ಐವತ್ತು ವರ್ಷದ ಸ್ವತಂತ್ರ ಭಾರತ ವಿಶ್ವರಾಷ್ಟ್ರಗಳಲ್ಲಿ ದುರ್ದೈವದ್ದು. ಈ ದೇಶಕ್ಕೆ ರಾಜಕೀಯ ಭವಿಷ್ಯ ಇದೆಯೇ ? ನಮ್ಮ ರಾಜಕಾರಣಿಗಳೇ ಹೇಳಬೇಕು. ನಮ್ಮ ನರಸಿಂಹ ದಾಬಡೆ ಅಂಥವರಲ್ಲ.

ಶ್ರೀ ದಾಬಡೆಯವರ ಇಂದಿನ ಪತ್ನಿ ಸೌ. ಪದ್ಮಿನಿಯವರೂ ದಾಬಡೆಯವರ ತ್ಯಾಗ, ತೃಪ್ತಿ ಜೀವನ ರೀತಿಗೆ ಹೊಂದಿಕೊಂಡಿದ್ದಾರೆ. ಅವರೂ ದೇಶಕ್ಕಾಗಿ ದುಡಿದ ಮಹಿಳೆಯಾಗಿದ್ದಾರೆ. ಅವರು ಶ್ರೀ ದಾಬಡೆಯವರ ಎಲ್ಲ ಬಳಗದೊಂದಿಗೆ ಪುತ್ರ-ಪುತ್ರಿಯರೊಂದಿಗೆ ಸಮರಸವಾಗಿರುವಂತೆ ಮಾಡಿದೆ. ಅದರಂತೆಯೇ ಅವರ ಪುತ್ರ - ಪುತ್ರಿಯರು, ಅಳಿಯ, ಸೊಸೆಯಂದಿರೂ ದಾಬಡೆಯವರ ತ್ಯಾಗಮಯ ಜೀವನಕ್ಕೆ ಹೊಂದಿಕೊಂಡಿದ್ದು ಇಂದಿನ ಅವರ ಜೀವನದಲ್ಲಿಯ ಏರುಪೇರು ಇಲ್ಲದೆ ನೆಮ್ಮದಿಯನ್ನು ತಂದಿದೆ. ಮೊಮ್ಮಕ್ಕಳಂತೂ ಇವರ ಮೇಲೆ ಪಂಚಪ್ರಾಣ. ಹೀಗೆ ಅವರದು ಸಮರಸ ಜೀವನ ಎನ್ನಬಹುದು.

1-2-1996

● ಎನ್ಕೆ

# ಶ್ರೀ ಚೆನ್ನವೀರ ಕಣವಿ ಅವರ ಪತ್ರ.....

ಮಾನ್ಯ ಶ್ರೀ ನರಸಿಂಹ ದಾಬಡೆ ಅವರಲ್ಲಿ ಆದರಪೂರ್ವಕ ವಂದನೆಗಳು.

ಈ ಮೊದಲು "ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು" ಪುಸ್ತಕವನ್ನು ಓದಿದಾಗ ಅದರ ಕೊನೆಯಲ್ಲಿ ತಮ್ಮ ಜೀವನದ ನೋವು ನಲಿವುಗಳನ್ನು ಕುರಿತು ಶ್ರೀಮತಿ ಶಕುಂತಲಾ ದಾಬಡೆಯವರು ಸಂಕ್ಷಿಪ್ತವಾಗಿ ನಿರೂಪಿಸಿದ್ದು ನನ್ನ ಕುತೂಹಲವನ್ನು ಕೆರಳಿಸಿತ್ತು. ಇದೀಗ "ಸಂಘರ್ಷ-ಸಹಯೋಗ-ಸಂತೃಪ್ತಿ"ಯಲ್ಲಿ ಅವರ ಆತ್ಮಚರಿತ್ರೆಯನ್ನು ಇಡಿಯಾಗಿ ಓದಿದಾಗ ಇಂಥ ಒಳ್ಳೇ ಜೀವಕ್ಕೆ ದೇವರು ಇನ್ನಷ್ಟು ಆಯುಷ್ಯವನ್ನೇಕೆ ಕೊಡಲಿಲ್ಲ ಎಂದು ಮನಸ್ಸು ಮಮ್ಮಲ ಮರುಗಿತು.

ಗಾಂಧಿ ತತ್ವಗಳಲ್ಲಿ ಸಂಪೂರ್ಣ ಶ್ರದ್ಧೆಯಿಟ್ಟು ವಿಧಾಯಕ ಕಾರ್ಯಗಳನ್ನೇ ಜೀವನದ ಮುಖ್ಯ ಧ್ಯೇಯವಾಗಿರಿಸಿಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿಯೇ ಜೀವನದ ಹೋರಾಟವನ್ನು ಐಕ್ಯಗೊಳಿಸಿದ ನಿಮ್ಮಂಥ ಸತ್ಯಶುದ್ಧ ಕಾಯಕ ಜೀವಿಗಳು ನಮ್ಮ ಕಣ್ಣೆದುರು ಕಂಗೊಳಿಸುತ್ತಿರುವುದು ಈ ನಾಡಿನ ಭಾಗ್ಯ. ಎಲ್ಲಿಯೂ ಅಹಂಕಾರದ ಲವಲೇಶವೂ ಇಲ್ಲದೆ, ಅತ್ಯಂತ ಪ್ರಾಮಾಣಿಕವಾಗಿ ನಿಮ್ಮ ಅನುಭವಗಳನ್ನು ನಿರೂಪಿಸುತ್ತಾ ಹೋದಂತೆ, ದೇಶದ ಸ್ವಾತಂತ್ರ್ಯ ಹೋರಾಟ ಓದುಗರ ಒಳಗಣ್ಣಿನೆದುರು ತನ್ನ ಸಂಪೂರ್ಣ ಚಿತ್ರವನ್ನು ಮೂಡಿಸುತ್ತದೆ. ನಿಮ್ಮ ಆದರ್ಶಕ್ಕೆ ತಲೆಬಾಗಲೇಬೇಕು.

ದಿ. ಶಕುಂತಲಾ ಅವರ ನೂರು ಪುಟಗಳಲ್ಲಿ ನಿರೂಪಿಸಿರುವ ಸ್ವಾತಂತ್ರ್ಯಯೋಧನ ಪತ್ನಿಯ ಅನುಭವಗಳು ಅಂತಃಕರಣದಲ್ಲಿ ಅದ್ದಿ ತೆಗೆದಂತಿವೆ. ಸ್ವಯಂ ಪ್ರೇರಣೆ, ಸಹಯೋಗದಿಂದ ಕಷ್ಟ-ನಷ್ಟಗಳನ್ನು ತಾಳ್ಮೆಯಿಂದ ಸಹಿಸಿಕೊಂಡು ಧೈರ್ಯದಿಂದ ನಿಮ್ಮ ಹೋರಾಟಕ್ಕೆ ಪೂರ್ಣತೆಯನ್ನು ತಂದುಕೊಟ್ಟ ಈ ಧೀರ ಮಹಿಳೆಯ ವ್ಯಕ್ತಿತ್ವ ಭಾರತೀಯ ಸಂಸ್ಕೃತಿಯ ಅತ್ಯುತ್ತಮ ಗುಣಗಳನ್ನು ಎತ್ತಿ ಹಿಡಿದಿದೆಯೆಂದರೆ ಅತಿಶಯೋಕ್ತಿಯಾಗದು.

35 ವರ್ಷಗಳ ಹಿಂದಿನ ಈ ಬರವಣಿಗೆಯನ್ನು ಕಾಯ್ದಿಟ್ಟು ಈಗ ಅದನ್ನು ಪ್ರಕಟಿಸಿ ಬಹಳ ಒಳ್ಳೇ ಕೆಲಸ ಮಾಡಿದ್ದೀರಿ. ಈ ಗ್ರಂಥಕ್ಕೆ ಕೊಟ್ಟಿರುವ ಹೆಸರೂ ಕೂಡಾ ತುಂಬಾ ಅರ್ಥಪೂರ್ಣ.

ಈ ಎರಡೂ ಆತ್ಮಚರಿತ್ರೆಗಳನ್ನು ಓದಿದ ಮೇಲೆ ನಿಮ್ಮ ಆದರ್ಶ ಜೀವನದ ಬಗ್ಗೆ ನನ್ನ ಗೌರವ ಹತ್ತುಪಟ್ಟು ಹೆಚ್ಚಾಯಿತು.

ಇದರ ಜೊತೆಗೆ ಪ್ರಕಟಿಸಿರುವ ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ ಒಂದು ಐತಿಹಾಸಿಕ ದಾಖಲೆಯಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ. ಇಂತೀ ವಂದನೆಗಳು.

5-9-2002

● ಚೆನ್ನವೀರ ಕಣವಿ
ಧಾರವಾಡ

# ಶರಣಾಗತನ ಸ್ವಗತ

ನಾಗರೀಕತೆಯ ಪ್ರಥಮ ದಿನಗಳಲ್ಲಿ ಬಾಳುವ ಬಯಕೆಯೊಂದಿಗೆ ಮನುಷ್ಯನಲ್ಲಿ ಆಕ್ರಮಿಸುವ ಹಂಬಲವೂ ಹೆಡೆಯೆತ್ತಿತು. ಅತಿಕ್ರಮಿಸುವ, ಗೆದ್ದುಕೊಳ್ಳುವ, ಸುತ್ತಲಿನ ವ್ಯಾಪ್ತಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ವಾಂಛೆ ಆರಂಭವಾದೊಡನೆ ಭೂಗೋಲದ ಮೇಲೆ ಚರಿತ್ರೆ ದಾಖಲಾಗತೊಡಗಿತು. ಬಲವಿದ್ದವ ಬಲಹೀನನನ್ನು ಮಣಿಸುವ, ಹಿಡಿತದಲ್ಲಿಟ್ಟುಕೊಳ್ಳುವ ಹೆಜ್ಜೆಗಳಿಗೆದುರಾಗಿ ಆಕ್ರಮಿಸಲ್ಪಟ್ಟವರು, ದುರ್ಬಲರೂ ಸಂಘಟಿತರಾಗುವುದರ ಮೂಲಕ ತಿರುಗೇಟು ನೀಡುವ, ಅಳಿದ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವ ನಿರಂತರದ ಪ್ರಕ್ರಿಯೆ ಇತಿಹಾಸದ ಪುಟಗಳಿಗೆ ಬಣ್ಣ ತುಂಬತೊಡಗಿತು. ಆಕ್ರಮಿಸುವಲ್ಲಿ, ಆಕ್ರಮಣದಿಂದ ಬಿಡುಗಡೆ ಹೊಂದುವಲ್ಲಿ ನಡೆದ ಪ್ರತಿಯೊಂದು ಸಂಗತಿಯೂ ಯುದ್ಧವೆಂದೋ ದಂಗೆಯೆಂದೋ ಗುರುತಿಸಲ್ಪಟ್ಟು ಚರಿತ್ರೆಯ ಎದೆಯೇ ಭಾರವಾಗುವಷ್ಟು ನೆತ್ತರಿನ ನದಿಗಳು ಹರಿದವು.

ಬೆಂಕಿಯೇ ಬಲುದೊಡ್ಡ ಆವಿಷ್ಕಾರ ಎಂದು ತಿಳಿದ ಮೊದಲ ಮನುಜನಿಂದ ಹಿಡಿದು ಆಧುನಿಕ ಮಾನವನವರೆಗೆ ಏನೆಲ್ಲ ಬದಲಾವಣೆಗಳು ನಡೆದರೂ ಆಕ್ರಮಣ ಮಾಡುವ ಮತ್ತು ಆಕ್ರಮಣವನ್ನೆದುರಿಸುವ ವಿದ್ಯಮಾನಗಳಿಗೆ ಮಾತ್ರ ಸಾವಿಲ್ಲ. ಆಧುನಿಕ ಜಗತ್ತಿನ ಬಲಿಷ್ಠ ರಾಷ್ಟ್ರಗಳ ಚಿಂತನೆ ಆಕ್ರಮಣವೇ ಆಗಿದೆ. ಯುದ್ಧಗಳ ಮೂಲಕ ಆಕ್ರಮಣ ನಡೆಸುವ ಬದಲಿಗೆ ಜಾಗತೀಕರಣದ ಹೆಸರಿನಲ್ಲಿ ಅಪರೋಕ್ಷ ಅತಿಕ್ರಮಣವು ವಿಶ್ವದ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಆತಂಕದ ಕಾರ್ಮೋಡಗಳು ಕವಿಯುವಂತೆ ಮಾಡಿದೆ.

ಒಂದು ಕಾಲದಲ್ಲಿ ಭಾರತಕ್ಕೆ ಬಂದ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ ಮಾದರಿಯಲ್ಲಿ ವಾಣಿಜ್ಯ ವಹಿವಾಟಿನ ರೂಪದ ಸಾವಿರಾರು ಕಂಪನಿಗಳು ವಿಶ್ವದೆಲ್ಲೆಡೆ ತಮ್ಮ ಕರಾಳ ಹಸ್ತಗಳನ್ನು ಚಾಚಿವೆ. ಆಧುನಿಕ ಅನ್ವೇಷಣೆಗಳು ಮತ್ತು ಸಂಪರ್ಕ ಕ್ರಾಂತಿಯಿಂದಾಗಿ ವಿಶ್ವ ಈಗ ಭೂಗೋಲ ಗ್ರಾಮವಾಗಿದೆ. ಅದು ದುರ್ಬಲರಿಗಿಂತ ಬಲಿಷ್ಠರಿಗೆ ವರದಾನವಾಗಿದೆ. ಜಗತ್ತಿನಾದ್ಯಂತ ಏಕರೂಪ ಸಂಸ್ಕೃತಿಯೊಂದನ್ನು ಸ್ಥಾಪಿಸುವ ಕೆಲವರ ಹಂಬಲದಿಂದಾಗಿ ದುರ್ಬಲರ ಸಂಸ್ಕೃತಿ ಮತ್ತು ಜನಜೀವನದ ಕ್ರಮಗಳೇ ಅಳಿದು ಹೋಗುವ ಅಪಾಯ ತಲೆದೋರಿದೆ. ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಬೇರುಗಳನ್ನೇ ಕಳೆದುಕೊಳ್ಳುವ ವಿಶ್ವದ ಬಹುಪಾಲು ಜನತೆಯ ರಾಜಕೀಯ ಸಾರ್ವಭೌಮತ್ವವೂ ಕೂಡ ಬರುವ ದಿನಗಳಲ್ಲಿ ತನ್ನದೇ ನೆಲದಲ್ಲಿ ಎರಡನೆಯ ದರ್ಜೆಯದಾಗಿ ವಿಶ್ವಮಾನ್ಯ ಸಾರ್ವಭೌಮತ್ವದ ಸಾಮಂತ ಸ್ಥಿತಿ ಹೊಂದಲಿದೆ.

ಈ ಎಲ್ಲ ಆಕ್ರಮಣದ ವಿದ್ಯಮಾನಗಳು ಬಲು ನಾಜೂಕಾಗಿ ರಕ್ತಪಾತವಿಲ್ಲದೆ ಗ್ಯಾಟ್, ಡಂಕೆಲ್ ಪ್ರಸ್ತಾವನೆಗಳಂತಹ ದೂರಗಾಮಿ ಉರುಳುಗಳ ಮೂಲಕ ವಶಪಡಿಸಿಕೊಳ್ಳುವ ಕ್ರಿಯೆಗಳು

ನಡೆಯಲಿವೆ. ಬರುವ ದಿನಗಳಲ್ಲಿ ಭಾರತವಷ್ಟೇ ಅಲ್ಲದೆ ತೃತೀಯ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳು ಅಪ್ಪಟ ಪಾರತಂತ್ರ್ಯದ ನೇಣಿಗೆ ಕೊರಳೊಡ್ಡಲಿವೆ.

ಬ್ರಿಟಿಷ್ ವಸಾಹತುಶಾಹಿ ನೀತಿಯ ಬಲಿಪಶುವಾಗಿದ್ದ ಭಾರತ ಶತಮಾನದ ಕಾಲ ನಡೆಸಿದ ಬೇರೆ ಬೇರೆ ಮಜಲುಗಳ ಸ್ವಾತಂತ್ರ್ಯ ಹೋರಾಟದಿಂದಾಗಿ ಪಡೆದ ಸ್ವಾತಂತ್ರ್ಯ ಈಗ ಸಂದಿಗ್ಧತೆಯಲ್ಲಿದೆ. ಸ್ವಾತಂತ್ರ್ಯಾನಂತರದ ಪೀಳಿಗೆ, ಸ್ವಾತಂತ್ರ್ಯದ ಫಲಾನುಭವಿಗಳಾದವರು ಸ್ವಾತಂತ್ರ್ಯದ ಮಹತ್ವವನ್ನು ಅರಿಯದೇ ವರ್ತಮಾನದ ಅರಾಜಕತೆ, ಭ್ರಷ್ಟಾಚಾರಗಳಿಂದ ರೋಸಿ ಹೋಗಿ ಸಿನಿಕರಾಗಿ ಮಾತನಾಡುವುದನ್ನು ಒಂದೆಡೆ ಕಾಣುತ್ತಿದ್ದೇವೆ. ಇನ್ನೊಂದೆಡೆ ದೇಶ, ದೇಶಭಕ್ತಿ ಎಂಬೆಲ್ಲ ಸಂಗತಿಗಳ ಕುರಿತಾಗಿ ಜನಮಾನಸವನ್ನು ಪ್ರಭಾವಿತಗೊಳಿಸುವ ಮಾದರಿ ವ್ಯಕ್ತಿತ್ವಗಳಿಲ್ಲದೆ ಉಂಟಾಗಿರುವ ಅನಾಯಕತ್ವದ ಸ್ಥಿತಿ. ಇಂತಹ ಸನ್ನಿವೇಶದಲ್ಲಿ ಜಾಗತೀಕರಣದ ರೂಪದಲ್ಲಿ ದೇಶದ ಮೇಲೆ ಎರಗಲಿರುವ ಕಣ್ಣಿಗೆ ಕಾಣದ ಜಾಗತೀಕರಣವೆಂಬ ಸುನಾಮಿಯ ಅಪಾಯದ ಕುರಿತು ಎಚ್ಚರಿಕೆಯ ಮಾತನ್ನಾಡುವವರ ಕೂಗು ಯಾರ ಕಿವಿಗೂ ಬೀಳುತ್ತಿಲ್ಲ. ಯಾರ ಎದೆಯನ್ನೂ ತಟ್ಟುತ್ತಿಲ್ಲ.

೧೯೯೨ ರ ಸುಮಾರಿಗೆ ದೆಹಲಿಯಲ್ಲಿ ಡಂಕೆಲ್ ಪ್ರಸ್ತಾವನೆಯ ಪ್ರತಿಗಳನ್ನು ಸುಟ್ಟ ರೈತ ಚಿಂತಕ ದಿ. ಪ್ರೊ. ಎಂ. ಡಿ. ನಂಜುಂಡಸ್ವಾಮಿ ಆ ಪ್ರಸ್ತಾವನೆಯು ಬರುವ ದಿನಗಳಲ್ಲಿ ತಂದೊಡ್ಡಲಿರುವ ದುರಂತಗಳ ಬಗ್ಗೆ ಎಚ್ಚರಿಸಿದ್ದರು. ಸಾಲು ಸಾಲಾಗಿ ನಡೆಯಲಿರುವ ರೈತರ ಆತ್ಮಹತ್ಯೆಗಳ ಬಗೆಗೂ ಭವಿಷ್ಯ ನುಡಿದಿದ್ದರು. ಅಮೆರಿಕೆಯ ಕೆಂಟುಕಿ ಚಿಕನ್ ಅಂಗಡಿಯೆದುರು ಅಂದು ನಡೆಸಿದ ಹೋರಾಟವನ್ನು ಅಪಹಾಸ್ಯ ಮಾಡಿದವರಿದ್ದರು. ಆದರೆ ಎಲ್ಲವೂ ಈಗ ಧ್ವನನವಾಗತೊಡಗಿದೆ. ಸಾಮಾನ್ಯ ಜನ ಹೋಗಲಿ ಚಿಂತನೆಯುಳ್ಳವರೇ ಮೈ ಮರೆತು ಕುಳಿತ ಈ ಸನ್ನಿವೇಶದ ಜಡತ್ವ ಈ ದೇಶದ ಸ್ವಾತಂತ್ರ್ಯಕ್ಕೇ ಮಾರಕವಾಗಲಿದೆ.

ವರ್ತಮಾನದ ಜಾಗತಿಕ ವಿದ್ಯಮಾನಗಳು ಮತ್ತು ಭವಿಷ್ಯದ ದಿನಗಳಲ್ಲಿ ಅವು ತಂದೊಡ್ಡಲಿರುವ ದುರಂತಗಳನ್ನು ಪಟ್ಟಿ ಮಾಡುವುದೇ ಇಲ್ಲಿ ನನ್ನ ಉದ್ದೇಶವಾಗಿಲ್ಲ. ಸ್ವಾತಂತ್ರ್ಯವೆಂಬ ಸಂಗತಿ ಬರುವ ದಿನಗಳಲ್ಲಿ ಅತಂತ್ರವಾಗಲಿರುವ ಗ್ರಹಿಕೆಯೊಂದಿಗೆ ಮತ್ತೊಮ್ಮೆ ನಮ್ಮ ಸ್ವಾತಂತ್ರ್ಯ ಹೋರಾಟವನ್ನು ಮೆಲುಕು ಹಾಕಿಕೊಳ್ಳುವುದು ಮತ್ತು ಅಲ್ಲಿನ ಆಯ್ದ ಮಾದರಿಗಳನ್ನು ನಮ್ಮ ಕಣ್ಣ ಮುಂದಿರಿಸಿಕೊಳ್ಳುವುದೇ ಆಗಿದೆ. ಸ್ವಾತಂತ್ರ್ಯ ಆಂದೋಲನದ ಸ್ಮರಣೆ ಹಿಂದೆಂದಿಗಿಂತಲೂ ಈಗ ಅತ್ಯವಶ್ಯವಾಗಿದೆ.

ಸ್ವಾತಂತ್ರ್ಯ ಆಂದೋಲನದ ಸ್ಮೃತಿಯ ಸಾಹಿತ್ಯ ನಮ್ಮಲ್ಲಿ ಹೇರಳವಾಗಿದೆ. ಸ್ವತಂತ್ರ ಭಾರತದ ಆರಂಭದ ದಿನಗಳಲ್ಲಿ ಗತ ಇತಿಹಾಸವನ್ನು ಕೃತಜ್ಞತೆಯಿಂದ ನೆನೆಯುವುದೇನೋ ನಡೆಯಿತು. ನಂತರದ ದಿನಗಳಲ್ಲಿ ಮಾತ್ರ ಅದು ಸರಕಾರದ ಕಾಟಾಚಾರದ ಕಾರ್ಯಕ್ರಮಗಳಿಗೆ ಸೀಮಿತವಾಯಿತು. ದಿನಗಳೆದಂತೆ ಆ ಮಹಾಯಜ್ಞಕ್ಕೆ ಹವಿಸ್ಸುಗಳಾಗಿ ಜೀವ ತೇಯ್ದವರೂ ಸಹ ಕಣ್ಮರೆಯಾಗುತ್ತ, ಸ್ವಾತಂತ್ರ್ಯ ಸಂಬಂಧಿ ಸಾಹಿತ್ಯ ಕಾಲದ ಕಪಾಟಿನಲ್ಲಿ ಸೇರಿಹೋಯಿತು. ಭಾರತೀಯ ಸ್ವಾತಂತ್ರ್ಯ ಹೋರಾಟ ಎಂಬುದು ಯಾರೋ ಆಳುವ ಶಕ್ತಿಯ ಎದುರಾಗಿ ನಡೆಸಿದ

ಕೇವಲ ವಿಮೋಚನೆಯ ಹೋರಾಟವಾಗಿರಲಿಲ್ಲ. ಮಹಾತ್ಮಾ ಗಾಂಧೀಜಿ ಸೇರಿದಂತೆ ಸಾವಿರಾರು ಚಿಂತಕರು ರೂಪಿಸಿದ ಸ್ವದೇಶಿ ವಸ್ತುಗಳ ಬಳಕೆ, ಗುಡಿ ಕೈಗಾರಿಕೆಗಳ ಪುನರುಜ್ಜೀವನವೂ ಸೇರಿದಂತೆ ಹಲವು ಚಿಂತನೆಗಳು ಈಗಲೂ ಬಹುರಾಷ್ಟ್ರೀಯತೆಯ ಹೆಸರಿನ ವಾಣಿಜ್ಯ ವಹಿವಾಟು ಸೃಷ್ಟಿಸಿದ ದೇಶದ ಆರ್ಥಿಕತೆಯನ್ನೇ ಬುಡಮೇಲು ಮಾಡುವ ವಿನಾಶದಿಂದ ನಮ್ಮನ್ನು ಪಾರುಗಾಣಿಸಬಲ್ಲವು.

ಈ ಎಲ್ಲ ಕಾರಣಗಳಿಂದಾಗಿಯೇ ಭಾರತೀಯ ಸ್ವಾತಂತ್ರ್ಯ ಹೋರಾಟ ಮೊದಲಿಗಿಂತಲೂ ಈಗ ಹೆಚ್ಚು ಪ್ರಸ್ತುತವಾದುದು. ನಾನು ಹೇಳುವ ಮಾತುಗಳೇ ಅಂತಿಮ ಎಂದು ನಾನು ಭಾವಿಸಿಲ್ಲ. ಆದರೆ ಯಾವುದು ಇಂದಿನ ಸಮಸ್ಯೆಗಳಿಗೆ ಅಂತಿಮ ಪರಿಹಾರವೋ ಆ ದಿಕ್ಕಿನೆಡೆಗಿನ ಕೆಲವು ಹೆಜ್ಜೆಗಳು ಎಂದು ವಿನಮ್ರವಾಗಿ ಹೇಳಲು ಬಯಸುತ್ತೇನೆ. ಕಣ್ಮುಚ್ಚಿ ಧ್ಯಾನಿಸಿದರೆ ಒಳಗಣ್ಣಿನ ತೆರೆಯ ಮೇಲೆ ಸ್ವಾತಂತ್ರ್ಯ ಆಂದೋಲನದ ಹಲವು ಅಧ್ಯಾಯಗಳು ಮತ್ತು ಅಲ್ಲಿನ ಪಾತ್ರಗಳು ಮೈದಾಳುತ್ತವೆ. ಮಹಾತ್ಮಾಗಾಂಧೀಜಿ ಆ ಒಟ್ಟು ಅಧ್ಯಾಯಗಳ ಮೈ ತಳೆದ ಪಾತ್ರಗಳ ಮಹಾನಾಯಕರಂತೆ ಕಂಡು ಆ ನಾಯಕತ್ವದಲ್ಲಿಯೇ ಇಂದಿನ ಸಂದೇಹ ಸಂದಿಗ್ಧತೆಗಳ ಉತ್ತರವೂ ದೊರೆಯುವಂತಿದೆ. ಅದನ್ನೇ ಬಿಂದುವಾಗಿಟ್ಟುಕೊಂಡು ಮುಂದುವರೆದಲ್ಲಿ ಆ ನಾಯಕತ್ವದ ಪದರಿನಲ್ಲಿ ಸೃಷ್ಟಿಯಾಗುವ ಒಂದೊಂದು ಪಾತ್ರವೂ ಒಂದೊಂದು ಶಕ್ತಿಯೇ ಆಗಿದೆ.

ಈ ಹುಡುಕಾಟದಲ್ಲಿ ನನ್ನನ್ನು ಬಹಳ ಪ್ರಭಾವಿತಗೊಳಿಸಿದ್ದು ಶ್ರೀ ನರಸಿಂಹ ದಾಬಡೆ ಮತ್ತವರ ಪತ್ನಿ ದಿ. ಶ್ರೀಮತಿ ಶಕುಂತಲಾ ದಾಬಡೆ ಎಂಬ ಸ್ವಾತಂತ್ರ್ಯಯೋಧ ದಂಪತಿಗಳ ಬದುಕು ಮತ್ತು ವ್ಯಕ್ತಿತ್ವ. ನನ್ನ ಬದುಕಿನಲ್ಲಿ ಎದುರಾದ ಬಹುತೇಕ ಎಲ್ಲ ಪಾತ್ರಗಳೂ ಅಸಾಮಾನ್ಯವಾದವು. ಆ ಮಟ್ಟಿಗೆ ನಾನು ಧನ್ಯ. ಶ್ರೀ ನರಸಿಂಹ ದಾಬಡೆಯವರ ಪರಿಚಯದ ಪೂರ್ವದಲ್ಲಿ ಅವರು ನನ್ನ ಪಾಲಿಗೆ ಒಬ್ಬ ಸ್ವಾತಂತ್ರ್ಯಯೋಧರಾಗಿದ್ದರು. ದಿನಗಳೆದಂತೆ ಅವರ ಸಾಹಚರ್ಯದಲ್ಲಿ ಅವರ ವ್ಯಕ್ತಿತ್ವದ ಅಗಾಧತೆ ನನಗೆ ಅರಿವಾಗತೊಡಗಿತ್ತು. ಆ ಮೂಲಕ ಸ್ವಾತಂತ್ರ್ಯ ಹೋರಾಟ, ಮಹಾತ್ಮಾ ಗಾಂಧೀಜಿ ನಂತರದ ರಾಜಕೀಯ ವರ್ತಮಾನದ ದುರಂತಗಳು ಬೇರೊಂದು ಬಗೆಯಲ್ಲಿ ತಿಳಿಯತೊಡಗಿದವು. ಆ ಸ್ವಾತಂತ್ರ್ಯ ಸಂಘರ್ಷದ ಸಮುದ್ರಮಥನದಲ್ಲಿ ದೊರೆತ ಅಮೃತ ಚಿಂತನೆಗಳೇ ಈ ಪೀಳಿಗೆಗೆ ಎದುರಾಗಿರುವ ಆತಂಕಗಳ ಪರಿಹಾರಗಳೆನಿಸತೊಡಗಿದವು.

ಸಾಮಾಜಿಕ ಚಿಂತನೆಯ ಹಲವು ಸಂಪುಟಗಳು ನೀಡಬಲ್ಲ ಒಳನೋಟಗಳಿಗಿಂತ ಹೆಚ್ಚಿನದನ್ನು ಶ್ರೀ ನರಸಿಂಹ ದಾಬಡೆಯವರ ಸಾಮಿಪ್ಯದಲ್ಲಿ ಪಡೆದಿದ್ದೇನೆ. ಅವರು ಬದುಕಿನುದ್ದಕ್ಕೂ ಒಂದು ಹಂತದ ಸ್ವಾತಂತ್ರ್ಯದ ಹಾದಿಯಲ್ಲಿ ಹೆಜ್ಜೆ ಸವೆಸಿ ಬಂದಿದ್ದಾರೆ. ನಾನು ಮತ್ತು ನನ್ನಂತಹ ಕೋಟ್ಯಾಂತರ ನತದೃಷ್ಟ ಪೀಳಿಗೆ ಮತ್ತೊಂದು ಹಂತದ ಸ್ವಾತಂತ್ರ್ಯದ ಪಯಣಕ್ಕಾಗಿ ಅಣಿಯಾಗಬೇಕಿದೆ. ಈ ಹಾದಿಯಲ್ಲಿ ದಾಬಡೆ ದಂಪತಿಗಳ ವೀರಗಾಥೆ ಕೈದೀವಿಗೆಯಾಗಬಲ್ಲದು.

ಸ್ವತಃ ಮಹಾತ್ಮಾ ಗಾಂಧೀಜಿಯವರೂ ಸೇರಿದಂತೆ ಅನೇಕ ಸ್ವಾತಂತ್ರ್ಯಯೋಧ ದಂಪತಿಗಳ ಜೀವನಗಾಥೆಗಳು ನಮ್ಮ ಕಣ್ಮುಂದಿವೆ. ಆ ಪೈಕಿ ದಾಬಡೆ ದಂಪತಿಗಳ ಸ್ವಾತಂತ್ರ್ಯ ಹೋರಾಟದ ವೀರಗಾಥೆಯ ವೈಶಿಷ್ಟ್ಯವೇ ಬೇರೆ. ನರಸಿಂಹ ದಾಬಡೆ ಜಮೀನ್ದಾರರಾಗಿರಲಿಲ್ಲ. ಯಾವುದೇ ಶ್ರೀಮಂತ ಘರಾಣೆಯಿಂದ ಬಂದವರಾಗಿರಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದ ನರಸಿಂಹ

ದಾಬಡೆಯವರ ಅಂತರಂಗದಲ್ಲಿ ಮನೆ ಮಾಡಿದ್ದ ಭಾರತದ ವಿಮೋಚನೆಯ ಹಂಬಲವೇ ಅವರ ಸಂಪತ್ತಾಗಿತ್ತು. ಆ ಹೋರಾಟದ ಮನೋಭಾವಕ್ಕೆ ಮನಸೋತು ಕೈಹಿಡಿದ ಶ್ರೀಮತಿ ಶಕುಂತಲಾ ದಾಬಡೆಯವರೂ ಸಹ ಆ ವಿಷಯದಲ್ಲಿ ಅಷ್ಟೇ ಶ್ರೀಮಂತಿಕೆ ಹೊಂದಿದ್ದರು. ಬಡತನ, ಸನಿಹದ ಸಂಬಂಧಿಗಳ ತಾತ್ಸಾರ, ಬ್ರಿಟಿಷ್ ಸರಕಾರ ವಿಧಿಸಿದ ಜೈಲುಶಿಕ್ಷೆ ಈ ದಂಪತಿಗಳನ್ನೆಂದೂ ಕಂಗೆಡಿಸಲಿಲ್ಲ. ಬದಲಾಗಿ ಆ ಸನ್ನಿವೇಶದ ಎಲ್ಲ ಪ್ರತಿಕೂಲಗಳೇ ಅವರ ಆತ್ಮಶಕ್ತಿಯನ್ನು ಹೆಚ್ಚಿಸಿದವು.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಬಹುಪಾಲು ಜನ ವಿಶ್ರಾಂತಿಯ ಮನೋಭಾವ ರೂಢಿಸಿಕೊಂಡರೆ ದಾಬಡೆ ದಂಪತಿಗಳು ಸ್ವಾತಂತ್ರ್ಯನಂತರದ ಸರ್ವೋದಯ ಚಟುವಟಿಕೆಗಳಿಗೆ ತಮ್ಮನ್ನೇ ಅರ್ಪಿಸಿಕೊಂಡರು. ಧಾರವಾಡ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ಈ ದಂಪತಿಗಳ ಸಾರ್ವಜನಿಕ ಸೇವೆಯ ಹೆಜ್ಜೆ ಗುರುತುಗಳಿವೆ. ಅಲಕ್ಷಿತ ಸಮುದಾಯದ ಸಾವಿರಾರು ಕುಟುಂಬಗಳು ಹೊಸ ಬೆಳಕು ಕಂಡಿವೆ. ಶ್ರೀಮತಿ ಶಕುಂತಲಾ ದಾಬಡೆ ತಮ್ಮ ಮಗ ಗೋಪಾಲ (ಈಗಿನ ಡಾ. ಗೋಪಾಲ ದಾಬಡೆ) ನೊಂದಿಗೆ ಜನ್ಮ ತಳೆಯುವುದಕ್ಕೆ ಕಾರಣವಾದ ಸರ್ವೋದಯ ಶಿಕ್ಷಣ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳಿಂದ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆದು ಹೊರಬಂದಿದ್ದಾರೆ.

ದಂಪತಿಗಳಿಬ್ಬರೂ ನಡೆದು ಬಂದ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಮನೆ ನಡೆಸುವ ಯಜಮಾನರಾದ ದಾಬಡೆಯವರೇ ಜೈಲಿಗೆ ಹೋದ ಬಳಿಕ ಒಂದು ಮಗುವಿನ ತಾಯಿ ಶ್ರೀಮತಿ ಶಕುಂತಲಾ ಅವರೂ ಸಹ ಜೈಲುವಾಸ ಅನುಭವಿಸಬೇಕಾಯಿತು. ಅವರ ಹಿರಿಯ ಮಗಳು ಭಾರತಿಯವರ ಬಾಲ್ಯ ಜೈಲಿನಲ್ಲಿಯೇ ಕಳೆಯುವಂತಾಯಿತು. ಆ ಲೆಕ್ಕದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ದಾಬಡೆ ಮನೆತನದ ಮೂವರು ಬ್ರಿಟಿಷ್‌ರ ಸೆರೆಯಾಳು ಆಗಬೇಕಾಯಿತು.

ಹೋರಾಟದ ಹಾದಿಯಲ್ಲಿ ಏನೆಲ್ಲ ತೊಂದರೆಗಳು ಬಂದಾಗಲೂ ಸಹ ದಂಪತಿಗಳಿಬ್ಬರೂ ಪರಸ್ಪರ ಸಂತೈಸಿಕೊಳ್ಳುತ್ತ ಹೋರಾಟದ ಹಾದಿಯಲ್ಲಿ ಮುನ್ನಡೆದದ್ದು ಇಲ್ಲಿನ ಮಹತ್ವದ ಅಂಶ. ಕಷ್ಟಗಳಿಗೆ ಹೆದರಿ, ಜೈಲುವಾಸಕ್ಕೆ ಅಂಜಿ ಹೋರಾಟವನ್ನು ಬಿಟ್ಟುಕೊಡುವ ವಿಚಾರವನ್ನೇ ಮಾಡದ ದಂಪತಿಗಳ ಆತ್ಮಸ್ಥೈರ್ಯ ನಾಡಿಗೇ ಮಾದರಿ. ಭೂಗತರಾದಾಗ ನರಸಿಂಹ ದಾಬಡೆಯವರು ತೋರಿದ ಶೌರ್ಯ, ಜೈಲುವಾಸದಲ್ಲಿ ತೋರುವ ಸ್ಥಿತಪ್ರಜ್ಞೆ, ಎಂದೂ ಬಿಟ್ಟುಕೊಡದ ದೇಶಭಕ್ತಿ, ಗಾಂಧೀವಾದದ ಬಗೆಗಿನ ಅಸೀಮ ಶ್ರದ್ಧೆಯನ್ನು ಗಮನಿಸಿದ ಇಂದಿನ ಪೀಳಿಗೆಗೆ ನರಸಿಂಹ ದಾಬಡೆಯವರ ವ್ಯಕ್ತಿತ್ವ ವಿಸ್ಮಯ ಮೂಡಿಸುತ್ತದೆ. ೩೩ ತಿಂಗಳು ಜೈಲುವಾಸ ಮತ್ತು ೧೬ ತಿಂಗಳ ಕಾಲದ ಭೂಗತ ಹೋರಾಟ ಮೈನವಿರೇಳಿಸುತ್ತದೆ. ಆದರೆ ಇದೆಲ್ಲವನ್ನೂ ದಂಪತಿಗಳಿಬ್ಬರೂ ತಮ್ಮದೇ ಶೈಲಿಯಲ್ಲಿ ವಿವರಿಸುವಾಗ ಅದರಲ್ಲಿ ತುಂಬಿದ ನದಿಯೊಂದರ ಹರಿವಿನ ಪ್ರಶಾಂತತೆ ಮನ ಮುಟ್ಟುತ್ತದೆ.

ಮಹಿಳೆಯರು ಹೊರಗೆ ಬಾರದ ಅಂದಿನ ಮಡಿವಂತ ದಿನಗಳಲ್ಲಿ ದಿಟ್ಟತನದಿಂದ ಸ್ವಾತಂತ್ರ್ಯ ಹೋರಾಟಕ್ಕಿಳಿದ ಶಕುಂತಲಾ ಅವರೂ ಸಹ ತಮ್ಮ ಪತಿಯ ಸರಿಸಮನಾಗಿ ಸೆಣಸಿದ ದೇಶಭಕ್ತಿಯು ಕಿಚ್ಚು ಸಹ ಬೆರಗು ಮೂಡಿಸದೇ ಇರದು. ಈ ದಂಪತಿಗಳ ಜೀವನಗಾಥೆ ರಾಷ್ಟ್ರೀಯ

ಸ್ಥರದಲ್ಲಿ ದಾಖಲಾಗಿ ದೇಶವಾಸಿಗಳ ಮನಮುಟ್ಟಬೇಕಾಗಿತ್ತು. ದುರ್ದೈವವಶಾತ್ ಯಾವ ಯಾವುದೋ ಕಾರಣಗಳ ಸಲುವಾಗಿ ದಾಬಡೆ ದಂಪತಿಗಳು ಸ್ವಾತಂತ್ರ್ಯಾನಂತರದ ದಿನಗಳಲ್ಲಿ ನೇಪಥ್ಯದಲ್ಲಿಯೇ ಉಳಿಯಬೇಕಾಯಿತು. ದೆಹಲಿಗೆ ಸಮೀಪದಲ್ಲಿದ್ದವರು, ರಾಜಧಾನಿ ಬೆಂಗಳೂರು ವಾಸಿಗಳು ಮಾತ್ರ ಚರಿತ್ರೆಯ ಅಗ್ರಪುಟಗಳಲ್ಲಿ ದಾಖಲಾಗುತ್ತ ಬಂದರು. ಆದರೆ ನರಸಿಂಹ ದಾಬಡೆ ಆ ಕಡೆಗೆ ಲಕ್ಷ್ಯ ನೀಡದೆ ತಮ್ಮ ವಿಧಾಯಕ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡು ಮೌನವಾಗುಳಿದರು.

ಸ್ನೇಹಿತರ ಅಭಿಮಾನದ ಒತ್ತಡಕ್ಕೆ ಮಣಿದ ನರಸಿಂಹ ದಾಬಡೆಯವರು 'ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು' ಶೀರ್ಷಿಕೆಯಲ್ಲಿ ತಮ್ಮ ಅನುಭವ ಕಥನ ಬರೆದು ಕೊಟ್ಟಿದ್ದನ್ನು ಕನ್ನಡ ಪುಸ್ತಕ ಪ್ರಾಧಿಕಾರ ಅಭಿಮಾನದಿಂದ ಪ್ರಕಟಿಸಿತ್ತು. ಅವರ ಬದುಕಿನ ಅರ್ಧ ಹಾದಿಯಲ್ಲಿಯೇ ನಡೆದು ಹೋದ ಸ್ವಾತಂತ್ರ್ಯಯೋಧೆ ಶಕುಂತಲಾ ಅವರ ನಿರೂಪಣೆಯು 'ಸಂಘರ್ಷ - ಸಹಯೋಗ - ಸಂತೃಪ್ತಿ' ಎಂಬ ಹೆಸರಿನಲ್ಲಿ ಪ್ರಕಟವಾಗಿತ್ತು. ಈ ಎರಡೂ ಬರಹಗಳಿಗೂ ನಾಡಿನೆಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಗಿತ್ತು.

ದಾಬಡೆ ದಂಪತಿಗಳ ಬರಹ ಹಾಗೂ ಅವರ ಕುರಿತು ಮಾಧ್ಯಮಗಳಲ್ಲಿ ವ್ಯಕ್ತಗೊಂಡ ಅಭಿಪ್ರಾಯಗಳು ಮತ್ತು ಗಣ್ಯರ ಅನಿಸಿಕೆಗಳನ್ನಿಲ್ಲಿ ಸಂಗ್ರಹಿಸಿಡುವ ಸಂಪಾದಕನೆಂಬ ಹೆಸರಿನ ಗುಮಾಸ್ತಗಿರಿ ಮಾತ್ರ ಈಗ ನನ್ನದಾಗಿದೆ. ಹೂವಿನೊಂದಿಗೆ ನಾರೂ ಸ್ವರ್ಗ ಸೇರಿತೆಂಬ ಮಾತಿನಂತೆ ಚರಿತ್ರಾರ್ಹ ಪಾತ್ರ ನಿರ್ವಹಿಸಿದ ಈ ಎರಡೂ ಅಮೋಘ ವ್ಯಕ್ತಿತ್ವಗಳ ಪರಿಚಯವನ್ನು ಕನ್ನಡಿಗರಿಗೆ ನೀಡುವಂತಾದುದು ನನ್ನ ಬದುಕಿನ ಭಾಗ್ಯವೆಂದೇ ತಿಳಿದುಕೊಂಡಿದ್ದೇನೆ.

ದಿ. ಶ್ರೀಮತಿ ಶಕುಂತಲಾ ದಾಬಡೆ ತಾವು ಜೀವಿತ ಕಾಲದಲ್ಲಿ ನಿರೂಪಿಸಿದ ತಮ್ಮ ಜೀವನ ವೃತ್ತಾಂತ ಅವರು ನಿರೂಪಿಸಿದಂತೆಯೇ ಯಥಾವತ್ತಾಗಿ ಇಲ್ಲಿ ದಾಖಲಾಗಿದೆ. ಅವರ ಪತಿ ನರಸಿಂಹ ದಾಬಡೆ, ಅವರ ಜೀವನ ಬಲ್ಲವರು ಅಂದಿನ ಸ್ವಾತಂತ್ರ್ಯ ಹೋರಾಟದ ವಿವರಗಳು ಎಲ್ಲ ಅದಿರುವಂತೆಯೇ ಇಲ್ಲಿ ದಾಖಲು ಮಾಡಿದ್ದೇನೆ. ಇಬ್ಬರ ಬರಹಗಳಿಂದಾಗಿ ಅವರ ಅಂದಿನ ಬದುಕು ಬಲ್ಲವನಾದರೂ ತೃತೀಯ ವ್ಯಕ್ತಿಯಾಗಿ ಅವರನ್ನು ಪರಿಚಯಿಸಲು ಹೊರಟ ನನ್ನ ಬರವಣಿಗೆ ನನಗೆ ಸಮಾಧಾನ ನೀಡಲಿಲ್ಲ. ಅವರಿಬ್ಬರ ನಿರೂಪಣೆಯುದ್ದಕ್ಕೂ ಇರುವ ಪ್ರಾಮಾಣಿಕತೆ ತಾದಾತ್ಮ್ಯಗಳಿಗೆ ನನ್ನ ಬರವಣಿಗೆಯಲ್ಲಿ ನುಸುಳಬಹುದಾದ ಕಲಾತ್ಮಕತೆ ಧಕ್ಕೆ ತಂದೀತು ಎಂಬ ಆತಂಕ ತಲೆದೋರಿದ್ದರಿಂದ ಅವರ ಬದುಕನ್ನು ಪರಿಚಯಿಸುವ ಸಾಹಸವನ್ನು ಅರ್ಧಕ್ಕೆ ಕೈಬಿಟ್ಟು ಎಲ್ಲವೂ ಅವಿರುವಂತೆಯೇ ತಮ್ಮ ಹೃದಯಕ್ಕೆ ಸಮರ್ಪಿಸುತ್ತಿದ್ದೇನೆ, ಒಪ್ಪಿಸಿಕೊಳ್ಳಿ.

ಗೌರವದ ವಂದನೆಗಳೊಂದಿಗೆ,

ಧಾರವಾಡ

೧೦ ಅಗಸ್ಟ್, ೨೦೦೫

**• ಮೋಹನ ನಾಗಮ್ಮನವರ**

# ಕೃತಜ್ಞತೆಗಳು

- ಸ್ವಾತಂತ್ರ್ಯ ಶರಣ್ಯರು ಕೃತಿಯನ್ನು ಸಂಪಾದಿಸಲು ಒಪ್ಪಿಗೆ ನೀಡಿ ಹಲವಾರು ಪುಸ್ತಕ, ದಾಖಲೆ ಒದಗಿಸಿದ ಹಿರಿಯ ಸ್ವಾತಂತ್ರ್ಯಯೋಧ ಶ್ರೀ ನರಸಿಂಹ ದಾಬಡೆಯವರ ಅಂತಃಕರಣಕ್ಕೆ

- ಪೂರಕ ಮಾಹಿತಿಗಳನ್ನು ನೀಡಿ ಪ್ರೋತ್ಸಾಹಿಸುತ್ತ ಬಂದ ಹಿರಿಯರಾದ ಡಾ. ಶಂಕರ ಜೋಷಿ, ಶ್ರೀಮತಿ ಭಾರತಿ ಜೋಷಿಯವರಿಗೆ ಮತ್ತು ಡಾ. ಗೋಪಾಲ ದಾಬಡೆ, ಶ್ರೀಮತಿ ಶಾರದಾ ಗೋಪಾಲ ಹಾಗೂ ಶ್ರೀ ಸುರೇಂದ್ರ ದಾನಿ ಅವರಿಗೆ

- ಅಭಿಮಾನದಿಂದ ಪ್ರಕಟಿಸುತ್ತಿರುವ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ

- ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಗಳು, ನನ್ನ ವಿದ್ಯಾ ಗುರುಗಳಾದ ಪ್ರೊ. ಬಿ. ವ್ಹಿ. ಗುಂಜೆಟ್ಟಿ, ಕೋಶಾಧ್ಯಕ್ಷರಾದ ಶ್ರೀ ಎಸ್. ಎಂ. ಹೊಳೆಯಣ್ಣವರ ಸೇರಿದಂತೆ ಎಲ್ಲ ಪದಾಧಿಕಾರಿಗಳಿಗೆ, ಸಿಬ್ಬಂದಿ ಮಿತ್ರರಿಗೆ ಹಾಗೂ ಹಿರಿಯ ಸಮಾಜವಾದಿ ಶ್ರೀ ರಾಚಪ್ಪಣ್ಣ ಹಡಪದ, ಮಾರ್ಗದರ್ಶಿ ಅಣ್ಣ 'ಶ್ರೀ ಶಿವಪುತ್ರಯ್ಯ ರಾಚಯ್ಯನವರ' ಅವರಿಗೆ

- ಕೃತಿಯ ಪ್ರಕಟಣೆಯಲ್ಲಿ ಹೆಚ್ಚಿನ ಶ್ರಮವಹಿಸಿದ ಶ್ರೀಮತಿ ಹನುಮಾಕ್ಷಿ ಗೋಗಿಯವರಿಗೆ, ಶ್ರೀಮತಿ ವೀಣಾ ಕುಲಕರ್ಣಿಯವರಿಗೆ, ಸಹಕರಿಸಿದ ಮಿತ್ರರಾದ ಮಹಾದೇವ ದೊಡ್ಡಮನಿ, ಬಸೂ ಪಟ್ಟಣದ ಹಾಗೂ ಪುಂಡಲೀಕ ಹಡಪದ ಅವರಿಗೆ

- ಆಸ್ಥೆಯಿಂದ ಮುದ್ರಣ ಪೂರೈಸಿದ ಬಿ. ಜಿ. ಪ್ರಿಂಟರ್ಸ್‌ಗೆ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ರವೀಂದ್ರ ವಿಶ್ವಜ್ಞ ಅವರಿಗೆ

- ಎಂದಿನಂತೆಯೇ ಈ ಪುಸ್ತಕ ಸಂಪಾದನೆಯಲ್ಲಿಯೂ ಸಹಕರಿಸಿದ ಪತ್ನಿ ಶ್ರೀಮತಿ ಚಂದ್ರಿಕಾಗೆ ಮಗಳು ಚೈತ್ರಳಿಗೆ...

ಧಾರವಾಡ.

● ಮೋಹನ ನಾಗಮ್ಮನವರ

# ಪರಿವಿಡಿ

ಪುಟ

- ಸಂಘರ್ಷ - ಸಹಯೋಗ - ಸಂತೃಪ್ತಿ 1

  - ಶ್ರೀಮತಿ ಶಕುಂತಲಾ ದಾಬಡೆ

- ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು 67

  - ಶ್ರೀ ನರಸಿಂಹ ದಾಬಡೆ

ಅನುಬಂಧ

- ಆತ್ಮೀಯರ ಅಂತಃಕರಣ 157

*I have nothing new*
*to teach the world*
*Truth and Non-violence are*
*as old as the hills*

***- Mahatma Gandhi***



ದಿ. ಶ್ರೀಮತಿ ಶಕುಂತಲಾ ದಾಬಡೆ



ಶ್ರೀಮತಿ ಶಕುಂತಲಾ ದಾಬಡೆ
ಹಾಗೂ ಶ್ರೀ ನರಸಿಂಹ ದಾಬಡೆ

# ಸಂಘರ್ಷ - ಸಹಯೋಗ - ಸಂತೃಪ್ತಿ

- ಶ್ರೀಮತಿ ಶಕುಂತಲಾ ದಾಬಡೆ

# ಬಾಲ್ಯದಿಂದ ಬಾಸಿಂಗ ಕಟ್ಟುವವರೆಗೆ

ನಮ್ಮದು ತೀರ ಕೆಳ ಮಧ್ಯಮ ವರ್ಗದ ಕುಟುಂಬ. ನಮ್ಮ ತಂದೆ ದಿ. ಭೀಮರಾವ ದಾನಿ ಅವರು ಧಾರವಾಡದ ಆರ್. ಎಲ್. ಎಸ್. ಹೈಸ್ಕೂಲಿನಲ್ಲಿ ಡ್ರಾಯಿಂಗ್ ಶಿಕ್ಷಕರು. ನಮ್ಮದು ಧಾರವಾಡ ಮದಿಹಾಳದ ಸ್ವಂತ ಮನೆಯಲ್ಲಿ ವಾಸ. ನಾವು ಐವರು ಅಣ್ಣ ತಮ್ಮಂದಿರು, ಇಬ್ಬರು ಅಕ್ಕತಂಗಿಯರು, ಮೂರು ಮಂದಿ ಗಂಡು ಮಕ್ಕಳ ನಂತರ ಹುಟ್ಟಿದವಳು ನಾನು (1-3-1921). ನಂತರ ಇಬ್ಬರು ತಮ್ಮಂದಿರು, ಓರ್ವ ತಂಗಿ. ನಮ್ಮ ತಾಯಿ ಗಂಗಾಬಾಯಿ ದಾಬಡೆ ಮನೆತನದವಳು, ಆಗ ವಿಜಾಪುರ ಜಿಲ್ಲಾ ಕೋರ್ಟಿನಲ್ಲಿ ಶಿರಸ್ತೇದಾರ ಆಗಿದ್ದ ಶ್ರೀನಿವಾಸರಾವ ದಾಬಡೆ ಅವರ ತಂಗಿ. ನಮ್ಮ ಕಾಕಾ ಗುರುರಾವ ದಾನಿ ರೇಲ್ವೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್. ನನ್ನ ಮೂವರು ಅಣ್ಣಂದಿರು ತಂದೆಯ ಬಣ್ಣದವರು - ಕಪ್ಪು. ನಾನು ಮತ್ತು ನಂತರದವರು ತಾಯಿಯ ಬಣ್ಣದವರು - ಕೆಂಪು. ನನ್ನ ಬಣ್ಣ ಚೆನ್ನಾಗಿದೆ, ಆದರೆ ಕಣ್ಣು ಮಾತ್ರ ಬೆಕ್ಕಿನವು, ಮೊದ ಮೊದಲು ನನ್ನ ಆರೋಗ್ಯ ತುಂಬಾ ಚೆನ್ನಾಗಿತ್ತು. ಅವ್ವನಿಗಿಂತ ಅಪ್ಪ ನನ್ನನ್ನು ಬಹಳ ಪ್ರೀತಿಸುತ್ತಿದ್ದ. ಗಂಡು ಮಕ್ಕಳಿಗಿಂತ ಆತನ ಪ್ರೀತಿ ನನ್ನ ಮೇಲೆಯೇ ಹೆಚ್ಚು, ನನ್ನನ್ನು ತುಂಬಾ ಮುದ್ದು ಮಾಡುವವ. ಸ್ವಾಭಾವಿಕವಾಗಿ ನನ್ನ ಪ್ರೀತಿ ಆತನ ಮೇಲೆ ಹೆಚ್ಚಾಗಿತ್ತು. ಒಂದು ವಿಧವಾಗಿ ನಾನು ತೀರ ದುರ್ದೈವಿ. ನನ್ನ ತಂದೆ 1932 ರಲ್ಲಿಯೇ ನನ್ನನ್ನು ಅಗಲಿದರು. ಆಗ ನಾವೆಲ್ಲ ಚಿಕ್ಕವರು. ನಮ್ಮ ತಾಯಿಯೇ ಮನೆಯ ಹಿರಿಯಳು. ನಮ್ಮ ಕಾಕಾ (ಗುರುರಾವ್) ನಮ್ಮ ಮಾಮಾ (ಶ್ರೀನಿವಾಸರಾವ ದಾಬಡೆ) ಕೆಲಮಟ್ಟಿಗೆ ಸಹಾಯ ಮಾಡುತ್ತಿದ್ದರು. ಅಂತೂ ನಮ್ಮ ಬಡತನದ ಜೀವನ ನನಗೆ ತಿಳುವಳಿಕೆ ಬಂದಾಗಿನಿಂದ ನಡೆದಿದೆ.

ಪ್ರಾರಂಭದಲ್ಲಿ ಯಥಾಪ್ರಕಾರ ಕನ್ನಡ ಶಾಲೆಗೆ ಹೋಗಿ 1935ರಲ್ಲಿ ಆಗಿನ ಮುಲ್ಕೀ ಪರೀಕ್ಷೆ ಪಾಸಾದೆ. ಮುಂದೆ ಸ್ವಲ್ಪ ಇಂಗ್ಲೀಷ್ ಓದಿ ಶಾಲೆಗೆ ಶರಣು ಹೊಡೆದೆ. ಮನೆಗೆಲಸ, ಕಸೂತಿ ಹಾಕುವದು, ಓದುವದರಲ್ಲಿ ಮಗ್ನಳಾದೆ. ನನ್ನ ಓದುವ ಗತಿ ಶೀಘ್ರವಾಗಿತ್ತು. ತಾಸಿಗೆ 100 ಪುಟ ಸಹಜವಾಗಿ ಓದುತ್ತಿದ್ದೆ. 1933ರಲ್ಲಿ ನಮ್ಮ ಹಿರಿಯಣ್ಣ ಮ್ಯಾಟ್ರಿಕ್ ಪರೀಕ್ಷೆಗೆ

ಕುಳಿತಿದ್ದ. ಅದೇ ವರ್ಷ ಹುಬ್ಬಳ್ಳಿಯಲ್ಲಿದ್ದ ನರಸಿಂಹ ದಾಬಡೆ ಅವರೂ ಆ ಪರೀಕ್ಷೆಗೆ ಕುಳಿತಿದ್ದರು. ಆಗ ಈ ಪರೀಕ್ಷೆ ಧಾರವಾಡದಲ್ಲಿ ಮಾತ್ರ ಇತ್ತು. ಆಗ ನನ್ನ ಅಣ್ಣ ಪಾಸಾಗಲಿಲ್ಲ, ದಾಬಡೆ ಅವರು ಪಾಸಾದರು. ನಮ್ಮ ಮನೆಗೆ ಬಂದು ಫೇಡೆ ಕೊಟ್ಟು ಹೋದರು. ನಮಗೆ ಸಂತೋಷವಾಯ್ತು. ನಮ್ಮ ಮನೆಗೆ ಅವರು ಒಂದೆರಡು ಸಲ ಬಂದು ಹೋದ ನೆನಪು ನನಗಿದೆ. ನಮ್ಮ ಮನೆತನವನ್ನು ಸ್ವಾಭಾವಿಕವಾಗಿಯೇ ಮೊದಲಿನಿಂದ ಬಲ್ಲವರು. ನಮ್ಮ ತಾಯಿ ದಾಬಡೆ ಮನೆತನದವಳೇ ಇದ್ದುದರಿಂದ ಎರಡೂ ಮನೆತನದವರಲ್ಲಿ ಬಂದು ಹೋಗುವ ಬಳಕೆ ಇರುತ್ತಿತ್ತು. ಅವರೇ ಒಮ್ಮೆ ಹೇಳಿದ್ದು ನಮ್ಮ ತಾಯಿ ವಸಂತನನ್ನು (ನನ್ನ ತಮ್ಮ) ಹಡೆಯುವಾಗ ಬಾಣಂತನ ಮಾಡಲು ತಮ್ಮ ಅಕ್ಕ ಕಾಸಕ್ಕನನ್ನು ಬಿಟ್ಟು ಹೋಗಿದ್ದರಂತೆ. ಒಮ್ಮೆ ದೀಪಾವಳಿಗೆ (1934) ದಾಬಡೆ ಅವರು ನಮ್ಮ ಮನೆಗೆ ಬಂದ ನೆನಪು. ಆಗ ನಾನು ಚಿಕ್ಕವಳು ಅರ್ಥಾತ್ ಮಾಮಾ ಎಂದೇ ಸಂಬೋಧಿಸುತ್ತಿದ್ದೆ. ತುಂಬಾ ಸರಳವಾಗಿಯೇ ಅವರ ಸಂಗಡ ಹರಟೆ ಹೊಡೆಯುತ್ತಿದ್ದೆ. ನನಗೆ ನೆನಪಿದ್ದ ಮಟ್ಟಿಗೆ ಅವರಿಗೆ ದೀಪಾವಳಿ ಎಣ್ಣೆ ನಾನೇ ಹಚ್ಚಿರಬೇಕು. ಅವರು ಎರಡು ದಿವಸ ನಮ್ಮ ಮನೆಯಲ್ಲಿಯೇ ಇದ್ದರು. ಆಗ ಅವರು ಧಾರವಾಡದಲ್ಲಿಯ ಕರ್ನಾಟಕ ತಾಂತ್ರಿಕ ಕಾಂಗ್ರೆಸ್ ಕಮಿಟಿಯಲ್ಲೇ ಕೆಲಸ ಪ್ರಾರಂಭಿಸಿದ್ದರು. ಮುಂದೆ ನಮ್ಮ ಹಿರಿಯಣ್ಣ ರಾಮಣ್ಣನಿಗೆ ಬಾಗಲಕೋಟೆ ಕೋರ್ಟಿನಲ್ಲಿ ಕೆಲಸ ಸಿಕ್ಕಿತು. ಅದು ನಮ್ಮ ಮಾಮಾ ಶ್ರೀನಿವಾಸರಾವ ದಾಬಡೆ ಅವರ ಪ್ರಯತ್ನದ ಫಲ. ಆಗ ನಾವು ಧಾರವಾಡ ಮನೆಯನ್ನು ಸಂಪೂರ್ಣ ಕಿತ್ತು ಬಾಗಲಕೋಟೆಗೆ ಹೋದೆವು.

ನಾವು ಬಾಗಲಕೋಟೆಗೆ ಹೋದದ್ದು 1935ರಲ್ಲಿ. ನಮ್ಮ ಮನೆ ಇದ್ದದ್ದು ಕಿಲ್ಲೆಯಲ್ಲಿ. ಅದು ಸನಾತನ ಬ್ರಾಹ್ಮಣರ ಭದ್ರ ಕೋಟೆ. ಹಾಗೆ ನೋಡಿದರೆ ನಾನು ಅಲ್ಲಿಗೆ ಹೋದ ಕೂಡಲೇ ನನ್ನ ಇಂಗ್ಲೀಷ್ ಶಾಲಾ ವ್ಯಾಸಂಗವನ್ನು ಮುಂದುವರೆಸಬೇಕಾಗಿತ್ತು. ಅಲ್ಲಿ ಹೆಣ್ಣು ಮಕ್ಕಳ ಪ್ರತ್ಯೇಕ ಇಂಗ್ಲೀಷ್ ಶಾಲೆ ಇರಲಿಲ್ಲ. ಗಂಡು ಹುಡುಗರ ಶಾಲೆಯಲ್ಲೇ ಪ್ರವೇಶ ಪಡೆದು ಅಭ್ಯಾಸ ನಡೆಸುವ ಹೆಣ್ಣು ಹುಡುಗಿಯರ ಸಂಖ್ಯೆ ಕಡಿಮೆ. ಹುಡುಗಿಯರ ಪ್ರಶ್ನೆ ಏನು ಬಂತು ? ಅವರ ತಂದೆ ತಾಯಿಗಳೇ ಆ ಧೈರ್ಯ ಮಾಡುತ್ತಿರಲಿಲ್ಲ. ಯಾಕೆಂದರೆ ಅಂಥವರ ಬಗ್ಗೆ ನೆರೆಹೊರೆಯವರು ಬೀದಿಯವರು ಬಿಡುವ ವಾಗ್ಬಾಣಗಳನ್ನು, ವ್ಯಂಗ್ಯ ಕಟೂಕ್ತಿಗಳನ್ನು ಎದುರಿಸುವ ಎದೆಗಾರಿಕೆ ಬಹಳ ಕಡಿಮೆ ಜನರಲ್ಲಿ ಇರುತ್ತಿತ್ತು. ಬಾಗಲಕೋಟೆಯ ಕಿಲ್ಲೆಯಲ್ಲಿಯ ಮಡಿವಂತ ಸಮಾಜಕ್ಕೆ ಅಂಜಿಕೊಂಡು ನಡೆಯುವದು ಅನಿವಾರ್ಯವಾಗಿತ್ತು. ನಾನು ಮನೆಗೆಲಸ, ಕೈಕೆಲಸ, ಹೆಣಿಕೆ ಮುಂತಾದವುಗಳಿಂದ ದಿನಗಳೆಯುವದು ಅನಿವಾರ್ಯವಾಗಿತ್ತು. ನಾನು ಅದಕ್ಕೆ ಹೊಂದಿಕೊಂಡೆ. ಶಾಲಾಭ್ಯಾಸ ಮುಂದುವರೆಸುವ ಹಂಬಲ ಇಂಗಿ ಹೋಯಿತು.

ಬಾಲ್ಯ-ವಿವಾಹದ ದಿನಗಳು ಆಗ ಕಳೆದು ಹೋಗಿದ್ದವಾದರೂ ಪ್ರಾಪ್ತ ವಯಸ್ಕ ಕನ್ಯೆಯನ್ನು ಮನೆಯಲ್ಲಿ ಇಟ್ಟುಕೊಳ್ಳುವದು ಚಿಂತೆಯ ಸಂಗತಿಯಾಗಿರುತ್ತಿತ್ತು. ನಾನು ಪ್ರಥಮ ಸಲ ಋತುಮತಿ ಆದದ್ದು ನನಗೆ ನೆನಪಿದೆ. ಅದು ಅಂದಿನ ಸನಾತನ ಸಮಾಜದಲ್ಲಿ ಒಂದು

ದೊಡ್ಡ ಅಪರಾಧ. ಮದುವೆಯ ಮೊದಲೇ ಮೈನೆರೆಯುವುದೆಂದರೇನು ? ಅದನ್ನು ಯಾರೂ ಬಹಿರಂಗಗೊಳಿಸುತ್ತಿರಲಿಲ್ಲ. ನನ್ನ ಮದುವೆ ಆಗುವವರೆಗೂ ಪ್ರತಿ ತಿಂಗಳೂ ಆ ಮೂರು ದಿನಗಳು ಕಳ್ಳತನದಿಂದ ಕತ್ತಲು ಕೋಣೆಯಲ್ಲಿ ಕಳೆಯುತ್ತಿದ್ದುದನ್ನು ಹೇಗೆ ಮರೆಯಲಿ ? ನನ್ನ ಓರಿಗೆಯ ನಾಲ್ಕಾರು ಗೆಳತಿಯರಿದ್ದರು. ಎಲ್ಲರ ಮನೆಯಲ್ಲೂ ಅದೇ ಹಣೆಬರಹ. ಒಬ್ಬರಿಗೊಬ್ಬರು ಗುಪ್ತ ಸಂದೇಶ ಕಳಿಸಿ ಕಳ್ಳತನದಿಂದ ಭೆಟ್ಟಿಯಾಗಿ ಹರಟೆ ಹೊಡೆದು ಸಮಯ ಕಳೆಯುತ್ತಿದ್ದೆವು. ಮನೆಯಲ್ಲಿ ಮುಟ್ಟುವಂತಿಲ್ಲ, ಹೊರಗೆ ಕಾಣಿಸಿಕೊಳ್ಳುವಂತಿಲ್ಲ.

ಮುಂದೆ 1938ರಲ್ಲಿ ನನ್ನ ಲಗ್ನದ ಪ್ರಸ್ತಾಪ ಬಂತು. ನಮ್ಮ ಮಾಮಾ (ಶ್ರೀನಿವಾಸರಾವ ದಾಬಡೆ) ಅವರ ಮಗಳು ಕಾವೇರಿ ಮತ್ತು ನಾನು ಜೋಡಿಯವರು. ಮಾಮಾ ಕಾವೇರಿಯ ಲಗ್ನವನ್ನು ಆದ್ದೂರಿಯಿಂದ ಮಾಡಬೇಕೆಂದಿದ್ದ. ಆತನೇ ಒಮ್ಮೆ ಬಾಗಲಕೋಟೆಗೆ ಬಂದು ಆದಷ್ಟು ಬೇಗ ನನ್ನ ಲಗ್ನ ಮಾಡಿ ಬಿಡಬೇಕೆಂದು ಒತ್ತಾಯಿಸಿದ. ಆಗ ಅವರ ಚರ್ಚೆಯಲ್ಲಿ ಒಂದು ಸೂಚನೆ ಬಂತು. ಧಾರವಾಡದಲ್ಲಿ ಕಾಂಗ್ರೆಸ್ ಕಾರ್ಯದಲ್ಲಿ ಮಗ್ನರಾದ ಶ್ರೀ ನರಸಿಂಹ ದಾಬಡೆ ಅವರಿಗೆ ನನ್ನನ್ನು ಯಾಕೆ ಕೊಡಬಾರದು ? ನನಗೆ ಈ ಸೂಚನೆ ಕಿವಿಗೆ ಬಿದ್ದಕೂಡಲೇ ಸಂತೋಷವಾಯಿತು. ಆದರೆ ಈ ವಿಷಯದಲ್ಲಿ ನನ್ನನ್ನು ಯಾರೂ ಕೇಳಲೇ ಇಲ್ಲ. ಮುಂದೆ ನನ್ನ ಹಿರಿಯಣ್ಣ ರಾಮಣ್ಣನೇ ಸ್ವತಃ ಧಾರವಾಡಕ್ಕೆ ಹೋಗಿ ದಾಬಡೆ ಅವರನ್ನು ಕಂಡು ಈ ಪ್ರಸ್ತಾಪವಿಟ್ಟ. ಆಗ ಅವರು ತಾವೇ ಬಂದು ನೋಡುವದಾಗಿ ಹೇಳಿ ಆ ಪ್ರಕಾರ ಬಂದರು. ತಮ್ಮ ಹಿರಿಯಣ್ಣ ಮತ್ತು ತಂದೆಯವರನ್ನು ಅಲ್ಲಿಗೆ ಕರೆಯಿಸಿದ್ದರು. ಆಗ ಅವರು ನನ್ನ ತಾಯಿಯ ಹತ್ತಿರ ಕೆಲವು ಸ್ಪಷ್ಟ ಮಾತುಗಳನ್ನು ಹೇಳುತ್ತಿರುವುದನ್ನು ಪಕ್ಕದ ಕೋಣೆಯಲ್ಲಿಯೇ ಇದ್ದ ನಾನು ಮೈತುಂಬಾ ಕಿವಿ ಮಾಡಿಕೊಂಡು ಕೇಳುತ್ತಲಿದ್ದೆ. "ನನ್ನ ಜೀವನದಲ್ಲಿ ಯಾವುದೂ ಸ್ಥಿರವಿಲ್ಲ, ನಿಶ್ಚಿತವಿಲ್ಲ, ನನ್ನ ಸಂಬಳವೂ ಅಷ್ಟಕಷ್ಟೆ, ಎಂಥ ಅಡಚಣೆಗಳನ್ನಾದರೂ ಎದುರಿಸಬೇಕಾದೀತು. ನನ್ನ ಮಟ್ಟಿಗೆ ಜೇಲಿಗೆ ಹೋಗುವುದು ಸಾಮಾನ್ಯವಾಗಬಹುದು. ನಾನು ಸಂಪೂರ್ಣ ಖಾದಿಧಾರಿ. ಅವಳಿಗೆ ಮಾತ್ರ ಯಾವುದಕ್ಕೂ ಒತ್ತಾಯ ಮಾಡುವದಿಲ್ಲ. ನನ್ನ ಕಾರ್ಯವನ್ನು ನಿರಾತಂಕವಾಗಿ ಮಾಡಗೊಟ್ಟರೆ ಸಾಕು. ಅವಳಿಂದ ನಾನು ಅಪೇಕ್ಷಿಸುವುದು ಇಷ್ಟು ಮಾತ್ರ. ನಾನು ಮೋಸಮಾಡಿ ಲಗ್ನವಾದೆ ಎಂಬ ಆರೋಪ ನನ್ನ ಮೇಲೆ ಬರಬಾರದು. ಈಗಲೇ ಸಂಪೂರ್ಣ ವಿಚಾರಮಾಡಿ ಏನು ಉತ್ತರ ಕೊಟ್ಟರೂ ನನಗೆ ಸಂತೋಷ" ಎಂದು ಸ್ಪಷ್ಟವಾಗಿ ಹೇಳಿದರು. ಆಗ ನಾನೇ ಕೋಣೆಯಿಂದ ಹೊರಗೆ ಬಂದು "ನಿಮ್ಮ ಎಲ್ಲ ಮಾತಿಗೂ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಅಷ್ಟೇ ಅಲ್ಲ, ನನ್ನ ಕೈಲಾದಮಟ್ಟಿಗೆ ನಿಮ್ಮ ಎಲ್ಲಾ ಕಾರ್ಯಗಳಲ್ಲಿ ಪ್ರತ್ಯಕ್ಷ ಭಾಗವಹಿಸುವೆ" ಎಂದು ಹೇಳಬೇಕೆಂದು ನನ್ನ ಮನಸ್ಸು ಒತ್ತಾಯ ಮಾಡುತ್ತಲಿತ್ತು. ಆದರೆ ಆ ಧೈರ್ಯ ಬರಲಿಲ್ಲ. ಮುಂದೆ ವರದಕ್ಷಿಣೆಯ ಬಗ್ಗೆ ಪ್ರಸ್ತಾಪ ಬಂದಾಗ ಅವರು "ನಾನು ವರದಕ್ಷಿಣೆಯನ್ನು ಸರ್ವಥಾ ಸ್ವೀಕರಿಸುವುದಿಲ್ಲ" ಎಂದು ಖಂಡತುಂಡಾಗಿ ಹೇಳಿದರು. ಮುಂದೆ ಅವರು ಧಾರವಾಡಕ್ಕೆ ಹೋದಮೇಲೆ ಇದೇ ಬಗೆಯ ಒಕ್ಕಣಿಕೆಯ ಒಂದು ಪತ್ರವನ್ನು ಬರೆದು

ತಮ್ಮ ಅತ್ತಿಗೆಯ ಮೂಲಕ ನನಗೆ ಕಳಿಸಿದ್ದರು. ಅದರಲ್ಲಿ ಅವರು ಬೇಡಿದ್ದು ನನ್ನ ಸ್ಪಷ್ಟ ಅಭಿಪ್ರಾಯ. ನಾನು ಈ ಲಗ್ನಕ್ಕೆ ಸಿದ್ಧಳೇ ? ಅಥವಾ ಮನದಲ್ಲಿ ಏನಾದರೂ ಅಳುಕು ಇದೆಯೇ ? ಒಂದು ವೇಳೆ ಈ ಪ್ರಶ್ನೆಗೆ ಉತ್ತರ ಬರದೇ ಹೋದರೆ ನನ್ನ ಮನಸ್ಸು ಇಲ್ಲವೆಂದು ಗ್ರಹಿಸುವುದಾಗಿ ಬರೆದಿದ್ದರು.

ಆಗ ನಾನೊಂದು ಹೊಸ ಜಗತ್ತಿನಲ್ಲಿಯೇ ಇದ್ದಂತೆ ಭಾಸವಾಯ್ತು. ಏನೆಂದು ಉತ್ತರಕೊಡಲಿ ? ಯಾರನ್ನು ಕೇಳಿ ಬರೆಯಲಿ ? ಹೇಗೆ ಬರೆಯಲಿ ? ಏನೆಂದು ಸಂಬೋಧಿಸಲಿ ? ಇಂಥ ಅನೇಕ ತಾಕಲಾಟಗಳು ನನ್ನ ಮನಸ್ಸನ್ನು ಕಲಕಿದವು. ಆದರೂ ಆಗಲೇ ನನ್ನ ತಾಯಿಯ ಆಶೀರ್ವಾದ ಪಡೆದು ನನ್ನ ಸಂಪೂರ್ಣ ಒಪ್ಪಿಗೆ ಇದೆಯೆಂದು ಪತ್ರ ಬರೆದು ಅವರ ಅತ್ತಿಗೆಯ ಕೈಯಲ್ಲಿಯೇ ಕೊಟ್ಟೆ. ನನ್ನ ಕರಾರು ಒಂದೇ ಇರುವುದೆಂದು ಸ್ಪಷ್ಟೀಕರಿಸಿದೆ. ನಾವಿಬ್ಬರೂ ಸಾಧ್ಯವಾದಷ್ಟು ಕೂಡಿರಬೇಕೆಂಬುದು ನನ್ನ ಆ ಕರಾರು. ಹೀಗೆ ನಮ್ಮ ಪತ್ರವ್ಯವಹಾರ ಪ್ರಾರಂಭವಾಯಿತು. ತಮ್ಮದೂ ಸಂಪೂರ್ಣ ಒಪ್ಪಿಗೆ ಎಂಬ ಉತ್ತರ ಬಂತು. ಈ ಪತ್ರ ವ್ಯವಹಾರದಿಂದ ನನ್ನ ಮನಸ್ಸಿನ ಚಪಲ ಇನ್ನೂ ಹೆಚ್ಚಾಯ್ತು. ಉಳಿದ ಯಾವ ಕೆಲಸದಲ್ಲಿಯಾಗಲಿ, ಓದುವದರಲ್ಲಿಯಾಗಲಿ ಮನಸ್ಸು ನಿಲ್ಲದಾಯ್ತು. ನನ್ನ ಭಾವೀ ಜೀವನದ ಕನಸು ಕಾಣುತ್ತಿದ್ದೆ. ನನ್ನ ಅಕ್ಕಪಕ್ಕದ ಗೆಳತಿಯರು ತುಂಬಾ ಚೇಷ್ಟೆ ಮಾಡುತ್ತಿದ್ದರು. ಇದಕ್ಕೆಲ್ಲ ನನ್ನ ಅಣ್ಣ, ಅಪ್ಪ, ಅವರ ಆಕ್ಷೇಪವಿರಲಿಲ್ಲ ಎಂಬುದು ನನಗೆ ದೊಡ್ಡ ಬಲ ಆಗಿತ್ತು. ಇದು ನಮ್ಮ ಮನೆಯಲ್ಲಿ ಮೊದಲನೆಯ ಲಗ್ನ. ಮುಂದೆ ಕಲೂರದಲ್ಲಿದ್ದ ಅವರ ಅಣ್ಣ, ಅತ್ತಿಗೆ, ತಂದೆ ಬಾಗಲಕೋಟೆಗೆ ಬಂದು ಲಗ್ನದ ನಿಶ್ಚಯ ಮಾಡಿಕೊಂಡು ಹೋದರು. ಲಗ್ನ 6-2-1939 ರಂದು ಬೆಳಗ್ಗೆ 9 ಗಂಟೆಗೆ ಬಾಗಲಕೋಟೆಯಲ್ಲಿ ಎಂದು ನಿಶ್ಚಯವಾಯ್ತು. ಆದರಂತೆ ಎರಡೂ ಕಡೆಯಿಂದ ಲಗ್ನಪತ್ರಿಕೆಗಳು ಸಿದ್ಧವಾದವು. ಇವರು ತಮ್ಮ ತಂದೆಯ ಹೆಸರಿನಿಂದ ಒಂದಲ್ಲದೇ ತಮ್ಮ ಹೆಸರಿನಿಂದ ಇನ್ನೊಂದು ಪತ್ರಿಕೆ ಅಚ್ಚು ಹಾಕಿಸಿ ಕಳಿಸಿದ್ದರು.

ಲಗ್ನದ ಹಿಂದಿನ ದಿನವೇ ಅಂದರೆ 4-2-1939 ರಂದು ಬೀಗರು-ಬಿಜ್ಜರು-ಆಪ್ತೇಷ್ಟರು ಎಲ್ಲರೂ ಸೇರಿದರು. ನಮ್ಮ ಮನೆಯ ಸಂಭ್ರಮವಂತೂ ಎಲ್ಲೆ ಮೀರಿತ್ತು. ಇವರ ಪತ್ರ ವ್ಯವಹಾರದಿಂದ ನಮ್ಮಲ್ಲಿ ಒಂದು ಬಗೆಯ ಆತ್ಮೀಯತೆ ಬೆಳೆದಿತ್ತು. ಆದರಿಂದ ಇವರೊಬ್ಬ ಸರಳ ಮತ್ತು ಸೌಜನ್ಯದ ಮೂರ್ತಿ ಎಂದು ಅನಿಸುತ್ತಿತ್ತು. ಹೀಗೆ ಲಗ್ನದ ದಿವಸ ಬಂದೇ ಬಿಟ್ಟಿತು. ನನ್ನ ಮನಸ್ಸಿನಲ್ಲಿ ಅನೇಕಾನೇಕ ವಿಚಾರಗಳು ಬರುತ್ತಲಿದ್ದವು.

ಜೀವನದಲ್ಲಿ ಲಗ್ನ ಎಷ್ಟು ಸೊಬಗಿನದು ! ಏನು ತಯಾರಿ ! ಎಷ್ಟು ಸಂಭ್ರಮದ ಓಡಾಟ ! ಎಷ್ಟು ಖುಷಿ ! 18-20 ವರ್ಷಗಳವರೆಗೆ ತಂದೆ-ತಾಯಿಗಳ ಆಶ್ರಯದಲ್ಲಿ ಬೆಳೆದು ಒಂದು ದಿನ ಎರಡನೆಯವರೊಡನೆ ದೂರ ಹೋಗುವದು ! ಎಷ್ಟು ಸೋಜಿಗದ್ದಲ್ಲವೆ ? ಜಗತ್ತೆಲ್ಲ ಹೀಗೆಯೇ ನಡೆದಿದೆಯಲ್ಲವೇ ? ಇಲ್ಲಿಯವರೆಗೆ ನನ್ನ ತಾಯಿಯ ಮನೆ ನನ್ನದೆಂದುಕೊಂಡಿದ್ದೆ.

ಇನ್ನು ಬೇರೆ ಆಯ್ತಲ್ಲ ? ಹೆಣ್ಣು ಇದಕ್ಕೆ ಹೊಂದಿಕೊಳ್ಳಬೇಕು. ಹೊಸ ಹೊಣೆ ! ಹೊಸ ಪ್ರಪಂಚ ! ಯಾವ ಅನುಭವವೂ ಇಲ್ಲದ ಹೆಣ್ಣು-ಗಂಡು ಕೂಡಿ ಬಾಳುವೆ ಮಾಡಬೇಕು. ಜೀವನವು ಸುಖದ ಸುಪ್ಪತ್ತಿಗೆ ಇರುವುದೆಂದು ಕನಸು ಕಂಡವರಿಗೆ ಪ್ರಪಂಚದಲ್ಲಿ ಜೋರಿನಿಂದ ಹೊಡೆತ ಬೀಳುವುದುಂಟು. ಇವರಲ್ಲಿ ಸುಖ-ದುಃಖಗಳು ಬರತಕ್ಕವೇ ಎಂದು ಹೊರಟವರಿಗೆ ಅಷ್ಟೊಂದು ತೊಂದರೆ ಆಗಲಿಕ್ಕಿಲ್ಲ. ನಾನಂತೂ ಬಡತನದ ಸುಖದುಃಖಗಳಲ್ಲಿಯೇ ಬೆಳೆದವಳು. ಹಾಗೆ ನೋಡಿದರೆ ಇವರದೂ ತೀರಾ ಸಾದಾ ಜೀವನ, ಸಾತ್ವಿಕ ಜೀವನ, ಆದರೆ ಧ್ಯೇಯನಿಷ್ಠರು.

ನಮ್ಮ ಲಗ್ನಕ್ಕೆ ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀನಿವಾಸ ಮಲ್ಯ, ಚನ್ನಬಸಪ್ಪ ಅಂಬಲಿ ಅಲ್ಲದೆ ಧಾರವಾಡದ ಇವರ ಮಿತ್ರರಾದ ಶಂಕರ ಕುರ್ತಕೋಟಿ, ಶ್ರೀನಿವಾಸರಾವ್, ಸಂಗಮ್, ಆರ್. ಕೆ. ಜೋಶಿ, ಎಚ್. ಬಿ. ಹೊಸೂರ ಇವರೇ ಮೊದಲಾದವರು ಬಂದಿದ್ದರು. ಸರ್ವಶ್ರೀ ಹುಕ್ಕೇರಿಕರ, ಕರಮರಕರ, ಡಾ. ಕಬ್ಬೂರ, ಡಾ. ಹರ್ಡೀಕರ, ಮೊಹರೆ ಇವರೆಲ್ಲ ತಮ್ಮ ತುಂಬು ಹೃದಯದ ಆಶೀರ್ವಾದಗಳನ್ನು ಕಳಿಸಿದ್ದರು. ಅಂದು (5-2-1939) ಸರಿಯಾಗಿ 9 ಗಂಟೆಗೆ ನಮ್ಮ ಮೇಲೆ ಅಕ್ಷತಾ ಬಿದ್ದು ನಾವು ಅಧಿಕೃತವಾಗಿ ಪತಿ-ಪತ್ನಿಯರಾದೆವು. ಆಗ ಮಾಲೆ ಹಾಕುವದು ಎಷ್ಟು ಸುಂದರ ಮತ್ತು ಆನಂದಕಾರ್ಯ ! ಅದನ್ನು ಮರೆಯುವುದು ಸಾಧ್ಯವೇ ಇಲ್ಲ. ಅನುಭವಿಸಿಯೇ ನೋಡಬೇಕು. ನನ್ನಿಂದ ಮಾಲೆ ಹಾಕಿಸಿಕೊಳ್ಳಬೇಕಾದರೆ ಇವರು ತುಂಬಾ ಬಗ್ಗಬೇಕಾಯ್ತು. ಅಬ್ಬಾ ಇವರ ಎತ್ತರ ! ಅಂದುಕೊಂಡೆ.

ಮುಂದೆ ನಾವಿಬ್ಬರೇ ಮನಸೋಕ್ತ ಮಾತಾಡಿದೆವು. ಆ ಸಮಯಕ್ಕೆ ಇನ್ನೊಂದು ಪ್ರಸ್ತಾಪ ಬಂತು. ಆ ಸಲ ಮಧ್ಯಪ್ರದೇಶದ ತ್ರಿಪುರಿಯಲ್ಲಿ, ನೇತಾಜಿ ಸುಭಾಸರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನವಿದ್ದು ಅದಕ್ಕೆ ತಾವು ನಿಶ್ಚಿತ ಹೋಗುವುದಾಗಿ ಹೇಳಿದರು. ನನಗೂ ಬರಲು ಹೇಳಿದರು. ಆದರೆ ಅಂದಿನ ಸಮಾಜದ ಕಟ್ಟುಪಾಡುಗಳು ಅಡ್ಡಿ ಬಂದು ನನಗೆ ಅವಕಾಶ ತಪ್ಪಿತು.

ಮರುದಿನ ಬೀಗರು, ಬಿಜ್ಜರು ಎಲ್ಲರೂ ಹೋದರು. ದಾಬಡೆಯವರೂ ಧಾರವಾಡಕ್ಕೆ ಹೋದರು (ಒಬ್ಬರೇ). ನಾವು ಮನೆಯ ಸಾಮಾನು ಸಮೇತ ನಮ್ಮ ತಾಯಿಯ ಮನೆ ಸೇರಿದೆವು. ನಾನು ಈಗ ಮೊದಲಿನ 'ನಾನು' ಅಲ್ಲ. ಏನೋ ಒಂದು ಹೊಸ 'ನಾನು' ಆಗಿರುವೆ ಎಂದು ಅನಿಸಹತ್ತಿತ್ತು.

ಇವರು ಮೊದಲೇ ಹೇಳಿದಂತೆ ತ್ರಿಪುರಿ ಕಾಂಗ್ರೆಸ್ಸಿಗೆ ಹೋಗಿ ಅಲ್ಲಿಯ ವಿವರಗಳನ್ನೆಲ್ಲ ತುಂಬಿಸಿ ನನಗೆ ಪತ್ರ ಬರೆದಿದ್ದರು. ಅಲ್ಲಿಯ ಸೃಷ್ಟಿ ಸೌಂದರ್ಯ, ರಾಜಕೀಯ ಬಿಕ್ಕಟ್ಟು, ಗಾಂಧೀ ಉಪವಾಸ, ಸುಭಾಸರ ಕಾಯಿಲೆ, ಅವರನ್ನು ಸ್ಟ್ರೇಚರ್ ಮೇಲೆ ಸಭಾಸ್ಥಾನಕ್ಕೆ ತಂದುದು, ಅವರ ಅಣ್ಣಾ ಅವರ ಪರವಾಗಿ ಕಾರ್ಯ ನಡೆಸಿದ್ದು, ಅಂದಿನ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು ವ್ಯಾಸಪೀಠ ಬಿಟ್ಟು ಪ್ರೇಕ್ಷಕರ ಸ್ಥಳದಲ್ಲಿ ಕುಳಿತದ್ದು - ಒಂದೇ, ಎರಡೇ, ಎಲ್ಲ ವಿಷಯಗಳನ್ನು

ಹೊತ್ತ ಎರಡು ಪುಟದ ಪತ್ರ. ಅದರಲ್ಲಿ ಇನ್ನೊಂದು ಮಹತ್ವದ ಪ್ರಸ್ತಾಪವೆಂದರೆ ತಾವು ನೇರ ಬಾಗಲಕೋಟೆಗೆ ಬಂದು ನನ್ನನ್ನು ಧಾರವಾಡಕ್ಕೆ ಕರೆದುಕೊಂಡು ಹೋಗುವುದಾಗಿ ಬರೆದಿದ್ದರು. ನಾನು ಸಿದ್ಧಳಿದ್ದೆ. ಆದರೆ ತಾಯಿಯ ಹಸಿರು ನಿಶಾನೆಯ ದಾರಿ ಕಾಯುತ್ತಿದ್ದೆ. ಹಾಗೆ ಅವರು ಬಂದೇ ಬಿಟ್ಟರು, ಕರ್ಮಧರ್ಮ ಸಂಯೋಗದಿಂದ ಅವರು ಬಂದಾಗ ಮನೆಯಲ್ಲಿ ನಾನೊಬ್ಬಳೆ ಇದ್ದೆ. ನಾನು ತುಂಬಾ ಭಾವನಾವಶಳಾಗಿ ಬಿಟ್ಟೆ. ಏನು ಮಾಡಬೇಕೆಂಬುದು ತಿಳಿಯದೆ ಸರ್ವಾರ್ಪಣ ಭಾವನೆಯಿಂದ ಸಾಷ್ಟಾಂಗ ನಮಸ್ಕಾರ ಮಾಡಿದೆ. ಆನಂದಾಶ್ರುಗಳು ಕಣ್ಣಲ್ಲಿ ತಾವೇ ತಾವಾಗಿ ಹರಿಯುತ್ತಲಿದ್ದವು. ಇವರೇ ನನ್ನನ್ನು ಮೇಲಕ್ಕೆ ಎಬ್ಬಿಸಿದರು. ಇದು ಎಂಥ ಸುಖ ! ಇದು ಸ್ವಪ್ನವೋ, ಪ್ರತ್ಯಕ್ಷವೋ ಎಂದು ನನ್ನನ್ನೇ ನಾನು ಚಿವುಟಿಕೊಂಡು ನೋಡಿದೆ. ಅಷ್ಟರಲ್ಲಿ ಅವ್ವ ಹಾಗೂ ನಮ್ಮ ವಾನರ ಸೇನೆ ಬಂತು. ನಾನು ಇವರ ಸಂಗಡ ಹೊರಡಲು ಅವ್ವ ಹಸಿರು ನಿಶಾನೆ ತೋರಿಸಿದಳು. ಅಂತೂ ಗಂಗೆ ಸಮುದ್ರರಾಜನನ್ನು ಕೂಡಲು ಹೊರಟಳು. ನನಗೆ ಎಷ್ಟೇ ಸಂತೋಷವಾಗಿದ್ದರೂ ತಾಯಿಯನ್ನು, ಹುಟ್ಟಿದ ಮನೆಯನ್ನು, ಇತರ ಪರಿಸರವನ್ನು ಅಗಲುವಾಗ ಸ್ವಾಭಾವಿಕವಾಗಿ ಕಣ್ಣೀರು ತಾನೇ ತಾನಾಗಿ ಬರುತ್ತಿತ್ತು. ನಮ್ಮ ಸಂಗಡ ನನ್ನ ತಂಗಿ ಹಾಗೂ ಅಬಚಿ ಬಂದರು. ಇವರು ತ್ರಿಪುರಿಯಿಂದ ಒಂದು ಆಕಾಶ ಬಣ್ಣದ ರೇಷ್ಮೇ ಖಾದಿ ಸೀರೆ ತಂದಿದ್ದರು, ಅದನ್ನೇ ಉಟ್ಟುಕೊಂಡು ಹೊರಟೆ. ಗಾಡಿಯಲ್ಲಿ ನಾವು ನಾಲ್ವರು, ಇವರನ್ನು ಇಷ್ಟು ಹತ್ತಿರದಿಂದ ಇಷ್ಟೊಂದು ಸ್ವಚ್ಛಂದವಾಗಿ ನೋಡುತ್ತಿರುವದು ಇಂದೇ. ಇವರ ಶುಭ್ರ ಶರ್ಟು, ಪೈಜಾಮ, ಗಾಂಧೀ ಟೊಪ್ಪಿಗೆ, ಆ ಫ್ರೆಂಚ್ ಕಟ್ ಮೀಸೆ, ತುಂಬಿ ತುಳುಕುವ ದೇಹ, ಕಾಲಲ್ಲಿ ಪಠಾಣಿ ಚಪ್ಪಲು, ನೋಡಿದಂತೆ ಸಂತೋಷ ಉಕ್ಕಿಬರುತ್ತಿತ್ತು. ಅಂದು ಸಂಜೆ 4 ಗಂಟೆಗೆ ಹುಬ್ಬಳ್ಳಿಯ ಇವರ ಅಣ್ಣನ ಮನೆಗೆ ಹೋದೆವು, ಮನೆಯವರಿಗೆಲ್ಲ ಆಶ್ಚರ್ಯ. ಅಂದು ಸಂಜೆ ಒಂದು ಸಿನಿಮಾಕ್ಕೆ ಹೋದೆವು, ಅಲ್ಲಿ ಸಿನೆಮಾ ನೋಡುವುದಕ್ಕಿಂತ ನಮ್ಮ ಮಾತೇ ಹೆಚ್ಚಾಗಿತ್ತು. ಮರುದಿನ ಧಾರವಾಡಕ್ಕೆ ಬಂದೆವು. ಆಗ ಇವರು ಗಾಂಧೀ ಚೌಕದ ಹತ್ತಿರ ಕೇಳ್ಕರ ಅವರ ಮನೆಯ ಮುಂದೆ ಇರುವ ತಡಸ ಜಯರಾಯರ ಮನೆಯಲ್ಲಿರುತ್ತಿದ್ದರು. ತುಂಬಾ ದೊಡ್ಡ ಮನೆ, ಅಟ್ಟ ಸಹ ಇತ್ತು. ಬಾಡಿಗೆ ಕೇವಲ ಐದೇ ರೂಪಾಯಿ. ಒಂದು ಕ್ಷಣವೂ ಕೂಡಾ ನನಗೆ ಹೊಸ ಮನೆಗೆ ಬಂದಂತೆ ಭಾಸವಾಗಲಿಲ್ಲ. ಅದೆಷ್ಟೋ ದಿವಸಗಳಿಂದ ಪರಿಚಯವಿದ್ದವರಂತೆ ನನಗಂತೂ ಭಾಸವಾಯ್ತು. ಏನು ಸಂಬಂಧವೋ, ಏನು ಋಣಾನುಬಂಧವೋ ನನಗಂತೂ ಒಂದೂ ತಿಳಿಯದು.

# ಧಾರವಾಡದಲ್ಲಿ ದಾಂಪತ್ಯ ಜೀವನ

ಅವರದು ನನ್ನ ಮೇಲೆ ಪ್ರೀತಿ ಅಷ್ಟಿಷ್ಟಲ್ಲ, ಪ್ರೀತಿಯ ಮಳೆಯನ್ನೇ ಸುರಿಸುತ್ತಿದ್ದರು. ನಾನು ಅದರಲ್ಲಿ ನೆನೆದು ಹೋಗುತ್ತಲಿದ್ದೆ. ಹಾಗೆ ನೋಡಿದರೆ ಅವರ ಸಂಬಳ ಹೆಚ್ಚು ಇರಲಿಲ್ಲ. ಲಗ್ನವಾಯಿತೆಂದು 25 ರೂ. ಇದ್ದುದನ್ನು 35 ರೂ. ಗೆ ಹೆಚ್ಚಿಸಿದ್ದರು. ಆದರೂ ಮನೆಯಲ್ಲಿ ಯಾವ ಕೊರತೆಯನ್ನೂ ಮಾಡಿರಲಿಲ್ಲ. ಆಗಿನದು ಸೋವಿ ಕಾಲವೇ ಇತ್ತು. ಅವರು ತಮ್ಮ ಬಟ್ಟೆಯನ್ನು ನಿತ್ಯ ತಾವೇ ಒಗೆಯುತ್ತಲಿದ್ದರು. ಈಗ ಆ ಜವಾಬ್ದಾರಿಯನ್ನು ನಾನು ವಹಿಸಿಕೊಂಡೆ. ನನಗೆ ಖಾದಿ ಧರಿಸಲಿಕ್ಕಾಗಲೀ, ಇತರ ಚಟುವಟಿಕೆಗಳಲ್ಲಿ ಭಾಗವಹಿಸಲಿಕ್ಕಾಗಲೀ ಎಂದೂ ಒತ್ತಾಯ ಮಾಡಲಿಲ್ಲ. ಆದರೆ ತಾವು ಮಾಡುತ್ತಿದ್ದ ಕೆಲಸಗಳ ವಿವರಗಳನ್ನು ಚಾಚೂ ತಪ್ಪದೇ ಹೇಳುವರು. ನಿತ್ಯ ಪೇಪರ ಓದುವುದು, ಅದನ್ನು ವಿಶ್ಲೇಷಣೆ ಮಾಡಿ ಹೇಳುವುದು, ಕೇಳುವುದು ನನ್ನ ಕೆಲಸ. ಗಾಂಧೀಜಿಯವರು ಹೊರಡಿಸುತ್ತಿದ್ದ ಹರಿಜನ ಪತ್ರಿಕೆ ಬಂದರಂತೂ ಅದನ್ನು ಪೂರ್ತಿ ಓದಿ ವಿವರವಾಗಿ ಹೇಳಲೇಬೇಕು. ಇದರ ಪರಿಣಾಮ ಸಾವಕಾಶವಾಗಿ ನನ್ನ ಮೇಲೆ ಬೀರುತ್ತಲೇ ಇತ್ತು. ಎಲ್ಲಿ ಹೋದರೂ ನನ್ನನ್ನು ಕರೆದುಕೊಂಡೇ ಹೋಗುವರು. ಬೇರೆಯವರು ಬೇಕಾದಷ್ಟು ಚೇಷ್ಟೆ ಮಾಡಿದರೂ ಬಿಡುತ್ತಿರಲಿಲ್ಲ.

ಹೀಗೆ ನಾವು ಅತ್ಯಂತ ಅನ್ಯೋನ್ಯವಾಗಿದ್ದೆವು. ನಾವು ಇದ್ದುದರಲ್ಲಿಯೇ ತೀರ ಸಮಾಧಾನದಿಂದ ಇದ್ದೆವು. ನಾನು ನಿತ್ಯ ಭಜನೆ ಮಾಡಿದರೆ, ಪೂಜೆ ಮಾಡಿದರೆ ಇವರು ಬೇಡವೆನ್ನುತ್ತಿರಲಿಲ್ಲ. ಯಾವಾಗಲಾದರೂ ಸಪ್ತಾಹಕ್ಕೆ ಹೋಗಬೇಕೆಂದರೆ ತಾವೇ ಸ್ವತಃ ಕಳಿಸಿಕೊಡುತ್ತಲಿದ್ದರು. ಒಮ್ಮೆ ಸೀರೆ ಖರೀದಿ ಮಾಡುವ ಸಮಸ್ಯೆ ಬಂದೇ ಬಿಟ್ಟಿತು. ಆಗ ಯಥಾಪ್ರಕಾರ ನನಗೇ ಬಿಟ್ಟರು. "ಈ ಸಲ ಕೈಮಗ್ಗದ್ದು" ಎಂದೆ. "ತಥಾಸ್ತು" ಎಂದು ದುಡ್ಡು ಕೊಟ್ಟು ತಂದೇಬಿಟ್ಟರು.

ಆಗ ಅವರು ತುಂಬಾ ಚಹಾ ಕುಡಿಯುತ್ತಲಿದ್ದರಲ್ಲದೇ ಚಹಾದ ಅಂಗಡಿಗೂ ಹೋಗುತ್ತಲಿದ್ದರು. ಒಮ್ಮೆ ನಾನೇ ಹೇಳಿದೆ. "ನಿಮಗೆ ಬೇಕಾದುದನ್ನು ನಾನು ಮಾಡಿ ಕೊಡುವಾಗ ನೀವು ಅಂಗಡಿಗೆ ಹೋಗಿ ಅಲ್ಲಿಯ ಕೆಳದರ್ಜೆಯ ವಸ್ತುಗಳನ್ನು ತಿಂದು ಯಾಕೆ ಆರೋಗ್ಯ ಕೆಡಿಸಿಕೊಳ್ಳುವಿರಿ ?" ಎಂದೆ. ಅದಕ್ಕೆ ಅವರು ಒಪ್ಪಿ ಕಾರ್ಯರೂಪದಲ್ಲಿ ತಂದರು. ನಾನು ಸಾಮಾನ್ಯವಾಗಿ ಬೆಳಿಗ್ಗೆ 6 ಗಂಟೆಗೆ ಎದ್ದು ಮನೆಗೆಲಸ ಮಾಡಿ ಚಹಾಕ್ಕೆ ಇಟ್ಟು ಇವರನ್ನು ಎಬ್ಬಿಸುವದು ಪರಿಪಾಠ. ಎದ್ದಕೂಡಲೇ ಮಾತಿಗೆ ಪ್ರಾರಂಭವಾದದ್ದು ಕಚೇರಿಗೆ ಹೋಗುವವರೆಗೆ,

ನಡುವೆ ಬಂದಾಗ್ಗೆ ಮಾತೇ ಮಾತು. ನೆರೆಮನೆಯವರಿಗೆ ಆಶ್ಚರ್ಯ, ಇವರು ಇಷ್ಟೇನು ಮಾತಾಡುವರು ? ಎಂದು. ನಿತ್ಯ ಸಾಯಂಕಾಲ ತಿರುಗಾಡಲಿಕ್ಕೆ ಹೋಗುವದು, ಶನಿವಾರ ಸಪ್ತಾಪೂರ ಹಣಮಪ್ಪನ ಗುಡಿಗೆ ಹೋಗುವದು ಇವರ ಪರಿಪಾಠ. ಆಗ ನಾನು ಬರಲೇಬೇಕೆಂದು ಇವರ ಹಟ. ಒಮ್ಮೊಮ್ಮೆ ಇದೂ ಸಹ ಅತಿಯಾದುದೆಂದೇ ನನಗನಿಸುತ್ತಿತ್ತು. ಆದರೆ ನಾನು ಎದುರು ವಾದಿಸುತ್ತಿರಲಿಲ್ಲ. ನಾನು ಕೇವಲ ಮನವಿ ಮಾಡಿಕೊಳ್ಳುವದು. ಏನೇ ಆದರೂ ಕೊನೆಯ ನಿರ್ಣಯ ಅವರದೇ. ಅವರು ಬೇಡವೆಂದು ಹೇಳಿದರೆ ಬಿಟ್ಟು ಬಿಡುತ್ತಿದ್ದೆ. ಒಮ್ಮೆ ಒಂದು ಮೋಜಿನ ಘಟನೆ ಆಯಿತು. ನಾವು ಹೊರಬಾಗಿಲವನ್ನು ತೆರೆದಿಟ್ಟು ಚಹಾ ಕುಡಿಯುತ್ತಾ ಕುಳಿತಿದ್ದೆವು. ಅವರು ಪಾವಟಿಗೆಯ ಮೇಲೆ, ನಾನು ಅವರ ಪಕ್ಕದಲ್ಲಿ ಸ್ಟೋವಿನ ಮುಂದೆ ಚಹಾ ಕುಡಿಯುತ್ತಾ ಅವರು ತಮ್ಮ ಬಶಿಯನ್ನು ನನ್ನ ತುಟಿಗೆ ಹಚ್ಚುವದಕ್ಕೂ, ಅವರ ಹಿರಿಯಣ್ಣ ಒಳಗೆ ಕಾಲಿಡುವದಕ್ಕೂ ಸರಿ ಹೋಯಿತು. ನನಗಂತೂ ಹಳ್ಳು ಕಡಿದಂತಾಯಿತು. ಆದರೆ ಅವರಿಗೆ ಮಾತ್ರ ಏನೂ ಅನಿಸಲೇ ಇಲ್ಲ. "ನಾನೇನು ಅಂತಹ ಅಪರಾಧ ಮಾಡಿರುವೆ ?" ಎಂದು ಕೇಳಿದರು. "ನಿಮಗೆ ಇದು ತಿಳಿಯುವದಿಲ್ಲ, ನಾವು ಹೀಗೆ ಮಾಡಿದರೆ ಸಮಾಜದಲ್ಲಿ ಕಣ್ಣ ಕೀಸರು ಆಗುವದು" ಎಂದು ಹೇಳಿದರೆ ಯಾವ ಪ್ರಯೋಜನವೂ ಆಗುತ್ತಿರಲಿಲ್ಲ. ಇವರ ಮುಖ್ಯ ಗುಣವೆಂದರೆ ಯಾವುದಾದರೊಂದು ನಿರ್ಣಯ ಬೇಗ ತೆಗೆದುಕೊಳ್ಳುವದಿಲ್ಲ. ಆದರೆ ಒಮ್ಮೆ ನಿರ್ಣಯ ತೆಗೆದುಕೊಂಡರೆ ಯಾವುದೇ ಪರಿಸ್ಥಿತಿಯಲ್ಲಿ ಅದನ್ನು ಕಾರ್ಯರೂಪದಲ್ಲಿ ತಂದೇ ತೀರುವದು. ಬೇಕಾದಷ್ಟು ಕಷ್ಟ ಬರಲಿ, ಬೇಕಾದಷ್ಟು ಪರಿಶ್ರಮವಾಗಲಿ ಅತ್ತ ಗಮನ ಕೊಡುತ್ತಿರಲಿಲ್ಲ. ಇದು ಇವರ ಮೂಲ ಸ್ವಭಾವ.

1938ರಲ್ಲಿ ಪ್ರಾರಂಭವಾದ 2ನೇ ಮಹಾಯುದ್ಧವು ದಿನೇದಿನೇ ಪ್ರಖರವಾಗುತ್ತಲಿತ್ತು. ಹಿಟ್ಲರ್ ಯುರೋಪ್‌ದಲ್ಲಿಯ ಕೆಲವು ರಾಷ್ಟ್ರಗಳನ್ನು ಕೈವಶ ಮಾಡಿಕೊಂಡಿದ್ದ. ಬಹಳ ಜನರ ಸಂಹಾರ ನಡೆದಿತ್ತು. ಒಂದು ಕಡೆಗೆ ಇಂಗ್ಲೆಂಡ್, ಅಮೆರಿಕಾ, ರಶಿಯಾ ಇದ್ದರೆ ಇನ್ನೊಂದು ಕಡೆಗೆ ಜರ್ಮನಿ, ಇಟಲಿ, ಜಪಾನ್ ಇದ್ದವು. ವಿಮಾನದ ಮೂಲಕ ಬಾಂಬ್ ದಾಳಿ ತೀರ ಸಾಮಾನ್ಯವಾಗಿತ್ತು. ಹಿಟ್ಲರ್‌ನ ಅಬ್ಬರ, ಚರ್ಚಿಲ್, ರೂಜವೆಲ್ಟರ ಆಲಾಪ ಪರಾಕಾಷ್ಟಕ್ಕೆ ಬಂದಿದ್ದವು. ಈ ಯುದ್ಧದ ಬಿಸಿ ಭಾರತಕ್ಕೆ ತಗುಲಿತ್ತು. ಈ ಯುದ್ಧಕ್ಕೆ ಸಹಾಯ ಮಾಡಬೇಕೆಂದು ಬ್ರಿಟಿಷ್‌ರ ಬೇಡಿಕೆಯಿತ್ತು. ಆದರೂ ಭಾರತದಲ್ಲಿ ಯಾರನ್ನೂ ಕೇಳದೆ ಅದು ಯುದ್ಧದಲ್ಲಿ ಸೇರಿದೆಯೆಂದು ಅಂದಿನ ವೈಸ್‌ರಾಯರು ಸಾರಿದ್ದರು. ಇದಕ್ಕೆ ಕಾಂಗ್ರೆಸ್ ಸಂಸ್ಥೆಯ ಒಪ್ಪಿಗೆ ಇರಲಿಲ್ಲ. ಈ ಯುದ್ಧದಲ್ಲಿ ನಿಶ್ಚಿತವಾಗಿ ಭಾರತದ ನೈತಿಕ ಬೆಂಬಲ ಬ್ರಿಟಿಷರ ಕಡೆಗೆ ಇದ್ದರೂ ಪಾರತಂತ್ರ್ಯದಲ್ಲಿರುವ ಭಾರತ ಇದಕ್ಕೆ ಸಹಾಯ ಸಹಕಾರ ನೀಡಲಾಗದೆಂದು ಕಾಂಗ್ರೆಸ್ಸು ಸಾರಿತ್ತು. ಇಂಥ ಪರಿಸ್ಥಿತಿಯಲ್ಲಿ ಯಾವ ಬಗೆಯ ಸತ್ಯಾಗ್ರಹ ಮಾಡಬೇಕು ಎಂಬುದನ್ನು ಮಹಾತ್ಮಾ ಗಾಂಧೀ ಅವರಿಗೆ ಬಿಟ್ಟು ಕೊಡಲಾಗಿತ್ತು.

ಆಗ ಗಾಂಧೀ ಅವರು ವೈಯಕ್ತಿಕ ಸತ್ಯಾಗ್ರಹ ಮಾಡಬೇಕೆಂದು ಸಾರಿದರು. ಅಂದರೆ ಈ ಯುದ್ಧದ ಸಂಕಟದಲ್ಲಿರುವ ಬ್ರಿಟಿಷರಿಗೆ ತೊಂದರೆಯಾಗದಂತೆ ನಮ್ಮ ನೈತಿಕ ಬೆಂಬಲ ಕೊಡುತ್ತ ಒಬ್ಬೊಬ್ಬ ವ್ಯಕ್ತಿ ಯುದ್ಧ ವಿರೋಧಿ ಘೋಷಣೆ ಮಾಡಿ ಕಾಯ್ದೆ ಭಂಗ ಮಾಡಬೇಕು. ಅಂಥ ಸತ್ಯಾಗ್ರಹಿಗಳು ನೀತಿವಂತರಾಗಿರಬೇಕು. ಶುದ್ಧ ಖಾದಿಧಾರಿಗಳಿದ್ದು ವಿಧಾಯಕ ಕಾರ್ಯಗಳಲ್ಲಿ ವಿಶ್ವಾಸವುಳ್ಳವರಿರಬೇಕು. ಅವರು ಸ್ಥಾನಿಕ ಜಿಲ್ಲಾಧಿಕಾರಿಗಳಿಗೇ ತಾವು ಮಾಡತಕ್ಕ ಸತ್ಯಾಗ್ರಹದ ಬಗ್ಗೆ ಪೂರ್ಣ ನೋಟೀಸು ಕೊಟ್ಟು ನಿರ್ದಿಷ್ಟ ಸ್ಥಳದಲ್ಲಿ ಈ ಕೆಳಗಿನ ಯುದ್ಧ ವಿರೋಧಿ ಘೋಷಣೆ ಮಾಡಿ ಕೈದಾಗಬೇಕು.

"ತನು-ಮನ-ಧನದಿಂದ ಈ ಯುದ್ಧದಲ್ಲಿ ಸಹಾಯ ಮಾಡುವದು ಘೋರಪಾಪ. ನಾವು ಎಲ್ಲ ಯುದ್ಧಗಳನ್ನು ಅಹಿಂಸೆಯಿಂದಲೇ ಎದುರಿಸಬೇಕು" ಇದರ ಪದ್ಯ ರೂಪ - ***ಒಂದು ಕಾಸು ಒಬ್ಬ ಮನುಜರನ್ನು ಕೊಡುವದು ಇಂದು ಘೋರ ಪಾಪವಿಹುದು ಆಂಗ್ಲ ಯುದ್ಧಕ್ಕೆ.***

ಹೀಗೆ ಭಾರತದ ತುಂಬೆಲ್ಲ ಸತ್ಯಾಗ್ರಹವು 1941ರಲ್ಲಿ ಪ್ರಾರಂಭವಾಯ್ತು. ಇವರು ಈ ಸತ್ಯಾಗ್ರಹ ಮಾಡಲು ಗಾಂಧೀಜಿ ಒಪ್ಪಿಗೆಯನ್ನು ಪಡೆದಿದ್ದರು. ಅದರಂತೆಯೇ ಕರ್ನಾಟಕ ಕಾಂಗ್ರೆಸ್ ಕಮಿಟಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಗಂಗಾಧರರಾವ ದೇಶಪಾಂಡೆ ಅಧ್ಯಕ್ಷತೆ ಮುಗಿದು ಬಳ್ಳಾರಿಯ ಆರ್. ನಾಗನಗೌಡರು ಅಧ್ಯಕ್ಷರಾಗಿದ್ದರು. ಗುದ್ಲೆಪ್ಪ ಹಳ್ಳಿಕೇರಿಯವರ ಕಾರ್ಯದರ್ಶಿತ್ವ ಮುಗಿದು ಡಾ. ಹರ್ಡೀಕರ ಅವರು ಕಾರ್ಯದರ್ಶಿಗಳಾಗಿದ್ದರು. ಶ್ರೀರಾಮ ಥೇಟರ್‌ದಲ್ಲಿದ್ದ ಕಾಂಗ್ರೆಸ್ ಕಮಿಟಿ ಕಛೇರಿ, ಮಾಳಮಡ್ಡಿ ರೈಲುನಿಲ್ದಾಣದ ಪಕ್ಕದಲ್ಲಿಯ ವಿನಾಯಕರಾವ ಜೋಶಿ ಅವರ ಬಂಗ್ಲೆಗೆ ಸ್ಥಳಾಂತರವಾಗಿತ್ತು. ಅದರಲ್ಲಿಯ ಮೂರು ಕೋಣೆಗಳನ್ನು ವಾಸಕ್ಕಾಗಿ ನಮಗೆ ಕೊಡಲಾಗಿತ್ತು. ನಾನು ತವರಿಗೆ ಹೋಗಿ ವಾಪಸ್ ಬರುವುದಲ್ಲಿಯೇ ಈ ಸ್ಥಿತ್ಯಂತರಗಳಾಗಿ ನಮ್ಮ ಮನೆಯ ಸಾಮಾನುಗಳೆಲ್ಲ ಒಂದು ಕೋಣೆಯಲ್ಲಿ ಬಿದ್ದಿದ್ದವು. ಯಥಾಪ್ರಕಾರ ನಾನು ಬಂದ ಮೇಲೆ ಅವುಗಳನ್ನು ಜೋಡಿಸಿಟ್ಟು ನಮ್ಮ ವಾಸಕ್ಕೆ ಯೋಗ್ಯವಾಗುವಂತೆ ಮಾಡಿದೆ.

ಇಷ್ಟರಲ್ಲಿ ಇನ್ನೊಂದು ದುರಂತ ಕಾದಿತ್ತು. ಇವರ ಅಣ್ಣ ಕೃಷ್ಣಪ್ಪನ ಹೆಂಡತಿಗೆ ತುಂಬಾ ಕಾಯಿಲೆಯಾಗಿ ಹವಾ ಬದಲಾವಣೆಗೆ ಅಣ್ಣಿಗೇರಿಗೆ ಕಳಿಸಲಾಗಿತ್ತು. ಅವರಿಗೆ ಸಹಾಯ ಮಾಡಲು ನನ್ನನ್ನು ಕೆಲವು ದಿವಸಗಳ ಮಟ್ಟಿಗೆ ಕಳಿಸಿದ್ದರು. ಕಾಯಿಲೆ ಉಲ್ಬಣವಾಗಿ ವಾಪಸ್ ಹುಬ್ಬಳ್ಳಿಗೆ ಕರೆತರಲಾಯ್ತು, ಆಗ ಅವರು ಹೋಗಿಯೂಬಿಟ್ಟರು.

ಆಗ ಇವರ ಮಿತ್ರ ಕುರ್ತಕೋಟಿ ಪ್ರಚಾರಕ್ಕಾಗಿ ಮೈಸೂರು ಸಂಸ್ಥಾನಕ್ಕೆ ಹೋಗಿ, ಅಲ್ಲಿ ಕೈದಾಗಿ ಒಂದೂವರೆ ವರ್ಷ ಶಿಕ್ಷೆಗೆ ಒಳಗಾಗಿದ್ದರು. ಇನ್ನೊಬ್ಬ ಗೆಳೆಯ ಶ್ರೀನಿವಾಸರಾವ ಸತ್ಯಾಗ್ರಹ ಮಾಡಿ ಜೇಲಿಗೆ ಹೋಗಿದ್ದರು. ಅಲ್ಲದೆ ಅಂದಿನ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನಾಗನಗೌಡರ ಬದಲು ಕೃಷ್ಣಾಬಾಯಿ ಪಂಜೀಕರ ಅಧ್ಯಕ್ಷರಾಗಿದ್ದರು. ಅವರು ಮತ್ತು ಹುಕ್ಕೇರಿಕರ

ಅವರೂ ಸೆರೆಮನೆ ಸೇರಿದ್ದರಿಂದ ಕರಮರಕರ ಅವರು ಅಧ್ಯಕ್ಷರಾಗಿದ್ದರು. ಆಗ ದಾಬಡೆ ಅವರನ್ನು 500 ಸತ್ಯಾಗ್ರಹಿಗಳ ಯಾದಿಯೊಂದಿಗೆ ಗಾಂಧೀಜಿಯವರ ಒಪ್ಪಿಗೆ ಪಡೆಯಲು ಕಳಿಸಲಾಗಿತ್ತು. ಅವರು ಎಲ್ಲರಿಗೂ ಒಪ್ಪಿಗೆ ಪಡೆದುಕೊಂಡೇ ಬಂದಿದ್ದರು.

ಈ ಅವಧಿಯಲ್ಲಿ ನನ್ನ ಪ್ರಥಮ ಪುಷ್ಪವು ಅರಳಿತು. 1940ರ ಮೇ ತಿಂಗಳಲ್ಲಿ ಬಾಗಲಕೋಟೆಯ ತೌರಿನಲ್ಲಿ ಒಂದು ಸುಂದರ ಗಂಡು ಮಗುವನ್ನು ಹೆತ್ತೆ. ಆಗ ನನಗೆ ತುಂಬಾ ಕಾಯಿಲೆಯಾಗಿ ಸತ್ತು ಸತ್ತು ಉಳಿದಿದ್ದೆ. ಅಂತೂ ಮಗುವನ್ನು ಎತ್ತಿಕೊಂಡು ಧಾರವಾಡಕ್ಕೆ ಬಂದೆ. ಆಗ ದಾಬಡೆ ಅವರು ತಮ್ಮ ತಂದೆ ಮತ್ತು ಭಟ್ಟರನ್ನು ಕರೆಯಿಸಿ ಮನೆಯಲ್ಲಿ ಗುರುಚರಿತ್ರೆ ಪಾರಾಯಣ ಮಾಡಿಸಿದ್ದರು. ಮಗು ಶ್ರೀಪಾದ ತುಂಬಾ ಮುದ್ದಾಗಿದ್ದ.

ಮೈಸೂರು ಚಳುವಳಿಯೂ ಜೋರಾಗಿ ನಡೆದಿತ್ತು. ಅಲ್ಲಿಯ ಮುಖಂಡರಾದ ಟಿ. ಸಿದ್ಧಲಿಂಗಯ್ಯ, ಪಾರ್ಥನಾರಾಯಣ ಪಂಡಿತರು ಆಗಾಗ್ಗೆ ಧಾರವಾಡಕ್ಕೆ ಬರುತ್ತಿದ್ದರು. ಆಗ ನಮ್ಮ ಮನೆಗೂ ಬಂದು ಹೋಗುವರು, ಆತ್ಮೀಯವಾಗಿ ಮಾತಾಡುವರು.

ಇಷ್ಟರಲ್ಲಿ ಒಂದು ಮೋಜಿನ ಘಟನೆ ನಡೆಯಿತು. ನಾವು ಮಾಳಮಡ್ಡಿಯಲ್ಲಿದ್ದಾಗ ಇವರ ಗೆಳೆಯರೆಲ್ಲ ಒಮ್ಮೆ ಬಾವಿಯ ದಂಡೆಯ ಮೇಲೆ ಸೇರಿ ನೀರು ಜಗ್ಗುತ್ತಲಿದ್ದರು. ಆಗ ನಮ್ಮ ಮನೆಯ ದೊಡ್ಡ ತಾಮ್ರದ ಕೊಡವನ್ನು ತೆಗೆದುಕೊಂಡು ಹೋಗಿ ಅದನ್ನು ಜಗ್ಗಿ ತುಂಬಿಟ್ಟಿದ್ದರು. ಏನು ಮಾಡುವರೋ ಎಂದು ಕುತೂಹಲದಿಂದ ನಾನು ನೋಡುತ್ತಲಿದ್ದೆ. ಆಗ ಇವರು ಹಲ್ಲಿನಿಂದ ಈ ಕೊಡವನ್ನು ಬೇಕಾದವರು ಎತ್ತಲು ಹೇಳಿದರು. ಯಾರೂ ಮುಂದೆ ಬರಲಿಲ್ಲ. ಕೊನೆಗೆ ಇವರೇ ಆ ತುಂಬಿದ ಕೊಡವನ್ನು ತಮ್ಮ ಹಲ್ಲಿನಿಂದ ಎತ್ತಿಕೊಂಡೇ ಸರಸರನೆ ಮನೆಗೆ ಬಂದರು. ಎಲ್ಲರಿಗೂ ಆಶ್ಚರ್ಯ. ನಾನಂತೂ ತುಂಬಾ ಸಂತೋಷಪಟ್ಟು ಎಷ್ಟು ಗಟ್ಟಿ ಇವರ ಹಲ್ಲುಗಳು ಎಂದುಕೊಂಡೆ.

ಆಗ ನಮ್ಮ ಬಿಡಾರವನ್ನು ಪಕ್ಕದಲ್ಲಿರುವ ಪತ್ರಾವಳಿಚಾಳಿಗೆ ಸ್ಥಳಾಂತರಿಸಿದ್ದೆವು. ಎರಡನೇ ಮನೆಯಲ್ಲಿ ನಾವಿದ್ದರೆ ಮೊದಲನೆಯ ಮನೆಯಲ್ಲಿ ಅದೇ ಲಗ್ನವಾಗಿದ್ದ ಸತ್ಯಧ್ಯಾನ ಗುಡಿ ಇರುತ್ತಿದ್ದರು. ಮೈಸೂರು ಸರಕಾರದಿಂದ ಹೊರಗೆ ಹಾಕಲ್ಪಟ್ಟಿದ್ದ ಎ. ಝಡ್. ಶರೀಫ ಎಂಬುವರೂ ಕಾಂಗ್ರೆಸ್ ಕಛೇರಿಯಲ್ಲಿಯೇ ಇರುತ್ತಿದ್ದರು. ಈ ಮೂವರೂ ಯುದ್ಧ ವಿರೋಧಿ ಪ್ರಚಾರ ಮಾಡಲು ಗ್ರಾಮಾಂತರದಲ್ಲಿ ಹೋಗುತ್ತಿದ್ದರು. ಕಾಲ್ನಡಿಗೆಯಿಂದ ಹೋಗಿ ಪ್ರಚಾರ ಮಾಡಿ ಬರುತ್ತಿದ್ದರು. ಅನೇಕ ಸತ್ಯಾಗ್ರಹಿಗಳು ಧಾರವಾಡಕ್ಕೆ ಬರುತ್ತಲಿದ್ದರು. ಅವರಿಂದ ಸತ್ಯಾಗ್ರಹ ಮಾಡಿಸುವ ಹೊಣೆ ಇವರದೇ. ಆಗ ಇವರು ಧಾರವಾಡ ತಾಲೂಕಾ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದರು. ಇವರಿಗೆ ಒಂದು ನಿಮಿಷದ ಪುರಸೊತ್ತೂ ಇರುತ್ತಿರಲಿಲ್ಲ.

ಆಗ ನನ್ನ ಮಾಮಾ ಶ್ರೀನಿವಾಸರಾವ ದಾಬಡೆ ಧಾರವಾಡದ ಕೋರ್ಟಿನಲ್ಲಿ ಶಿರಸ್ತೇದಾರರಾಗಿದ್ದರು. ಇವರನ್ನು ಒಮ್ಮೆ ಕರೆಯಿಸಿ "ನಿನಗೂ ಈ ಸತ್ಯಾಗ್ರಹಕ್ಕೂ ಏನೂ ಸಂಬಂಧ ಇಲ್ಲವಲ್ಲ" ಎಂದು ಪ್ರಸ್ತಾಪವೆತ್ತಿದಾಗ "ಇವರು ನನಗೆ ಶತಪ್ರತಿ ಸಂಬಂಧವಿದೆ. ಆದರೆ ನಾನು ಎಂದು ಜೇಲಿಗೆ ಹೋಗುವೆನೋ ಗೊತ್ತಿಲ್ಲ" ಎಂದು ಹೇಳಿದಾಗ ನನ್ನ ಮಾಮಾಗೆ ಶಾಕ್ ಆಯಿತಂತೆ.

ಈ ಸತ್ಯಾಗ್ರಹದ ಪ್ರತ್ಯಕ್ಷ ಪರಿಚಯ ನನಗೆ ಮಾಡಿಕೊಡಬೇಕೆಂದೇ ನನ್ನನ್ನು ಉಪ್ಪಿನ ಬೆಟಗೇರಿಗೆ ಕರೆದೊಯ್ದರು. ಅಲ್ಲಿ ಶ್ರೀ ಕರಮರಕರ ದಂಪತಿಗಳೂ ಬಂದಿದ್ದರು. ಊರ ಜನರೆಲ್ಲ ಒಂದು ಕೂಟದಲ್ಲಿ ಸೇರಿದ್ದರು. ಪ್ರಾರಂಭದಲ್ಲಿ ಊರ ಹಿರಿಯರು ಸ್ವಾಗತಿಸಿದರು. ನಂತರ ಅಂದಿನ ಯುದ್ಧದ ಬಗ್ಗೆ ಮೊದಲು ಕರಮರಕರ ಅವರು ಮಾತಾಡಿದರು. ನಂತರ ಇವರ ಪಾಳಿ. ಎಷ್ಟು ಎತ್ತರದ ದನಿಯಲ್ಲಿ ಎಷ್ಟು ಸ್ಪಷ್ಟವಾಗಿವೆ ಇವರ ಮಾತು ಎನಿಸಿತು. ಈ ಮೊದಲು ಇವರ ಸಾರ್ವಜನಿಕ ಭಾಷಣ ಕೇಳಿರಲಿಲ್ಲ. ಇನ್ನೊಂದು ಸಲ ಒಂದೇ ದಿವಸ ಬೇರೆ ಬೇರೆ ಎಂಟು ಹಳ್ಳಿಗಳಲ್ಲಿ ಎಂಟು ಸತ್ಯಾಗ್ರಹಗಳ ಕಾರ್ಯಕ್ರಮ ಇಟ್ಟು ಬೆಳಗಿನಿಂದ ಸಂಜೆಯವರೆಗೆ ಇದೇ ಕೆಲಸ ಮಾಡಿದ್ದರು. ಆಗ ಈ ಸತ್ಯಾಗ್ರಹಿಗಳನ್ನು ಊರಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುವಾಗ ಹಾಡುತ್ತ ಹೊರಟಿದ್ದರು. ಅವರ ಹೆಗಲ ಮೇಲೆ ಧನುಷ್ಯ ತಕಲಿ ಎಂಬ ರಾಟಿ ಇತ್ತು. ದೂರದಿಂದ ನೋಡುವವರಿಗೆ ಬಂದೂಕದಂತೆ ಕಾಣುತ್ತಿತ್ತು. ಈ ಮೆರವಣಿಗೆ ಊರಲ್ಲಿ ಪೊಲೀಸ್ ಕಛೇರಿಯ ಮುಂದೆ ಹೊರಟಾಗ್ಗೆ ಡಿ.ಎಸ್.ಪಿ. ಅವರು ಅಲ್ಲಿಯೇ ಇದ್ದು ಇವರ (ದಾಬಡೆ) ಮೇಲೆ ಡಿ. ಪಿ. ಆ್ಯಕ್ಟ್ ಪ್ರಕಾರ ಖಟ್ಲೆ ಹಾಕಿದರು. ಅದು ಕೋರ್ಟಿನಲ್ಲಿ ತಿಂಗಳಾನುಗಟ್ಟಲೆ ನಡೆಯಿತು, ಏನೂ ಇತ್ಯರ್ಥವಾಗಲಿಲ್ಲ. ಪರ್ಯಾಯದಿಂದ ಇವರು ನನ್ನ ಕೈದು ಬೇಗ ಆಗಬಹುದು ಎಂದು ಹೇಳಿದಾಗ ನನ್ನ ಮೈ ಜುಂ ಎಂದಿತು. ನಾನು ತುಂಬಾ ಅಶಕ್ತಳಾಗಿದ್ದೆ. ಆದರೆ ಇದೆಲ್ಲದರ ಪರಿಣಾಮ ನನ್ನ ಮೇಲೆ ಸಾವಕಾಶವಾಗಿ ಆಗುತ್ತಲೇ ಇತ್ತು. ಒಂದು ದಿನ ಇವರಿಗೆ "ನನಗೆ ಖಾದಿ ಸೀರೆ ತಂದು ಕೊಡಿರಿ. ಇಂದಿನಿಂದ ನಾನೂ ಪೂರ್ಣ ಖಾದಿಧಾರಿಯಾಗುವೆ" ಎಂದು ಹೇಳಿದೆ. ಆಗಿನ ಖಾದಿ ಸೀರೆಯೆಂದರೆ ತೋಯಿಸಿಟ್ಟರೆ ಒಂದು ದೊಡ್ಡ ಬಕೀಟು ತುಂಬುತ್ತಿತ್ತು. "ನೀನು ಅದನ್ನು ಹೇಗೆ ಒಗೆಯುವೆ ? ನೀನು ಅಶಕ್ತಳು" ಎಂದು ಇವರು ಪ್ರಸ್ತಾಪಿಸಿದರು. "ಅದರ ಚಿಂತೆ ನಿಮಗೆ ಬೇಡ" ಎಂದು ಹೇಳಿದೆ. ಅಂದಿನಿಂದ ನಾನು ಸಂಪೂರ್ಣ ಖಾದಿಧಾರಿಯಾದೆ. ಖಾದಿ ಹೊರತು ಬೇರೆ ಬಟ್ಟೆ ತೊಡಬಾರದೆಂದೇ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡಿದೆ.

ಒಂದು ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಕರಮರಕರ ಅವರನ್ನು ಕರೆಯಿಸಿ "ಏನು ನಿಮ್ಮ ಕಛೇರಿಯ ಕೆಲಸಗಾರ ದಾಬಡೆ ಕಛೇರಿಯ ಕೆಲಸ ಬಿಟ್ಟು ಹಳ್ಳಿಗಳಲ್ಲಿ ತುಂಬಾ ತಿರುಗಾಡಿ ಯುದ್ಧ ವಿರೋಧಿ ಭಾಷಣ ಮಾಡುವರೆಂಬ ವರದಿ ನನ್ನ ಕಡೆಗೆ ಬರಹತ್ತಿದೆ. ಏನು ಇದೂ ಕಚೇರಿಯ ಕೆಲಸವೇ ? ಅವರನ್ನು ನೀವು ಹದ್ದುಬಸ್ತಿನಲ್ಲಿ ಇಡಬೇಕು" ಎಂದು ಹೇಳಿದರಂತೆ. ಅದಕ್ಕೆ ಅವರು "ಖಂಡಿತವಾಗಿಯೂ ಅದು ಕಛೇರಿಯ ಕೆಲಸ" ಎಂದು ಹೇಳಿದರೆಂದು ತಾವೇ ಇವರ ಮುಂದೆ ಅಂದರಂತೆ.

ಅಂದು 8ನೇ ಮೇ 1941. ಕಛೇರಿಯಲ್ಲಿ ಏನೋ ಕೆಲಸ ಮಾಡಲು ಹೋಗಿದ್ದರು. ಬೆಳಿಗ್ಗೆ 10 ಗಂಟೆಗೆ ಕಾರಿನಲ್ಲಿ ಮನೆಗೆ ಬಂದು ಏನೂ ವಿಶೇಷ ಮಾತಾಡದೇ "ಬೇಗ ಅಡಿಗೆ ಮಾಡು. ನಾನು ಕೂಡಲೇ ಊಟ ಮಾಡಬೇಕು ಅಥವಾ ಇದ್ದುದನ್ನು ಹಾಕು" ಎಂದರು. ನನಗೆ ಯಾವುದರ ಕಲ್ಪನೆ ಇರದೆ ಇವರಿಗೆ ಊಟಕ್ಕೆ ಹಾಕಿದೆ. ಹೊರಗೆ ಕಾರು ಇತ್ತು, ನಮ್ಮ ಮನೆಯ ಪಡಸಾಲೆಯಲ್ಲಿ ಓರ್ವ ವ್ಯಕ್ತಿ ಕುಳಿತಿದ್ದ. ಆತನೇ ಲೂಯಿಸ್ ಎಂಬ ಫೌಜದಾರ ಎಂದು ನಂತರ ತಿಳಿಯಿತು. ಊಟವಾದ ಕೂಡಲೇ ದೇವರಿಗೆ ದೀಪ ಹಚ್ಚಲು ಹೇಳಿದರು. ದೀಪ ಹಚ್ಚಿದ ಮೇಲೆ ಉಸಿರುಬಿಟ್ಟು "ನನ್ನನ್ನು ಕೈದು ಮಾಡಿದ್ದಾರೆ. ಹೊರಗೆ ಕುಳಿತವನೇ ಸಬ್‌ಇನ್ಸ್‌ಪೆಕ್ಟರ್. ನನಗೆ ಹೋಗಲು ಅಪ್ಪಣೆ ಕೊಡು" ಎಂದರು. ನನಗೆ ಗೊತ್ತಾಗದೇ ಒಂದೇ ಸಮನೆ ಕಣ್ಣೀರು ಸುರಿಯಹತ್ತಿತ್ತು. ಅಂಥದರಲ್ಲಿಯೇ ಅವರಿಗೆ ತಿಲಕವಿಟ್ಟು ಆರತಿ ಮಾಡಿದೆ. ಹೋಗಿ ಬರ್‍ರಿ ಎಂಬ ಮಾತು ಹೊರಡಲಿಲ್ಲ. ಅವರ ಪಾದಮುಟ್ಟಿ ನಮಸ್ಕಾರ ಮಾಡಿದೆ. ಬಹುಶಃ ನನ್ನ ಕಣ್ಣೀರು ಅವರ ಪಾದದ ಮೇಲೆ ಬಿದ್ದಿರಬೇಕು. ಮುಂದೆ ಅವರು ಮಗುವನ್ನು ಎತ್ತಿಕೊಂಡು ಒಂದು ಮುತ್ತು ಕೊಟ್ಟು ಹೊರಟೇಬಿಟ್ಟರು. ಕಾರಿನವರೆಗೆ ಕಳಿಸಲು ನಾನು ಮಗುವಿನೊಂದಿಗೆ ಹೋಗಿದ್ದೆ. ಮುಂದೆ ಹದಿನೈದು ನಿಮಿಷಗಳಲ್ಲಿ ನನ್ನ ಮಾಮಾನ ಮನೆಯಿಂದ ನನ್ನ ಅಬಚಿ ಸುಬ್ಬಕ್ಕ ಬಂದಳು. ಅವಳು ನಾನೂ ಕೂಡಿಯೇ ಸ್ವಲ್ಪ ಹೊತ್ತು ಅತ್ತೆವು. ಮುಂದೆ ಅವಳು ನನಗೆ, ನಾನು ಅವಳಿಗೆ ಸಮಾಧಾನ ಹೇಳಿಕೊಂಡೆವು. ಯಥಾಪ್ರಕಾರ ಈ ಸುದ್ದಿ ಮರುದಿನ ವೃತ್ತಪತ್ರಿಕೆಯಲ್ಲಿ ಬಂತು. ಆಗ ಹುಬ್ಬಳ್ಳಿಯಿಂದ ಇವರ ತಂದೆ, ಅಣ್ಣಂದಿರು, ಅತ್ತಿಗೆ ಎಲ್ಲರೂ ಇವರನ್ನು ಭೆಟ್ಟಿಯಾಗಲು ಲಾಕಪ್ಪಿಗೆ ಹೋದರು. ಮೊದಲು ಅವರ ತಂದೆ ತುಂಬಾ ಗಾಬರಿಯಾಗಿದ್ದರು. ಅಲ್ಲಿಯ ಸ್ಥಿತಿ ನೋಡಿ "ನರಸಿಂಹ ಛಲೋನೇ ಇದ್ದಾನ, ಏನೂ ಅಡ್ಡಿ ಇಲ್ಲ" ಎಂದು ಅಂದರಂತೆ. ಆಗ ಇವರು ಇದ್ದ ಲಾಕಪ್ಪಿಗೆ ಕೀಲಿ ಹಾಕಿರಲಿಲ್ಲ. ಇವರು ಒಂದು ಕಂಬಳಿಯ ಮೇಲೆ ಕುಳಿತು ಮಿತ್ರರೊಡನೆ ಹರಟುತ್ತಲಿದ್ದರು. ಲಾಕಪ್ಪಿಗೆ ತುಂಬಾ ಜನರು ಬಂದು ಭೆಟ್ಟಿಯಾಗುತ್ತಿದ್ದರು. ಮನೆಯಿಂದ ಊಟ ತೊಗೊಂಡು ನಾನೇ ಹೋಗುತ್ತಲಿದ್ದೆ. ಮುಂದೆ ಎರಡೇ ದಿವಸದಲ್ಲಿ ವರ್ತಮಾನ ಬಂತು. ಇವರ ತಂದೆಗೆ ತುಂಬಾ ಕಾಯಿಲೆ ಬದುಕುವ ಆಶೆಯೂ ಇಲ್ಲ ಎಂದು, ಮುಂದೆ ಏನು ಮಾಡಬೇಕೆಂಬುದು ತಿಳಿಯಲಿಲ್ಲ.

ಈ ಸುದ್ದಿ ಕೇಳಿ ಕರಮರಕರ ಅವರೇ ಬಂದು ತಾವೇ ಸ್ವತಃ ಜಾಮೀನು ಆಗಿ ಇವರನ್ನು ತಾತ್ಪೂರ್ತಿಕ ಬಿಡುಗಡೆ ಮಾಡಿಸಿದರು. ನಂತರ ಇವರು ನಾನು ಸೇರಿ ಹುಬ್ಬಳ್ಳಿಗೆ ಹೋದೆವು. ಮಾವನವರಿಗೆ ಎಚ್ಚರವಿರಲಿಲ್ಲ. ಇವರು ಹತ್ತಿರ ಹೋಗಿ "ನಾನು ನರಸಿಂಹ ಬಂದೇನಿ" ಎಂದು ಎಷ್ಟು ಕೂಗಿ ಹೇಳಿದರೂ ಕಣ್ತೆರೆಯಲಿಲ್ಲ, ನೋಡಲಿಲ್ಲ. ಆದರೆ ಇವರ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ನನಗಂತೂ ಅವರನ್ನು ನೋಡಿ ಮಹಾಭಾರತದಲ್ಲಿ ಯುದ್ಧದ ಸಮಯಕ್ಕೆ ಶರಪಂಜರದ ಮೇಲೆ ಮಲಗಿದ್ದ ಭೀಷ್ಮರ ನೆನಪಾಯ್ತು. ಮರುದಿನ ಇವರು ತಮ್ಮ ತಂದೆಯ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ನೀರು ಕುಡಿಸುವಾಗ್ಗೆ ಅವರ ಪ್ರಾಣ ಹಾರಿಹೋಯಿತು.

ಮನೆಯೆಲ್ಲ ದುಃಖದಲ್ಲಿ ಮುಳುಗಿತು. ಕೆರೂರಿನಿಂದ ಹಿರಿಯಣ್ಣ ಅತ್ತಿಗೆ ಬಂದರು. ಮುಂದೆ ಎಲ್ಲ ಕಾರ್ಯಗಳು ಯಥಾಪ್ರಕಾರವಾಗಿ ನಡೆದವು. ಇವರ ತಾಯಿ ಹೋದ ಹತ್ತು ವರ್ಷಗಳ ನಂತರ ತಂದೆ ಹೋದರು. ಅವರು ಪುಣ್ಯವಂತರು.

ಎಲ್ಲ ಕರ್ಮಗಳನ್ನು ಮುಗಿಸಿ ಜೂನ್ 16ನೇ ದಿನಾಂಕ ತಾವೇ ಕೋರ್ಟಿಗೆ ಹೋಗಿ ಹಾಜರಾದರು. ಸಂಕೊಳ್ಳಿಯವರು ಮ್ಯಾಜಿಸ್ಟ್ರೇಟ್‌ರಾಗಿದ್ದರು. ಮೂರು ತಿಂಗಳು ಕಠಿಣ ಶಿಕ್ಷೆ ಎಂದು ಘೋಷಿಸಿದರು. ಅದನ್ನು ಕೇಳಿ ನಾನು ಕಿಂಚಿತ್ ನಡುಗಿದೆ. ಇವರು ಮಾತ್ರ ಖುಶಿಯಾಗಿಯೇ ಇದ್ದರು.

ಇವರ ಹುಟ್ಟುಹಬ್ಬ ಮೇ 15 ರಂದು (26 ನೇಯದು). ಈ ಸಲ ಅದು ಲಾಕಪ್ಪಿನಲ್ಲಿಯೇ ಆಯಿತು.

ಇನ್ನು ಬೆಳಗಾವಿ ಜೇಲಿಗೆ ಕಳಿಸುವದು (20-6-41) ಮಧ್ಯಾಹ್ನ 12ಕ್ಕೆ ಒಂದು ಪ್ಯಾಸೆಂಜರ್ ಗಾಡಿ ಇತ್ತು. ನಾವೆಲ್ಲ ನಿಲ್ದಾಣಕ್ಕೆ ಹೋಗಿದ್ದೆವು. ಕರಮರಕರ ಅವರೂ ಬಂದಿದ್ದರು. ಕೆಲವರು ತಿಲಕವಿಟ್ಟು ಮಾಲೆ ಹಾಕಿದರು. ಮಧ್ಯಾಹ್ನ 12 ಕ್ಕೆ ಆ ಗಾಡಿ ಅವರನ್ನು ಕರೆದುಕೊಂಡು ಹೋಯಿತು. ನನಗೆ ಈ ದೃಶ್ಯ ನೋಡುವುದಾಗಲಿಲ್ಲ, ಕಣ್ಣೀರು ಸುರಿಸುತ್ತಲಿದ್ದೆ. ಅವರ ಕಣ್ಣು ತೇವವಾಗಿದ್ದವು, ಇಲ್ಲಿಗೆ ಒಂದು ಅಧ್ಯಾಯ ಮುಗಿಯಿತು.

# ಮೊದಲ ಜೇಲುವಾಸ

ಮುಂದೆ ನಾನೇನು ಮಾಡಬೇಕು ? ಎಂಬ ಸಮಸ್ಯೆ. ನಾವಿದ್ದ ಮನೆಯ ಬಾಡಿಗೆ ತಿಂಗಳಿಗೆ 5 ರೂ. ಇತ್ತು. ಮೂರು ತಿಂಗಳು 15 ರೂ. ಕೊಡಬೇಕು. ಎಲ್ಲಿಂದ ತರುವದು ? ಎಂದು ಮನೆ ಬಿಟ್ಟು ಸಾಮಾನುಗಳನ್ನೆಲ್ಲ ಮಾಮಾ ಅವರ ಮನೆಯಲ್ಲಿಟ್ಟೆ. ಆ ಹೊತ್ತಿಗೆ ಅಣ್ಣ ಬಾಗಲಕೋಟೆಯಿಂದ ಕರೆಯಲು ಬಂದ. ಮಗುವಿನೊಡನೆ ತಾಯಿಯ ಮಡಿಲು ಸೇರಿದೆ. ಮಗು ಶ್ರಿಪಾದನ ಆರೋಗ್ಯ ಸರಿಯಿರಲಿಲ್ಲ. ಲಿವ್ಹರ್ ತೊಂದರೆ ಆಯಿತು, ಔಷಧೋಪಚಾರ ನಡೆದೇ ಇತ್ತು. ಅಷ್ಟರಲ್ಲಿ ಒಮ್ಮೆ ಇವರ ಭೆಟ್ಟಿಗೆಂದು ಬೆಳಗಾವಿ ಜೇಲಿಗೆ ಅಣ್ಣನೊಡನೆ ಹೋಗಿ ಬಂದೆ. ಅವರು ಹಾಕಿಕೊಂಡ ವಿಚಿತ್ರ ವೇಷವನ್ನು ನೋಡಿ ಅಸಮಾಧಾನವಾದರೂ ಅವರ ಆರೋಗ್ಯ ನೋಡಿ ಸಂತೋಷಪಟ್ಟೆ. ಅವರಿಗೆ ಜೇಲಿನಲ್ಲಿ ಕಛೇರಿಯ ಕೆಲಸ ಕೊಟ್ಟಿದ್ದರು. ಸಾಮಾನ್ಯವಾಗಿ ಮಾತಾಡಲು 15 ನಿಮಿಷ ಕೊಡುವರು. ಆದರೆ ನನಗೆ ಮಾತ್ರ "ಬೇಕಾದಷ್ಟು ಹೊತ್ತು ಬೇಕಾದ ವಿಷಯ ಮಾತನಾಡಿರಿ" ಎಂದು ಅಧಿಕಾರಿಗಳು ಹೇಳಿದರು. ನಮಗೆ ಏನು ಮಾತಾಡಬೇಕೆಂಬ ಸಮಸ್ಯೆ ಬಂತು. ಧಾರವಾಡದಲ್ಲಿದ್ದಾಗ ನಮ್ಮ ಮಾತಿಗೆ 24 ತಾಸು ಸಾಲುತ್ತಿರಲಿಲ್ಲ. ಇಲ್ಲಿ ಏನು ಮಾತಾಡಬೇಕೆಂಬ ಸಮಸ್ಯೆ ! ಮಗುವಿನ ಆರೋಗ್ಯದ ಬಗ್ಗೆ ಚಿಂತಿಸಬೇಡಿರೆಂದು ಅಣ್ಣ ಇವರಿಗೆ ಹೇಳಿದ, ವಾಪಸ್ ಬಾಗಲಕೋಟೆಗೆ ಬಂದೆ. ಮಗುವಿನ ಆರೋಗ್ಯ ಉಲ್ಬಣಿಸಿ ಇನ್ನೊಮ್ಮೆ ಇವರ ಭೆಟ್ಟಿಗೆ ಹೋಗುವದು ಆಗಲಿಲ್ಲ. ಮಗುವಿನ ಮುಂದೆ ಕೂಡುತ್ತಲಿದ್ದೆ.

3 ತಿಂಗಳ ನಂತರ ಇವರ ಬಿಡುಗಡೆ ಆಯ್ತು. ಬೇಗ ಬರಲು ಧಾರವಾಡಕ್ಕೆ ತಂತಿ ಕೊಟ್ಟೆವು, ಅವರು ಧಾವಿಸಿ ಬಂದರು. ಅಷ್ಟರಲ್ಲಿ ಶ್ರೀಪಾದ ಹೋಗಿಬಿಟ್ಟಿದ್ದ. ಇಬ್ಬರೂ ಕುಳಿತು ಅತ್ತೆವು. ನಂತರ ಗಾಡಿ ಯಥಾಪ್ರಕಾರ ನಡೆಯಿತು.

ಧಾರವಾಡಕ್ಕೆ ಬಂದೆವು, ಇವರ ಕಾಂಗ್ರೆಸ್ ಕಮಿಟಿಯ ಕೆಲಸ ನಡೆಯಿತು. ಮನೆಯಿಲ್ಲ ಎಲ್ಲಿರಬೇಕು ? ಎಂಬ ಪ್ರಶ್ನೆ ಬಂತು. ರೈಲುನಿಲ್ದಾಣ ಪಕ್ಕದಲ್ಲಿರುವ ಫಾರ್ಗಿ ಅವರ ಮನೆಯ ಹಿಂದೆ ಎರಡು ಚಿಕ್ಕ ಕೋಣೆಗಳು, ಅಲ್ಲಿಯೇ ನಮ್ಮ ಪ್ರಪಂಚ ಹೂಡಿದೆವು.

ಜಾಗತಿಕ ಯುದ್ಧದ ಬೇಗೆ ಉಲ್ಬಣವಾಗಿತ್ತು. ಕಾಂಗ್ರೆಸ್ಸು ಚಳುವಳಿಯ ಅಂಚಿನಲ್ಲಿ ಬಂದಂತೆ ಭಾಸವಾಗುತ್ತಿತ್ತು. ವೈಯಕ್ತಿಕ ಸತ್ಯಾಗ್ರಹ ನಡೆದೇ ಇತ್ತು. ಮತ್ತೆ ಪ್ರಾರಂಭವಾಯ್ತು ಇವರ ಗ್ರಾಮಾಂತರ ಪ್ರಚಾರ.

# 15

ಸಧ್ಯಕ್ಕೆ ಇವರಿಗೆ ಮಕ್ಕಳ ಜಂಜಾಟ ಬೇಡವಾಗಿತ್ತು. ಏನೇನೋ ಉಪಚಾರ ಮಾಡಲು ಹಾತೊರೆಯುತ್ತಿದ್ದರು. ಆದರೆ ನನ್ನ ತಲೆಯಲ್ಲಿ ಮಾತ್ರ ವಿಚಾರಗಳೇ ಬೇರೆ. ಕಡೆಗೆ ಒಮ್ಮೆ ಸ್ಪಷ್ಟವಾಗಿ ಹೇಳಿದೆ "ನನಗೆ ಇವೆಲ್ಲ ಸೇರುವುದಿಲ್ಲ, ಇದರಿಂದ ನನ್ನ ಆರೋಗ್ಯ ಕೆಡುವುದಲ್ಲದೆ ನನ್ನ ಮನಸ್ಸಿನ ಮೇಲೆಯೂ ಕೆಟ್ಟ ಪರಿಣಾಮವಾಗುತ್ತಿದೆ. ಅಲ್ಲದೆ ಸಧ್ಯಕ್ಕಂತೂ ನನ್ನ ಬಗಲಲ್ಲಿ ಒಂದು ಮಗುವು ಬೇಕು" ಎಂದು ಹೇಳಿದೆ. ಅದಕ್ಕೆ ಅವರೂ ಒಪ್ಪಿಕೊಂಡು ಆ ಉಪಚಾರಗಳನ್ನು ಬದಿಗೆ ಸರಿಸಿದರು. ಬ್ರಹ್ಮಚರ್ಯದಿಂದ ಇರುವದು ಸಾಧ್ಯವಿರಲಿಲ್ಲ.

ದಿನಾಲೂ ಇಬ್ಬರೂ ಸೇರಿ ಕನಿಷ್ಠ ಒಂದು ಲಡಿ ನೂಲುತ್ತಲಿದ್ದೆವು. ನಿತ್ಯ ಒಂದೆರಡು ತಾಸು ಓದುವದು, ಯುದ್ಧದ ವಾರ್ತೆ, ಸಂಜಯನ ವರ್ಣನೆ, ಹರಿಜನ ಪತ್ರಿಕೆ. ಅವರು ಓದುವಾಗ್ಗೆ ಮತ್ತು ಅದರ ವಿವರಗಳನ್ನು ಹೇಳುವಾಗ ಸುಮ್ಮನೇ ಅವರನ್ನೇ ನೋಡುತ್ತ ಕೂಡುತ್ತಿದ್ದೆ. ಮುಂದೆ ನನ್ನ ಸಂಗಡ ನಮ್ಮ ಮನೆಯ ಮಾಲಕರು ಗಂಗಾಬಾಯಿಯವರೂ ಬರುತ್ತಿದ್ದರು.

ಮಹಾತ್ಮಾಗಾಂಧೀ ಅವರು ಹರಿಜನದಲ್ಲಿ ಕ್ವಿಟ್ ಇಂಡಿಯಾದ ಪ್ರಸ್ತಾಪ ಮಾಡಿದ್ದರು. ಭೀಕರ ಚಳುವಳಿ ಪ್ರಾರಂಭವಾಗುವದೆಂದು ಅನ್ನಿಸುತ್ತಿತ್ತು. ಈ ಸಂದರ್ಭದಲ್ಲಿ ಮುಂಬೈಯಲ್ಲಿ 7ನೇ ಅಗಸ್ಟ್ 1942 ರಂದು ಎ.ಐ.ಸಿ.ಸಿ. ಅಂದರೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಕರೆಯಲಾಗಿತ್ತು. ಅದಕ್ಕೆ ತಾವು ಹೋಗಲೇಬೇಕೆಂದು ಹೇಳುತ್ತಿದ್ದರು. ಆಗ ನನ್ನ ಉದರದಲ್ಲಿ ಎರಡನೆಯ ಪುಷ್ಪ ಅರಳಹತ್ತಿತ್ತು. 5ನೇ ದಿನಾಂಕ ಇವರು ಹೊರಟು ನಿಂತರು. ನನ್ನ ಕೈಯಲ್ಲಿ ಬಿಡಿಕಾಸು ಕೊಟ್ಟು, ನಾನು ಬಹುಬೇಗ ಅಂದರೆ 10ನೇ ದಿನಾಂಕದೊಳಗೆ ಬರುವದಾಗಿ ಹೇಳಿದರು. ಗಾಡಿ ಮಧ್ಯಾಹ್ನ 3 ಗಂಟೆಗೆ ಇತ್ತು, ನಾನು ಕಳಿಸಲು ರೈಲುನಿಲ್ದಾಣಕ್ಕೆ ಹೋಗಿದ್ದೆ. ಇವರ ಸಂಗಡ ಕಮಲಾದೇವಿ, ಅವರ ಮಗ ರಾಮು, ಮಲ್ಯ, ಕುರ್ತಕೋಟಿ ಇದ್ದರು. ಬಹಿರಂಗವಾಗಿ "ಹೋಗಿ ವಿಜಯಿಗಳಾಗಿ ಬರ್ರಿ" ಎಂದು ಹೇಳುತ್ತಿದ್ದರೂ ನನ್ನ ಹೊಟ್ಟೆಯಲ್ಲಿ ನೂರಾರು ಚೇಳು ಕಡಿದಂತೆ ಭಾಸವಾಗುತ್ತಿತ್ತು. ಆ ಸಂದರ್ಭದಲ್ಲಿ ಇವರ ಹಿರಿಯಣ್ಣ ಟ್ರೇನಿಂಗ್ ಶಾಲೆಗೆ ಬಂದು ನಮ್ಮ ಮನೆಯಲ್ಲಿಯೇ ಇದ್ದರು.

# ಮುಂಬಯಿಯಿಂದ ಭೂಗತವಾಸಕ್ಕೆ

ಇವರು (ದಾಬಡೆ) ಮುಂಬೈಗೆ ಹೋದ ನಂತರ ನನಗೆ ಒಂದು ರೀತಿಯ ಹುಚ್ಚೇ ಹಿಡಿದಂತಾಗಿತ್ತು. ಏನೋ ಒಂದು ಅಘಟಿತ ಘಟನೆ ಜರುಗುವದೆಂದು ನನ್ನ ಮನಸ್ಸು ಹೇಳುತ್ತಲಿತ್ತು. ಬೆಳಿಗ್ಗೆ ಎದ್ದು ಪೇಪರ ಓದುವಾಗ ನನ್ನ ಕೈಗಳು ನಡುಗುತ್ತಲಿದ್ದವು. ನನ್ನ ಕಿವಿಯಲ್ಲಿ ಯಾರೋ ಬಂದು ಕ್ವಿಟ್ ಇಂಡಿಯಾ ಎಂದು ಕೂಗಿದಂತೆ ಆಗುತ್ತಿತ್ತು. ಆಗ ಅವ್ವ ಧಾರವಾಡದಲ್ಲಿಯೇ ಇದ್ದು ನಮ್ಮ ಮನೆಗೆ ಧಾವಿಸಿ ಬಂದಳು. ನನ್ನ ಮನಸ್ಸು ಹೇಳಿದಂತೆ 9ನೇ ತಾರೀಖು ಭಯಂಕರ ಸುದ್ದಿ ಬಂದಿತು. 8ನೇ ತಾರೀಖು ರಾತ್ರಿ ಕ್ವಿಟ್ ಇಂಡಿಯಾ ಗೊತ್ತುವಳಿ ಸರ್ವಾನುಮತದಿಂದ ಪಾಸಾಗಿ ಹೋರಾಟ ನಡೆಸಲು ಗಾಂಧೀಗೆ ಅಧಿಕಾರ ಕೊಡಲಾಗಿದೆ ಎಂದಿತ್ತು. ಮುಂದೆ ಮಧ್ಯರಾತ್ರಿಯಲ್ಲಿ ಎಲ್ಲ ಮುಖಂಡರು ಗಾಂಧೀಸಹಿತ ಕೈದಾಗಿ ಯಾವುದೋ ಅಜ್ಞಾತ ಸ್ಥಳಕ್ಕೆ ಕಳಿಸಲಾಗಿದೆ ಎಂಬ ಸುದ್ದಿ ಓದಿ ನಾನು ನಡುಗಿದೆ. ಕರ್ನಾಟಕದ ಮುಖಂಡರೂ ಕೈದು ಮಾಡಲ್ಪಟ್ಟಿದ್ದರು. ಧಾರವಾಡದ ನಮ್ಮ ಮನೆಯ ಹತ್ತಿರವೇ ಇದ್ದ ಕಾಂಗ್ರೆಸ್ ಕಮಿಟಿಯ ಕಛೇರಿಯನ್ನು ಸರಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಬಾಗಿಲಲ್ಲಿ ಕಾಯಲು ಪೊಲೀಸ್‌ರನ್ನು ಇಟ್ಟಿತ್ತು. ಮುಂಬೈಯಲ್ಲಿ ಚಳುವಳಿ ಪ್ರಾರಂಭವಾದ ವಾರ್ತೆ ಪತ್ರಿಕೆಯಲ್ಲಿತ್ತು. ಇನ್ನು ಇವರ ಪರಿಸ್ಥಿತಿ ಏನು ? ಎಂಬ ಚಿಂತೆ ನನಗೆ. ದೇಶದಾದ್ಯಂತ ಚಳುವಳಿ ಪ್ರಾರಂಭವಾದ ವಾರ್ತೆ ಪತ್ರಿಕೆಯಲ್ಲಿ ಬರುತ್ತಿದ್ದವು. 10ನೇ ತಾರೀಖಿನೊಳಗಾಗಿ ಬರುವೆನೆಂದು ಹೇಳಿದವರು ಬರಲೇ ಇಲ್ಲ. ಮುಂಬೈಯಲ್ಲಿ ಭೀಕರ ಗೋಲೀಬಾರ, ಲಾಠೀ ಪ್ರಹಾರ ಎಂದು ಓದುವಾಗ ನನ್ನ ಕಣ್ಣೀರು ಹರಿಯುತ್ತಲಿದ್ದವು. ಏನು ಮಾಡುವುದು ಎಂದು ವಿಚಾರ ಮಾಡುತ್ತ ನಾನು ಕುಳಿತಾಗ ಇಬ್ಬರು ಪೊಲೀಸ್‌ರು ಬಂದು "ದಾಬಡೆ ಅವರೆಲ್ಲಿ ? ಅವರನ್ನು ಕೈದು ಮಾಡಲು ಬಂದಿರುವೆವು" ಎಂದು ಹೇಳಿದರು. ಅವರು ಮುಂಬೈಗೆ ಹೋದವರು ಇನ್ನೂ ಬಂದಿಲ್ಲ ಎಂದು ಹೇಳಿದರೂ ಕೇಳದೆ ಮನೆ ಒಳಗೆಲ್ಲಾ ಹುಡುಕಿ, ಕೊನೆಗೆ ತಾವು ತಂದ ವಾರಂಟ್‌ನ್ನು ನಮ್ಮ ಮನೆ ಬಾಗಿಲಿಗೆ ಅಂಟಿಸಿ ಹೋದರು. ಇದನ್ನು ನೋಡಿ ಇವರ ಅಣ್ಣ ಅಂಬಣ್ಣ ನಿಜವಾಗಿ ನಡುಗಿದರು ಮತ್ತು ಮನೆ ಬಿಟ್ಟು ಬೇರೆ ಕಡೆಗೆ ಹೊರಟೇ ಬಿಟ್ಟರು. ಅವ್ವ ಓಡಿ ಬಂದು ನನ್ನನ್ನು ಮದಿಹಾಳದ ತಮ್ಮ ಮನೆಗೆ ಕರೆದುಕೊಂಡು ಹೋದಳು. ಪುನಃ ಮನೆ ಖಾಲಿ, ಸಾಮಾನುಗಳು ಅಸ್ತವ್ಯಸ್ತ. ಅಷ್ಟರಲ್ಲಿ ಏನೋ ಒಂದು ಗಾಳಿ ಸುದ್ದಿ ಬಂತು. ದಾಬಡೆ ಅವರು ಭೂಗತರಾಗಿದ್ದಾರೆ ಎಂದು. ಈಗ ಅಳ್ಳೆದೆಯಿಂದ ಅಳುತ್ತಾ ಕುಳಿತರೆ ನಡೆಯುವದಿಲ್ಲ ಎಂದು ಗಟ್ಟಿ ಮನಸ್ಸು ಮಾಡಿದೆ. ಪರಿಸ್ಥಿತಿಯನ್ನು ಎದುರಿಸಲು ಮನಸ್ಸಿನ ಸಿದ್ಧತೆಯನ್ನು ಮಾಡಿದೆ. ಇಂಥ ಪರಿಸ್ಥಿತಿಯಲ್ಲಿ ನಾನು ಭಗವಂತನಿಗೆ ಮೊರೆ ಹೋಗುವದು. ಆತ ಯಾವಾಗಲೂ ನನ್ನ ಕೈ ಬಿಡುತ್ತಿರಲಿಲ್ಲ. ಆಗ ನನ್ನ

ಗಮನವಿದ್ದುದು ಕೇವಲ ಎರಡು ಮಾತುಗಳ ಬಗ್ಗೆ. ಒಂದು ಇವರದು (ದಾಬಡೆ), ಎರಡನೆಯದು ನನ್ನ ಉದರದಲ್ಲಿ ಬೆಳೆಯುತ್ತಿದ್ದ ಮಗುವಿನದು.

ದಾಬಡೆ ಅವರ ನಿರ್ದಿಷ್ಟ ವರ್ತಮಾನವನ್ನು ಪ್ರಥಮವಾಗಿ ನನ್ನ ಮನೆಯವರೆಗೆ ಬಂದು ಕೊಟ್ಟವರೆಂದರೆ ಇವರ ಆತ್ಮೀಯ ಮಿತ್ರ ಆರ್. ಕೆ. ಜೋಶಿಯವರು. ಅವರು ಸಂಯುಕ್ತ ಕರ್ನಾಟಕದ ಸಂಪಾದಕೀಯದಲ್ಲಿ ಕೆಲಸ ಮಾಡುತ್ತಿದ್ದು, ದಾಬಡೆ ಅವರ ಸಂಗಡವೇ ಮುಂಬೈಗೆ ಹೋಗಿದ್ದರು. ದಾಬಡೆ ಮತ್ತು ಅವರ ಮಿತ್ರರೆಲ್ಲ ಭೂಗತರಾಗಿದ್ದರು. ಆಗ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಛೇರಿ ಮುಂಬೈಯಲ್ಲಿಯೇ ಸ್ಥಾಪಿತವಾಗಿ, ಕಛೇರಿ ಹೊಣೆಗಾರಿಕೆಯನ್ನು ದಾಬಡೆ ಅವರಿಗೇ ಒಪ್ಪಿಸಿದ್ದರು. ಅದರ ನೇತೃತ್ವವನ್ನು ದಿವಾಕರರು ವಹಿಸಿದ್ದು ಈ ಎಲ್ಲ ವಿವರಗಳನ್ನು ಅವರು ಕೊಟ್ಟರು. ತಮ್ಮ ಸಂಗಡ ತಂದ ದಾಬಡೆ ಅವರ ಪತ್ರವನ್ನೂ ಕೊಟ್ಟರು. ಅಲ್ಲದೆ ದಾಬಡೆ ಅವರಿಗೆ ಪತ್ರ ಬರೆಯಲು ಒಂದು ಬೇರೆ ವಿಳಾಸವನ್ನು ಕೊಟ್ಟರು, ಮನಸ್ಸಿಗೆ ಒಂದು ಬಗೆಯ ಸಮಾಧಾನವಾಯ್ತು.

ನಾನು 30-10-1942 ನೇ ದಿನಾಂಕ ರಾತ್ರಿ 9 ಗಂಟೆಗೆ ಧಾರವಾಡದ ಮದಿಹಾಳದ ನನ್ನ ತವರಿನಲ್ಲಿ, ನಿರಾತಂಕವಾಗಿ ಒಂದು ಹೆಣ್ಣು ಮಗುವನ್ನು ಹೆತ್ತೆ, ಅವಳೇ ಭಾರತಿ. ದೇವಾ ! ನಮ್ಮಂಥ ಸಾಮಾನ್ಯ ಜನರ ಕೂಗು ಕೇಳುವವನು ನೀನೊಬ್ಬನೇ ಎಂದು ಆಗಾಗ್ಗೆ ನನ್ನಷ್ಟಕ್ಕೆ ನಾನೇ ಕೂಗಿಕೊಳ್ಳುತ್ತಲಿದ್ದೆ. ದುಡ್ಡಿನಿಂದ ಹಿಡಿದು ಯಾವ ಅನುಕೂಲತೆಗಳೂ ಇರಲಿಲ್ಲ. ಆದರೂ ಇದಾವುದನ್ನೂ ಅವರಿಗೆ ಬರೆಯುತ್ತಿರಲಿಲ್ಲ. ಅವರದೇ ತುಂಬಾ ಸಮಸ್ಯೆಗಳಿದ್ದಾಗ್ಗೆ ನಮ್ಮ ಸಮಸ್ಯೆಗಳನ್ನು ನಾವೇ ಬಿಡಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೆ. ಆ ಸಮಯಕ್ಕೆ ದೇಶದಲ್ಲಿಯ ವಾತಾವರಣ ನಿರ್ದಿಷ್ಟ ಸ್ವರೂಪಕ್ಕೆ ಬಂದಿತ್ತು. ಇವರಿಂದ ಪತ್ರಗಳೂ ಬರಹತ್ತಿದವು, ಆಗಾಗ್ಗೆ ತುಸು ಪುಡಿಗಾಸನ್ನು ಕಳಿಸುತ್ತಿದ್ದರು. ಮಗು ಹುಟ್ಟಿದ ಸುದ್ದಿಯನ್ನು ಇವರಿಗೆ ತಿಳಿಸಿದ ಕೂಡಲೇ ಮರು ಟಪಾಲಿಗೇ ಮಗುವಿಗೆ ***ಭಾರತಿ*** ಎಂದು ಹೆಸರಿಡಲು ಬರೆದಿದ್ದರು.

ಆಗ ಮೊಹರೆ ಹನುಮಂತರಾಯರು ತಮ್ಮ ಪತ್ರಿಕೆಗೆ ಸಂಬಂಧಪಟ್ಟ ಸಭೆಗಾಗಿ ಆಗಾಗ್ಗೆ ಮುಂಬೈಗೆ ಹೋಗುತ್ತಲಿದ್ದರು. ಹೋಗುವ ಪೂರ್ವದಲ್ಲಿ ಮತ್ತು ಹೋಗಿ ಬಂದ ನಂತರ ತಪ್ಪದೇ ನಮ್ಮ ಮನೆಯತನಕ ಬಂದು ಮಗುವನ್ನು ಮುದ್ದಾಡಿ ನಮ್ಮ ಸಮಾಚಾರವನ್ನು ಅವರಿಗೆ, ಅವರ ಸಮಾಚಾರವನ್ನು ನಮಗೆ ಕೊಡುತ್ತಲಿದ್ದರು. ಅವರ ಹೊಟ್ಟೆ ತಣ್ಣಗಿರಲಿ. ಅವರು ಬಂದರೆ ನನಗೆ ನನ್ನ ತಂದೆ ಬಂದಷ್ಟು ಸಂತೋಷವಾಗುತ್ತಿತ್ತು. ಒಂದೆರಡು ತಾಸು ನನ್ನ ಸಂಗಡ ಹರಟೆ ಹೊಡೆದರೆ ನನಗೆ ಒಂದು ಬಗೆಯ ಸಮಾಧಾನವಾಗುತ್ತಲಿತ್ತು.

ಆಗ ಕರ್ನಾಟಕ ರಾಜ್ಯದಲ್ಲಿ ಚಳುವಳಿಯು ತುಂಬಾ ಭರದಿಂದ ನಡೆದಿತ್ತು. ಸಾವಿರಾರು ಜನರು ಜೇಲು ಕಂಡಿದ್ದರು. ಲಾಠೀ ಚಾರ್ಜ್ - ಗೋಲಿಬಾರ್ ನಿತ್ಯ ಜೀವನವಾಗಿತ್ತು. ಆಗಿನ

ಪತ್ರಿಕೆಗಳಲ್ಲಿ ಪೂರ್ತಿ ಸುದ್ದಿಗಳು ಬರದಿದ್ದರೂ ಇವರು ಆಗಾಗ್ಗೆ ಎಲ್ಲ ವಿವರಗಳನ್ನು ಕಳಿಸುತ್ತಲಿದ್ದರು.

ಮಗು ಹುಟ್ಟಿದ ಆರು ತಿಂಗಳ ನಂತರ ತಾವು ಧಾರವಾಡಕ್ಕೆ ಶೀಘ್ರದಲ್ಲಿ ಬರುವ ಸಂದೇಶ ಬಂತು. ನನಗೆ ಒಂದು ವಿಧವಾಗಿ ಸಂತೋಷವಾದರೂ ಇನ್ನೊಂದು ವಿಧವಾಗಿ ತುಂಬಾ ಹೆದರಿಕೆ ಆದಂತಾಯಿತು. ಮುಂದೆ ನಾಲ್ಕೇ ದಿವಸಗಳಲ್ಲಿ ಅವರ ಓರ್ವ ಮಿತ್ರ ನಮ್ಮ ಮನೆಗೆ ಬಂದು ಈ ಸುದ್ದಿ ಹೇಳಿದ.

"ದಾಬಡೆ ಅವರು ಧಾರವಾಡಕ್ಕೆ ಬಂದಿದ್ದಾರೆ, ಮದಿಹಾಳದಲ್ಲೇ ಶ್ರೀ ಸಿ. ಎಮ್. ಕುಲಕರ್ಣಿ ಅವರ ಮನೆಯಲ್ಲಿರುವರು. ಮರುದಿನ ಬೆಳಿಗ್ಗೆ ಮಗುವಿನೊಡನೆ ನಿಮಗೆ ಭೆಟ್ಟಿಗೆ ಬರಲು ತಿಳಿಸಿರುವರು."

ಅದು 1943ರ ಏಪ್ರಿಲ್ ತಿಂಗಳ ಮೊದಲನೆಯ ವಾರ. ಮರುದಿನ ಬೆಳಿಗ್ಗೆ ಸರಿಯಾಗಿ 5-30ಕ್ಕೆ ಮಗುವನ್ನು ಎತ್ತಿಕೊಂಡು ಓಡುತ್ತಾ ಹತ್ತಿರ ಇದ್ದ ಸಿ. ಎಮ್. ಕುಲಕರ್ಣಿ ಅವರ ಮನೆಗೆ ಹೋದೆ. ಅವರು ಅಟ್ಟದ ಮೇಲೆ ನನ್ನ ದಾರಿ ಕಾಯುತ್ತ ಕುಳಿತಿದ್ದರು. ಮಗು ಆರು ತಿಂಗಳದವಳಾದಾಗ್ಗೆ ಅವಳಿಗೆ ತನ್ನ ತಂದೆಯನ್ನು ಕಾಣುವ ಸುಯೋಗ. ನನಗೆ ಏನು ಮಾಡಬೇಕು, ಏನು ಮಾತಾಡಬೇಕು ಎಂಬುದು ತಕ್ಷಣ ಹೊಳೆಯಲಿಲ್ಲ. ಅವರನ್ನು ಪ್ರತ್ಯಕ್ಷ ನೋಡಿದ್ದೇ ಒಂದು ವಿಧವಾಗಿ ಧನ್ಯತೆ ಅನಿಸಿತು. ಮಗುವನ್ನು ಅವರ ಕೈಯಲ್ಲಿ ಕೊಟ್ಟು ಶಿರಸಾಷ್ಟಾಂಗ ನಮಸ್ಕಾರ ಮಾಡಿ ಅವರನ್ನೇ ನೋಡುತ್ತ ಕುಳಿತೆ. ಅರ್ಧಗಂಟೆ ಅವರ ಸಂಗಡ ಮಾತನಾಡಿ ವಾಪಸ್ ಮನೆಗೆ ಬಂದೆ. ಮುಂದೆ ಒಂದೆರಡು ಸಲ ಮನೆಗೂ ಬಂದು ಹೋದರು. ಒಮ್ಮೆ ಇವರು ಮನೆಯಲ್ಲಿದ್ದಾಗ ಒಂದು ಘಟನೆ ಜರುಗಿತು. ಆಗ ಸಂಜೆ 4 ಗಂಟೆ. ಯಾರೋ ಸಂಶಯಾತ್ಮಕವಾಗಿ ನಮ್ಮ ಮನೆಯ ಮುಂದೇ ತಿರುಗಾಡುತ್ತಿದ್ದರು. ಆಗ ಇವರು ನನ್ನ ತಮ್ಮ ವೆಂಕಣ್ಣ (ಸುರೇಂದ್ರ ದಾನಿ) ನ ಸಂಗಡ ಹಿತ್ತಲು ಬಾಗಿಲಿನಿಂದ ಹೊರಬಿದ್ದು ಹೋಗಿಬಿಟ್ಟರು. ಕತ್ತಲಾದ ನಂತರ ಊರಲ್ಲಿ ಬೇರೊಬ್ಬ ಮಿತ್ರನ ಮನೆಗೆ ಮುಟ್ಟಿಸಿ ಬಂದದ್ದಾಗಿ ನನ್ನ ತಮ್ಮ ತಿಳಿಸಿದ. ಆದರೂ ಯಾವಾಗಾದರೊಮ್ಮೆ ಬೆಳಿಗ್ಗೆ 4-5 ಗಂಟೆಗೆ ನಮಗೆ ಮೊದಲೇ ತಿಳಿಸಿ ಮನೆಗೆ ಬಂದು, ಸ್ನಾನ ಉಪಹಾರ ಮಾಡಿಕೊಂಡು 5-30ರ ಪೂರ್ವದಲ್ಲಿಯೇ ಹೊರಬಿದ್ದು ಹೋಗುತ್ತಿದ್ದರು. ಆಗ ಅವರು ಹುಬ್ಬಳ್ಳಿಯಲ್ಲಿ ಕೇಶ್ವಾಪುರದ ಹತ್ತಿರ ಒಂದು ತೋಟದ ಮನೆಯಲ್ಲಿ ಇನ್ನೊಬ್ಬ ಭೂಗತವಾಸಿ ಅನಂತರಾವ ಸಾವಕಾರ ಇವರ ಸಂಗಡ ಇರುತ್ತಿದ್ದರು. ಆಗ ನಾನು ಒಮ್ಮೆ ಇವರ ಭೆಟ್ಟಿ ಕೇಳಿ ಒಂದು ತಾಸು ವೇಳೆ ನನ್ನ ಸಲುವಾಗಿ ಕೊಡಬೇಕೆಂದು ಕೇಳಿದ್ದೆ. ಎಲ್ಲ ಪ್ರಾಪಂಚಿಕ ವಿಷಯಗಳನ್ನು ಇವರಿಗೆ ಹೇಳಿ ತಲೆ ಹಗುರು ಮಾಡಿಕೊಳ್ಳಬೇಕೆಂದಿದ್ದೆ. ಹಾಗೆ ಮರುದಿನವೇ ಓರ್ವ ಮಿತ್ರನ ಮನೆಗೆ ಬರಹೇಳಿದರು. ಇವರು ತೀರಾ ಸಾದಾ ಜೀವಿ. ಬೇರೆಯವರು ಇವರನ್ನು ಹೇಗೆ ದುರುಪಯೋಗ ಮಾಡಿಕೊಳ್ಳುತ್ತಾರೆಂಬುದು ತಿಳಿಯುವದಿಲ್ಲ. ಇವರಿಗೆ ಭೆಟ್ಟಿಯಾಗಿ ನನ್ನ ಅಡಚಣೆಗಳನ್ನೆಲ್ಲ ಹೇಳಿದೆ.

# ನೀನೂ ಜೇಲಿಗೆ ಹೋಗು

"ನನ್ನ ಸಮಸ್ಯೆಗಳನ್ನೆಲ್ಲ ಬಿಡಿಸುವದು ನಿಮಗೆ ಸಾಧ್ಯವಿಲ್ಲ ಎಂಬ ಅರಿವು ನನಗಿದೆ. ಆದರೂ ನಿಮಗೆ ಇವೆಲ್ಲ ಗೊತ್ತಿರಲಿ ಎಂದೇ ಹೇಳುವೆ. ನಾನು ಯಾವ ಆಪ್ತರ ಮನೆಯಲ್ಲಿದ್ದರೂ ಮುಳ್ಳಿನ ಮೇಲೆ ನಿಂತಂತೆಯೇ ಇರುವೆ. ನಿಮ್ಮ ಮುಂದೆ ಮಾತಾಡಿದಂತೆ ನಡೆಯುವವರನ್ನು ನಾನು ಇನ್ನೂ ಕಾಣಬೇಕಾಗಿದೆ. ದುಡ್ಡಿನ ಅಡಚಣೆಯಂತೂ ನಮಗೆ ಬೆನ್ನೇ ಹತ್ತಿದೆ. ನನಗೆ ಬೇರೆ ಏನೂ ಬೇಡ. ಆದರೆ ಮಗುವಿನ ಹಾಲಿಗಾದರೂ ಹಣ ಬೇಡವೇ ? ಕೇಳಿದರೆ ಯಾರು ಕೊಡುತ್ತಾರೆ ? ಅದೆಷ್ಟೋ ಸಲ ಸರಳ ಉತ್ತರ ಸಹ ಬರುವದಿಲ್ಲ, ಬಂದರೆ ಬಿರುಸಿನ ಮಾತು. ನಾವು ನೀವು ಅವರ ಕೈಯಲ್ಲಿ ಉದ್ಧಾರವಾಗುತ್ತೇವೆ. ನನಗಂತೂ ಈ ಜೀವನ ಬೇಜಾರು ಬಂದಿದೆ. ನಿಮ್ಮ ಅಡಚಣೆ ನನಗೆ ಗೊತ್ತಿದೆ. ಆದರೆ ನಿಮಗೆ ಇದೆಲ್ಲ ಗೊತ್ತಿರಲಿ. ನೀವು ಮನಸ್ಸಿನಲ್ಲಿ ಇಲ್ಲದ ಗಾಳಿ ಗೋಪುರ ಕಟ್ಟಬೇಡಿರಿ. ಈ ಪರಿಸ್ಥಿತಿಯಲ್ಲಿ ನಾನೇನು ಮಾಡಬೇಕು ಹೇಳಿರಿ" ಎಂದು ಎಲ್ಲಾ ವಿಷಯ ಬಿಚ್ಚಿ ಹೇಳಿದೆ. ಅದಕ್ಕೆ ಅವರು ಕೊಟ್ಟಿದ್ದು ಒಂದೇ ಉತ್ತರ. "ನೀನೂ ಸತ್ಯಾಗ್ರಹ ಮಾಡಿ ಜೇಲಿಗೆ ಹೋಗು. ಅಲ್ಲಿ ಚಿಕ್ಕ ಮಗುವನ್ನು ತಾಯಿಯ ಸಂಗಡ ತೆಗೆದುಕೊಳ್ಳುವರು. ಹೀಗೆ ನಿನ್ನ ಈಗಿನ ಸಮಸ್ಯೆ ಬಗೆಹರಿಯುವದು" ಎಂದು. ಅದಕ್ಕೆ ನಾನು "ಹೀಂಗ ದೊಡ್ಡ ಮಾತು ಹೇಳಬ್ಯಾಡ್ರಿ. ನಾನು ಪ್ರತ್ಯಕ್ಷ ಏನು ಮಾಡಬೇಕು ಎಂಬುದನ್ನು ತಿಳಿಸಿ ಹೇಳಿರಿ ಎಂದೆ. ಅದಕ್ಕೆ ಅವರು ಹೇಳಿದ್ದು ಹೀಗೆ : "ನಾನು ನಿನಗೆ ಒಂದು ಯುದ್ಧ ವಿರೋಧಿ ಭಾಷಣ ಬರೆದು ಸೈಕ್ಲೋಸ್ಟೈಲ್ ಮಾಡಿ 100 ಪ್ರತಿ ಕೊಡುವೆ. ನೀನು ಅದನ್ನು ಇದೇ 9ನೇ ಅಗಸ್ಟ್‌ದಂದು ಧಾರವಾಡದ ಗಾಂಧೀ ಚೌಕಿಗೆ ಹೋಗಿ ಒಂದು ಕೂಟದಲ್ಲಿ ನಿಂತು ಎತ್ತರವಾದ ಧನಿಯಲ್ಲಿ ಇದನ್ನು ಓದಿ ಪ್ರತಿಗಳನ್ನು ಹಂಚು. ಆಗ ನಿನ್ನ ಇಷ್ಟಾರ್ಥ ಸಿದ್ಧಿಯಾಗುವದು" ಎಂದು ಹೇಳಿದರು. ಅವರು ಹೇಳಿದಂತೆ ಚಾಚೂತಪ್ಪದೆ ಮಾಡಿದೆ. ನನ್ನ ಸಂಗಡ ಹೋಗಲು ಶಾಂತಾಬಾಯಿ ಕರಮರಕರ ಅವರೂ ಬಂದರು. ಅವರು ಕರಪತ್ರ ಹಂಚಿದರು. ನಾನು ಶಕ್ಯವಾದಷ್ಟು ದೊಡ್ಡ ಧನಿಯಲ್ಲಿ ಅದನ್ನು ಓದಿದೆ. ಅಂದು ಬಹುಶಃ 11-8-1943 ಸಂಜೆ. ಆಗ ನಮ್ಮಿಬ್ಬರನ್ನಲ್ಲದೆ ನಮ್ಮ ಮಗಳನ್ನು ಎತ್ತಿಕೊಂಡಿದ್ದ ನನ್ನ ತಾಯಿ ಗಂಗಾಬಾಯಿಯವರನ್ನು, ಬುರ್ಲಿ ಪದ್ಮಕ್ಕರನ್ನು ಕೈದು ಮಾಡಿದರು. ಪಕ್ಕದಲ್ಲಿಯೇ ನಿಂತಿದ್ದ ನನ್ನ ಅಣ್ಣಾ ಲಕ್ಷ್ಮಣನನ್ನೂ ಕೈದು ಮಾಡಿ ಕರೆದುಕೊಂಡು ಹೋದರು. ನನಗೆ ನಿಜವಾಗಿಯೂ ಬಹಳ ಸಂತೋಷವಾಯ್ತು. ಯಾಕೆಂದರೆ ನಾನು ಯ್ಯಾವ ಆಪ್ತರ ಬಾಗಿಲಿಗೂ ಹೋಗಬೇಕಾಗಿರಲಿಲ್ಲ.

ಮರುದಿನ ಈ ಸುದ್ದಿ ವೃತ್ತಪತ್ರಿಕೆಯಲ್ಲಿ ಬಂತು. ಆಗ ನನ್ನ ಮಾಮಾ ಧಾರವಾಡ ಜಿಲ್ಲಾ ಕೋರ್ಟಿನಲ್ಲಿ ಶಿರಸ್ತೇದಾರನಾಗಿದ್ದ ಶ್ರೀನಿವಾಸರಾವ ದಾಬಡೆ ಅವರು ಬಂದು, ಒಂದು ಕ್ಷಮಾಪತ್ರ ನನ್ನ ಮುಂದೆ ಹಿಡಿದು ಅದಕ್ಕೆ ಸಹಿ ಮಾಡಲು ಒತ್ತಾಯಿಸಿದರು. ಹಾಗೆ ನೋಡಿದರೆ ನಾನು ಅವರ ಸಂಗಡ ಮನಬಿಚ್ಚಿ ಮಾತನಾಡಿರಲಿಲ್ಲ. ಅಂಥದರಲ್ಲಿಯೇ ಗಟ್ಟಿ ಮನಸ್ಸು ಮಾಡಿ "ಮಾಮಾ ಕ್ಷಮಿಸಿರಿ. ನಾನು ಎಲ್ಲಾ ವಿಚಾರಮಾಡಿ ನನ್ನ ಪತಿಯ ಆಶೀರ್ವಾದ ಪಡೆದೇ ಈ ಹೆಜ್ಜೆ ಇಟ್ಟಿರುವೆ. ಇದರ ಪರಿಣಾಮವನ್ನು ಸಂತೋಷದಿಂದ ಅನುಭವಿಸುತ್ತೇನೆ. ನಾನು ಈಗ ಪ್ರಬುದ್ಧಳು (ಆಗ ನನಗೆ 22 ವರುಷ). ನಾನು ಈ ಕ್ಷಮಾಪತ್ರಕ್ಕೆ ಸಹಿಮಾಡುವುದು ಸಾಧ್ಯವೇ ಇಲ್ಲ" ಎಂದು ಅತ್ಯಂತ ನಮ್ರವಾಗಿ ಹೇಳಿ ಅವರಿಗೆ ನಮಸ್ಕಾರ ಮಾಡಿ "ನಿಮ್ಮ ಆಶೀರ್ವಾದ ನನ್ನ ಮೇಲೆ ಸದಾ ಇರಲಿ" ಎಂದು ಹೇಳಿದೆ. ಅವರು ನಿರಾಶೆಗೊಂಡು ವಾಪಸ್ ಹೋದರು.

ಮರುದಿನ ಮತ್ತೊಂದು ನಾಟಕ, ಆಗ ಧಾರವಾಡದ ಡಿ.ಎಸ್.ಪಿ. ಶ್ರೀ ಕಾಮಟೆ ಅವರಿದ್ದರು. ಅವರು ನನ್ನನ್ನು ಕರೆಸಿ ಅತ್ಯಂತ ಸೌಜನ್ಯದಿಂದ ಮಾತನಾಡುತ್ತ "ಈಗ ದಾಬಡೆ ಅವರು ಎಲ್ಲಿರುವರು ಹೇಳಿರಿ. ನೀವು ಗಾಂಧೀವಾದಿಗಳು ಸತ್ಯವನ್ನೇ ಹೇಳಬೇಕು" ಎಂದರು. ಅದಕ್ಕೆ ನಾನು "ಶತಪ್ರತಿ ಸತ್ಯವನ್ನೇ ಹೇಳುವೆ" ಎಂದು ಪ್ರಾರಂಭಿಸಿ "ನಿಜ, ನಾನು ದಾಬಡೆ ಅವರನ್ನು ಅನೇಕ ಸಲ ಕಂಡಿರುವೆ. ಹಾಗೆ ನೋಡಿದರೆ ನಮ್ಮ ಸತ್ಯಾಗ್ರಹದ ಕಾರ್ಯಕ್ರಮವನ್ನೆಲ್ಲ ಅವರೇ ಹಾಕಿಕೊಟ್ಟರು. ಸಧ್ಯ ಅವರು ಧಾರವಾಡದಲ್ಲಿಯೇ ಇರಬಹುದು. ನಿರ್ದಿಷ್ಟ ಯಾವ ಸ್ಥಳದಲ್ಲಿರುವರು ಎಂಬುದು ಮಾತ್ರ ನನಗೆ ನಿಶ್ಚಿತ ಗೊತ್ತಿರುವದಿಲ್ಲ" ಎಂದು ಧೈರ್ಯದಿಂದ ಹೇಳಿದೆ. ಮುಂದೆ 16-8-43ರಂದು ನಮ್ಮ ವಿಚಾರಣೆ ಕೋರ್ಟಿನಲ್ಲಿ ನಡೆದು ನಮ್ಮಿಬ್ಬರಿಗೂ ನಾಲ್ಕು ತಿಂಗಳು ಸಾದಾ ಶಿಕ್ಷೆ ವಿಧಿಸಲಾಯ್ತು. ನಮ್ಮಿಬ್ಬರ ಕಂಕುಳಲ್ಲಿ ಮಗುವಿದ್ದುದರಿಂದ ಏನೋ ನಮಗೆ 'ಬ' ಕ್ಲಾಸ್ ಕೊಡಲಾಯ್ತು. ನಮ್ಮ ಸಂಗಡ ನನ್ನ ತಾಯಿ ಮತ್ತು ಪದ್ದಕ್ಕ ಬುರ್ಲಿಯವರನ್ನು ಬೆಳಗಾವಿ ಜೇಲಿಗೆ ಕರೆದುಕೊಂಡು ಹೋದರು. ನನ್ನ ಅಣ್ಣ ಲಕ್ಷ್ಮಣನನ್ನು ಧಾರವಾಡದಲ್ಲಿಯೇ ಇಡಲಾಯ್ತು. ಮುಂದೆ 15 ದಿವಸಗಳ ನಂತರ ಈ ಮೂವರ ಬಿಡುಗಡೆಯಾಯಿತು. ಹೀಗೆ ನನ್ನ ತಾಯಿ, ಮಗಳ ಉಡುಗೊರೆಯನ್ನು ಸಂತೋಷದಿಂದ ಸ್ವೀಕರಿಸಿದಳು.

ಬೆಳಗಾವಿ ಜೇಲಿನಲ್ಲಿ ನಮ್ಮ ವಾರಿಗೆಯ ಸುಮಾರು 50 ಹಳ್ಳಿಯ ಹೆಣ್ಣುಮಕ್ಕಳಿದ್ದರು ಮತ್ತು ನನ್ನ ಮಗಳ ವಾರಿಗೆಯ 20 ಕೂಸುಗಳೂ ಇದ್ದವು. ನಮ್ಮ ಸಂಗಡ ಬೆಳಗಾವಿ ಜಿಲ್ಲೆಯ ವೀರಪ್ಪ ಸುತಗಟ್ಟಿ ಇವರ ಹೆಂಡತಿ ಬಸಮ್ಮ, ವಾಮನರಾವ ಬಿದರಿ ಅವರ ಹೆಂಡತಿ ಪದ್ಮಾಬಾಯಿ, ಮಾಗಡಿ ಅವರ ಹೆಂಡತಿ ಲೀಲಾತಾಯಿ ಅವರೂ ಇದ್ದರು. ನನ್ನ ತಾಯಿ ಅಲ್ಲಿದ್ದಾಗ ಯಾವ ಸಮಸ್ಯೆಯನ್ನೂ ಎಬ್ಬಿಸಲಿಲ್ಲ. ನಿತ್ಯ ಮೂರು ಹೊತ್ತು ಭಜನೆ ಮಾಡುವಳು, ಸಾಕಷ್ಟು ಪುಸ್ತಕ ಓದುವಳು, ಒಪ್ಪತ್ತು ಊಟ ಮಾಡಿ ಸಂಜೆ ನೀರು ಕುಡಿದು ಮಲಗುವಳು. ಅತ್ಯಂತ ಸಮಾಧಾನದಿಂದ ಇದ್ದಳು. ನಾನು ದಿನಾಲು ಈ ಮಕ್ಕಳನ್ನೆಲ್ಲ ಒಂದೆಡೆ ಕರೆದುಕೊಂಡು ಒಂದೆರಡು ತಾಸು ಕಳೆಯುತ್ತಲಿದ್ದೆ. ಹಳ್ಳಿಯ ಹೆಂಗಸರು ಅನೇಕ ಕತೆ ಹೇಳುವರು, ಜನಪದ

ಗೀತೆಗಳನ್ನು ಸುಸ್ವರದಿಂದ ಹೇಳುವರು. ಒಂದು ವಿಧವಾಗಿ ನನಗೆ ಇದೊಂದು ರಂಜನೀಯ ಕೆಲಸವಾಗಿತ್ತು. ನಾನು ಅವರ ಸಂಗಡ ತೀರ ಹತ್ತಿರದವಳಾಗಿದ್ದೆ. ಕೆಲವು ಕಲಿತವರು ತಾವು ದೊಡ್ಡವರೆಂದುಕೊಂಡು ಅವರ ಕಡೆಗೆ ಗಮನ ಕೊಡುತ್ತಿರಲಿಲ್ಲ. ಬೇಕಾದಾಗ್ಗೆ ಅವರ ಸಂಗಡ ಆತ್ಮೀಯತೆಯಿಂದ ಮಾತನಾಡಿ ಅವರಿಗೆ ಪತ್ರ ಬರೆದು ಕೊಡುತ್ತಿದ್ದೆ. ವೃತ್ತಪತ್ರಿಕೆ ಓದಿ ಸುದ್ದಿ ಹೇಳುತ್ತಲಿದ್ದೆ. ಒಂದು ದಿನ ಭೂಗತರಾಗಿದ್ದ ವೀರಪ್ಪ ಸುತಗಟ್ಟಿ ಅವರನ್ನು ಹಿಡಿಯಲು ಪೊಲೀಸ್‌ರು ಅವರ ಮೇಲೆ ಗುಂಡು ಹಾರಿಸಿದರೆಂದೂ ಅದು ಅವರಿಗೆ ತಗುಲಿದೆಯೆಂದೂ ಸುದ್ದಿ ಬಂತು. ಅಂದು ನಾವು ಯಾರೂ ಊಟ ಮಾಡದೆ ಬಸಮ್ಮನ ಹತ್ತಿರ ಕುಳಿತು ಅವಳಿಗೆ ಸಮಾಧಾನ ಹೇಳುತ್ತಲಿದ್ದೆವು. ಅವರು ಹೋಗಿ ತನ್ನ ಪತಿಯನ್ನು ಆಸ್ಪತ್ರೆಯಲ್ಲಿ ನೋಡಿಕೊಂಡು ಬಂದಮೇಲೆ ನಾವೆಲ್ಲ ಸಮಾಧಾನದ ನಿಟ್ಟುಸಿರು ಬಿಟ್ಟು ಊಟ ಮಾಡಿದೆವು. ಗುಂಡು ಅವರ ರಟ್ಟೆಗೆ ಬಡೆದಿತ್ತು, ಜೀವಕ್ಕೆ ಅಪಾಯವಿರಲಿಲ್ಲ. ಸುಮಾರು ಅದೇ ಸಮಯಕ್ಕೆ ಇನ್ನೊಂದು ದುರ್ವಾರ್ತೆ ಬಂದಿತ್ತು. ಹೊಸರಿತ್ತಿಯಲ್ಲಿ ಪೊಲೀಸ್‌ರು ಗುಂಡು ಹಾರಿಸಿದ್ದರಿಂದ ಮಹಾದೇವಪ್ಪ ಮೈಲಾರ ಮತ್ತು ಅವರ ಇಬ್ಬರು ಸಂಗಡಿಗರು ಮೃತರಾಗಿದ್ದರು.

ಆಗ ಕರಮರಕರ, ಹುಕ್ಕೇರಿಕರ, ಬುರ್ಲಿ ಮೊದಲಾದವರೆಲ್ಲ ಜೇಲಿಗೆ ಹೋಗಿದ್ದರು. ದಾಬಡೆ ಅವರು ಮಾತ್ರ ಇನ್ನೂ ಭೂಗತರಾಗಿಯೇ ಇದ್ದರು. ಬೆಳಿಗ್ಗೆ, ಸಂಜೆಗೆ ನಿತ್ಯ ನಾನು ದೇವರಿಗೆ ಬೇಡಿಕೊಳ್ಳುತ್ತಲಿದ್ದೆ. "ದೇವರೇ, ದಾಬಡೆ ಅವರು ಬೇಗನೆ ಜೇಲಿಗೆ ಬರುವಂತೆ ಮಾಡು. ಅವರು ಎಲ್ಲಿಯೇ ಇರಲಿ, ಬೇಕಾದಷ್ಟು ಕೆಲಸ ಮಾಡಲಿ, ಆದರೆ ಅವರ ಆರೋಗ್ಯ ಚೆನ್ನಾಗಿರಲಿ ಮತ್ತು ಅವರು ಜೀವಂತ ಬಾಳಲಿ" ನನಗೆ ನಿಜವಾಗಿಯೂ ದೇವರು ನನ್ನ ಮೊರೆ ಕೇಳುವ ಎಂದು ಭಾಸವಾಗುತ್ತಿತ್ತು.

ನಾವು ಜೈಲಿನಲ್ಲಿ ನಿತ್ಯ ಮುಂಜಾನೆ, ಸಂಜೆ ಸಾಮೂಹಿಕ ಪ್ರಾರ್ಥನೆ ಮಾಡುತ್ತಲಿದ್ದೆವು. ಅದೆಷ್ಟೋ ಸಲ ನಮ್ಮ ಭಾರತಿ ಎಲ್ಲೆಲ್ಲಿಯೋ ಇದ್ದು ಸಂಜೆ ನನ್ನ ಕಡೆಗೆ ಬರುವಳು. ಅಲ್ಲಿ ಇದ್ದ ಎಲ್ಲವ್ವ ಎಂಬ ವಾರ್ಡರ್ ಅವಳನ್ನು ತುಂಬಾ ಪ್ರೀತಿ ಮಾಡುತ್ತಿದ್ದಳು. ಅವಳನ್ನು ನೋಡಿದರೆ ಇವಳೇ ಅವಳ ಕಡೆಗೆ ಓಡುವಳು ಅಥವಾ ಅವಳೇ ಎತ್ತಿಕೊಂಡು ಹೋಗುವಳು. ಹೀಗೆ ನಮ್ಮ ಜೇಲಿನ ದಿವಸಗಳು ತುಂಬಾ ಸಂತಸದಲ್ಲಿ ಹೋಗುತ್ತಲಿದ್ದವು.

ಅಂದು 30-10-43, ಮಗಳ ಪ್ರಥಮ ಹುಟ್ಟುಹಬ್ಬ. ಭೂಗತರಾಗಿದ್ದ ಇವರ ಪತ್ರ ಬಂದಿತ್ತು ಅವಳಿಗೆ ತಮ್ಮ ಆಶೀರ್ವಾದ ಕಳಿಸುತ್ತ ಒಂದು ಸ್ಮರಣೀಯ ಘಟನೆ ಜರುಗಬಹುದೆಂದು ಬರೆದಿದ್ದರು. ಅಂದು ಮಧ್ಯಾಹ್ನ 2 ಗಂಟೆಗೆ ಜೇಲರ್ ಸಾಹೇಬರು ನಮ್ಮಿಬ್ಬರನ್ನು (ಕರಮರಕರ ಹೆಂಡತಿ ಮತ್ತು ನಾನು) ಕರೆಕಳುಹಿಸಿದರು. ನಾವಿಬ್ಬರೂ ಮಗು ಎತ್ತಿಕೊಂಡೇ ಜೇಲರ್ ಕೋಣೆಗೆ ಹೋದೆವು. ಅಲ್ಲಿ ನಿಜವಾಗಿಯೂ ನಮಗೆ ಆಶ್ಚರ್ಯ ಕಾದಿತ್ತು. ಭೂಗತರಾಗಿದ್ದ ನನ್ನ ಪತಿಯೇ ಭೆಟ್ಟಿಗೆ ಬಂದಿದ್ದರು. ಕ್ಷಣಕಾಲ ನನಗೆ ಇದು ಕನಸೋ, ನಿಜವೋ ಎಂದು ನಂಬಲಾಗಲಿಲ್ಲ. ನನ್ನನ್ನು ನಾನು ಚಿವುಟಿಕೊಂಡು ನೋಡಿದೆ. ಆಗ ನನಗೆಷ್ಟು ಸಂತೋಷವಾಯಿತು ಎಂಬುದನ್ನು ಶಬ್ದಗಳಲ್ಲಿ ವರ್ಣಿಸುವುದೇ ಸಾಧ್ಯವಿಲ್ಲ. ಹೀಗೆ ಅರ್ಧಗಂಟೆ ಸಂತಸದಿಂದ ಕಳೆದೆವು. ಅವರು

ಮಗಳು ಭಾರತಿಯನ್ನು ಎತ್ತಿಕೊಂಡು ಮುದ್ದಾಡಿ ಹುಟ್ಟಿದ ಹಬ್ಬದ ಕಾಣಿಕೆ ಎಂದು ಎರಡು ಬುಟ್ಟಿ ಮಾವಿನ ಹಣ್ಣು ಕೊಟ್ಟು ಎಲ್ಲರಿಗೂ ಹಂಚಲು ಹೇಳಿದರು. ಅವರ ಸಂಗಡ ಅವರ ಪರಮಮಿತ್ರ ಪಿ. ಕೆ. ಜೋಶಿ ಅವರೂ ಬಂದಿದ್ದರು. ಹೀಗೆ ಅದೊಂದು ಕನಸಿನಂತೆ ನಡೆದು ಹೋಯಿತು. ಒಂದು ಕ್ಷಣ ಇವರು ಯಾಕಾದರೂ ಇಲ್ಲಿಗೆ ಬಂದರಪ್ಪ ಎಂದೆನಿಸಿತು.

ಹೋದ ಸಲ ಇವರು ಜೇಲಿಗೆ ಬಂದಾಗ ಕಛೇರಿಯಲ್ಲಿಯೇ ಕೆಲಸ ಮಾಡುತ್ತಿದ್ದುದರಿಂದ ಅಲ್ಲಿ ಬಹಳ ಜನ ಪೊಲೀಸ್‌ರ ಪರಿಚಯವಾಗಿತ್ತು. ಕೆಲವರು ಇವರನ್ನು ನೋಡಿ ಸುಮ್ಮನೇ ಮುಗುಳ್ನಗುತ್ತಾ ಹೋದರು. ಒಂದು ವೇಳೆ ಇಲ್ಲಿಯೇ ಕೈದಾಗಿದ್ದರೆ ಹೆಂಡತಿಯನ್ನು ನೋಡ ಹೋಗಿ ಕೈದಾದ ಆರೋಪ ಬರುತ್ತಲಿತ್ತು. ನಿಜ ಸಂಗತಿ ಎಂದರೆ ಬೆಳಗಾವಿಯ ಫುಲ್‌ಭಾಗ ಗಲ್ಲಿಯಲ್ಲಿ ವಾಸಕ್ಕೆ ತಾತ್ಪೂರ್ತಿಕ ಕೋಣೆಯನ್ನು ತೆಗೆದುಕೊಂಡಿದ್ದರು. ಅದರ ಪಕ್ಕದ ಮನೆಯಲ್ಲಿಯೇ ಜೇಲಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಚಾಟೆ ಎಂಬ ಕಾರಕೂನರಿದ್ದರು. ಅವರ ಮೂಲಕ ನನಗೆ ಆಗಾಗ್ಗೆ ಪತ್ರಗಳನ್ನು ಕಳಿಸುತ್ತಲಿದ್ದರು.

ಹೀಗೆ ಕಣ್ಮುಚ್ಚಿ ತೆಗೆಯುವದರಲ್ಲಿಯೇ ನಮ್ಮ ನಾಲ್ಕು ತಿಂಗಳು ಮುಗಿದು, ನಮ್ಮ ಬಿಡುಗಡೆ ಬಂದೇ ಬಿಟ್ಟಿತೆಂದು ಅನಿಸಿತು. ಮತ್ತೆ ನನ್ನ ಮುಂದೆ 'ಎಲ್ಲಿ ಹೋಗಲಿ' ಎಂಬ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಬಂದು ನಿಂತಂತಾಯ್ತು. ನನ್ನ ಬಿಡುಗಡೆಯ ದಿವಸ ದಾಬಡೆ ಅವರು ಬೆಳಗಾವಿಯಲ್ಲಿಯೇ ಇದ್ದರು. ಅವರ ಸಂಗಡ ನಾಲ್ಕು ದಿವಸ ಫುಲ್‌ಬಾಗ ಗಲ್ಲಿಯ ಕೋಣೆಯಲ್ಲಿ ಕಳೆದೆವು. ಅದು ಬಹುಶಃ 1943ರ ಡಿಸೆಂಬರ್ ತಿಂಗಳ ಎರಡನೆಯ ವಾರ ಇರಬೇಕು. ಮತ್ತೆ ನನ್ನ ಸಮಸ್ಯೆಯನ್ನು ಇವರ ಮುಂದೆ ಇಟ್ಟೆ. ಪುನಃ ಜೇಲಿಗೆ ಹೋಗಲು ಅವರ ಅಪ್ಪಣೆ ಕೇಳಿದೆ. ಹಾಗೆ ನೋಡಿದರೆ ನಾನು ಜೇಲಿನಲ್ಲಿದ್ದಾಗ್ಗೆ ಹೆಚ್ಚು ಸಂತಸದಿಂದ ವೇಳೆ ಕಳೆದಿದ್ದೆ. ಅಲ್ಲಿ ನನಗೆ ಯಾರ ಹಂಗೂ ಇರಲಿಲ್ಲ. ಇವರು ನನ್ನ ಸೂಚನೆಗೆ ಒಪ್ಪಿಗೆ ಕೊಡಲಿಲ್ಲ. "ಈಗ ವಾತಾವರಣ ತಣ್ಣಗಾಗುತ್ತಲಿದೆ. ಅಲ್ಲದೆ ಇಷ್ಟರಲ್ಲಿ ನನ್ನ ಸರದಿ ಬರಲಿದೆ. ಅದಕ್ಕೇ ನೀನೂ ಅಲ್ಲಿರುವದು ಬೇಡ" ಎಂದರು. ನಾನು ಒತ್ತಾಯಿಸುತ್ತ "ಅದಕ್ಕಾಗಿಯೇ ನಾವು ಬೇರೆ ಬೇರೆ ಕಡೆಗೆ ಇರದೇ ನಾನು ಸಹ ಜೇಲಿನಲ್ಲಿಯೇ ಇರುವದು ಎಷ್ಟು ಚಂದ ! ನಿಮ್ಮ ಅನೇಕ ಮಿತ್ರರು ತಾವಿಬ್ಬರೂ ಜೇಲಿನಲ್ಲಿದ್ದಂತೆ ನಾವೂ ಯಾಕೆ ಇರಬಾರದು ?" ಎಂದು ವಾದಿಸಿದೆ. ನನಗೆ ಪರವಾನಿಗೆ ದೊರೆಯಲಿಲ್ಲ, ತುಂಬಾ ನಿರಾಶಳಾದೆ. ಇವರು ಒಮ್ಮೆ ನಿರ್ಣಯ ತೆಗೆದುಕೊಂಡರೆ ಎಂದೂ ಬದಲಾಯಿಸುವವರಲ್ಲ ಎಂಬ ಅರಿವು ನನಗಿತ್ತು.

ನನ್ನ ಒಡಹುಟ್ಟಿದ ತಮ್ಮನಂತೆಯೇ ಇದ್ದು ಮುಂಬೈಯಲ್ಲಿ ವಾಸಿಸುವ ಸತ್ಯಬೋಧ ಸಿಂಗೀತ ಅವರ ಮನೆಗೆ ಹೋಗಲು ಹೇಳಿದರು. ಹಾಗೆ ಅವರ ಸಂಗಡ ಮಾತನಾಡಿಯೂ ಬಂದಿದ್ದರಂತೆ. ಅಲ್ಲದೇ ಅಕಸ್ಮಾತ್ ಅವರೂ ಆಗ ಇಲ್ಲಿಯೇ ಇದ್ದರು. ಅವರ ಸಂಗಡ ಮುಂಬೈಗೆ ಹೋದೆ, ಅಲ್ಲಿ ಒಂದೆರಡು ತಿಂಗಳು ಇರುವ ಯೋಚನೆ ಇತ್ತು. ಆಗ ನಿತ್ಯ ದೇವರಲ್ಲಿ ನನ್ನದು ಒಂದೇ ಪ್ರಾರ್ಥನೆಯಿತ್ತು. 'ದೇವರೆ, ಇವರ ಅಜ್ಞಾತವಾಸವನ್ನು ಬೇಗ ಮುಗಿಸು.' ಕೊನೆಗೆ ನನ್ನ ಪ್ರಾರ್ಥನೆಗೆ ದೇವರು ಓಗೊಟ್ಟ.

# ಸಂತಸ ತಂದ ಬಂಧನದ ಸುದ್ದಿ

ಅದು 19-1-1944. ಅಂದಿನ ಕ್ರಾನಿಕಲ್ ಪತ್ರಿಕೆಯಲ್ಲಿ 16-1-44ನೇ ದಿನಾಂಕ ದಾಬಡೆಯವರು ಧಾರವಾಡದಲ್ಲಿ ಕೈದು ಮಾಡಲ್ಪಟ್ಟ ವರ್ತಮಾನ ಬಂದಿತ್ತು. ಈ ಸಮಾಚಾರವನ್ನು ನನ್ನ ಮುಂದೆ ಹೇಳಬೇಕೇ ? ಹೇಳಿದರೆ ಅದರ ಪರಿಣಾಮ ಏನಾಗಬಹುದು ಎಂದು ಸಿಂಗೀತ ದಂಪತಿಗಳು ವಿಚಾರ ನಡೆಯಿಸಿದ್ದರು. ಅವರ ಈ ಗುಜುಗುಜು ನನಗೆ ತಿಳಿದು "ನೀವು ಏನೇ ಇದ್ದರೂ ಹೇಳಿರಿ" ಎಂದು ದುಂಬಾಲು ಬಿದ್ದೆ. ಅದಕ್ಕೆ ಶ್ರೀ ಸಿಂಗೀತ ಅಂದಿನ ಮುಂಬೈ ಕ್ರಾನಿಕಲ್ ಸುದ್ದಿಯನ್ನು ನನ್ನ ಮುಂದೆ ಹಿಡಿದರು. ನಿಜವಾಗಿಯೂ ನನಗೆ ಹಿಡಿಸಲಾರದಷ್ಟು ಆನಂದವಾಯ್ತು. ದೇವರೆ ! ನನ್ನ ಕೂಗು ಕೇಳಿ ದಾಬಡೆ ಅವರನ್ನು ಒಂದು ಸಂಕಟದಿಂದ ಪಾರು ಮಾಡಿದೆ ಎಂದುಕೊಂಡು, ದೇವರ ಮುಂದೆ ತುಪ್ಪದ ದೀಪ ಹಚ್ಚಿ ಕೈ ಮುಗಿದೆ. ಅವರಿಗೆ ಇದನ್ನು ನೋಡಿ ತುಂಬಾ ಆಶ್ಚರ್ಯವಾಯಿತು. ಆಗ ನಾನು "ಭೂಗತರಿದ್ದವರು ಕೈದು ತಪ್ಪಿಸಲು ಯತ್ನಿಸಿದರೆ ಅವರ ಮೇಲೆ ಗುಂಡು ಹಾರಿಸಲು ಸರಕಾರ ಆಜ್ಞೆ ಹೊರಡಿಸಿದೆ. ಕಾರಣ ಇವರು ಆ ಸಂಕಟದಿಂದ ಮುಕ್ತರಾದರೆಂದೇ ನನಗೆ ಸಂತಸವಾಯಿತು" ಎಂದು ಹೇಳಿದೆ.

ಮುಂದೆ ಅಷ್ಟೇ ವೇಗದಿಂದ ನಾನು ಧಾರವಾಡಕ್ಕೆ ಹೊರಟೇ ಬಿಟ್ಟೆ. ಸಂಜೆ 5 ಗಂಟೆಗೆ ಧಾರವಾಡ ತಲುಪಿದೆ. ದಾಬಡೆ ಅವರಿಗೆ 30 ತಿಂಗಳು ಕಠಿಣ ಶಿಕ್ಷೆಯಾದ ವರ್ತಮಾನ ನನಗಾಗಿ ರೈಲುನಿಲ್ದಾಣದಲ್ಲಿಯೇ ಕಾದಿತ್ತು. ನನ್ನ ಸಾಮಾನುಗಳನ್ನು ಘಾರ್ಗಿ ಅವರ ಮನೆಯಲ್ಲಿಯೇ ಇಟ್ಟು ಧಾರವಾಡದ ಸಬ್‌ಜೇಲಿಗೆ ಓಡಿದೆ. ಎಲ್ಲ ಕೈದಿಗಳ ಬಂದೀ ಆಗಿತ್ತು. ಆದರೆ ದಾಬಡೆ ಅವರು ಜೇಲರ ಸಂಗಡ ತುಂಬಾ ಉತ್ಸಾಹದಿಂದ ಹರಟುತ್ತಾ ಕುಳಿತಿದ್ದನ್ನು ಕಣ್ಣು ತುಂಬಾ ನೋಡಿ ಸಂತೋಷಪಟ್ಟೆ. ಹಾಗೆ ಅವರನ್ನು ಅಧಿಕೃತವಾಗಿ ಕಣ್ತುಂಬಾ ನೋಡದೆ ಹದಿನೆಂಟು ತಿಂಗಳು ಉರುಳಿದ್ದವು. ಅವರು ಜೇಲಿನಲ್ಲಿದ್ದುದು ಅಜ್ಞಾತವಾಸಕ್ಕಿಂತ ಉತ್ತಮವೆಂದೇ ನನ್ನ ಅಭಿಪ್ರಾಯ. ಹೃದಯ ತುಂಬಿದ ನಾಲ್ಕು ಮಾತುಗಳನ್ನಾಡುತ್ತ ಮಗುವನ್ನು ಎತ್ತಿಕೊಂಡು ಮುದ್ದಾಡಿದರು.

ಮರುದಿನ ಮಧ್ಯಾಹ್ನ ಗಾಡಿಯಿಂದ ಇವರನ್ನು ವಿಸಾಪೂರದ (ಅಹ್ಮದನಗರ) ಜೇಲಿಗೆ ಸಾಗಿಸುವುದಾಗಿ ತಿಳಿಯಿತು. ನನಗೂ ಪುಣೆಯವರೆಗೆ ಬರಲು ಹೇಳಿದರು. ರೈಲು ತಿಕೀಟು ವ್ಯವಸ್ಥೆ ಮಾಡಲಾಗಿದೆ ಎಂದರು. ಕರಮರಕರ ಮತ್ತು ಕೆಲವು ಮಿತ್ರರು ರೈಲುನಿಲ್ದಾಣಕ್ಕೆ ಇವರನ್ನು ಬೀಳ್ಕೊಡಲು ಬಂದಿದ್ದರು. ಅವರ ಸಂಗಡ ಇಬ್ಬರು ಪೊಲೀಸ್‌ರಿದ್ದರು. ಎಲ್ಲರೂ ಒಂದೇ ಡಬ್ಬಿಯಲ್ಲಿ ಹತ್ತಿದೆವು. ನಾವು ಅದೆಷ್ಟೋ ದಿವಸಗಳಿಂದ ಹೀಗೆ ಕೂಡಿರಲಿಲ್ಲ, ಮಾತಾಡಿರಲಿಲ್ಲ,

ಪ್ರವಾಸ ಮಾಡಿರಲಿಲ್ಲ. ಒಂದು ವಿಧವಾಗಿ ನನಗೆ ತುಂಬಾ ಸಂತೋಷವೇ ಆಯಿತು. ನಮ್ಮ ಗಾಡಿಯಲ್ಲಿಯ ಪ್ಯಾಸೆಂಜರ್ಸ್, ಪೊಲೀಸ್‌ರು, ನಮ್ಮ ಮಗಳು ಭಾರತಿ ಎಲ್ಲರೂ ಮಾತಾಡುತ್ತಾ ಕುಳಿತಿದ್ದೆವು. ಹದಿನೆಂಟು ತಿಂಗಳ ಪುರಾಣ ಮುಗಿಯಬೇಕಲ್ಲ !

ಪುಣೆ ನಿಲ್ದಾಣ ಸಮೀಪಕ್ಕೆ ಬಂದಂತೆ ಇನ್ನು ಮೂವತ್ತು ತಿಂಗಳು ಅಗಲುವಿಕೆ ಕಾದಿದೆಯಪ್ಪಾ ಎಂಬ ಕೊರಗು. ಇಬ್ಬರ ಕಣ್ಣಲ್ಲಿಯೂ ನೀರು ಒಸರುತ್ತಿತ್ತು. ಅಷ್ಟರಲ್ಲಿಯೇ ದೈವವಶಾತ್ ಒಂದು ನಾಟಕ ದೇವರಿಂದ. ವಿಸಾಪೂರಕ್ಕೆ ಹೋಗುವ ಗಾಡಿ ಹೊರಟು ಹೋಗಿತ್ತು. ಮರುದಿನ ಸಂಜೆ 5 ಗಂಟೆಯವರೆಗೆ ಗಾಡಿ ಇರಲಿಲ್ಲ. ಹೀಗಾಗಿ ಪುಣೆಯಲ್ಲಿ 24 ತಾಸು ಕಾಯಬೇಕಾಯ್ತು.

ನಮ್ಮ ಸಂಗಡ ಬಂದ ಪೊಲೀಸ್‌ರಿಗೆ ದಾಬಡೆಯವರನ್ನು ಎಲ್ಲಿಡಬೇಕೆಂಬ ಸಮಸ್ಯೆ. ಪಕ್ಕದಲ್ಲಿದ್ದ ಸಬ್ ಜೇಲ್ ಲಾಕಪ್ಪುಗಳಲ್ಲಿ ಕೇಳಿ ಬಂದರು. ಸಮಸ್ಯೆ ಬಗೆಹರಿಯಲಿಲ್ಲ. ಆದಕ್ಕೆ ಅವರು ದಾಬಡೆಯವರನ್ನೇ ಈ ಸಮಸ್ಯೆ ಬಿಡಿಸಲು ಕೇಳಿಕೊಂಡರು. ದಾಬಡೆಯವರು "ನನ್ನ ವ್ಯವಸ್ಥೆ ಇದೆ. ಆದರೆ ನೀವು ಬೇರೆ, ನಾವು ಬೇರೆ ಇರಬೇಕಾಗುವದು. ನೀವು ಏನೂ ವೆಚ್ಚ ಮಾಡಬೇಕಾಗಿಲ್ಲ" ಎಂದು ಹೇಳಿದರು. ನಿರ್ವಾಹವಿಲ್ಲದೆ ಪೊಲೀಸ್‌ರು ಅದಕ್ಕೆ ಒಪ್ಪಿದರು.

ಪೊಲೀಸ್‌ರನ್ನು ಡೆಕ್ಕನ್ ಜಮಖಾನಾದಲ್ಲಿರುವ ಹಿಂದೀ ಪ್ರಚಾರ ಸಭೆಯಲ್ಲಿಳಿಸಿ ನಾವು ಕರ್ವೇ ರಸ್ತೆಯಲ್ಲಿದ್ದ ಇವರ ಭೂಗತ ಸ್ಥಳಕ್ಕೆ ಬಂದೆವು. ಅಲ್ಲಿ ಇವರ ಮಿತ್ರ ಕೃಷ್ಣ ಸಂಗಮ ಅವರು ವಾಸಿಸುತ್ತಿದ್ದರು. ಇವರ ಅನೇಕ ಮಿತ್ರರೂ ಇದ್ದರು, ಎಲ್ಲರಿಗೂ ಆಶ್ಚರ್ಯ. ಅಷ್ಟರಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಅದನ್ನು ಮುಗಿಸಿ ಎಲ್ಲರೂ ಹೊರಟು ಹೋಗಿ ಆ ಕೋಣೆಯನ್ನು ಪೂರ್ತಿ ನಮಗೆ ಬಿಟ್ಟಿದ್ದರು. ಈ ಅವಧಿಯನ್ನು ತುಂಬಾ ಸಂತೋಷದಿಂದ ಕಳೆದೆವು. ಬೆಳಗಿನತನಕ ನಮ್ಮವೇ ಮಾತುಗಳು.

ಮರುದಿನ ಸಂಜೆ 5 ಗಂಟೆಗೆ ಇವರ ಮಿತ್ರರೆಲ್ಲ ರೈಲುನಿಲ್ದಾಣಕ್ಕೆ ಬಂದು ಇವರನ್ನು ಬೀಳ್ಕೊಟ್ಟರು. ಕೆಲವರು ಹಾರ ಹಾಕಿದರು, ನಾನು ವಾಪಸ್ ಬಂದೆ. ಎಲ್ಲರೂ ಮಲಗಿದ ಮೇಲೆ ನನ್ನ ಹಾಸಿಗೆಯ ಮೇಲೆಯೇ ಕುಳಿತು ಒಂದು ತಾಸಿನವರೆಗೆ ಅತ್ತೆ. ಅತ್ತು ಮಾಡುವುದೇನು ? ಎಲ್ಲಿಗೆ ಹೋಗಲಿ ? ಈ 30 ತಿಂಗಳು ಹೇಗೆ ಕಳೆಯಲಿ ? ಎಂಬ ವಿಚಾರ ಬಂದು ದೇವರೇ ನೀನೇ ಕಾಪಾಡು ಮಾರ್ಗದರ್ಶನ ಮಾಡು ಎಂದು ಆತನಿಗೆ ಮೊರೆಯಿಟ್ಟೆ, ಮನಸ್ಸಿನಲ್ಲಿಯೇ ಚೀರಿಕೊಂಡೆ. ನಾನು ನಿಜವಾಗಿ ನಡುಗಿಹೋದೆ. ಮರುಕ್ಷಣವೇ ಅಂತರಾತ್ಮದ ಧ್ವನಿ "ನಡುಗಿ ಕೈಕಾಲು ಕಳಕೊಂಡು ಏನು ಮಾಡುವಿ ? ಧೀರಳಾಗಿ ಪ್ರತ್ಯಕ್ಷ ಜೀವನವನ್ನು ಎದುರಿಸು. ದೇವರು ನಿನ್ನ ಬೆನ್ನಿಗೆ ಇದ್ದಾನೆ. ಧೈರ್ಯಗುಂದಬೇಡಾ."

ಸಧ್ಯದ ಪರಿಸ್ಥಿತಿಯಲ್ಲಿ ನಾನು ಮೂರು ಸಮಸ್ಯೆಗಳನ್ನು ಎದುರಿಸುವುದಿತ್ತು. ಅದಕ್ಕೆ ಸಿದ್ಧತೆ ಬೇಕು.

1 ನಮ್ಮವರೆಂಬುವವರ ಕುತ್ಸಿತ ಟೀಕೆ

2 ಆರ್ಥಿಕ ತೊಂದರೆ

3 ಸಮಾಜದ ವಕ್ರದೃಷ್ಟಿ

ಇವರಿಗೆ ಇಷ್ಟೊಂದು ಚಿಕ್ಕ ಮಾತು ಹೇಗೆ ತಿಳಿಯಲಿಲ್ಲ ? ನಾನೂ ಈ ಸಂದರ್ಭದಲ್ಲಿ ಜೇಲಿಗೆ ಹೋಗಿಬಿಟ್ಟಿದ್ದರೆ ನಮ್ಮ ಜೀವನದ ತಿರುವೇ ಬದಲಾಗುತ್ತಿತ್ತು. ಆದರೆ ಸಧ್ಯದ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಲು ಸಿದ್ಧಳಾಗಿ ಧಾರವಾಡಕ್ಕೆ ಬಂದೆ. ಹೇಗೋ ಮರ್ಯಾದೆಯಿಂದ ವೇಳೆ ಕಳೆಯುತ್ತಲಿದ್ದೆ. ಹಾಗೆ ನೋಡಿದರೆ ನನಗೆ ಮೂವರು ಅಣ್ಣಂದಿರಂತೆ. ಇವರಿಗೂ ಮೂವರು ಅಣ್ಣಂದಿರು. (ಇಬ್ಬರು ಹುಬ್ಬಳ್ಳಿಯಲ್ಲಿ, ಒಬ್ಬರು ಕೆರೂರಲ್ಲಿ) ಒಮ್ಮೊಮ್ಮೆ ನನಗೆ ಕೇಳಿಸುವಂತೆಯೇ ಮಾತುಗಳು ಕಿವಿಗೆ ಬಂದು ಅಪ್ಪಳಿಸುತ್ತಲಿದ್ದವು. "ತಮ್ಮ ಹೆಂಡ್ರು ಮಕ್ಕಳನ್ನು ನೋಡುವುದಕ್ಕೆ ಆಗದವರು ಯಾತಕ್ಕೆ ದೇಶಸೇವಾ ಅಂತ ಸೋಗು ಹಾಕಬೇಕು ?" ನಾನು ಇಂಥ ಟೀಕೆಗಳನ್ನು ಕೇಳಿ ಮೂಕಳಾಗುತ್ತಿದ್ದೆ, ಆದರೂ ಇಂಥ ಮಾತುಗಳನ್ನು ಮೈಗೂಡಿಸಿಕೊಂಡಿದ್ದೆ. ಆದರೆ ಇವರು ಮತ್ತು ನನ್ನ ಅಣ್ಣಂದಿರು ನನ್ನನ್ನು ತುಂಬಾ ಮರ್ಯಾದೆಯಿಂದ ನೋಡುವರು. ಇವರ ಟಪಾಲು ಬಂದರೆ, ಪೇಪರಿನಲ್ಲಿ ಸುದ್ದಿ ಬಂದರೆ ಮೊದಲು ನನಗೇ ಕೊಡುವರು. ನನ್ನ ಮರ್ಯಾದೆಗೆ ಯಾವುದೂ ಕಡಿಮೆ ಇರುತ್ತಿರಲಿಲ್ಲ. ಇವರ ಪತ್ರಗಳು ಬರುತ್ತಲೇ ಇದ್ದವು. ನಾನೂ ಆಗಾಗ್ಗೆ ಬರೆಯುತ್ತಲಿದ್ದೆ.

ಸಂಕಟಗಳು ಒಂದೊಂದೇ ಬರುವದಿಲ್ಲ ಎಂಬ ಗಾದೆಯಂತೆ ಈ ಸ್ಥಿತಿಯಲ್ಲಿಯೇ ಸಾಲದ್ದಕ್ಕೆ ಮಗಳು ಭಾರತಿಗೆ ಕಣ್ಣು ನೋವು ಪ್ರಾರಂಭವಾಯ್ತು. ಆಗ ನಾನು ಕೆರೂರಲ್ಲಿ ನನ್ನ ಭಾವನವರ ಮನೆಯಲ್ಲಿದ್ದೆ. ಸ್ಥಾನಿಕ ಚಿಕಿತ್ಸೆ ಬಗೆಹರಿಯದೇ 24 ತಾಸು ಮಗಳು ಕಣ್ಣು ತೆರೆಯಲೇ ಇಲ್ಲ. ಆಗ ನಾನು ಹುಬ್ಬಳ್ಳಿಯಲ್ಲಿರುವ ನನ್ನ ಭಾವನವರ ಮನೆಗೆ ಓಡಿ ಬಂದೆ. ಮಗಳ ಕಣ್ಣು ಬೇನೆ ಉಲ್ಬಣವಾಗಹತ್ತಿತ್ತು. ಅಂದರೆ ಕಣ್ಣು ಹೋಗುವ ಮಟ್ಟಕ್ಕೇ ಬಂದಿತು. 'ದೇವರೆ ನಾನು ಈಗ ಏನು ಮಾಡಲಿ ? ಯಾರಿಗೆ ಶರಣು ಹೋಗಲಿ ?' ಎಂದು ಚೀರಬೇಕೆನಿಸಿತು. ಕೊನೆಗೆ ದೇವರೇ ಬಂದ. ಇವರ ಆಪ್ತ ಮಿತ್ರ ವೆಂಕಟೇಶ ಮಾಗಡಿ ಮತ್ತು ದುಂದೂರ ವಕೀಲ ಇವರು ಹೇಗೋ ಸುದ್ದಿ ತಿಳಿದುಕೊಂಡು ನನ್ನನ್ನು ಹುಡುಕುತ್ತಲೇ ಬಂದರು. ಕಣ್ಣಿನ ಡಾಕ್ಟರ್ ಗೋರೆ ಅವರ ಕಡೆಗೆ ಕರೆದೊಯ್ದರು. ಅಲ್ಲಿ ಉಪಚಾರ ಮಾಡಿಸಿದರು. "ಇನ್ನು ಸ್ವಲ್ಪ ತಡ ಮಾಡಿದ್ದರೆ ಕಣ್ಣುಗಳೇ ಹೋಗುವ ಸಂಭವವಿತ್ತೆಂದು" ಡಾಕ್ಟರರು ಹೇಳಿದರು. ದೇವರು ನನ್ನ ಮೇಲಿರುವ ಎಂದುಕೊಂಡೆ. ಆಗ ಮಾಗಡಿ ಅವರು ತಮ್ಮದೇ ಭಾಷೆಯಲ್ಲಿ ಡಾಕ್ಟರರಿಗೆ "ಇಲ್ಲಿ ಕೇಳ್ರಿ, ಈ ಹುಡಿಗಿ ಅಪ್ಪ ಜೇಲಿನಲ್ಲಿದ್ದಾನ. ನೀವು ಅಗತ್ಯವಿರುವ ಎಲ್ಲ ಉಪಚಾರ ಮಾಡ್ರಿ, ಆದರೆ ದುಡ್ಡು ಮಾತ್ರ ಕೇಳಬ್ಯಾಡ್ರಿ" ಎಂದು ಹೇಳಿದರು. ಮುಂದೆ ಡಾಕ್ಟರರು ಕಣ್ಣಿಗೆ ಪಟ್ಟಿ ಕಟ್ಟಿ ಔಷಧಿ ಬರೆದುಕೊಟ್ಟರು.

ಆಗ ನನ್ನ ನಿತ್ಯದ ಕಾರ್ಯಕ್ರಮಗಳೆಂದರೆ ಬೆಳಿಗ್ಗೆ ಬೇಗ ಎದ್ದು ನನ್ನ ಚಿಕ್ಕ ಪ್ರಾರ್ಥನೆ ಮಾಡಿ, ಮನೆಯ ಕೆಲಸಕ್ಕೆ ಟೊಂಕಕಟ್ಟಿ ನಿಲ್ಲುತ್ತಿದ್ದೆ. ಅಡಿಗೆ ಮಾಡಿ ಎಲ್ಲರಿಗೂ ಉಣಬಡಿಸುವುದು. ನನ್ನ ಊಟ ಸುಮಾರು 2 ಗಂಟೆಗೆ. ಒಮ್ಮೊಮ್ಮೆ ಇದ್ದಷ್ಟೆ ಉಂಡು ತೃಪ್ತಿ ಪಡಬೇಕು. ನಾನು ಆಗ ಚಹಾ ಕುಡಿಯುವದನ್ನು ಬಿಟ್ಟಿದ್ದೆ, ವೇಳೆ ಸಿಕ್ಕಾಗ ನಿತ್ಯ ನೂಲುತ್ತಲಿದ್ದೆ. ಇದು ನನ್ನ ಕದಡಿದ ಮನಸ್ಸಿಗೆ ನಿಜವಾಗಿ ನೆಮ್ಮದಿ ತರುತ್ತಲಿತ್ತು. ನಿತ್ಯ ಡಾಕ್ಟರರ ಕಡೆಗೆ ನಾನೇ ಹೋಗಬೇಕು. ಅವರು ಬರೆದುಕೊಟ್ಟ ಔಷಧಿ ಖರೀದಿಸಬೇಕು. ಮಗಳಿಗೆ ಹಾಲು ತರಬೇಕು. ಈ ಆರ್ಥಿಕ ಸಮಸ್ಯೆ ಹೇಗೆ ಬಗೆಹರಿಸುತ್ತಲಿದ್ದೆ ಎಂದರೆ ಹೇಗೆ ಹೇಳಲಿ ? ಹೇಗೋ ದೇವರೇ ಮಾರ್ಗ ತೋರಿಸುತ್ತಿದ್ದ. ಇವರ ಅಣ್ಣಾ ಹಣಮಂತರಾಯ ತಪ್ಪದೇ ತಿಂಗಳಾ ಹತ್ತು ರೂಪಾಯಿ ಕೊಡುತ್ತಿದ್ದರು. ಇವರ ಕೆಲವು ಮಿತ್ರರು ಸಹಾನುಭೂತಿಯಿಂದ ಪುಡಿಗಾಸು ಕಳಿಸುತ್ತಿದ್ದರು. ಅವರಿಗೆ ಪತ್ರ ಬರೆದಿರಬೇಕೆಂದು ನನಗೆ ಅನಿಸುತ್ತಿತ್ತು. ನನಗೆ ಇದ್ದುದರಲ್ಲಿಯೇ ಸಮಾಧಾನವೆಂದರೆ ನಾನು ಕೆಲಸ ಮಾಡುವಾಗ್ಗೆ ನನ್ನ ಮಗಳ ಮುದ್ದು ಮಾತುಗಳು, ಔಷಧ ಕಣ್ಣಲ್ಲಿ ಹಾಕಿಕೊಳ್ಳುವ ಸಮಯ ಬಂದಾಗ್ಗೆ ತಾನೇ ಬಂದು ನನ್ನ ತೊಡೆಯ ಮೇಲೆ ಮಲಗಿ ಔಷಧ ಹಾಕಿಸಿಕೊಳ್ಳುವಳು. ನಂತರ ಅದು ಉರಿದರೆ ಅಳುವಳು. ಅವಳ ಕಣ್ಣಿನ ಬಗ್ಗೆ ನಾನು ತುಂಬಾ ಗಾಬರಿಯಾಗಿದ್ದೆ. ದೇವರು ದೊಡ್ಡವ ಕಾಯ್ದ. ಡಾ. ಗೋರೆ ತುಂಬಾ ಪರಿಶ್ರಮಪಟ್ಟರು. ಆದರೂ ಅವಳ ಒಂದು ಕಣ್ಣಿನಲ್ಲಿ ತುಸು ದೋಷ ಉಳಿದೇಬಿಟ್ಟಿತು. ಇವರಿಗೆ (ದಾಬಡೆ) ನಾನು ಎಲ್ಲ ಸಂಕಟಗಳನ್ನು ಬರೆಯುತ್ತಿರಲಿಲ್ಲ. ಆದರೆ ಅವರಿಂದ ಏನೂ ಮುಚ್ಚಿಡದೇ ಸ್ವಲ್ಪದರಲ್ಲಿ ನಿವೇದಿಸುತ್ತಲಿದ್ದೆ. ನನ್ನ ದೇವರಿಂದ ನಾನು ಹೇಗೆ ಮುಚ್ಚಿಡಲಿ ? ಅವರಾದರೂ ಏನು ಮಾಡಬೇಕು ? ಇವರು ಒಂದು ವರ್ಷ ಪೂರ್ತಿ ಅಂದರೆ 365 ದಿವಸ ವಿಸಾಪುರದಲ್ಲಿಯೇ ಇದ್ದರು. ಇದು ಈಗಿನ ಮಹಾರಾಷ್ಟ್ರದ ಅಹ್ಮದನಗರ ಜಿಲ್ಲೆಯಲ್ಲಿದೆ. ಆಗ ನಾವು ಮುಂಬೈ ಪ್ರಾಂತದಲ್ಲಿದ್ದೆವು. ಪುಣೆಯ ಮೇಲಿಂದ ಅಲ್ಲಿಗೆ ಹೋಗಬೇಕಾಗುತ್ತಿತ್ತು. ನಾನು ಎರಡು ತಿಂಗಳಿಗೊಮ್ಮೆ ತಪ್ಪದೇ ಅವರ ಭೆಟ್ಟಿಗೆ ಹೋಗುತ್ತಿದ್ದೆ. ನನ್ನ ಮಗಳಂತೂ ಬಗಲಲ್ಲಿ ಇರುತ್ತಿದ್ದಳು. ಒಮ್ಮೊಮ್ಮೆ ನಮ್ಮ ಆಪ್ತರೂ ನನ್ನ ಸಂಗಡ ಬರುತ್ತಲಿದ್ದರು. ಯಾರೂ ಬರದಿದ್ದರೆ ನಾನೊಬ್ಬಳೆ ಹೋಗುತ್ತಲಿದ್ದೆ. ವಿಸಾಪುರ ರೈಲು ನಿಲ್ದಾಣದಲ್ಲಿಳಿದು ಅಲ್ಲಿಯ ಸ್ಟೇಶನ್ ಮಾಸ್ತರರ ಮನೆಯಲ್ಲಿ ಸಾಮಾನು ಇಟ್ಟು ಅಲ್ಲಿಂದ ಒಂದೂವರೆ ಮೈಲು ಮಗಳನ್ನು ಬಗಲಲ್ಲಿ ಹಾಕಿಕೊಂಡು ನಿರ್ಜನ ಪ್ರದೇಶದಲ್ಲಿ ನಡೆಯುತ್ತ ಹೋಗುವದು. ಪಕ್ಕದಲ್ಲಿ ಮಿಲಿಟರಿ ಮೋಟಾರುಗಳ ಓಡಾಟವಿರುತ್ತಿತ್ತು. ಹೇಗೋ ದೇವರೇ ಕಾಯುತ್ತಲಿದ್ದ. ಆತನ ಅಸ್ತಿತ್ವವು ನನಗೆ ಹೆಜ್ಜೆ, ಹೆಜ್ಜೆಗೆ ಗೋಚರವಾಗುತ್ತಿತ್ತು.

ಒಂದು ಸಲ ಅಲ್ಲಿ ಒಂದು ಮೋಜಿನ ಸಂಗತಿ ಆಯ್ತು. ಅಲ್ಲಿಯ ಜೇಲಿನ ಡಾಕ್ಟರರು ಉಮರ್ಜಿ ಎಂಬವರು. ಅವರ ಹೆಂಡತಿ ನನ್ನ ಬಾಲ್ಯದ ಗೆಳತಿ. ಹೀಗಾಗಿ ಇಲ್ಲಿ ಬಂದಾಗ್ಗೆ ಬಹಳ ವೇಳೆ ಅವರ ಮನೆಯಲ್ಲಿಯೇ ಕಳೆಯುತ್ತಲಿದ್ದೆ. ಒಮ್ಮೆ ಡಾಕ್ಟರರೇ ಮನಸ್ಸು ಮಾಡಿ ಒಂದು ಮಧ್ಯಾಹ್ನ ಊಟದ ಸಮಯಕ್ಕೆ ದಾಬಡೆ ಅವರನ್ನು ಜೇಲಿನ ಪೊಲೀಸ್‌ರ ಮೂಲಕವೇ

ತಮ್ಮ ಮನೆಗೆ ಕರೆಯಿಸಿದರು. "ದಂಪತಿಗೆ ಇಂದು ಊಟಕ್ಕೆ ಹಾಕುವೆ" ಎಂದು ಹೇಳಿ ನಮ್ಮಿಬ್ಬರನ್ನು ಕೂಡಿಸಿ ಗಂಡ ಹೆಂಡತಿ ನಮಗೆ ಬಡಿಸಿದರು. ತುಂಬಾ ಸಮಯ ನಾವೆಲ್ಲ ಸೇರಿ ಹೊಟ್ಟೆ ತುಂಬಾ ಮಾತಾಡಿದೆವು. ಇವರು ಮಗಳನ್ನು ಮುದ್ದಾಡಿದರು. ಇದು ಕಾನೂನಿಗೆ ವಿರುದ್ಧ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಈ ಜೇಲಿನ ಸುತ್ತಲೂ ಗೋಡೆ ಇರದೆ ಕೇವಲ ತಂತಿ ಹಾಕಿದ್ದರು. ಒಮ್ಮೆ ಡಾಕ್ಟರರ ಹೆಂಡತಿಯ ಸಂಗಡ ಅಡ್ಡಾಡಲು ಹೋದಾಗ ಈ ತಂತಿಯ ಮೂಲಕವೂ ಇವರ ದರ್ಶನ ಪಡೆದೆ. ಕೆಲವು ಹೊತ್ತು ಮಾತನಾಡಿದೆ. ಹೀಗೆ ಒಂದು ವರ್ಷ ಉರುಳಿತು. ಇವರು 23-1-1944 ನೇ ದಿನಾಂಕ ಈ ಜೇಲಿಗೆ ಬಂದವರು 23-1-1945 ನೇ ದಿನಾಂಕ ಬೆಳಗಾವಿ ಜೇಲಿಗೆ ಸ್ಥಳಾಂತರಿಸಲ್ಪಟ್ಟರು.

ಇಷ್ಟು ಹೊತ್ತಿಗೆ ನಾನು ಬೇಸತ್ತು ಹೋಗಿದ್ದೆ. ಆಪ್ತರ ಮನೆಯಲ್ಲಿ ಇರುವದೆಂದರೆ ಮುಳ್ಳಿನ ಮೇಲೆ ಇದ್ದಂತೆಯೇ. ನಮ್ಮ ಪರಿಸ್ಥಿತಿ ಚೆನ್ನಾಗಿದ್ದರೆ ಎಲ್ಲರೂ ಒಳ್ಳೇ ಮಾತನಾಡಿ ತಮ್ಮ ಕೆಲಸ ಮಾಡಿಕೊಂಡು ಹೋಗುವರು. ಅದೇ ನಾವು ತೊಂದರೆಯಲ್ಲಿದ್ದರೆ ನಾವು ಕಾಲ ಕಸ ಆಗುವೆವು. ನಾನು ಇದನ್ನು ಅತ್ಯಂತ ದುಃಖದಿಂದ ಬರೆಯುವೆ. ಅದೆಷ್ಟೋ ಸಲ ರಾತ್ರಿ ಬರೀ ನೀರು ಕುಡಿದು ದೇವರ ಹೆಸರು ಹೇಳಿ ಮಲಗುತ್ತಿದ್ದೆ.

ಇತ್ತಿತ್ತಲಾಗಿ ತಿಂಗಳಿಗೊಮ್ಮೆ ತಪ್ಪದೇ ಬೆಳಗಾವಿ ಜೇಲಿಗೆ ಭೆಟ್ಟಿಗೆ ಹೋಗುತ್ತಲಿದ್ದೆ. ಜೇಲಿನ ಅಧಿಕಾರಿಗಳು ಬೇಕಾದಷ್ಟು ಹೊತ್ತು ಕುಳಿತು ಮಾತಾಡಲು ಹೇಳುವರು. ಒಂದೊಂದು ಸಲ ನಮಗೆ ಏನು ಮಾತಾಡಬೇಕೆಂಬುದೇ ತಿಳಿಯುತ್ತಿರಲಿಲ್ಲ. ಭೆಟ್ಟಿಯ ಸಮಯಕ್ಕೆ ಒಂದು ದೊಡ್ಡ ಟೇಬಲ್ಲು. ಒಂದು ಕಡೆ ಅವರು (ದಾಬಡೆ) ಇದ್ದರೆ ಇನ್ನೊಂದು ಕಡೆಗೆ ನಾನು ಕೂಡಬೇಕು. ಒಂದು ಮಗ್ಗುಲಲ್ಲಿ ಜೇಲಿನ ಅಧಿಕಾರಿ ನಾವು ಮಾತಾಡುವದನ್ನು ಕೇಳುತ್ತಿದ್ದ. ಆದರೆ ನಾವು ಏನೇ ಮಾತಾಡಿದರೂ ಎಷ್ಟೇ ಹೊತ್ತು ಮಾತಾಡಿದರೂ ನನಗಂತೂ ಯಾರೂ ಆಕ್ಷೇಪಿಸುತ್ತಿರಲಿಲ್ಲ.

ಬೆಳಗಾವಿಗೆ ಹೋದಾಗ್ಗೆ ಪ್ರಮೀಳಾತಾಯಿ ದೇಶಪಾಂಡೆ, ಶಕುಂತಲಾ ಕುರ್ತಕೋಟಿ, ಸುಶೀಲಾಬಾಯಿ ಕುಲಕರ್ಣಿ ಇವರನ್ನು ಭೆಟ್ಟಿಯಾಗುತ್ತಿದ್ದೆ. ನಾವೆಲ್ಲ ಸಮದುಃಖಿಗಳು. ಪ್ರಮೀಳಾತಾಯಿಯ ಲಗ್ನ ಶ್ರೀರಂಗ ಕಾಮತರ ಸಂಗಡ ಆಗಿರಲಿಲ್ಲ, ಆದರೆ ನಿಶ್ಚಯವಾಗಿತ್ತು. ಒಮ್ಮೆ ಸಹಜ ಮಾತನಾಡುವಾಗ್ಗೆ ನಾವೆಲ್ಲ ಒಂದು ಕಡೆಗೆ ಕೂಡಿ ಯಾಕೆ ಇರಬಾರದು ಎಂಬ ಕಲ್ಪನೆ ಬಂತು. ಈ ವಿಷಯವನ್ನು ಬೆಳಗಾವಿ ಜೇಲಿನಲ್ಲೇ ಇದ್ದ ಕಾಮತ ಮತ್ತು ದಾಬಡೆ ಅವರಿಗೆ ತಿಳಿಸಿದೆವು. ಅವರಿಬ್ಬರೂ ಸೇರಿ ವಿಚಾರಮಾಡಿ ನಮಗೆ ಉತ್ತೇಜನ ಕೊಟ್ಟರು. ನಾವು ಮೊರಬ ಗ್ರಾಮದಲ್ಲಿ ಇರಬೇಕೆಂದೂ ತಾವು ಊರ ಹಿರಿಯರಿಗೆ ಬರೆದಿರುವದಾಗಿಯೂ ತಿಳಿಸಿದರು. ಆಗ ಪ್ರಮೀಳಾತಾಯಿ, ವಿಮಲ ಘಾಟಕ್ (ಇನ್ನೊಬ್ಬ ಜೇಲವಾಸಿಯ ಮಗಳು) ಕಾಮತರ ತಮ್ಮ

ಬಾಬೂ ಕಾಮತ, ಹಣಮಂತಪ್ಪಾ ಬೇವಿನಗಿಡದ ಮತ್ತು ನಾನು ಸೇರಿ ಮೊರಬ ಗ್ರಾಮಕ್ಕೆ ಬಂದೇಬಿಟ್ಟೆವು. ಅಲ್ಲಿ ಆಶ್ರಮ ಜೀವನ ಪ್ರಾರಂಭವಾಯಿತು. ಬೆಳಿಗ್ಗೆ ಬೇಗ ಏಳುವುದು, ಬೀಸುವದು, ಪ್ರಾರ್ಥನೆ, ಸಫಾಯಿ, ಸಾಮೂಹಿಕ ವಾಚನ, ಊಟ, ಉಪಹಾರ ಕಾರ್ಯಕ್ರಮಗಳು ತುಂಬಾ ಚೆನ್ನಾಗಿಯೇ ನಡೆದವು. ಆದರೆ ಅಲ್ಲಿಯ ಜನರು ನಮ್ಮನ್ನು ಶಾಂತವಾಗಿ ಇರಗೊಡಲಿಲ್ಲ. "ಇವರ ಗಂಡ್ರು ಜೇಲಿನಲ್ಲಿದ್ದಾಗ ಇಲ್ಲೆ ಇವರು ಯಾರ್‍ಯಾರೋ ಸಂಗಡ ಚೈನಿ ಮಾಡ್ತಾರ" ಎಂದು ಟೀಕೆ ಮಾಡುತ್ತಲಿದ್ದರು. ಒಂದು ವಿಧವಾಗಿ ನಮಗೆ ಇದು ದಡ್ಡು ಬಿದ್ದಿತ್ತು. ನಮ್ಮ ನಡೆ, ನುಡಿ, ಆಚಾರ, ವಿಚಾರ ಸರಿಯಾಗಿದ್ದರೆ ನಾವು ಯಾರಿಗೂ ಹೆದರಬೇಕಾಗಿಲ್ಲ ಎಂಬ ತತ್ವ ನಮ್ಮದಾಗಿತ್ತು. ನಾವೆಲ್ಲ ಒಂದೆಡೆ ಸೇರಿದ್ದರಿಂದ ನಮಗೆ ಇನ್ನೂ ಹೆಚ್ಚಿನ ಬಲ ಬಂದಂತೆ ಆಗಿತ್ತು. ಭಾರತಿಯಂತೂ ಊರೆಲ್ಲ ಸುತ್ತುವಳು. ಎಲ್ಲರ ಸಂಗಡ ಮುದ್ದು ಮಾತನಾಡುತ್ತ ಓಡಾಡುವಳು. ಅಲ್ಲಿಯ ನಮ್ಮ ಹಿತಚಿಂತಕರೆಂದರೆ ನಮ್ಮ ಬಿ. ವ್ಹಿ. ಪಾಟೀಲ ಮತ್ತು ಮಾಸ್ತಿ ಗೋವಿಂದ ರೆಡ್ಡಿ.

ಆಗ ಪುಣೆಯಲ್ಲಿ ಘಟಿಸಿದ ಇನ್ನೊಂದು ವಿಷಾದದ ಸಂಗತಿ ನೆನಪಿಗೆ ಬರುತ್ತಿದೆ. ನಾನು ವಿಸಾಪುರದಲ್ಲಿ ಇವರ ಭೆಟ್ಟಿಯಾಗಿ ವಾಪಸ್ ಬರುವಾಗ ಪುಣೆಯಲ್ಲಿ ಇಳಿದು ಇವರ ಮಿತ್ರರ ಮನೆಯಲ್ಲಿ ಕೆಲವು ಸಮಯ ತಂಗಿ ಹೋಗುತ್ತಲಿದ್ದೆ. ಒಂದು ಸಲ ಓರ್ವ ವಿಧವೆ ಮುದುಕಿ ಮನೆಯಲ್ಲಿದ್ದಳು. ನನ್ನನ್ನು ನೋಡಿ ವಿಷಕಾರಿದಳು. ನಾನು ಒಳಗೆ ಬರುತ್ತಲಿದ್ದಾಗ "ನಿಮ್ಮ ಗಂಡಂದ್ರು ಜೇಲಿನ್ಯಾಗ ಕೊಳೆಯುವ ಹೊತ್ತಿನ್ಯಾಗ ನೀವು ಬೇರೆಯವರ ಮನೆಗೆ ಬಂದು ಚೈನಿ ಮ್ಹಾಡಲಿಕ್ಕೆ ನಾಚಿಕೆ ಬರುವದಿಲ್ಲವೇ ?" ಎಂದು ಏನೇನೋ ಬಡಬಡಿಸಿದಳು. ಅದಕ್ಕೆ ನನ್ನ ಉತ್ತರ ಕಣ್ಣೀರು. ಆಗ ರಾತ್ರಿ ಎಂಟು ಗಂಟೆಯಾಗಿತ್ತು. ನನ್ನ ಸಾಮಾನುಗಳನ್ನು ತಕ್ಕೊಂಡು ಮನೆ ಬಿಟ್ಟು ಹೊರಟೇಬಿಟ್ಟೆ. ಎಲ್ಲಿಗೆ ಹೋಗುವದು ? ಏನು ಮಾಡುವದು ? ಒಂದೂ ತಿಳಿಯಲಿಲ್ಲ. ಮರುಕ್ಷಣದಲ್ಲಿಯೇ ನಿರ್ಧರಿಸಿ ಬಸ್ಸಿನಿಂದ ರೈಲುನಿಲ್ದಾಣಕ್ಕೆ ಹೋದೆ. ರಾತ್ರಿಯಿಡೀ ನಿದ್ದೆ ಇಲ್ಲದೇ ಪ್ಲಾಟ್‌ಫಾರ್ಮ್ ಮೂಲೆಯಲ್ಲಿ ಕಳೆದೆ. ಭಾರತಿ ಮಾತ್ರ ಸುಖನಿದ್ದೆ ಮಾಡಿದಳು. ಬೆಳಿಗ್ಗೆ 7 ಗಂಟೆಯ ಗಾಡಿಯಿಂದ ಧಾರವಾಡಕ್ಕೆ ಹೋದೆ. ನನಗೆ ಆಗ ಪೂರಾ ಹರಳೆಣ್ಣೆ ಕುಡಿದಂತಾಗಿತ್ತು. ನಾವು ಎಷ್ಟೇ ಶುದ್ಧವಿದ್ದರೂ ಇಂಥ ಟೀಕೆಗೆ ನಾನು ಬೇಸತ್ತಿದ್ದೆ. ಏನೇ ಆಗಲಿ ಇದನ್ನು ಪೂರ್ತಿ ಬರೆದು ದಾಬಡೆ ಅವರಿಗೆ ತಿಳಿಸಿದೆ. ಕೂಡಲೇ ಅವರ ಉತ್ತರವೂ ಬಂತು. ನೀನು ಇಂಥ ಬೊಗಳುವಿಕೆಗೆ ಹೆದರಬೇಡ, ನಿನ್ನ ಮೇಲೆ ಸಂಪೂರ್ಣ ವಿಶ್ವಾಸವಿದೆ. ಬೊಗಳುವವರು ಬೊಗಳಲಿ. ನಿನ್ನದು ಈಗ ಒಂದು ವಿಧವಾದ ತಪಶ್ಚರ್ಯ ಜೀವನ ಎಂದು ಬರೆದಿದ್ದರು. ಆಗ ಮಾತ್ರ ನನ್ನ ತಲೆ ಹಗುರವಾಯ್ತು. ಪರರ ಮಾತು ಕೇಳಿಕೊಂಡು ಇವರೇ ತಪ್ಪು ತಿಳಿದುಕೊಂಡರೆ ನಮ್ಮಂಥವರ ಗತಿ ಏನು ಎನಿಸುತ್ತಲಿತ್ತು.

ಒಂದು ವಿಧವಾಗಿ 1940 ರಿಂದ 1946ರವರೆಗೆ ಈ ಆರು ವರ್ಷ ನನ್ನ ಜೀವನದಲ್ಲಿಯ ಅಗ್ನಿಪರೀಕ್ಷೆಯ ದಿನಗಳಾಗಿದ್ದವು. ನನ್ನ ಲಗ್ನದ ಪೂರ್ವದಲ್ಲಿ ದಾಬಡೆ ಅವರು ನನ್ನ ಅವ್ವನ

ಮುಂದೆ ಹೇಳಿದ ಮಾತು ಈಗ ಅಕ್ಷರಶಃ ಸತ್ಯವಾಯಿತು. 2-3 ತಿಂಗಳ ನಂತರ ಈ ನಮ್ಮ ಮೊರಬದ ವ್ಯವಸ್ಥೆ ಕುಸಿಯಿತು. ಪುನಃ ನಾನು ತಾಯಿಯ ಮಡಿಲು ಸೇರಿದೆ.

ಒಂದು ವಿಧವಾಗಿ ನಾನು ನನ್ನ ಪೂರ್ತಿ ಕರ್ತವ್ಯವನ್ನು ಬಹಳಲ್ಲವಾದರೂ ತುಸು ಮಟ್ಟಿಗೆ ಮಾಡಿದೆನೆಂಬ ಆತ್ಮತೃಪ್ತಿಯು ನನಗಿದೆ. ಮುಂದೆ ನನ್ನ ಮೊಮ್ಮಕ್ಕಳು "ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೀನೇನು ಮಾಡಿದೆ ಅಜ್ಜಿ ?" ಎಂದು ಕೇಳಿದರೆ ನನ್ನ ಜೀವನದಲ್ಲಿ ಸಂಗ್ರಾಮದ ಸತ್ಯ ಕತೆಗಳು ಅನೇಕ ತುಂಬಿವೆ. ನನ್ನ ಈಗಿನ ಎಲ್ಲಾ ಸಂಕಟಗಳನ್ನು ನಾನು ಪೂರ್ತಿ ಇವರ ಮುಂದೆ ಸಹ ಹೇಳಿರಲಿಲ್ಲ. ಅವರು ಬಿಡುಗಡೆಯಾಗಿ ಬಂದ ನಂತರ ಎಲ್ಲ ವಿಷಯಗಳನ್ನು ಚಾಚೂ ತಪ್ಪದೇ ಹೇಳಿ ನನ್ನ ತಲೆ ಹಗುರು ಮಾಡಿಕೊಳ್ಳುವ ತವಕ ನನ್ನದಾಗಿತ್ತು. ಅದರಂತೆಯೇ ಅವರು ಕೂಡಾ ತಮ್ಮ ಸಂಕಟಗಳನ್ನು ನನ್ನ ಮುಂದೆ ಪೂರ್ತಿ ಹೇಳಿರಲಿಕ್ಕಿಲ್ಲ. ಆಗ ನಾವಿಬ್ಬರೂ ತುಂಬಾ ತೂಕದಲ್ಲಿದ್ದೆವು.

ಇನ್ನೇನು ಅವರ ಬಿಡುಗಡೆ ತೀರ ಸಮೀಪ ಬಂತೆಂದು ಅವರೇ ಬರೆದಿದ್ದರು. ನಮ್ಮ ಮೊರಬದ ವ್ಯವಸ್ಥೆ ಕುಸಿದುದರಿಂದ ನಾನು ಪುನಃ ಹುಬ್ಬಳ್ಳಿಯ ನಮ್ಮ ಭಾವನವರ ಮನೆಗೆ ಬಂದೆ. ಇಲ್ಲಿ ಒಂದು ಮಹತ್ವದ ಮಾತು ನಾನು ಹೇಳಲೇಬೇಕು. ನನ್ನ ಯಾವ ಭಾವನವರೂ ನನ್ನ ಸಂಗಡ ಯಾತರ ಬಗ್ಗೆಯೂ ಎದುರು ವಾದಿಸುತ್ತಿರಲಿಲ್ಲ. ಅದಷ್ಟು ಗೌರವದಿಂದಲೇ ನೋಡಿಕೊಳ್ಳುತ್ತಲಿದ್ದರು. ಆದರೆ ನನ್ನ ಮಗುವಿನ ಔಷಧ ಮತ್ತು ಹಾಲು ಇತ್ಯಾದಿ ವೆಚ್ಚವನ್ನು ನಾನೇ ನೋಡಿಕೊಳ್ಳುತ್ತಲಿದ್ದೆ.

ಒಂದು ದಿನ ಸಾಯಂಕಾಲ ನಾನು ನೂಲುತ್ತ ಹುಬ್ಬಳ್ಳಿ ಭಾವನವರ ಮನೆಯಲ್ಲಿ ಕುಳಿತಾಗ್ಗೆ ಇವರ ಮಿತ್ರರಾದ ಆರ್. ಕೆ. ಜೋಶಿ, ಕುರ್ತಕೋಟಿ ಅವರು ಬಂದರು. "ಇನ್ನೇನು ದಾಬಡೆ ಬಂದೇ ಬಿಡುವ, ದಸರೆಯ ಹೊತ್ತಿಗೆ ಖಂಡಿತ ಬರುವ" ಎಂದು ಹೇಳಿದರು. ನನಗರಿಯದಂತೆ ಸಂತೋಷದಿಂದ ನಕ್ಕೆ. ವಿವರವಾಗಿ ಮಾತನಾಡಿದಾಗ್ಗೆ "ಅವರ ದಂಡದ ಹಣ ತುಂಬುವ ವ್ಯವಸ್ಥೆ ಮಾಡಿದ್ದೇವೆ" ಎಂದು ಹೇಳಿದರು. "ಈಗ ನಮ್ಮ ಮ್ಯಾಲೆ ಭಾರ ಯಾಕೆ ಹಾಕ್ತೀರಿ ? ಅವರೇ ಹೇಳಿದಂತೆ ಇನ್ನು ಎರಡೇ ತಿಂಗಳಲ್ಲಿ ಅವರು ಬಂದೇ ಬರುವರು" ಎಂದು ವಾದಿಸಿದೆ. ಅವರು ಮುಂದುವರಿಯುತ್ತಾ "ದಂಡ ತುಂಬಿಸುವ ವಿಚಾರ ಮಾಡಬೇಡ" ಎಂದು ಬರೆದಿರುವರು. ಆದರೆ ಅವರ ಮಿತ್ರರಿಗೆ ಈ ಧೋರಣೆ ಸೇರಿದಂತೆ ಕಾಣಲಿಲ್ಲ. ಕೊನೆಗೆ ಏನೇ ಆಗಲಿ ದಸರೆಗೆ ಬಂದೇ ಬರುವರು ಎಂದು ಸ್ಪಷ್ಟವಾಗಿ ಹೇಳಿ ಹೊರಟು ಹೋದರು. ನನಗೂ ಒಳಗೊಳಗೇ ತುಂಬಾ ಸಂತೋಷವಾಗಿತ್ತು. ದಿನಗಳನ್ನು ಎಣಿಸುತ್ತಲಿದ್ದೆ, ನಮ್ಮಿಬ್ಬರ (ಭಾರತಿ ಮತ್ತು ನಾನು) ಆರೋಗ್ಯ ಚೆನ್ನಾಗಿಯೇ ಇತ್ತು. ನಾನು ಏನೇನೋ ಕಳೆದ ದಿನಗಳ ಬಗ್ಗೆ ಆಲೋಚಿಸುತ್ತಲಿದ್ದೆ. ನನ್ನ ಜೇಲುವಾಸದ್ದು, ಮೊರಬದ ಜೀವನದ ಮೆಲುಕು ನನ್ನಷ್ಟಕ್ಕೆ ನಾನೇ ಹಾಕುತ್ತಾ ನಾನು ಒಬ್ಬಳೇ ಇದ್ದಾಗ ಏನೋ ಮಾತಾಡುತ್ತಲೇ ಇದ್ದೆ. ಆಗ ಭಾರತಿ "ಏನ್ವ ಅವ್ವಾ ಏನೇನೋ ಅಂತೀ ಅಲ್ಲಾ" ಎಂದು ಕೇಳುವಳು. ಅದಕ್ಕೆ ನಾನು ಹೇಳುತ್ತಲಿದ್ದೆ. "ನೋಡು ಭಾರತಿ, ನಿಮ್ಮ ಅಣ್ಣಾ

(ತಂದೆಗೆ ಅಣ್ಣಾ ಅನ್ನುತ್ತಿದ್ದಳು) ಭಾಳ ಲಗೂನೇ ಬಂದುಬಿಡ್ತಾರ" ಅಂತ ನಾನು ಹೇಳಿದರೆ ಅವಳು ಕುಣಿದು ಕುಪ್ಪಳಿಸುವಳು. "ಅಮ್ಮ, ಆವಾಗ ನಾವು ಎಲ್ಲಿ ಇರುವದು ? ಯಾವ ಮನೆಯಲ್ಲಿ ?" ಎಂದು ಕೇಳುವಳು. "ನೋಡು ಭಾರತಿ ಅದನ್ನು ನಿನ್ನ ಅಣ್ಣನೇ ವಿಚಾರಮಾಡಿ ಅವರು ಹೇಳಿಧಾಂಗ, ಹೇಳಿದಲ್ಲೆ ಇರುವದು" ಎಂದು ಹೇಳುತ್ತಲಿದ್ದೆ. ಅದೆಷ್ಟೋ ಸಲ ಇವರು ಕನಸಿನಲ್ಲಿ ಬಂದಂತೇ ಭಾಸವಾಗುತ್ತಲಿತ್ತು. ಹೀಗೆ ದಿವಸಗಳು ಯಾರ ದಾರಿಯನ್ನೂ ಕಾಯುವದಿಲ್ಲ. ಒಳ್ಳೆ ದಿವಸ, ಕೆಟ್ಟ ದಿವಸ ಹೋಗುತ್ತಲಿದ್ದವು. ಹಾಗೆ ಮಹಾನವಮಿ (ದಸರಾ) ಬಂದೇ ಬಿಟ್ಟಿತು. ಇವರ ಮಿತ್ರರು ಹೇಳಿದುದನ್ನು ಪೂರ್ತಿ ನಂಬಿದ್ದೆ. ದಂಡ ತುಂಬುವುದು ಬೇಡವೆಂದು ನಾನು ಸ್ಪಷ್ಟ ಹೇಳಿದರೂ ನನ್ನ ಮನಸ್ಸು ಒಳಗೊಳಗೆ ಯಾಕೆ ತುಂಬವಲ್ರ್ಯಾಕ ಅಂತ ಅನಿಸುತ್ತಲಿತ್ತು. ದಸರಾ ಬಂತು, ಆದರೆ ಇವರು ಮಾತ್ರ ಬರಲಿಲ್ಲ. ಇವರಿಂದ ಟಪಾಲಿನಲ್ಲಿ ಒಂದು ಪತ್ರ ಬಂದು ಬಿತ್ತು. ಆವಾಗ ಮಾತ್ರ ನನಗೆ ತಡೆಯುವುದಾಗಲಿಲ್ಲ. ಹುಬ್ಬಳ್ಳಿಯಲ್ಲಿದ್ದೆ, ಒಬ್ಬಳೆ ಇದ್ದಾಗ ಕುಳಿತು ಅತ್ತೇ ಬಿಟ್ಟೆ, ಅಳುವುದಕ್ಕೂ ಸ್ವಾತಂತ್ರ್ಯವಿರಲಿಲ್ಲ. ಯಾಕೆಂದರೆ ಮನೆಯವರೆಲ್ಲ ದಸರೆ ಹಬ್ಬದ ಸಂತೋಷದಲ್ಲಿರುವಾಗ ನಾನು ಅತ್ತರೆ ಹೇಗೆ ? ಎಂದು ಅಂದುಕೊಂಡು ಒಬ್ಬಳೇ ಇದ್ದಾಗ ಕಣ್ಣೀರು ತಾವೇ ತಾವಾಗಿ ಹೋಗುತ್ತಲಿದ್ದವು. ಆಗ ಭಾರತಿ "ದಸರಾಕ್ಕ ಬರ್ತಾರ ಅಂತಿದ್ದಿ ಅಣ್ಣ ಬರ್ಲೇ ಇಲ್ಲ ?" ಎಂದು ಕೇಳಿದಳು. ಆಗ ನನ್ನ ದುಃಖ ಒತ್ತರಿಸಿಬಂತು. ಅವಳನ್ನು ಎತ್ತಿಕೊಂಡು "ನೋಡು ಭಾರತಿ ನಾವು ಬಡವರು, ನಮ್ಮ ಹತ್ತಿರ ಕಾಸಿಲ್ಲ. ನಮ್ಮಂಥವರು ಹಿಂಗs ಒದ್ದಾಡುವದು ನೋಡು" ಎಂದು ಹೇಳಿದೆ. ಅವಳು ಹಾಗೆಯೇ ಬಿಡುವವಳಲ್ಲ. "ಅಣ್ಣಾ ಭಾಳ ದುಡ್ಡು ತೊಗೊಂಡು ಬರ್ತಾರೇನು ?" ಅಂತ ಕೇಳಿದಳು. ಆ ಸಮಯಕ್ಕೆ ಇವರ ಮಿತ್ರರು ಬಂದ್ರು. ನಾನು ತೀರ ಸಪ್ಪೆಯಾಗಿ ಕುಳಿತಿದ್ದೆ. ಶಿಷ್ಟಾಚಾರಕ್ಕೆ ಬಂಗಾರ ಕೊಡ ತೊಗೊಳ್ಳೋದು ಆದ ಮೇಲೆ "ಸ್ವಲ್ಪ ನಮ್ಮಿಂದೇ ತಪ್ಪಾಯ್ತು, ನಮ್ಮ ಲೆಕ್ಕ ಸರಿಯಾಗಲಿಲ್ಲ" ಎಂದು ಸೂತ್ರರೂಪವಾಗಿ ಹೇಳಿದರು. "ಇನ್ನು ದಯಮಾಡಿ ಏನೂ ಮಾಡಬೇಡ್ರಿ. ಅವರು ಬಂದಾಗ ಬರ್ಲಿ" ಎಂದು ದುಃಖ ಒತ್ತರಿಸಿ ಹೇಳಿದೆ. "ನಾವರ ಏನ್ಮಾಡೋಣ ಹೇಳ್ರಿ, ನಮ್ಮ ಕೈಲಾದ ಪ್ರಯತ್ನ ಮಾಡತೇವಿ" ಅಂತ ಹೇಳಿ ಹೋದರು. ಅಂದು ಇಡೀ ರಾತ್ರಿ ನನಗೆ ನಿದ್ದೆ ಬರಲೇ ಇಲ್ಲ. ಸಾಕಷ್ಟು ಅತ್ತೆ. ನಿಜವಾಗಿಯೂ ನನಗೆ ಇದೊಂದು ಕಾರಾವಾಸವೇ ಅನಿಸುತ್ತಲಿತ್ತು. ಅವರು ಅಲ್ಲಿ ಜೇಲಿನಲ್ಲಿದ್ದರೆ ನಾನು ಇಲ್ಲಿ ಬೇರೆಯವರ ಮನೆ (ಜೇಲು) ಯಲ್ಲಿದ್ದೆ. ಹೀಗೆ ನನಗೆ ಈ ಜೀವನ ಸಾಕಾಗಿತ್ತು. ನಿಜವಾಗಿ ಹೇಳಬೇಕೆಂದರೆ ಹೆಣ್ಣಿಗೆ ಗಂಡನ ಮನೆ ಶ್ರೇಷ್ಠ. ಅದು ತಪ್ಪಿದರೆ ತಾಯಿಯ ಮಡಿಲು. ಇದರಲ್ಲಿ ಬಡತನ, ಸಿರಿತನ ಪ್ರಶ್ನೆಯೇ ಇಲ್ಲ. ಆಗ ನನ್ನ ತಾಯಿ ಧಾರವಾಡದಲ್ಲಿದ್ದಳು. ನಾನು ಪುನಃ ಮಡಿಲು ಸೇರಿದೆ. ಇವರು ಬಂದಾಗ ಅವ್ವನ ಹತ್ತಿರ ಇರಬೇಕು ಎಂದೆನಿಸಿತ್ತು. ದಿನಾಲು ಏನೇನೋ ಸುದ್ದಿಗಳು ಬರುತ್ತಲೇ ಇದ್ದವು. ಅವರ ಸಂಗಡ ಜೇಲಿಗೆ ಹೋದವರೆಲ್ಲ ಬಂದಿದ್ದರು. ಕುರ್ತಕೋಟಿ, ಬುರ್ಲಿ, ಹುಕ್ಕೇರಿಕರ, ಕರಮರಕರ, ದಿವಾಕರ, ಕೃಷ್ಣಾಬಾಯಿ ಪಂಜೀಕರ ಎಲ್ಲರೂ ಬಂದ್ರು. ಇವರು ಮಾತ್ರ ಬರಲಿಲ್ಲ. ಆಗ ನಾನು ಭಾರತಿ ಕೂಡಿ ಏನೇನೋ ಹಾಡತಿದ್ವಿ.

"ಇನ್ನೂ ಯಾಕ ಬರಲಿಲ್ಲವ್ವಾ ಜೇಲಿಗೆ ಹೋದವರು
ದಸರಾ ದಿವಸ ಬರ್ತೀನಂತ ವಚನ ಕೊಟ್ಟವರು"

ಹಿಂಗs ಏನೇನೋ ಮಾಡಿ ನಗಲಿಕ್ಕೆ ಪ್ರಯತ್ನ ಮಾಡ್ತಿದ್ವಿ. ಇವರಿಗೆ ಪಾಪ ಹೊರಗಿನ ಯಾವ ಸಮಾಚಾರವೂ ಗೊತ್ತಿರಲಿಲ್ಲ. ದಸರಾ ದಿನ ಇಡೀ ಜೇಲಿಗೆಲ್ಲಾ ಜಿಲೇಬಿ ಊಟಾ ಮಾಡಿಸಿದ್ದು, ಒಂದು ನಾಟಕಾ ಮಾಡಿದ್ದು ಎಲ್ಲವನ್ನೂ ಪತ್ರದಲ್ಲಿ ಬರೆದಿದ್ದರು. ಇವರ ಪತ್ರ ನೋಡಿದ್ರ ನನಗೆ ತುಂಬಾ ಖುಶಿ. ಇವರ ಪತ್ರ ತುಂಬಾ ವಿವರವಾಗಿರುತ್ತಿದ್ದವು. ಒಮ್ಮೊಮ್ಮೆ ಪ್ರತ್ಯಕ್ಷ ಮಾತನಾಡಿದಂತೆಯೇ ಬರೆಯುವರು. ನನ್ನ ಬಗ್ಗೆ, ಮಗಳ ಆರೋಗ್ಯದ ಬಗ್ಗೆ, ಮುಂದಿನ ನಮ್ಮ ಜೀವನದ ಬಗ್ಗೆ ಏನೇನೋ ಬರೆಯುವರು. ಕೊನೆಗೆ ನಾನು ಉತ್ತರಾ ಕೊಟ್ಟೆ. "ನನಗಂತೂ ಏನೂ ತಿಳಿಯುವುದಿಲ್ಲ. ನೀವು ಏನೇನ ಮಾಡ್ತೀರಿ ಮಾಡ್ರಿ. ಎಲ್ಲದಕ್ಕೂ ನನ್ನ ಒಪ್ಪಿಗೆ. ಈಗಿನ ಎಲ್ಲಾ ಭಾರ ನಿಮ್ಮ ಮ್ಯಾಲೆ ಹಾಕಿ ನಾನು ಹಗುರಾಗಿ ಇರಬೇಕನಿಸೇದ. ನೀವು ಹೇಳಿದಷ್ಟು ಕೇಳುವುದೇ ನನ್ನ ಕೆಲಸ" ಅಂತ ಬರೆದಿದ್ದೆ.

ಬಿಡುಗಡೆಯಾಗಿ ಬಂದವರೆಲ್ಲ ಇವರ ಸಮಾಚಾರ ಹೇಳಲು ಮನೆಗೆ ಬಂದು ಹೋಗುವರು. ಜನರಿಗೆ ಇದೂ ಒಂದು ಕಣ್ಣ ಕಿಸರೇ ಆಗಿತ್ತು. ಅವರ ಮಿತ್ರರ ಕಾರ್ಯ ಯಶಸ್ವಿಯಾದ ವರ್ತಮಾನ ಬಂತು. ನನ್ನ ತಮ್ಮ ಯಂಕಣ್ಣ ಮತ್ತು ನರಿಬೋಳಿ ಗುಂಡಣ್ಣಾ ಬೆಳಗಾವಿಗೆ ಹೋಗಿ ಇವರನ್ನು ಬಿಡಿಸಿಕೊಂಡು ಬಂದರು. ತುಂಬಾ ಹಿಗ್ಗಿದೆ. ಭಾರತಿಯ ಕುಣಿದಾಟವಂತೂ ಹೇಳತೀರದು. ಅವರು ಧಾರವಾಡಕ್ಕೆ ಬರುವ ದಿನ ಭಾರತಿ ನಾನು ರೈಲು ನಿಲ್ದಾಣಕ್ಕೆ ಹೋಗಿದ್ದೆವು. ಅಲ್ಲಿ ಕರಮರಕರ, ಮೊಹರೆ ಹನುಮಂತರಾವ, ಕುರ್ತಕೋಟಿ ಮತ್ತಿತರ ಕೆಲವು ಮಿತ್ರರು ಬಂದಿದ್ದರು. ಗಾಡಿ ಬಾಗಿಲಲ್ಲೇ ನಿಂತ ಇವರನ್ನು ನೋಡಿದೆ. ಇವರು ಹಾಕಿದ್ದು ಒಂದು ಪ್ಯಾಂಟ್, ಒಂದು ಶರ್ಟು ಕೈಯಲ್ಲಿ ಒಂದು ಬ್ಯಾಗು (ಇದು ಅವರು ಬಂಧನಕ್ಕೊಳಗಾದಾಗ ಅಂದರೆ ಭೂಗತರಾಗಿದ್ದಾಗ ಧರಿಸುತ್ತಿದ್ದ ವೇಷ). ಗಾಡಿಯಿಂದ ಇಳಿದೇ ಬಿಟ್ರು. ನನಗೆಷ್ಟು ಸಂತೋಷವಾಯಿತು ಎಂಬುದನ್ನು ಶಬ್ದಗಳಲ್ಲಿ ಬರೆಯಲು ಸಾಧ್ಯವಿಲ್ಲ. ನಮ್ಮ ಪ್ರಥಮ ಮಿಲನಕ್ಕಿಂತ ಈ ಮಿಲನ ತುಂಬಾ ಸಂತೋಷದ್ದು. ಕಷ್ಟ ಪಟ್ಟ ನಂತರ ಕೂಡಿದರೆ ಆಗ ಬಹಳ ಸಂತೋಷವಾಗುತ್ತದೆ, ಆಗ ನನಗೆ ಕೆಲವು ಹೊತ್ತು ಮಾತೇ ಹೊರಡಲಿಲ್ಲ. ಕಣ್ಣಿನಿಂದ ಆನಂದಭಾಷ್ಪಗಳು ಹೋಗುತ್ತಲೇ ಇದ್ದವು. ಇವರನ್ನು ಪ್ಲಾಟ್‌ಫಾರ್ಮ್ ಮೇಲೆಯೇ ತಬ್ಬಿಕೊಂಡು ಬಿಡಲೇ ? ಅಂತ ಅನಿಸುತ್ತಿತ್ತು. ಬಂದ ಹಿರಿಯರಿಗೂ ಇವರ ಮಿತ್ರರಿಗೂ ಈ ಮಿಲನ ನೋಡಿ ಸಂತೋಷವಾಯಿತು. ಒಂದು ಟಾಂಗಾದಲ್ಲಿ ನಾವು ಮೂವರು ಮದಿಹಾಳದ ನಮ್ಮ ತಾಯಿಯ ಮನೆಗೆ ಬಂದೆವು. ಇವರಿಗೆ ನನ್ನ ತಾಯಿಯ ಮೇಲೆ ತುಂಬಾ ಪ್ರೀತಿ ವಿಶ್ವಾಸ. ಅವಳಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದರು. ಎಲ್ಲ ಕಡೆಗೂ ಸಂತೋಷ. ಇವರ ಮಿತ್ರರು ಸಾಯಂಕಾಲ ಮನೆಗೆ ಬಂದು "ಇನ್ನು ದಾಬಡೆಯನ್ನು ಗಟ್ಟಿಯಾಗಿ ಹಿಡಕೊಂಡು ಕೂಡ್ರಿ. ಎಲ್ಲಿಯೂ ಹೋಗಲು ಬಿಡಬ್ಯಾಡ್ರಿ" ಅಂತ ಚೇಷ್ಟೆ ಮಾಡಿದರು. ಮನೆಗೆ

ಇವರ ಅಣ್ಣ ಅತ್ತಿಗೆ ಎಲ್ಲರೂ ಬಂದು ಭೆಟ್ಟಿಯಾಗಿ ಹೋದರು. ಇವರ ಮಿತ್ರರಂತೂ ಸಾಕಷ್ಟು ಜನ ಬಂದು ಹೋದರು.

ಅಂದು ರಾತ್ರಿ ನಾವು ಬಹುಶಃ ನಿದ್ದೆಯನ್ನೇ ಮಾಡಲಿಲ್ಲ. ನಾಲ್ಕು ವರ್ಷದ ಎಷ್ಟೊಂದು ವಿಷಯಗಳನ್ನು ಹೇಳುತ್ತಲೇ ಇದ್ದೆ. ಆಗ ನಾನು ಅವರಿಗೆ ಹೇಳಿದ ಮುಖ್ಯವಾದ ಮಾತುಗಳೆಂದರೆ "ನೀವು ನಂಬಿರುವಂತೆ ಜಗತ್ತು ಇರುವದಿಲ್ಲ. ನೀವು ಬೆಳ್ಳಗಿದ್ದದ್ದನ್ನೆಲ್ಲ ಹಾಲೆಂದೇ ನಂಬುವಿರಿ. ಮೇಲೆ ಚೆನ್ನಾಗಿ ಮಾತನಾಡಿದರೂ ಒಳಗೆ ಹುರುಳಿರುವದಿಲ್ಲ. ಈ ನಾಲ್ಕು ವರ್ಷಗಳಲ್ಲಿ ನಾನು ಜೇಲಿನಲ್ಲಿದ್ದ ನಾಲ್ಕು ತಿಂಗಳು ಬಿಟ್ಟರೆ ನಾನು ಎಲ್ಲಿಯೇ ಇರಲಿ ಮುಳ್ಳಮೇಲೆ ಇದ್ದಂತೆಯೇ ಇರಬೇಕಾಯ್ತು. ಜನರು ಆಡಿದುದನ್ನು ಅನ್ನಿಸಿಕೊಳ್ಳಲೇಬೇಕಾಯ್ತು. ನಿಮ್ಮ ದೇಶಸೇವೆಯ ಬಗ್ಗೆ ನನಗೆ ಎಷ್ಟೋ ಜನ ಮಂಗಳಾರತಿ ಮಾಡಿದ್ದಾರೆ. ನಾನು ಉತ್ತರ ಕೊಡದೆ ಸುಮ್ಮನೆ ಕುಳಿತರೂ ಕೇಳುವಂತೆ ಅವರ ಕುತ್ಸಿತ ಮಾತುಗಳು ಕಿವಿಗೆ ಅಪ್ಪಳಿಸುತ್ತಲಿದ್ದವು. ನಾನು ನಾಲ್ಕಾರು ಕಡೆಗೆ ಅಡ್ಡಾಡಲೇಬೇಕಾದುದರಿಂದ ನನ್ನ ಶೀಲದ ಬಗ್ಗೆ ಸಂದೇಹಪಟ್ಟವರೂ ಉಂಟು. ಕೆಲವರು ಬಹಿರಂಗವಾಗಿಯೇ ಮಾತಾಡಿದ್ದುಂಟು. ಹಿಂದೆ ಮಾತಾಡುವವರಿಗಂತೂ ಲೆಕ್ಕವೇ ಇಲ್ಲ. ಆಗಿನ ನನ್ನ ಆರ್ಥಿಕ ತೊಂದರೆಯಂತೂ ಹೇಳತೀರದು. ನನ್ನ ಮಗಳಿಗೆ ಔಷಧ ತೆಗೆದುಕೊಂಡರೆ, ಹಾಲು ತೆಗೆದುಕೊಂಡರೆ ನಾನೇ ಹಣ ಕೊಡಬೇಕು. ಆಗಾಗ್ಗೆ ಭೆಟ್ಟಿಗೆ ಬಂದರೆ ತುಸು ವೆಚ್ಚ ಇದ್ದೇ ಇರುತ್ತಿತ್ತು. ಈ ಬಗ್ಗೆ ನಾನು ಅದೆಷ್ಟೋ ಸಲ ಕಣ್ಣೀರಿಟ್ಟಿದ್ದೇನೆ. ಯಾರ ಮುಂದೆ ಹೇಳಲಿ ? ಏನು ಮಾಡಲಿ ? ಎಂಬುದೇ ನನ್ನ ಪ್ರಶ್ನೆ. ಹೇಗೋ ಎಲ್ಲ ಸಂಕಟಗಳಿಂದ ದೇವರೇ ನಮ್ಮನ್ನು ಪಾರು ಮಾಡಿದನೆಂದೇ ಇಂದು ನಾವು ಮೂವರು ಒಂದು ಕಡೆಗೆ ಸೇರುವ ಸೌಭಾಗ್ಯ ನಮ್ಮದಾಗಿದೆ."

"ನೀವು ಜೇಲಿನಲ್ಲಿದ್ದಾಗ ನಾವು ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಏನೇನೋ ಬರೆಯುತ್ತಲಿದ್ದಿರಿ. ಈಗ ಏನು ಮಾಡಬೇಕೋ ಮಾಡಿರಿ. ನೀವು ಹೇಳಿದಂತೆ ಕೇಳುವುದಷ್ಟೇ ನನ್ನ ಕರ್ತವ್ಯ. ನಾನು ಈಗ ಕೇವಲ ಶೂನ್ಯ. ಗಂಗೆ, ಸಮುದ್ರರಾಜನನ್ನು ಕೂಡಿದ ಮೇಲೆ ಅವಳಿಗೆ ಬೇರೆ ಅಸ್ತಿತ್ವವಿಲ್ಲ. ಸಮುದ್ರದಿಂದ ಅವಳನ್ನು ಬೇರ್ಪಡಿಸುವದು ಸಾಧ್ಯವಿಲ್ಲ. ಹಾಗೆ ಇನ್ನು ಮುಂದೆ ನಿಮ್ಮ ಹೆಜ್ಜೆ ಮುಂದೆ, ನನ್ನದು ನಿಮ್ಮ ಹಿಂದೆಯೇ. ಇದಕ್ಕೆ ನಾನು ಎಂದೂ ತಪ್ಪುವುದಿಲ್ಲ. ಈವರೆಗೆ ನಾನು ಒಬ್ಬಳೇ ನಿರ್ಣಯ ತೆಗೆದುಕೊಂಡು ಬೇಸತ್ತಿರುವೆ, ಎಲ್ಲವೂ ನಿಮ್ಮದೇ, ನಿಮಗೇ ಅರ್ಪಿತವಾದದ್ದು. ಸರ್ವಾರ್ಪಣ ತವ ಪಾದಪದ್ಮೆ" ಎಂದು ನನ್ನ ಹೊಟ್ಟೆಯೊಳಗೆ ತುಂಬಿದ್ದ ಎಲ್ಲ ಸುಖ-ದುಃಖಗಳನ್ನು ತೋಡಿಕೊಂಡೆ. ಅವರು ಚಿತ್ತಗೊಟ್ಟು ಎಲ್ಲವನ್ನೂ ಕೇಳುತ್ತಲಿದ್ದರು. ಆಗ ಅವರು ಇದಕ್ಕೆಲ್ಲ ಏನು ಉತ್ತರ ಕೊಡಬೇಕೆಂಬುದು ತೋಚದಿದ್ದರೂ "ಇನ್ನು ಮುಂದೆ ಇಬ್ಬರೂ ಸೇರಿಯೇ ಪುನಃ ಹೊರಡೋಣ. ಬೇಕಾದರೆ ಇಷ್ಟು ದಿನ ನಿನ್ನ ಕಡೆಗೆ ಇದ್ದ ಚುಕ್ಕಾಣಿಯನ್ನು ನನ್ನ ಕಡೆಗೆ ಕೊಡು. ಈಗ ನಾನು ನನ್ನ ಅಂತಃ ಕರಣದಲ್ಲಿ ಒಂದು ಮಾತು ಹೇಳುವೆ ಕೇಳು, ಇದು ಮುಖಸ್ತುತಿ ಅಲ್ಲ. ನನಗೆ ಅದು ಬರುವುದೂ ಇಲ್ಲ, ನೀನು ನಿಜವಾಗಿ ಧನ್ಯಳು. ತುಂಬಾ ಕಷ್ಟಪಟ್ಟಿರುವಿ, ಅತ್ಯಂತ ಧೈರ್ಯ ಸಾಹಸದಿಂದ

ನಿನ್ನ ಕರ್ತವ್ಯ ಮಾಡಿರುವಿ. ನೀನು ಮಾಡಿದ ತ್ಯಾಗದ ಮುಂದೆ ನನ್ನದು ಏನೂ ಅಲ್ಲ. ನಿನ್ನಷ್ಟು ಸಮಸ್ಯೆಗಳನ್ನು ನಾನು ಎದುರಿಸಿಲ್ಲ. ಗಂಡಂದಿರು ಜೇಲಿನಲ್ಲಿದ್ದಾಗ ಅದೆಷ್ಟೋ ಹೆಂಗಸರು ಹುಚ್ಚರಾಗಿದ್ದಾರೆ, ಅಡ್ಡದಾರಿ ತುಳಿದಿದ್ದಾರೆ, ಕರ್ತವ್ಯ ಮೂಢರಾಗಿದ್ದಾರೆ. ನೀನು ಈ ಎಲ್ಲ ಸತ್ವಪರೀಕ್ಷೆಗಳಿಂದ ಯಶಸ್ವಿಯಾಗಿ ಪಾರಾಗಿ ಬಂದ ನನ್ನ ಪಾಲಿನ ದೇವತೆ. ಒಂದು ವಿಧವಾಗಿ ನಿನ್ನಂಥವಳು ನನ್ನ ಜೊತೆಗಾರ್ತಿಯಾದುದು ನನ್ನ ಪೂರ್ವ ಜನ್ಮದ ಪುಣ್ಯ" ಎಂದು ಏನೇನೋ ಹೇಳಿದರು. ನನಗೆ ತುಂಬಾ ಸಂತೋಷವಂತೂ ಆಯಿತು. ಇಬ್ಬರ ಕಣ್ಣಲ್ಲಿಯೂ ನೀರು ಹರಿದು ಹೋಗುತ್ತಿತ್ತು. ಹೀಗೆ ಮಾತಾಡುತ್ತ ಕುಳಿತಾಗ ಕೋಳಿ ಕೂಗುವ ಸಪ್ಪಳ ಕೇಳಿಸಿತು. ಇಂಥ ಪುನರ್ಮಿಲನ ಎಷ್ಟು ಚಂದ ಎಂಬುದನ್ನು ಅನುಭವಿಸಿಯೇ ನೋಡಬೇಕು. ಇನ್ನೊಂದು ಕೊನೆಯ ಮಾತು ಹೇಳಿದರು. "ನಿನ್ನ ಅನುಭವಗಳು ಅಪೂರ್ವವಾದವು ಮತ್ತು ಅತ್ಯಂತ ಸ್ಫೂರ್ತಿದಾಯಕವಾಗಿವೆ. ನಿನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ ಉಪಯೋಗವಾಗಲೆಂದು ಇವುಗಳನ್ನೆಲ್ಲ ಸುಸಂಬದ್ಧವಾಗಿ ಬರೆದಿಡು. ಅದು ಖಂಡಿತವಾಗಿಯೂ ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡೀತು. ನೀನು ಏನಿದ್ದೆ ? ಏನೇನು ಮಾಡಿದೆ ? ಎಂಬುದು ಎಲ್ಲರಿಗೂ ಅರ್ಥಾತ್ ನಮ್ಮವರಿಗೆ ತಿಳಿಯುವುದು" ಎಂದು ಹೇಳಿದರು. ಅದಕ್ಕೆ "ನಾನು ಸಾಹಿತಿ ಅಲ್ಲ ನನಗೆ ಅಷ್ಟೊಂದು ಬರೆಯುವದು ಸಾಧ್ಯವಿಲ್ಲ, ಬೇಕಾದರೆ ನಾವು ಒಂದು ಒಪ್ಪಂದಕ್ಕೆ ಬರೋಣ. ನಾನು ಹೇಳುತ್ತೇನೆ ನೀವು ಬರೆಯಿರಿ" ಎಂದು ಹೇಳಿದೆ. ಅದಕ್ಕೆ ಅವರು ಸಮ್ಮತಿಸಿದರು. ಇಲ್ಲಿಗೆ ಒಂದು ಅಧ್ಯಾಯ ಮುಗಿಯಿತು. ಅದು ಪ್ರಾರಂಭವಾದದ್ದು 1940ರಲ್ಲಿ ಮುಕ್ತಾಯಗೊಂಡದ್ದು 1946ರಲ್ಲಿ. ಅಂದರೆ ಆರು ವರ್ಷ ನಮ್ಮ ಜೀವಮಾನದಲ್ಲಿಯೇ ಅತ್ಯಂತ ಕಷ್ಟಮಯ ಜೀವನವೆಂದು ಹೇಳಬಹುದು. ಇಬ್ಬರೂ ತುಂಬಾ ಒದ್ದಾಡುತ್ತಾ ಕಳೆದೆವು. ಆದರೆ ನಮಗೆ ಆತ್ಮತೃಪ್ತಿ ಇದೆ. ನಾವೂ ಕೈಲಾದಷ್ಟು ಭಾರತ ಮಾತೆಯ ಸೇವೆ ಮಾಡಿದೆವೆಂಬುದನ್ನು ಅತ್ಯಂತ ಅಭಿಮಾನದಿಂದ ಹೇಳುತ್ತೇವೆ. ಇನ್ನೊಂದು ಮಾತು ಇವರು ಯಾವಾಗಲೂ ಹೇಳುವುದೇನೆಂದರೆ ನನ್ನ ಕಷ್ಟ ಮತ್ತು ತ್ಯಾಗದ ಮುಂದೆ ತಮ್ಮದು ಏನೂ ಅಲ್ಲ ಎಂದು. ಆದರೆ ನನ್ನ ಅಭಿಪ್ರಾಯದಲ್ಲಿ ಸತ್ಯಸಂಗತಿ ಎಂದರೆ ಈ ಆರು ವರ್ಷ ಇವರು ವಿಪರೀತ ಕಷ್ಟಪಟ್ಟರು. ಕಾಲ್ನಡಿಗೆಯಿಂದ ಹಳ್ಳಿ, ಹಳ್ಳಿ ತಿರುಗುವದು, ಎಂಥೆಂಥ ಕಠಿಣ ಸಮಸ್ಯೆಗಳನ್ನು ಎದುರಿಸಿದ್ದರು. ಭೂಗತರಾಗಿದ್ದಾಗಂತೂ ಇವರ ಕಷ್ಟ ಹೇಳತೀರದು. ಹೊತ್ತಿಗೆ ಊಟವಿಲ್ಲ, ನಿದ್ದೆ ಇಲ್ಲ, ಓಡಾಟ, ಅಲೆದಾಟ ಸಹ ಕಳ್ಳತನದಲ್ಲಿ ನಡೆಯಬೇಕು. ಎಲ್ಲ ಕೆಲಸಗಳೂ ಗುಪ್ತವಾಗಿ ನಡೆಯಬೇಕು. ಹಗಲನ್ನು ರಾತ್ರಿ, ರಾತ್ರಿಯನ್ನು ಹಗಲು ಮಾಡಿದರೂ ನಿಶ್ಚಿಂತೆಯಿಂದ ಇರುವಂತಿಲ್ಲ. ಸ್ವಇಚ್ಛೆಯಿಂದ, ಸ್ವಪ್ರೇರಣೆಯಿಂದ ಏನನ್ನೂ ಮಾಡುವಂತಿಲ್ಲ. ಎಲ್ಲದಕ್ಕೂ ಬೇರೊಬ್ಬರ ಮೂಲಕವಾಗಬೇಕು. ಯಾರು ನೋಡುವರೋ, ಯಾರು ಗುರ್ತಿಸುವರೋ ಎಂಬ ಅಳುಕು ಸದಾ ಕಾಲ. ಇಂಥ ಅನಿಶ್ಚಿತ ಜೀವನವನ್ನು ವಾರವಲ್ಲ, ತಿಂಗಳಲ್ಲ, ವರ್ಷಗಟ್ಟಲೆ ಕಳೆಯುವುದು ಸಣ್ಣಮಾತೇ ? ಆದರೂ ಅತ್ಯಂತ ಶಾಂತರೀತಿಯಿಂದ ಎಲ್ಲವನ್ನು ವಿಷಕಂಠನಂತೆ ನುಂಗಿ ತನ್ನ ತ್ಯಾಗ ಏನೂ ಇಲ್ಲ ಎಂದು ಹೇಳುವದು ಇವರ ಸೌಜನ್ಯವನ್ನು ತೋರಿಸುತ್ತದೆಂದು ನನ್ನ ಅಭಿಪ್ರಾಯ.

# ಜೀವನ ಹೋರಾಟ

1946 ರಿಂದ 48ರವರೆಗೆ ಈ ಎರಡು ವರ್ಷ ಉಪಜೀವನದ ಹೋರಾಟ. ಕಾಂಗ್ರೆಸ್ ಕಮಿಟಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸ್ವತಂತ್ರ ಉದ್ಯೋಗ ಮಾಡಬೇಕೆಂಬುದೇ ಇವರ ಛಲ. ಅದರ ಸಲುವಾಗಿಯೇ ವಿಚಾರ ವಿನಿಮಯ ಮಾಡಲು ಮುಂಬೈಗೆ ಸತ್ಯಬೋಧ ಸಿಂಗೀತ ಇವರ ಕಡೆಗೆ ಹೋದೆವು. 7-8 ದಿವಸ ಚರ್ಚೆ ಮಾಡಿದರು. ಅವರು ಕೆಲವು ಸಾಮಾನುಗಳ ಏಜನ್ಸಿ ಕೊಡಿಸಿದರು. ಮೆಟ್ಟೂರು ಕಾವೇರಿ ಸೋಪಿನ ಏಜೆಂಟ್‌ರಾದರು. ಧಾರವಾಡಕ್ಕೆ ಬಂದು ವಿಜಯ ರೋಡ್‌ನಲ್ಲಿ ಒಂದು ಅಂಗಡಿ ಭಾಡಿಗೆ ಹಿಡಿದು ಸತ್ಯಜ್ಞಾನ ಗುಡಿ ಮತ್ತು ಇವರು ಸೇರಿ ವ್ಯವಹಾರ ಪ್ರಾರಂಭಿಸಿದರು. ಆದರೆ ಆಗ ಸಹ ಇವರ ಸಾರ್ವಜನಿಕ ಚಟುವಟಿಕೆ ಕಡಿಮೆಯಾಗಲಿಲ್ಲ. ವೇಳೆಗೆ ಸರಿಯಾಗಿ ಅಂಗಡಿಗೆ ಹೋದರೂ ಅಲ್ಲಿ ಹೆಚ್ಚಾಗಿ ರಾಜಕೀಯ ಚರ್ಚೆ ನಡೆಯುತ್ತಲಿತ್ತು. ಅಷ್ಟರಲ್ಲಿ ಹುಕ್ಕೇರಿಕರ ಅವರ ಷಷ್ಟ್ಯಬ್ದಿ ಸಮಾರಂಭ ಬಂತು, ಅದಕ್ಕೆ ಇವರೇ ಕಾರ್ಯದರ್ಶಿ. ಸ್ವಾತಂತ್ರ ದಿನದ ಸಂಭ್ರಮದಲ್ಲಿ ಇವರು ಸಂಪೂರ್ಣ ಮಗ್ನರು. ಧಾರವಾಡದ ಭಂಗಿ ಜನರು ಸಂಪು ಮಾಡಿದರೆ ಇವರೇ ಮುಂದಾಗಿ ಭಂಗಿ ಕೆಲಸ ಮಾಡಿದರು. ಸ್ವದೇಶಿ ವಸ್ತು ಪ್ರದರ್ಶನಕ್ಕೆ ಇವರೇ ಕಾರ್ಯದರ್ಶಿ. ಹೀಗಾಗಿ ವ್ಯಾಪಾರ ಹಿಂದೆ ಬಿತ್ತು. 15 ನೇ ಅಗಸ್ಟ್ ಮಧ್ಯರಾತ್ರಿ ನಾವೆಲ್ಲ ಅಂದರೆ ಭಾರತಿ, ಇವರು ಮತ್ತು ನಾನು, ಪ್ರಕಾಶ ಆಗ ನನ್ನ ಹೊಟ್ಟೆಯಲ್ಲಿಯೇ ಇದ್ದ. ನಾವು ಅಂದಿನ ಕಲೆಕ್ಟರ್ (ಅಂದರೆ ಡಿ. ಸಿ.) ಕಂಪೌಂಡಿಗೆ ಹೋದೆವು. ಆಗ ಶೀಲ್ಡ್ಸ್ ಎಂಬ ಐರಿಶ್ ಅಧಿಕಾರಿ ಕಲೆಕ್ಟರ್ ಆಗಿದ್ದರು. ಆ ಕಂಪೌಂಡಿನಲ್ಲಿ ಅಂದಿನ ಮಧ್ಯರಾತ್ರಿ ಹತ್ತು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ನಾವು ಆ ಕಛೇರಿಯ ಮೇಲ್ಭಾಗಕ್ಕೆ ಹೋದೆವು. ಅಲ್ಲಿ ಶೀಲ್ಡ್ಸ್ ಸಾಹೇಬರು ನಮ್ಮನ್ನು ಸ್ವಾಗತಿಸಿದರು. ಅಲ್ಲಿ ಹೋದವರೆಂದರೆ ಕುರ್ತಕೋಟಿ, ಹುಕ್ಕೇರಿಕರ, ಇವರು ಮತ್ತು ನಾವಿಬ್ಬರು. ಆಗ ಕಲೆಕ್ಟರ್ ಧ್ವಜಸ್ತಂಭದ ಮೇಲೆ ಹಾರಾಡುತ್ತಿದ್ದ ಯೂನಿಯನ್ ಜಾಕ್‌ಗೆ ಸೆಲ್ಯೂಟ್ ಕೊಟ್ಟು ತಾವೇ ಸ್ವತಃ ಇಳಿಸಿ, ಅದನ್ನು ಸುವ್ಯವಸ್ಥಿತವಾಗಿ ಮಡಚಿ ತಮ್ಮ ಹತ್ತಿರ ಇಟ್ಟುಕೊಂಡರು. ಸರಿಯಾಗಿ ರಾತ್ರಿ 12 ಗಂಟೆಗೆ ಹುಕ್ಕೇರಿಕರ ಅವರ ಹಸ್ತದಿಂದ ನಮ್ಮ ರಾಷ್ಟ್ರಧ್ವಜ ಪ್ರಪ್ರಥಮವಾಗಿ ಅಂದಿನ ಕಲೆಕ್ಟರ್ ಕಛೇರಿಯ ಧ್ವಜಸ್ತಂಭದ ಮೇಲೆ ಅಧಿಕೃತವಾಗಿ ಹಾರಿಸಲ್ಪಟ್ಟಿತು. ಆಗ ಇವರು ತಮ್ಮ ಅತ್ಯಂತ ಉಚ್ಚ ಸ್ವರದಿಂದ 'ಭಾರತ ಮಾತಾಕೀ' ಎಂದು ಕೂಗಿದರು. ಕೂಡಿದ ಜನಸ್ತೋಮವು ಅಷ್ಟೇ ಜೋರಿನಿಂದ 'ಜೈ' ಎಂದು ಉತ್ತರ ಕೊಟ್ಟಿತು. ಆಗ ಅಲ್ಲಿದ್ದ 21 ತೋಪುಗಳು ಮೊಳಗಿದವು. ಆ ಶಬ್ದವನ್ನು ಕೇಳಿ ಭಾರತಿ ದೂರದಿಂದ ಓಡಿ ಬಂದು ನನಗೆ ತೆಕ್ಕೆಬಿದ್ದಳು. ಹುಕ್ಕೇರಿಕರ ಅವರು ತೀರ ಚಿಕ್ಕ ಭಾಷಣ ಮಾಡಿ "ನಾವು ಇಂದು ಸಂಪೂರ್ಣ

ಸ್ವತಂತ್ರರಾದೆವು" ಎಂದು ಘೋಷಿಸಿದರು. ಧ್ವಜವಂದನೆ ಮುಕ್ತಾಯವಾದ ನಂತರ ಇವರು ತಮ್ಮ ಸೇವಾದಳದ ಸೈನಿಕರೊಂದಿಗೆ ದೀವಟಿಗೆ ಮೆರವಣಿಗೆ ಪ್ರಾರಂಭಿಸಿ ಊರೆಲ್ಲ ತಿರುಗಾಡಿ ಮನೆಗೆ ಬೆಳಗಿನ ಐದು ಗಂಟೆಗೆ ಬಂದರು. ಆ ಮೆರವಣಿಗೆಯ ಮುಂಭಾಗದಲ್ಲಿ ಓರ್ವ ಮಹಿಳಾ ಸ್ವಯಂಸೇವಕಿ ಒಂದು ಕೈಯಲ್ಲಿ ದೀವಟಿಗೆ, ಇನ್ನೊಂದು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದವಳೇ ಕುಮಾರಿ ಸಾವಕಾರ. ಸೇವಾದಳದ ಸೈನಿಕರ ಉತ್ಸಾಹಕ್ಕೆ ಮಿತಿಯೇ ಇರಲಿಲ್ಲ. ಪುನಃ ಬೆಳಿಗ್ಗೆ ಎಂಟೂವರೆ ಗಂಟೆಗೆ ಕಡಪಾ ಮೈದಾನದಲ್ಲಿ ಧ್ವಜವಂದನೆ ಮತ್ತು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಕುರ್ತಕೋಟಿ, ಹುಕ್ಕೇರಿಕರ, ಶಾಸಕ ಮಜೀದ ಕಿತ್ತೂರ, ಡಾ. ಕಬ್ಬೂರರು ನಮ್ಮ ರಾಷ್ಟ್ರಪತಿ (ಕಾಂಗ್ರೆಸ್ ಅಧ್ಯಕ್ಷ) ಆಚಾರ್ಯ ಕೃಪಲಾನಿ ಅವರು ಕೊಟ್ಟ ಪ್ರತಿಜ್ಞಾ ಪತ್ರವನ್ನು ಓದಿದಂತೆ ಜನತೆ ಅದನ್ನು ಉಚ್ಚರಿಸಿತು. ಹೀಗೆ ಈ ಕಾರ್ಯಕ್ರಮಗಳು 10-30ಕ್ಕೆ ಮುಕ್ತಾಯವಾದವು. ಎಲ್ಲ ಕಡೆಗೆ ತಳಿರುತೋರಣ ಕಟ್ಟಿದ್ದಲ್ಲದೆ ತಮ್ಮ ಮನೆ, ಅಂಗಡಿಗಳ ಮೇಲೆ ರಾಷ್ಟ್ರಧ್ವಜ ಹಾರಿಸಿದ್ದರು. ಎಲ್ಲ ಕಡೆಯಲ್ಲಿ ಸಂಭ್ರಮ.

ಭಂಗಿ ಸಂಪು : ಅದು ಬಹುಶಃ 1947 ಅಗಸ್ಟ್ ತಿಂಗಳು. ಆಗ ನಾನು ಭಾರತಿಯನ್ನೂ ಸಹ ಬಿಟ್ಟು ಬಾಗಲಕೋಟೆಗೆ ಹೋಗಿದ್ದೆ. ಒಂದು ದಿನ ಪೇಪರ್ ತೆಗೆದು ನೋಡಿದಾಗ ಧಾರವಾಡದಲ್ಲಿ ಭಂಗಿ ಜನರು ಸಂಪು ಮಾಡಿರುವರೆಂದೂ, ಕಳೆದ 15 ದಿವಸಗಳಿಂದ ಮಲ ಎತ್ತದೇ ಇದ್ದುದರಿಂದ ಊರೆಲ್ಲ ದುರ್ಗಂಧ ಅಡಗಿದ್ದು, ಇದನ್ನು ತಾಳಲಾರದೆ ಕಾಂಗ್ರೆಸ್ ಕಾರ್ಯಕರ್ತರು ತಾವೇ ಸ್ವತಃ ಈ ಕಾರ್ಯ ಕೈಗೊಂಡು ಊರು ಹಸನು ಮಾಡುತ್ತಿರುವರು ಎಂಬ ವರ್ತಮಾನ ನೋಡಿ ನಾನು ಕೂಡಲೇ ಧಾರವಾಡಕ್ಕೆ ಓಡಬೇಕೆನಿಸಿತು. ಇವರ ಪಾತ್ರ ಅದರಲ್ಲಿರಲೇಬೇಕೆಂದು ಊಹಿಸಿ ಧಾರವಾಡಕ್ಕೆ ಹೊರಟೇಬಿಟ್ಟೆ. ಆಗ ಭಾರತಿಗೆ ಕೇವಲ ಐದು ವರ್ಷ, ಏನೇನೋ ಗಾಳಿ ಸುದ್ದಿಗಳು ಅಲ್ಲಿ ಬರುತ್ತಿದ್ದವು. ಇವರು ಕೈದಾಗಬಹುದೆಂದು ಕೆಲವರು ಹೇಳಿದರೆ, ಭಂಗಿ ಕಾರ್ಯದಲ್ಲಿ ಇವರದೇ ಪ್ರಮುಖ ಪಾತ್ರ ಎಂದು ಸುದ್ದಿಗಳು ಬಂದವು. ಮರುದಿನ ನಾನು ಧಾರವಾಡಕ್ಕೆ ಬಂದೇ ಬಿಟ್ಟೆ. ಅಂದು ನಾನೆಣಿಸಿದಂತೆ ಇವರು ಭಂಗಿ ಕೆಲಸಕ್ಕೆ ಹೋಗಿದ್ದರು. ಭಾರತಿ ಮನೆಯಲ್ಲಿದ್ದಳು. ಅವಳಿಂದ ಸತ್ಯಸಂಗತಿ ತಿಳಿದುಕೊಂಡೆ. ಇವರು ಮಧ್ಯಾಹ್ನ 1 ಗಂಟೆಗೆ ಮನೆಗೆ ಬಂದರು. ತುಂಬಾ ದಣಿದಂತೆ ಕಾಣುತ್ತಿತ್ತು. ಹೊರಗೆ ಎಲ್ಲಿಯೋ ಸ್ನಾನ ಮಾಡಿಯೇ ಬಂದಿದ್ದರು. ಎಲ್ಲ ವಿಷಯವನ್ನು ವಿವರವಾಗಿ ಹೇಳಿದರು. ಬಹುಶಃ ನಾಳೆ ಭಂಗಿ ಜನರು ಕೆಲಸಕ್ಕೆ ಬರುವರು. ಆದರೆ ಅವರ ಸಂಬಳ ಹೆಚ್ಚಿಸಲೇಬೇಕೆಂದು ನಗರಸಭೆಗೆ ಇವರ ಒತ್ತಾಯ ನಡೆದಿತ್ತಂತೆ. ಅಂತೂ ಊಟ ಬಡಿಸಿದೆ. ಅವರಿಗೆ ಏನೂ ತಿನ್ನಲಿಕ್ಕೇ ಆಗಲಿಲ್ಲ, ಬಕಾಬಕಾ ವಾಂತಿ ಆದಂತೆ ಆಗುತ್ತಲಿತ್ತು, ಮೈಯೆಲ್ಲಾ ಫಿನಾಯಿಲ್ ವಾಸನೆ ಇತ್ತು. ಅವರಿಂದ ವರ್ಣನೆ ಕೇಳಿ ನಾನಂತೂ ಸ್ತಂಭೀಭೂತಳಾದೆ. ಮುಂದೆ ಇವರ ಹೇಳಿಕೆಯಂತೆ ಭಂಗಿ ವೇತನ ಹೆಚ್ಚಿಸಲಾಯ್ತು ಎಂಬ ವರ್ತಮಾನ ಬಂತು.

**ಜೀವನ ಹೋರಾಟ :** ಸ್ವತಂತ್ರ ಉದ್ಯೋಗ ಮಾಡಬೇಕೆಂದು ಕಾಂಗ್ರೆಸ್ ಕೆಲಸಕ್ಕೆ ಶರಣು ಹೊಡೆದರು. ಇವರು ಪ್ರಾರಂಭಿಸಿದ ಅಂಗಡಿ ಅಷ್ಟಕ್ಕಷ್ಟೇ. ಇವರ ಅಂಗಡಿ ಎಂದರೆ ಸಾರ್ವಜನಿಕ ವಿಷಯಗಳ ಚರ್ಚಾಕೂಟದಂತೆ ಇತ್ತು. ಇವರ ಸಾರ್ವಜನಿಕ ಕೆಲಸಗಳೇನು ಕಡಿಮೆಯಾಗಿರಲಿಲ್ಲ. ದಿನಾಲು ಉಪಜೀವನದ ಬಗ್ಗೆ ನಮ್ಮ ಚರ್ಚೆ ನಡೆದೇ ಇರುತ್ತಿತ್ತು.

ಬಿಡುಗಡೆಯಾದ ಕೂಡಲೇ ಮಾಳಮಡ್ಡಿ ಅಸುಂಡಿ ತೋಟದ ಬಾಡಿಗೆ ಮನೆಯಲ್ಲಿ ಹಿಡಿದು ಅದರಲ್ಲಿ ವಾಸ, ಅದೊಂದು ಭಯಾನಕ ಸ್ಥಳ. ಮುಂದೆ ನಾವು ಹುದ್ದಾರ ಕಂಪೌಂಡಿಗೆ ಸ್ಥಳಾಂತರಿಸಿದೆವು. ಪ್ರತಿ ತಿಂಗಳು ಬಾಡಿಗೆ 15 ರೂ. ಇತ್ತು.

**ಮೊಹರೆ ಅವರ ಆಗಮನ :** ಇವರ ಮೇಲೆ ಮೊಹರೆ ಹನುಮಂತರಾಯರಿಗೆ ಎಲ್ಲಿಲ್ಲದ ಪ್ರೀತಿ. ಆಗಾಗ್ಗೆ ಮನೆಗೆ ಬಂದು ಯೋಗಕ್ಷೇಮ ಕೇಳುವರು. ಅಂದು ನಾವು ಉಪಜೀವನದ ಗಂಭೀರ ಸಮಸ್ಯೆ ಚರ್ಚಿಸುತ್ತಲಿದ್ದೆವು. "ಯಾಕೋ ? ಅಂಗಡಿ ಏನಾತು ?" ಎಂದು ಕೇಳಿದರು. "ಬಂಡವಾಳ ಅಭಾವದ ಮೂಲಕ ಅದು ಮುಕ್ತಾಯಕ್ಕೆ ಬಂದಿದೆ" ಎಂದು ಹೇಳಿದರು. "ನೀನು ಇಂದಿನಿಂದ ಸಂಯುಕ್ತ ಕರ್ನಾಟಕಕ್ಕೆ ಸುದ್ದಿ ಬರೆದು ಕಳಿಸು. ನಾನು ತಿಂಗಳಿಗೆ 50/- ರೂ. ಕೊಡುತ್ತೇನೆ" ಎಂದು ಹೇಳಿದರು. ಆಗ ಕೆಲವು ದಿವಸ ನಮ್ಮ ಜೀವನ ಈ ಐವತ್ತರ ಮೇಲೆಯೇ ನಡೆದಿತ್ತು, ತುಂಬಾ ಮಿತವ್ಯಯ ಮಾಡಿದೆವು. ಇವರಿಗೆ ಮೂರು ಜೋಡು ಬಟ್ಟೆಗಳು, ನಿತ್ಯ ತಾವೇ ಬಟ್ಟೆ ಒಗೆದುಕೊಳ್ಳುವದು. ಅದರಂತೆ ಭಾರತಿಗೂ, ನನಗೂ ಹೇಳಿದರು. ನಮ್ಮ ಮನೆಯಲ್ಲಿ ಖಾದಿ ಹೊರತು ಬೇರೆ ಬಟ್ಟೆ ಹುಡುಕಿದರೂ ಸಿಗುತ್ತಿರಲಿಲ್ಲ. ನನ್ನ ಸೀರೆ ತೊಯಿಸಿದರೆ ಒಂದು ಬಕೀಟು ತುಂಬಿರುತ್ತಿತ್ತು. ನಾನು ಅಶಕ್ತ ಇದ್ದರೂ ಒಗೆದುಕೊಳ್ಳುತ್ತಿದ್ದೆ. ಭಾರತಿಯ ಬಟ್ಟೆಯನ್ನು ಇವರೇ ಒಗೆಯುತ್ತಲಿದ್ದರು.

ನಾವು ಮುಂಬೈಗೆ ಹೋಗಿಬಂದಾಗ ಒಂದು ಮೋಜಿನ ಸಂಗತಿ ನಡೆದಿತ್ತು. ನಾವು ಮನೆಯಲ್ಲಿ ಇಲಿ ಬಲಿ ಇಟ್ಟು ಹೋಗಿದ್ದೆವು. ಬಂದ ಕೂಡಲೇ ಅದನ್ನು ನೋಡಲು ಅದರ ತುಂಬಾ ಇಲಿ ಬಿದ್ದಂತೆ ಕಂಡಿತು. ಆದರೆ ಸತ್ಯಸಂಗತಿ ಬೇರೆಯೇ ಇತ್ತು. ಒಂದು ಹಾವು ಅದರಲ್ಲಿ ಸೇರಿ ಒದ್ದಾಡುತ್ತಲಿತ್ತು. ಇವರೇ ಅದನ್ನು ಕೋಲಿನಿಂದ ಹೊರಗೆ ತೆಗೆದುಕೊಂಡು ಹೋದರು.

ಇದೇ ಸಂದರ್ಭದಲ್ಲಿ ಇನ್ನೂ ಎರಡು ಘಟನೆಗಳಾದವು. ಹುಕ್ಕೇರಿಕರ ಅವರ ಷಷ್ಠ್ಯಬ್ದಿ ಸಮಾರಂಭ, ಇನ್ನೊಂದು ಸ್ವದೇಶಿ ವಸ್ತು ಪ್ರದರ್ಶನ. ಎರಡಕ್ಕೂ ಇವರೇ ಕಾರ್ಯದರ್ಶಿ.

ಷಷ್ಠ್ಯಬ್ದಿ ಸಮಾರಂಭಕ್ಕೆ ಎಸ್. ಕೆ. ಪಾಟೀಲ ಮುಂಬೈಯಿಂದ ಬಂದಿದ್ದರು. ತುಂಬಾ ಯಶಸ್ವಿಯಾಯಿತೆಂದು ಕೇಳಿದೆ. ಆಗ ನಾನು ಬಾಣಂತಿ, ಪ್ರಕಾಶನನ್ನು ಹೆತ್ತಿದ್ದೆ. ಮನೆಗೆ ಅವ್ವ ಬಂದಿದ್ದಳು.

ಪ್ರದರ್ಶನವು ಸರಕಾರಿ ಇಂಗ್ಲೀಷ್ ಶಾಲೆಯ ಆವರಣದಲ್ಲಿ 15 ದಿವಸಗಳವರೆಗೆ ನಡೆಯಿತು. ತುಂಬಾ ಜನದಟ್ಟಣೆ ಇತ್ತು. ಇದಕ್ಕೆ ಆರ್ಥಿಕ ನೆರವನ್ನು ಕೊಟ್ಟವರು ಜಿಲ್ಲಾ ಲೋಕಲ್ ಬೋರ್ಡಿನವರು. ಆಗ ತಂಬಾಕದ ಅಧ್ಯಕ್ಷರಿದ್ದರು. ಇದರಲ್ಲಿ ಎರಡು ಮಹತ್ವದ ಘಟನೆಗಳು ನಡೆದವು.

ಒಂದು ದಿನ ರಾತ್ರಿ 12ಕ್ಕೆ ವಿಪರೀತ ಮಳೆಯಾಯ್ತು. ಆಗ ನಾವು ಹುದ್ದಾರರ ಮನೆಯಲ್ಲಿದ್ದೆವು. ಪ್ರದರ್ಶನದ ಆವರಣದಲ್ಲಿ ನೂರಾರು ಕೆಲಸಗಾರರು ಹೊರಗೆ ಮಲಗುತ್ತಿದ್ದರು. ಅವರ ಬಗ್ಗೆ ಇವರು ತುಂಬಾ ಚಡಪಡಿಸಹತ್ತಿದರು. ಮುಂದೆ ಮಳೆ ಕಡಿಮೆಯಾದ ಕೂಡಲೇ ಸೈಕಲ್ ಹತ್ತಿ ಪ್ರದರ್ಶನದ ಕಡೆಗೆ ಹೋದರು. ಏನು ವಿಚಿತ್ರ ! ಅಲ್ಲಿ ಒಂದು ಹನಿ ಕೂಡಾ ಮಳೆ ಇಲ್ಲ. ಎಲ್ಲರೂ ಸ್ವಸ್ಥ ಮಲಗಿದ್ದನ್ನು ನೋಡಿ ಅತ್ಯಂತ ಸಮಾಧಾನದಿಂದ ಮನೆಗೆ ಬಂದು ಈ ಸುದ್ದಿ ಹೇಳಿದರು. ದೇವರು ಹೇಗಾದರೂ ಕಾಯುವನೆಂಬ ನನ್ನ ವಿಶ್ವಾಸ ಗಟ್ಟಿಯಾಯ್ತು.

ಇನ್ನೊಂದು ವಿಚಿತ್ರ ಘಟನೆಯೆಂದರೆ ಓರ್ವ ಮನೆ ಮಾರಾಟ ಹೊಂದಿಸಿಕೊಡುವ ಏಜೆಂಟ ನಮ್ಮ ಮನೆಗೆ ಬಂದು "ನಿಮಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಅಂದರೆ 4-6 ಸಾವಿರದ ಒಳಗೆ ಒಂದು ಮನೆ ಕೊಡಿಸುತ್ತೇನೆ. ಅದನ್ನು ನೀವೇ ತೆಗೆದುಕೊಳ್ಳಬೇಕೆಂದು ನನ್ನ ಆಸೆ" ಎಂದಾಗ ನಮಗೆ ಪರಮಾಶ್ಚರ್ಯ ! ನಾವು ನಿತ್ಯ ನಮ್ಮ ಉಪಜೀವನ ಹೇಗೆ ನಡೆಸಬೇಕೆಂಬ ವಿಚಾರದಲ್ಲಿದ್ದಾಗ ಈ ಸೂಚನೆ ವಿಚಿತ್ರವೆನಿಸಿತು. ಆಗ ಇವರು "ನಮ್ಮಂಥವರಿಂದ ಅದು ಸಾಧ್ಯವಿಲ್ಲದ ಮಾತು. ನಾವು ನಮ್ಮ ನಿತ್ಯದ ಉಪಜೀವನ ಹೇಗೆ ಮಾಡಬೇಕೆಂಬ ವಿಚಾರದಲ್ಲಿದ್ದೇವೆ" ಎಂದು ಹೇಳಿದರು. ಅದಕ್ಕೆ ಆತ ಹೇಳಿದ "ಮೊನ್ನಿನ ಪ್ರದರ್ಶನದಲ್ಲಿ ಸಾವಿರಾರು ರೂಪಾಯಿ ಗೇಟ್ ಕಲೆಕ್ಷನ್ ಆಗಿದೆ ಎಂದು ಬೊಬ್ಬಾಟವಿದೆ. ಆ ಹಣ ಕೊಟ್ಟು ಮನೆ ಖರೀದಿ ಮಾಡಿರಿ" ಎಂದ. "ಅದು ನಮ್ಮ ಹಣವಲ್ಲ, ಸಾರ್ವಜನಿಕರದು. ಅದರ ಮೇಲೆ ನಮ್ಮ ಹಕ್ಕು ಇಲ್ಲ" ಎಂದು ಹೇಳಿದ್ದಕ್ಕೆ "ನಿಮಗೆ ಅದರಲ್ಲಿ ಏನೂ ಲಾಭವಿಲ್ಲದೇ ನೀವು ಯಾಕೆ ಈ ಕಾರ್ಯ ಮಾಡಿದಿರಿ ? ನಮಗೆ ನಾಲ್ಕು ದುಡ್ಡು ಸಿಗುತ್ತಿದ್ದರೆ ಕೆಲಸ ಮಾಡಬೇಕು. ಇಲ್ಲವಾದರೆ ಗುಡ್ಡಕ್ಕೆ ಕಲ್ಲು ಹೊತ್ತಂತೆ. ನೀವು ಯಾಕೆ ಇಷ್ಟು ಕಷ್ಟಪಟ್ಟಿರಿ ?" ಎಂದು ಹೇಳುತ್ತ ಹೋದ. ಜನತೆಯ ಮನಸ್ಸಿನಲ್ಲಿ ಹೇಗೆ ವಿಷಯಗಳು ಬರುತ್ತವೆಂಬುದಕ್ಕೆ ಇದೊಂದು ಚಿಕ್ಕ ಉದಾಹರಣೆ.

ಅದೇ ಧಾರವಾಡಕ್ಕೆ ಆಕಾಶವಾಣಿ ಬಂದಿತ್ತು. ಶ್ರೀ ವಾಕನೀಸ್ ಅಲ್ಲಿಯ ಮುಖ್ಯಸ್ಥರು. ಆಗಾಗ್ಗೆ ನಮ್ಮ ಮನೆಗೆ ಬಂದು ಇವರ ಸಂಗಡ ಅನೇಕ ವಿಷಯ ಚರ್ಚಿಸುತ್ತಿದ್ದರು. ಒಮ್ಮೆ ಇವರ ಭಾಷಣವಿದ್ದಾಗ್ಗೆ ಭಾರತಿ, ನಾನು ಆ ಕೇಂದ್ರಕ್ಕೆ ಹೋಗಿದ್ದೆವು. ಆಗ ರಂಗರಾವ್ ದಿವಾಕರರು ಆಕಾಶವಾಣಿಯ ಮಂತ್ರಿಗಳಾಗಿದ್ದರು. ಒಮ್ಮೆ ಒಂದು ಮೋಜಿನ ಪ್ರಸಂಗ ಬಂತು. ಸರದಾರ್ ವಲ್ಲಭಭಾಯಿ ಅವರು ನಿಧನರಾಗಿದ್ದರು. ಅವರ ಬಗ್ಗೆ ಮಾತಾಡಬೇಕೆಂದು ದಾಬಡೆ ಅವರನ್ನು ಹುಡುಕಿಕೊಂಡು ವಾಕನೀಸ್ ಬಂದರು. ಅವರು ಊರಲ್ಲಿರಲಿಲ್ಲ. ನೀವು ಗೊತ್ತು ಮಾಡಿದ ಸಮಯಕ್ಕೆ ಅವರು ಬರಬಹುದೆಂದು ಹೇಳಿದೆ. ಅದಕ್ಕೆ ಅವರು "ಒಂದು ವೇಳೆ ಬರದಿದ್ದರೆ ನೀವೆ

ಮಾತಾಡಬೇಕು" ಎಂದು ಹೇಳಿದರು. ನಾನು ಕ್ಷಣಹೊತ್ತು ಗಾಬರಿಯಾದೆ, ಆ ದಿನ ಬಂದೇ ಬಿಟ್ಟಿತು. ಇವರು ಧಾರವಾಡಕ್ಕೆ ಬರಲಿಲ್ಲ, ನಾನು ಏನೇನೊ ವಿಚಾರಮಾಡಿ ಎರಡು ಬಿಳಿ ಕಾಗದದಲ್ಲಿ ಭಾಷಣ ಬರೆದು, ನಮ್ಮ ಮನೆ ಪಕ್ಕದಲ್ಲಿದ್ದ ಓರ್ವ ನಿವೃತ್ತ ಶಿಕ್ಷಕರಿಗೆ ತೋರಿಸಿದೆ. ಅವರು ಅದರಲ್ಲಿ ಕೆಲವು ತಿದ್ದುಪಡಿ ಮಾಡಿಕೊಟ್ಟರು. ನನಗೆ ಯಾವಾಗಲೂ ಆಧಾರವಾಗಿರುವ ದೇವರು, ಆತನನ್ನು ನೆನೆಸಿದೆ. ನೀನೆ ನನ್ನ ಮಾನರಕ್ಷಕನೆಂದು ಕೈಮುಗಿದು ದೀಪ ಹಚ್ಚಿದೆ. ಸಂಜೆ ಇವರನ್ನು ಕರೆಯಲು ಕಾರು ಬಂದೇ ಬಿಟ್ಟಿತು. ನಾನು ಹೋದೆ, ಆಗ ರೆಕಾರ್ಡಿಂಗ್ ಪದ್ಧತಿ ಇರಲಿಲ್ಲ, ನೇರ ಪ್ರಸಾರವಾಗುತ್ತಿತ್ತು. ಮನಸ್ಸಿನಲ್ಲಿ ಮತ್ತೊಮ್ಮೆ ದೇವರನ್ನು ನೆನೆಸಿ ನನ್ನ ಮಾತು ಪ್ರಾರಂಭಿಸಿದೆ. ಆತನ ದಯದಿಂದ ಯಾವ ತೊಂದರೆ ಇಲ್ಲದೆ ಅದನ್ನು ಪೂರ್ತಿ ಓದಿದೆ. ನನಗಂತೂ ಸಮಾಧಾನವಾಯ್ತು. ಯಥಾಪ್ರಕಾರ ಕಾರಿನಲ್ಲಿ ಮನೆಗೆ ತಂದುಬಿಟ್ಟಿದ್ದರು. ಆ ಹೊತ್ತಿಗೆ ಇವರು ಬಂದಿದ್ದರು, ಅಲ್ಲದೇ ನನ್ನ ಭಾಷಣವನ್ನು ಪೂರ್ತಿ ರೇಡಿಯೊದಲ್ಲಿ ಕೇಳಿ ನನ್ನನ್ನು ತುಂಬು ಹೃದಯದಿಂದ ಅಭಿನಂದಿಸಿದರು.

1946ರಲ್ಲಿ ಇವರು ಪ್ರಾರಂಭಿಸಿದ ಅಂಗಡಿಗೆ ಸತ್ಯಧ್ಯಾನ ಗುಡಿ ಅವರು ಇವರ ಪಾಲುಗಾರರು. ಸತ್ಯಬೋಧ ಸಿಂಗೀತ ಸಹಾಯ ಮಾಡುತ್ತಲಿದ್ದರು. ಇವರ ಹತ್ತಿರ ಇದ್ದ ಬಂಡವಾಳ ದೊಡ್ಡ ಸೊನ್ನೆ. ಮುಂದೆ ಹೇಗೆ ಮಾಡಬೇಕು ? ಎಂಬ ಬಗ್ಗೆ ದಿನಾಲೂ ಚಿಂತೆ ಚರ್ಚೆ ನಡೆದೇ ಇತ್ತು. ಈ ಸಮಯಕ್ಕೆ ಗುಡಿಯವರು ಯಾವ ಬೇಡಿಕೆಯನ್ನಿಡದೆ ತಾವು ಹಿಂದೆ ಸರಿಯುವದಾಗಿ ಹೇಳಿ ಹೊರಬಿದ್ದರು. ಇಂಥ ಪರಿಸ್ಥಿತಿಯಲ್ಲಿ ಇನ್‌ಕಂ ಟ್ಯಾಕ್ಸ್ ಅಧಿಕಾರಿಯಿಂದ ನೋಟಿಸ್ ಬಂತು. ಇವರು ತುಂಬಾ ಚಿಂತಾಕ್ರಾಂತರಾದರು. ನಾನು ಯಥಾಪ್ರಕಾರ ದೇವರಲ್ಲಿ ಮೊರೆಯಿಡುತ್ತಲೇ ಇದ್ದೆ. ಆತ ನನ್ನ ಮೊರೆ ಕೇಳಿದ. ಇವರಿಗೆ ಓರ್ವ ಪರಿಚಿತ ಮೇಲಾಧಿಕಾರಿಗಳು ಸಿಕ್ಕರು (ದೇಶಪಾಂಡೆ ಭಗೀರಥರಾಯರು). ಅವರಿಗೆ ನಿಜ ಸಂಗತಿ ಎಲ್ಲಾ ಗೊತ್ತಿತ್ತು, ಅವರು ಸುಲಭವಾಗಿ ಇವರನ್ನು ಪಾರು ಮಾಡಿದರು.

# ಸರ್ವೋದಯದ ಪ್ರವೇಶ

ಆಗ ನಾವು ಮುಂಬೈ ಪ್ರಾಂತದಲ್ಲಿದ್ದೆವು. ಪ್ರಾಂತಿಕ ಸರಕಾರ 1946ರಲ್ಲಿ ಸರ್ವೋದಯ ಯೋಜನೆಯನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿತು. ಜಿಲ್ಲೆಗೆ ಒಬ್ಬ ಸಂಚಾಲಕರನ್ನು ನೇಮಿಸುತ್ತಲಿದ್ದರು. ಅದು ತಮಗೆ ಬರುವದೆಂದು ಇವರು ಚಾತಕ ಪಕ್ಷಿಯಂತೆ ಕಾಯುತ್ತಿದ್ದರು. ಆದರೆ ಅದಕ್ಕೆ ಎಸ್. ಕೆ. ಕಲ್ಲಾಪುರ ಅವರನ್ನು ನೇಮಿಸಲಾಗಿದೆ ಎಂಬ ಪ್ರಕಟಣೆ ಬಂತು. ಇವರಿಗೆ ನಿರಾಸೆಯಾಯಿತು, ನಾನೇ ಧೈರ್ಯ ಹೇಳುತ್ತಲಿದ್ದೆ. ನಮ್ಮ ವೆಚ್ಚವನ್ನು ತುಂಬಾ ಕಡಿಮೆ ಮಾಡಿದೆವು. ಆ ಸಂದರ್ಭದಲ್ಲಿ ಅಂಗಡಿ ನಡೆಸುವದೂ ತುಂಬಾ ದುಸ್ತರವೆಂದು ಅದನ್ನು ಬೇರೆಯವರಿಗೆ ಒಪ್ಪಿಸಿ ಕೈತೊಳೆದುಕೊಂಡರು. ಆಗ ಪುನಃ ದೇವರು ನಮ್ಮ ನೆರವಿಗೆ ಬಂದ. ಸರ್ವೋದಯ ಪ್ರಚಾರಕರೆಂದು ಇವರ ನೇಮಕವಾಯ್ತು. ತಿಂಗಳಿಗೆ 100/- ರೂ. ವೇತನ ಎಂದು ನಿರ್ಧಾರವಾಯಿತು. ಕಲ್ಲಾಪುರ ಅವರ ಕೈಯಲ್ಲಿ ಕೆಲಸ ಮಾಡಬೇಕು. ನಾನು ಒತ್ತಾಯ ಮಾಡಿ ಒಪ್ಪಿಸಿದೆ. ಕೆಲಸ ಪ್ರಾರಂಭವಾಯ್ತು, ಇವರು ಹಳ್ಳಿಗಳಿಗೆ ತಿರುಗಾಡಹತ್ತಿದರು. ಸರ್ವೋದಯ ಕ್ಷೇತ್ರದಲ್ಲಿ 44 ಹಳ್ಳಿಗಳು ಬರುತ್ತಿದ್ದವು. ಅದರಲ್ಲಿ 16 ಗ್ರಾಮಗಳಲ್ಲಿ ಜನಸಂಖ್ಯೆಯೇ ಇರಲಿಲ್ಲ. ಇದು ಧಾರವಾಡ ತಾಲೂಕಿನ ಮಲೆನಾಡ ಭಾಗ, ಮಳೆಗಾಲದಲ್ಲಿ ತುಂಬಾ ಮಳೆ ಆದರೂ ಬೇಸಿಗೆಯಲ್ಲಿ ಕುಡಿಯುವ ನೀರು ಸಿಗುತ್ತಿರಲಿಲ್ಲ. ಇವರು ಕಾರ್ಯ ಆರಂಭಿಸಿದರು. ಆಗ ಸರ್ವೋದಯ ಕಛೇರಿ ಧಾರವಾಡದಲ್ಲಿ ಕಲ್ಲಾಪುರ ಅವರ ಮನೆಯಲ್ಲಿಯೇ ಇತ್ತು. ಈಗ ದೇವರು ಪುನಃ ನಮ್ಮ ನೆರವಿಗೆ ಬಂದ. ಕಲ್ಲಾಪುರ ಅವರು ಜಪಾನಕ್ಕೆ ಹೋಗಬೇಕಾಗಿ ಬಂತು. ಆಗ ಅವರು ತಮ್ಮ ಸಂಚಾಲಕತ್ವದ ಅಧಿಕಾರವನ್ನು ದಾಬಡೆ ಅವರಿಗೆ ವಿಧಿವತ್ತಾಗಿ ಒಪ್ಪಿಸಿ ಜಪಾನಕ್ಕೆ ಹೋದರು. ಇವರು ಅದರ ಪೂರ್ತಿ ಹೊಣೆಯನ್ನು ಹೊತ್ತುಕೊಂಡು ತುಂಬಾ ಉತ್ಸಾಹದಿಂದ ಕಾರ್ಯಪ್ರವೃತ್ತರಾದರು.

**ಗಾಂಧೀ ಕೊಲೆ :** ಅದು 1948 ಜನೇವರಿ 30ನೇ ದಿನಾಂಕ, ದಿಲ್ಲಿಯಲ್ಲಿ ಗಾಂಧೀ ಕೊಲೆಯಾಯಿತೆಂಬ ವರ್ತಮಾನ ಬಂತು. ಆಗ ನಾನು ಬಾಗಲಕೋಟೆಯಲ್ಲಿದ್ದೆ. ಒಂದು ಕ್ಷಣ ಏನು ಮಾಡಬೇಕು ಎಂಬುದೇ ತಿಳಿಯಲಿಲ್ಲ. ಏನೇ ಆಗಲಿ ನಾನು ಇವರ ಸಂಗಡವೇ ಇರಬೇಕೆಂದು ಧಾರವಾಡಕ್ಕೆ ಬಂದೆ. ನಾ ಬರುವದನ್ನು ಇವರಿಗೆ ತಿಳಿಸಿರಲಿಲ್ಲ. ನಾನು ಬಂದಾಗ್ಗೆ ಇವರು ಮನೆಯಲ್ಲಿ ಇರಲಿಲ್ಲ. ಆಗ ಅಲ್ಲಲ್ಲಿ ಸಭೆಗಳಾಗುತ್ತಿದ್ದವು. ಗೋಡ್ಸೆ ಎಂಬಾತ ಗಾಂಧಿಗೆ 3 ಗುಂಡು ಹಾಕಿ ಕೊಂದನೆಂದು ಗೊತ್ತಾಯಿತು. ಈ ಕೊಲೆಯನ್ನು ಆರ್. ಎಸ್. ಎಸ್. ದವರೇ ಮಾಡಿದರೆಂದು ಎಲ್ಲಾ ಕಡೆಗೆ ಸುದ್ದಿ ಹಬ್ಬಿತ್ತು. ಅಲ್ಲದೆ ಇಲ್ಲಿ ಕೆಲವು ಕಾಂಗ್ರೆಸ್ಸಿಗರ ಆಹುತಿ

ತೆಗೆದುಕೊಳ್ಳುವರೆಂಬ ವರ್ತಮಾನವೂ ಇತ್ತು. ಜನರು ಧೈರ್ಯಗೆಡಬಾರದೆಂದು ತಾಲೂಕು ಕಾಂಗ್ರೆಸ್ ಪರವಾಗಿ ಅಲ್ಲಲ್ಲಿ ಸಭೆ ನಡೆಯುತ್ತಿದ್ದವು. ಕುರ್ತಕೋಟಿ ಅಧ್ಯಕ್ಷ, ಇವರು ಕಾರ್ಯದರ್ಶಿ. ನಾನು ಬಂದ ದಿವಸ ಹೊಸಯಲ್ಲಾಪುರ ಕೂಟದಲ್ಲಿ ಸಭೆಯಿತ್ತು. ನಾನು ಪಕ್ಕದ ಮನೆಯಲ್ಲಿಯೇ ಕುಳಿತಿದ್ದೆ. ಇವರು ಮನೆಗೆ ಬಂದಾಗ ರಾತ್ರಿ 8 ಹೊಡೆದಿತ್ತು. ಪರಿಸ್ಥಿತಿ ಕಠಿಣವಿರುವದೆಂದು ಸಾಮಾನ್ಯವಾಗಿ ಕುರ್ತಕೋಟಿ, ಶಕುಂತಲಾ ಮತ್ತು ಇವರು ಕೂಡಿಯೇ ಇರುತ್ತಿದ್ದರು. ನಾನು ಬಂದಮೇಲೆ ಇವರಿಗೆ ಹೆಚ್ಚಿನ ಬಲ ಬಂದಂತಾಯ್ತು.

**ತವರಿನ ಸಂಭ್ರಮ :** ಆಗ ನನ್ನ ತಂಗಿ ಪ್ರಭಾವತಿಯ ಲಗ್ನವಾಗಿರಲಿಲ್ಲ. ಅವಳು ನಮ್ಮ ಮನೆಯಲ್ಲಿಯೇ ಹೆಚ್ಚಾಗಿ ಇರುತ್ತಿದ್ದಳು. ಇವರು ಅವಳನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅಲ್ಲದೇ ವೆಂಕಣ್ಣ (ಸುರೇಂದ್ರ ದಾನಿ), ವಸಂತ ನನ್ನ ತಮ್ಮಂದಿರು ಆಗಾಗ್ಗೆ ಬರುತ್ತಲೇ ಇದ್ದರು, ಅವರು ಸೇವಾದಳದ ಸೈನಿಕರು. ಹೀಗಾಗಿ ಅವರ ಮೇಲೆ ಸಹ ಇವರದು ತುಂಬಾ ಪ್ರೀತಿ ವಿಶ್ವಾಸ. ಇದೇ ಸಂದರ್ಭದಲ್ಲಿ ನನ್ನ ತಂಗಿ ಪ್ರಭಾವತಿಯ ಲಗ್ನ ಧಾರವಾಡದ ನಮ್ಮ ಮನೆಯಲ್ಲಿಯೇ ಆಯಿತು. ಇವಳ ಗಂಡ ಬಿಂದೂರಾವ ಕುಲಕರ್ಣಿ ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದ. ಆಗ ಆತ ಲೋಣಾವಳದಲ್ಲಿ ಇರುತ್ತಿದ್ದ. ಲಗ್ನವಾದ ಕೂಡಲೇ ಅವಳು ಗಂಡನ ಸಂಗಡ ಲೋಣಾವಳಕ್ಕೆ ಹೋದಳು. ವೆಂಕಣ್ಣ ಬಂದು ಹೋಗುವುದು ನಡೆದೇ ಇತ್ತು, ಆತನ ಬಗ್ಗೆ ನನಗೆ ತುಂಬಾ ಅಭಿಮಾನ. ಮುಂದೇನು ಮಾಡಬೇಕು ಎಂಬ ಬಗ್ಗೆ ಇವರ ಸಂಗಡ ಚರ್ಚೆ ಮಾಡುತ್ತಲಿದ್ದ.

ಅವನು ಒಂದು ದಿವಸ ಒಮ್ಮೆಲೆ ಅದೃಶ್ಯನಾಗಿಬಿಟ್ಟ (1946), ಯಾರಿಗೂ ಏನೂ ಹೇಳಿರಲಿಲ್ಲ. ನಮ್ಮ ಸಂಗಡ ತುಂಬಾ ಆತ್ಮೀಯವಾಗಿ ನಡೆದುಕೊಳ್ಳುತ್ತಲಿದ್ದ. ಆಗ ಒಂದು ಮೋಜಿನ ಸಂಗತಿ. ನನ್ನ ತಾಯಿ ಮತ್ತು ಅಬಚಿ ಸುಬ್ಬಕ್ಕ ನಮ್ಮ ಮನೆಗೆ ಬಂದು ವೆಂಕಣ್ಣ ಮಾಯವಾದ ಬಗ್ಗೆ ದುಃಖಿಸಹತ್ತಿದರು. ನಾನು, ಇವರು ನಗುತ್ತ "ಯಾಕೆ ದುಃಖಿಸುವಿರಿ ? ಗಂಡು ಹುಡುಗ, ತಿಳುವಳಿಕೆಯುಳ್ಳವ ಎಲ್ಲಿ ಹೋಗ್ತಾನ ? ತಿರುಗಿ ಬಂದೇ ಬರ್‍ತಾನ" ಎಂದು ಹೇಳಿದರು. ಅದಕ್ಕೆ ಅವರು "ನಿಮಗೆಲ್ಲಾ ಗೊತ್ತಿದೆ ಆದರೂ ಮುದ್ದಾಂ ಹೇಳುವದಿಲ್ಲ" ಎಂದು ಅಪವಾದ ಕೊಟ್ಟರು. ನಿಜವಾಗಿ ನಮಗೂ ಗೊತ್ತಿರಲಿಲ್ಲ. ಆತ ಸುಮಾರು ಆರು ತಿಂಗಳು ಮಾಯವಾಗಿದ್ದ. ಉತ್ತರ ಹಿಂದುಸ್ತಾನದ ದಿಲ್ಲಿ, ಆಗ್ರಾ ಮುಂತಾದ ಕಡೆಗೆ ಹೋಗಿ ಅಲ್ಲಿಯ ಸೇವಾದಳದವರನ್ನು ಸಂಪರ್ಕಿಸಿ, ಅಲ್ಲಿಯ ಸ್ಥಿತಿಗತಿ ನೋಡಿಕೊಂಡು ವಾಪಸ್ಸು ಬಂದ, ನನಗೆ ತುಂಬಾ ಸಂತೋಷವಾಯ್ತು. ಆತ ತುಂಬಾ ಸಾಹಿತ್ಯ ಪ್ರೇಮಿ. ಆಗಾಗ್ಗೆ ಕತೆ ಬರೆದು ಪತ್ರಿಕೆಗೆ ಕಳಿಸುತ್ತಿದ್ದ. ಒಮ್ಮೆ ನಮ್ಮ ಮನೆಗೆ ಒಬ್ಬ ಅತಿಥಿ ಬಂದಿದ್ದ. ನಮಗೆ ತೀರಾ ದೂರದ ಸಂಬಂಧಿಕ. ಆತ ಸ್ಥಳವನ್ನೇ ಕಿತ್ತಲಿಲ್ಲ ಆಗ ವೆಂಕಣ್ಣ ಆ ಆಗಂತುಕ ಅತಿಥಿಯ ಮೇಲೆಯೇ ಒಂದು ಕತೆ ಬರೆದು ಕಳಿಸಿದ್ದ, ಅದು ಪ್ರಕಟವೂ ಆಗಿತ್ತು.

ಅವನ ಮುಂದೆ ಮುಂದೇನು ಮಾಡಬೇಕು ಎಂಬ ದೊಡ್ಡ ಪ್ರಶ್ನೆಯಿತ್ತು. ನಮ್ಮ ಮುಖಂಡರೆನ್ನುವವರು ಈ ಬಗ್ಗೆ ಯೋಚನೆಯನ್ನೇ ಮಾಡುತ್ತಿರಲಿಲ್ಲ. ಇವರೇ ಒಮ್ಮೆ ಮೊಹರೆ ಅವರ ಸಂಗಡ ಮಾತಾಡಿದಾಗ ಅವರು, ಅವನನ್ನು ಸಂಯುಕ್ತ ಕರ್ನಾಟಕದಲ್ಲಿ ವರದಿಗಾರನೆಂದು ನೇಮಿಸಿದರು. ಹೆಚ್ಚು ಕಡಿಮೆ ನಮ್ಮ ಮನೆಯಲ್ಲಿಯೇ ಇರುತ್ತಿದ್ದ. ಭಾರತಿಯ ಸಂಗಡ ಈತನ ಗೊಂದಲ ಇದ್ದದ್ದೆ. ಒಂದು ಸಲ ಇವಳು ಬೆಳಿಗ್ಗೆ ಬೇಗ ಏಳಲಿಲ್ಲ. ಆಗ ಆತ ಬಂದು ಗಾದಿಯಲ್ಲಿ ಅವಳನ್ನು ಸುತ್ತಿ ಮುಖ ಮೇಲೆ ಬಿಟ್ಟು ಮೂಲೆಯಲ್ಲಿ ನಿಲ್ಲಿಸಿಬಿಟ್ಟಿದ್ದ. ಅವಳ ಚಡಪಡಿಕೆ ಎಲ್ಲರಿಗೂ ಮೋಜು. ನಿತ್ಯ ಹುಬ್ಬಳ್ಳಿಗೆ ಹೋಗಿ ಬರುತ್ತಿದ್ದ. ಆತನಿಗೆ ಬುತ್ತಿ ಕಟ್ಟಿ ಕೊಟ್ಟು ಅನೇಕ ಸಲ ಗಾಡಿ ಖರ್ಚು ಕಿಸೆಯಲ್ಲಿ ಹಾಕಿ ಕಳಿಸುತ್ತಲಿದ್ದೆ.

ನಮ್ಮ ಮನೆಗೆ ಆಗ ಬರುವವರೆಂದರೆ ಆರ್. ಎಸ್. ಉಪಾಧ್ಯ, ಎಚ್. ಆರ್. ಕನವಳ್ಳಿ, ಎಮ್. ಜಿ. ಪಾಟೀಲ, ಕುರ್ತಕೋಟಿ ಶಕುಂತಲಾ, ಬುರ್ಲಿ ಬಿಂದು ಮಾಧವಾಚಾರ್ಯ, ಭಾಸ್ಕರ ಗೋಖಲೆ, ವೆಂಕಣ್ಣ, ಹಾವನೂರ ಇವರೇ ಮೊದಲಾದವರು.

**ನಮ್ಮ ಅಡಚಣೆಗಳು :** ನಿಜ ಹೇಳಬೇಕೆಂದರೆ ಎರಡು ಅಡಚಣೆಗಳಿದ್ದವು. ಮೊದಲನೆಯದೆಂದರೆ ನಮ್ಮ ಆರ್ಥಿಕ ಪರಿಸ್ಥಿತಿ ತುಂಬಾ ಗಂಭೀರವಾಗಿತ್ತು. ತಿಂಗಳ ವೆಚ್ಚ ಹೇಗೆ ಪೂರೈಸಬೇಕೆಂಬ ಸಮಸ್ಯೆ ಇತ್ತು. ಅಂಥದರಲ್ಲಿ ನಮ್ಮ ಪ್ರಕಾಶನು ಹುಟ್ಟಿದ್ದ, ಬಾಣಂತನಕ್ಕೆ ಅವ್ವ ಬಂದಿದ್ದಳು. ನನಗೆ ಇವರ ಅಡಚಣೆಯ ಬಗ್ಗೆ ತುಂಬಾ ಕಳವಳವಾಗುತ್ತಲಿತ್ತು. ಆದರೆ ಇವರು ತೋರಗೊಡುತ್ತಿರಲಿಲ್ಲ. ಹೇಗೋ ಗಾಡಿ ನಡೆದಿತ್ತು, ಆಗ ಇವರಿಗೆ ಸಂಯುಕ್ತ ಕರ್ನಾಟಕದಿಂದ 50 ರೂ. ಮತ್ತು ಸರ್ವೋದಯದಿಂದ 100 ರೂ. ಬರುತ್ತಿತ್ತು. ಅಷ್ಟರಲ್ಲಿ ಸಮಾಧಾನದಿಂದ ಇರಲು ನಮ್ಮ ಪ್ರಯತ್ನ ನಡೆದಿತ್ತು.

ಎರಡನೆಯ ವಿಷಯ ನಾನು ಅಶಕ್ತಳಾಗಿದ್ದೆ. ಇವರು ನನಗೆ ಬಹಳ ನೆರವಾಗುತ್ತಿದ್ದರು. ಯಾವುದೇ ಕೆಲಸವಿದ್ದರೂ ನಿಷ್ಠೆಯಿಂದ ಮಾಡುವುದು ಇವರ ಜಾಯಮಾನ. ರಾಟಾಳದ ನೀರು ಜಗ್ಗುವದಂತೂ ಸಂಪೂರ್ಣ ಇವರದೇ. ಹಾಗೆ ಹೆಚ್ಚಿನ ಏನೇ ಕೆಲಸ ಬಂದರೂ ಇವರೇ ನೋಡಿಕೊಳ್ಳುವರು. ಕೆಲವು ಸಂದರ್ಭ ಅಡಿಗೆ ಮಾಡಿಕೊಳ್ಳುವದು ಬಂದರೂ ಸೈ. ಏನೇ ಆಗಲಿ ಇವರಿಗೆ ಅಡಿಗೆ ಹಚ್ಚಬಾರದೆಂದು ನನ್ನ ಧಡಪಡ. ಅದೆಷ್ಟೋ ಸಲ ಒಲಿಯ ಮುಂದೆಯೇ ಮಲಗಿ ಬಿಡುತ್ತಿದ್ದೆ, ಆದರೆ ಅಡಿಗೆ ಮಾಡುವದನ್ನು ಬಿಡುತ್ತಿರಲಿಲ್ಲ. ಡಾಕ್ಟರರ ಹತ್ತಿರ ಔಷಧೋಪಚಾರ ನಡದಿತ್ತು. ಇವರ ಸಹಕಾರವೇ ನನ್ನ ಬಲವಾಗಿತ್ತು.

**ಮಕ್ಕಳ ಆಟ :** ತೀರ ಚಿಕ್ಕವ ಪ್ರಕಾಶ ಆತನಿಗೆ ಬಹಳ ದಿವಸ ಅಡ್ಡಾಡಲು ಅಥವಾ ನಿಲ್ಲಲು ಸರಿಯಾಗಿ ಬರಲಿಲ್ಲ. ಅದಕ್ಕೆ ಕಾಲಿಗೆ ನಿತ್ಯ ಮಾಲೀಶ್ ಇವರೇ ಮಾಡುತ್ತಿದ್ದರು. ಆತ ಚಿಕ್ಕವನಿದ್ದಾಗ ಒಂದು ಸಮೆ ತಕ್ಕೊಂಡು ಮೇಜಿನ ಮುಂದೆ ಕುಳಿತು ಮುಂದಿನ ಕಟ್ಟಿಗೆಯ ಮೇಲೆ ಸಮೆಯನ್ನು ಇಟ್ಟು ಪೌಂ, ಪೌಂ ಎಂದು ಬಾಯಿಂದ ಹೇಳುತ್ತ ಸಮೆ ತಿರುಗಿಸುತ್ತಿದ್ದ.

ಅವನ ಮಾತೂ ತೀರಾ ಅಸ್ಪಷ್ಟ. ಡಬ್ಬಿಗೆ ಬಬ್ಬಿ ಎಂದು. ಚಮಚಾಕ್ಕೆ ಪಂಚೆ ಎಂದು, ಸಕ್ಕರೆಗೆ ಚಕ್ಕೆ ಎಂದೂ ಹೇಳಿದಾಗ ನಾವೆಲ್ಲ ನಗುತ್ತಿದ್ದೆವು. ಭಾರತಿ ಪ್ರಾಥಮಿಕ ಶಾಲೆಯ 2 ನೇ ಈಯತ್ತೆ. ಪುಸ್ತಕ ತೆಗೆದು ಆ ಪಾಠ ಬರುವ ಪೂರ್ವದಲ್ಲಿಯೇ ಅದನ್ನು ನಿಚ್ಚಳವಾಗಿ ಬಾಯಿಪಾಠ ಹೇಳುವಳು. ಶಾಲೆಯ ಕವಿತೆಗಳನ್ನು ತುಂಬಾ ಸ್ಪಷ್ಟವಾಗಿ ಹೇಳುತ್ತಾ ಕುಣಿಯುವಳು. ಒಂದು ಸಲ ಶಾಲೆಯಲ್ಲಿ ಪುಣ್ಯಕೋಟಿಯ ಕತೆ ಕೇಳಿ ದುಃಖಿಸುತ್ತಾ ಮನೆಗೆ ಬಂದಳು. ಓಣಿಯಲ್ಲಿ ಎಲ್ಲರ ಮನೆಗೂ ಹೋಗಿ ಮುದ್ದು ಮಾತಾಡುತ್ತಾ ಅವರ ಗಮನ ಸೆಳೆಯುತ್ತಿದ್ದಳು. ನಾವು ಓಣಿಯಲ್ಲಿ ತಿರುಗಾಡಲು ಹೋದಾಗ ಇವರು ಭಾರತಿಯ ತಂದೆ-ತಾಯಿಗಳೆಂದು ತೋರಿಸುವರು.

ಆಗ ಕಾಂಗ್ರೆಸ್ ಚಟುವಟಿಕೆಗಳ ಏನಾದರೊಂದು ಕಾರ್ಯಕ್ರಮವಾದರೆ ನಾವು ನಾಲ್ವರೂ ಹೋಗುತ್ತಿದ್ದೆವು. ಪ್ರಕಾಶ ನನ್ನ ಬಗಲಲ್ಲಿದ್ದರೆ ಭಾರತಿಯು ನಮ್ಮ ಸಂಗಡ ಇರದೇ ತನ್ನದೇ ಗುಂಪು ಸೇರುವಳು. ಕೊನೆಗೆ ಅವಳನ್ನು ಮನೆಗೆ ಯಾರಾದರೂ ತಮ್ಮ ಸೈಕಲ್ ಮೇಲೆ ತಂದು ಬಿಡುತ್ತಿದ್ದರು. ಸೇವಾದಳಕ್ಕೆ ನಾನೂ ಹೋಗುತ್ತಲಿದ್ದೆ. ನನ್ನ ಸಂಗಡ ಭಾರತಿ ಬರುತ್ತಿದ್ದಳು. ಮನೆಗೆ ಬಂದು ನಮ್ಮಿಬ್ಬರನ್ನೂ ನಿಲ್ಲಿಸಿ ಡ್ರಿಲ್ ಆರ್ಡರ್ ಕೊಡುವಳು. ನಾವು ಮಾಡದಿದ್ದರೆ ಅತ್ತು ತನ್ನ ಕಾರ್ಯ ಸಾಧಿಸುತ್ತಿದ್ದಳು. ಚಿಕ್ಕವಳಿದ್ದಾಗ ಅವಳು ಹೆಚ್ಚು ಅಡ್ಡಾಡುತ್ತಿರಲಿಲ್ಲ. ಯಾರಾದರೂ ಎತ್ತಿಕೊಳ್ಳಲೇಬೇಕು. ಒಮ್ಮೆ ರಾತ್ರಿ 10 ಗಂಟೆಗೆ ನಾವು ನಾಲ್ವರೂ ಅಡ್ಡಾಡಲು ಹೋದೆವು. ಮನೆಗೆ ಬರುವಾಗ್ಗೆ ತನ್ನನ್ನು ಎತ್ತಿಕೊಳ್ಳಬೇಕೆಂದು ಹಟ ಹಿಡಿದಳು. "ನಿನ್ನನ್ನು ಇಲ್ಲೇ ಬಿಟ್ಟು ಹೋಗುವೆವು" ಎಂದು ಸುಮಾರು ಒಂದು ಫರ್ಲಾಂಗ ಹೋದೆವು. ಹಿಟ್ಟು ಚೆಲ್ಲಿದಂತೆ ಬೆಳದಿಂಗಳು ಇತ್ತು. ಊಹುಂ ಅವಳು ಜಾಗ ಬಿಟ್ಟು ಸರಿದಾಡಲಿಲ್ಲ. ಇವರೇ ಹೋಗಿ ಅವಳನ್ನು ಎತ್ತಿಕೊಂಡು ಬಂದರು. ನಮ್ಮದು ಎಷ್ಟೇ ಬಡತನದ ಪ್ರಪಂಚವಿದ್ದರೂ ನಾವು ತುಂಬಾ ಸಮಾಧಾನದಲ್ಲಿದ್ದೆವು. ನಾನು ಅಪ್ಪಿ ತಪ್ಪಿ ಹೆಚ್ಚು ಸೀರೆ ಕೇಳಲಿಲ್ಲ. ಬಂಗಾರ ನನಗೆ ಬೇಕಿತ್ತು. ಇವರಿಗೆ ಬಂಗಾರವೆಂದರೆ ಪಿತ್ತ ಏರುತ್ತಿತ್ತು. ಕಾರಣ ನಾನು ಬಾಯಿ ತಪ್ಪಿ ಸಹ ಬಂಗಾರ ಬೇಡಲಿಲ್ಲ. ಬೇಡಿದರೂ ಆಗ ಕೊಡುವ ಪರಿಸ್ಥಿತಿ ಅವರಿಗೆ ಇರಲಿಲ್ಲ. ಮುಂದೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಆದಾಗ್ಯೂ ನಾನು ಒಮ್ಮೆಯೂ ಕೇಳಲಿಲ್ಲ. ಇವರು ಸಾಮಾನ್ಯವಾಗಿ ನನ್ನಿಂದ ಏನೂ ಮುಚ್ಚಿಡುತ್ತಿರಲಿಲ್ಲ. ಏನೇ ದುಡ್ಡು ಬಂದರೂ ಅದು ನನ್ನ ಕಡೆಗೇ ಬರುವದು. ಅಷ್ಟರಲ್ಲಿ ಪ್ರಪಂಚ ಸಾಗಿಸುವದು ನನ್ನದೇ ಹೊಣೆಯಾಗಿತ್ತು.

**ಮನೆಯ ಕಳ್ಳತನ :** ಗಾಂಧೀಜಿ ಮರಣದ ನಂತರ ಗಾಂಧೀಸ್ಮಾರಕ ನಿಧಿಗೆ ಹಣ ಕೂಡಿಸುವದು ಇವರ ಕೆಲಸ. ಊರಲ್ಲೆಲ್ಲ ತುಂಬಾ ತಿರುಗಾಡುತ್ತಿದ್ದರು. ಹಣವನ್ನು ಕೂಡಿಸಿ ಕಳಿಸುತ್ತಿದ್ದರು. ಅನೇಕ ಸಲ ಗ್ರಾಮಾಂತರದಲ್ಲಿಯೂ ಹೋಗಿ ಬರುವರು. ಒಂದು ಸಲ ನಾನು ಇವರ ಸಂಗಡ ಅಳ್ನಾವರಕ್ಕೆ ನಿಧಿ ಕೂಡಿಸಲೆಂದೇ ಹೋಗಿದ್ದೆ. ಅಲ್ಲಿಯ ಜನ ಒತ್ತಾಯ ಮಾಡಿದ್ದರಿಂದ ರಾತ್ರಿ ಊಟ ಮುಗಿಸಿ 10 ಗಂಟೆಗೆ ಅಲ್ಲಿಂದ ಹೊರಟು ರಾತ್ರಿ 12ಕ್ಕೆ ಮನೆ ತಲುಪಿದೆವು. ಬಾಗಿಲಿಗೆ ನಾವು ಹಾಕಿದ ಕೀಲಿ ಇರಲಿಲ್ಲ. ಒಳಗೆ ಚಿಲಕ ಹಾಕಿತ್ತು. ಆದರೂ

ಇವರಿಗೆ ಯಾವ ಸಂದೇಹವೂ ಇಲ್ಲದೆ ಬಾಗಿಲ ತೆಗೆಯಲು ಕೂಗಿದರು. ಏನೂ ಉತ್ತರ ಬರಲಿಲ್ಲ. ನನಗೆ ಸಂದೇಹ ಬಂತು ಹಿತ್ತಲ ಕಡೆಗೆ ಹೋದೆವು. ಆ ಬಾಗಿಲು ತೆಗೆದೇ ಇತ್ತು, ಒಳಗೆ ಹೋದೆವು. ಸಾಮಾನುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ, ನಮ್ಮ ಕಪಾಟಿನಲ್ಲಿಯ ಕೆಲವು ಸೀರೆ ಮತ್ತು ಚಿಕ್ಕ ಪುಟ್ಟ ವಸ್ತುಗಳು ಹೋಗಿದ್ದವು. ಮನೆಗೆ ಕಳ್ಳರ ಪ್ರವೇಶವಾಗಿತ್ತು. ಇವರು ಮಾತ್ರ ಸ್ವಸ್ಥಚಿತ್ತರಾಗಿದ್ದರು. ನಿತ್ಯ ಸಾಮಾನು ಎಲ್ಲ ಇದೆ ಎಂದು ಸಮಾಧಾನ ಪಟ್ಟುಕೊಂಡರು. ನಾನೂ ಸಹ ಧೈರ್ಯದಿಂದ ಎದುರಿಸಿದೆ. ಪಕ್ಕದ ಮನೆಯವರು, ಮನೆಯ ಮಾಲೀಕರು ಎಲ್ಲರೂ ಬಂದರು, ಪೊಲೀಸ್‌ರಿಗೆ ವರದಿ ಕೊಡಲಾಯ್ತು. ಅವರೂ ಬಂದು ಪಂಚನಾಮೆ ಮಾಡಿಕೊಂಡು ನಮ್ಮ ತಕರಾರು ದಾಖಲು ಮಾಡಿಕೊಂಡು ಹೋದರು. ಮುಂದೆ ಕಳ್ಳ ಸಿಕ್ಕ, ಕೋರ್ಟಿನಲ್ಲಿ ಖಟ್ಲೆ ನಡೆಯಿತು. ಹಬ್ಬು ಎಂಬ ವಿಜಾಪುರದ ಕಾರ್ಯಕರ್ತರು ಮ್ಯಾಜಿಸ್ಟ್ರೇಟ್ ಆಗಿದ್ದರು. ಅಲ್ಲಿ ನನ್ನ ಸಾಕ್ಷಿ ಆಗಿ ನಮ್ಮ ಎಲ್ಲ ಸೀರೆಗಳು ಮಾತ್ರ ಮನೆಗೆ ಬಂದವು. ಇದೊಂದು ರೀತಿಯಿಂದ ದೇವರು ನಮ್ಮನ್ನು ಪರೀಕ್ಷೆ ಮಾಡಿದನೆಂದು ನನ್ನ ಭಾವನೆ.

ಇಲ್ಲಿ ಒಂದು ಮಾತು ಹೇಳಲೇಬೇಕು. ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಖಂಡಿತ ಇದ್ದವು. ಇಬ್ಬರೂ ಹೊಂದಿಕೊಳ್ಳಲು ಪ್ರಯತ್ನ ಮಾಡುತ್ತಲಿದ್ದೆವು. ಪ್ರಾರಂಭದಲ್ಲಿ ಇವರಿಗೆ ಪೂಜೆ, ದೇವರು, ಭಜನೆ ಎಂದರೆ ತಲೆಬೇಸರ. ನಾನು ನಿತ್ಯ ಪೂಜೆ ಮಾಡುವವಳು. ಒಂದು ಸಲ ಕಾಯಿಲೆ ಆದಾಗ ಇವರಿಗೆ ಪೂಜೆ ಮಾಡಲು ಹೇಳಿದೆ. ಅವರು ಅಂದು ತುಂಬಾ ಭಕ್ತಿಯಿಂದಲೇ ಮಾಡಿದರು. "ನೀವು ಎಷ್ಟು ಛಂದ ಪೂಜೆ ಮಾಡ್ತೀರಿ" ಎಂದು ನಾನು ಅಂದೆ. ಅದೇ ಪರಿವರ್ತನೆಯ ಕಾಲ. ಮುಂದೆ ನಿತ್ಯ ಅವರೇ ಪೂಜೆ ಪ್ರಾರಂಭಿಸಿದರು. ನಿತ್ಯ ಗೀತಾಪಠಣ ಪ್ರಾರಂಭವಾಯ್ತು. 12-13 ಅಧ್ಯಾಯ ಕಂಠಪಾಠ ಮಾಡಿದರು. ನಾನು ಆಗಾಗ್ಗೆ ಬಾಗೇವಾಡಿಗೆ, ಕನ್ನೂರಿಗೆ ಸಪ್ತಾಹಕ್ಕೆ ಹೋಗಬೇಕೆಂದರೆ ಎಲ್ಲ ಬಗೆಯ ಸಹಕಾರ ಕೊಡುತ್ತಲಿದ್ದರು.

# ಸರ್ವೋದಯದ ಹೊಸ ತಿರುವು

ಅದು 1948ರ ಕಾಲ. ಇವರು ಅಂಗಡಿಯನ್ನು ಬೇರೆಯವರಿಗೆ ಒಪ್ಪಿಸಿದ್ದರು. ಆಗ ಇವರೇ ಸರ್ವೋದಯದ ಅಧಿಕೃತ ಸಂಚಾಲಕರು, ಅವರ ಕಛೇರಿ ಧಾರವಾಡದಲ್ಲಿತ್ತು. ಮೊದಲನೇ ಕೆಲಸ ಮಾಡಿದ್ದೆಂದರೆ ಕಛೇರಿಯನ್ನು ಕಿತ್ತಿ ಅರವಟಿಗೆ ಗ್ರಾಮಕ್ಕೆ ಸ್ಥಳಾಂತರಿಸಿದ್ದು. ಇದರ ಕ್ಷೇತ್ರ 44 ಹಳ್ಳಿಗಳಿಗೆ ವ್ಯಾಪಿಸಿತ್ತು. ತುಂಬಾ ಮಲೇರಿಯಾ ಪೀಡಿತ ಮಲೆನಾಡು. ಅನೇಕ ಗ್ರಾಮಗಳಲ್ಲಿ ಜನವಸತಿ ಇರಲೇ ಇಲ್ಲ. ಸಾವಿರಾರು ಎಕರೆ ಭೂಮಿ ಪಡ ಬಿದ್ದಿತ್ತು. ಅಲ್ಲಿ ಬಂದು ಇರಲು ಜನ ಸಿದ್ಧರಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇವರು ಅದರ ಅಧಿಕಾರ ಸ್ವೀಕರಿಸಿದರು.

ಒಂದು ದಿನ ಇವರು ನನ್ನನ್ನು ಕರೆದು ಒಂದು ಅತ್ಯಂತ ಮಹತ್ವದ ಮಾತು ಹೇಳುವದಿದೆ ಎಂದು ಪ್ರಾರಂಭ ಮಾಡಿದರು. "ಈಗ ನನ್ನ ಮೇಲೆ ಹೊಸ ಹೊಣೆಗಾರಿಕೆ ಬಿದ್ದದ್ದು ನಿನಗೆ ಗೊತ್ತೇ ಇದೆ. ಈ ಸರ್ವೋದಯ ಕಾರ್ಯವೆಂದರೆ ಗಾಂಧೀಜಿಗೆ ಅತ್ಯಂತ ಪ್ರಿಯವಾದದ್ದು. ನಾವು ಇದರಲ್ಲಿ ಮಗ್ನರಾಗಿ ದುಡಿದು ಯಶಸ್ವಿ ಮಾಡಲೇಬೇಕು. ಒಂದು ವಿಧವಾಗಿ ಇದು ನಮ್ಮ ಹಿಂದಿನ ಜೇಲುವಾಸ ಮತ್ತು ಭೂಗತ ಜೀವನಕ್ಕಿಂತಲೂ ಕಠಿಣವಾದುದು." ಅದಕ್ಕೆ ನಾನು "ಹೌದು ಮಾಡಿರಿ, ನಾನೆಲ್ಲಿ ಬೇಡ ಅಂತೀನಿ ? ನನ್ನ ಮುಂದೆ ಈ ಪ್ರವಚನ ಯಾಕೆ ? ನನ್ನ ಕೈಲಾದ ಮಟ್ಟಿಗೆ ನಿಮ್ಮ ಸೇವೆ ಮಾಡುವೆ" ಎಂದೆ. ಅದಕ್ಕೆ ಅವರು "ಈ ಕೆಲಸವನ್ನು ನಾವಿಬ್ಬರೂ ಕೂಡಿಯೇ ಮಾಡಬೇಕು. ನೀನೂ ನನ್ನಷ್ಟೇ ಮಗ್ನಳಾಗಬೇಕು. ನೀನು ಗೌರವ ಸಂಚಾಲಕಿ ಎಂದು ತಿಳಿಯಬೇಕು. ಏನೇ ಸಮಸ್ಯೆ ಬಂದರೂ ನಿನ್ನನ್ನು ಕೇಳದೆ ನಾನು ಒಬ್ಬನೇ ನಿರ್ಣಯ ತೆಗೆದುಕೊಳ್ಳುವದಿಲ್ಲ. ನಾನು ಊರಲ್ಲಿ ಇಲ್ಲದಾಗ ಯಾರಾದರೂ ಕಾರ್ಯಕರ್ತರು ಬಂದರೆ ಅವರಿಗೆ ಮಾರ್ಗದರ್ಶನ ಮಾಡಬೇಕು. ಏನೇ ಆದರೂ ನಾನು ಅದನ್ನು ತೆಗೆದು ಹಾಕುವದಿಲ್ಲ" ಎಂದರು. "ಒಂದೇ ಮಾತು ನನ್ನದು. ಸದಾ ನನ್ನ ರಕ್ಷಕ ಭಗವಂತ ಅವನನ್ನು ನೆನೆಯುತ್ತಾ ಕಾರ್ಯಮಾಡೋಣ. ನಿಮ್ಮ ಮಾತನ್ನು ನಾನು ತೆಗೆದು ಹಾಕುವದಿಲ್ಲ" ಎಂದೆ.

ನಾವು ಕುಟುಂಬ ಸಮೇತ 1948 ಜೂನ್ ತಿಂಗಳಲ್ಲಿ ಅರವಟಿಗೆಗೆ ಹೊರಟೆವು. ಆಗ ಭಾರತಿ, ಪ್ರಕಾಶ ಅಲ್ಲದೆ ನಮ್ಮ ಅಣ್ಣನ ಮಗ ಕೃಷ್ಣನೂ ನಮ್ಮ ಮನೆಯಲ್ಲಿಯೇ ಇದ್ದ. ಧಾರವಾಡದ ಮನೆ ಖಾಲಿ ಮಾಡಿ ಒಂದು ಕಾರು ಬಾಡಿಗೆ ಮಾಡಿಕೊಂಡು ಸಾಮಾನು, ಊಟ, ಕುಡಿಯುವ ನೀರು ಸಹ ತಕ್ಕೊಂಡು ಹೊರಟೆವು. ಆಗ ನಿಸರ್ಗವೂ ನಮಗೆ ನಿಮ್ಮ ಮುಂದಿನ ಕಾರ್ಯ ಕಠಿಣವಿದೆ ಎಂದು ತೋರಿಸಲೆಂದೋ ಏನೋ ತುಂಬಾ ರಭಸದ ಮಳೆ ಬಂತು. ದಟ್ಟಡವಿಯ ಮಧ್ಯದಲ್ಲಿ ಗಾಡಿ ನಿಲ್ಲಿಸಲೇಬೇಕಾಯ್ತು. ಎಡಬಲಕ್ಕೆ ನಾವು ಕುಳಿತು ಮಕ್ಕಳನ್ನು ಮಧ್ಯ ಕೂಡಿಸಿದೆವು.

ನಮ್ಮಿಬ್ಬರ ಬಟ್ಟೆ ಪೂರ್ತಿ ಒದ್ದೆಯಾಗಿದ್ದವು. ಹೀಗೆ ನಿಮ್ಮ ಮುಂದಿನ ಕಾರ್ಯ ಕಠಿಣವಿದೆ ಎಂದೇ ಎಚ್ಚರಿಕೆ ಕೊಟ್ಟಂತಾಯ್ತು. ರಾತ್ರಿ 9 ಗಂಟೆಗೆ ಅರವಟಿಗೆಗೆ ತಲುಪಿದೆವು. ಅಲ್ಲಿ ಸರ್ವೋದಯದ ನಾಲ್ಕು ಮನೆಗಳಿದ್ದವು. ಒಂದೂ ಖಾಲಿ ಇರಲಿಲ್ಲ. ನಾವು ಚಂದಾವರಕರ ಅವರ ಹಳೆ ಬಂಗಲೆಗೆ ಹೋದೆವು. ಅದು ತುಂಬಾ ದೊಡ್ಡದಿದ್ದರೂ ಪೂರ್ತಿ ಜೀರ್ಣವಾಗಿತ್ತು. ಮನೆ ತುಂಬಾ ನೀರು ನಿಂತಿತ್ತು. ಸುದೈವದಿಂದ ನಡುವೆ ಒಂದು ಮಂಚ ಇತ್ತು. ಊಟದ ಶಾಸ್ತ್ರ ಮುಗಿಸಿ ಮಕ್ಕಳನ್ನು ಮಂಚದ ಮೇಲೆ ಮಲಗಿಸಿ, ನಾವು ಬೆಳಗಿನವರೆಗೆ ಗಸ್ತೀ ತಿರುಗಿದೆವು.

ಹಳ್ಳಿಯಲ್ಲಿ ಸುದ್ದಿ ತಿಳಿಯುವುದು ತಡವಾಗುವದಿಲ್ಲ. ಬೆಳಿಗ್ಗೆ ಅಲ್ಲಿದ್ದ ನಮ್ಮ ಕಾರ್ಯಕರ್ತರೆಲ್ಲ ಬಂದು ತಮ್ಮ ಸಂತಸವನ್ನು ವ್ಯಕ್ತಪಡಿಸುತ್ತ ಇಂಥ ಪರಿಸ್ಥಿತಿಯಲ್ಲಿ ಇಂದು ಅಡಿಗೆ ಮಾಡುವದೇ ಸಾಧ್ಯವಿಲ್ಲವೆಂದು ತಮ್ಮ ಮನೆಗೆ ಊಟಕ್ಕೆ ಕರೆದರು. ಊರ ಹಿರಿಯರೂ ಬಂದು ಸ್ವಾಗತಿಸಿದರು.

ನಿಜ ಹೇಳಬೇಕೆಂದರೆ, ನಾವು ಅಲ್ಲಿಗೆ ಬರುವದು ಯಾರಿಗೂ ಬೇಕಾಗಿರಲಿಲ್ಲ. ಕಾರ್ಯಕರ್ತರಿಗೆ ತಮ್ಮ ಸ್ವಾತಂತ್ರ್ಯ ಹೋಗುವದೆಂಬ ಹೆದರಿಕೆ. ಇಲ್ಲಿಯವರೆಗೆ ತಾವು ಮಾಡಿದ್ದೇ ಸರ್ವೋದಯ ಎಂದು ಹೇಳುತ್ತಲಿದ್ದರು. ಊರವರಿಗೂ ನಾವು ಬರುವದು ಬೇಡವಾಗಿತ್ತು. ಹೀಗೆ ನಮಗೆ ಅಲ್ಲಿ ನೀರಸ ಸ್ವಾಗತ ಕಾದಿತ್ತು. ಒಂದು ವಿಧವಾಗಿ ಎಲ್ಲರಿಗೂ ಆಶ್ಚರ್ಯ. ಆಗ ಅಲ್ಲಿದ್ದ ಸರ್ವೋದಯ ಕಾರ್ಯಕರ್ತರೆಂದರೆ ಹಿರಿಯರಾದ ವ್ಹಿ. ಎಸ್. ಮಿರ್ಜಿ, ಹೊನ್ನಾವರ, ಕಾಸರಗೋಡ, ಭಾಗವತ, ವರಮಹಾಲಕ್ಷ್ಮಿ, ಕನಕವಲ್ಲಿ, ದೇಸಾಯಿ, ಸಿದ್ದಣ್ಣ ಕುಲಕರ್ಣಿ ಮತ್ತು ಸಂಕಣ್ಣನವರ ಎಂಬ ಸೊಸೈಟಿಯ ಕಾರ್ಯಕರ್ತ. ಒಬ್ಬರ ಮೈಮೇಲೂ ಒಂದು ತುಣುಕು ಖಾದಿ ಇರಲಿಲ್ಲ. ನಿರ್ದಿಷ್ಟ ಕಾರ್ಯಕ್ರಮವಿರಲಿಲ್ಲ. ಊರವರು ತಮಗಿಷ್ಟ ಇರುವ ಕಾರ್ಯವಿದ್ದರೆ ಸಹಕರಿಸುತ್ತಲಿದ್ದರು. ಆಗ ಅಲ್ಲಿ ಇದ್ದುದು ಒಂದು ಟೆನೆಂಟ್ ಫಾರ್ಮಿಂಗ್ ಸೊಸೈಟಿ ಮತ್ತು ಹೌಸಿಂಗ್ ಸೊಸೈಟಿ. 18 ಮನೆಗಳನ್ನು ಕಟ್ಟಿಸಿ ಅಲ್ಲಿಗೆ ಬಂದ ರೈತರಿಗೆ ಕೊಡಲಾಗಿತ್ತು. ಅವರಿಗೆ ಸೊಸೈಟಿಯ ಮೂಲಕ ಹೊಲ ಸಾಗುವಳಿಗೆ ಎತ್ತು, ಬೀಜ, ಗೊಬ್ಬರ, ಸಾಧನಗಳನ್ನು ಕೊಡಲಾಗಿತ್ತು. ಸರ್ವೋದಯದ ಪೂರ್ವದಲ್ಲಿ ಆ ಊರ ಜನಸಂಖ್ಯೆ ಕೇವಲ 15-20 ಮಾತ್ರ ಇತ್ತು. ಸುತ್ತಲಿನ ಭೂಮಿ ಪಡ ಇತ್ತು. ಅದರಲ್ಲಿ ಚಂದಾವರಕರ ಅವರ ಭೂಮಿಯೇ ಹೆಚ್ಚಾಗಿ ಇತ್ತು. ಎಲ್ಲ ಪಡ ಬಿದ್ದಿತ್ತು. ಹೇಗಾದರೂ ಸಾಗು ಮಾಡಿದರೆ ಸಾಕೆಂದು ಅವರ ಭಾವನೆಯಿತ್ತು.

ಇವರು ಅರವಟಿಗೆಗೆ ಬರುವ ಪೂರ್ವದಲ್ಲಿ ಕೊಲ್ಹಾಪುರದಲ್ಲಿ ಅಪ್ಪಾಸಾಹೇಬ ಪಟವರ್ಧನರವರು ನಡೆಸಿದ, 15 ದಿವಸದ ಸರ್ವೋದಯ ಕಾರ್ಯಕರ್ತರ ಶಿಬಿರಕ್ಕೆ ಹೋಗಿ ಬಂದಿದ್ದರು. ಇಲ್ಲಿಯ ಕಾರ್ಯಕ್ರಮಗಳ ಬಗ್ಗೆ ಅಪ್ಪಾ ಅವರ ಸಂಗಡ ವಿವರವಾಗಿ ಮಾತನಾಡಿಕೊಂಡು ಬಂದಿದ್ದರು. ಆ ಶಿಬಿರಕ್ಕೆ ವರಮಹಾಲಕ್ಷ್ಮಿಯನ್ನೂ ಕಳಿಸಲಾಗಿತ್ತು. ನಾನು ನನ್ನ ಮಕ್ಕಳನ್ನು ಕರೆದುಕೊಂಡು ಕೊನೆಯ ಮೂರು ದಿವಸ ಶಿಬಿರದಲ್ಲಿದ್ದೆ. ಅಪ್ಪಾ ಸಾಹೇಬರಿಗೆ ತುಂಬಾ ಸಂತೋಷವಾಯ್ತು. ಹೀಗೆ ಕುಟುಂಬ ಸಮೇತ ಈ ಕಾರ್ಯಕ್ಕೆ ಧುಮುಕಬೇಕು ಎಂದು ಉದ್ಗಾರ ತೆಗೆದರು.

ಒಂದು ದಿನ ಬೆಳಿಗ್ಗೆ ನಾವಿಬ್ಬರೂ ಸೇರಿ ಗ್ರಾಮ ನಿರೀಕ್ಷಣೆಗೆ ಹೊರಟೆವು. ಮೊದಲು ನೋಡಿದ್ದು ಕಚೇರಿಯನ್ನು. ಅಲ್ಲಿ ಒಳಗೆ ಒಂದು ಕಪಾಟು ಮತ್ತು ಕೂಡ್ರಲು ಡೆಸ್ಕ ಇದ್ದರೂ ಸ್ವಚ್ಛತೆಯ ಗಂಧವೇ ಇರಲಿಲ್ಲ. ಕಚೇರಿಯ ಸುತ್ತಲೂ ಹೊಲಸುಮಯ. ಅದು ಗುಡ್ಡದ ಓರೆಯಲ್ಲಿಯೇ ಇತ್ತು. ಅದರ ಹಿಂದೆ ಜನರು ನಿರಾತಂಕವಾಗಿ ತಮ್ಮ ಪ್ರಾತಃರ್ವಿಧಿ ಮಾಡುತ್ತಲಿದ್ದರು. ಅಲ್ಲಿ ಕಂಪೌಂಡಿನೊಳಗೆಲ್ಲಾ ಕೊರೆ ಬೀಡಿಗಳ ರಾಶಿ. ಅಲ್ಲಿಗೆ ಹೋಗಲು ದಾರಿ ಇರಲಿಲ್ಲ. ಮಳೆಗಾಲದಲ್ಲಿಯಂತೂ ದೇವರೇ ಕಾಯಬೇಕು. ಮುಂದೆ ಒಂದೊಂದೇ ಮನೆಯ ಪ್ರವೇಶ, ಅಲ್ಲಿ ವಾಸಿಸಿದ್ದ ರೈತ ಕುಟುಂಬದ ಸಂಗಡ ಮಾತುಕತೆ, ಅಲ್ಲಿಯೂ ಸ್ವಚ್ಛತೆಯ ಅಭಾವ ಕಾಣುತ್ತಿತ್ತು. ಅಲ್ಲಿಯೇ ಸರ್ವೋದಯ ಪ್ರಾಥಮಿಕ ಶಾಲೆ ಇತ್ತು. ಅದು ಕುಂಟುತ್ತಾ ನಡೆದಿತ್ತು ಒಬ್ಬ ರೈತನೇ ಅದರ ಶಿಕ್ಷಕ. ನಾವು ಹೋದಾಗ್ಗೆ ಆತ ಆರಾಮದಿಂದ ಬೀಡಿ ಸೇದುತ್ತ ಕುಳಿತಿದ್ದ. ಒಳಗೆ ಸಹ ಬೇಕಾದಷ್ಟು ಕೊರೆ ಬೀಡಿಗಳಿದ್ದವು. ನಮ್ಮನ್ನು ನೋಡಿ ಕಕ್ಕಾಬಿಕ್ಕಿ ಆದ, ಬೀಡಿ ಕೈಯಲ್ಲೆ ಮಡಚಿ ಆರಿಸಿಬಿಟ್ಟ. ಅಲ್ಲಿ 15 ಮಕ್ಕಳಿದ್ದರು. ಅದನ್ನು ನೋಡಿ ನಮಗೆ ಅಸಮಾಧಾನವಾಯ್ತು. ಮುಂದೆ ಕಾಲನಿಯಲ್ಲೆಲ್ಲಾ ತಿರುಗಾಡಿ ಅಲ್ಲಿದ್ದ ಗುಡಿಯಲ್ಲಿ ರೈತರನ್ನೆಲ್ಲ ಕೂಡಿಸಿ ಸ್ವಚ್ಛತೆ, ಪ್ರಾಮಾಣಿಕತನಗಳು ಸರ್ವೋದಯದ ಮೂಲಾಧಾರವೆಂದು ಅವರಿಗೆ ಹೇಳಿದರು. ಅವರೂ ತಮ್ಮ ತೊಂದರೆಗಳನ್ನು ಹೇಳುತ್ತಾ ತಾವು ಕೈಲಾದ ಮಟ್ಟಿಗೆ ಈ ತತ್ವಗಳನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುವದಾಗಿ ಹೇಳಿದರು. ಇಲ್ಲಿಯವರೆಗೆ ಅವರ ಕಡೆಗೆ ಹೋಗಿ ಯಾರೂ ಏನೂ ಹೇಳಿರಲಿಲ್ಲ. ಅವರಿಗೆ ಸರ್ವೋದಯದಿಂದ ಎಲ್ಲ ಬಗೆಯ ಸಹಾಯ ಕೊಡಲಾಗಿತ್ತು. ನಮ್ಮ ದೃಷ್ಟಿಯಲ್ಲಿ ಅವರಲ್ಲಿ ಮೈಮುರಿದು ದುಡಿಯುವವರು ತೀರ ಕಡಿಮೆ ಇರಬೇಕೆಂದು ಭಾಸವಾಯ್ತು.

ಮರುದಿನ ಎಲ್ಲ ಸರ್ವೋದಯ ಕಾರ್ಯಕರ್ತರನ್ನು ಒಂದೆಡೆ ಕೂಡಿಸಿ ವಿಚಾರ ವಿನಿಮಯ ಮಾಡುವ ಕಾರ್ಯಕ್ರಮವಿತ್ತು. 15-20 ಕಾರ್ಯಕರ್ತರು ಬಂದಿರಬೇಕು. ದಾಬಡೆಯವರು ಸರ್ವೋದಯ ಸಿದ್ಧಾಂತ ಕಾರ್ಯಕ್ರಮ ಮುಂತಾದವುಗಳ ಬಗ್ಗೆ ವಿವರಗಳನ್ನೆಲ್ಲ ಹೇಳಿ, ನಾವು ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಶಿಸ್ತಿನಿಂದ ಕಾರ್ಯ ಮಾಡಬೇಕು ಎಂದು ಹೇಳಿದರು. ಎಲ್ಲ ಕಾರ್ಯಕರ್ತರು ಮೌನಸಮ್ಮತಿ ಕೊಟ್ಟರೂ ಒಬ್ಬಿಬ್ಬರು ತಮ್ಮ ತೊಂದರೆಗಳನ್ನು ಹೇಳಿದರು. ಈ ಕೆಳಗಿನಂತೆ ನಿತ್ಯದ ಕಾರ್ಯಕ್ರಮ ಗೊತ್ತು ಮಾಡಲ್ಪಟ್ಟಿತು.

| | |
|---|---|
| ಬೆಳಿಗ್ಗೆ 6 ಗಂಟೆಗೆ | ಪ್ರಾರ್ಥನೆ |
| 7 ರಿಂದ 8 | ಶಾರೀರಿಕ ಶ್ರಮ |
| 10 ರಿಂದ ಮಧ್ಯಾಹ್ನ 1 | ಕಛೇರಿ ಕೆಲಸ |
| ಮಧ್ಯಾಹ್ನ 2 ರಿಂದ 3 | ನೂಲುವದು |
| 3 ರಿಂದ 5 | ಕಛೇರಿ ಕೆಲಸ |
| 5-30 ಕ್ಕೆ | ಸಂಜೆಯ ಪ್ರಾರ್ಥನೆ |

ಈ ಎಲ್ಲ ಕಾರ್ಯಕ್ರಮಗಳಿಗೆ ತಾವೇ ಮೊದಲು ಹೋಗಿ ನಿಲ್ಲುತ್ತಲಿದ್ದರು. ಅನಿವಾರ್ಯವಾಗಿ ಕಾರ್ಯಕರ್ತರೆಲ್ಲ ಬರಲೇಬೇಕಾಗುತ್ತಿತ್ತು. ಊರಲ್ಲಿಯೇ ಇದ್ದುದರಿಂದ ಕಾರ್ಯಕರ್ತರ ಇತಿಮಿತಿಗಳು ಸುಲಭವಾಗಿ ತಿಳಿಯುತ್ತಲಿತ್ತು. ಆಗ ತಾವು ಕೈಕೊಂಡ ಕಾರ್ಯಕ್ಕೆ ನೆರವಾಗಲೆಂದು ಇವರು ತಮ್ಮ ವಿಶ್ವಾಸಿಕ ಕಾರ್ಯಕರ್ತರನ್ನು ಬರಮಾಡಿಕೊಳ್ಳಹತ್ತಿದರು. ಇವರ ಮಿತ್ರ ವೆಂಕಟೇಶ ಹಾವನೂರ ಬಾರ್ಡೋಲಿ ಆಶ್ರಮದಲ್ಲಿದ್ದ. ಆತನನ್ನು ಪತ್ರ ಬರೆದು ಕರೆಯಿಸಿದರು. ಅಲ್ಲದೇ ಇವರ ಸೇವಾದಳದ ಸೈನಿಕರಾದ ಆರ್. ಎಸ್. ಉಪಾಧ್ಯ, ಎಮ್. ಜಿ. ಪಾಟೀಲ, ಕನವಳ್ಳಿ, ಐರಸಂಗ ಇವರನ್ನು ಪ್ರತ್ಯಕ್ಷ ಸಿಬ್ಬಂದಿಯಲ್ಲಿಯೇ ಸೇರಿಸಿದರಲ್ಲದೇ ಸೇವಾದಳದ ಇತರ ನಿಷ್ಠಾವಂತ ಕಾರ್ಯಕರ್ತರಾದ ಬುರ್ಲಿ ಬಿಂದುಮಾಧವ, ಸುರೇಂದ್ರ ದಾನಿ, ದೀಕ್ಷಿತ ಎಮ್. ಜಿ. ಮುಂತಾದವರು ಆಗಾಗ್ಗೆ ಇಲ್ಲಿಗೆ ಬಂದು ಹೋಗುತ್ತಲಿದ್ದರು. ಒಂದೆರಡು ಸೇವಾದಳದ ಶಿಬಿರಗಳನ್ನೂ ಮಾಡಲಾಯ್ತು. ಒಂದು ಸಲ ಸಾಲಿ ರಾಮಚಂದ್ರರಾಯರು ರಾಮಾಯಣ ಶಿಬಿರ ಮಾಡಲು ಹೇಳಿದರು. ಅವರು ಆಗ ಪ್ರತ್ಯಕ್ಷ ನಮ್ಮ ಮನೆಯಲ್ಲಿಯೇ ಇದ್ದು ನಿತ್ಯ ರಾಮಾಯಣ ಹೇಳುತ್ತಿದ್ದರು. ನಾವು ಗುಡ್ಡಗಳ ಮಧ್ಯದಲ್ಲಿಯೇ ಇದ್ದೆವು. ಸಮಯ ಸಿಕ್ಕಾಗ ಅವರು ಗುಡ್ಡದ ಶಾಂತಸ್ಥಳದಲ್ಲಿ ಧ್ಯಾನ ಮಗ್ನರಾಗಿ ಕೂಡುತ್ತಲಿದ್ದರು. ನಮ್ಮ ಕಾರ್ಯಕ್ರಮಗಳ ಬಗ್ಗೆ ಅವರಿಗೆ ತುಂಬಾ ಆಸಕ್ತಿ. ಒಮ್ಮೆ ಉಮಾಬಾಯಿ ಕುಂದಾಪುರ ಅವರು ಹೆಣ್ಣುಮಕ್ಕಳ ಶಿಬಿರವನ್ನು ಅರವಟಿಗೆಯಲ್ಲಿಯೇ ಮಾಡಿದರು. ಈ ನಿಮಿತ್ತ ಹೊರಗಿನ ಮುಖಂಡರು, ಕಾರ್ಯಕರ್ತರು ಬಂದಾಗ ಅವರ ಪ್ರವಚನ ಕೇಳಲು ಊರವರೂ ಬರುತ್ತಲಿದ್ದರು. ಉಮಾಬಾಯಿ ಅವರು ಹದಿನೈದು ದಿವಸ ನಮ್ಮ ಮನೆಯಲ್ಲಿಯೇ ಇದ್ದು ಶಿಬಿರ ನಡೆಸಿದರು.

ಸರ್ವೋದಯ ಕಾರ್ಯದ ವಿಸ್ತಾರ ಮಾಡಬೇಕೆಂದು ಹೊಸ ಉಪಕೇಂದ್ರಗಳನ್ನು ಪ್ರಾರಂಭಿಸಿ ಅಲ್ಲಿ ಆಯಾ ಕಾರ್ಯಕರ್ತರನ್ನು ವರ್ಗ ಮಾಡಲಾಯ್ತು.

| | | |
|---|---|---|
| ಮಂಡಿಹಾಳ ಕೇಂದ್ರ | - | ಡಿ. ಜಿ. ಹೊನ್ನಾವರ ಮತ್ತು ಎನ್. ಬಿ. ನಾಯಕ |
| ನಿಗದಿ ಕೇಂದ್ರ | - | ಎಸ್. ಆರ್. ಕಾಸರಗೋಡ ಮತ್ತು ವರಮಹಾಲಕ್ಷ್ಮಿ |
| ಕಡಬಗಟ್ಟಿ | - | ಪರಮಾನಂದ ದೇಶನೂರ ಮತ್ತು ಬೇವೂರ |
| ಸಲಕಿನಕೊಪ್ಪ | - | ವ್ಹಿ. ಎಸ್. ಮಿರ್ಜಿ ಮತ್ತು ವೆಂಕಟೇಶ ಹಾವನೂರ |
| ಹೊಲ್ತಿಕೋಟಿ | - | ಎಮ್. ಜಿ. ಪಾಟೀಲ ಮತ್ತು ಐರಸಂಗ |

ಹೀಗೆ ಆಗ ಅರವಟಿಗೆಯಲ್ಲಿ ಉಳಿದವರೆಂದರೆ ಭಾಗವತ ದಂಪತಿಗಳು, ಆರ್. ಎಸ್. ಉಪಾಧ್ಯ, ಕನಕವಲ್ಲಿ, ಕೃಷ್ಣಾಪುರ. ಮುಂದೆ ಲಲಿತಮ್ಮ ಬಂದು ಅರವಟಿಗೆಗೆ ಸೇರಿದಳು.

**ವರಮಹಾಲಕ್ಷ್ಮಿ ಹಟಮಾರಿತನ :** ಎಲ್ಲ ಕೆಲಸಗಾರರು ತಮಗೆ ವರ್ಗವಾದ ಸ್ಥಳಕ್ಕೆ ಹೋದರು. ಇವಳು ಮಾತ್ರ ಊರವರನ್ನು ಕೂಡಿಕೊಂಡು ಆಟ ನಡೆಸಿದಳು. ಊರ ರೈತರು ಮನವಿ ತೆಗೆದುಕೊಂಡು ಬಂದರು. ಅವರನ್ನು ವರ್ಗ ಮಾಡಿದರೆ ನಾವೆಲ್ಲ ಊರು ಬಿಟ್ಟು

ಹೋಗುವೆವು ಎಂಬ ಬೆದರಿಕೆ ಪತ್ರವನ್ನು ಕೊಟ್ಟರು. ಯಥಾಪ್ರಕಾರ ನಾವಿಬ್ಬರೂ ವಿಚಾರಮಾಡಿ ಗಟ್ಟಿತನದಿಂದ ಇದನ್ನು ಎದುರಿಸಬೇಕೆಂದೂ ಈ ಸುದ್ದಿಯನ್ನು ಉಮಾಬಾಯಿ, ಹುಕ್ಕೇರಿಕರ ಮತ್ತು ವೆಂಕಟರಾಮಯ್ಯ ಅವರಿಗೆ ತಿಳಿಸಬೇಕೆಂದೂ ಯೋಚಿಸಲಾಯ್ತು. ಅವರೂ ಧಾವಿಸಿ ಬಂದರು, ಅವಳಿಗೆ ತಿಳುವಳಿಕೆ ಹೇಳಿ ಕಳಿಸಿಕೊಟ್ಟರು. ಊರಿನವರಿಗೂ ನಾಲ್ಕು ಬುದ್ಧಿಮಾತು ಹೇಳಿದರು.

**ಶಾರೀರಿಕ ಶ್ರಮ ಶಿಬಿರ :** ನಮ್ಮ ಸರ್ವೋದಯ ಕಾರ್ಯಕರ್ತರನ್ನೆಲ್ಲ ಸೇರಿಸಿ ಒಂದು ಶಾರೀರಿಕ ಶ್ರಮದ ಶಿಬಿರ ಏರ್ಪಡಿಸಲಾಗಿತ್ತು. ಅಲ್ಲಿ ಯಾವ ಕೆಲಸ ಮಾಡಲೂ ಆಳುಗಳಿರಲಿಲ್ಲ. ಶಿಬಿರವಾಸಿಗಳೇ ಗೋದಿ, ಜೋಳ ಬೀಸುವದು, ಪಾತ್ರೆ ತಿಕ್ಕುವದು, ಹಸನು ಮಾಡುವದು, ಅಡಿಗೆ ಮಾಡುವದು. ಎಲ್ಲ ಪಾಳಿಯ ಮೇಲೆ ಬೆಳಿಗ್ಗೆ 4 ಗಂಟೆಗೆ ಎದ್ದು ಆಯಾ ಮನೆಗಳಿಗೆ ಬೀಸಲು ಹೋಗಬೇಕು. ಶಿಬಿರದಲ್ಲಿ ಚಹಾ, ಕಾಫಿ ವರ್ಜ್ಯ. ಕೇವಲ ಕಷಾಯ, ಉಪಹಾರ ಕೊಡಲಾಗುತ್ತಿತ್ತು. ಕೆಲವರಿಗೆ ತುಂಬಾ ತೊಂದರೆಯಾಗುತ್ತಿತ್ತು. ಆದರೂ ಒಟ್ಟಾರೆ ಉತ್ಸಾಹ ಹುರುಪು ಎದ್ದು ಕಾಣುತ್ತಲಿತ್ತು. ಶಿಬಿರಕ್ಕೆ ಪ್ರವಚನಕ್ಕಾಗಿ ಬಿಂದುಮಾಧವ ಬುರ್ಲಿ, ರಾಮಚಂದ್ರರಾವ, ಪ್ರಿ. ಗೋಕಾಕ್, ನಾಡಿಗೇರ, ಕೆ. ಜಿ. ಜೋಶಿ, ಕೆ. ಟಿ. ಪಾಂಡುರಂಗಿ, ಹೋಳಿಕಟ್ಟಿ ಮುಂತಾದವರು ಬಂದಿದ್ದರು. ಶಿಬಿರ 15 ದಿವಸ ಅವ್ಯಾಹತವಾಗಿ ತುಂಬಾ ಅಚ್ಚುಕಟ್ಟಾಗಿ ನಡೆಯಿತು. ಶಾರೀರಿಕ ಶ್ರಮದ ಮಹತ್ವವನ್ನು ತಿಳಿಸುವುದೇ ಮುಖ್ಯ ಉದ್ದೇಶವಾಗಿತ್ತು. ಅದು ಬಹುಮಟ್ಟಿಗೆ ಸಾಧಿಸಿತೆಂದು ಹೇಳಬಹುದು. ಈ ಶಿಬಿರದ ಸಮಯಕ್ಕೆ ದಾಬಡೆ ಅವರಂತೂ ತುಂಬಾ ಉತ್ಸಾಹದಿಂದ ಕುಣಿದಾಡುತ್ತಲಿದ್ದರು.

ಈಗ ನಮ್ಮ ಸಮಸ್ಯೆಗಳಿಗೇನೂ ಕೊರತೆ ಇರಲಿಲ್ಲ. ಭಾರತಿ ಪ್ರಾಥಮಿಕ ಸರಕಾರಿ ಶಾಲೆಗೆ ಹೋಗುತ್ತಿದ್ದಳು. ಅವಳನ್ನು ಧಾರವಾಡದಲ್ಲಿ ಎಲ್ಲಿಡಬೇಕು ? ಎಂಬ ಸಮಸ್ಯೆ. ಕೆಲವು ದಿವಸಗಳ ಮಟ್ಟಿಗೆ ನನ್ನ ತಮ್ಮನ ಮನೆಯಲ್ಲಿದ್ದಳು. ನಂತರ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ವಸತಿಯ ಏರ್ಪಾಡಾಯ್ತು. ವಾರಕ್ಕೊಮ್ಮೆ ಅರವಟಿಗೆಗೆ ಬಂದು ಹೋಗುವಳು. ಇವರು ಧಾರವಾಡಕ್ಕೆ ಹೋದಾಗ ಭೆಟ್ಟಿಯಾಗುವರು. ಪ್ರಕಾಶನ ಪ್ರಾಥಮಿಕ ಶಿಕ್ಷಣ ಪ್ರಾರಂಭ. ಅರವಟಿಗೆ ಶಾಲೆಯಲ್ಲಿಯೇ ಹೆಸರು ಹಚ್ಚಲಾಯ್ತು. ವಿದ್ಯಾರ್ಥಿಗಳ ಸಂಖ್ಯೆ 25 ಇದ್ದರೂ ಬಹಳ ಹುಡುಗರು ಬರುತ್ತಿರಲಿಲ್ಲ. ಬೆಳಿಗ್ಗೆ 7 ಗಂಟೆಗೆ ಮೊದಲನೆಯ ಗಂಟೆ, 7-30ಕ್ಕೆ 2ನೇ ಗಂಟೆಯಾಗಿ ಶಾಲೆ ಪ್ರಾರಂಭವಾಗುತ್ತಿತ್ತು. ಮನೆಯ ಹತ್ತಿರವೇ ದಿಬ್ಬದ ಮೇಲೆ ಶಾಲೆ ಇತ್ತು. ಮೊದಲನೇ ಗಂಟೆ ಆದ ಕೂಡಲೇ ಈತ ಸಿದ್ಧವಾಗುತ್ತಿದ್ದ. ಹೊರಡಲು ತುಸು ತಡವಾದರೆ ಏನೂ ತಿನ್ನದೆ ಶಾಲೆಗೆ ಓಡುತ್ತಿದ್ದ. ಶಾಲೆಯಲ್ಲಿ ಅನೇಕ ಸಲ ಗುರುಶಿಷ್ಯರಿಬ್ಬರೇ ಇದ್ದ ಉದಾಹರಣೆಗಳಿದ್ದವು. ಮುತಾಲಿಕದೇಸಾಯಿ ಎಂಬ ಶಿಕ್ಷಕ ಇದ್ದ, ಆತನೇ ಅಂಚೆ ಕಛೇರಿ ನೋಡಿಕೊಳ್ಳುತ್ತಿದ್ದ. ನಾವು ಅರವಟಿಗೆಗೆ ಬಂದ ಮೇಲೆ ಅಂಚೆ ಕಛೇರಿ ಬಂತು. ಅಲ್ಲದೆ ಕೋಗಿಲಗೇರಿ ರೈಲು ನಿಲ್ದಾಣವೂ ಬಂತು. ಹೀಗೆ ಸಾವಕಾಶವಾಗಿ ಸುಧಾರಣೆಯತ್ತ ನಡೆದಿತ್ತು.

ಆಗಾಗ್ಗೆ ಧಾರವಾಡದಿಂದ ಮತ್ತು ಬೇರೆ ಕಡೆಗಳಿಂದ ಜನರು ಸರ್ವೋದಯ ಕ್ಷೇತ್ರ ನೋಡಲೆಂದು ಬರುತ್ತಿದ್ದರು. ಆಗಾಗ್ಗೆ ಅಧಿಕಾರಿಗಳೂ ಬರುತ್ತಲಿದ್ದರು. ಸಾಮಾನ್ಯವಾಗಿ ನಮ್ಮ ಮನೆಯಲ್ಲಿ ನಿತ್ಯ ಒಬ್ಬಿಬ್ಬರು ಅತಿಥಿಗಳು ಇದ್ದೇ ಇರುವರು. ಒಮ್ಮೆ ನಮ್ಮ ಇಲ್ಲಿಯ ಹೊಲಗಳಲ್ಲಿ ಕಬ್ಬಿನ ಬೆಳೆ ತುಂಬಾ ಚೆನ್ನಾಗಿ ಬಂದಿತ್ತು. ಕಬ್ಬಿನ ಆಲೆ ಹಾಕಲಾಗಿತ್ತು. ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟು ಕಬ್ಬಿನ ರಸ ಕುಡಿಯಲು ಜನರನ್ನು ಕರೆಯಲಾಯ್ತು. ತುಂಬಾ ಜನರು ಬಂದು ರಸಪಾನ ಮಾಡಿ ಸಂತಸ ಪಟ್ಟರು. ಶಾಲಾ ಮಕ್ಕಳು ಬಹಳಷ್ಟು ಜನ ಬಂದು ಹೋದರು. ಪ್ರಿ. ಗೋಕಾಕ್ ಅವರು ತಮ್ಮ 50 ವಿದ್ಯಾರ್ಥಿಗಳೊಡನೆ ಬಂದು ಹೋದರು. ಅವರಿಗೆ ನಮ್ಮ ಕಷಾಯ ತುಂಬಾ ಹಿಡಿಸಿತ್ತು. ಅದರ ಫಾರ್ಮುಲಾ ಏನೆಂದು ಕೇಳಿದರು. ಅದನ್ನು ನಾನೇ ವಿವರಿಸಿ ಹೇಳಿದೆ.

ಒಂದು ಸಲ ಗಣಪತರಾವ ಮಹಾರಾಜರು ಬಂದು ಎಂಟು ದಿವಸ ಇದ್ದು ಹೋದರು. ಅದರಂತೆ ಗುರುಪಾದಪ್ಪನವರು, ಸಿದ್ಧಗಿರಿ ಸ್ವಾಮಿಗಳೂ ಬಂದು ಹೋದರು.

ನಿತ್ಯ ಬೆಳಿಗ್ಗೆ 7 ಗಂಟೆಯಿಂದ 8 ಗಂಟೆಯವರೆಗೆ ಕಾರ್ಯಕರ್ತರೆಲ್ಲ ಶಾರೀರಿಕ ಶ್ರಮ ಮಾಡುತ್ತಲಿದ್ದರು. ಇದರಿಂದ ಕಛೇರಿಯ ಸುತ್ತಲೂ ತುಂಬ ಹಸನಾಯ್ತು. ಕಛೇರಿಗೆ ಮಳೆಗಾಲದಲ್ಲಿ ಸಹ ಹೋಗಲು ರಸ್ತೆ ಚೆನ್ನಾಗಿ ಆಯಿತು. ಸುತ್ತಲೂ ತಂತಿ ಕಂಪೌಂಡ್ ಹಾಕಲಾಯ್ತು. ಊರ ಜನರು ನಮ್ಮ ಕಛೇರಿ ಕಡೆಗೆ ಬರುವ ಪೂರ್ವದಲ್ಲಿ ತಮ್ಮ ಬೀಡಿ ಬೇರೆ ಕಡೆಗೆ ಒಗೆದೇ ಬರುತ್ತಿದ್ದರು. ಹೀಗಾಗಿ ಕಛೇರಿ, ಶಾಲೆಗಳಲ್ಲದೆ ನಮ್ಮ ವಸತಿಯ ಪರಿಸರ ಅಚ್ಚುಕಟ್ಟಾಯಿತು. ಕಕ್ಕಸಗಳನ್ನು ನಾವೇ ಸಿದ್ಧಮಾಡಿ ನಿತ್ಯ ಅದನ್ನು ಪಾಳಿಯ ಮೇಲೆ ಸ್ವಚ್ಛ ಮಾಡುತ್ತಲಿದ್ದೆವು. ಮನೆಯ ಮುಂದೆ, ಹಿಂದೆ ತೋಟ. ಮುಂದೆ ಹೂ, ತುಳಸಿ ಇದ್ದರೆ ಹಿಂದೆ ಕಾಯಿಪಲ್ಲೆ. ಎಷ್ಟೋ ಸಲ ಧಾರವಾಡದವರು ತುಳಸಿ ತೆಗೆದುಕೊಂಡು ಹೋಗಲು ಬರುತ್ತಲಿದ್ದರು.

ಆಗ ಧಾರವಾಡದ ಕಲೆಕ್ಟರ್ ಸಾಠೆ ಎಂಬ ಮಹಾರಾಷ್ಟ್ರಿ ಇದ್ದರು. ಅವರು ಧಾರವಾಡದಲ್ಲಿ ಅನೇಕ ಕೆಲಸ ಮಾಡಿಸಿದ್ದರು. ಕಲೆಕ್ಟರ್ ಕಂಪೌಂಡ್‌ದಲ್ಲಿ ಅನೇಕ ಕಟ್ಟಡಗಳೂ ಸಂಸ್ಥೆಗಳೂ ಬಂದವು. ಅವರ ಬಾಯಲ್ಲಿ ಯಾವಾಗಲೂ ಚಿರೂಟು ಇರಲೇಬೇಕು. ಒಮ್ಮೆ ಅವರು ಅರವಟಿಗೆಗೆ ಬಂದರು. ಆ ಪೂರ್ವದಲ್ಲಿ ಅವರಿಗೆ ಅಲ್ಲಿಯ ಪರಿಸರದ ಬಗ್ಗೆ ಹೇಳಲಾಗಿತ್ತು. ಅವರು ಅರವಟಿಗೆಯಲ್ಲಿದ್ದಾಗ ಒಮ್ಮೆಯೂ ಚಿರೂಟು ಹಚ್ಚಲಿಲ್ಲ. ಕೊನೆಗೆ ಹೊರಟಾಗ ತಮ್ಮ ಕಾರಿನಲ್ಲಿ ಕುಳಿತು "ದಾಬಡೆಯವರೇ, ಈಗ ನಾನು ಚಿರೂಟು ಹಚ್ಚಬಹುದಲ್ಲವೇ ?" ಎಂದು ಚೇಷ್ಟೆಯಿಂದ ಕೇಳಿ ತಮ್ಮ ಚಿರೂಟು ಹಚ್ಚಿಕೊಂಡರು.

**ಪತ್ರಿಕಾ ಗೋಷ್ಠಿ** : ಒಂದು ಸಲ ಅರವಟಿಗೆಯಲ್ಲಿಯೇ ಪತ್ರಿಕಾ ಗೋಷ್ಠಿ ಕರೆಯಲಾಗಿತ್ತು. ಆಕಾಶವಾಣಿ ಪ್ರತಿನಿಧಿಯನ್ನು (ವಾಕನೀಸ್) ಹಿಡಿದು 12 ಪ್ರತಿನಿಧಿಗಳು ಬಂದಿದ್ದರು. ಬುರ್ಲಿಯವರೂ, ದಾನಿಯವರೂ ಬಂದಿದ್ದರು. ಸೊಗಸಾದ ಕಟ್ಟಡ ಮನೆ, ಅದೇ ಸಿದ್ಧವಾದ

ಹೌಸಿಂಗ್ ಸೊಸೈಟಿಯ 18 ಮನೆ, ಹೊಸ ಕಾಲನಿ, ಕಛೇರಿ, ಶಾಲಾ ಕಟ್ಟಡ, ಕಾರ್ಯಕರ್ತರ ವಸತಿ ಮತ್ತು ಅಚ್ಚುಕಟ್ಟಾದ ಪರಿಸರ ನೋಡಿ ತುಂಬಾ ಸಂತೋಷಪಟ್ಟರು. ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ ತುಂಬಾ ಪ್ರಚಾರವಾಯ್ತು. ಇಲ್ಲಿಯವರೆಗೆ ಈ ಕಾರ್ಯಕ್ಕೆ ಪ್ರಚಾರವೇ ಇರಲಿಲ್ಲ. ಒಂದು ದೃಷ್ಟಿಯಿಂದ ಜನತೆಗೆ ತಿಳಿಯಿತೆಂದು ಹೇಳಬಹುದು.

ಸರ್ವೋದಯವೆಂದರೆ ಒಂದು ವಿಲಕ್ಷಣ ಸಂಘಟನೆ. ಗಾಂಧೀ ತತ್ವಗಳನ್ನು ಸರಕಾರದ ಮೂಲಕ ಕಾರ್ಯಾಚರಣೆ ಮಾಡುವದು. ಆಗ ನಾವು ಮುಂಬೈ ಪ್ರಾಂತದಲ್ಲಿದ್ದೆವು, ಮೊರಾರ್ಜಿಯವರು ಮುಖ್ಯಮಂತ್ರಿಯಾಗಿದ್ದರು. ರಾಜ್ಯಾದ್ಯಂತ 27 ಸರ್ವೋದಯ ಕೇಂದ್ರಗಳನ್ನು ಪ್ರಾರಂಭಿಸಿದ್ದರು. ಜಿಲ್ಲೆಯಲ್ಲಿಯ ಅತ್ಯಂತ ಹಿಂದುಳಿದ ಭಾಗವನ್ನು ಆಯ್ದು ಕೊಡಲಾಗುತ್ತಿತ್ತು. ಹಾಗೆ ಧಾರವಾಡ ಜಿಲ್ಲೆಯ ಮಲೆನಾಡಿನ 44 ಗ್ರಾಮಗಳನ್ನು ಆಯ್ದು ಕೊಡಲಾಗಿತ್ತು. ಅದರಲ್ಲಿ 14 ಹಳ್ಳಿಗಳಲ್ಲಿ ಜನರೇ ಇರಲಿಲ್ಲ ಸಾವಿರಾರು ಎಕರೆ ಪಡ ಬಿದ್ದ ಭೂಮಿ. ಮಳೆಗಾಲದಲ್ಲಿ ವಿಪರೀತ ಮಳೆ. ಆದರೂ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ, ಮಲೇರಿಯಾ ಪೀಡಿತವಾದ ಧಾರವಾಡದಿಂದ ಅಳ್ನಾವರ ಮತ್ತು ಹಳ್ಯಾಳಕ್ಕೆ ಹೋಗುವ ಮಾರ್ಗದ ನಡುವಿನದೇ ಸರ್ವೋದಯ ಕ್ಷೇತ್ರ. ಪ್ರತಿ ವರ್ಷ ಇದರ ಬಜೆಟ್ ಮಾಡಿ ಮುಂಬೈ ಸರ್ಕಾರಕ್ಕೆ ಕಳಿಸಬೇಕು. ಅಲ್ಲಿ ಚರ್ಚೆ ಮಾಡಿ ಮಂಜೂರ ಮಾಡುತ್ತಲಿದ್ದರು. ಆಗ ಇದು ಸಹಕಾರಿ ಖಾತೆ ಆಡಳಿತಕ್ಕೆ ಸೇರಿತ್ತು. ವರ್ಷಕ್ಕೊಮ್ಮೆ ಇವರು (ದಾಬಡೆ) ಮುಂಬೈಗೆ ಹೋಗಿ ಬರುವರು. ಒಮ್ಮೆ ಈ ಕಾರ್ಯಕ್ಕಾಗಿಯೇ ಧಾರವಾಡ ಜಿಲ್ಲೆಯ ನಾನಾ ವಿಭಾಗಗಳ ಅಧಿಕಾರಿಗಳ ಸಭೆಯನ್ನು ಅರವಟಿಗೆಯಲ್ಲಿ ಕರೆದರು. ಅದಕ್ಕೆ ಜಿಲ್ಲಾಧಿಕಾರಿಯನ್ನೂ ಆಮಂತ್ರಿಸಲಾಗಿತ್ತು ಸರ್ಕಾರದಿಂದಲೂ ಈ ಬಗ್ಗೆ ಪತ್ರ ಬಂದಿತ್ತು. ಡಿ. ಸಿ. ಅವರು ತಮ್ಮ ಸಹಾಯಕ ಅಧಿಕಾರಿಯನ್ನು ಕಳಿಸುವದಾಗಿ ಹೇಳಿ ಅವರ ಸಂಗಡ ವಿವರ ಚರ್ಚಿಸಲು ಹೇಳಿದರು. ಅವರ ಕಡೆಗೆ ಹೋದರೆ, ಸುಮಾರು 20 ಅಧಿಕಾರಿಗಳು ಬರುವರು. ಅಲ್ಲಿ ಸಭೆಯಲ್ಲಿ ಕೂಡಲು ಅವರಿಗೆ ಕುರ್ಚಿಯ ವ್ಯವಸ್ಥೆಯಾಗಲೇಬೇಕೆಂದು ಹಟಹಿಡಿದರು. ಹಳ್ಳಿಗಳಲ್ಲಿ ಇದು ಸಾಧ್ಯವೇ ಇಲ್ಲವೆಂದು ದಾಬಡೆ ಹೇಳಿದರು. ಹಾಗಾದರೆ ನಾವು ಅಲ್ಲಿಗೆ ಬರುವದು ಸಾಧ್ಯವೇ ಇಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಆಗ ದಾಬಡೆ ಅವರು ಅಂದಿನ ಡಿ. ಸಿ. ಸಾಠೆಯವರನ್ನು ಕಂಡು ಮಾತನಾಡಿದರು. ಸಾಠೆಯವರು ಸಭೆ ಎಂದರೆ ಕುರ್ಚಿ ಅಲ್ಲ ಎಂದು ಅಧಿಕಾರಿಯ ಕಿವಿ ಹಿಂಡಿದರು. ಸಭೆಯನ್ನು ಕೇಂದ್ರ ಕಛೇರಿ ಅರವಟಿಗೆಯಲ್ಲಿ ಕರೆಯಲಾಯಿತು. ಕುರ್ಚಿ ಬದಲು ಅಚ್ಚುಕಟ್ಟಾದ ಕೂಡ್ರುವ ವ್ಯವಸ್ಥೆ ಮಾಡಲಾಗಿತ್ತು. ಸುಮಾರು 30 ಅಧಿಕಾರಿಗಳು ಬಂದಿದ್ದರು. ಕೂಲಂಕುಷವಾಗಿ ಚರ್ಚೆಯಾಗಿ ಸರ್ವೋದಯಕ್ಕೆ ತಾವೆಲ್ಲ ಸಂಪೂರ್ಣ ಸಹಕರಿಸುವದಾಗಿ ಹೇಳಿದರು. ಅಂದಿನ ಸರ್ವೋದಯ ಸಂಚಾಲಕ ಅಂದರೆ, ಆ ಕ್ಷೇತ್ರದ ವರಿಷ್ಠಾಧಿಕಾರಿ ಇದ್ದಂತೆ ಇದ್ದು ಉಳಿದ ಅಧಿಕಾರಿಗಳೊಡನೆ ಸಹಕರಿಸುತ್ತಲಿದ್ದರು. ಅವರಿಗೆಲ್ಲ ಅಚ್ಚುಕಟ್ಟಾದ ಉಪಹಾರ ಮಾಡಿಸಿ ಬೀಳ್ಕೊಡಲಾಯಿತು.

ಹೀಗೆ ಒಂದು ಸಲ ಟಿ. ಎಸ್. ನಾಯಕ ಮಾಸ್ತರರು ತಮ್ಮ ಸರ್ವೋದಯ ಪಾದಯಾತ್ರೆ ತಗೊಂಡು ಅರವಟಿಗೆಗೆ ಬಂದಿದ್ದರು. ಅದರಲ್ಲಿ 15 ಜನ ಕಾರ್ಯಕರ್ತರಿದ್ದರು. ಅವರಿಗೆಲ್ಲ ಒಳ್ಳೆಯ ವ್ಯವಸ್ಥೆ ಮಾಡಲಾಗಿತ್ತು. ಎಲ್ಲರೂ ತಮ್ಮ ಸಂತಸ ವ್ಯಕ್ತಪಡಿಸಿದರು.

**ಸರ್ವೋದಯ ಕ್ಷೇತ್ರದಲ್ಲಿ ಪಾದಯಾತ್ರೆ** : ಎರಡು ಸಲ ನಮ್ಮ ಕ್ಷೇತ್ರದಲ್ಲಿ ಭೂದಾನದ ಬಗ್ಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ನಿತ್ಯ 8-10 ಮೈಲು ನಡೆದು ಒಂದು ಕಡೆ ಕ್ಯಾಂಪ್ ಮಾಡುವದು. ಅಲ್ಲಿ ಸಭೆ, ಪ್ರಾರ್ಥನೆ, ಶರೀರಶ್ರಮ ನಡೆಯುತ್ತಲಿತ್ತು. ಇದರಲ್ಲಿ ಇಬ್ಬರು ಹೆಣ್ಣುಮಕ್ಕಳೂ ಇದ್ದರು. ಒಂದು ಊರು ತುಂಬಾ ಪುಂಡರದೆಂದು ಪ್ರಸಿದ್ಧವಾಗಿತ್ತು. ಅಲ್ಲಿಯೇ ನಮ್ಮ ಕ್ಯಾಂಪ್ ಇತ್ತು. ಅನೇಕ ಜನರು ನಮಗೆ ಎಚ್ಚರಿಕೆ ಕೊಟ್ಟಿದ್ದರು. ನಾವು ಅಲ್ಲಿಯ ಪ್ರಮುಖನನ್ನೇ ಹಿಡಿದು ಕೆಲಸ ಮಾಡಿದೆವು. ಅಲ್ಲಿ ಸಭೆ, ನಗರ ಸಂಕೀರ್ತನೆ, ಪ್ರಾರ್ಥನೆ, ಶರೀರ ಶ್ರಮ, ಊಟ, ಉಪಹಾರ ಎಲ್ಲ ಅಚ್ಚುಕಟ್ಟಾಗಿಯೇ ನಡೆದವು. ಕೊನೆಯ ದಿನ ಮುಕ್ತಾಯ ಕಾರ್ಯಕ್ರಮವಿರುತ್ತಿತ್ತು. ಆಗ ನಮಗೆ 45 ಎಕರೆ ಭೂದಾನ ಪ್ರಾಪ್ತವಾಗಿತ್ತು. ಮುಕ್ತಾಯ ಮಂಡಿಹಾಳದಲ್ಲಿತ್ತು. ಅಲ್ಲಿಗೆ ನಾನೂ ಹೋಗಿದ್ದೆ. ಕರಿಗುದರಿ ಅವರ ಕೀರ್ತನೆಯೂ ಇತ್ತು. ಅದು ರಾತ್ರಿ 3 ಗಂಟೆಗೆ ಮುಕ್ತಾಯವಾಯ್ತು. ಆಗ ಇವರೆಲ್ಲ ಕಾಲ್ನಡಿಗೆಯಿಂದ ಅರವಟಿಗೆಗೆ ಹೋದರು. ಕಾರ್ಯಕ್ರಮ ತುಂಬಾ ಸೊಗಸಾಗಿತ್ತು. ಆ ಪಾದಯಾತ್ರೆಯಲ್ಲಿ ಇವರ ನೆಚ್ಚಿನ ನಾಯಿಯೂ ಇವರನ್ನು ಹಿಂಬಾಲಿಸಿತ್ತು.

ನಾಯಿಯ ಬಗ್ಗೆ ಒಂದು ಮಾತು. ಅವರು ಊರಿನಿಂದ ಬಂದ ಕೂಡಲೇ ತುಂಬಾ ಅಚ್ಛಾ ಮಾಡುತ್ತಲಿತ್ತು. ಮೈ ತಿಕ್ಕುವದು, ಒಂದು ನಮೂನೆಯಿಂದ ಒದರುವದು, ಹೀಗೆ 10-15 ನಿಮಿಷ ನಡೆದ ಮೇಲೆ ಇವರನ್ನು ಒಳಗೆ ಬಿಡುತ್ತಿತ್ತು. ಒಂದು ಸಲ ಇವರು ಊರಲ್ಲಿಲ್ಲದಾಗ ನಮ್ಮ ಪ್ರಕಾಶ ಅದಕ್ಕೆ ಅರಳು ಕೊಡುತ್ತಿದ್ದ. ಮೇಲೆ ಕೈ ಮಾಡಿ ಒಂದೊಂದೇ ಕಾಳು ಬಿಡುತ್ತಿದ್ದ. ಆಗ ಅದು ಮೇಲೆ ಜಿಗಿದು ತೆಗೆದುಕೊಳ್ಳುವಾಗ ಅವನ ಬೆರಳು ಅದರ ಬಾಯಲ್ಲಿ ಹೋಯಿತು. ಅಂಥ ಅನಾಹುತ ಏನೂ ಆಗಿರಲಿಲ್ಲ. ಆದರೆ ಇದನ್ನು ಸಹಿಸುವದು ನಮ್ಮ ದೇಶನೂರ ಪರಮಾನಂದಗೆ ಸಾಧ್ಯವಾಗದೇ ಅದನ್ನು ಗುಂಡಿಟ್ಟು ಕೊಂದುಬಿಟ್ಟ. ದಾಬಡೆಯವರು ಊರಿನಿಂದ ಬಂದ ಮೇಲೆ ಬಹಳ ಮರುಗಿ ಒಂದು ದಿನ ಪೂರ್ತಿ ಉಪವಾಸ ಮಾಡಿ ತಮ್ಮ ಮನಸ್ಸಿಗೆ ಸಮಾಧಾನ ಮಾಡಿಕೊಂಡರು. ಆಗಾಗ್ಗೆ ಅರವಟಿಗೆಯಲ್ಲಿ ಸಭೆ ಸಮ್ಮೇಳನ ನಡೆಯುತ್ತಲೇ ಇದ್ದವು. ಒಂದು ಸಲ ಒಕ್ಕಲುತನ ಪ್ರದರ್ಶನವನ್ನು ಹಳ್ಳದ ದಂಡೆಯ ಮೇಲೆ ಮಾಡಲಾಗಿತ್ತು. ಅದರ ಉದ್ಘಾಟನೆಗೆ ಆಗಿನ ಕೇಂದ್ರ ಮಂತ್ರಿಗಳಾದ ಡಿ. ಪಿ. ಕರಮರಕರ ಬಂದಿದ್ದರು. ಅವರು ತುಂಬಾ ಸಂತೋಷಪಟ್ಟು ಒಮ್ಮೆ ದಿಲ್ಲಿಗೆ ಬಂದು ಹೋಗಲು ನಮ್ಮಿಬ್ಬರಿಗೂ ಆಮಂತ್ರಣ ಕೊಟ್ಟರು. ಒಂದು ಸಂದರ್ಭದಲ್ಲಿ ತಮ್ಮ ಪಿ. ಎ. ಆಗಲು ದಾಬಡೆ ಅವರನ್ನು ಒತ್ತಾಯಿಸಿದ್ದರು, ಆದರೆ ಇವರು ಒಪ್ಪಿಕೊಳ್ಳಲಿಲ್ಲ. ಅಂತೂ ಒಮ್ಮೆ ನಾವಿಬ್ಬರೂ ದಿಲ್ಲಿಗೆ ಹೋಗಿ ಅವರ ಮನೆಯಲ್ಲಿ ಒಂದು ತಿಂಗಳು ಇದ್ದು ಬಂದೆವು. ತುಂಬಾ ಆದರಾತಿಥ್ಯ ಮಾಡಿದರು. ಪಾರ್ಲಿಮೆಂಟ್ ಅಧಿವೇಶನ

ನೋಡಲು ಪಾಸು ಕೊಟ್ಟು ಕರೆದುಕೊಂಡು ಹೋಗಿದ್ದರು. ಆಗ ನಾವು ಋಷಿಕೇಶ, ಹರಿದ್ವಾರಕ್ಕೂ ಹೋಗಿ ಬಂದೆವು. ಭಾರತಿ, ಪ್ರಕಾಶ ಇಬ್ಬರನ್ನೂ ನನ್ನ ತಮ್ಮ ವೆಂಕಣ್ಣನ ಕಡೆಗೆ ಬಿಟ್ಟು ಹೋಗಿದ್ದೆವು.

ಒಮ್ಮೆ ಅಳ್ನಾವರದಲ್ಲಿ ಅಡವಿ ಕೂಲಿಕಾರರ (ಕರ್ನಾಟಕ) ಪರಿಷತ್ ಕರೆಯಲಾಗಿತ್ತು. ಮುಂಬೈ ಉಪಮಂತ್ರಿ ವಾಂದ್ರೇಕರ ಬಂದಿದ್ದರು. ಪರಿಷತ್ ಎರಡು ದಿವಸ ತುಂಬಾ ಉತ್ಸಾಹದಿಂದ ನಡೆಯಿತು. ಅಲ್ಲಿ ಒಂದು ಚಿಕ್ಕ ಪ್ರದರ್ಶನವೂ ಏರ್ಪಾಡಾಗಿತ್ತು. ಕರ್ನಾಟಕದ ಅರಣ್ಯ ಮಂತ್ರಿ ರುದ್ರಪ್ಪನವರು ಬಂದಿದ್ದರು.

ಸುಮಾರು 200 ಜನ ಪ್ರತಿನಿಧಿಗಳು ಬಂದಿದ್ದರು. ಅದರಂತೆ ಅರವಟಿಗೆಯಲ್ಲಿ ಅಡವಿ ಗೌಳಿಗರ (ಗೋಪಾಲಕರ) ಸಮ್ಮೇಳನವನ್ನೂ ಕರೆಯಲಾಗಿತ್ತು. ಅದಕ್ಕೆ ಬೆಳಗಾವಿಯ ಅಣ್ಣೂ ಗುರೂಜಿ ಅವರು ಮುಖ್ಯ ಅತಿಥಿಗಳಾಗಿ ಬಂದಿದ್ದರು.

**ಹೊಲ್ತೀ ಕೋಟೆ :** ಇದೊಂದು ಹಳ್ಯಾಳ ರಸ್ತೆಯ ಪಕ್ಕದಲ್ಲಿದ್ದ ಬೇಚಿರಾಕ ಗ್ರಾಮ. ಭೂಮಿ ಪಡ ಇತ್ತು, ಅದನ್ನು ಸಾಗುವಳಿ ಮಾಡಿಸುವ ವಿಚಾರ ಇವರದು. ಅಲ್ಲಿಯೇ ರೈತರ ಒಂದು ಪರಿಷತ್ತು ಕರೆದರು. ಅಲ್ಲಿಯ ರೈತರ ಸಂಗಡ ವಿಚಾರ ವಿನಿಮಯ ಮಾಡಿದರು. ಆಗ ಪಡ ಎಬ್ಬಿಸಲು ರೈತರು ಸಿದ್ಧರಾದರು. ಅದಕ್ಕಾಗಿ ಒಂದು ಟೆನೆಂಟ್ ಫಾರ್ಮಿಂಗ್ ಸೊಸೈಟಿ ರಜಿಸ್ಟರ ಮಾಡಲ್ಪಟ್ಟಿತು. ಒಂದು ವಸಾಹತು ಯೋಜನೆಯೂ ಮಂಜೂರಾಯ್ತು. ಅಲ್ಲಿಯ ಕೆಲಸ ನೋಡಿಕೊಳ್ಳಲು ಎಮ್. ಜಿ. ಪಾಟೀಲ ಮತ್ತು ಸಿ. ಬಿ. ಐರಸಂಗ ಇವರನ್ನು ನೇಮಿಸಲಾಯ್ತು. 1954ರಲ್ಲಿ ಕಾರ್ಯ ಪ್ರಾರಂಭವಾಯ್ತು. ಬಂದ ಜನರು ಗುಡಿಸಲುಗಳಲ್ಲಿ ವಾಸಿಸಹತ್ತಿದರು, ಅವರಿಗೆ ಮನೆ ಕಟ್ಟಿಕೊಡಲಾಯ್ತು. ಶಕ್ಯವಾದ ಎಲ್ಲ ಸವಲತ್ತುಗಳನ್ನು ಕೊಡಿಸಲಾಯ್ತು. ಭೂಸಾಗುವಳಿ ತುಂಬಾ ಯಶಸ್ವಿಯಾಯಿತು. ಅಲ್ಲಿಯೂ ಒಂದು ಪತ್ರಿಕಾ ಗೋಷ್ಠಿ ಕರೆಯಲಾಗಿತ್ತು. ಹೆಚ್ಚಿನ ಸಂಪರ್ಕಕ್ಕೆಂದು ಒಂದು ಸಲ ಎಂಟು ದಿವಸ ಅಲ್ಲಿ ದಾಬಡೆಯವರು ಕ್ಯಾಂಪ್ ಮಾಡಿದರು. ನಿತ್ಯ ಪ್ರಾರ್ಥನೆ, ಶಾರೀರಿಕ ಶ್ರಮ, ಸಂಜೆ ಮಹಾಭಾರತ ಕಥನ, ಗೀತಾ ಪ್ರವಚನ ನಡೆಯುತ್ತಲಿದ್ದವು. ಒಂದು ದುರ್ಘಟನೆ ನಡೆದಿದ್ದೇನೆಂದರೆ ಅಲ್ಲಿಯ ಕಛೇರಿಯಲ್ಲಿಯ ಒಂದು ಪಾಸ್‌ಬುಕ್ ಕಳುವಾಯ್ತು. ಎಷ್ಟು ವಿಚಾರಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ದಾಬಡೆ ಅವರು ಅಲ್ಲಿ ಮೂರು ದಿವಸ ಉಪವಾಸ ಮಾಡಿದರು. ಊರಿನ ಜನರೆಲ್ಲ ಬಂದು ಹೇಳಿಕೊಂಡಾಗ ಮೂರನೇ ದಿವಸ ಉಪವಾಸ ಮುಕ್ತಾಯವಾಯ್ತು.

ಸೇವಾದಳದ ಸೈನಿಕರು ಅರವಟಿಗೆಗೆ ಬಂದ ಮೇಲೆ ಜನತೆಯ ಸಂಪರ್ಕ ಪುಷ್ಟಿಯಾಯ್ತು. ಹೋಳಿ ಹುಣ್ಣಿಮೆಯಲ್ಲಿ ಜನರೊಡನೆ ಕೂಡಿಕೊಂಡು ಕಾರ್ಯಕರ್ತರು ಓಕುಳಿ ಆಡುತ್ತಿದ್ದರು. ಕಾರ್ಯಕರ್ತರು ಬರದಿದ್ದರೆ ಅಂದು ಅವರು ತುಂಬಾ ಕುಡಿದು ತೂರಾಡುತ್ತಲಿದ್ದರು. ಆದರೆ ಇವರೆಲ್ಲ ಇದ್ದ ಮೇಲೆ ಕುಡಿಯುವುದು ಪೂರ್ತಿ ನಿಂತು ಹೋಗುತ್ತಿತ್ತು. ಎಲ್ಲರೂ ಸೇರಿ ಆಟವಾಡಿ ಮಧ್ಯಾಹ್ನ 12 ಕ್ಕೆ ಮುಕ್ತಾಯ ಮಾಡಿ ಮನೆಗೆ ಹೋಗುವರು. ಅದರಂತೆ ವಾರಕ್ಕೊಮ್ಮೆ ಊರ

ಸ್ವಚ್ಛತಾ ಕಾರ್ಯಕ್ರಮ. ಕಸ ಹೊಡೆಯುವದು, ಗುಡಿ ಹಸನು ಮಾಡುವದು, ಬಾವಿಯ ಸುತ್ತಲೂ ಸ್ವಚ್ಛ ಮಾಡುವದು, ಗುಡಿ ನೆಲ್ಲಕ್ಕಿ ಸಾರಿಸುವದು ನಡೆಯುತ್ತಲಿತ್ತು.

**ಪ್ರಾರ್ಥನಾ ಪುಸ್ತಕ :** ಇವರು ಪ್ರಾರ್ಥನಾಪ್ರಿಯರು. ಗಾಂಧೀಜಿ ಅವರ ಪ್ರಾರ್ಥನೆ (ಬೆಳಿಗ್ಗೆ, ಸಂಜೆ) ಎಲ್ಲವನ್ನೂ ಪದ್ಯರೂಪದಲ್ಲಿ ಕನ್ನಡಕ್ಕೆ ಭಾಷಾಂತರಿಸಿ ಅಚ್ಚು ಹಾಕಿಸಿದರು. ಇಂದು ಆ ಪದ್ಯಗಳನ್ನು ಕರ್ನಾಟಕದ ಎಲ್ಲ ಖಾದಿ ಸಂಸ್ಥೆಗಳು ಹೇಳುತ್ತಲಿವೆ. ಈ ಪುಸ್ತಕದ ಉದ್ಘಾಟನೆ ಅಳ್ನಾವರದಲ್ಲಿ ಬೆಳಿಗ್ಗೆ 10 ಗಂಟೆಗಿತ್ತು. ಆಗ ಆ ಸಮಯಕ್ಕೆ ಬಸ್ಸು ಇರಲಿಲ್ಲ. ಬೆಳಿಗ್ಗೆ 6 ಗಂಟೆಗೆ ಕಾಲ್ನಡಿಗೆಯಿಂದ ಹೊರಟರು, ಅವರ ಸಂಗಡ ಪ್ರಕಾಶನೂ ಹೊರಟ. ದಾರಿಯಲ್ಲಿ ಯಾವುದಾದರೂ ಟ್ರಕ್ ಬರಬಹುದೆಂದು ಇವರ ಯೋಚನೆ. ಸಾಯಂಕಾಲ ಕಾರ್ಯಕ್ರಮ ಮುಗಿಸಿಕೊಂಡು ತಿರುಗಿದಾಗ ಅವರು ಪ್ರಕಾಶ ಪೂರ್ತಿ ನಡೆದೇ ಹೋಗಿದ್ದರೆಂದು ತಿಳಿಯಿತು. ಕಾರ್ಯಕ್ರಮ ವೇಳೆಗೆ ಸರಿಯಾಗಿ ಜರುಗಿ ಪುಸ್ತಕದ ಉದ್ಘಾಟನೆ ಆಯಿತೆಂದು ಹೇಳಿದರು.

ಇವರ ಮತ್ತು ಇಲ್ಲಿಯ ಕಾರ್ಯಕರ್ತರ ಕಟ್ಟುನಿಟ್ಟಿನ ಜೀವನದ ಪರಿಣಾಮ ತುಸು ಮಟ್ಟಿಗೆ ಊರಿನವರ ಮೇಲೆ ಆಗಿತ್ತು. 3-4 ಜನ ಮಾತ್ರ ಇವರ ಪಟ್ಟ ಶಿಷ್ಯರಾದರು. ಇವರಲ್ಲಿ ಒಬ್ಬಾತ ಹರಿಜನ ಚನ್ನಬಸು. ನಿತ್ಯ ಮನೆಯಲ್ಲಿ ಒಂದೆರಡು ತಾಸು ಭಜನೆ ಮಾಡುತ್ತಿದ್ದ. ಸರಾಯಿ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ. ಆದರೆ ಒಮ್ಮೆ ಒಂದು ಘಟನೆ ಜರುಗಿತು. ಒಬ್ಬರ ಮಣ್ಣಿಗೆ ಹೋಗಿದ್ದ ಚನ್ನಬಸು ರಾತ್ರಿ 12ಕ್ಕೆ ಮನೆಗೆ ಬಂದಾಗ ತುಂಬಾ ಕುಡಿದಿದ್ದ. ಏನೇನೋ ಒದರಾಡುತ್ತಿದ್ದ. ನಮ್ಮ ಮನೆಯ ಹಿಂದೆಯೇ ಅವನ ಮನೆ. ರಾತ್ರಿ 12ಕ್ಕೆ ಕೈಯಲ್ಲಿ ಬೆಡ್‌ಲ್ಯಾಂಪ್ ತೆಗೆದುಕೊಂಡು ಇವರು ಅವನ ಮನೆಗೆ ಹೋದರು. ನಾನೂ ಅವರ ಸಂಗಡ ಹೋದೆ. ಇವರು ಬಂದಾರೆಂದು ಗೊತ್ತಾದ ಕೂಡಲೇ ಬಾಗಿಲು ಹಾಕಿಕೊಂಡ. ಇವರು ಸೀದಾ ಅವನ ಮನೆಗೆ ಹೋಗಿ ಬಾಗಿಲು ಬಡಿದು ತೆಗೆಯಲು ಹೇಳಿದರು. ಆಗ ಚನ್ನಬಸು ಹೇಳಿದ್ದು ಹೀಗೆ "ಇಂದು ನಾನು ಶೆಗಣಿತಿನ್ನುವ ಕೆಲಸ ಮಾಡೇನಿ. ದಯಮಾಡಿ ಬಾಗಿಲು ತೆಗೆಯಲು ಹೇಳಬೇಡಿರಿ. ನಾಳೆ ನಾನೇ ಬೆಳಿಗ್ಗೆ ಬಂದು ಭೆಟ್ಟಿಯಾಗುವೆ" ಎಂದು ಬೇಡಿಕೊಂಡ. "ನೀನು ಬಾಗಿಲು ತೆಗೆಯುವವರೆಗೆ ನಾನು ನಿಮ್ಮ ಮನೆಯ ಮುಂದೆ ಕೂಡುವೆ" ಎಂದು ಇವರು ಹೇಳಿದರು. ಆತ ತುಂಬಾ ಗಾಬರಿಯಾಗಿ "ಹಾಗೆ ಮಾಡಬ್ಯಾಡ್ರಿ, ನಾನು ಬೆಳಿಗ್ಗೆ ಜಳಕಾ ಮಾಡಿ ಮಡಿವಸ್ತ್ರ ಉಟ್ಟು ಖಂಡಿತ ಬರ್ತೀನಿ. ಈಗ ನಿಮಗೆ ಮುಖ ತೋರಿಸುವ ಇಚ್ಛೆ ನನಗಿಲ್ಲ" ಎಂದು ಬೇಡಿಕೊಂಡ. ನಾನೇ ಇವರನ್ನು ಮನೆಗೆ ಕರೆದುಕೊಂಡು ಬಂದೆ. ಆತ ಹೇಳಿದಂತೆ ಸರಿಯಾಗಿ ಬೆಳಿಗ್ಗೆ 8 ಗಂಟೆಗೆ ಸ್ನಾನ ಮಾಡಿ, ಮಡಿ ವಸ್ತ್ರ ಉಟ್ಟು ಕಛೇರಿಗೆ ಬಂದ. ಆಗ ಇವರು ನನ್ನನ್ನೂ ಕರೆಸಿದರು. ಆತ ನಮ್ಮಿಬ್ಬರ ಕಾಲ ಮೇಲೆ ಬಿದ್ದು ಕಣ್ಣೀರು ಸುರಿಸುತ್ತಾ "ಇನ್ನು ಮುಂದೆ ಇಂಥಾ ಕೆಲಸ ಎಂದೆಂದಿಗೂ ಮಾಡುವದಿಲ್ಲ. ಗಾಂಧೀ ಫೋಟೊ ಮುಟ್ಟಿ ಆಣಿ ಮಾಡಿ ಹೇಳತೀನಿ" ಅಂತ ಪಶ್ಚಾತ್ತಾಪದಿಂದ ನೊಂದು ಹೇಳಿದ. ಅದರಂತೆ ಮುಂದೆ ತಪ್ಪದೇ ನಡೆದುಕೊಂಡ. ಇದು ಹೃದಯ ಪರಿವರ್ತನೆ ಎಂದು ನನಗನಿಸಿತು.

ಹೆಂಡತಿಯ ಮುಂದೆ ಗುಟ್ಟಿನ ವಿಷಯಗಳನ್ನು ಹೇಳಬಾರದೆಂದು ಬಹಳ ಜನರ ಅಭಿಪ್ರಾಯ. ಆದರೆ ಇವರು ಅದಕ್ಕೆ ತುಂಬಾ ಅಪವಾದ. ಯಾವ ಚಿಕ್ಕ ಪುಟ್ಟ ವಿಷಯಗಳನ್ನೂ ನನ್ನ ಮುಂದೆ ಹೇಳದೆ ಇರುತ್ತಿರಲಿಲ್ಲ.

**ಗೋಪಾಲ ಹುಟ್ಟಿದ್ದು :** ಅದು 1955ರ ಕಾಲ, ಗೋಪಾಲ ನನ್ನ ಹೊಟ್ಟೆಯಲ್ಲಿದ್ದ. ಬಾಣಂತನಕ್ಕೆ ಅವ್ವ ಬಂದಿದ್ದಳು. ನನ್ನ ಅಶಕ್ತತನ ಇದ್ದೇ ಇತ್ತು. ಒಂದು ದಿನ ರಾತ್ರಿ 9 ಗಂಟೆಗೆ ಬೇನೆ ಬರಹತ್ತಿದವು. ತುಂಬಾ ತೊಂದರೆಯಾಗಹತ್ತಿತು. ಅವ್ವ ದೇವರ ಮುಂದೆ ತುಪ್ಪದ ದೀಪ ಹಚ್ಚಿ ಸಮಾಧಾನ ಹೇಳುತ್ತ ಕುಳಿತಳು. ಇವರು ಧಡಪಡಿಸಹತ್ತಿದರು. ಆಗ ನರ್ಸ ರಾಧಾ ಅಳ್ನಾವರದಲ್ಲಿರುತ್ತಿದ್ದಳು. ಅಲ್ಲಿಗೆ ಸೈಕಲ್ ಮೇಲೆ ಒಬ್ಬ ಚೀಟಿ ಒಯ್ದ. ಆದರೂ ಅವಳು ಬಂದದ್ದು ಮರುದಿನ 9 ಗಂಟೆಗೆ. ನಾನು ಬೆಳಗಿನ 3 ಗಂಟೆಗೆ ತುಂಬಾ ಆಯಾಸದಿಂದ ಗಂಡುಮಗುವನ್ನು ಹೆತ್ತೆ. ನಮ್ಮ ಮನೆಯ ಮುಂದೆ ಪಕ್ಕದಲ್ಲಿ ತುಂಬಾ ಅಡವಿ ಗೌಳಿಗರಿದ್ದರು. ಆದ್ದರಿಂದ ಆತನಿಗೆ ಗೋಪಾಲ ಎಂದೇ ಹೆಸರಿಡಲಾಯ್ತು. ಧಾರವಾಡ, ಹುಬ್ಬಳ್ಳಿಯಿಂದ ಅನೇಕರು ಬಂದು ನೋಡಿಕೊಂಡು ಹೋದರು. ಮುಂದೆ ಯಾವ ತೊಂದರೆ ಆಗಲಿಲ್ಲ. ಕುಸುಮಕ್ಕ (ಅನಂತರಾವ ದಾಬಡೆ ಅವರ ಮಗಳು) ಬಂದಿದ್ದಳು, ತಂಗಿ ಪ್ರಭಾ ಬಂದು ಹೋದಳು. ಆತ ಸಾವಕಾಶವಾಗಿ ದೊಡ್ಡವನಾಗಹತ್ತಿದಾಗ ಜಾವಳದ ಪ್ರಶ್ನೆ ಬಂತು. ಹಿಂದೆ ಪ್ರಕಾಶನ ಜಾವಳದ ಸಮಯಕ್ಕೆ ಇವರು ಏನೊಂದು ಮಾಡದೆ ಓರ್ವ ನಾವಲಿಗನನ್ನು ಕರೆಸಿ ತಲೆಕೂದಲು ಕತ್ತರಿಸಿದ್ದರು. ನನಗೆ ತುಂಬಾ ಅಸಮಾಧಾನವಾಗಿತ್ತು. ಎರಡು ದಿವಸ ಇವರ ಸಂಗಡ ಮಾತು ಬಿಟ್ಟಿದ್ದೆ. "ನಮ್ಮಂಥವರು ಇಂಥ ಅನಾವಶ್ಯಕ ಕಾರ್ಯಗಳಿಗೆ ಹಣ ಪೋಲು ಮಾಡಬಾರದು, ಒಂದು ವೇಳೆ ಮಾಡಬೇಕೆಂದರೂ ನಮ್ಮಲ್ಲಿ ಹಣ ಇರಲಿಲ್ಲ" ಎಂದು ಸಮಾಧಾನ ಮಾಡಿದ್ದರು. ಈ ಸಲ ಏನೋ ಹುರುಪು ಉತ್ಸಾಹ ಬಂದಿತ್ತು. ಈ ಸಮಾರಂಭಕ್ಕೆ ನನ್ನ ತವರಿನವರು ಇವರ ಅಣ್ಣಂದಿರು ಎಲ್ಲರೂ ಬಂದಿದ್ದರು. ಅಂತೂ ಜಾವಳ ಅದ್ದೂರಿಯಿಂದಲೇ ನಡೆಯಿತು. ಇವರ ಅಕ್ಕ ಅವಳ ಗಂಡನೂ ಬಂದಿದ್ದರು. ಸಂಜೆಗೆ ಊರ ಜನರ ಮನೆ, ಮನೆಗೆ ಹೋಗಿ ಒಬ್ಬರು ಊಟಕ್ಕೆ ಬರಬೇಕೆಂದು ಇವರೇ ಹೇಳಿ ಬಂದರು. ಸುಮಾರು 50 ಜನ ಬರಬಹುದೆಂದು ನಮ್ಮ ಅಂದಾಜು ಇತ್ತು. ಮನೆಯಮುಂದಿನ ಬಯಲು ಹಸನಮಾಡಿ ಪೆಟ್ರೋಮಾಕ್ಸ್ ಹಚ್ಚಿಡಲಾಗಿತ್ತು. ಊರ ಜನರೆಲ್ಲ ಕುಟುಂಬ ಸಮೇತ ಬಂದು ಕುಳಿತುಬಿಟ್ಟರು. ನಾನಂತೂ ದೇವರನ್ನು ನೆನೆಸಿ ತುಪ್ಪದ ದೀಪ ಹಚ್ಚಿಟ್ಟು ನಮ್ಮ ಮಾನದ ರಕ್ಷಣೆ ನೀನೇ ಮಾಡಬೇಕೆಂದು ಬೇಡಿಕೊಂಡೆ. ಕಲ್ಲಪ್ಪ ಎಂಬ ಅಡಿಗೆಯವ ಬಂದಿದ್ದ. ನೀವು ಏನೂ ಗಾಬರಿಯಾಗಬೇಡಿರಿ ಎಂದು ಅನ್ನ ಸಾರು ತಪ್ಪೇಲಿ ಏರಿಸುತ್ತಲೇ ಇದ್ದ. ರಾತ್ರಿ 10 ರವರೆಗೆ ಸುಮಾರು 500 ಜನರು ಊಟ ಮಾಡಿರಬೇಕು, ಭಗವಂತನೇ ನಮ್ಮ ಮಾನ ಕಾಯ್ದ. ದೇವರು ನಮ್ಮನ್ನು ಇದರಿಂದ ಹೇಗೆ ಪಾರು ಮಾಡಿದ ಎಂಬುದೇ ಒಂದು ಪವಾಡ.

# ಶಿಕ್ಷಣ ಸಂಸ್ಥೆಯ ಉದಯ

ನಾವು ಸೇವಾದಳದ ಕಾರ್ಯಕರ್ತರು ಆಗ ತಿಂಗಳಿಗೊಮ್ಮೆ ಒಬ್ಬೊಬ್ಬರ ಮನೆಯಲ್ಲಿ ಸೇರುವದು, ಅಲ್ಲಿಯೇ ಊಟ ಮಾಡಿ ನಮ್ಮ ಕಾರ್ಯಕ್ರಮಗಳ ಬಗ್ಗೆ ಚಿಂತನೆ ಮಾಡುವದು ನಡೆಯುತ್ತಿತ್ತು. ಒಂದು ಸಲ ಈ ಸಭೆ ನಮ್ಮ ಅರವಟಿಗೆ ಮನೆಯಲ್ಲಿಯೇ ಇತ್ತು. ಅಂದಿನ ಸಭೆಗೆ 12 ಜನ ಬಂದಿದ್ದರು. ಗೋವಿಂದಮೂರ್ತಿ ದೇಸಾಯಿ, ಉಪಾಧ್ಯೆ, ಎಮ್. ಜಿ. ಪಾಟೀಲ, ಕನವಳ್ಳಿ, ಎಸ್. ಆರ್. ಭಾಗವತ, ದೀಕ್ಷಿತ, ಕುಲಕರ್ಣಿ ನಾವಿಬ್ಬರು. ಊಟವಾದ ಮೇಲೆ ಚರ್ಚೆ ಪ್ರಾರಂಭವಾಯ್ತು. ಸುರೇಂದ್ರ ದಾನಿಯೂ ಬಂದಿದ್ದ. ಈ ಸರಕಾರಿ ಸರ್ವೋದಯ ಯೋಜನೆ ಖಾಯಂ ನಡೆಯುವದಿಲ್ಲ. ಕಾರಣ ನಾವು ಒಂದು ಶಿಕ್ಷಣ ಸಂಸ್ಥೆಯನ್ನು ಈ ಕ್ಷೇತ್ರದಲ್ಲಿ ಯಾಕೆ ಸ್ಥಾಪಿಸಬಾರದು ? ಎಂಬ ವಿಚಾರ ಬಂದು ತುಂಬ ಗಂಭೀರವಾದ ಚರ್ಚೆ ರಾತ್ರಿ 10 ರವರೆಗೆ ನಡೆಯಿತು. ಕೊನೆಗೆ ಒಂದು ನಿರ್ಧಾರಕ್ಕೆ ಬಂದು ಸರ್ವೋದಯ ಶಿಕ್ಷಣ ಟ್ರಸ್ಟ್ ಆಗಬೇಕೆಂದು ನಿರ್ಣಯವಾಯ್ತು. 1956 ಮೇ ತಿಂಗಳ ಸೂಟಿ ಮುಗಿದ ನಂತರ ಅಳ್ನಾವರದಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭಿಸಲು ಊರ ಹಿರಿಯರ ಸಭೆ ಕರೆಯಲಾಯ್ತು. ಅದಕ್ಕೆ ನಿಧಿ ಕೊಡಲು ಕೇಳಿದಾಗ ಸಭೆಯಲ್ಲಿ ಕೇವಲ 16/- ರೂ. ದೊರೆಯಿತು. ಎಷ್ಟೇ ಸಿಗಲಿ ಶಾಲೆ ಪ್ರಾರಂಭವಾಗುವದೆಂದು ಯೋಚನೆ ಮಾಡಿ ಊರ ಸಾವಕಾರ ಪಾಟೀಲ ಅವರ ಕಾರಿನ ಶೆಡ್ಡಿನಲ್ಲಿ 5ನೇ ವರ್ಗ ಪ್ರಾರಂಭವಾಯಿತು. ಕನವಳ್ಳಿ ಅವರು ಹೆಡ್‌ಮಾಸ್ತರ್ ಎಂದು ನಿರ್ಧಾರವಾಯ್ತು. ಅಲ್ಲಿ, ಇಲ್ಲಿ ಭಿಕ್ಷೆ ಬೇಡಿ 2-3 ಕುರ್ಚಿ, ಟೇಬಲ್, ಬೆಂಚ್ ತರಲಾಯಿತು. 16 ವಿದ್ಯಾರ್ಥಿಗಳಿಂದಲೇ ಪ್ರಾರಂಭವಾದದ್ದು ಮುಂದೆ ಟ್ರಸ್ಟ್ ರಜಿಸ್ಟರ್ ಆಯಿತು. ಸಾವಕಾಶವಾಗಿ ಗಾಡಿ ನಡೆಯಿತು. ಅಳ್ನಾವರದಲ್ಲಿ ಬೇಕಾದಷ್ಟು ಆಗ ಉಳ್ಳವರಿದ್ದರೂ ಅವರು ಅಷ್ಟೊಂದು ಮನಸ್ಸು ಮಾಡಲಿಲ್ಲ. ಅಲ್ಲಿ, ಇಲ್ಲಿ ನಿಧಿ ಕೂಡಿಸಿ ಕೆಲಸ ನಡೆಯಿತು. ಆರ್ಥಿಕ ಮುಗ್ಗಟ್ಟಿನಿಂದ ಜರ್ಜರಿತವಾದೆವು. ಅದರಲ್ಲಿ ಮುಂದೆ ತಡಸ ಎಂಬ ನಮ್ಮ ಗೆಳೆಯನೂ ಸೇರಿದ. ಆಗಾಗ್ಗೆ ಸಭೆ ಸೇರಿಸಿ ಚರ್ಚೆ ಮಾಡುತ್ತಲಿದ್ದೆವು. ಹಣದ ಅಡಚಣೆಗಾಗಿ ಇವರ ಕೈ ಸೋತು ಅದನ್ನು ಬಂದ್ ಮಾಡಿ ಕೈ ತೊಳೆದುಕೊಳ್ಳಬೇಕೆಂಬ ನಿರ್ಣಯಕ್ಕೆ ಬಂದಿದ್ದರು. ಆದರೆ ಅಂದಿನ ಚರ್ಚೆಯಲ್ಲಿ ನಾನಿರಲಿಲ್ಲ. ಮರುದಿನ ಪುನಃ ಎಲ್ಲರೂ ಅಂದರೆ ಉಪಾಧ್ಯೆ, ತಡಸ, ದಾನಿ, ಇವರು, ನಾನು ಚರ್ಚೆ ಪ್ರಾರಂಭಿಸಿದೆವು. ನನಗೆ ಬಂದ್ ಮಾಡುವದು ಎಳ್ಳಷ್ಟೂ ಸೇರಲಿಲ್ಲ. "ಇಷ್ಟೊಂದು ಅನುಭವವುಳ್ಳವರು ಅತಿರಥ, ಮಹಾರಥಿಗಳು ನೀವು. ಇಂಥ ಒಂದು ಚಿಕ್ಕ ಸಂಸ್ಥೆ ನಡಿಸಲಾಗುವದಿಲ್ಲವೆಂದರೆ, ದುಡ್ಡಿನ ಅಡಚಣೆ ಸಲುವಾಗಿ ಬಂದ್ ಮಾಡಬೇಕೆಂದರೆ ಇಗೋ ತಗೋಳ್ರಿ ನನ್ನ ಕೈಯಲ್ಲಿಯ ಬಂಗಾರದ ಬಳೆಯನ್ನು. ಹೀಗೆ ನೀವು ಷಂಡರಾಗಿ ವರ್ತಿಸಬೇಡಿರಿ.

ಈ ಸಂಸ್ಥೆ ಏನೇ ಆದರೂ ನಡೆಯಲೇಬೇಕು" ಎಂದು ವಾದಿಸಿದೆ. ಪುನಃ ಚರ್ಚೆಯಾಗಿ ಸಂಸ್ಥೆ ನಡೆಸಬೇಕೆಂಬ ನಿರ್ಣಯ ತೆಗೆದುಕೊಳ್ಳಲಾಯ್ತು. ನನಗೆ ನಿಜವಾಗಿ ಕುಣಿದಾಡುವಷ್ಟು ಸಂತೋಷವಾಯ್ತು. ಈ ಸಂಸ್ಥೆಯ ಬಗ್ಗೆ ನನಗೇಕೆ ಇಷ್ಟು ಆತ್ಮೀಯತೆ ಅಂದರೆ, ನನ್ನ ಚಿಕ್ಕ ಮಗ ಗೋಪಿ ಮತ್ತು ಈ ಸಂಸ್ಥೆ ಒಂದೇ ಸಮಯಕ್ಕೆ ಹುಟ್ಟಿದ್ದು. ಇವೆರಡೂ ಪ್ರಚಂಡವಾಗಿ ಬೆಳೆದು ಸೇವೆ ಸಲ್ಲಿಸಬೇಕೆಂಬುದೇ ನನ್ನ ಇಚ್ಛೆ. ಮರುದಿನವೇ ನಾನು ಜಮಖಂಡಿಗೆ ಗೋಪಿನ್ನ ಕರೆದುಕೊಂಡು ನನ್ನ ತಾಯಿಯ ಕಡೆಗೆ ಹೊರಟೆ. ಅಲ್ಲಿಗೆ ಹೋದ ಮೇಲೆ ನನಗೆ ಒಂದು ವಿಚಾರ ಬಂತು. ನಾನು ಎಷ್ಟು ಕಠೋರವಾಗಿ ಮಾತಾಡಿದೆ ನಮ್ಮ ಜನರ ಬಗ್ಗೆ ಎಂದು ಮನದಲ್ಲಿ ಕುಟುಕ ಹತ್ತಿತು. ಆಗ ನಾನು ಇವರಿಗೆ ಒಂದು ಕ್ಷಮಾಪಣೆಯ ಕಾಗದ ಬರೆದು ಮನಸ್ಸಿಗೆ ಸಮಾಧಾನ ತಂದುಕೊಂಡೆ. ಇದೇ ಆ ಪತ್ರ.

*ಶಿರಸಾಷ್ಟಾಂಗ ನಮಸ್ಕಾರಗಳು.*

*ಚಿ|| ಭಾರತಿ, ಪ್ರಕಾಶ, ಗೋಪಿ ನಾವೆಲ್ಲ ಸುರಕ್ಷಿತವಾಗಿ ತಲುಪಿದೆವು. ನನ್ನ ಅಣ್ಣ, ಅತ್ತಿಗೆ, ಅವ್ವಾ ಅವರಿಗೆ ತುಂಬಾ ಸಂತೋಷಾವಾಯ್ತು. ಈಗ ನಾನು ನಿಮಗೆ ಪತ್ರ ಬರೆಯುವ ಮುಖ್ಯ ಕಾರಣವೆಂದರೆ, ಮೊನ್ನೆ ನಮ್ಮ ಸ.ಶಿ.ಟ್ರಸ್ಟಿನ ಸಭೆ ಸೇರಿದಾಗ್ಗೆ ಸದಸ್ಯರ ಬಗ್ಗೆ ನಾನು ತುಂಬಾ ಒರಟು ಮಾತಾಡಿದೆನೆಂದು ನನ್ನ ಮನಸ್ಸಿನಲ್ಲಿ ಒಂದೇ ಸವನೆ ಕುಟುಕ ಹತ್ತಿದೆ. ಆದರೆ ಸದಸ್ಯರೆಲ್ಲ ನನ್ನ ಮಾತಿಗೆ ಬೆಲೆ ಕೊಟ್ಟು ಮೊದಲಿನ ನಿರ್ಣಯವನ್ನು ಬದಲು ಮಾಡಿ, ಪುನಃ ಕಾರ್ಯಪ್ರವೃತ್ತರಾದುದನ್ನು ನೋಡಿದರೆ ನನಗೆ ಕುಣಿದಾಡುವಷ್ಟು ಸಂತೋಷಾವಾಯ್ತು. ಆಗ ನಾನು ಮಾತಾಡಿದ ಒರಟು ಶಬ್ದಗಳ ಬಗ್ಗೆ ನೀವು ಮತ್ತು ನಿಮ್ಮ ಮಿತ್ರರು ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ. ಈ ಟ್ರಸ್ಟಿನ ಬಗ್ಗೆ ನನಗೇಕೆ ಇಷ್ಟೊಂದು ಆತ್ಮೀಯತೆ ಇದೆ ಎಂಬುದಕ್ಕೆ ಕಾರಣವನ್ನು ಕೇಳಿರಿ. ಸುಮಾರಾಗಿ ನಮ್ಮ ಗೋಪಿ ಮತ್ತು ಈ ಟ್ರಸ್ಟ್ ಎರಡೂ ವಾರಿಗೆಯವು. ನಮ್ಮ ಗೋಪಿಯನ್ನು ನೋಡಿದಾಗೆಲ್ಲ ನನಗೆ ಟ್ರಸ್ಟಿನ ನೆನಪು ಬರುತ್ತದೆ. ಇವೆರಡೂ ತುಂಬಾ ವಿಶಾಲವಾಗಿ ಬೆಳೆದು ಹೆಚ್ಚು ಜನರಿಗೆ ನೆರಳು ಕೊಟ್ಟರೆ ನನಗೆ ತುಂಬಾ ಸಮಾಧಾನ. ಇವರು ಉದ್ದಂಡ ಆಯುಷ್ಯಾವಂತರಾಗಲೆಂದು ನನ್ನ ಹರಕೆ.*

*ಇಲ್ಲಿ ನಾನು ಇನ್ನೊಂದು ಭವಿಷ್ಯಾವಾಣಿ ಹೇಳುವೆ, ನೀವು ನಗಬಾರದು. ಸಧ್ಯ ಈ ಮಾತನ್ನು ಗುಟ್ಟಾಗಿಟ್ಟು ಮುಂದೆ ಪ್ರಸಂಗ ಬಂದಾಗ ಬೇಕಾದರೆ ಇತರರಿಗೆ ಹೇಳಬಹುದು. ಈಗ ಹೇಳಿದರೆ ಅವರೂ ನಕ್ಕಾರು.*

*ನಮ್ಮ ಟ್ರಸ್ಟಿಗೆ ಉಜ್ವಲ ಭವಿಷ್ಯಾವಿದೆ. ಆದರೆ ಅದು ಕಷ್ಟ ಪರಂಪರೆಗಳನ್ನು ಧೈರ್ಯದಿಂದ ದಾಟಬೇಕು. ಅದೆಷ್ಟೋ ಸಲ ಇದರಿಂದ*

ಮುಕ್ತರಾಗಬೇಕೆಂದು ನಿಮ್ಮ ಮನಸ್ಸಿನಲ್ಲಿಯೂ ಬರಬಹುದು. ಪ್ರಸಂಗ ಬಂದಾಗ ಮಾತ್ರ ನೀವು ಇದರ ಪೂರ್ತಿ ಹೊಣೆ ಹೊತ್ತು ಕಾರ್ಯ ಮಾಡಿದರೆ ಜಯ ನಿಶ್ಚಿತ.

ಆ ಸುದಿನವನ್ನು ನೋಡುವ ಭಾಗ್ಯ ನನಗಿಲ್ಲ. ನಾನು ಅರೆ ಆಯುಷಿ ಎಂದರೆ ನೀವು ಬೇಜಾರುಪಟ್ಟುಕೊಳ್ಳಬಾರದು. ನೀವು ಮಾತ್ರ ಖಂಡಿತ ಆ ದಿನವನ್ನು ನೋಡುವಿರಿ. ಆಗ ನಿಮ್ಮೊಡನೆ ನನ್ನ ಆತ್ಮವೂ ಪಾಲ್ಗೊಳ್ಳುವದು. ಇಲ್ಲಿ ಇನ್ನೊಂದು ನನ್ನ ಚಿಕ್ಕ ಬೇಡಿಕೆ. ನೀವು ಟ್ರಸ್ಟಿನ ಸೇವೆ ಮಾಡಿದ ಬಗ್ಗೆ ಯಾವುದೇ ಪ್ರತಿಫಲವನ್ನು ಅಪೇಕ್ಷಿಸಬೇಡಿರಿ. ನಮ್ಮ ಈ ಸಂಸ್ಥೆ ಜಾತ್ಯಾತೀತ ಮತ್ತು ಪಕ್ಷಾತೀತವಾಗಬೇಕೆಂದು ನನ್ನ ಹೆಬ್ಬಯಿಕೆ.

ಏನೋ ಅಧಿಕ ಪ್ರಸಂಗಿಯಂತೆ ಬರೆದೆನೆಂದು ಅಂದುಕೊಳ್ಳಬೇಡಿರಿ. ಇವು ನನ್ನ ಅಂತಃಕರಣದಲ್ಲಿಯ ನಾಲ್ಕು ಮಾತುಗಳು. ಕೊನೆಯದಾಗಿ ನಿಮಗೆ ಯೋಗ್ಯ ಅನ್ನಿಸಿದರೆ ಸ್ವೀಕರಿಸಿರಿ. ನಿಮಗೂ, ನಿಮ್ಮ ಮಿತ್ರರಿಗೂ ಇನ್ನೊಮ್ಮೆ ಮನಸಾ ಕ್ಷಮೆ ಕೋರುವೆ.

ಶಕ್ಯವಾದರೆ ನೀವೂ ಇತ್ತ ನಾಲ್ಕು ದಿವಸಗಳ ಮಟ್ಟಿಗೆ ಬಂದರೆ ನಮಗೆಲ್ಲ ಸಂತೋಷವಾಗುವದು.

ಇಂತಿ ನಿಮ್ಮ ಸೋನಿ (ಶಕುಂತಲಾ)

ನಿತ್ಯ ಜನತೆಯ ಸಂಪರ್ಕ ಬೆಳೆಯುತ್ತಲೇ ಇತ್ತು. ಒಂದು ದೊಡ್ಡಾಟ ಪ್ರಾರಂಭವಾಯ್ತು. ಇದರಲ್ಲಿ ನಮ್ಮ ಕಾರ್ಯಕರ್ತರೂ ಭಾಗವಹಿಸಿದ್ದರು. ನಮ್ಮ ಪ್ರಕಾಶ ಬಾಲಕ ರಾಮನಾಗಿದ್ದ, ಉಪಾಧ್ಯೆ ಮುಖ್ಯ ಪಾತ್ರ. ಇವರೆಲ್ಲ ಅದರಲ್ಲಿ ಭಾಗ ತೆಗೆದುಕೊಳ್ಳುವದರಿಂದ ಅನಾವಶ್ಯಕ ಕುಡಿತ, ಹೊಲಸು ಮಾಡುವದು, ಮಾತಾಡುವದು ಬಹುಮಟ್ಟಿಗೆ ಕಡಿಮೆಯಾಗಿತ್ತು. ಆ ದೊಡ್ಡಾಟ ನೋಡಲು ನಾವಿಬ್ಬರೂ ಬೆಳಗಿನವರೆಗೆ ಕುಳಿತಿದ್ದೆವು. ಇದೊಂದು ಸ್ಮರಣೀಯ ಘಟನೆ.

ಒಂದು ಸಂದರ್ಭದಲ್ಲಿ ಈ ಸರ್ವೋದಯ ಕಾರ್ಯದ ಮೌಲ್ಯಮಾಪನ ಮಾಡಲು ಒಂದು ಶಿಷ್ಟ ಮಂಡಳಿ ವೈಕುಂಠಭಾಯಿ ಅವರ ನೇತೃತ್ವದಲ್ಲಿ ಬರುವದು ನಿಶ್ಚಿತವಾಗಿತ್ತು. ಈ ಬಗ್ಗೆ ಇವರು ಮುಂಬೈ ಹೋದಾಗ ಅಲ್ಲಿಂದಲೇ ತಂತಿ ಕಳಿಸಿದರು.

Vaikunthbhai & party of ten arriving Arvatagi on 14th Jan for evaluation. Arrange simple food.

ಈ ತಂತಿ ತೆಗೆದುಕೊಂಡು ಉಪಾಧ್ಯೆ ನನ್ನ ಕಡೆಗೆ ಬಂದ. ನಾವಿಬ್ಬರೂ ತುಂಬಾ ಯೋಚನೆ ಮಾಡಿದೆವು, ಅಂದು ಸಂಕ್ರಮಣ ಹಬ್ಬ. ಏನಾದರೂ ಹೆಚ್ಚಿನದನ್ನು ಮಾಡಿದರೆ ಅವರಿಗೆ ಆಗದು. ಆದರೂ ಕೊನೆಗೆ ನಾನೇ ಹೇಳಿದೆ. "ಕರಿಗಡಬು ನಮ್ಮ ರಾಜ್ಯದ ಮುಖ್ಯ ಖಾದ್ಯ. ಜವಾಹರರು

ಮೆಚ್ಚಿದ ಖಾದ್ಯ. ಅದನ್ನೇ ಮಾಡೋಣ, ದಾಬಡೆ ಅವರಿಗೆ ಹೇಳುವ ಹೊಣೆ ನನ್ನದು" ಎಂದೆ. ಆ ಪಾರ್ಟಿ ಪೂರ್ವ ಯೋಜನೆಯಂತೆ 14 ನೇ ತಾರೀಖಿನ ದಿವಸ ಅರವಟಿಗೆಗೆ ಬಂದರು, ಅದರಲ್ಲಿ ಹತ್ತು ಜನರಿದ್ದರು. ಆಗ ನಮ್ಮ ಎಲ್ಲ ಕಾರ್ಯಕರ್ತರೂ ಬಂದಿದ್ದರು. ಕಛೇರಿಯ ಮುಂದೆ ದೊಡ್ಡ ಸಭೆ ಏರ್ಪಟ್ಟಿತ್ತು. ಗ್ರಾಮಸ್ಥರೂ, ಧಾರವಾಡದ ಅನೇಕ ಕಾರ್ಯಕರ್ತರೂ ಬಂದಿದ್ದರು. ತುಂಬಾ ಚರ್ಚೆಯಾಯಿತು. ವೈಕುಂಠಭಾಯಿ ಅವರಿಗೆ ತುಂಬಾ ಸಮಾಧಾನವಾದಂತೆ ಕಂಡಿತು. 1 ಗಂಟೆಗೆ ಎಲ್ಲರೂ ಊಟಕ್ಕೆ ಬಂದರು. ಅದಕ್ಕೂ ಮೊದಲು ಕಾರ್ಯಕರ್ತರು, ಜನರು ಎಳ್ಳು ಬೆಲ್ಲದ ವಿತರಣೆ ಮಾಡಿದರು. ನಾವು ಮಾಡಿದ ಕರಿಗಡಬನ್ನು ಬಂದ ಅತಿಥಿಗಳು ತುಂಬಾ ಮೆಚ್ಚಿಕೊಂಡು ಮನಸೋಕ್ತ ತಿಂದರು. ಇವರೂ ಅದನ್ನು (ಕರಿಗಡಬು ಮಾಡಿದ್ದನ್ನು) ಹಗುರಾಗಿಯೇ ತೆಗೆದುಕೊಂಡರು. ಮುಂದೆ ಈ ಪಾರ್ಟಿ ಮಂಡಿಹಾಳ, ಹೊಲ್ತೀಕೋಟೆಗೆ ಭೇಟಿಕೊಟ್ಟು ವಾಪಸ್ ಮುಂಬೈಗೆ ಪ್ರಯಾಣ ಮಾಡಿತು. ದಾಬಡೆ ಅವರು ಪಾರ್ಟಿಯ ಸಂಗಡವೇ ಮುಂಬೈಯಿಂದ ಬಂದಿದ್ದರು.

**ಜಪಾನದಿಂದ ಕಲ್ಲಾಪೂರರ ಆಗಮನ :** ಜಪಾನಕ್ಕೆ ಹೋಗಿದ್ದ ಎಸ್. ಕೆ. ಕಲ್ಲಾಪೂರ ವಾಪಸ್ ಬಂದರು. ಅವರನ್ನು ಅರವಟಿಗೆಗೆ ಬರಮಾಡಿಕೊಳ್ಳಲಾಯ್ತು. ಆಗ ನಾವೇನು ಮಾಡಬೇಕೆಂಬ ಬಗ್ಗೆ ನಾವಿಬ್ಬರೂ ತುಂಬಾ ಚರ್ಚೆ ಮಾಡಿದೆವು. ಅವರು ಜಪಾನಕ್ಕೆ ಹೊರಡುವ ಪೂರ್ವದಲ್ಲಿ ಇವರಿಗೆ ಸರ್ವೋದಯ ಸಂಚಾಲಕತ್ವವನ್ನು ಒಪ್ಪಿಸಿದ್ದರು. ಅದನ್ನು ಅವರಿಗೆ ಮರಳಿ ಕೊಡುವದೇ ನಮ್ಮ ಕರ್ತವ್ಯವೆಂದು ನಿರ್ಧರಿಸಿದ್ದೆವು. ಅವರು ಬಂದಾಗ ಒಂದು ಸಭೆ ಕರೆದು ಊರವರನ್ನು ಆಮಂತ್ರಿಸಲಾಗಿತ್ತು. ಅವರಿಗೆ ಸನ್ಮಾನ ಮಾಡಿ ಮಾಲೆ ಹಾಕಿ ಅವರು ಕೊಟ್ಟ ಸಂಚಾಲಕತ್ವವನ್ನು ಅವರಿಗೆ ವಾಪಸ್ ಕೊಡುವದಾಗಿ ಹೇಳುತ್ತಾ, ಇವರೇ ಅವರಿಗೆ ಮಾಲೆ ಹಾಕಿದರು. ಮುಂದೆ ಕಲ್ಲಾಪುರ ಅವರು ತಮ್ಮ ಜಪಾನ್ ಪ್ರವಾಸದ ವಿಷಯ ತಿಳಿಸುತ್ತಾ, ನಾನು ಪರದೇಶಕ್ಕೆ ಹೋದಾಗ ದಾಬಡೆ ಅವರು ತುಂಬಾ ಚೆನ್ನಾಗಿ ಕೆಲಸ ಮಾಡಿದ್ದಾರೆ. ಕಾರಣ ಈ ಕಾರ್ಯವನ್ನು ಅವರೇ ಮುಂದುವರಿಸಬೇಕು. ನಾನು ಅವರಿಂದ ಈ ಹೊಣೆ ಸ್ವೀಕರಿಸುವದಿಲ್ಲ, ಎಂದು ಹೇಳಿ ಅದೇ ಮಾಲೆಯನ್ನು ಅವರ ಕೊರಳಲ್ಲಿ ಹಾಕಿದರು. ಸೇರಿದವರೆಲ್ಲ ತುಂಬಾ ಸಂತೋಷಪಟ್ಟರು.

**ಬೇವೂರ ಭೀಮರಾವ :** ಇವರು ಮೊದಲಿನ ಕ್ರಾಂತಿಕಾರರು, ಹಳೇ ಸ್ವಾತಂತ್ರ್ಯ ಯೋಧರು. ಹೆಂಡತಿ ತೀರಿಹೋಗಿ ಜೀವನದಲ್ಲಿ ಜರ್ಜರಿತರಾದವರು. ಅವರಿಗೆ ಉಪಜೀವನದ ಸಮಸ್ಯೆಯಾಗಿತ್ತು. ಅವರನ್ನು ಗ್ರಾಮಸೇವಕರೆಂದು ನೇಮಿಸಿ ಕಡಬಗಟ್ಟಿಯಲ್ಲಿ ಇಡಲಾಗಿತ್ತು. ಓರ್ವ ಮಗ, ಮಗಳೊಂದಿಗೆ ಅಲ್ಲಿರುತ್ತಿದ್ದರು. ಒಂದು ರಾತ್ರಿ 9 ಗಂಟೆಗೆ ಅವರು ನಿಧನರಾದ ಸುದ್ದಿ ಬಂತು. ಇಲ್ಲಿಂದ ಕಡಬಗಟ್ಟಿ ಎಂಟು ಮೈಲು ದೂರದ ಗುಡ್ಡದ ಹಾದಿ. ಏನೇ ಆಗಲಿಯೆಂದು ಶಿರಾಳಿ ಬಾಬಾ, ಉಪಾಧ್ಯೆ, ಪರಮಾನಂದ, ಭಾಗವತ ಇವರು ಕಾಲ್ನಡಿಗೆಯಿಂದ ಹೊರಟರು. ಅಲ್ಲಿ

ರಾತ್ರಿ 12 ಕ್ಕೆ ತಲುಪಿ ಮುಂದಿನ ಕಾರ್ಯವನ್ನೂ ಮುಗಿಸಿ, ಬೆಳಗಿನ 5 ಗಂಟೆಗೆ ನಡೆದುಕೊಂಡೇ ವಾಪಸ್ ಬಂದಾಗ ತುಂಬಾ ದಣಿದಿದ್ದರು.

**ಒಂದೆರಡು ನಮ್ಮ ವೈಯಕ್ತಿಕ ಸಮಾಚಾರ :** ಉಪಾಧ್ಯೆ, ಎಮ್. ಜಿ. ಪಾಟೀಲ, ಕನವಳ್ಳಿ, ಸುರೇಂದ್ರ ದಾನಿ ಇವರೆಲ್ಲ ನಮ್ಮ ತೀರ ಹತ್ತಿರದವರೇ ಆಗಿದ್ದರು. ಉಪಾಧ್ಯೆನಿಗಂತೂ ನಾನು ನನ್ನ ಹಿರಿಮಗನೆಂದೇ ಕರೆಯುತ್ತಿದ್ದೆ.

ಒಂದು ಸಲ ಇವರೆಲ್ಲರ ಸಂಗಡ ಹರಟೆ ಹೊಡೆಯುವಾಗ "ಏನ್ ದೊಡ್ಡಿಸ್ತನ ಹೇಳ್ಕೋತೀರಿ ಬಿಡ್ರೋ, ನಿಮ್ಮ ಹೆಂಡಂದ್ರಿಗೆ ಖಾದಿ ಸೀರಿ ಉಡಿಸುವದು ನಿಮ್ಮಿಂದ ಆಗಲಿಲ್ಲ" ಎಂದು ಚೇಷ್ಟೆಯಿಂದ ಹೇಳಿದೆ. ಎಲ್ಲರೂ ಸ್ಥಬ್ದರಾದರು. ನಾವು ಅರವಟಿಗೆಯಲ್ಲಿದ್ದಾಗಲೇ ಉಪಾಧ್ಯೆ, ಕನವಳ್ಳಿ, ಎಮ್. ಜಿ. ಪಾಟೀಲ, ಭಾಗವತ, ಸುರೇಂದ್ರ ದಾನಿ, ದೇಶನೂರ, ಹಾವನೂರ ವೆಂಕಣ್ಣ ಇವರೆಲ್ಲರ ಲಗ್ನವಾದದ್ದು. ನಾವು ಆಗಾಗ್ಗೆ ಮಾಡುವ ಎಲ್ಲ ಕಾರ್ಯಕ್ರಮಗಳಿಗೂ ಇವರೆಲ್ಲ ತಪ್ಪದೇ ಬರುತ್ತಿದ್ದರು. ನಾನು ಹೇಳಿದ ಕೆಲಸವನ್ನು ಮಾಡುತ್ತಲಿದ್ದರು. ಆಗಾಗ್ಗೆ ಊಟ, ಉಪಚಾರ ಪಂಕ್ತಿ ನಡೆಯುತ್ತಲೇ ಇರುತ್ತಿದ್ದವು. ಇವರಲ್ಲಿ (ದಾಬಡೆ) ಮಾತ್ರ ಆದ ಬದಲಾವಣೆ ನನಗೆ ಸ್ಪಷ್ಟ ಕಾಣುತ್ತಲಿತ್ತು. ಇವರು ಭಕ್ತಿಯಿಂದ ದೇವರ ಪೂಜೆ, ಗೀತಾಪಠಣ, ಸಪ್ತಾಹಕ್ಕೆ ಹೋಗಿ ಬರುತ್ತಿದ್ದರು. ಮಹಾರಾಜರು ಸಹ ಇವರ ಮೇಲೆ ತುಂಬ ಪ್ರೀತಿ ತೋರಿಸುತ್ತಲಿದ್ದರು. ಇವರು ಇಂಚಗೇರಿ, ಸಿದ್ಧಗಿರಿ, ಕನ್ನೂರಿಗೆ ಹೋಗಿ ಬರುತ್ತಿದ್ದರು.

**ನಮ್ಮ ತೀರ ವೈಯಕ್ತಿಕ ಜೀವನ :** ಭಾರತಿ, ಪ್ರಕಾಶ ತುಂಬಾ ಪ್ರೀತಿ ವಾತ್ಸಲ್ಯದಿಂದ ಇರುತ್ತಿದ್ದರು. ಭಾರತಿ ಧಾರವಾಡದಿಂದ ಬಂದರೆ ಸಾಕು ಅವಳು, ಪ್ರಕಾಶ ಕೂಡಿಯೇ ತಿರುಗಾಡುವರು. ಒಂದು ಸಲ ಪ್ರಕಾಶ, ಗೋಪಾಲನನ್ನು ತನ್ನ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಊರಲ್ಲಿ ತಿರುಗಾಡುವಾಗ ಎಡವಿಬಿದ್ದ. ಗೋಪಾಲನ ಹಣೆಗೆ ಗಾಯವಾಗಿ ರಕ್ತ ಸೋರಹತ್ತಿತು. ಆತನಿಗಿಂತ ಪ್ರಕಾಶನೇ ಜೋರಾಗಿ ಅಳುತ್ತಾ ಮನೆಗೆ ಬಂದ. ಮುಂದೆ ಉಪಚಾರವಾಗಲು, ಸಾವಕಾಶವಾಗಿ ಗೋಪಾಲ ಅಕ್ಕ ಪಕ್ಕ ಮನೆಗಳಿಗೆ ಹೋಗಿ ಬರುತ್ತಿದ್ದ. ನಾವೆಲ್ಲ ಒಂದೇ ಕುಟುಂಬದವರಂತೆ ಇದ್ದೆವು.

**ಇನ್ನೊಂದು ಚಿಕ್ಕದಾದರೂ ಮೋಜಿನದು :** ದಿನಾಲು ಸಂಜೆ ರಾಮರಕ್ಷ ಅನ್ನುವರು, ಪ್ರಕಾಶ ಮಲಗುವಾಗ ಇವರು ಕತೆ ಹೇಳಲೇಬೇಕು. ಆಗ ಆತ ಇವರ ಕಾಲಿಗೆ ಎಣ್ಣೆ ಹಚ್ಚಿ ತಿಕ್ಕಬೇಕು. ಒಂದು ಸಂದರ್ಭದಲ್ಲಿ ಈ ಕತೆ ತುಂಬಾ ಪ್ರಚಾರವಾಯ್ತು. "ಅಣ್ಣಾ ಕತೆ ಹೇಳ್ತಾರ ಬರ್ರಿ" ಎಂದು ದೇಶನೂರ ಶಾಂತಾ, ಭಾಗವತ, ರಾಧಾ, ಕನಕವಲ್ಲಿ, ಲಲಿತಮ್ಮಾ, ಲೀಲಾಬಾಯಿ ಇವರೆಲ್ಲ ಬಂದು ಕೂಡುತ್ತಿದ್ದರು. ದಿನಾಲು ಅರ್ಧ ಗಂಟೆ ಕತೆ ಹೇಳುತ್ತಲೇ ಇದ್ದರು. ಒಂದು ವೇಳೆ ಇವರು ರಾತ್ರಿ ಕಛೇರಿಗೆ ಹೋಗಿದ್ದರೆ ನಮ್ಮ ಪ್ರಕಾಶ ಅಲ್ಲಿಗೇ ಎಣ್ಣೆಯ ಬಟ್ಟಲು ತೆಗೆದುಕೊಂಡು ಹೋಗುತ್ತಿದ್ದ. ನೆರೆದವರೆಲ್ಲ ಇವರನ್ನು ಮನೆಗೆ ಕಳಿಸುತ್ತಲಿದ್ದರು.

# ಜೀವಕ್ಕೆ ಬಂದ ಕುತ್ತು

ಈ ಅವಧಿಯಲ್ಲಿ ಒಂದು ಅತ್ಯಂತ ವಿಷಾದಕರ ಘಟನೆ ಜರುಗಿ ನಮಗೆಲ್ಲ ತುಂಬ ದುಃಖವಾಗಿತ್ತು. ಆಗ ಕಾರ್ಯಕರ್ತರೆಲ್ಲ ನಿತ್ಯ ಸಾಯಂಕಾಲ ಶರೀರ ಶ್ರಮಕ್ಕೆ ಹಳ್ಳದ ದಂಡೆಯ ಮೇಲಿದ್ದ ನಮ್ಮ ಹೊಲಕ್ಕೆ ಹೋಗುತ್ತಲಿದ್ದರು. ಅಲ್ಲಿ ಒಂದು ದೊಡ್ಡ ಕಟ್ಟಡವೂ ಕಟ್ಟಲ್ಪಟ್ಟಿತ್ತು. ಅಲ್ಲಿ ಭತ್ತ ಕುಟ್ಟುತ್ತಿದ್ದರು, ಕಾಯಿಪಲ್ಲೆ ಬೆಳೆಯುತ್ತಲಿದ್ದರು. ಒಂದು ಸಲ ಅಲ್ಲಿಟ್ಟ ಭತ್ತದ ಚೀಲ ಕಳುವಾಯ್ತು. ಊರವರನ್ನೆಲ್ಲ ಕರೆದು ಅವರ ಮುಂದೆ ಈ ವಿಷಯ ಇಟ್ಟರು. ಆಗ ಊರವರು, ನಾಲ್ಕಾರು ಹಿರಿಯರನ್ನು ನೇಮಿಸಿ ಅವರು ಪ್ರತಿಯೊಂದು ಮನೆಗೆ ಭೇಟಿಕೊಟ್ಟು ಝಡತಿ ಮಾಡಿ ಈ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕೆಂದು ನಿರ್ಧಾರವಾಯಿತು. ಅದರಲ್ಲಿ ಇವರೂ ಒಬ್ಬರಿದ್ದರು. ಸಾಮಾನ್ಯವಾಗಿ ಯಾರು ಕಳವು ಮಾಡಿರಬೇಕೆಂಬುದು ಎಲ್ಲರಿಗೂ ಗೊತ್ತಿತ್ತು. ತಪಾಸು ಮಾಡುತ್ತ ಚಿಕ್ಕ ಬಾಗೇವಾಡಿ ಫಕೀರಪ್ಪ ಎಂಬುವನ ಮನೆಗೆ ಬಂದರು. ಅಲ್ಲಿ ನೋಡುವಾಗ್ಗೆ ಆ ಚೀಲ (ಭತ್ತ ತುಂಬಿದ್ದು) ಸಿಕ್ಕಿತು. ಅದರ ಪಂಚನಾಮೆ ಮಾಡಹತ್ತಿದರು. ಆಗ ಓಡಿಬಂದ ಫಕೀರಪ್ಪ ಕೈಯಲ್ಲಿ ಒಂದು ಮಚ್ಚಿ (ಮೆಟ್ಟು) ಹಿಡಿದುಕೊಂಡು ಬಂದು ಇವರ ಮುಖದ ಮೇಲೆ ನಾಲ್ಕು ಪೆಟ್ಟು ಜೋರಿನಿಂದ ಹೊಡೆದ. ಜನರೆಲ್ಲ ತುಂಬ ರೊಚ್ಚಿಗೆದ್ದರು. ಕೆಲವರು ಆತನನ್ನು ಹೊಡೆಯಲು ಪ್ರಯತ್ನ ಮಾಡಿದರೆ ಒಬ್ಬ ಬಂದೂಕನ್ನು ತೆಗೆದುಕೊಂಡು ಬಂದ. ಆಗ ಇವರೇ ಅವರಿಗೆಲ್ಲ ಸಾಂತ್ವನ ಹೇಳಿ ಕಳಿಸಿಕೊಟ್ಟರು. ಪಂಚನಾಮೆ ಮುಗಿದ ಕೂಡಲೇ ಪ್ರಾರ್ಥನಾ ಗಂಟೆಯಾಗಿ ಪ್ರಾರ್ಥನೆ ಸಲ್ಲಿಸಲಾಯ್ತು. ನಂತರ ಇವರು ಮನೆಗೆ ಬಂದರು. ನನಗೆ ಏನು ಮಾಡಬೇಕೆಂಬುದು ತಿಳಿಯದೇ ಅವರ ಪಾದಮುಟ್ಟಿ ನಮಸ್ಕಾರ ಮಾಡಿ ದೇವರಿಗೆ ತುಪ್ಪದ ದೀಪ ಹಚ್ಚಿದೆ. ಚಪ್ಪಲಿಯ ಬದಲು ಚಾಕು ಹಿಡಿದಿದ್ದರೆ ಏನು ಗತಿ ಎಂದು ವಿಚಾರ ಮಾಡಿ, ದೇವರೇ ಇವರನ್ನು ಕಾಯ್ದ ಅಂದುಕೊಂಡು ಇಬ್ಬರೂ ತಬ್ಬಿಕೊಂಡೆವು. ನನ್ನ ಕಣ್ಣೀರು ಒಂದೇ ಸಮನೆ ಹರಿಯುತ್ತಿತ್ತು. ಊರವರೆಲ್ಲ ಮಮ್ಮಲ ಮರುಗಿದರು. ಮನೆಗೆ ಬಂದು ಸಮಾಧಾನ ಹೇಳಿದರು. ಸುದ್ದಿ ಪೇಪರಿನಲ್ಲಿಯೂ ಬಂತು. ಕಲ್ಲಾಪುರ, ಬುರ್ಲಿ, ಸಾಲಿ ರಾಮಚಂದ್ರರಾಯರು ಬಂದು ಸಮಾಧಾನ ಹೇಳಿದರು. ಆಗ ಇವರು ಎರಡು ದಿವಸ ಉಪವಾಸ ಮಾಡಿದರು. ಅನೇಕ ಅಧಿಕಾರಿಗಳೂ ಬಂದು ಆತನ ಮೇಲೆ ಪೊಲೀಸ್ ಕೇಸು ಹಾಕಲು ಒತ್ತಾಯಿಸಿದರು. ಆದರೆ ಅದಕ್ಕೆ ಇವರು ಸಮ್ಮತಿಸಲಿಲ್ಲ. ಒಟ್ಟಾರೆ ಇವರ ಜೀವ ಈಗ ಗಂಡಾಂತರದಲ್ಲಿರುವದೆಂದು

ನನಗೆ ಅನ್ನಿಸುತ್ತಿತ್ತು. ಇವರ ಇನ್ನೊಬ್ಬ ಶಿಷ್ಯ ವೆಂಕಣ್ಣಭಟ್ಟ ಇವರ ಸಂಗಡ ವಿಸಾಪೂರ ಜೇಲಿನಲ್ಲಿದ್ದವ. ಅಂಬೊಳ್ಳಿ ಶಾಲೆಗೆ ಶಿಕ್ಷಕ ಎಂದು ಕೆಲಸ ಮಾಡುತ್ತಿದ್ದ. ಈ ಸಮಾಚಾರ ಕೇಳಿ ಆತ ಕುದಿಯುತ್ತಿದ್ದ. ದಿನಾಲು ನಾವು ಬಾಗಿಲು ಹಾಕಿ ಮಲಗಿದ ಮೇಲೆ ನಮ್ಮ ಮನೆಯ ಮುಂದೆ ಒಂದು ಕಂಬಳಿ ಹೊದ್ದುಕೊಂಡು ನಮಗ್ಯಾರಿಗೂ ತಿಳಿಯದಂತೆ ಮಲಗಿ ಬೆಳಿಗ್ಗೆ ಎದ್ದು ಹೋಗುತ್ತಿದ್ದ. ತನ್ನ ಹತ್ತಿರ ಉದ್ದ ಖಂಜರ್‌ನಲ್ಲಿ ಒಂದು ಖಡ್ಗ ಅಡಗಿಸಿಟ್ಟಿದ್ದ.

ನಾನು ನಿತ್ಯ ದೇವರಿಗೆ ಪ್ರಾರ್ಥನೆ ಮಾಡುತ್ತಿದ್ದೆ. ಏನೇ ಆದರೂ ಇಲ್ಲಿಂದ ಬಿಟ್ಟು ಹೋಗಲು ಇವರು ಸಿದ್ಧವಿರಲಿಲ್ಲ ಎಂಬುದು ನನಗೆ ಗೊತ್ತಿತ್ತು. ಕಾರಣ ದೇವರಿಗೆ ನನ್ನ ಪ್ರಾರ್ಥನೆಯೆಂದರೆ ಈ ಯೋಜನೆಯನ್ನೇ ಮುಕ್ತಾಯ ಮಾಡೆಂದು ಬೇಡಿಕೊಳ್ಳುತ್ತಿದ್ದೆ.

ಆ ದುರ್ಘಟನೆ ನಡೆದ ದಿವಸ ವೆಂಕಣ್ಣಭಟ್ಟ ಇರದಿದ್ದುದೇ ಒಂದು ಸುದೈವ. ಆತನಿದ್ದರೆ ಇನ್ನೊಂದು ದುರ್ಘಟನೆ ಆಗೇ ತೀರುತ್ತಿತ್ತು. ಹೀಗೆ ದಿನಗಳು ಉರುಳುತ್ತಲೇ ಇದ್ದವು. ನನ್ನ ಮನಸ್ಸಿನಲ್ಲಿ ಒಂದೇ ಸಮನೆ ಇವರ ಜೀವನದ ಚಿಂತೆ ತುಂಬಿಕೊಂಡಿತ್ತು.

ಈ ಸಂದರ್ಭದಲ್ಲಿ ಒಂದು ದಿನ ಇವರು ಊರಲ್ಲಿ ಇಲ್ಲದ್ದನ್ನು ಖಾತ್ರಿಮಾಡಿಕೊಂಡು ಊರ ಹಿರಿಯರಾದ ಶಂಕರ, ಚನಬಸು ಮುಂತಾದವರು ಅತ್ಯಂತ ಮ್ಲಾನವದನದಿಂದ ನನ್ನ ಹತ್ತಿರ ಬಂದರು. "ನಿಮಗೆ ಒಂದು ತೀರ ಗುಟ್ಟಿನ ಮಾತು ಹೇಳಲು ಬಂದಿದ್ದೇವೆ. ನೀವು ಶಾಂತರೀತಿಯಿಂದ ಕೇಳಿ ನಮಗೆ ಮಾರ್ಗದರ್ಶನ ಮಾಡಿರಿ. ಮುಖ್ಯ ವಿಷಯವೇನೆಂದರೆ ಈ ಫಕೀರಪ್ಪನು ದಾಬಡೆ ಅವರ ಜೀವ ನನ್ನ ಕೈಯಲ್ಲಿ ಇದೆ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾನೆ. ಕಾರಣ ನಾವು ಈತನನ್ನು ಇದೇ ಹೋಳಿ ಹುಣ್ಣಿವೆ ಕರಿಯ ದಿವಸ ಕೊನೆಗಾಣಿಸಲು ನಿಮ್ಮ ಸಮ್ಮತಿ ಬೇಕು. ದಾಬಡೆ ಅವರಿಗೆ ನಾವು ಕೇಳುವ ಧೈರ್ಯವಿಲ್ಲ, ಕೇಳಿದರೂ ಅವರು ಒಪ್ಪಿಗೆ ಕೊಡಲಾರರೆಂಬುದೂ ನಮಗೆ ಗೊತ್ತು. ನೀವು ಮೌನ ಸಮ್ಮತಿ ಇತ್ತರೆ ಸಾಕು. ನಾವು ಈ ಕಾರ್ಯವನ್ನು ಸುವ್ಯವಸ್ಥಿತವಾಗಿ ಮುಗಿಸಿಬಿಡುತ್ತೇವೆ" ಎಂದು ಹೇಳಿದರು. ಇದನ್ನು ಕೇಳಿ ನನ್ನ ತಲೆ ಗಿರ್ರನೇ ತಿರುಗಿತು. "ಇದಕ್ಕೆ ನಾನು ಸಮ್ಮತಿ ಕೊಡುವದು ಸಾಧ್ಯವೇ ಇಲ್ಲ. ನೀವು ಏನೇ ಆದರೂ ಇಂಥ ವಿಚಾರ ಮಾಡಬೇಡಿರಿ ಮತ್ತು ಆತನಿಗೆ ಸ್ಪಷ್ಟ ಹೇಳಿರಿ. ದಾಬಡೆ ಅವರ ಜೀವ ನಿನ್ನ ಕೈಯಲ್ಲಿಲ್ಲ ಅದು ದೇವರ ಕೈಯಲ್ಲಿ ಇದೆ. ದೇವರೆ ಅವರನ್ನು ರಕ್ಷಿಸುವ." ಆಗ ಅವರು ವಿಷಾದದಿಂದ ನಿರಾಶರಾಗಿ ಮರಳಿ ಹೋದರು. ಎಷ್ಟೋ ದಿವಸದ ನಂತರ ಈ ಸಮಾಚಾರವನ್ನು ದಾಬಡೆ ಅವರ ಮುಂದೆ ಹೇಳಿದಾಗ ನನ್ನ ಬೆನ್ನ ಮೇಲೆ ಮೃದುವಾಗಿ ಗುದ್ದಿ ಷಹಭಾಶ್ ಕೊಟ್ಟರು. "ಧನ್ಯ ಜೀವಿ" ಎಂದರು. "ಯಾರು ? ನಾನೋ, ನೀವೋ ?" ಎಂದು ಕೇಳಿದೆ. ಅದಕ್ಕೆ ಅವರು "ಇಬ್ಬರೂ" ಎಂದು ಹೇಳಿದರು.

1956ರಲ್ಲಿ ಕರ್ನಾಟಕ ಪ್ರಾಂತ ರಚನೆಯಾಯಿತು. ನಾವು ಮುಂಬೈ ಪ್ರಾಂತದಿಂದ ಬೇರೆಯಾದೆವು. ಇಲ್ಲಿ ಎಮ್. ಪಿ. ಪಾಟೀಲರು ಒಕ್ಕಲುತನದ ಮಂತ್ರಿಗಳು. ಅವರು ಒಂದೆರಡು ಸಲ ಅರವಟಿಗೆಗೆ ಬಂದು ಇಲ್ಲಿಯ ಕಾರ್ಯವನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದರು. ಅವರೇ ಒಮ್ಮೆ ಇವರನ್ನು ಬೆಂಗಳೂರಿಗೆ ಕರೆಯಿಸಿಕೊಂಡರು. ಆಗ ಅವರು ಇವರ ಮುಂದೆ ಹೇಳಿದ್ದೇನೆಂದರೆ,

"ಇನ್ನು ಸರ್ವೋದಯ ಯೋಜನೆ ಮುಚ್ಚಲಿದೆ. ನಾವೇ ಇದನ್ನು ಬಂದ್ ಮಾಡುವ ನಿರ್ಣಯ ತೆಗೆದುಕೊಂಡಿದ್ದೇವೆ. ಯಾಕೆಂದರೆ ಇಂಥ ಕಾರ್ಯವನ್ನು ಮಾಡಲು ನಮ್ಮಲ್ಲಿಯಂತೆ ಈ ಮೈಸೂರ ಭಾಗದಲ್ಲಿ ನಿಷ್ಠಾವಂತ ಕಾರ್ಯಕರ್ತರು ಸಿಗುವದು ಅಪರೂಪ." ಅದಕ್ಕೆ ಇವರು (ದಾಬಡೆ) ಹೀಗೆ ಹೇಳಿದರಂತೆ "ಈಗ ಇಲ್ಲಿ ಚೆನ್ನಾಗಿ ನಡೆದವುಗಳನ್ನಾದರೂ ಯಾಕೆ ನಡೆಸಿಕೊಂಡು ಹೋಗಬಾರದು ?" ಅದಕ್ಕೆ ಅವರು ಒಪ್ಪಲಿಲ್ಲವಂತೆ. ಅಂತೂ ದೇವರಿಗೆ ನನ್ನ ಕೂಗು ಕೇಳಿಸಿತು ಎಂದು ಮನಸ್ಸಿನಲ್ಲಿಯೇ ಸಂತೋಷಪಟ್ಟೆ. ಎಮ್. ಪಿ. ಪಾಟೀಲರು ಮುಂದುವರಿದು "ನೀವು (ದಾಬಡೆ) ಒಪ್ಪಿದರೆ ನಾನು ನಿಮ್ಮನ್ನು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಎಂದು ಇಂದೇ ನೇಮಿಸುವೆ. ನೀವು ಈಗಿನಂತೆಯೇ ಕಾರ್‍ಯ ಮಾಡಬಹುದು. ಸಂಬಳವೂ ಹೆಚ್ಚಾಗುವದು" ಎಂದರು.

ಈ ಬಗ್ಗೆ ಇಬ್ಬರೂ ಕೂಲಂಕುಷವಾಗಿ ವಿಚಾರಮಾಡಿ ಈ ಕೊಡುಗೆಯನ್ನು ಸ್ವೀಕರಿಸಬಾರದೆಂದೇ ನಿರ್ಣಯ ತೆಗೆದುಕೊಂಡೆವು. ಸರಕಾರದಿಂದಲೂ ಕಾಗದ ಬಂತು. ಈ ಯೋಜನೆ ಬಂದ್ ಮಾಡಲಾಗುವದು. ಇದರ ಚಾರ್ಜನ್ನು ಧಾರವಾಡ ತಹಶೀಲ್ದಾರ ಅವರಿಗೆ ಕೊಡಬೇಕು ಮತ್ತು ನಿಮ್ಮಲ್ಲಿ ಇದ್ದ ಕಾರ್ಯಕರ್ತರಿಗೆ ಬೇರೆ ಕೆಲಸ ಕೊಡಲು ಪ್ರಯತ್ನ ಮಾಡುವೆವು ಎಂದು ತಿಳಿಸಿದರು. ಆಗ ನಾಲ್ಕೂ ಜಿಲ್ಲೆಯ ಸಂಚಾಲಕರಾದ ಜಯದೇವರಾವ ಕುಲಕರ್ಣಿ, ಗುರುರಾವ ಜೋರಾಪುರ, ಮಡಗಾವಕರ ಮತ್ತು ದಾಬಡೆ ಸೇರಿ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರ ಕಡೆಗೆ ಶಿಷ್ಟಮಂಡಳಿ ತೆಗೆದುಕೊಂಡು ಹೋದರು. ಅಲ್ಲಿ ಏನೂ ಪ್ರಯೋಜನವಾಗದೆ ವಾಪಸ್ ಬಂದರು.

ಇನ್ನು ತಹಶೀಲ್ದಾರರಿಗೆ ಚಾರ್ಜಕೊಡಲು ನಮ್ಮ ಸಿದ್ಧತೆ ನಡೆಯಿತು. ಅಷ್ಟರಲ್ಲಿ ಮುಂಬೈಯಿಂದ ವೈಕುಂಠಭಾಯಿ ಮೆಹತಾ (ಆಗ ಅವರು ಖಾದಿ ಕಮೀಶನ್ ಚೇರಮನ್ನರು) ಅವರಿಂದ ಕರೆ ಬಂತು. ಸಾತಾರವಾಲಾ ಎಂಬುವರು ಚೀಫ್ ಎಕ್ಸಿಕ್ಯುಟಿವ್ಹ ಆಫೀಸರ್ ಇದ್ದರು. ವೈಕುಂಠಭಾಯಿ ಅವರು "ಖಾದಿ ಕಮೀಶನ್‌ನ ಕರ್ನಾಟಕದ ಡೆಪ್ಯೂಟಿ ಡೈರೆಕ್ಟರ್ ಎಂದು ದಾಬಡೆಯವರನ್ನು ನೇಮಕ ಮಾಡಲಾಗುವದು. ನೀವು ಸಾತಾರವಾಲಾ ಅವರನ್ನು ಭೆಟ್ಟಿಯಾಗಿ ನೇಮಕ ಆಜ್ಞೆ ತೆಗೆದುಕೊಂಡು ಹೋಗಿ, ಧಾರವಾಡದ ಖಾದಿ ಕಮೀಶನ್ ಆಫೀಸ್‌ನಲ್ಲಿ

ಹಾಜರಾಗಿರಿ" ಎಂದು ಹೇಳಿದರಂತೆ. ಇದನ್ನು ಕೇಳಿ ನನಗೆಷ್ಟು ಸಂತೋಷವಾಯಿತೆಂಬುದನ್ನು ಹೇಳುವದೇ ಸಾಧ್ಯವಿಲ್ಲ. ದೇವರಿಗೆ ನನ್ನ ಕೂಗು ಕೇಳಿಸಿತು, ಇದೆಲ್ಲ ಆತನದೇ ಲೀಲೆಯೆನಿಸಿತು.

**ದಾಬಡೆ ಅವರಿಗೆ ಸತ್ಕಾರ :** ಅಷ್ಟರಲ್ಲಿ ಸರ್ವೋದಯ ಕ್ಷೇತ್ರದ ಜನರು ಮತ್ತು ಇವರ ಆಪ್ತ ಮಿತ್ರರು, ಶಿಷ್ಯರು ಸೇರಿ ಇವರಿಗೆ ಸತ್ಕಾರ ಮಾಡಬೇಕೆಂದು ನಿರ್ಣಯ ತೆಗೆದುಕೊಂಡರು. ಬೆಟದೂರ ವಕೀಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿತವಾಯ್ತು. ಅನಂತ ತಡಸ, ಉಪಾಧ್ಯೆ ಅವರು ಕಾರ್ಯದರ್ಶಿಗಳಾದರು. ನಿಧಿ ಸಂಗ್ರಹ ನಡೆಯಿತು. ಈ ಸತ್ಕಾರವನ್ನು ಅರವಟಿಗೆಯ ನಮ್ಮ ಕಛೇರಿ ಬಯಲಿನ ಸಭಾಂಗಣದಲ್ಲಿ ಮಾಡಲಾಯ್ತು. ಅತ್ಯಂತ ಅಚ್ಚುಕಟ್ಟಿನ ವ್ಯವಸ್ಥೆ ಇತ್ತು. ಮೊದಲು ಕೆಲವು ಆತ್ಮೀಯ ಕಾರ್ಯಕರ್ತರ ಮಧ್ಯ ಕಾರ್ಯಕ್ರಮ ನಡೆಯಿತು. ಕೊನೆಗೆ ಸಂಜೆಗೆ ಸಾರ್ವಜನಿಕ ಸಭೆ. ಊರಲ್ಲಿ ಭಾರೀ ಮೆರವಣಿಗೆ ಮಾಡಿ ದಾಬಡೆ ಕುಟುಂಬದವರನ್ನೆಲ್ಲ (ಭಾರತಿ, ಪ್ರಕಾಶ, ಗೋಪಿ, ದಾಬಡೆ ಮತ್ತು ನಾನು) ಆದರದಿಂದ ಬರಮಾಡಿಕೊಂಡರು. ಅಂದಿನ ಸತ್ಕಾರ ಸಭೆಗೆ ಇವರ ಧಾರವಾಡದ ಆತ್ಮೀಯ ಮಿತ್ರರಲ್ಲದೆ ಹಿರಿಯರಾದ ಬುರ್ಲಿ ಬಿಂದು ಮಾಧವ, ಹುಕ್ಕೇರಿಕರ, ಡಾ. ನಾ. ಭಿ. ಕಬ್ಬೂರ, ಲೀಲಾತಾಯಿ ಮಾಗಡಿ, ವೆಂಕಟೇಶ ಮಾಗಡಿ ಇವರೆಲ್ಲ ಬಂದಿದ್ದರು. ಸರ್ವಶ್ರೀ ಮೊರಾರ್ಜಿ ದೇಸಾಯಿ, ವೈಕುಂಠಭಾಯಿ, ಎಮ್. ಪಿ. ಪಾಟೀಲ, ನಿಜಲಿಂಗಪ್ಪ ಇವರೇ ಮೊದಲಾದವರ ಸಂದೇಶಗಳು ಬಂದಿದ್ದವು. ಸುಮಾರು ನಲವತ್ತು ಸಂಸ್ಥೆಗಳಿಂದ ಮಾಲಾರ್ಪಣೆಯಾಯಿತು. ಸಭೆಗೆ ಬಂದ ಹಿರಿಯರಲ್ಲದೆ ಸರ್ವೋದಯ ಕ್ಷೇತ್ರದ ನಾಗರಿಕರೂ ದಾಬಡೆಯವರ ಕಾರ್ಯಪದ್ಧತಿಯ ಬಗ್ಗೆ ಪ್ರಶಂಸಿಸಿ ಮಾತನಾಡಿದರು. ಅದೇ ಸಭೆಯಲ್ಲಿ ದಾಬಡೆಯವರಿಗೆ ರೂ. 3500/- ನಿಧಿ ಅರ್ಪಿಸಲಾಯಿತು. ಆ ಪೂರ್ತಿ ನಿಧಿಯನ್ನು ಅದೇ ಸಭೆಯಲ್ಲಿ ದಾಬಡೆ ಅವರು ಸರ್ವೋದಯ ಶಿಕ್ಷಣ ಟ್ರಸ್ಟಿಗೆ ಅರ್ಪಿಸಿದರು. ಈ ಸಂದರ್ಭದಲ್ಲಿ ದಾಬಡೆ ಅವರು ಮಾತನಾಡುತ್ತ ಜನತಾ ಜನಾರ್ಧನ ಸೇವೆಯಲ್ಲಿಯೇ ಭಗವಂತನನ್ನು ಕಾಣುವುದಾಗಿ ಹೇಳಿದರು. ಆಗ ನನಗೂ ನಾಲ್ಕು ಮಾತು ಹೇಳಲು ಒತ್ತಾಯ ಮಾಡಿದರು. "ನಾನೊಬ್ಬ ಸಾದಾ ಗೃಹಿಣಿ. ಗಂಡನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆಯುವುದೊಂದೇ ಗೊತ್ತು. ಈ ಸಂದರ್ಭದಲ್ಲಿ ನನಗೂ ಸತ್ಕಾರವೆಂದರೆ ಹೂವಿನ ಮಾಲೆಯ ಸಂಗಡ ದೇವರ ಕೊರಳಲ್ಲಿ ದಾರವೂ ಹೋದಂತೆ. ನಾನು ಕೇವಲ ದಾರ, ಇವರು ಹೂಗಳು" ಎಂದು ಹೇಳಿದೆ. ಅದು 1956ರ ಕೊನೆಯ ಭಾಗ. ನಾವು ಮರುದಿನ ಸಾಮಾನು ಸಹಿತ ಧಾರವಾಡಕ್ಕೆ ಬಂದೆವು. ಅಂತೂ ಸರ್ವೋದಯ ಯೋಜನೆ ಪೂರ್ಣ ಕೊನೆಯಾದ ನಂತರವೇ ಆ ಸ್ಥಳ ಬಿಟ್ಟೆವು. ಈ ಯೋಜನೆ ಬಂದಾಗದಿದ್ದರೆ ಇವರು ಎಂದಿಗೂ ಆ ಜಾಗ ಬಿಟ್ಟು ಬರುತ್ತಿರಲಿಲ್ಲ. ಇಲ್ಲಿ ಎರಡು ಮಾತು, ಒಮ್ಮೆ ಇವರನ್ನು ಕರಮರಕರ ಅವರೇ ಪಿ. ಎ. ಆಗಲು ದಿಲ್ಲಿಗೆ ಆಹ್ವಾನಿಸಿದ್ದರು. ಇನ್ನೊಮ್ಮೆ ಕೆ. ಎ. ವೆಂಕಟರಾಮಯ್ಯ ಅವರು ಖಾದಿ ಆಯೋಗಕ್ಕೆ ಆಹ್ವಾನಿಸಿದ್ದರು, ಇವರು ಎರಡನ್ನೂ ತಿರಸ್ಕರಿಸಿದ್ದರು. ಈಗ ನಮ್ಮ

ಪೂರ್ಣ್ಯವೆಂದರೆ ಮನೆ ಬಾಗಿಲಿಗೇ ಬಂದ ಖಾದಿ ಕಮೀಶನದ ಕಾರ್ಯ ಸ್ವೀಕರಿಸಿದರು. ಇದಕ್ಕೆ ಒಂದು ಚಿಕ್ಕ ಕಾರಣವೂ ಇತ್ತು. ಇವರಲ್ಲಿ ಒಂದು ಕೀಳರಿಮೆಯಿತ್ತು (inferiority complex). ತಾವು ಕೇವಲ ಮ್ಯಾಟ್ರಿಕ್ಯುಲೇಟ್ ಆದವರು. ಕಮೀಶನ್ ಆಫೀಸಿನಲ್ಲಿ ಎಲ್ಲರೂ ಪದವೀಧರರು. ಹೇಗೆ ಸಂಭಾಳಿಸುವದು ? ಎಂದು ಒಳಗೆ ಕೊರೆಯುತ್ತಲಿತ್ತು. ಒಮ್ಮೆ ಹುಕ್ಕೇರಿಕರ ಮಾಸ್ತರರು ನಮ್ಮ ಮನೆಗೆ ಬಂದಾಗ ಈ ಪ್ರಸ್ತಾಪವೆತ್ತಿದರು. ಆಗ ಹುಕ್ಕೇರಿಕರ ಅವರು ಹೇಳಿದ್ದು ಹೀಗೆ -

"ದಾಬಡೆ ನಾನು ಒಬ್ಬ ಶಾಲಾ ಶಿಕ್ಷಕ. ನನಗೆ ಕೌನ್ಸಿಲ್ ಚೇರಮನ್ ಪದವಿ ಕೊಟ್ಟಾಗ ನನ್ನ ಮುಂದೆ ಸಹ ಇದೇ ಸಮಸ್ಯೆ ಬಂತು. ಆದರೆ ನಿಷ್ಠೆಯಿಂದ ಕೆಲಸ ಮಾಡುವವರಿಗೆ ಸೂರ್ಯನ ಮುಂದೆ ಇಬ್ಬನಿ ಕರಗಿಹೋಗುವ ಹಾಗೆ ಸಮಸ್ಯೆಗಳು ಹೋಗಿಬಿಡುತ್ತವೆ. ನೀನು ಯಾವ ವಿಚಾರವನ್ನೂ ಮಾಡದೆ ಅಧಿಕಾರವಹಿಸಿಕೊಂಡು ಧೈರ್ಯದಿಂದ ಕಾರ್ಯಪ್ರವೃತ್ತನಾಗು. ಖಂಡಿತ ಜಯ ದೊರೆಯುವದು."

# ಹೊಸ ಅಧ್ಯಾಯ ಪ್ರಾರಂಭ

ಈ ಅಧ್ಯಾಯ ಹೀಗೆ ಮುಕ್ತಾಯವಾಯಿತು. ನಮ್ಮ ಜೀವನದಲ್ಲಿಯೇ ಅತ್ಯಂತ ಶ್ರೇಷ್ಠ ಮತ್ತು ಸ್ಮರಣೀಯ ದಿನಗಳೆಂದರೆ 1940 ರಿಂದ 1946. ಅದರ ನಂತರ 1948 ರಿಂದ 1956 ಈ ಎಂಟು ವರುಷ. ಹೀಗೆ ಹದಿನಾಲ್ಕು ವರ್ಷ ದಾಬಡೆ ಅವರದು ತಪಸ್ಸಿನ ಜೀವನವೆಂದೇ ನನ್ನ ಅಭಿಪ್ರಾಯ. ನಮ್ಮ ಮೇಲೆ ಭಗವಂತನ ದಯೆ, ಹಿರಿಯರ ಆಶೀರ್ವಾದ ಮತ್ತು ಶುಭಾಶಯಗಳಿಂದಲೇ ನಾವು ಯಶಸ್ವಿಯಾಗಿ ಪಾರಾಗಿ ಬಂದೆವೆಂದು ನನ್ನ ಪ್ರಾಮಾಣಿಕ ಅಭಿಪ್ರಾಯ.

ನಮ್ಮ ಮುಂದಿನ ಜೀವನ ಸರಳವಾಗಿತ್ತು. ಇವರು ಡೈರೆಕ್ಟರ್‌ರಾಗಿ ಕರ್ನಾಟಕ ಮತ್ತು ಬೇರೆ ಪ್ರಾಂತಗಳಲ್ಲಿಯೂ ಸೇವೆ ಸಲ್ಲಿಸಿದರು. ಹುಕ್ಕೇರಿಕರ ಅವರು ಹೇಳಿದಂತೆ ಇವರಿಗೆ ಯಾವ ಅಂಥ ತೊಂದರೆಗಳೂ ಬರಲಿಲ್ಲ.

ವೈಯಕ್ತಿಕ ಜೀವನದಲ್ಲಿ ಕೆಲವು ಬದಲಾವಣೆಗಳಾದವು. ಧಾರವಾಡಕ್ಕೆ ಬಂದ ಕೂಡಲೇ ಗಾಂಧಿಚೌಕದಲ್ಲಿಯ ಕೇಳಕರ ಮನೆಯಲ್ಲಿದ್ದೆವು. ಪ್ರಕಾಶನ ಶಿಕ್ಷಣ ಕೆ. ಇ. ಬೋರ್ಡ್ಸ್ ಹೈಸ್ಕೂಲಿನಲ್ಲಿ ಪ್ರಾರಂಭವಾಯಿತು. ಗೋಪಾಲನದು ಮನೆಯ ಪಕ್ಕದಲ್ಲಿದ್ದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿಯೇ ಶಿಕ್ಷಣ. ಭಾರತಿ ಜನತಾ ಕಾಲೇಜಿನಲ್ಲಿ ಓದುತ್ತಿದ್ದಳು. ಮೊದಲು ಹಾಸ್ಟೆಲ್‌ದಲ್ಲಿರುತ್ತಿದ್ದಳು, ಈಗ ಮನೆಗೆ ಬಂದಳು.


ಧಾರವಾಡಕ್ಕೆ ಬಂದಕೂಡಲೇ ಅದ್ದೂರಿಯಿಂದ ಮಾಡಿದ ಮೊದಲನೆಯ ಕಾರ್ಯಕ್ರಮವೆಂದರೆ ಪ್ರಕಾಶನ ಉಪನಯನ. ಅದನ್ನು ಕರ್ನಾಟಕ ಹೈಸ್ಕೂಲಿನಲ್ಲಿ ಏರ್ಪಡಿಸಿದ್ದರು. ನನ್ನ ಎಲ್ಲ ಆಪ್ತೇಷ್ಟರೂ ಬಂದಿದ್ದರು. ನನಗೆ ತುಂಬಾ ಸಮಾಧಾನವಾಯ್ತು. ಮುಂದೆ ಈ ಕಮೀಶನ್ ಕಛೇರಿಯನ್ನು 1962ರಲ್ಲಿ ಬೆಂಗಳೂರಿಗೆ ಸ್ಥಳಾಂತರಿಸಲಾಯ್ತು. ಅಲ್ಲಿಗೆ ಹೋದ ಮೇಲೆ ನಮ್ಮ ಭಾರತಿಯ ಲಗ್ನದ ಸಿದ್ಧತೆ ನಡೆದವು. ಅಕಸ್ಮಾತ್ ಮುನವಳ್ಳಿಯ ಜೋಶಿ ಮನೆತನದ ಶಂಕರರಾವ ಎಂಬ ತರುಣ ಅದೇ ವ್ಹೆಟರ್ನರಿ ಡಾಕ್ಟರ್ ಆಗಿ ಹೆಸರಘಟ್ಟದಲ್ಲಿಯ ಪೌಲ್ಟ್ರಿ ಫಾರ್ಮ್‌ದಲ್ಲಿ ಕೆಲಸ ಮಾಡುತ್ತಿದ್ದರು. ಮಾಗಡಿ ಹಾಗೂ ಇವರು ಒಮ್ಮೆ ಅಲ್ಲಿಗೆ ಹೋಗಿ ನೋಡಿಕೊಂಡು ಬಂದರು. ಸಮಾಧಾನವಾಯ್ತು. ಮುಂದೆ 1963 ರಲ್ಲಿ ವೈಭವದಿಂದ ಕರ್ನಾಟಕ ಹೈಸ್ಕೂಲಿನಲ್ಲಿಯೇ ಈ ಲಗ್ನ ಜರುಗಿತು. ಅವಳ ಲಗ್ನವಾದ ಮೇಲೆ ಅವಳ ಬಿ. ಎ. ರಿಜಲ್ಟ್ ಬಂತು, ಅವಳು ಪಾಸಾಗಿದ್ದಳು. ಹಾಗೇ ಅವಳನ್ನು ಗಂಡನ ಮನೆಗೆ ಕಳುಹಿಸಿದೆವು. ಖಾದಿ ಕಮೀಶನ್‌ದಲ್ಲಿ ಸಹ ಇವರು ನಿಷ್ಠೆಯಿಂದ ಕೆಲಸ ಮಾಡಿದ್ದು ಎದ್ದು ಕಾಣುತ್ತಲಿತ್ತು. 1964

ಮೈಸೂರು ದಸರಾ ಸಮಯಕ್ಕೆ ಖಾದಿ ಗ್ರಾಮೋದ್ಯೋಗ ಪ್ರದರ್ಶನ ಏರ್ಪಾಡು ಮಾಡುವ ಹೊಣೆ ಇವರದಾಗಿತ್ತು. ಒಂದು ತಿಂಗಳು ಪೂರ್ತಿ ಮೈಸೂರಿನಲ್ಲಿಯೇ ಇದ್ದು ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ್ದಕ್ಕಾಗಿ ಮೇಲಧಿಕಾರಿಗಳೇ ಹೊಗಳಿ ಕಾಗದ ಬರೆದಿದ್ದರು. ಇಂಥ ಪ್ರದರ್ಶನಕ್ಕೆ ಸುಮಾರು 1 ಲಕ್ಷ ರೂ. ಮಂಜೂರು ಮಾಡಿದ್ದರು. ಆದರೆ ಇವರು ರೂ. 35000/- ದಲ್ಲಿಯೇ ಯಶಸ್ವಿಯಾಗಿ ಮುಗಿಸಿ ಕಮೀಷನ್‌ದ ಆದೇಶದಂತೆ ಪ್ರದರ್ಶನ ಮುಗಿದು ಒಂದು ತಿಂಗಳೊಳಗಾಗಿ ಲೆಕ್ಕ ವರದಿ ಮುದ್ರಿಸಿ ಕಳುಹಿಸಿಕೊಟ್ಟಿದ್ದರು. ಇಷ್ಟು ನಿಷ್ಠೆಯಿಂದ ಕಾರ್ಯ ಮಾಡಿದ್ದಕ್ಕೆ ಇವರಿಗೆ ಕೊಟ್ಟ ಗೌರವವೆಂದರೆ ಇವರನ್ನು ಕೇರಳ ಪ್ರಾಂತಕ್ಕೆ 1964 ರಲ್ಲಿ ವರ್ಗ ಮಾಡಿದರು. ಅಲ್ಲಿಯೂ ಹೋಗಿ ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ನಾನು ತ್ರಿವೇಂದ್ರಂಕ್ಕೆ ಹೋದೆ. ನನ್ನ ಆರೋಗ್ಯ ಎಳ್ಳಷ್ಟೂ ಸರಿಯಾಗಿರಲಿಲ್ಲ, ತುಂಬಾ ಅಶಕ್ತಳಾಗಿದ್ದೆ, ಆಗ ಇವರು ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಂಡರು. ನನ್ನ ಇಚ್ಛೆಯಂತೆ ಅನೇಕ ಕೆಲಸಗಳನ್ನು ಮಾಡಿದರು. 1965 ರಲ್ಲಿ ಭಾರತಿ ಬಾಣಂತನಕ್ಕೆ ತ್ರಿವೇಂದ್ರಂಕ್ಕೆ ಬಂದಳು. ನಮ್ಮ ಮನೆಯಲ್ಲಿಯೇ ಒಂದು ಹೆಣ್ಣು ಮಗುವನ್ನು ಹೆತ್ತಳು (ಕುಂಜು) ನಾನೇ ನೋಡಿಕೊಂಡೆ, ಅವ್ವನೂ ಬಂದಿದ್ದಳು. ನನ್ನ ಜೀವನದ ಸಿಂಹಾವಲೋಕನ ಮಾಡಿದರೆ 1921 ರಲ್ಲಿ ಹುಟ್ಟಿದೆ, ಮುಲ್ಕಿ ಪರೀಕ್ಷೆ ಪಾಸಾದೆ, 1939ರಲ್ಲಿ ದಾಬಡೆ ಅವರೊಡನೆ ಲಗ್ನವಾಯಿತ್ತು. ಭಾರತಿ, ಪ್ರಕಾಶ, ಗೋಪಿ ಮೂರು ಮಕ್ಕಳು, ನಾವು ಅದ್ದೂರಿಯಿಂದ ಮಾಡಿದ ಕಾರ್ಯಕ್ರಮವೆಂದರೆ,

| | |
|---|---|
| ಗೋಪಾಲನ ಜಾವಳ (ಅರವಟಿಗೆ) | ಪ್ರಕಾಶನ ಉಪನಯನ (ಧಾರವಾಡ) |
| ಭಾರತಿಯ ಲಗ್ನ (ಧಾರವಾಡ) | ಮೊಮ್ಮಗಳ ಜನನ (ತ್ರಿವೇಂದ್ರಂ) |

ಹೀಗೆ ನನ್ನ ಅವತಾರ ಮುಗಿದಂತೆ ಭಾಸವಾಯ್ತು. ಅನೇಕ ಸಲ ನನ್ನ ಬುದ್ಧಿ ಸ್ಥಿರವಾಗಿರುತ್ತಿರಲಿಲ್ಲ. ಇವರಿಗೆ ತುಂಬಾ ತೊಂದರೆ ಕೊಡುತ್ತಿದ್ದೇನೆಂದು ನನಗೇ ಭಾಸವಾಗುತ್ತಿತ್ತು. ಭೂತ ಬಾಧೆಯೆಂದೂ ಇವರು ಅನೇಕ ಬಗೆಯ ಉಪಚಾರ ಮಾಡಿದರು. ಹಾಗೆ ಕೇರಳದಲ್ಲಿಯ ಕನ್ಹಂಗಾಡ ಆಶ್ರಮಕ್ಕೆ ಹೋಗಿ ಮುಂದೆ ಬಾಗೇವಾಡಿ, ಕನ್ನೂರ, ಇಂಚಗೇರಿ ಮಠಗಳಿಗೆ ಹೋಗಿ ಬಂದೆವು. ಕೊನೆಗೆ ನನ್ನ ಇಚ್ಛೆಯ ಮೇರೆಗೆ 1967 ಮಾರ್ಚ್ ತಿಂಗಳ ಕೊನೆಯಲ್ಲಿ ಕನ್ನೂರಲ್ಲಿ ಗಣಪತರಾವ ಮಹಾರಾಜರ ಮಠದಲ್ಲಿ ನನ್ನನ್ನು ಬಿಟ್ಟು ಬಂದರು. ಇವರು ತ್ರಿವೇಂದ್ರಂಗೆ ಮರಳಿದರು ಮತ್ತು ಪುನಃ ಒಂದು ತಿಂಗಳ ನಂತರ ಅತ್ತ ಬರುವದಾಗಿ ಹೇಳಿದರು. ನನ್ನ ಮನಸ್ಸಿನಲ್ಲಿ ತುಂಬಾ ಕಳವಳವಾಗುತ್ತಲಿತ್ತು. ಇವು ನನ್ನ ಕೊನೆಯ ದಿನಗಳೆಂದೇ ಅನ್ನಿಸುತ್ತಿತ್ತು. ಹಾಗೆ ಅನೇಕ ಸಲ ಇವರಿಗೆ ಹೇಳಿಯೂ ಬಿಟ್ಟಿದ್ದೆ. ಕನ್ನೂರಿನಿಂದ ಇವರು ಹೊರಡುವಾಗ್ಗೆ ಇವರಿಗೆ ನಾನು ಹೇಳಿದ್ದು, ನನಗರಿಯದಂತೆ ಈ ಮಾತುಗಳು ಬಂದವು.

"ನಮಗೆ ಭಗವಂತ ಮೂರು ರತ್ನ ಕೊಟ್ಟಿರುವನು. ಅದರಲ್ಲಿ ಒಂದರ ಬಗ್ಗೆ ನಮ್ಮ ಕರ್ತವ್ಯವನ್ನು ಮಾಡಿದ್ದೇವೆ (ಭಾರತಿ). ಇನ್ನುಳಿದ ಎರಡು ರತ್ನಗಳು ಇನ್ನೂ ಎಳೆಯವು. ಅದರ ಹೊಣೆ ಸಂಪೂರ್ಣ ನಿಮ್ಮ ತಲೆಯ ಮೇಲೆಯೇ. ನೀವು ಅದನ್ನು ನಿಶ್ಚಿತವಾಗಿ ಮಾಡುವಿರೆಂದು ನನಗೆ ಆತ್ಮವಿಶ್ವಾಸವಿದೆ" ಎಂದು ಹೇಳುವಾಗ್ಗೆ ಕಣ್ಣೀರು ಉಕ್ಕಿಬಂದವು. ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಬೀಳ್ಕೊಟ್ಟೆ.



# ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು

- ಶ್ರೀ ನರಸಿಂಹ ದಾಬಡೆ



ಸ್ವಾತಂತ್ರ್ಯಪೂರ್ವದ ದಾಬಡೆ ಕುಟುಂಬ

ಕುಳಿತವರಲ್ಲಿ ಎಡದಿಂದ ಮೊದಲನೆಯವರು ನರಸಿಂಹ ದಾಬಡೆ, ಅವರ ಹಿಂದೆ ಪತ್ನಿ ಶ್ರೀಮತಿ ಶಕುಂತಲಾ ದಾಬಡೆ

# ಮಹಾತ್ಮರ ಪಾವನ ದರ್ಶನ

ಅದು 1941 ರ ವ್ಯೆಯಕ್ತಿಕ ಸತ್ಯಾಗ್ರಹದ ಕಾಲ. ನಾನೂ ಸತ್ಯಾಗ್ರಹದ ಪ್ರತಿಜ್ಞಾಪತ್ರಕ್ಕೆ ಸಹಿ ಮಾಡಿ ಮಹಾತ್ಮರಿಂದ ಮನ್ನಣೆಯನ್ನು ಪಡೆದಿದ್ದೆ. ನನಗೆ ಜೇಲಿಗೆ ಹೋಗುವ ತವಕ ತುಂಬಾ ಇತ್ತು. ಆದರೆ, ಅಂದಿನ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರಾದ ದ. ಪ. ಕರಮರಕರ ಅವರ ಒಪ್ಪಿಗೆ ನನಗೆ ಬೇಗ ದೊರೆಯಲಿಲ್ಲ. ಆ ಹೊತ್ತಿಗೆ ನಮ್ಮವರೆಂಬುವವರು ಹುಕ್ಕೇರಿಕರ, ಕೃಷ್ಣಾಬಾಯಿ ಪಂಜೀಕರ, ಶಂಕರ ಕುರ್ತಕೋಟಿ, ಬುರ್ಲಿ ಬಿಂದು ಮಾಧವ, ಆರ್. ಶ್ರೀನಿವಾಸರಾವ ಇವರೆಲ್ಲ ಸರಕಾರದ ಆತಿಥ್ಯದಲ್ಲಿದ್ದರು, ಅಂದರೆ ಜೇಲಿಗೆ ಹೋಗಿದ್ದರು. ಕಾರ್ಯಕರ್ತರ ಅಭಾವದ ಮೂಲಕ ನನಗೆ ಬೇಗ ಒಪ್ಪಿಗೆ ದೊರೆಯಲಿಲ್ಲ. ಅಷ್ಟೇ ಅಲ್ಲ, ಬೇಕಾದರೆ ಮಹಾತ್ಮಾ ಗಾಂಧೀ ಅವರಿಂದ ನಾನು ಸತ್ಯಾಗ್ರಹ ಮಾಡದಿರುವುದಕ್ಕೆ ಅಪ್ಪಣೆ ತರಿಸಿಕೊಡುವುದಾಗಿ ಕರಮರಕರರು ಹೇಳಿದ್ದರು. ಅದಕ್ಕೆ ನನ್ನ ಒಪ್ಪಿಗೆ ಇರಲಿಲ್ಲ. ಕೊನೆಗೆ ಒಂದು ಒಪ್ಪಂದಕ್ಕೆ ಬಂದೆವು. ನಾನು ಸತ್ಯಾಗ್ರಹಿಗಳಿಂದ ಸತ್ಯಾಗ್ರಹ ಮಾಡಿಸುವ ಮತ್ತಿತರ ಕಾರ್ಯ ಮಾಡುತ್ತಾ ಇರಬೇಕು. ಆ ಸಂದರ್ಭದಲ್ಲಿ ಕೈದಾದರೆ ಜೇಲಿಗೆ ಹೋಗಬಹುದು. ಆಗ ಸತ್ಯಧ್ಯಾನ ಗುಡಿ ಮತ್ತು ನಾನು ಕಾಲ್ನಡಿಗೆಯಿಂದ ಗ್ರಾಮಾಂತರ ಪ್ರದೇಶಗಳನ್ನು ತಿರುಗಾಡಿ ಯುದ್ಧ ವಿರೋಧಿ ಭಾಷಣ ಮಾಡಿ ಬರುತ್ತಿದ್ದೆವು.

ಈ ಸಂದರ್ಭದಲ್ಲಿ ನನಗೆ ಒಂದು ಸುಸಂಧಿ ಪ್ರಾಪ್ತವಾಯ್ತು. ಆಗ ಸತ್ಯಾಗ್ರಹ ಮಾಡಬೇಕೆನ್ನುವವರು ಮಹಾತ್ಮರ ಒಪ್ಪಿಗೆ ಪಡೆಯಬೇಕಾಗುತ್ತಿತ್ತು. ನಮ್ಮ ಪ್ರಾಂತದ ಸತ್ಯಾಗ್ರಹಿಗಳ ಯಾದಿಯನ್ನು ಗಾಂಧೀಜಿಯವರ ಹತ್ತಿರ ತೆಗೆದುಕೊಂಡು ಹೋಗಿ ಅವರ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ಈ ಕೆಲಸವನ್ನು ಡಿ. ಪಿ. ಕರಮರಕರರು ನನಗೆ ಒಪ್ಪಿಸಿದರು. ನಾನು ಅತ್ಯಂತ ಸಂತೋಷದಿಂದ ಒಪ್ಪಿಕೊಂಡೆ.

ಈ ಹಿಂದೆ ನನಗೆ ಅನೇಕ ಸಲ ಗಾಂಧೀಜಿಯವರ ದರ್ಶನವಾಗಿತ್ತು. 34ರ ಹರಿಜನ ಕಾರ್ಯದ ಪ್ರವಾಸಕ್ಕೆ ಬಂದಾಗ ಹುಬ್ಬಳ್ಳಿಯಲ್ಲಿ ವ್ಯಾಸಪೀಠದವರೆಗೆ ಹೋಗಿ ಗಾಂಧೀಜಿ ಅವರ

ದಸ್ತಕತ್ ಪಡೆದಿದ್ದೆ. ಆಗ ನಾನು 18 ವರ್ಷದವ. ಅವರ ಸಹಿ ಕೇಳಿದಾಗ ಅವರು ತಮ್ಮ ಐದು ಬೆರಳನ್ನು ಮುಂದೆ ಮಾಡಿ ಹರಿಜನ ಫಂಡಿಗೆ ಐದು ರೂಪಾಯಿಗಳನ್ನು ಕೊಡಲು ಕೇಳಿದರು. ನನ್ನ ಹತ್ತಿರ ಪುಡಿಗಾಸೂ ಇರಲಿಲ್ಲ. ಆಗ ನನಗೆ ಅಳುವೇ ಬಂತು. ಅವರು ನನ್ನನ್ನು ಕರೆದು 'ಗಾಂಧೀ' ಎಂದು ಕನ್ನಡದಲ್ಲಿ ನನ್ನ ಕಾಗದದ ಮೇಲೆ ಬರೆದುಕೊಟ್ಟರು. ಅದನ್ನು ಹಿಡಿದುಕೊಂಡು ಸಂತೋಷದಿಂದ ಓಡಾಡಿದೆ. ಅಲ್ಲದೆ, ಅನೇಕಸಲ ಅವರ ಪ್ರಾರ್ಥನಾ ಸಭೆಗಳಿಗೂ ಹೋಗಿದ್ದೆ. ಸಭೆಯಲ್ಲಿ ಅವರು ನಿಶ್ಚಲವಾಗಿ ಕುಳಿತ ಭಂಗಿ ನನ್ನ ಕಣ್ಮುಂದೆ ಇನ್ನೂ ಹಚ್ಚ ಹಸಿರಾಗಿ ಉಳಿದಿದೆ. ಅನೇಕ ಸಲ ಅವರ ಭಾಷಣವನ್ನು ಲಕ್ಷ್ಯಕೊಟ್ಟು ಕೇಳಿದ್ದೆ. ಆದರೆ, ಅವರ ಸಂಗಡ ಮಾತನಾಡಬೇಕೆಂಬ ಚಪಲವಿತ್ತು. ಸುದೈವದಿಂದ ಆ ಸಂಧಿ ಈಗ ಪ್ರಾಪ್ತವಾಯ್ತೆಂದು ನನಗೆ ತುಂಬಾ ಸಂತೋಷವಾಗಿತ್ತು.

ಆಗ ಎರಡನೇ ಮಹಾಯುದ್ಧದ ಜ್ವಾಲೆಗಳು ಭುಗಿಲೆದ್ದಿದ್ದವು. ಬ್ರಿಟನ್, ಅಮೆರಿಕಾ, ರಷ್ಯಾ ಕೂಡಿಕೊಂಡು ಜರ್ಮನಿ ಮತ್ತು ಇಟಲಿಯ ಫ್ಯಾಸಿಸ್ಟರ ವಿರುದ್ಧ ಹೋರಾಡುತ್ತಿದ್ದರು. ಕೆಲವು ಐರೋಪ್ಯ ರಾಷ್ಟ್ರಗಳು ಫ್ಯಾಸಿಸ್ಟರಿಗೆ ಆಹುತಿಯಾಗಿದ್ದವು. ಈ ಯುದ್ಧದ ಬಿಸಿ ಭಾರತದ ಬಾಗಿಲಿಗೆ ಬಂದು ತಟ್ಟಿತ್ತು. ಈ ಹೋರಾಟದಲ್ಲಿ ಅಂದಿನ ಕಾಂಗ್ರೆಸ್ಸಿನ ಸಹಾನುಭೂತಿ ಬ್ರಿಟಿಷರ ಕಡೆಗೇ ಇತ್ತು. ಆದರೆ, ಪಾರತಂತ್ರ್ಯದ ಭಾರತ ಈ ಕಾರ್ಯದಲ್ಲಿ ನೆರವಾಗುವುದು ಸಾಧ್ಯವಿಲ್ಲವೆಂದು ಕಾಂಗ್ರೆಸ್ಸಿನ ಧೋರಣೆ. ಇಂಥ ಪರಿಸ್ಥಿತಿಯಲ್ಲಿ ಸಮಯಕ್ಕೆ ತಕ್ಕ ಯೋಗ್ಯ ಹೋರಾಟವನ್ನು ಪ್ರಾರಂಭಿಸಲು ಗಾಂಧೀಜಿಗೆ ಮುಖಂಡತ್ವವನ್ನು ಕೊಡಲಾಗಿತ್ತು. ಬ್ರಿಟಿಷರು ಜೀವನ ಮರಣ ಹೋರಾಟದಲ್ಲಿರುವಾಗ ಅವರಿಗೆ ಹೆಚ್ಚು ತೊಂದರೆ ಕೊಡಬಾರದೆಂದೇ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ಇದರಲ್ಲಿ ಬಹಳ ಜನರು ಜೇಲಿಗೆ ಹೋಗುವುದು ಮುಖ್ಯವಾಗಿರಲಿಲ್ಲ. ಆದರೆ, ಸಚ್ಚಾರಿತ್ರದ ನಿಷ್ಠಾವಂತ ಕೆಲವೇ ಸತ್ಯಾಗ್ರಹಿಂಗಳು ಭಾಗವಹಿಸಬೇಕೆಂದು ಗಾಂಧೀಜಿಯವರ ಇಚ್ಛೆ ಇತ್ತು. ಆಗ ಸತ್ಯಾಗ್ರಹ ಮಾಡಬೇಕೆನ್ನುವವರು ಗಾಂಧೀಜಿಯವರ ಮನ್ನಣೆ ಪಡೆಯಬೇಕಿತ್ತು. ಅಂಥ ಕರ್ನಾಟಕ ಸತ್ಯಾಗ್ರಹಿಗಳ ಯಾದಿಯೊಂದನ್ನು ಮನ್ನಣೆ ಪಡೆಯಲು ನಾನು ತೆಗೆದುಕೊಂಡು ಹೋಗಬೇಕಾಗಿತ್ತು. ನಿರ್ದಿಷ್ಟ ದಿನ ಯಾದಿಯನ್ನೂ ಅಧ್ಯಕ್ಷರ ಪತ್ರವನ್ನೂ ತೆಗೆದುಕೊಂಡು ಗಾಂಧೀಜಿಯವರು ಆಗ ವಾಸಿಸುತ್ತಿದ್ದ ಸೇವಾಗ್ರಾಮಕ್ಕೆ ಹೊರಟೆ. ವರ್ಧಾಕ್ಕೆ ಹೋಗಿ ದೂರವಾಣಿ ಮೂಲಕ ನಾನು ಭೆಟ್ಟಿಯಾಗುವ ವೇಳೆ ನಿರ್ಧರಿಸಿ ಆಶ್ರಮಕ್ಕೆ ಮಧ್ಯಾಹ್ನ ಎರಡು ಗಂಟೆಗೆ ಬಂದೆ. ಮಹಾತ್ಮರ ಆಪ್ತ ಕಾರ್ಯದರ್ಶಿ ಮಹಾದೇವಭಾಯಿ ದೇಸಾಯಿ ಅವರು ಮುಗುಳ್ನಗೆಯಿಂದ ನನ್ನನ್ನು ಸ್ವಾಗತಿಸಿದರು. ಅವರ ಮುಂದೆ ನಾನು ತೆಗೆದುಕೊಂಡು ಹೋದ ಸತ್ಯಾಗ್ರಹಿಗಳ ಯಾದಿ ಮತ್ತು ಅಧ್ಯಕ್ಷರ ಪತ್ರ ಎಲ್ಲ ಇಟ್ಟೆ. ನನ್ನಿಂದ ವಿವರಗಳನ್ನು ಪಡೆದು ಅವರು ಹೇಳಿದ್ದು ಹೀಗೆ :

“ಗಾಂಧೀಜಿಯವರಿಗೆ ಸತ್ಯಾಗ್ರಹಿಗಳ ಸಂಖ್ಯೆ ಮಹತ್ವದ್ದಲ್ಲ. ಒಳ್ಳೇ ನೀತಿವಂತ, ಸಚ್ಚಾರಿತ್ರದ, ಸತ್ಯ, ಅಹಿಂಸೆ, ವಿಧಾಯಕ ಕಾರ್ಯಗಳಲ್ಲಿ ಅಚಲ ಶ್ರದ್ಧೆಯಿರುವ, ಸತತ ಖಾದೀಧಾರಿ

ಮತ್ತು ತಪ್ಪದೇ ನೂಲುವ ಸತ್ಯಾಗ್ರಹಿಗಳು ಬೇಕು. ಅದಕ್ಕಾಗಿಯೇ ಅವರು ತಮ್ಮ ಪ್ರಥಮಸತ್ಯಾಗ್ರಹಿ ಎಂದು ಪೂಜ್ಯ ವಿನೋಬಾ ಭಾವೆ ಅವರನ್ನು ಆರಿಸಿದ್ದು. ನೀನು ತಂದ ಇಷ್ಟೊಂದು ದೊಡ್ಡ ಯಾದಿಗೆ ಒಪ್ಪಿಗೆ ಕೊಡಲು ನನ್ನ ಕೈಗಳು ನಡುಗುತ್ತವೆ." ಎಂದು ಹೇಳಿ ಕೊನೆಗೆ ಆ ಪೂರ್ತಿ ಯಾದಿಗೆ ಒಪ್ಪಿಗೆ ಕೊಟ್ಟರು. ನೀನು ಇನ್ನು ಹೊರಡಬಹುದು ಎಂದರು. ಆಗ ನಾನು ಗಾಂಧೀಜಿಯವರನ್ನು ನೋಡಲೇಬೇಕೆಂದು ಪಟ್ಟು ಹಿಡಿದೆ. ಅದಕ್ಕೆ ಅವರು ಒಪ್ಪಿ ಕೇವಲ ಹತ್ತು ನಿಮಿಷ ಎಂದರು. ನಾನು ಒಪ್ಪಿದೆ. ಕೂಡಲೇ ಅವರು ನನ್ನನ್ನು ಗಾಂಧೀಜಿಯವರು ನೂಲುತ್ತ ಕುಳಿತ ಚಿಕ್ಕ ಕೋಣೆಗೆ ಕರೆದೊಯ್ದರು. ಆಗ ಅಲ್ಲಿ ಒಬ್ಬ ಅಮೆರಿಕನ್ ಹೆಣ್ಣುಮಗಳು ಚಾಪೆಯ ಮೇಲೆ ಗಾಂಧೀಜಿ ಅವರ ಎದುರಿಗೆ ನಿಂತುಕೊಂಡಿದ್ದಳು. ಕುಳಿತುಕೊಳ್ಳಬೇಕೆಂದು ಗಾಂಧೀಜಿ ಒತ್ತಾಯ ಮಾಡುತ್ತಲಿದ್ದರು. ಚಾಪೆಯ ಮೇಲೆ ಕೂಡ್ರುವುದೇ ಅವಳಿಗೆ ಒಂದು ಸಮಸ್ಯೆಯಾಗಿತ್ತು. ಅಂತೂ ಹೇಗೋ ಮಾಡಿ ನೆಲದ ಮೇಲೆ ಕುಕ್ಕರಿಸಿದಳು. ಗಾಂಧೀಜಿಯವರು ಬೇರೊಂದು ಚಾಪೆಯ ಮೇಲೆ ನನಗೂ ಕೂಡ್ರಲು ಸನ್ನೆ ಮಾಡಿದರು.

ನಾನು ಅಲ್ಲಿಯ ಪರಿಸರವನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಹತ್ತಿದೆ. ಅದೊಂದು ತೀರ ಚಿಕ್ಕದಾದ ಕೋಣೆ. ನೆಲವನ್ನು ಸಗಣಿಯಿಂದ ಸಾರಿಸಿದ್ದರು. ಅವರ ಹಿಂದೆ ಗೋಡೆಯ ಮೇಲೆ ಒಂದು ಚರಕದ ಚಿತ್ರ ಕೊರೆಯಲಾಗಿತ್ತು. ಅದರ ಕೆಳಗೆ ಹೀಗೆ ಬರೆಯಲಾಗಿತ್ತು : "Be brief, be short and be gone" ಕೋಣೆಯ ಹೊರಮಗ್ಗಲು ಒಂದು ದೇವದಾರು ಪೆಟ್ಟಿಗೆಯಲ್ಲಿ ದೂರವಾಣಿ (ಫೋನ್) ಇಡಲಾಗಿತ್ತು. ಆ ಅಮೆರಿಕನ್ ಮಹಿಳೆ ಹೋದ ಕೂಡಲೇ ಮಹಾದೇವಭಾಯಿ ಅವರು, ಇವರು ಕರ್ನಾಟಕದವರೆಂದು ಸ್ವಲ್ಪದರಲ್ಲಿಯೇ ಪರಿಚಯ ಮಾಡಿಕೊಟ್ಟರು. ಆಗ ಗಾಂಧೀಜಿ ನನ್ನನ್ನು ತಮ್ಮ ಕನ್ನಡಕದೊಳಗಿಂದ ನೋಡುತ್ತಾ "ನಿನ್ನ ಪ್ರಾಂತ್ಯದ ಸತ್ಯಾಗ್ರಹಿಗಳ ಯಾದಿಯ ಬಗ್ಗೆ ನೀನು ಮಹಾದೇವನ ಸಂಗಡ ಮಾತನಾಡಿದ್ದೀಯಾ. ಆತ ಹೇಳಿದ್ದೇ ನನ್ನ ಅಭಿಪ್ರಾಯ. ಅದನ್ನು ಗಮನದಲ್ಲಿಟ್ಟುಕೊಂಡು ಸಂಖ್ಯೆಗಿಂತ ಸಚ್ಚಾರಿತ್ರ್ಯಕ್ಕೆ ಮಹತ್ವ ಕೊಡಬೇಕು" ಎಂದು ಪುನಃ ಹೇಳಿದರು. ಮುಂದಿನ ಸಂಭಾಷಣೆ ಹೀಗೆ ನಡೆಯಿತು

ಗಾಂಧೀ : ನೀನು ಚಿಕ್ಕವನಿರುವಿ. (ಆಗ ನನ್ನ ವಯಸ್ಸು 26) ಮುಂದೆ ಏನು ಮಾಡಬೇಕೆಂದಿರುವಿ ?

ನಾನು : ನನ್ನ ಮುಂದೆ ನಿರ್ದಿಷ್ಟ ಚಿತ್ರವಿಲ್ಲ ಒಟ್ಟಿಗೆ ಹಿರಿಯರ ಮಾರ್ಗದರ್ಶನದಲ್ಲಿ ಕಾರ್ಯ ಮಾಡಬೇಕೆಂದಿರುವೆ.

ಗಾಂಧೀ : ಹಾಗಾದರೆ ನಾನು ಹೇಳಿದಂತೆ ಮಾಡುತ್ತೇನೆ ಎಂದು ವಚನ ಕೊಡುವೆಯಾ ?

ನಾನು : ಖಂಡಿತ ನಿಮಗೆ ಕೊಟ್ಟ ವಚನ ಪಾಲಿಸುವೆ.

ಗಾಂಧೀ    ನೀನು ನಿನ್ನ ಜೀವನವನ್ನೇ ವಿಧಾಯಕ ಕಾರ್ಯಕ್ಕೆ ಮುಡುಪಾಗಿಡುವೆಯಾ ?

(ಈ ಪ್ರಶ್ನೆ ನನಗೆ ಸಿಡಿಲಿನಂತೆ ಎರಗಿತು. ಮೈಯೆಲ್ಲ ಬೆವರೊಡೆಯಿತು, ಬಾಯಿಂದ ಮಾತೇ ಹೊರಡಲಿಲ್ಲ, ಬಾಯಿ ಒಣಗಹತ್ತಿತು.)

ಗಾಂಧೀ : ನಿನ್ನ ಒಪ್ಪಿಗೆ ಇರದಿದ್ದರೆ ಹಾಗೆಯೇ ಹೇಳಿಬಿಡು.

ನಾನು : (ನನ್ನ ಶಕ್ತಿಯನ್ನೆಲ್ಲ ಕೇಂದ್ರೀಕರಿಸಿ) ತಮ್ಮ ಆಜ್ಞೆಯನ್ನು ನಾನು ಶಿರಸಾವಹಿಸಿ ಪಾಲಿಸುವೆ. ಆದರೆ, ನಾನು ಈಗ ಸತ್ಯಾಗ್ರಹ ಮಾಡಿ ಜೇಲಿಗೆ ಹೋಗಲು ತುಂಬಾ ಆತುರನಾಗಿರುವೆ. ನಾನು ಒಂದು ವೇಳೆ ಈಗಲೇ ಒಪ್ಪಿದರೆ ನೀವು ವಿಧಾಯಕ ಕಾರ್ಯಕರ್ತರಿಗೆ ಸತ್ಯಾಗ್ರಹದಿಂದ ಮುಕ್ತ ಮಾಡುವಂತೆ ನನಗೂ ಮಾಡಿದರೆ ಹೇಗೆ ಎಂಬ ಚಿಂತೆ ನನ್ನದಾಗಿದೆ.

(ಹೀಗೆ ನನ್ನ ಮನಸ್ಸಿನಲ್ಲಿದ್ದುದನ್ನೆಲ್ಲ ಹೇಳಿಬಿಟ್ಟೆ. ಗಾಂಧೀಜಿಯವರ ಮುಂದೆ ಸತ್ಯದ ಹೊರತು ಬೇರೆ ಹೇಳುವುದೇ ಸಾಧ್ಯವಿರಲಿಲ್ಲ.)

ಗಾಂಧೀ : (ನಗುತ್ತಾ) Young man ! Go ahead. You can have court arrest now. But remember, ultimately dedicate yourself to constructive work. Don't forget.

(ಸರಿ, ಈಗ ಸತ್ಯಾಗ್ರಹಮಾಡಿ ಜೇಲಿಗೆ ಹೋಗು. ಆದರೆ, ಮುಂದೆ ನಿನ್ನ ಜೀವನವನ್ನೇ ರಚನಾತ್ಮಕ ಕಾರ್ಯಕ್ಕೆ ಮುಡುಪಾಗಿಡುವುದನ್ನು ಮರೆಯಬೇಡ.)

ಅದಕ್ಕೆ ನನ್ನ ಸಂಪೂರ್ಣ ಒಪ್ಪಿಗೆಯನ್ನು ಸೂಚಿಸುತ್ತಾ ಗಾಂಧೀಜಿಯವರಿಗೆ ದೀರ್ಘದಂಡ ನಮಸ್ಕಾರ ಮಾಡಿದೆ. ಅವರು ತುಂಬು ಹೃದಯದಿಂದ ಆಶೀರ್ವದಿಸಿದರು. ಅಷ್ಟರಲ್ಲಿ ಹತ್ತು ನಿಮಿಷಗಳಾದವೆಂದು ಮಹಾದೇವಭಾಯಿ ಅವರು ಸನ್ನೆ ಮಾಡಿದರು. ನಾನು ಅವರ ಒಪ್ಪಿಗೆಯನ್ನು ಪಡೆದು ಹೊರಬಿದ್ದೆ. ನಾನೊಂದು ದೊಡ್ಡ ಪರೀಕ್ಷೆ ಮುಗಿಸಿ ಹೊರಬಂದಂತೆ ನನ್ನ ಸ್ಥಿತಿಯಾಗಿತ್ತು.

ಇಂಥ ಮಹಾತ್ಮರ ಸಂಗಡ ಮಾತನಾಡಲು ಸದವಕಾಶ ಸಿಕ್ಕಿದುದಕ್ಕೆ ನನ್ನಷ್ಟಕ್ಕೆ ನಾನೇ "ಧನ್ಯೋSಸ್ಮಿ" ಅಂದುಕೊಂಡೆ. ಇಡೀ ನನ್ನ ಆಯುಷ್ಯದಲ್ಲಿಯೇ ಮಹಾತ್ಮರ ಈ ಮಾತು ನನಗೆ ದಾರಿದೀಪವಾಗಿದೆ. ಅವರ ಈ ದರ್ಶನ ಮತ್ತು ಮಾತುಗಳು ನನ್ನನ್ನು ಪಾವನ ಮಾಡಿದವೆಂದೇ ನನ್ನ ಭಾವನೆ. ನಾನು ಯಾವುದೇ ಕಾರ್ಯ ಕೈಗೊಳ್ಳಬೇಕಾದರೂ ನನಗೆ ಈ ಮಾತು ಕಣ್ಮುಂದೆ ಬರುವುದುಂಟು.

# ಸ್ವಾತಂತ್ರ್ಯ ಸಂಗ್ರಾಮದ ಇಣುಕು

## ಹಿನ್ನೆಲೆ

ನಮ್ಮ ಮನೆತನದಲ್ಲಿಯೇ ಅತ್ಯಂತ ಪ್ರಭಾವಶಾಲಿಯಾಗಿ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಿದವರು ನನ್ನ ಕಾಕಾ ಅನಂತರಾವ ದಾಬಡೆ. ನನ್ನ ಅಣ್ಣ ಕೃಷ್ಣಪ್ಪನ ಒಲವೂ ಇತ್ತ ಕಡೆಗೇ ಇತ್ತು. ಆತ ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿ ಮತ್ತು 1924ರ ಕಾಂಗ್ರೆಸ್‌ದಲ್ಲಿ ಸ್ವಯಂಸೇವಕನಾಗಿ ಕಾರ್ಯ ಮಾಡಿದವನು. ಅದರಂತೆಯೇ ಗುಳೇದಗುಡ್ಡದ ನನ್ನ ವಾಸುಕಾಕಾನ ಮಗ ಕೃಷ್ಣನೂ ನಾಗಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಕಂಡದ್ದುಂಟು. 1931 ರ ಚಳುವಳಿಯ ಸಮಯಕ್ಕೆ ನಾನೊಬ್ಬ ವಿದ್ಯಾರ್ಥಿ. ಅಂದಿನ ಎಲ್ಲ ಸಭೆ, ಮೆರವಣಿಗೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಲಿದ್ದೆ. ನಿತ್ಯ ಸೇವಾದಳಕ್ಕೆ ಹೋಗುತ್ತಲಿದ್ದೆ. 1931 ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ಸ್ವದೇಶಿ ವಸ್ತುಪ್ರದರ್ಶನದಲ್ಲಿ ಸ್ವಯಂ ಸೇವಕನಾಗಿದ್ದೆ. ಮುಂದೆ ಕಾಂಗ್ರೆಸ್ ಬೇಕಾಯ್ದೆಶೀರ್ ಸಂಸ್ಥೆಯಾದಾಗ ಅಂದಿನ ಸುದ್ದಿಗಳನ್ನು ಸಂಗ್ರಹಿಸಿ ಸೈಕ್ಲೊಸ್ಟೈಲ್ ಮಾಡಿ ಬುಲೆಟಿನ್ ಹೊರಡಿಸಿ ಹಂಚಿ ಬರುವುದು ನನ್ನ ಕೆಲಸವಾಗಿತ್ತು. ಆಗ ಪ್ರಥಮ ದರ್ಜೆಯ ಮುಖಂಡರ ಕೈದಾಗಿ, ಎರಡನೇ ದರ್ಜೆಯ ಅಂದಿನ ಮುಖಂಡರಾದ ಶಂಕರರಾವ ಲಿಮಯೆ ಮತ್ತು ದತ್ತಣ್ಣ ಕುರ್ತಕೋಟಿ ಅವರ ಮುಖಂಡತ್ವದಲ್ಲಿ ಕಾರ್ಯಮಾಡುತ್ತಲಿದ್ದೆ. ಈ ಚಟುವಟಿಕೆಗಳ ಕಡೆಗೇ ನನ್ನ ಒಲವು ಇದ್ದು, ಅದು ನನ್ನನ್ನು 1934 ರಲ್ಲಿ ಧಾರವಾಡದಲ್ಲಿದ್ದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಛೇರಿ ಕಾರ್ಯದರ್ಶಿ ಎಂದು ಎಳೆದುಕೊಂಡಿತು. ಆಗ ಆ ಕಛೇರಿಯಲ್ಲಿ ವೇತನದ ಕೆಲಸ ಮಾಡುವವ ನಾನೊಬ್ಬನೇ. ನನ್ನ ತಿಂಗಳ ಸಂಬಳ 25/- ರೂ. ನಾನು ಆಗ ಇನ್ನೂ ಜೇಲಿನ ಅನುಭವವನ್ನು ಕಂಡಿರಲಿಲ್ಲ. ಆದರೆ ಅದಕ್ಕೆ ಆತುರನಾಗಿದ್ದೆ.

1939 ರಲ್ಲಿ ನನ್ನ ಲಗ್ನವಾಗುವ ಪೂರ್ವದಲ್ಲಿ ನನ್ನ ಭಾವೀ ಪತ್ನಿಗೆ ನನ್ನ ಜೀವನದಲ್ಲಿ ಜೇಲುವಾಸ ಸಾಮಾನ್ಯವಾಗಿದ್ದು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುವುದು. ಆದರೆ, ನಿನಗೆ ಮಾತ್ರ ನಾನು ಒತ್ತಾಯ ಮಾಡುವುದಿಲ್ಲ. ನನ್ನ ಕಾರ್ಯದಲ್ಲಿ ಅಡ್ಡ ಬರದಿದ್ದರೆ ಸಾಕು ಎಂದು ಸ್ಪಷ್ಟವಾಗಿ ಹೇಳಿ ಅವಳ ಒಪ್ಪಿಗೆ ಪಡೆದು (5-2-1939) ಅವಳ ಜೊತೆಗೆ ಲಗ್ನ ಮಾಡಿಕೊಂಡೆ.

1941 ರ ವೈಯಕ್ತಿಕ ಸತ್ಯಾಗ್ರಹ ಬಂದೇ ಬಿಟ್ಟಿತು. ಎಲ್ಲಿಲ್ಲದ ಉತ್ಸಾಹದಿಂದ ಅಂದಿನ ಪ್ರತಿಜ್ಞಾಪತ್ರಕ್ಕೆ ಸಹಿಮಾಡಿ ಸತ್ಯಾಗ್ರಹಮಾಡಿ ಜೇಲಿಗೆ ಹೋಗಲು ಗಾಂಧೀಜಿಯವರ ಒಪ್ಪಿಗೆ

ಪಡೆದಿದ್ದೆ. ಸತ್ಯಾಗ್ರಹಿಗಳು ತಪ್ಪದೇ ನೂಲಬೇಕೆಂಬ ಆದೇಶವಿತ್ತು. ಅದರಂತೆ ನಾವಿಬ್ಬರೂ ಸೇರಿ ತಪ್ಪದೇ ನೂಲುತ್ತಲಿದ್ದೆವು. ಅಂದಿನ ಗಾಂಧೀಜಿಯವರ ಹರಿಜನ ಪತ್ರಿಕೆಯನ್ನು ಅಥದಿಂದ ಇತಿಯವರೆಗೆ ಓದಿ ಹೆಂಡತಿಗೆ ತಿಳಿಸುತ್ತಲಿದ್ದೆ.

ಆಗ ಧಾರವಾಡ ತಾಲೂಕಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಕೃಷ್ಣಾಬಾಯಿ ಪಣಜೀಕರ ಅವರು, ಕಾರ್ಯದರ್ಶಿಗಳು ಕುರ್ತಕೋಟಿಯವರು. ಅವರಿಬ್ಬರಲ್ಲದೆ ಡಾ. ನಾರಾಯಣರಾವ ಕಬ್ಬೂರ, ರಾ. ಶ್ರೀ. ಹುಕ್ಕೇರಿಕರ, ಬುರ್ಲಿ ಬಿಂದುಮಾಧವ, ಶಿವಬಸಪ್ಪ ಬೆಟಗೇರಿ ಇವರೆಲ್ಲರೂ ಸೆರೆಮನೆ ಕಂಡಿದ್ದರು. ನನ್ನ ಜೊತೆಗಾರ ಆರ್. ಶ್ರೀನಿವಾಸರಾವ ಯುದ್ಧ ವಿರೋಧಿ ಪತ್ರ ಬರೆದು ಕೈದಾಗಿದ್ದ. ಸ್ವಾಭಾವಿಕವಾಗಿ ಅಂದಿನ ಕಾಂಗ್ರೆಸ್ ಕಮಿಟಿಯ ಹೊಣೆ ನನ್ನ ಮೇಲೆ ಬಿತ್ತು. ನಾನೇ ತಾಲೂಕು ಕಾಂಗ್ರೆಸ್ ಕಾರ್ಯದರ್ಶಿಯಾಗಿ ಕಾರ್ಯ ಪ್ರಾರಂಭಿಸಿದೆ. ಆಗ ನನ್ನ ಮನೆ ಮಾಳಮಡ್ಡಿಯಲ್ಲಿ. ನನ್ನ ಪಕ್ಕದಲ್ಲಿಯೇ ಸತ್ಯಜ್ಞಾನ ಗುಡಿ ಇರುತ್ತಿದ್ದರು. ಆತ ತುಂಬಾ ಶೋಕಿ ಮನುಷ್ಯ. ಖಾದಿ ತೊಟ್ಟರೆ ಗಜಕರ್ಣವಾಗುವದೆಂದು ಹಾಸ್ಯ ಮಾಡುತ್ತಿದ್ದ. ಆದರೆ, ನಮ್ಮ ಸ್ನೇಹಮಾತ್ರ ತುಂಬಾ ಬೆಳೆಯಿತು. ಇಬ್ಬರೂ ಸೇರಿ ಕಾಲ್ನಡಿಗೆಯಿಂದ ಧಾರವಾಡ ತಾಲೂಕಿನ ಬಹುತೇಕ ಎಲ್ಲ ಹಳ್ಳಿಗಳನ್ನು ಸಂದರ್ಶಿಸಿ ಯುದ್ಧ ವಿರೋಧಿ ಭಾಷಣ ಮಾಡುತ್ತಲಿದ್ದೆವು. ಹಳ್ಳಿಗರು ತುಂಬಾ ಆದರದಿಂದ ನಮ್ಮನ್ನು ಸ್ವಾಗತಿಸುತ್ತಲಿದ್ದರು. ನಾವು ಮಾಡಿದ ಈ ಕಾರ್ಯಗಳಿಂದ ಹಳ್ಳಿಗರ ಮೇಲೆ ಎಷ್ಟು ಪರಿಣಾಮವಾಗಿತ್ತೊ ಗೊತ್ತಿಲ್ಲ. ಆದರೆ, ಸರ್ಕಾರಿ ಅಧಿಕಾರಿಗಳ ಮೇಲೆ ಮಾತ್ರ ತುಂಬಾ ಪ್ರಭಾವ ಬೀರಿತ್ತು. ಆಗ ದ. ಪ. ಕರಮರಕರ ಅವರು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಒಮ್ಮೆ ಅಂದಿನ ಜಿಲ್ಲಾಧಿಕಾರಿಗಳು (ಡಿ.ಸಿ.) ಅವರನ್ನು ಕರೆಯಿಸಿ 'ನಿಮ್ಮ ಕಛೇರಿ ಕಾರ್ಯಕರ್ತ ನರಸಿಂಹ ದಾಬಡೆ ಅವರು ತಮ್ಮ ಕಛೇರಿ ಕೆಲಸ ಬಿಟ್ಟು, ಹಳ್ಳಿಗಳಲ್ಲಿ ತಿರುಗಾಡಿ ಯುದ್ಧ ವಿರೋಧಿ ಭಾಷಣ ಮಾಡುತ್ತಿರುವರೆಂದು ಸಾಕಷ್ಟು ವರದಿಗಳು ಬರುತ್ತಲಿವೆ. ಕಾರಣ, ನೀವು ಆತನನ್ನು ಹದ್ದುಬಸ್ತಿನಲ್ಲಿಟ್ಟು ಕಛೇರಿ ಕೆಲಸವನ್ನಷ್ಟೇ ಮಾಡಲು ಹೇಳಿರಿ' ಎಂದು ಹೇಳಿದರಂತೆ. ಅದಕ್ಕೆ ಕರಮರಕರ ಅವರು, ಈಗ ಆತ ಮಾಡುತ್ತಿರುವುದು ಅವನ ಕರ್ತವ್ಯದ ಒಂದು ಭಾಗವೇ ಇದ್ದು ಆತನು ತನ್ನ ಕಾರ್ಯವನ್ನೇ ಮಾಡುತ್ತಿರುವ '(He is perfectly within his limits)' ಎಂದು ಉತ್ತರಿಸಿದ್ದಾಗಿ ಅವರೇ ನನಗೆ ತಿಳಿಸಿದರು.

## ಪ್ರಥಮ ಕೈಸೆರೆ

ಆಗ ನಮ್ಮ ಕಾಂಗ್ರೆಸ್ ಕಮಿಟಿ ಕಛೇರಿ ಮಾಳಗುಡ್ಡ (ಮಾಳಮಡ್ಡಿ) ದಲ್ಲಿ ರೈಲು ನಿಲ್ದಾಣದ ಪಕ್ಕದಲ್ಲಿಯೇ ಇತ್ತು. ಕಛೇರಿಯಲ್ಲಿ ನಿತ್ಯದ ಕೆಲಸ ಮಾಡುತ್ತ ಕುಳಿತಿದ್ದೆ. ಸುಮಾರು ಬೆಳಗಿನ ಹತ್ತು ಗಂಟೆ (10-5-1941) ಗೆ ಅಂದಿನ ಸಬ್‌ಇನ್‌ಸ್ಪೆಕ್ಟರ್ ಲೂಯಿಸ್ ಅನ್ನುವವರು ಕಾರಿನಲ್ಲಿ ನಮ್ಮ ಕಛೇರಿಗೆ ಬಂದು 'ಭಾರತ ಸಂರಕ್ಷಣ ಕಾಯ್ದೆಯ ಮೇರೆಗೆ ನಿಮ್ಮನ್ನು ಕೈದು ಮಾಡಲು ಬಂದಿರುವೆ' ಎಂಬ ಮುಕ್ತಾಫಲ ಉದುರಿಸಿದರು. ಈ ಸನ್ನಿವೇಶವನ್ನು ಎದುರಿಸಲು ಮನಸ್ಸಿನಿಂದ

ಎಷ್ಟೇ ಸಿದ್ಧತೆ ಮಾಡಿದ್ದರೂ ಆಗ ನನ್ನ ದೇಹದಲ್ಲೆಲ್ಲ ವಿದ್ಯುತ್ ಸಂಚಾರವಾದಂತಾಯಿತು. ಮರುಕ್ಷಣದಲ್ಲಿಯೇ ಸಾವರಿಸಿಕೊಂಡು - "ನಾನು ಸಿದ್ಧನಿರುವೆ, ಆದರೆ ಮನೆಗೆ ಹೋಗಿ ಹೆಂಡತಿಗೆ ಹೇಳಿ ಬರುವೆ" ಎಂದೆ. ಅದಕ್ಕೆ ಅವರು "ಒಳ್ಳೆಯದು ನಮ್ಮ ಕಾರಿನಲ್ಲಿಯೇ ಹೋಗೋಣ ನಡೆಯಿರಿ" ಎಂದರು. ಇಬ್ಬರೂ ಮನೆಗೆ ಹೋದೆವು. ಊಟದ ಶಾಸ್ತ್ರ ಮುಗಿಸಿ, ಈ ಸಂಗತಿಯನ್ನೆಲ್ಲ ಹೆಂಡತಿಗೆ ಹೇಳಿ ಮಗುವಿಗೆ ಮುತ್ತಿಟ್ಟು ಹೊರಟೇ ಬಿಟ್ಟೆ. ಅವಳು ಕಣ್ಣೀರಿಡುತ್ತಾ ದೇವರಿಗೆ ದೀಪ ಹಚ್ಚಿ ನನಗೆ ತಿಲಕವಿಟ್ಟು ಆರತಿ ಮಾಡಿ ಬೀಳ್ಕೊಟ್ಟಳು. ಮಾತು ಹೊರಡದೆ ಕಣ್ಣೀರೇ ಆ ಕಾರ್ಯ ಮಾಡಿದವು. ಈ ಸಮಾಚಾರವನ್ನೆಲ್ಲ ಮಾಳಮಡ್ಡಿಯಲ್ಲಿಯೇ ಇದ್ದ ಶ್ರೀನಿವಾಸರಾವ ದಾಬಡೆ ಅವರ ತಂಗಿ ಸುಬ್ಬಕ್ಕನಿಗೆ ಹೇಳಿ ಅವಳನ್ನು ಮನೆಯ ಕಡೆಗೆ ಕಳಿಸಿದೆ.

ಸಬ್‌ಇನ್‌ಸ್ಪೆಕ್ಟರ್‌ರು ಯಾರೋ ನನ್ನನ್ನು ಮೂರು ನಾಲ್ಕು ಗ್ರಾಮಗಳಿಗೆ ಕರೆದುಕೊಂಡು ಹೋದರು. ಕೊನೆಗೆ ಸಂಕೊಳ್ಳಿ ಮ್ಯಾಜಿಸ್ಟ್ರೇಟ್‌ರ ಮುಂದೆ ಹಾಜರ ಮಾಡಿಸಿ ತಾಲೂಕು ಲಾಕಪ್ಪಿನಲ್ಲಿ ಹಾಕಿದರು.

ಈ ವಾರ್ತೆ ವೃತ್ತಪತ್ರಿಕೆಯಲ್ಲಿ ಬಂದು ನನ್ನ ಅನೇಕ ಮಿತ್ರರೂ ಆಪ್ತರೂ ಭೆಟ್ಟಿಯಾಗಲು ಬರಹತ್ತಿದರು. ಆಗ ನನ್ನ ತಂದೆ ಹುಬ್ಬಳ್ಳಿಯಲ್ಲಿ ನನ್ನ ಅಣ್ಣನ ಮನೆಯಲ್ಲಿದ್ದರು. ಅವರೂ ಮತ್ತು ನನ್ನ ಅತ್ತಿಗೆ ಅಣ್ಣಂದಿರೂ ಎಲ್ಲರೂ ಸೇರಿ ಭೆಟ್ಟಿಗೆ ಬಂದರು. ಆಗ ಕೀಲಿ ಹಾಕಿರಲಿಲ್ಲ. ನಾನು ಒಂದು ಕಂಬಳಿಯ ಮೇಲೆ ಕುಳಿತು ಗೆಳೆಯರ ಜೊತೆಗೆ ಹರಟುತ್ತಲಿದ್ದೆ. ತಂದೆಯವರಿಗೆ ಶಿರಸಾಷ್ಟಾಂಗವೆರಗಿ ಆಶೀರ್ವದಿಸಲು ಹೇಳಿದೆ. ಅವರಿಂದ ಮಾತೇ ಹೊರಡಲಿಲ್ಲ. ತುಸು ವೇಳೆಯ ನಂತರ ಅಲ್ಲಿಯ ಸ್ಥಿತಿಯನ್ನೆಲ್ಲ ನೋಡಿ ತಂದೆಯವರು ತಮ್ಮ ಸಮಾಧಾನವನ್ನು ವ್ಯಕ್ತ ಮಾಡಿದರು. ಆದರೂ ಅವರ ಮನಸ್ಸಿನಲ್ಲಿ ಏನೋ ಉಳಿದೇ ಇತ್ತು. ವಾಪಸ್ ಹುಬ್ಬಳ್ಳಿಗೆ ಹೋಗಿ ಮಲಗಿ ಬಿಟ್ಟವರು ಏಳಲೇ ಇಲ್ಲ. ಅರ್ಧಮರ್ಧ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಆಗಾಗ್ಗೆ 'ನರಸಿಂಹ' ಎಂದು ಬಡಬಡಿಸುತ್ತಲಿದ್ದರಂತೆ. ಈ ವಾರ್ತೆಯನ್ನು ನನಗೆ ತಿಳಿಸಲಾಯಿತು. ಆಗ ನಾನು ತುಂಬಾ ಅಸಹಾಯಕ ಪರಿಸ್ಥಿತಿಯಲ್ಲಿದ್ದೆ. ಕರಮರಕರ ಅವರೇ ಸ್ವತಃ ಬಂದು ತಾವೇ ಜಾಮೀನು ಆಗಿ ತಾತ್ಪೂರ್ತಿಕ ಬಿಡುಗಡೆ ಮಾಡಿಸಿದರು. ಒಂದು ವಾರದ ನಂತರ ಪುನಃ ಮನೆಗೆ ಬಂದೆ. ಹೆಂಡತಿ ಮಗುವನ್ನು ಕರೆದುಕೊಂಡು ತಂದೆಯವರನ್ನು ನೋಡಲು ಹೋದೆ. ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿ ಮಲಗಿದ್ದರು. "ನಾನು ನರಸಿಂಹ ಬಂದೀನಿ" ಎಂದು ಗಟ್ಟಿಯಾಗಿ ಕೂಗಿದರೂ ಉಪಯೋಗವಾಗಲಿಲ್ಲ. ಆದರೆ, ಅವರು ನನ್ನ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದರು. ನೋಡಲಿಲ್ಲ, ಮಾತಾಡಲಿಲ್ಲ ಮುಂದೆ ಎರಡೇ ದಿನಗಳ ನಂತರ 15-5-1941 ರಂದು ಕೊನೆಯುಸಿರೆಳೆದರು. ಮುಂದೆ ಸುಮಾರು ಒಂದು ತಿಂಗಳು ಹೊರಗುಳಿದು ತಂದೆಯವರ ಕ್ರಿಯಾಕರ್ಮಗಳನ್ನು ಮುಗಿಸಿ ಪುನಃ ಲಾಕಪ್ಪಿಗೆ ಹೋದೆ. ಅಲ್ಲಿ ನನ್ನ ಖಟ್ಲೆ ಒಂದನೇ ವರ್ಗದ

ನ್ಯಾಯಾಧೀಶರಾದ ಎಸ್. ಬಿ. ಸಂಕೊಳ್ಳಿ ಅವರ ಮುಂದೆ ನಡೆದು ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿದರು (16-6-1941), ಕರಂದೀಕರ ವಕೀಲರು ನನ್ನ ಪರವಾಗಿ ವಾದಿಸಿದರು. ಅಂತೂ ನನ್ನನ್ನು 20-6-1941 ರಂದು ಮಧ್ಯಾಹ್ನ ಹೊರಡುವ ಪ್ಯಾಸೆಂಜರ್ ಗಾಡಿಯಿಂದ ಬೆಳಗಾವಿ ಜೈಲಿಗೆ ಕಳಿಸಿದರು. ಅಂದು ರೈಲುನಿಲ್ದಾಣಕ್ಕೆ ಬೀಳ್ಕೊಡಲು ನನ್ನ ಹೆಂಡತಿ, ಮಗು, ಆಪ್ತರು-ಮಿತ್ರರು ಹಾಗೂ ದ. ಪ. ಕರಮರಕರ ಅವರು ಬಂದಿದ್ದರು.

## ಜೈಲು ಪ್ರವೇಶ

ಈ ಮೊದಲು ನಾನು ಜೇಲು ನೋಡಿರಲಿಲ್ಲ. ಆದರೆ, ಅದರ ಕತೆಯನ್ನು ಕೇಳಿದ್ದೆ. ಕೇಳುವುದಕ್ಕೂ ಪ್ರತ್ಯಕ್ಷ ಅನುಭವಿಸುವುದಕ್ಕೂ ಬಹಳ ಅಂತರವಿರುವುದೆಂಬುದನ್ನು ಅರಿತುಕೊಂಡೆ. ಬೆಳಗಾವಿ ಜೇಲಿನದು ಪ್ರಚಂಡ ಮಹಾದ್ವಾರ. ಅದನ್ನು ತೆಗೆಯುವುದು ವಾಹನ ಬಂದಾಗ ಇಲ್ಲವೇ ಸೂಪರಿಂಟೆಂಡೆಂಟರು ಪ್ರವೇಶಿಸುವಾಗ. ಅದರಲ್ಲಿಯ ಚಿಕ್ಕ ಬಾಗಿಲಿನಿಂದ ನಮ್ಮ ಪ್ರವೇಶ. ಪ್ರವೇಶಿಸುತ್ತಲೇ ಅಲ್ಲಿದ್ದ ಸರ್ವಕೈದಿಗಳ ಜಮಾ-ಖರ್ಚು ಬರೆಯಲು ಕುಳಿತ ಪೊಲೀಸ್ ಬಂದು ಕೈದಿ ಜಮಾ ತೆಗೆದುಕೊಂಡು ಒಂದು ಕಡೆ ಕೂಡಲು ಹೇಳಿದರು. ಕೂಡುವದು ಒಂದು ವಿಶಿಷ್ಟ ಪದ್ಧತಿ. ತುದಿಗಾಲಿನಿಂದ ಮುಖ ಬಗ್ಗಿಸಿಕೊಂಡು ಹಳೇ ಕಾಲದ ವಧುವಿನಂತೆ ಕೂಡ್ರಬೇಕು. ನಂತರ 'ಅಂಗಝಡ್ತಿ' ಅಂದರೆ ನಮ್ಮ ಹತ್ತಿರ ಏನಿರುವುದನ್ನೆಲ್ಲ ತಪಾಸಿಸಿ ನಮ್ಮ ಖಾಸಗಿ ಬಟ್ಟೆಗಳನ್ನೆಲ್ಲ ತಮ್ಮ ಕಡೆಗೆ ಜಮಾ ಮಾಡಿಕೊಂಡು ತೊಟ್ಟುಕೊಳ್ಳಲು ಜೇಲುಬಟ್ಟೆ ಕೊಡುವರು. ಮೈಮೇಲೆ ಅಡ್ಡಾತಿಡ್ಡಾ ಗೆರೆ ಬರುವ ಎರಡು ಅಂಗಿ, ಎರಡು ಚಡ್ಡಿ (ಲಂಡಚಣ್ಣದಂಥವು) ಒಂದು ಲಂಗೋಟಿ ಮತ್ತು ನ್ಯಾಪಕಿನ್‌ದಂಥ ಒಂದು ಟಾವೆಲ್ಲು ಮತ್ತು ತಲೆಗೆ ಒರಗಿ ಕೂಡ್ರುವ ಒಂದು ಟೊಪ್ಪಿಗೆ ಕೊಡಲಾಗುವುದು. ಅದರಂತೆ ಕೈದಿಗೆ ಒಂದು ನಂಬರ ಕೊಡಲಾಗುವುದು. ಆ ನಂಬರನ್ನು ಬಟ್ಟೆಗಳ ಮೇಲೆ ಹಾಕುವುದುಂಟು. ಬಟ್ಟೆಗಳು ಹೊಸವಿದ್ದವು. ಬಿನ್ನಿಗಂಜಿಯವು ನಸುಗೆಂಪು ಬಣ್ಣದವು. ಆ ಬಟ್ಟೆಯನ್ನು ಪ್ರತ್ಯಕ್ಷ ತೊಡುವಾಗ ಒಂದು ವಿಚಿತ್ರ ಭಾವನೆಯು ನನ್ನ ಮನಸ್ಸಿನಲ್ಲಿ ಬಂತು. 'ಇದನ್ನೆಲ್ಲ ನಾವು ಮಾಡುವುದು ಯಾತಕ್ಕಾಗಿ ? ಇದರಿಂದ ಸ್ವರಾಜ್ಯ ಸಿಗುವುದೇ ?' ಎಂದು ನನ್ನಷ್ಟಕ್ಕೆ ನಾನೇ ಕೇಳಿಕೊಂಡೆ. ಇಷ್ಟರಲ್ಲಿ ನನ್ನ ಹಾಸಿಗೆ ಹೊದಿಕೆ ಅಂದರೆ ಒಂದು ತಾಟು, ಎರಡು ಕಂಬಳಿ ಅಲ್ಲದೆ ಒಂದು ಥಾಲಿ, ಪಾಟು. ಥಾಲಿ ಅಂದರೆ ತವೆಯ ಹಾಗೆ ತುಸು ತಗ್ಗಾದ ಅಲ್ಯುಮಿನಿಯಂ ಪಾತ್ರೆ. ಇದು ಪಲ್ಲೆ, ಬೇಳೆ ಹಾಕಿಸಿಕೊಳ್ಳಲು. ಇನ್ನು 'ಪಾಟು' ಅಂದರೆ ಚೊಂಬುವಿನಂಥದ್ದು - ನೀರು ಕುಡಿಯಲು, ಸ್ನಾನ ಮಾಡಲು, ಕಕ್ಕಸಕ್ಕೆ ಹೋಗಲು ಇದೊಂದೇ. ಇಷ್ಟೆಲ್ಲ ಹೊತ್ತುಕೊಂಡು ಓರ್ವ ಪೊಲೀಸ್‌ನ ಜೊತೆಮಾಡಿ ರಾಜಕೀಯ ಕೈದಿಗಳಿದ್ದ ಬ್ಯಾರಕ್ಕಿಗೆ ಕಳಿಸಿದರು. ಅಲ್ಲಿಂದ ಹೊರಡುವಾಗ ಇನ್ನೊಂದು ಮಹಾದ್ವಾರ. ಅದನ್ನು ಚಿಕ್ಕ ಬಾಗಿಲಿನಿಂದಲೇ ದಾಟಬೇಕು. ಇದನ್ನು ದಾಟಿದಕೂಡಲೇ ಬರುವುದೇ ಜೇಲಿನ ಆವಾರ. ಅತ್ಯಂತ

ಹಸನ ಮತ್ತು ಅಚ್ಚುಕಟ್ಟಾದ ಮಾರ್ಗಗಳು. ಅಲ್ಲಿ ಆ ಬಾಗಿಲಿಗೇ ನನ್ನ ದಾರಿ ಕಾಯುತ್ತಾ ನಿಂತ ಹುಕ್ಕೇರಿಕರ, ಜೀವಣರಾವ ಯಾಳಗಿ ಇವರೇ ಮೊದಲಾದವರು ಆನಂದದಿಂದ ಸ್ವಾಗತಿಸಿದರು. ಅವರ ಸಂಗಡ ಮಾತಾಡಲು ನಿಲ್ಲುವವನಿದ್ದೆ. ಅಷ್ಟರಲ್ಲಿ ಪೊಲೀಸ್ 'ಜಲ್ದೀ ಚಲೊ' ಎಂದು ಗುಡುಗಿದ. ನನ್ನನ್ನು ಕಳಿಸಿದ್ದು ರಾಜಕೀಯ ಕೈದಿಗಳಿದ್ದ ನಿರ್ದಿಷ್ಟ ಬ್ಯಾರಕ್ಕಿಗೆ. ಅಲ್ಲಿ ಸುಮಾರು 50 ರಾಜಕೀಯ ಕೈದಿಗಳು, ಸುಮಾರು 25 ಕ್ರಿಮಿನಲ್ ಕೈದಿಗಳಿದ್ದರು. ಅಲ್ಲಿದ್ದ ಅನೇಕರನ್ನು ಹೊರಗೆ ನಾನೇ ಸತ್ಯಾಗ್ರಹ ಮಾಡಿ ಕಳಿಸಿದ್ದೆ. ಅಲ್ಲಿ ಚಂದಗಡದ ಪ್ರಭೂಜಿ, ಬೆಳಗಾವಿ ಜಿಲ್ಲೆಯ ವೀರಪ್ಪ ಸುತಗಟ್ಟಿ, ಬಳ್ಳಾರಿಯ ಟಿ. ಬಿ. ಕೇಶವರಾವ, ನಾಗಭೂಷಣ ವಕೀಲ, ಬೆಂಗಳೂರು ಕಂಟೋನ್‌ಮೆಂಟ್ ಸತ್ಯಾಗ್ರಹಿಗಳು ಕೆಲವರಿದ್ದರು. ಒಂದು ವಿಧವಾಗಿ ನಾನು ನನ್ನ ಬಳಗದಲ್ಲಿ ಬಂದು ಬಿದ್ದಂತಾಯಿತು. ಆ ಸಮಯಕ್ಕೆ ನನ್ನ ಸಂಜೆಯ ಊಟ ಬಂತು. ಅಂಗೈ ದಪ್ಪ ಎರಡು ರೊಟ್ಟಿ, ಹಸಿರಾಣಿ ಪಲ್ಲೆ ನೋಡಿ ನನಗೆ ಏನೋ ಅನ್ನಿಸಿತು. ಅನೇಕ ಮಿತ್ರರು ತಿನ್ನಲು ಹೇಳಿದರು. ತಿನ್ನಲು ಮನಸ್ಸು ಒಪ್ಪಲಿಲ್ಲ. ಅದರಂತೆ ಮರುದಿನ ಬೆಳಗಿನ ಗಂಜಿಯನ್ನು ಕುಡಿಯಲು ಮನಸ್ಸು ಒಪ್ಪಲಿಲ್ಲ. ಮುಂದೆ ಎರಡೇ ದಿನಗಳಲ್ಲಿ ಅಲ್ಲಿಯ ಪರಿಸ್ಥಿತಿಗೆ ಸಂಪೂರ್ಣ ಒಗ್ಗಿಕೊಂಡೆ. ಉಳಿದವರಂತೆ ನಾನೂ ಊಟದ ಗಂಟೆ ಸಲುವಾಗಿ ದಾರಿ ಕಾಯಹತ್ತಿದೆ. ಅದರಂತೆ ಜೇಲಿನ ಬಟ್ಟೆಯನ್ನೂ ಮೈಗೆ ಒಗ್ಗಿಸಿಕೊಂಡೆ.

ಪ್ರತಿಯೊಬ್ಬ ಸಶ್ರಮ ಕೈದಿ ನಿತ್ಯ ನಿರ್ದಿಷ್ಟಪಡಿಸಿದ ಕೆಲಸಕ್ಕೆ ಹೋಗಬೇಕಾಗುತ್ತಿತ್ತು. ಬೆಳಿಗ್ಗೆ ನಮ್ಮ ಬ್ಯಾರಕ್ಕಿನಲ್ಲಿ ನಮ್ಮ ಹಾಸಿಗೆ ಸುತ್ತಿಟ್ಟು ಕೇವಲ 'ಥಾಲಿ ಪಾಟು' ತೆಗೆದುಕೊಂಡೇ ಕೆಲಸಕ್ಕೆ ಹೋಗುವುದು. ಮಧ್ಯಾಹ್ನ ಮತ್ತು ಸಂಜೆ ಊಟ ಮುಗಿಸಿಕೊಂಡೇ ಸಂಜೆ ಸುಮಾರು ಐದು ಗಂಟೆಗೆ ವಾಪಸ್ ನಮ್ಮ ಸ್ಥಳಕ್ಕೆ ಬರುವುದು. ಒಂದೆರಡು ದಿವಸ ಎಲ್ಲರ ಜತೆಗೆ ಕೆಲಸಕ್ಕೆ ಹೋದೆ. ಆದರೆ, ಅಲ್ಲಿ ನಿರ್ದಿಷ್ಟ ಕೆಲಸವಿರಲಿಲ್ಲ. ಅಷ್ಟರಲ್ಲಿ ಜೇಲ್ ಕಛೇರಿಯಿಂದ ಕರೆ ಬಂತು. ಆಗಿನ ಜೇಲ್ ಸೂಪರಿಂಟೆಂಡೆಂಟ್ ಲ್ಯಾಕ್ಸಟನ್ ಎಂಬ ಆಂಗ್ಲರು, ಜೇಲರ್ ಕುಲಕರ್ಣಿಯವರು. ಡೆ. ಜೇಲರ್ ಗೋರೆ ಅವರು ಇದ್ದರು. ಡೆ. ಜೇಲರು ಕೈದಿಗಳಿಂದ ಕೆಲಸ ಮಾಡಿಸುತ್ತಿದ್ದರು. ಚಪ್ಪಲಿ ತಯಾರಿಸುವುದು, ದೊಡ್ಡ ದೊಡ್ಡ ಜಮಖಾನೆಗಳನ್ನು ಸಿದ್ಧಪಡಿಸುವುದು ಇತ್ಯಾದಿ. ಡೆ. ಜೇಲರರು ಕರೆದು 'ನೀವು ಏನು ಕೆಲಸ ಮಾಡಬಲ್ಲಿರಿ ?' ಎಂದು ಕೇಳಿದರು. 'ಏನು ಕೊಟ್ಟರೂ ಕೆಲಸ ಮಾಡಬಲ್ಲೆ' ಎಂದು ಹೇಳಿದೆ. ನಾನು ಕಾಂಗ್ರೆಸ್ ಕಮಿಟಿಯ ಕಛೇರಿಯಲ್ಲಿ ಕೆಲಸ ಮಾಡುವ ವಿಷಯ ಅವರಿಗೆ ಗೊತ್ತಿತ್ತು. ಆಗ ಅವರು ನೇರವಾಗಿಯೇ ನಮ್ಮ ಕಛೇರಿಯ ಟೈಪಿಂಗ್ ಕೆಲಸ ನೀವು ಮಾಡಬೇಕು ಎಂದರು. ನಾಳಿನಿಂದ ಕಛೇರಿಗೆ ಕೆಲಸಕ್ಕೆ ಬರಹೇಳಿದರು.

ಜೇಲಿನ ಆಡಳಿತವನ್ನು ಸುಗಮವಾಗಿ ನಡೆಸಲು ಕೆಲವು ಒಳ್ಳೆಯ ಕೈದಿಗಳನ್ನು 'ವಾಚಮನ್' ಎಂದೂ, ಅದಕ್ಕೂ ಹೆಚ್ಚಿನ ಹುದ್ದೆ 'ವಾರ್ಡರ್' ಎಂದೂ ಮಾಡುವುದುಂಟು. ಅವರಿಗೆ ಅವರವರ ಕೆಲಸಕ್ಕೆ ಅನುಗುಣವಾಗಿ ಶಿಕ್ಷಾ ಅವಧಿಯನ್ನು ಕಡಿತ (ರೆಮಿಶನ್) ಕೊಡಲಾಗುತ್ತದೆ. ಕೈದಿಗಳಲ್ಲಿ

ಇವರಿಗೆ ಹೆಚ್ಚಿನ ಸ್ಥಾನ. ಅದರಲ್ಲಿಯೂ ಕಛೇರಿಯಲ್ಲಿ ಕೆಲಸ ಮಾಡುವುದೆಂದರೆ ಅವರು ಆಫೀಸರ್ ಕೈದಿ ಇದ್ದಂತೆ ಎಂದು ಹೇಳಬಹುದು. ಅದೇ ಕಛೇರಿಯಲ್ಲಿ ಧಾರವಾಡ ಬ್ಯಾಂಕ್ ಕೇಸಿನಲ್ಲಿ ಶಿಕ್ಷೆಯಾಗಿ ಬಂದ ಫಾಟಕ್ ಅವರೂ ಇದ್ದರು.

ನನಗೆ ಕಛೇರಿಯಲ್ಲಿ ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಲಿದ್ದೆ. ಅಲ್ಲಿ ಬುವಾಜಿ ಎಂಬ ಕಾರಕೂನರಿದ್ದರು. ಸ್ವಾಭಾವಿಕವಾಗಿಯೇ ನಮ್ಮ ಪರಿಚಯ ಸ್ನೇಹದಲ್ಲಿ ಪರಿವರ್ತನಗೊಂಡಿತು. ಅವರಿಗೂ ಅಲ್ಲಿ ಕೆಲಸ ಮಾಡುವ ಇತರರಿಗೂ ನನ್ನ ಸಹಕಾರ ಇದ್ದೇ ಇರುತ್ತಿತ್ತು. ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಕೆಲವು ಸೌಲಭ್ಯಗಳು ನನಗೆ ದೊರೆತವು. ಆಗ ಕೈದಿಗಳಿಗೆ ವೃತ್ತಪತ್ರಿಕೆಗಳನ್ನು ಕೊಡುತ್ತಿರಲಿಲ್ಲ. ಕಛೇರಿಯಲ್ಲಿ ಬರುವ ಎಲ್ಲ ವೃತ್ತಪತ್ರಿಕೆಗಳನ್ನು ಓದುವ ಸದವಕಾಶ ಸಿಕ್ಕಿತು. ತಿಂಗಳಿಗೆ ಒಂದು ಪತ್ರ ಕೊಡಬೇಕೆಂಬ ನಿಯಮವಿದ್ದರೂ ಬಂದ ಪತ್ರಗಳನ್ನೆಲ್ಲ ಕೊಡುತ್ತಲಿದ್ದರು. ಮಧ್ಯಾಹ್ನ 'ಬ' ವರ್ಗದ ಕೈದಿಗಳ ಕಡೆಗೆ ಹೋಗಿ ಬರುವ ಅವಕಾಶವು ದೊರೆಯುತ್ತಲಿತ್ತು. ಸಾಮಾನ್ಯವಾಗಿ ಜೇಲ್ ಅಧಿಕಾರಿಗಳು ಮಧ್ಯಾಹ್ನ ಒಂದು ಗಂಟೆಗೆ ಹೋಗಿ ಮೂರು ಗಂಟೆಗೆ ವಾಪಸ್ ಬರುತ್ತಲಿದ್ದರು. ಆಗ ನನಗೆ ಓದಲು ಬೇಕಾದಷ್ಟು ಅವಕಾಶ ದೊರೆಯುತ್ತಿತ್ತು. ಕಛೇರಿಯ ಕೆಲಸಗಾರರ ಬಳಕೆ ಹೆಚ್ಚಾದಂತೆ ಅವರು ಮನೆಗೆ ಹೋಗುವಾಗ ತಮ್ಮ ಅಳಿದುಳಿದ ಕೆಲಸವನ್ನು ನನಗೆ ಒಪ್ಪಿಸುತ್ತಲಿದ್ದರು. ಅವರು ವಾಪಸ್ ಬರುವ ಪೂರ್ವದಲ್ಲಿ ಆ ಎಲ್ಲ ಕೆಲಸವನ್ನು ಮಾಡಿ ಮುಗಿಸುತ್ತಲಿದ್ದೆ. ಹೀಗಾಗಿ, ಅವರೆಲ್ಲರೂ ನನ್ನ ಸ್ನೇಹಿತರಾದರು. ಸಂಜೆ 5 ಗಂಟೆಗೆ ವಾಪಸ್ ನನ್ನ ಬಿಡಾರಕ್ಕೆ ಹೋಗುತ್ತಲಿದ್ದೆ. ಇತ್ತ ಮಿತ್ರರೆಲ್ಲ ನಾನು ಹೊಸ ವರ್ತಮಾನ ತರುವೆನೆಂದು ನನ್ನ ದಾರಿ ಕಾಯುತ್ತಲಿದ್ದರು. ಮಲಗುವ ಪೂರ್ವದಲ್ಲಿ ಎಲ್ಲರೂ ಸೇರಿ ಪ್ರಾರ್ಥನೆ ಮಾಡುವ ಪರಿಪಾಠ. ಪ್ರಾರ್ಥನೆ ಮುಗಿದ ನಂತರ ವೃತ್ತಪತ್ರಿಕೆಗಳ ಸುದ್ದಿ ಮತ್ತು ಜೇಲಿನ ಇತರ ಸುದ್ದಿಗಳನ್ನು ಕ್ರೋಢೀಕರಿಸಿ ಹೇಳುತ್ತಲಿದ್ದೆ. ಕಛೇರಿಯಲ್ಲಿದ್ದುದರಿಂದ ಸಾಮಾನ್ಯವಾಗಿ ಜೇಲಿನ ಬಹುತೇಕ ಎಲ್ಲ ರಾಜಕೀಯ ಕೈದಿಗಳ ಭೆಟ್ಟಿಯಾಗುತ್ತಲಿತ್ತು. ಆಗ ಸ್ಥಾನಬದ್ಧರ ಸ್ಥಳದಲ್ಲಿ ವೆಂಕರೆಡ್ಡಿ ಹೂಲಿ, ತೆಂಡೂಲ್ಕರ್, ನಾರಾಯಣರಾವ ಜೋಶಿ ಮತ್ತು ಕೌದಿಯವರು ಇದ್ದರು.

## ಯಮಪುರಿಯ ದೃಶ್ಯ

ಈ ಅವಧಿಯಲ್ಲಿಯೆ ಒಂದು ಹೃದಯವಿದ್ರಾವಕ ಘಟನೆ ಜರುಗಿತು. ಒಂದು ದಿವಸ ಇಬ್ಬರು ಕೈದಿಗಳಿಗೆ 'ಫಾಶೀ' (ಮರಣ ದಂಡನೆ) ಕೊಡುವುದಿತ್ತು. ಮರಣದಂಡನೆಯಾದ ಕೈದಿಗಳನ್ನು ಬೇರೆಯೇ ಇಡಲಾಗುತ್ತಿತ್ತು. ಅದಕ್ಕೆ 'ಫಾಶೀಗೇಟು' ಎಂಬ ಹೆಸರು. ಜೇಲಿನಲ್ಲಿ ಬಹಳ ತೊಂದರೆ ಕೊಡುವ ಕೈದಿಗಳನ್ನು ಜೇಲ್ ಶಿಕ್ಷೆಯ ಮೇರೆಗೆ ಇಲ್ಲಿ ತಂದು ಇಡಲಾಗುತ್ತಿತ್ತು. ಫಾಶೀ ಕೊಡುವ ದಿವಸ ಹೇಗೋ ಈ ವರ್ತಮಾನವೆಲ್ಲ ಜೇಲ್ ತುಂಬಾ ಹಬ್ಬುತ್ತಲಿತ್ತು. ಪ್ರತ್ಯಕ್ಷ ಫಾಶೀ ಕೊಡುವ

ಪೂರ್ವದಲ್ಲಿ ಎಲ್ಲ ಕೈದಿಗಳನ್ನು ಅವರವರ ಸ್ಥಳದಲ್ಲಿ ಬಂದಿ ಮಾಡಲಾಗುತ್ತಿತ್ತು. ಆಗ ಜೇಲಿನ ವಾತಾವರಣ ತುಂಬಾ ಗಂಭೀರವಾಗುತ್ತಲಿತ್ತು. ಅನೇಕರು ಅಂದು ಊಟ ಮಾಡುತ್ತಿರಲಿಲ್ಲ.

ಜೇಲ್ ಕಛೇರಿಯು ಮೊದಲನೆಯ ಅಂತಸ್ತಿನಲ್ಲಿತ್ತು. ಅಲ್ಲಿಯ ಕಿಡಕಿಯಿಂದ ನೋಡಿದರೆ ಪ್ರತ್ಯಕ್ಷ ಫಾಶೀ ಕೊಡುವುದೆಲ್ಲ ಕಾಣುತ್ತಿತ್ತು. ಈ ಕಾರ್ಯ ನಡೆಯುವಾಗ ಶಿಕ್ಷೆ ಮಾಡಿದ ನ್ಯಾಯಾಧೀಶ, ಕಲೆಕ್ಟರ್ (ಡಿ.ಸಿ.), ಡಿ.ಎಸ್.ಪಿ., ಜೇಲ್ ಅಧಿಕಾರಿಗಳು ಮುಂತಾದ ಹತ್ತು ಹನ್ನೆರಡು ಜನರು ಹಾಜರಿರುತ್ತಿದ್ದರು. ಕೊರಳಿಗೆ ಹಗ್ಗ ಹಾಕುವ ಪೂರ್ವದಲ್ಲಿ ಈ ನ್ಯಾಯಾಧೀಶರು ನಿರ್ಣಯವನ್ನು ಓದಿ ಹೇಳುತ್ತಿದ್ದರು. ಕೊರಳಿಗೆ ಹಾಕುವ ಹಗ್ಗವನ್ನು ಅದೇ ಜೇಲಿನಲ್ಲಿ ಸಿದ್ಧ ಮಾಡುತ್ತಲಿದ್ದರು. ಅದು ಅತ್ಯಂತ ನುಣುಪಾಗಿರುವಂತೆ ಮಾಡಲಾಗುತ್ತಿತ್ತು. ಎಷ್ಟೇ ಗಟ್ಟಿ ಮನಸ್ಸು ಮಾಡಿದರೂ ಪ್ರತ್ಯಕ್ಷ ಆ ಕೃತಿ ನಡೆದಾಗ ನನ್ನಿಂದ ನೋಡುವುದಾಗಲಿಲ್ಲ. ಮುಂದೆ ತುಸು ಹೊತ್ತಿನ ನಂತರ ನೋಡಿದಾಗ ಮೃತದೇಹ ನೇತಾಡುತ್ತಲಿತ್ತು. ಮುಂದೆ ಆ ದೇಹವನ್ನು ಅವರ ಆಪ್ತರಿಗೆ ಒಪ್ಪಿಸಲಾಯಿತು. ಅಂದಿನ ದಿವಸ ಜೇಲ್ ತುಂಬೆಲ್ಲ ಫಾಶೀ ಶಿಕ್ಷೆಯು ಯೋಗ್ಯವೇ ? ಎಂಬ ಚರ್ಚೆ ನಡೆಯುತ್ತಲಿದ್ದವು. ನಾನಂತೂ ಅಂದು ಸುಸ್ತು ಹೊಡೆದಿದ್ದೆ. 'ಇದು ಯಮಪುರಿಯೇ' ಎಂಬ ಭಾವನೆ ಬರುತ್ತಲಿತ್ತು. ಅಂದು ನನ್ನಿಂದ ಊಟ ಮಾಡುವದಾಗಲಿಲ್ಲ.

# ಭಾರತಮಾತಾಕೀ ಜೈ

ಇಲ್ಲಿ ಅಂದರೆ ಆ ಹಿಂಡಲಗಾ ಜೇಲಿನಲ್ಲಿಯೇ ಇನ್ನೊಂದು ಅವಿಸ್ಮರಣೀಯ ಘಟನೆ ನಡೆಯಿತು.

ಒಂದು ದಿನ ಸಾಯಂಕಾಲ ಸುಮಾರು ಏಳು ಗಂಟೆಗೆ ನಮ್ಮ ಬ್ಯಾರಕ್ಕಿಗೇ ಐದು ರಾಜಕೀಯ ಕೈದಿಗಳು ಬಂದರು. ಅಲ್ಲಿದ್ದ ನಾವೆಲ್ಲ ಅವರನ್ನು ಆನಂದದಿಂದ ಸ್ವಾಗತಿಸಿದೆವು. ಅನಂತರ ಅವರ ಊಟ ಉಪಚಾರದ ಬಗ್ಗೆ ಕೇಳಿದಾಗ - ಬೆಳಿಗ್ಗೆ ಸಹ ಅರ್ಧಮರ್ಧ ಆಗಿದ್ದು ಹಸಿದು ಕಂಗಾಲಾಗಿದ್ದರು. ಅವರಿಗೆ ಕೊಡಲು ನಮ್ಮ ಹತ್ತಿರ ಏನೂ ಇರಲಿಲ್ಲ. ಅಲ್ಲಿ ಕಾವಲು ನಿಂತಿದ್ದ ಪೊಲೀಸ್‌ನನ್ನು ಕರೆದು ಈ ಸಂಗತಿ ತಿಳಿಸಲಾಯಿತು. ಆತ ಅತ್ತಿತ್ತ ತಿರುಗಾಡಿ ಬಂದು ಈಗ ಸಧ್ಯ ಅವರಿಗೆ 'ಏನೂ ಕೊಡುವುದು ಸಾಧ್ಯವಿಲ್ಲ' ಎಂಬ ವರದಿಯನ್ನು ಒಪ್ಪಿಸಿದನು. ಆ ಪೊಲೀಸ್‌ನ ಮೇಲಾಧಿಕಾರಿ ಜಮಾದಾರ, ಸುಬೇದಾರ ಅವರಿಗೂ ಹೇಳಲಾಯಿತು. ಎಲ್ಲರಿಂದಲೂ ನಕಾರಾತ್ಮಕ ಉತ್ತರವೇ ಬಂದಿತು. ನಮಗೆಲ್ಲ ತುಂಬಾ ಕಳವಳವಾಯ್ತು. ಈಗ ಮಾಡುವುದೇನು ? ನಮ್ಮ ಕರ್ತವ್ಯವೇನು ? ಎಂಬ ವಿಚಾರ ತಲೆಯಲ್ಲಿ ತಿರುಗಹತ್ತಿತು.

ನಿತ್ಯ ನಾವೆಲ್ಲ ಮಲಗುವ ಪೂರ್ವದಲ್ಲಿ ಪ್ರಾರ್ಥನೆಮಾಡಿ ನಂತರ ಏನಾದರೂ ಹೇಳುವ ಪರಿಪಾಠವಿದ್ದಿತು. ಅಂದು ನಾನು ಪ್ರಾರ್ಥನೆಯನ್ನು ಕೂಡಾ ಮಾಡದೇ ಅದೇ ವಿಚಾರದಲ್ಲಿ ಮಗ್ನನಾಗಿದ್ದೆ. ಈ ಸಂದರ್ಭದಲ್ಲಿ ನನ್ನ ಕರ್ತವ್ಯವೇನು ? ಎಂದು ಚಿಂತಿಸುತ್ತಾ ತಲೆ ಕೆದರುತ್ತಲಿದ್ದೆ. ಪ್ರಾರ್ಥನೆ ಮುಗಿಯುವ ಪೂರ್ವದಲ್ಲಿ ನನ್ನ ತಲೆಯಲ್ಲಿ ತುಸು ಪ್ರಕಾಶ ಬಿತ್ತು. ಅದನ್ನು ಕಾರ್ಯರೂಪದಲ್ಲಿ ತರಬೇಕೆಂದೇ ದೃಢ ನಿರ್ಧಾರ ಮಾಡಿದೆ. ಜೇಲು ಕಾಯ್ದೆ ಮುರಿದರೂ ಪರವಾಗಿಲ್ಲ. ಸಾಮೂಹಿಕ ಘೋಷಣೆ ಕೂಗಬೇಕೆಂದು ನಿರ್ಧಾರ ಮಾಡಿದೆ.

ಪ್ರಾರ್ಥನೆ ಮುಗಿದ ಕೂಡಲೇ ನನ್ನ ಶಕ್ತಿಸ್ವರವನ್ನೆಲ್ಲ ಕೇಂದ್ರೀಕರಿಸಿ ಉಚ್ಚಕಂಠದಿಂದ "ಬೋಲೋ ಭಾರತ್ ಮಾತಾಕೀ" ಎಂದು ಕೂಗಿದೆ. ನನ್ನ ಸಂಗಡಿಗರೆಲ್ಲ ತಮಗೆ ಅರಿವಿಲ್ಲದೆ ಅಷ್ಟೇ ಜೋರಿನಿಂದ "ಜೈ" ಎಂಬ ಉತ್ತರವನ್ನು ಕೊಟ್ಟರು. ಇದನ್ನು ಮೂರು ಸಲ ಉಚ್ಚರಿಸಿದೆ. ಅವರೂ ಉತ್ತರ ಕೊಟ್ಟರು. ಅದನ್ನು ಪಕ್ಕದ ಬ್ಯಾರಕ್ಕಿನವರು ಅನುಕರಣೆ ಮಾಡಿದರು, ಆ ಸಪ್ಪಳ ಅತ್ಯಂತ ಆತಂಕಕಾರಿಯಾಗಿತ್ತು. ಜೇಲಿನಲ್ಲಿ ಹೀಗೆ ಕೂಗುವುದು ದೊಡ್ಡ ಅಪರಾಧ. ಮುಂದೆ

ಐದೇ ನಿಮಿಷದಲ್ಲಿ ಜೇಲರ್, ಸುಬೇದಾರ, ಜಮಾದಾರ ಮುಂತಾದ ಅಧಿಕಾರಿಗಳು ಬಹಳ ಕ್ರೋಧಿಷ್ಟರಾಗಿ ಬಂದರು. ವಾತಾವರಣವು ಬಿಸಿಯಾಗಿತ್ತು. ಎಲ್ಲರೂ ಶಾಂತ ರೀತಿಯಿಂದ ಸ್ತಬ್ಧರಾಗಿ ಕುಳಿತಿದ್ದರು. ಬಂದ ಅಧಿಕಾರಿಗಳು 'ಈ ಪ್ರಕಾರ ಆವಾಜ್ ಮಾಡಿದವರು ಯಾರು ?' ಎಂದು ಕೇಳಿದರು. 'ನಾವೆಲ್ಲರೂ' ಎಂಬ ಉತ್ತರ ಬಂದಿತು. ಆದರೆ 'ಅದನ್ನು ಪ್ರಾರಂಭಿಸಿದವರು ಯಾರು ?' ಎಂದು ಮರುಪ್ರಶ್ನೆ ಹಾಕಿದರು. ಎಲ್ಲರೂ ಶಾಂತವಾಗಿದ್ದರು ಯಾರೂ ಉತ್ತರ ಕೊಡಲಿಲ್ಲ. ಆಗ ನಾನು ಎದ್ದು ಬಂದು ಈ 'ಅಪರಾಧ'ವನ್ನು ಮಾಡಿದವ ನಾನೇ ಎಂದು ಹೇಳಿದೆ.

"ಇವರ ನಂಬರ ಬರೆದುಕೊಂಡು ನಾಳೆ ಇವರನ್ನು 'ಪೇಶಿ' (ಖಟ್ಲೆ)ಗೆ ತೆಗೆದುಕೊಂಡು ಬನ್ನಿ" ಎಂದು ಆಜ್ಞಾಪಿಸಿದರು. ಅವರಿಗೆ ನಮ್ಮ ಅಸಹಾಯ ಪರಿಸ್ಥಿತಿಯನ್ನು ತಿಳಿಸಲು ಯತ್ನಿಸಿದೆ. ಅವರು ಯಾವುದನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. "No ! No ! No ! You have committed an offence for which you shall be punished" (ನೀನು ಅಪರಾಧವನ್ನು ಮಾಡಿರುವೆ. ಅದಕ್ಕೆ ತಕ್ಕ ಶಿಕ್ಷೆಯನ್ನು ಕೊಡಲಾಗುವುದು ಎಂದು ಗೊಣಗಿದರು) "ಒಳ್ಳೆಯದು ನಾನು ಅದನ್ನು ಸಂತೋಷದಿಂದ ಸ್ವೀಕರಿಸುವೆ" ಎಂದೆ.

ಈ ಮಧ್ಯೆ ನಮ್ಮ ಇಷ್ಟಕಾರ್ಯವು ಮಾತ್ರ ಆಗಿತ್ತು. ಅವರೆಲ್ಲ ಅಲ್ಲಿ ನಿಂತಾಗಲೇ ಐದೂ ಜನರ ರೊಟ್ಟಿ ಪಲ್ಲೆ ಎಲ್ಲವೂ ಬಂದೇ ಬಿಟ್ಟಿತು. ನಮಗೆಲ್ಲ ತುಂಬಾ ಆಶ್ಚರ್ಯ ಮತ್ತು ಒಂದು ವಿಧವಾಗಿ ಸಮಾಧಾನವಾಯಿತು. ಆದರೆ, ನಾಳೆ ಏನು ಕಾದಿದೆಯೋ ಎಂಬ ಬಗ್ಗೆ ಎಲ್ಲರಿಗೂ ಕಳವಳವಾಗಿತ್ತು.

ಮರುದಿನ ಯಥಾಪ್ರಕಾರ ನನ್ನನ್ನು ನಿತ್ಯದ ಕೆಲಸಕ್ಕೆ ಹೋಗಲು ಬಿಡಲಿಲ್ಲ. ಎಲ್ಲರೂ ಕೆಲಸಕ್ಕೆ ಹೋದರು, ನಾನೊಬ್ಬನೇ ಉಳಿದೆ. ಮುಂದೆ ಒಂಭತ್ತು ಗಂಟೆಗೆ ಓರ್ವ ಪೊಲೀಸ್ ಬಂದು ನನ್ನನ್ನು ಕರೆದೊಯ್ದು, ಖಟ್ಲೆಗೆಂದೇ ಡೆಪ್ಯುಟಿ ಜೇಲರ್ ಗೋರೆ ಅವರ ಮುಂದೆ ನಿಲ್ಲಿಸಿದ. ನನಗೆ ಗೊತ್ತಿಲ್ಲದ ಯಾವುದೋ ಕಾರಣದಿಂದ ಪ್ರಕರಣವು ಅಲ್ಲಿಗೆ ಮುಕ್ತಾಯವಾಯಿತು. ಮುಂದೆ 1942 ರಲ್ಲಿ ಮಗಳು ಹುಟ್ಟಿದಾಗ 'ಭಾರತಿ' ಎಂದು ಹೆಸರಿಡಲು ಈ ಘಟನೆಯೇ ಪ್ರೋತ್ಸಾಹಿಸಿದ್ದು.

ಹೀಗೆ ದಿನಗಳು ಉರುಳುತ್ತಲಿದ್ದವು. ದಿನಾಲು ಒಂದಿಲ್ಲೊಂದು ಸಂಘರ್ಷ ಇದ್ದೇ ಇರುತ್ತಿತ್ತು. ಒಮ್ಮೆ ನಮ್ಮ ಬ್ಯಾರಕ್ಕಿನಲ್ಲಿ ತುಂಬಾ ತಗಣಿಯ ಕಾಟವಾಯ್ತು. ಇದು ಹೇಗೋ ಪತ್ರಿಕೆಯಲ್ಲಿ ಪ್ರಕಟವಾಯ್ತು. ಕೂಡಲೇ ಕ್ರಮ ಕೈಗೊಂಡರು. ಅಂತೂ ಕಣ್ಮುಚ್ಚಿ ಕಣ್ತೆಗೆಯುವುದರಲ್ಲಿಯೇ ನನ್ನ ಶಿಕ್ಷೆಯ ಅವಧಿ ಮುಗಿದು ಬಿಡುಗಡೆಯ ದಿನ ಬಂದೇ ಬಿಟ್ಟಿತು. ಇಷ್ಟು ಬೇಗ ಹೊರಗೆ ಹೋಗಲು ನನಗೆ ಒಂದು ಬಗೆಯ ಬೇಜಾರಾಗಿತ್ತು. ಹಿಂದಿನ ದಿನವೇ

ನನ್ನ ಸಂಗಡಿಗರೆಲ್ಲ ಸೇರಿ ಬೀಳ್ಕೊಟ್ಟರು. ಅದರಂತೆ ಜೇಲ್ ಕಛೇರಿಯ ಕಾರ್ಕೂನರೂ ಸೇರಿ 'ಪಾರ್ಟಿ' ಕೊಟ್ಟರು. ಅಂತೂ ಪ್ರಥಮ ಸಲ ಜೇಲಿನಿಂದ ಬಿಡುಗಡೆಯಾಗಿ 15-9-1941 ರಂದು ಧಾರವಾಡಕ್ಕೆ ಬಂದೆ. ಅಲ್ಲಿ ನನಗೆ ನಿರಾಶೆ ಕಾದಿತ್ತು. ಧಾರವಾಡದ ಮನೆ ಖಾಲಿಮಾಡಿ ಶಕುಂತಲಾ ಮಗುವಿನೊಂದಿಗೆ ಬಾಗಲಕೋಟೆಯ ತನ್ನ ಅಣ್ಣನ ಮನೆಗೆ ಹೋಗಿದ್ದಳು. 'ಮಗನ ಆರೋಗ್ಯ ತುಂಬಾ ಹದಗೆಟ್ಟಿದೆ, ಬೇಗ ಬನ್ನಿ' ಎಂದು ತಂತಿಯೂ ಕಾದಿತ್ತು. ಕೂಡಲೇ ನಾನು ಬಾಗಲಕೋಟೆಗೆ ಹೊರಟೆ. ಅಷ್ಟರಲ್ಲಿ ಮಗ ಕಣ್ಮುಚ್ಚಿದ್ದ.

ಅಂತೂ ನಾನು ಜೇಲಿಗೆ ಹೋಗುವುದನ್ನು ನೋಡಿ ತಂದೆ ಕಣ್ಮುಚ್ಚಿದ್ದರೆ, ಬಿಡುಗಡೆಯ ವಿಷಯವನ್ನು ತಿಳಿಸಲು ಓಡಿಬಂದಾಗ ಮಗ ಇಹಲೋಕ ಯಾತ್ರೆ ಮುಗಿಸಿದ್ದ. ಈ ಕಠೋರ ಸತ್ಯವನ್ನು ಎದುರಿಸುವುದೇ ಅಸಾಧ್ಯವೆನಿಸುತ್ತಿತ್ತು.

# ಚಲೇಜಾವ್ ಚಳುವಳಿಯ ಪ್ರಾರಂಭ

1942 ಅಗಸ್ಟ್ ತಿಂಗಳ ಕ್ರಾಂತಿಯ ಕಾಲ. ಎರಡನೇ ಜಾಗತಿಕ ಮಹಾಯುದ್ಧದ ಕಿಡಿಗಳು ಎಲ್ಲ ಕಡೆಗೆ ಹಾರುತ್ತಲಿದ್ದವು. ಭಾರತದ ಜನತೆಯನ್ನು ಕೇಳದೇ ಬ್ರಿಟಿಷರು ಭಾರತವನ್ನು ಯುದ್ಧಕ್ಕೆ ಎಳೆದಿದ್ದರು. ಕಾಂಗ್ರೆಸ್ಸು ಇದಕ್ಕೆ ಒಪ್ಪಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟರೆ ಈ ಯುದ್ಧದಲ್ಲಿ ನೆರವಾಗುವುದಾಗಿ ಘೋಷಿಸಿತ್ತು. ಆದರೆ ಅದಕ್ಕೆ ಬ್ರಿಟಿಷರು ಸಿದ್ಧರಿರಲಿಲ್ಲ.

ಈ ಸನ್ನಿವೇಶದಲ್ಲಿ ಅಗಸ್ಟ್ 7, 8 ರಂದು ಮುಂಬೈನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಭೆಯನ್ನು ಕರೆಯಲಾಗಿತ್ತು. ಕರ್ನಾಟಕದಿಂದ ಅನೇಕ ಕಾರ್ಯಕರ್ತರು ಬಂದಿದ್ದರು. ಶಂಕರ ಕುರ್ತಕೋಟಿ ನಾನು ಕೂಡಿಯೇ ಹೋಗಿದ್ದೆವು. ನಮ್ಮನ್ನು ಆರ್ಯನಿವಾಸ ಹೊಟೇಲಿನಲ್ಲಿ ಇಳಿಸಲಾಗಿತ್ತು. ನಮ್ಮ ಸಂಗಡ ಕಮಲಾದೇವಿ, ಶ್ರೀನಿವಾಸ ಮಲ್ಯ, ಹುಕ್ಕೇರಿಕರ, ಕರಮರಕರ, ದಿವಾಕರ, ಚೆನ್ನಬಸಪ್ಪ ಅಂಬಲಿ ಮೊದಲಾದವರು ಬಂದಿದ್ದರು. ಗವಾಲಿಯ ಟ್ಯಾಂಕ್ ಮೈದಾನದಲ್ಲಿ ಈ ಸಭೆ ಸೇರಿತ್ತು. ರಾಷ್ಟ್ರದ ಮುಖಂಡರೆಲ್ಲ ಬಂದಿದ್ದರು. ಅಗಸ್ಟ್ 8 ರಂದು ಮಧ್ಯರಾತ್ರಿಯಲ್ಲಿ Quit India (ಭಾರತ ಬಿಡಿರಿ) ಗೊತ್ತುವಳಿ ಸರ್ವಾನುಮತದಿಂದ ಸ್ವೀಕಾರವಾಯ್ತು. ಇದರ ಮುಖಂಡತ್ವವನ್ನು ಮಹಾತ್ಮಾಗಾಂಧೀ ಅವರಿಗೇ ವಹಿಸಿಕೊಡಲಾಗಿತ್ತು. ಮರುದಿನ ಅಂದರೆ 9-8-1942 ರಂದು ಬೆಳಿಗ್ಗೆ ಎಂಟು ಗಂಟೆಗೆ ಬಿರ್ಲಾಭವನಕ್ಕೆ ಬರಬೇಕೆಂದೂ ಅಲ್ಲಿ ಮಹಾತ್ಮರು ಕಾರ್ಯಕ್ರಮದ ವಿವರಣೆ ನೀಡುವರೆಂದೂ ತಿಳಿಸಲಾಗಿತ್ತು. ಅಂದು ರಾತ್ರಿ ಹನ್ನೆರಡೂವರೆ ಗಂಟೆಗೆ ನಮ್ಮ ಬಿಡಾರಕ್ಕೆ ಬಂದೆವು.

ಮರುದಿನ ಬೆಳಿಗ್ಗೆ ಬಿರ್ಲಾಭವನಕ್ಕೆ ಹೋಗುವ ಸಿದ್ಧತೆಗೆಂದು ದೂರವಾಣಿಯಲ್ಲಿ ಮಾತನಾಡಲು ಯತ್ನಿಸಿದೆವು. ಒಂದು ಕಡೆಗೂ ಫೋನ್ ಹತ್ತಲಿಲ್ಲ. ಅಂತೂ ಬೆಳಿಗ್ಗೆ ಆರೂವರೆ ಗಂಟೆಗೆ ಸಿದ್ಧವಾಗಿ ಹೊಟೇಲ್ ಹೊರಗೆ ಬಂದೆವು. ನಮಗೇನೋ ಅಲ್ಲಿ ವಿಚಿತ್ರವಾಗಿ ಕಾಣಹತ್ತಿತ್ತು. ತುಸು ಮುಂದಕ್ಕೆ ಹೋಗುವುದರೊಳಗೆ ವೃತ್ತಪತ್ರವನ್ನು ಕೈಗೆತ್ತಿಕೊಂಡಾಗ "ಮುಖಂಡರ ಮಧ್ಯರಾತ್ರಿ ಕೈದು" ಎಂಬ ಶಿರೋನಾಮೆ ನೋಡಿದ ಮೇಲೆ ಎಲ್ಲವು ಅರ್ಥವಾಯ್ತು.

ಅಷ್ಟರಲ್ಲಿ ಅಲ್ಲಲ್ಲಿ ಸದ್ದು ಕೇಳಿಸಹತ್ತಿತು. ಜನರೆಲ್ಲ 'ಕ್ರಾಂತಿ ಪ್ರಾರಂಭವಾಯ್ತು' ಎಂದು ಮಾತನಾಡುತ್ತಿದ್ದರು. ವಾಹನಗಳ ಓಡಾಟ ನಿಂತಿತ್ತು. ಎತ್ತ ನೋಡಿದರೂ ಮೆರವಣಿಗೆ 'ಭಾರತದಿಂದ ತೊಲಗಿರಿ' (Quit India) ಎಂಬ ಘೋಷಣೆ ಕೇಳಿಬರುತ್ತಿತ್ತು. ತಂತಿ ಕಂಬಗಳು ಬಗ್ಗಿದ್ದವು. ಮಾರ್ಗದಲ್ಲಿ ಗಿಡಗಳ ಟೊಂಗಿ ಹಾಗೂ ದೊಡ್ಡ ದೊಡ್ಡ ಕಲ್ಲುಗಳನ್ನು ಇಡಲಾಗಿತ್ತು.

ಅಂಚೆಡಬ್ಬಿಗಳು ಮಾರ್ಗದಲ್ಲಿ ಹೊರಳಾಡುತ್ತಲಿದ್ದವು. ಈ ಕಾರ್ಯಕ್ರಮವನ್ನು ಜನತೆಗೆ ಕೊಟ್ಟವರಾರು ? ಎಂಬುದೇ ನಮಗೆ ತಿಳಿಯಲಿಲ್ಲ. ಸಾಲದ್ದಕ್ಕೆ ಆಗ ನನಗೆ ಮುಂಬೈ ಪರಿಚಯ ಅಷ್ಟೊಂದು ಇರಲಿಲ್ಲ.

ಹೇಗೋ ವರ್ತಮಾನ ತಿಳಿಯಿತು. ಸಂಜೆ 4 ಗಂಟೆಗೆ ಮಾತುಂಗಾದಲ್ಲಿಯ ಡಾ. ಜೋಶಿಯವರ ಮನೆಯಲ್ಲಿ ಕರ್ನಾಟಕ ಕಾರ್ಯಕರ್ತರ ಸಭೆ ಇಡಲಾಗಿತ್ತು. ಅಲ್ಲಿಗೆ ಕಷ್ಟಪಟ್ಟು ನಾವು ಹೋದೆವು. ಆಗ ಅಲ್ಲಿ ದಿವಾಕರ, ಹುಕ್ಕೇರಿಕರ, ಕರಮರಕರ, ಚೆನ್ನಬಸಪ್ಪ ಅಂಬಲಿ, ಮೊಹರೆ ಹನುಮಂತರಾವ ಮತ್ತಿತರ ಕಾರ್ಯಕರ್ತರು ಸೇರಿದ್ದರು. ಕಾರ್ಯಕ್ರಮದ ಮತ್ತು ಸಂಘಟನೆಯ ಬಗ್ಗೆ ತುಂಬಾ ಚರ್ಚೆಯಾಯ್ತು. ಅಷ್ಟರಲ್ಲಿ ಒಬ್ಬರು, ಮಹಾತ್ಮರ ಪಟ್ಟ ಶಿಷ್ಯರಾದ ಕಿಶೋರಲಾಲ ಮಶ್ರುವಾಲಾ ಅವರ ಸಂಪಾದಕತ್ವದಲ್ಲಿ ಹೊರಟ 'ಹರಿಜನ' ಪತ್ರಿಕೆಯನ್ನು ಸಭೆಯ ಮುಂದಿಟ್ಟರು. ಅದರಲ್ಲಿ ಕಾರ್ಯಕ್ರಮದ ಇಣುಕು ನೋಟ ಇತ್ತು. "ಯಾರಿಗೂ ಹಿಂಸೆ ಮಾಡದೇ ಖಾಸಗಿ ಆಸ್ತಿ-ಪಾಸ್ತಿಗಳಿಗೆ ಧಕ್ಕೆ ಹಚ್ಚದೆ ಸರಕಾರದ ಸ್ಥಳಗಳನ್ನು (Seat of power) ಧ್ವಂಸ ಮಾಡಬಹುದು" ಎಂದು ಹೇಳಲಾಗಿತ್ತು. ಇದು ಸಭೆಗೆ ತುಂಬಾ ಮಾರ್ಗದರ್ಶನ ಮಾಡಿದಂತಾಯ್ತು. ಇದು ಮಹಾತ್ಮರದೇ ಕಾರ್ಯಕ್ರಮವೆಂದು ಸ್ವೀಕರಿಸಿ ಕೆಳಗಿನಂತೆ ಕಾರ್ಯಕ್ರಮಗಳನ್ನು ಗೊತ್ತುಮಾಡಲಾಯಿತು.

1. ಖಾಸಗಿ ಆಸ್ತಿ-ಪಾಸ್ತಿಗೆ ಧಕ್ಕೆ ಹಚ್ಚದೆ ಸರಕಾರಿ ಕಟ್ಟಡಗಳನ್ನು (ರೈಲು ನಿಲ್ದಾಣ, ರೆಸ್ಟ್ ಹೌಸ್, ಅಂಚೆ ಕಛೇರಿ) ಧ್ವಂಸ ಮಾಡಬಹುದು
2. ತಂತಿ ಕತ್ತರಿಸಬಹುದು
3. ಕಾರ್ಯಕರ್ತರ ಮೇಲೆ ವಾರಂಟ್ ಹೊರಟರೆ ಅದನ್ನು ತಪ್ಪಿಸಿ ಭೂಗತರಾಗಬಹುದು
4. ಟಪಾಲು ಚೀಲ ಕಸಿಯಬಹುದು
5. ಪೊಲೀಸ್‌ರ ಪೋಷಾಕು ಮತ್ತು ಬಂದೂಕುಗಳನ್ನು ಕಸಿಯಬಹುದು
6. ಗೌಡ - ಶಾನುಭೋಗರ ದಫ್ತರ್ ನಾಶಮಾಡಬಹುದು.

ಎಂದು ಮುಂತಾಗಿ ಗೊತ್ತಾಯಿತು.

ಆಗ ಅಖಿಲ ಭಾರತ ಕಾಂಗ್ರೆಸ್ ಕಛೇರಿ ರಾಮಮನೋಹರ ಲೋಹಿಯಾ ಅವರ ಹಿರಿತನದಲ್ಲಿತ್ತು. ಅದರಂತೆಯೇ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಛೇರಿ ತಾತ್ಪೂರ್ತಿಕವಾಗಿ ಮುಂಬೈಯಲ್ಲಿದ್ದು ಮಾರ್ಗದರ್ಶನ ಮಾಡಬೇಕೆಂದು ಅದಕ್ಕಾಗಿ ಚೆನ್ನಬಸಪ್ಪ ಅಂಬಲಿ ಅವರ ಅಧ್ಯಕ್ಷತೆಯಲ್ಲಿ ಒಂದು ಚಿಕ್ಕ ಕಮಿಟಿ ನೇಮಿಸಲಾಗಿತ್ತು. ದಿವಾಕರರು ಅದರ ಕಾರ್ಯದರ್ಶಿಗಳು. ಕರಮರಕರ, ಹುಕ್ಕೇರಿಕರ, ಶ್ರೀನಿವಾಸ ಮಲ್ಯರವರು ಸಹಾಯಕರು. ಕಛೇರಿಯ ಹೊಣೆಗಾರಿಕೆಯನ್ನು

ನರಸಿಂಹ ದಾಬಡೆ ವಹಿಸಬೇಕೆಂದು ಗೊತ್ತಾಯಿತು. ಆಗ ಮುಂಬೈಯಲ್ಲಿಯೇ ಇದ್ದ ಸತ್ಯಬೋಧ ಸಿಂಗೀತ ಮತ್ತು ಆರ್. ಶ್ರೀನಿವಾಸರಾವ ಅವರು ನನಗೆ ಸಹಾಯ ಮಾಡಬೇಕೆಂದೂ ನಿರ್ಣಯಿಸಲಾಯ್ತು. ಆ ಪ್ರಕಾರ ಕಾರ್ಯ ಪ್ರಾರಂಭವಾಯ್ತು. ಅಂತೂ ನಮ್ಮ ಕಛೇರಿ ಒಂದೆರಡು ಕಡೆ ಸುತ್ತಾಡಿ ಕಾಳಬಾದೇವಿ ದೇವಸ್ಥಾನದಲ್ಲಿಯ ಒಂದು ಕತ್ತಲೆ ಕೋಣೆಗೆ ಸ್ಥಳಾಂತರವಾಯ್ತು. ಅಲ್ಲಿ ಕರಮರಕರ, ಹುಕ್ಕೇರಿಕರ ಮತ್ತು ನಾನು ಇರುತ್ತಿದ್ದೆವು. ನಮ್ಮ ಪಕ್ಕದಲ್ಲಿಯೇ ಗಾಂಧೀಚರಿತ್ರೆ ಬರೆಯುತ್ತಿದ್ದ ತೆಂಡೂಲ್ಕರ್‌ರವರು ವಾಸಿಸುತ್ತಿದ್ದರು. ನಮ್ಮೆಲ್ಲರ ಮೇಲೆ ವಾರಂಟ್ ಹೊರಟಿದ್ದು ಪತ್ರಿಕೆಯಲ್ಲಿ ಪ್ರಕಟವಾಯ್ತು. ಅನಿವಾರ್ಯವಾಗಿ ನಾವೆಲ್ಲರೂ ಭೂಗತರಾದೆವು.

ಅಂದಿನ ನಮ್ಮ ಕಛೇರಿಯಲ್ಲಿ ಒಂದು ಟೈಪ್‌ರೈಟರ್ ಮತ್ತು ಸೈಕ್ಲೋಸ್ಟೈಲ್ ಯಂತ್ರ ಇದ್ದವು. ವಿವರವಾದ ಕಾರ್ಯಕ್ರಮಗಳನ್ನು ಸೈಕ್ಲೋಸ್ಟೈಲ್ ಮಾಡಿ ಪ್ರಾಂತದಲ್ಲಿಯ ಎಲ್ಲ ಕಾರ್ಯಕರ್ತರಿಗೂ ಕಳಿಸಲಾಯ್ತು. ಕೆಲವೆಡೆ ಪ್ರತ್ಯಕ್ಷ ಹೇಳಿಕೆಯೂ ಕೊಡಲಾಯ್ತು. ಈ ಕಾರ್ಯಕ್ರಮಗಳ ಸುದ್ದಿ ತಲುಪುತ್ತಲೇ ವಿದ್ಯುತ್ ಸ್ವಿಚ್ ಹಾಕಿದಂತೆ ಕರ್ನಾಟದಲ್ಲಿ ವಿಧ್ವಂಸಕ ಕಾರ್ಯಕ್ರಮಗಳು ಪ್ರಾರಂಭವಾದವು. ಕಾರ್ಯಕರ್ತರು ಹೇಗೋ ಮುಂಬೈಗೆ ಬಂದು ದಿವಾಕರ, ಹುಕ್ಕೇರಿಕರ ಅವರನ್ನು ಕಂಡು ಚರ್ಚಿಸಿ ಮಾರ್ಗದರ್ಶನ ಪಡೆಯುತ್ತಿದ್ದರು.

ಮುಂಬೈಯಲ್ಲಿ ಕಾಂಗ್ರೆಸ್ಸಿಗರೇ ಸಂಘಟಿಸಿದ 'ಆಜಾದ್ ರೇಡಿಯೋ' ಕೇಂದ್ರವಿತ್ತು. ಅದರ ಮೂಲಕ ಎಲ್ಲ ವಾರ್ತೆಗಳು ಪ್ರಕಟವಾಗುತ್ತಿದ್ದವು. ಕರ್ನಾಟಕದ ಸುದ್ದಿ ಪತ್ರಗಳನ್ನು ನಾನೇ ಅಲ್ಲಿ ಕೊಡುತ್ತಿದ್ದೆ. ಅದನ್ನು ಓರ್ವ ಕಾಲೇಜ ವಿದ್ಯಾರ್ಥಿನಿ ಉಷಾ ಮೆಹತಾ ಎಂಬುವವರು ನಡೆಸುತ್ತಿದ್ದರು.

# ಭೂಗತ ದಿನಗಳು

ಭೂಗತರು ಹೇಗಿರುವರು ? ಅವರ ಪೋಷಾಕು ಏನು ? ಹೇಗೆ ಅಡ್ಡಾಡುತ್ತಿದ್ದರು ? ಎಂಬ ಬಗ್ಗೆ ಅನೇಕರಲ್ಲಿ ಕುತೂಹಲ. ನನ್ನ ಮೊಮ್ಮಗಳಂತೂ ಒಮ್ಮೆ ಕೇಳಿಯೇ ಬಿಟ್ಟಳು. 'ನೀವು ಭೂಮಿಯ ಕೆಳಗೆ ಹೇಗಿರುತ್ತಿದ್ದಿರಿ ?' ಭೂಗತ ಅಂದರೆ ಸರ್ಕಾರದವರು ಕೈದು ಮಾಡುವ ವಾರಂಟ್ ಹೊರಟಾಗ ಅದನ್ನೂ, ಪೊಲೀಸ್‌ರ ವಕ್ರದೃಷ್ಟಿಯನ್ನೂ ತಪ್ಪಿಸಿ ಪ್ರತ್ಯಕ್ಷ ಕಾರ್ಯನಿರತರಾಗುವುದೇ ಭೂಗತದ ಅರ್ಥ. ಈ ಚಳುವಳಿಯ ಸಂದರ್ಭದಲ್ಲಿ ಹೀಗೆ ಅನೇಕ ಕಾರ್ಯಕರ್ತರು ಭೂಗತರಿದ್ದರು. ಗ್ರಾಮಾಂತರದಲ್ಲಿ ಈ ಕಾರ್ಯ ಇನ್ನೂ ಸುಲಭ. ಅಲ್ಲಿ ಪೊಲೀಸ್‌ರು ಅಥವಾ ಮಿಲಿಟರಿಯವರು ಬಂದಾಗ್ಗೆ ಮಾತ್ರ ಸರ್ಕಾರದ ಭಾಸವಾಗುತ್ತಿತ್ತು. ಉಳಿದ ವೇಳೆಯಲ್ಲಿ ಭೂಗತ ಕಾರ್ಯಕರ್ತರು ಬಹಿರಂಗವಾಗಿಯೇ ತಿರುಗಾಡುತ್ತಿದ್ದರು.

ಆಗ ನಮ್ಮ ಕಛೇರಿ (ಪ್ರಾಂತಿಕ ಕಾಂಗ್ರೆಸ್) ಮುಂಬೈಯಲ್ಲಿ, ನಮ್ಮೆಲ್ಲರ ಮೇಲೆ ವಾರಂಟ್. ನಮ್ಮನ್ನು ಕೈದು ಮಾಡಲು ಆಗಾಗ್ಗೆ ಪೊಲೀಸ್ ತಂಡ ಬರುತ್ತಿದ್ದ ವರ್ತಮಾನವೂ ನಮಗೆ ಹೇಗೋ ತಿಳಿಯುತ್ತಿತ್ತು. ನಾವೆಲ್ಲ ಬೇರೆ ಹೆಸರನ್ನು ಇಟ್ಟುಕೊಂಡಿದ್ದೆವು. ದಿವಾಕರರು 'ಪಾಂಡುರಂಗ' ಎಂದೂ, ಹುಕ್ಕೇರಿಕರರವರು 'ಶ್ರೀನಿವಾಸ' ಎಂದೂ, ಕುರ್ತಕೋಟಿಯವರು 'ಶ್ರೀಧರ' ಎಂದೂ, ದಾಬಡೆ 'ಪ್ರಕಾಶ' ಎಂದೂ, ಚೆನ್ನಬಸಪ್ಪ ಅಂಬಲಿ 'ಶ್ರೇಷ್ಠಿ' ಎಂದೂ ಹೆಸರಿಟ್ಟುಕೊಳ್ಳಲಾಗಿತ್ತು. ವೇಷಭೂಷಣದಲ್ಲಿಯೂ ವ್ಯತ್ಯಾಸವಿತ್ತು. ಮೊದಲಿನಂತೆ ಶುಭ್ರ ಬಿಳಿ ಪೋಷಾಕು ಹಾಕದೆ ಸಾಮಾನ್ಯ ನಾಗರಿಕನಂತೆ ಶರ್ಟು, ಕರಿಟೊಪ್ಪಿಗೆ ಅಥವಾ ಹ್ಯಾಟ್, ಕಣ್ಣಿಗೆ ಗಾಗಲ್. ಹೀಗಿದ್ದರೂ ಕೆಲವರು ಖಾದಿ ಬಿಟ್ಟಿರಲಿಲ್ಲ. ಸಾಮಾನ್ಯವಾಗಿ ಮುಂಬೈಯಲ್ಲಿರುವಾಗ ಹಗಲು ಹೊರಬೀಳುತ್ತಿರಲಿಲ್ಲ. ಏನೇ ಸಂಪರ್ಕ ಮಾಡಿಕೊಳ್ಳುವದಿದ್ದರೂ ಬೆಳಿಗ್ಗೆ 4-30 ರಿಂದ 6-30 ರ ವರೆಗೆ ಮತ್ತು ಸಂಜೆ 7 ರಿಂದ 10-30 ರ ವರೆಗೆ. ಕಾಳಬಾದೇವಿಯ ಗುಡಿಯ ಒಂದು ಕೋಣೆಯಲ್ಲಿ ನಮ್ಮ (ಹುಕ್ಕೇರಿಕರ, ಕರಮರಕರ, ದಾಬಡೆ) ವಾಸ. ನಮ್ಮ ಸಾಮಾನುಗಳೆಂದರೆ ಇದ್ದಲಿ ಒಲಿ, ಕಸಬರಿಗೆ, 3 ಚಾಪೆ, ಒಂದೆರಡು ಪಾತ್ರೆ. ನಾವು ಮಧ್ಯಾಹ್ನ ಊಟಕ್ಕೆ ಹೋಗುತ್ತಿರಲಿಲ್ಲ, ಅಲ್ಲಿಯೇ ಮನೆಯ ಮುಂದೆ ಬರುತ್ತಿದ್ದ ಹಾಲು, ಬ್ರೆಡ್ಡು, ಬಾಳೆಹಣ್ಣು ಇತ್ಯಾದಿ ಮಾತ್ರ ಆಹಾರ. ಅಲ್ಲದೆ, ನಾನು ಹೊರಗೆ ಹೋದಾಗ ತಂದ ಶೇಂಗಾ, ಬೆಲ್ಲ ನಮ್ಮ ಆಹಾರವಾಗಿತ್ತು. ಅದು ಚಾಳಿನ ನಮೂನೆ ಇದ್ದುದರಿಂದ ಬೆಳಿಗ್ಗೆ ಪಾಳೆಯ ಮೇಲೆ ಸಂಡಾಸಕ್ಕೆ ಹೋಗುವದು ಮತ್ತು ತಣ್ಣೀರ ಸ್ನಾನ. ನಮ್ಮ ಬಟ್ಟೆ ನಾವೇ ಒಗೆದುಕೊಳ್ಳುತ್ತಿದ್ದೆವು. ಆಗ ನಮ್ಮ ಪ್ರತಿಯೊಬ್ಬರ ತಿಂಗಳ ವೆಚ್ಚ 45/- ರೂ. ಮೀರಬಾರದೆಂಬ ಕಟ್ಟುಪಾಡು ನಾವೇ ಹಾಕಿಕೊಂಡಿದ್ದೆವು.

ನಮ್ಮ ಪತ್ರ ವ್ಯವಹಾರ ನೇರವಿರುತ್ತಿರಲಿಲ್ಲ. ಯಾರ ಮುಖಾಂತರವಾದರೂ ಟಪಾಲು ತರಿಸುವುದು ಮತ್ತು ಕಳಿಸುವುದು. ಕಾಳಬಾದೇವಿಯಲ್ಲಿಯೇ 'ಹಂದಿಗುಂದ' ಅನ್ನುವವರ ಒಂದು ಅಡಕಿ ಅಂಗಡಿ ಇತ್ತು. ಅವರು ವಿಸಾಪೂರ ಜಿಲ್ಲೆಯವರು. ನಮ್ಮ ಎಲ್ಲ ಟಪಾಲು ಅವರ ಮೂಲಕವೇ ಬರುತ್ತಿದ್ದವು. ಇವರ ಹೊರತು ನೆರವಾಗುವವರೆಂದರೆ ದಾದರ್‌ದಲ್ಲಿದ್ದ ಉಪಾಧ್ಯೆ, ಮಾತುಂಗಾದಲ್ಲಿದ್ದ ಡಾ. ಸದುಜೋಶಿ, ಕೆನರಾ ಬ್ಯಾಂಕ್‌ನ ಪೈ ಇವರೇ ಮೊದಲಾದವರು. ದಿವಾಕರರು ಗಿರಗಾಂವ್‌ದ ಒಂದು ಕೋಣೆಯಲ್ಲಿ ವಾಸಿಸುತ್ತಿದ್ದರು. ದಿನಾಲು ನಾವು ತಪ್ಪದೇ ಭೇಟಿಯಾಗುತ್ತಿದ್ದೆವು. ಯಾರಾದರೂ ಕಾರ್ಯಕರ್ತರು ಬಂದರೆ ಹೇಗೋ ನಮಗೆ ತಿಳಿಯುತ್ತಿತ್ತು. ಅವರು ಬೆಳಿಗ್ಗೆ 5 ಗಂಟೆಗೆ ಚೌಪಾಟಿಯ ಮೇಲೆ ಒಂದು ನಿರ್ದಿಷ್ಟ ಸ್ಥಳದಲ್ಲಿ ದಿವಾಕರ, ಹುಕ್ಕೇರಿಕರ ಅವರನ್ನು ಕಂಡು ತಮ್ಮ ವರದಿಯನ್ನು ಒಪ್ಪಿಸಿ ಮುಂದಿನ ಮಾರ್ಗದರ್ಶನ ಪಡೆಯುತ್ತಲಿದ್ದರು. ಶಕ್ಯವಾದ ಮಟ್ಟಿಗೆ ಧನಸಹಾಯ ಪಡೆಯುತ್ತಲಿದ್ದರು.

ಇನ್ನೊಂದು ನಮ್ಮ ಮಹತ್ವದ ಸಂಪರ್ಕ ಸಾಧನವೆಂದರೆ ಮೊಹರೆ ಹನುಮಂತರಾಯರದು. ಅವರು ತಮ್ಮ ಪತ್ರಿಕಾ ಸಭೆಗೆ ಪ್ರತಿ ತಿಂಗಳೂ ಮುಂಬೈಗೆ ಬರುತ್ತಿದ್ದರು. ಅವರು ಬಂದಾಗ್ಗೆ ಕರ್ನಾಟಕದ ವಿವರಗಳನ್ನೆಲ್ಲ ಕೊಡುತ್ತಿದ್ದರಲ್ಲದೆ, ಇಲ್ಲಿಂದ ಸೂಚನೆ ಹೊತ್ತುಕೊಂಡು ಹೋಗಿ ಅಲ್ಲಿ ತಲುಪಿಸುತ್ತಿದ್ದರು. ಇದರ ಹೊರತಾಗಿ ವೈಯಕ್ತಿಕವಾಗಿ ನಮ್ಮ (ಕರಮರಕರ, ಹುಕ್ಕೇರಿಕರ, ದಾಬಡೆ) ಮನೆಗಳಿಗೂ ಹೋಗಿ ಅಲ್ಲಿಯ ಸಮಾಚಾರಗಳನ್ನು ತರುತ್ತಿದ್ದರು. ಅದರಂತೆ ನಮ್ಮ ಸಮಾಚಾರವನ್ನು ಮನೆಗೆ ತಲುಪಿಸುತ್ತಿದ್ದರು.

ಒಮ್ಮೆ ಸರ್ಕಾರದ ಪ್ರಕಟಣೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. "ಭೂಗತ ಕಾರ್ಯಕರ್ತರು ನಿರ್ದಿಷ್ಟ ವೇಳೆಯಲ್ಲಿ ಹಾಜರಾಗದಿದ್ದರೆ ಅವರ ಆಸ್ತಿ-ಪಾಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಲಾಗುವುದು" ಎಂದಿತ್ತು. ಇದನ್ನು ನೋಡಿ ಹುಕ್ಕೇರಿಕರರವರು ವಿಚಲಿತರಾದರು. ಅವರ ಕುಟುಂಬಕ್ಕೆ ಜೀವನಾಧಾರ ಅವರ ಮುದ್ರಣಾಲಯ. ಅದೇ ಹೋದರೆ ಮನೆತನ ನಡೆಯುವುದು ಹೇಗೆ ? ಎಂಬ ಚಿಂತೆಯುಂಟಾಗಿ ತಾವು ಹಾಜರಾಗಬೇಕೆಂದು ಹೊರಟುನಿಂತರು. ವಿಕ್ಟೋರಿಯಾದಲ್ಲಿ ಸಾಮಾನು ಹಾಕಿ ಹೊರಡಬೇಕೆನ್ನುವಷ್ಟರಲ್ಲಿ ದಿವಾಕರರು ಬಂದು ಸಾಮಾನುಗಳನ್ನೆಲ್ಲ ಹೊತ್ತುತಂದು ಒಳಗಿಟ್ಟು "ಮಾಸ್ತರ, (ಹುಕ್ಕೇರಿಕರ ಅವರಿಗೆ ಮಾಸ್ತರ ಅನ್ನುತ್ತಿದ್ದೆವು) ಇದು ಕೊನೆಯ ಹೋರಾಟ ಅಂತ ಗಾಂಧೀ ಹೇಳ್ಯಾರ. ಏನೇ ತ್ಯಾಗ ಮಾಡುವ ಪ್ರಸಂಗ ಬಂದರೂ ಮಾಡಿ ಅನುಭವಿಸೋಣ" ಎಂದು ಮುಂತಾಗಿ ಹೇಳಿ ಅವರನ್ನು ಪರಿವರ್ತನೆಗೊಳಿಸಿ "ಏನೇ ಆದರೂ ನಾನು ಸರ್ಕಾರಕ್ಕೆ ಶರಣಾಗುವುದಿಲ್ಲ" ಎಂದು ಅವರ ಬಾಯಿಂದಲೇ ಹೇಳುವಂತೆ ಮಾಡಿದರು.

## ಮಿಲಿಟರಿಯ ಕೈದು

ಅದೇ ಕ್ವಿಟ್ ಇಂಡಿಯಾ ಆಂದೋಲನ ಪ್ರಾರಂಭದ ದಿವಸ. ನಾವು ದಾದರ್‌ನಲ್ಲಿ ಇರುತ್ತಿದ್ದೆವು. ಒಂದು ಸಂದೇಶ ತೆಗೆದುಕೊಂಡು ಕಾಳಬಾದೇವಿಗೆ ಹೋಗಿಬರುವದಿತ್ತು. ಮಧ್ಯಾಹ್ನ

ಮೂರು ಗಂಟೆಗೆ ಹೊರಟೆ. ಹೋಗಿ ಕೆಲಸ ಪೂರ್ತಿ ಮಾಡಿಕೊಂಡು ವಾಪಸ್ ದಾದರಕ್ಕೆ ಬಂದಾಗ ಅಲ್ಲಿಯ ಭಯಂಕರ ದೃಶ್ಯ ನೋಡಿ ನಾನೇನು ಮಾಡಬೇಕೆಂಬುದೇ ತಿಳಿಯದಾಯ್ತು. ಮಿಲಿಟರಿ ಟ್ಯಾಂಕುಗಳು ಬೀದಿಯಲ್ಲಿ ತಿರುಗಾಡುತ್ತಿದ್ದವು. ಮಿಲಿಟರಿಯವರು ಹೆಚ್ಚಾಗಿ ವಿದ್ಯಾರ್ಥಿಗಳ ಬೆನ್ನಟ್ಟಿ ಅವರನ್ನು ಬಂಧಿಸುತ್ತಿದ್ದರು. ನಾನು ದಾದರ್ ಸ್ಟೇಶನ್‌ದಿಂದ ನಮ್ಮ ವಸತಿ ಸ್ಥಾನಕ್ಕೆ ಹೋಗುವಾಗ ಓರ್ವ ಮಿಲಿಟರಿಯವ ನನ್ನ ಬೆನ್ನುಹತ್ತಿದ. ಆಗ ನನ್ನ ವಯಸ್ಸು 27, ಸಾಧಾರಣ ವಿದ್ಯಾರ್ಥಿಯಂತೆ ಕಾಣುತ್ತಲಿದ್ದೆ. ನಾನು ಒಂದು ಕಟ್ಟಡವನ್ನು ಹೊಕ್ಕು ಎರಡನೆಯ ಅಂತಸ್ತಿನ ಒಂದು ಮನೆ ಹೊಕ್ಕು ಬಾಗಿಲು ಹಾಕಿಕೊಂಡೆ. ನೇರವಾಗಿ ಆ ಅಧಿಕಾರಿ ಬಾಗಿಲಿಗೆ ಬಂದು ತನ್ನ ಬಂದೂಕದಿಂದ ಬಡಿಯಹತ್ತಿದ. ಬಾಗಿಲು ತೆಗೆದ ಕೂಡಲೇ ನನ್ನನ್ನು ಕರೆದುಕೊಂಡು ತನ್ನ ಜೀಪಿನಲ್ಲಿ ಕೂಡಿಸಿದ. ನಮ್ಮ ಸಂಗಡ 2-3 ಬೇರೆ ವಿದ್ಯಾರ್ಥಿಗಳೂ ಇದ್ದರು. ತಾಸುಗಟ್ಟಲೇ ಈ ಬೆನ್ನು ಹತ್ತುವ ಕೆಲಸ ನಡೆಯಿತು. ಆಗ ಆಕಾಶವಾಣಿ 'ವ್ಹಿಪಿಂಗ್ ಆ್ಯಕ್ಟ್ (ಫಟಗೀ) ಜಾರಿಯಲ್ಲಿ ಬಂದಿದೆ" ಎಂದು ಕಿರುಚುತ್ತಿತ್ತು. ಇಷ್ಟು ಹೊತ್ತಿಗೆ ಸುಮಾರು 7 ಘಂಟೆಯಾಗಿರಬೇಕು. ಮಾತುಂಗಾ, ದಾದರ್ ಮುಂತಾದ ಲಾಕಪ್ಪಿಗೆ ಕರೆದೊಯ್ದರು. ಅಲ್ಲಿ ಎಳ್ಳಷ್ಟೂ ಸ್ಥಳವಿರಲಿಲ್ಲ. ಆಗ ಜೀಪಿನಲ್ಲಿ ನಮ್ಮ ಸುತ್ತಲೂ ಮಿಲಿಟರಿಯವರೇ ಇದ್ದರು. ಅರ್ಧಗಂಟೆಯ ನಂತರ ನಮ್ಮನ್ನು ಕೊಹಿನೂರ ಮಿಲ್ಲಿನ ಆವಾರದಲ್ಲಿ ಇಳಿಸಿ ಝಡತಿ ಮಾಡಿದರು. ನಮ್ಮ ಹತ್ತಿರ ಇದ್ದ ಬಿದ್ದ ಕಾಗದ ಪತ್ರಗಳನ್ನು ಕೈವಶ ಮಾಡಿಕೊಂಡರು. ಒಳಗೆ ಕುಳಿತ ನಮಗೆಲ್ಲ ಫಟಗೀ ಶಿಕ್ಷೆ ಕೊಡಬಹುದೋ ಏನೋ ಎಂಬ ವಿಚಾರ ಬಂದು ಅದರಲ್ಲಿಯೇ ಮಗ್ನರಾಗಿದ್ದೆವು. ನಂತರ ಉಳಿದವರನ್ನೆಲ್ಲ ಇಳಿಸಿ ನನ್ನೊಬ್ಬನನ್ನೇ ಜೀಪಿನಲ್ಲಿ ಕೂಡಲು ಹೇಳಿದರು. ಮುಂದೇನು ಕಾದಿದೆಯೋ ಎಂಬ ಭೀತಿ ಇತ್ತು. ಅಂತೂ ರಾತ್ರಿ 8 ಘಂಟೆಗೆ ಅವರ ಬಿಡಾರ ತಲುಪಿದೆವು. ಆಗ ಅಲ್ಲಿಯ ಓರ್ವ ಅಧಿಕಾರಿ ನನ್ನನ್ನು ಕರೆದು ಕೆಲವು ಪ್ರಶ್ನೆಗಳನ್ನು ಕೇಳಿದ. ಮುಂದೆ ತಮ್ಮೊಳಗೇ ಚರ್ಚಿಸಿ ನೀವು ಇನ್ನು ಮನೆಗೆ ಹೋಗಬಹುದು ಎಂದು ಹೇಳಿದ. ನನಗೆ ತುಂಬಾ ಆಶ್ಚರ್ಯವಾಯಿತು. ಆದರೂ "ಈಗ ನಾನು ಹೋಗುವುದು ಸಾಧ್ಯವಿಲ್ಲ. ಕರ್ಫ್ಯೂ ಜಾರಿಯಲ್ಲಿದೆ, ನಾಗರಿಕರು ಮಾರ್ಗದಲ್ಲಿ ಅಡ್ಡಾಡುವಂತಿಲ್ಲ. ಈಗ ನಾನೆಲ್ಲಿರುವೆನೆಂಬುದೇ ನನಗೆ ಗೊತ್ತಿಲ್ಲ. ನನಗೆ ಒಂದು ಕಂಬಳಿ ಕೊಟ್ಟರೆ ಇಲ್ಲಿಯೇ ಮಲಗಿ ಬೆಳಿಗ್ಗೆ ಎದ್ದು ಹೋಗುವೆ" ಎಂದು ಹೇಳಿದೆ. "ಇಲ್ಲಿ ಅದು ಸಾಧ್ಯವಿಲ್ಲ ಬೇಕಾದರೆ ನಾನೇ ನಿಮ್ಮನ್ನು ನಿಮ್ಮ ಸ್ಥಳಕ್ಕೆ ಬಿಟ್ಟು ಬರುವೆ ನಮ್ಮ ಜೀಪು ಹತ್ತಿರಿ" ಎಂದು ಹೇಳಿ ತನ್ನ ಪಕ್ಕದಲ್ಲಿಯೆ ಕೂಡಿಸಿಕೊಂಡು ಮಾತಿಗೆ ಪ್ರಾರಂಭಿಸಿದ. ನನ್ನ ಊರು ಕೇರಿ ಎಲ್ಲ ತಿಳಿದುಕೊಂಡ ಮೇಲೆ ಇದೆಲ್ಲ ಏನು ನಡೆದಿದೆ ? ಎಂದು ಕೇಳಿದ. ಅದಕ್ಕೆ ನಾನು 'ನಿಜವಾಗಿ ಹೇಳಬೇಕೆಂದರೆ ಜನತೆಗೆ ಬ್ರಿಟಿಷ್ ಆಡಳಿತ ಬೇಡವಾಗಿದೆ. ಮೊನ್ನೆ ಇದೇ ಊರಲ್ಲಿ ಕಾಂಗ್ರೆಸ್ ಸಭೆ ಸೇರಿ "ಕ್ವಿಟ್ ಇಂಡಿಯಾ ಗೊತ್ತುವಳಿ ಪಾಸಾಗಿದೆ, ಅದಕ್ಕಾಗಿಯೇ ಈ ಹೋರಾಟ ನಡೆದಿದೆ" ಎಂದು ಮುಂತಾಗಿ ಹೇಳುತ್ತಿರುವಾಗಲೇ 'ನನ್ನ ಸ್ಥಳ ಬಂತು' ಎಂದು ಹೇಳಿ ಆತನ ನಿರೂಪ ತೆಗೆದುಕೊಂಡು ಇಳಿದೆ. "ನಾನು ಈವರೆಗೆ ಯಾಕೆ ಬರಲಿಲ್ಲವೋ" ಎಂಬ ಬಗ್ಗೆ ಮಿತ್ರರೆಲ್ಲ

ಚಿಂತಿತರಾಗಿದ್ದರು. ಅಲ್ಲಿ ನಡೆದ ಸಂಗತಿಯನ್ನೆಲ್ಲ ಕೇಳಿ ಸಮಾಧಾನದ ನಿಟ್ಟುಸಿರು ಬಿಟ್ಟರು. ಹೀಗೆ ನಾಲ್ಕು ತಾಸು ಮಿಲಿಟರಿಯವರ ಅಧೀನದಲ್ಲಿದ್ದು ಮರಳಿ ಬಂದೆ.

ಭೂಗತದ ದಿವಸಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಕರ್ನಾಟಕ (ಹೆಚ್ಚಾಗಿ ಉತ್ತರ ಕರ್ನಾಟಕ) ದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತರು ಆಗಾಗ್ಗೆ ಬರುತ್ತಿದ್ದರು. ಒಂದು ಸಲ ಕಾರ್ಯಕರ್ತರ ಸಭೆಯನ್ನು ಮುಂಬೈಯಲ್ಲಿ ಕರೆಯಲಾಗಿತ್ತು. ಅಲ್ಲಿ ಚರ್ಚಿಸಿದ ಮುಖ್ಯ ವಿಷಯವೆಂದರೆ - "ವಿಧ್ವಂಸಕ ಚಟುವಟಿಕೆಗಳು ಗಾಂಧೀ ಕಾರ್ಯಕ್ರಮದಲ್ಲಿ ಬರುವುದೇ" ಎಂಬುವುದಿತ್ತು. ಆ ಸಮಯಕ್ಕೆ ಧಾರವಾಡದ ಕಡೆಗೆ ನಾಲ್ಕು ಸ್ಟೇಷನ್‌ಗಳು ಒಂದೇ ದಿವಸ ಧ್ವಂಸವಾದ ವರದಿ ಬಂದಿತ್ತು. ಅಲ್ಲದೆ, ಅನೇಕ ಸರಕಾರಿ ಕಟ್ಟಡಗಳು ನಾಶವಾಗಿದ್ದವು. ತಂತಿಗಳು ಕತ್ತರಿಸಲ್ಪಟ್ಟಿದ್ದವು. ಕೆಲವು ಗ್ರಾಮಗಳಲ್ಲಿ ಸರ್ಕಾರವೇ ಇರಲಿಲ್ಲ. ಒಬ್ಬರೇ ಪೊಲೀಸ್‌ರು ಹಳ್ಳಿಗೆ ಬರುತ್ತಿರಲಿಲ್ಲ. ಸರ್ಕಾರಿ ಕಛೇರಿಗಳನ್ನು ಧ್ವಂಸ ಮಾಡಿದರು. ಶಾಲೆಗಳಿಗೆ ಯಾಕೆ ಬೆಂಕಿ ಹಚ್ಚಬೇಕು ? ಎಂಬ ಸಮಸ್ಯೆ ಬಂದಿತು. ತುಂಬಾ ಚರ್ಚೆಯಾಗಿ ಅದೂ ಕೂಡಾ ಒಂದು ವಿಧವಾಗಿ ಸರ್ಕಾರದ ಸ್ಥಳವೇ ಇದ್ದು, ಅದನ್ನು ಧ್ವಂಸ ಮಾಡಬಹುದು ಎಂಬ ನಿರ್ಣಯವಾಯ್ತು. ಆದರೆ ಅಂಥ ಶಾಲೆ ಗುಡಿ-ಗುಂಡಾರದಲ್ಲಿದ್ದರೆ ಮಾತ್ರ ಅದು ಅಪವಾದ ಎಂಬ ಸಾಮಾನ್ಯ ವಿವರಣೆ ಕೊಡಲಾಯ್ತು. ಮುಂದೆ ಪಿಸ್ತೂಲ್ ಬಗ್ಗೆಯೂ ಚರ್ಚೆಯಾಯ್ತು. ಆಗ ಕೆಲವು ಕಾರ್ಯಕರ್ತರ ಹತ್ತಿರ ಪಿಸ್ತೂಲುಗಳಿದ್ದವು. ಈ ಬಗ್ಗೆ ಚರ್ಚೆಯಾಗಿ ಪಿಸ್ತೂಲ್‌ಗಳನ್ನು ಕೇವಲ ಹೆದರಿಸಲಿಕ್ಕೆ ಉಪಯೋಗಿಸಬಹುದು ಎಂಬ ಸೂಚನೆ ಕೊಡಲಾಯ್ತು. ಮುಂದೆ ಇನ್ನೂ ಜಟಿಲ ಸಮಸ್ಯೆ ಬಂತು. ನಮ್ಮ ಪ್ರಾಣದ ಪ್ರಶ್ನೆ ಬಂದಾಗ ನಾವೇನು ಮಾಡಬೇಕು ? ಇದಕ್ಕೆ ಕಟ್ಟುನಿಟ್ಟಾದ ಉತ್ತರ ದೊರೆಯಲಿಲ್ಲ. ಆ ಸಮಯಕ್ಕೆ ಸರಿ ಕಂಡದ್ದನ್ನು ಮಾಡಬಹುದು ಎಂದು ಸೂಚಿಸಲಾಯಿತು. ಅರ್ಥಾತ್ ಅದರ ಉಪಯೋಗ ಮಾಡಬಹುದು ಎಂದು ಪರ್ಯಾಯದಿಂದ ಹೇಳಿದಂತಾಯಿತು. ಅಂದಿನ ಚರ್ಚೆಯಲ್ಲಿ ಕೆಲವು ನಿಷ್ಠಾವಂತರು "ಗಾಂಧೀಜಿ ಹೊರಗಿದ್ದು ಕಾರ್ಯಕ್ರಮ ಕೊಟ್ಟಿದ್ದರು. ನಿಶ್ಚಿತವಾಗಿ ಅವರು ಪಿಸ್ತೂಲ್ ಉಪಯೋಗಿಸಲಿಕ್ಕೆ ಒಪ್ಪಿಗೆ ಕೊಡದೇ ಅಂಥ ಸಂದರ್ಭದಲ್ಲಿ ನಮ್ಮ ಪ್ರಾಣವನ್ನೇ ಕೊಡಬೇಕು" ಎಂದು ಮುಂತಾಗಿ ಹೇಳಬಹುದಿತ್ತು ಎಂದು ವಾದಿಸಿದರು.

ಅಂತೂ ಹೀಗೆಯೇ ಆರು ತಿಂಗಳುಗಳು ಉರುಳಿದವು. ನನಗಂತೂ ಮುಂಬೈ ಕೆಲಸ ಬೇಜಾರು ತಂದಿತ್ತು. ಪ್ರತ್ಯಕ್ಷ ಕ್ಷೇತ್ರದಲ್ಲಿ ಕೆಲಸ ಮಾಡುವ ಇಚ್ಛೆ ತುಂಬಾ ಇತ್ತು. ಆದರೆ ಅದಕ್ಕೆ ನನಗೆ ಒಪ್ಪಿಗೆ ದೊರೆಯಲಿಲ್ಲ. ನಾನು ಮುಂಬೈಗೆ ಬರುವಾಗ ಹೆಂಡತಿ ತುಂಬಿದ ಬಸುರಿ. ನಾವಿದ್ದ ಮನೆ ಖಾಲಿ ಮಾಡಿ ಅದೇ ಮದಿಹಾಳದಲ್ಲಿಯ ತನ್ನ ತವರಿಗೆ ಹೋಗಿದ್ದಳು. ಅಕ್ಟೋಬರ್ ತಿಂಗಳು (31-10-42) ಹೆಣ್ಣುಮಗು ಹೆತ್ತಳೆಂದೂ ಅದಕ್ಕೆ ಶಶಿಕಲಾ ಎಂಬ ಹೆಸರಿಡಲಾಯಿತೆಂದೂ ವರ್ತಮಾನ ಬಂತು. ಆಗ ನಾನು ಅಲ್ಲಿದ್ದ ಮಿತ್ರರಿಗೆ ಸಿಹಿ ತಿಂಡಿ ಕೊಟ್ಟು ಮಗಳ ಹೆಸರು 'ಭಾರತಿ' ಎಂದಿಡಬೇಕೆಂದೇ ಬರೆದೆ. ಮುಂದೆ ಅದೇ ಹೆಸರೇ ರೂಢಿಯಲ್ಲಿ ಬಂದಿತು. ಅಂತೂ

ಕೆಲವು ದಿವಸಗಳ ಮಟ್ಟಿಗೆ ತಾತ್ಪೂರ್ತಿಕವಾಗಿ ಕಛೇರಿಯ ಶಾಖೆಯನ್ನು ಪುಣೆಗೆ ಸ್ಥಳಾಂತರಿಸಬೇಕೆಂದು ಸೂಚಿಸಲಾಯ್ತು.

## ಪುಣೆಯಲ್ಲಿ ಭೂಗತ ಜೀವನ

ಹುಕ್ಕೇರಿಕರ, ದಿವಾಕರ ಅವರು ಪುಣೆಯ ಕೆಲವು ಕಾರ್ಯಕರ್ತರಿಗೆ ಪತ್ರ ಕೊಟ್ಟಿದ್ದರು. ನನಗೆ ಅಲ್ಲಿ ಪರಿಚಯಸ್ಥರೆಂದರೆ ಹುಕ್ಕೇರಿಕರ ಮಾಸ್ತರ, ವಸಂತ ಮತ್ತು ಇನ್ನೊಬ್ಬ ಬಂಡು ಜೋಶಿ ಮತ್ತು ಕೆ. ಆರ್. ಸಂಗಮ. ಆಗ ವಸಂತ ತನ್ನ ಮನೆಯಲ್ಲಿರದೆ ತನ್ನ ಮಾಮಾನ ಮನೆಯಲ್ಲಿರುತ್ತಿದ್ದ. ಎರಡು ಮೂರು ದಿವಸ ಕಷ್ಟಪಟ್ಟು ಡೆಕ್ಕನ್ ಜಮಖಾನಾದಲ್ಲಿ ಒಂದು ಕೋಣೆ ಹುಡುಕಿ ಕೊಟ್ಟ. ತನ್ನ ಆಪ್ತೇಷ್ಟರಿಂದ ಕೆಲವು ಭಾಂಡೆ ಸಾಮಾನು ಕೊಟ್ಟ. ಕೆಲವು ದಿವಸ ಕುರ್ತಕೋಟಿ ನಾನು ಕೂಡಿಯೇ ಇದ್ದೆವು. ಮನೆಯಲ್ಲಿ ಅಡಿಗೆ ಮಾಡಿಕೊಂಡೇ ಊಟ ಮಾಡುತ್ತಿದ್ದೆವು. ಆಗಾಗ್ಗೆ ವಸಂತ, ಸಂಗಮ ಇವರು ಬಂದು ಭೇಟಿಯಾಗಿ ನಮ್ಮ ಯೋಗಕ್ಷೇಮ ತೆಗೆದುಕೊಳ್ಳುತ್ತಿದ್ದರು. ದಿವಾಕರರು ಮುಂಬೈಯಲ್ಲಿಯೇ ಇರುತ್ತಿದ್ದರು. ಆಗಾಗ್ಗೆ ಅವರನ್ನು ಕಂಡು ಬರುತ್ತಿದ್ದೆ. ಅಲ್ಲಿಂದ ಧಾರವಾಡ - ಹುಬ್ಬಳ್ಳಿಯ ಕಡೆಗೂ ಹೋಗಿ ಬರುತ್ತಿದ್ದೆ. ಇದೇ ಸಂದರ್ಭದಲ್ಲಿ ಒಮ್ಮೆ ಕಾರ್ಯಕರ್ತರ ಸಭೆಯನ್ನು ಹೊಸಪೇಟೆಯಲ್ಲಿ ಕರೆಯಲಾಗಿತ್ತು. ಅಂದಿನ ಸಭೆಗೆ ಚೆನ್ನಬಸಪ್ಪ ಅಂಬಲಿ, ವಾಲಿ ಚೆನ್ನಪ್ಪ, ಶ್ರೀರಂಗ ಕಾಮತ, ಶಂಕರ ಕುರ್ತಕೋಟಿ ಮತ್ತು ದಾಬಡೆ ಹೀಗೆ ಸುಮಾರು ಇಪ್ಪತ್ತು ಜನರು ಸೇರಿದ್ದೆವು. ಅವರೆಲ್ಲ ಭೂಗತ ಕಾರ್ಯಕರ್ತರೇ ಇದ್ದರು. ಧಾರವಾಡದಿಂದ ಎಸ್. ಜಿ. ನಾಡಿಗೇರ ಅವರು ಬಂದಿದ್ದರು. ಎರಡು ದಿವಸ ಚರ್ಚೆ ನಡೆಯಿತು. ಕಾರ್ಯಕರ್ತರೆಲ್ಲ ತಮ್ಮ ರೋಮಾಂಚಕ ಅನುಭವಗಳನ್ನು ಹೇಳುತ್ತಿದ್ದರು. ನಾಲ್ಕು ಸ್ಟೇಶನ್‌ಗಳನ್ನು ಒಮ್ಮೆಲೇ ಸುಟ್ಟ ವಿವರ ವರ್ಣಿಸುವರು. ತೀರ ಕಡಿಮೆ ವೆಚ್ಚದಲ್ಲಿ ಇಂಥ ಕಾರ್ಯಕ್ರಮಗಳನ್ನು ಪೂರೈಸಲಾಗುತ್ತಿತ್ತು. ಪೂರ್ವ ನಿರ್ಧಾರದಂತೆ ಜನರೆಲ್ಲ ಒಟ್ಟು ಸೇರಿ ರಾತ್ರಿ ಹೊರಡಲು ನಿರ್ಧರಿಸುವರು. ಹೊಲಗಳಲ್ಲಿ ಹಾಯ್ದು ಅಡ್ಡದಾರಿ ತುಳಿದು ಮಧ್ಯರಾತ್ರಿ ಸ್ಟೇಶನ್ನಿಗೆ ತಲುಪುವರು. ಹೊರಡುವಾಗ ಹುರುಪಿನಿಂದ 30-40 ಜನರಿದ್ದರೂ ಅನೇಕ ಸಂದರ್ಭಗಳಲ್ಲಿ ಅಲ್ಲಿ ಪ್ರತ್ಯಕ್ಷ ಕಾರ್ಯಮಾಡಲು ನಾಲ್ಕಾರು ಜನರು ಸಿಗುತ್ತಿದ್ದರು. ಹುಬ್ಬಳ್ಳಿಯಲ್ಲಿ ದುಂದೂರ ವಕೀಲರು (ಮುಂದೆ ಶಾಸನ ಸಭೆ ಸದಸ್ಯರಾದರು) ಕುಸುಗಲ್ ಸ್ಟೇಶನ್ ಧ್ವಂಸ ಮಾಡಲು ಹೋದಾಗ ಅವರು ತಮ್ಮ ಮುಖಕ್ಕೆ ಕರಿ ಅರಿವೆ ಕಟ್ಟಿಕೊಂಡು ತಮ್ಮ ಕೈಯನ್ನು ಬಟ್ಟೆಯಿಂದ ಮುಚ್ಚಿ ಪಿಸ್ತೂಲಿನಂತೆ ಬೆರಳು ಮಾಡಿದಾಗ ಅಲ್ಲಿಯ ಸ್ಟೇಶನ್ ಮಾಸ್ತರ್‌ರು ಗದಗದ ನಡುಗಿ ಓಡಿಹೋದರಂತೆ. ಮುಂದೆ ನಿರಾತಂಕವಾಗಿ ಎಲ್ಲ ಕಾಗದ ಪತ್ರ ಮತ್ತು ಪೀಠೋಪಕರಣಗಳಿಗೆ ಸೀಮೆಎಣ್ಣೆ ಉಗ್ಗಿ ಬೆಂಕಿ ಇಟ್ಟು ಹೊರಟು ಹೋದರಂತೆ. ಬೆಳಗಿನ ನಾಲ್ಕು ಗಂಟೆಗೆ ಬಹುತೇಕ ಎಲ್ಲ ಜನರೂ ತಮ್ಮ ಮನೆಯನ್ನು ಸೇರುತ್ತಿದ್ದರು.

ಹೊಸಪೇಟೆ ಮೀಟಿಂಗ್ ಮುಗಿಸಿಕೊಂಡು ಬಳ್ಳಾರಿಗೆ ಹೋದೆ. ಅಲ್ಲಿ ವೇಣುಗೋಪಾಲ ಆಚಾರ್ಯ ಎಂಬ ವಕೀಲರು ಮತ್ತು ಕಲ್ಮಠದ ಮರುಳಸಿದ್ಧಯ್ಯ ಬಂಧುಗಳು ನಮ್ಮ ಕಾರ್ಯದಲ್ಲಿ

ನೆರವಾಗುತ್ತಿದ್ದರು. ಅಲ್ಲಿ ನಡೆದ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಪಡೆದು ವಾಪಸ್ ಮುಂಬೈಗೆ ಬಂದು ಎಲ್ಲ ವರದಿಗಳನ್ನು ಒಪ್ಪಿಸಿದೆ. ಆಗ ಚಳುವಳಿಯ ತೀವ್ರತೆ ಕಡಿಮೆಯಾಗುತ್ತಿತ್ತು. ಮುಂಬೈಯಲ್ಲಿ ಹೇಳಿಕೊಳ್ಳುವಂಥ ಕೆಲಸವಿರಲಿಲ್ಲ. ನನಗೂ ಮುಂಬೈ ಜೀವನ ಬೇಸರವಾಗಿತ್ತು. ಆ ಸಮಯಕ್ಕೆ ಹುಕ್ಕೇರಿಕರ ಮತ್ತು ಕರಮರಕರರ ಕೈದಾಗಿತ್ತು. ದಿವಾಕರರ ಸಂಗಡ ಚರ್ಚೆ ಮಾಡಿ ನಾನು ಧಾರವಾಡದ ಕಡೆಗೆ ಹೋಗಬೇಕೆಂದೂ ಅಲ್ಲಿಯ ಹಿರಿಯರನ್ನು ಭೆಟ್ಟಿಯಾಗಿ ಅವರಿಗೆ ಈ ವಿವರಗಳನ್ನೆಲ್ಲ ಕೊಡಬೇಕೆಂದೂ ಅಲ್ಲಿಯ ಕಾರ್ಯಕರ್ತರೊಡನೆ ಆದಷ್ಟು ಸಂಪರ್ಕವಿಟ್ಟುಕೊಂಡು ಶಕ್ಯವಿದ್ದ ಕೆಲಸವನ್ನು ಮಾಡಬೇಕೆಂದೂ ನಿಶ್ಚಯವಾಯಿತು.

## ಧಾರವಾಡ ಪರಿಸರದಲ್ಲಿ ಭೂಗತ ಜೀವನ

ಟ್ರೇನಿನಲ್ಲಿಯೇ ಮೊದಲು ಬೆಳಗಾವಿಗೆ ಬಂದೆ. ಅಂದಿನ ಅಲ್ಲಿಯ ಕಾರ್ಯಕರ್ತ ಗ್ರಾಮೋಪಾಧ್ಯೆ ಅವರನ್ನು ಕಂಡು ಅಲ್ಲಿಯೇ ಕೆಲವು ದಿವಸ ಕಳೆದೆ. ಅಲ್ಲಿ ನನ್ನ ಇನ್ನೊಬ್ಬ ಆತ್ಮೀಯ ಗೆಳೆಯ ಪಿ. ಕೆ. ಜೋಶಿ (ಆರ್. ಕೆ. ಜೋಶಿಯವರ ತಮ್ಮ) ರಿಜ್ ಟಾಕೀಜ್‌ದಲ್ಲಿ ಕೆಲಸ ಮಾಡುತ್ತಿದ್ದರು. ಸಾಮಾನ್ಯ ಬೆಳಗಾವಿಗೆ ಬಂದರೆ ಅವರ ಕಛೇರಿಯ ಗೆಸ್ಟ್ ಹೌಸ್‌ದಲ್ಲಿಯೇ ತಂಗುವುದು. ಅಲ್ಲಿಯ ಫುಲಬಾಗ್ ಗಲ್ಲಿಯಲ್ಲಿ ಒಂದು ಕೋಣೆ ಹಿಡಿದೆ. ಅಲ್ಲಿ ಕೆಲವು ದಿವಸ ಕಳೆದೆ. ಅಷ್ಟರಲ್ಲಿ ಒಮ್ಮೆ ಧಾರವಾಡದ ಕಡೆಗೆ ಅಂದರೆ ಧಾರವಾಡ, ಗದಗ ಇಲ್ಲೆಲ್ಲ ಅಡ್ಡಾಡಿಕೊಂಡು ಅಂದಿನ ಕಾರ್ಯಕರ್ತರ ಸಂಪರ್ಕ ಮಾಡಿ ಧಾರವಾಡದ ಕೆಲವು ಹಿರಿಯರನ್ನು ಭೇಟಿಯಾದೆ. ಈ ಸಂದರ್ಭದಲ್ಲಿ ಇಲ್ಲಿ ಮಾಡಿದ ಇನ್ನೊಂದು ಮಹತ್ವದ ಕೆಲಸವೆಂದರೆ ನನ್ನ ಹೆಂಡತಿಯನ್ನು ಸತ್ಯಾಗ್ರಹ ಮಾಡಿಸಿ ಜೇಲಿಗೆ ಕಳಿಸಿದೆ. ಅದರ ಸಂಪೂರ್ಣ ಸಂಘಟನೆಯನ್ನು ಪತ್ತಾರ ಮಾಸ್ತರ ಮತ್ತು ಕರ್ನಾಟಕ ಹೈಸ್ಕೂಲ್‌ನ ಕೆಲವು ಶಿಕ್ಷಕರ ಮೂಲಕ ಮಾಡಿಸಿದ್ದಾಯಿತು. ಆಗ ಅವಳಿಗೆ ನಾಲ್ಕು ತಿಂಗಳ ಸಾದಾ ಶಿಕ್ಷೆಯಾಗಿ ಮಗಳು ಭಾರತಿಯ ಸಂಗಡ ಹಿಂಡಲಗಾ ಜೇಲಿಗೆ ಬಂದಿದ್ದಳು.

ಆಗ ಧಾರವಾಡದಲ್ಲಿ ಈ ಕಾರ್ಯದಲ್ಲಿ ನೆರವಾಗುವವರೆಂದರೆ ಹೊಸಕೇರಿ ನಾರಾಯಣಾಚಾರ್ಯ, ರು. ರಾ. ಪತ್ತಾರ ಮಾಸ್ತರು, ಸ್ಟೂಡಂಟ್ಸ್ ಓನ್ ಬುಕ್‌ಡಿಪೋದ ಆರ್. ಜಿ. ಹುಕ್ಕೇರಿಯವರು. ಇವರ ಹೊರ್ತು ಹೈಸ್ಕೂಲ್ ವಿದ್ಯಾರ್ಥಿಗಳೂ, ಶಿಕ್ಷಕರೂ ನೆರವಾಗುತ್ತಿದ್ದರು. ಅವರು ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವುದಲ್ಲದೆ ನಮ್ಮಂಥವರಿಗೆ ವಸತಿ ವ್ಯವಸ್ಥೆಯನ್ನೂ ಮಾಡಬೇಕಾಗುತ್ತಿತ್ತು. ನನ್ನ ನೆರಳಿನಂತೆಯೇ ಇದ್ದ ಇನ್ನೊಬ್ಬರೆಂದರೆ ಗದಗಿನ ಸಂಯುಕ್ತ ಕರ್ನಾಟಕದ ಏಜೆಂಟರಾದ ಕೇಶವರಾವ ಕುಲಕರ್ಣಿಯವರು. ಅವರ ಮೇಲೆ ವಾರಂಟ್ ಇರದಿದ್ದರೂ ಸರ್ಕಾರದ ವಕ್ರದೃಷ್ಟಿ ಇತ್ತು.

ಧಾರವಾಡ - ಹುಬ್ಬಳ್ಳಿಯಲ್ಲಿದ್ದಾಗ ನಿತ್ಯ ಜೀವನವೆಂದರೆ, ಬೆಳಿಗ್ಗೆ ನಾಲ್ಕೂವರೆಯಿಂದ ಆರು ಗಂಟೆಯವರೆಗೆ ಅತ್ತಿತ್ತ ಅಡ್ಡಾಡಿ ಸಂಪರ್ಕ ಮಾಡುವುದು, ಸಂಜೆಯವರೆಗೆ ಒಬ್ಬರ ಮನೆಯಲ್ಲಿರುವುದು, ಮತ್ತೆ ಸಂಜೆ ಏಳರಿಂದ ಹತ್ತೂಮೂವತ್ತರವರೆಗೆ ತಿರುಗಾಟ. ಬಿಸಿಲು ಮೈಗೆ

ತಗಲುತ್ತಿರಲಿಲ್ಲ. ಒಮ್ಮೆ ಮದಿಹಾಳದಲ್ಲಿ ಸಿ. ಎಂ. ಕುಲಕರ್ಣಿಯವರ ಮನೆಯಲ್ಲಿ ತಂಗಿದಾಗ ಐದು ತಿಂಗಳ ನಂತರ ಮಗಳನ್ನು ನೋಡಿದೆ, ಅರ್ಥಾತ್ ಹೆಂಡತಿಯೂ ಬಂದಿದ್ದಳು. ಒಂದೆರಡು ಸಲ ಅವಳ ಅಣ್ಣನ ಮನೆಯಲ್ಲಿಯೂ ತಂಗಿದ್ದೆ, ಅಲ್ಲಿದ್ದಾಗ ನನಗೆ ಪೊಲೀಸ್‌ರ ವಾಸನೆ ಬಡಿಯಿತು. ಆಗ ಮಧ್ಯಾಹ್ನ ಮೂರು ಗಂಟೆ. ಹಿತ್ತಲ ಬಾಗಿಲಿನಿಂದ ಸುರೇಂದ್ರ ದಾನಿ (ಹೆಂಡತಿಯ ತಮ್ಮ) ನನ್ನನ್ನು ಕರೆದುಕೊಂಡು ಊರ ಹೊರಗೆ ಹೋದನು. ಮುಂದೆ ರಾತ್ರಿಯಾದ ಮೇಲೆ ಊರಲ್ಲಿ ಬಂದು ಆಗ ಹೊಸಯಲ್ಲಾಪೂರ ಓಣಿಯಲ್ಲಿರುತ್ತಿದ್ದ ಪತ್ತಾರ ಮಾಸ್ತರ ಮನೆಗೆ ಬಂದು ಅಲ್ಲಿಯೇ ತಂಗಿದೆ.

ಇನ್ನೊಬ್ಬ ನನ್ನ ಆತ್ಮೀಯರಾದ ಚರಖಾ ಸಂಘದ ಅನಂತರಾವ ಸಾಹುಕಾರ ಅವರೂ ಭೂಗತರಾಗಿದ್ದುಕೊಡು ಕಾರ್ಯ ಮಾಡುತ್ತಿದ್ದರು. ಅವರೂ ನಾನೂ ಕೂಡಿಯೇ ಕೆಲವು ದಿವಸ ಸಪ್ತಾಪೂರ ಮಾರುತಿ ದೇವಸ್ಥಾನದ ಹತ್ತಿರ, ಅವರ ತೋಟದ ಮನೆಯಲ್ಲಿ ಕಳೆದೆವು. ಪೊಲೀಸ್‌ರಿಗೆ ಈ ವಿಷಯ ಗೊತ್ತಾಗಿ ಒಂದು ದಿವಸ ಸುಮಾರು ಇಪ್ಪತ್ತು ಪೊಲೀಸ್‌ರು ಬಂದು ಆ ಗುಡಿಸಲಿಗೆ ಮುತ್ತಿಗೆ ಹಾಕಿದರು. ಮುಂದೆ ಒಳಹೊಕ್ಕು ಝಡ್ತಿ ಮಾಡಲಾಗಿ ನನ್ನ ಸಾಮಾನುಗಳು ಮಾತ್ರ (ಹಾಸಿಗೆ, ಹೊದಿಕೆ, ಕ್ಷೌರದ ಪೆಟ್ಟಿಗೆ) ದೊರೆತವು. ನಾನು ಎಲ್ಲಿಯೋ ಹೊರಗಡೆ ಹೋದಾಗ ಈ ಘಟನೆ ನಡೆಯಿತು. ಹೀಗೆ ಅಲೆಮಾರಿಗಳಂತೆ ನನ್ನ ಜೀವನ ಸಾಗಿತ್ತು.

ಒಂದೊಂದು ದಿವಸ ಒಬ್ಬೊಬ್ಬರಂತೆ ಧಾರವಾಡದಲ್ಲಿರುವಾಗ ಆಲೂರು ವೆಂಕಟ್‌ರಾವ, ಶಂ. ಬಾ. ಜೋಶಿ, ಸಾಲಿ ರಾಮಚಂದ್ರರಾವ ಇವರನ್ನು ಕಂಡು ಅವರ ಸಂಗಡ ವಿವರವಾಗಿ ಚರ್ಚೆ ಮಾಡಿ ಕೆಲಸದ ವರದಿಯನ್ನೆಲ್ಲ ಒಪ್ಪಿಸುತ್ತಿದ್ದೆ. ಅವರು ಅವನ್ನೆಲ್ಲ ಕೇಳಿ ತುಂಬಾ ಸಂತೋಷಪಟ್ಟು ಈ ಕಾರ್ಯಕ್ಕೆ ತಮ್ಮ ಸಂಪೂರ್ಣ ಬೆಂಬಲವಿರುವುದೆಂದು ಹೇಳಿದರು. ದಿವಾಕರರ ಹೇಳಿಕೆಯ ಮೇರೆಗೆ ಶಂ. ಬಾ. ಅವರಿಗೆ ಏನಾದರೂ ಈ ಬಗ್ಗೆ ಸಾಹಿತ್ಯ ಬರೆಯಲು ಹೇಳಿದೆ. ಅವರು 'ಏದ್ದೇಳು ಕನ್ನಡಿಗಾ' ಎಂಬ ಚಿಕ್ಕ ಹೊತ್ತಿಗೆಯನ್ನು ಬರೆದುಕೊಟ್ಟರು. ಅದನ್ನು ಅಚ್ಚು ಹಾಕಿಸಿ ಹಂಚಲಾಯ್ತು.

ಆಗ ಮುದವೀಡು ಕೃಷ್ಣರಾಯರು ತಮ್ಮ ಹಳ್ಳಿ ಇಟ್ಟಿಗಟ್ಟಿಯಲ್ಲಿರುತ್ತಿದ್ದರು ಅವರನ್ನು ಕಾಣಬೇಕಿತ್ತು. ಒಂದು ದಿನ ಬೆಳಿಗ್ಗೆ ಕಾಲ್ನಡಿಗೆಯಿಂದ ಓರ್ವ ಮಿತ್ರನನ್ನು ಕರೆದುಕೊಂಡು ಇಟ್ಟಿಗಟ್ಟಿಗೆ ಹೋದೆ. ಅವರು ನನ್ನನ್ನು ನೋಡಿ ತುಂಬಾ ಸಂತೋಷಪಟ್ಟು ತಬ್ಬಿಕೊಂಡು ಮನಸಾರೆ ಹರಿಸಿದರು. ಆಗ ಅವರ ಸಂಗಡ ಊರಿನ ಪೊಲೀಸ ಪಾಟೀಲ ಮಾತನಾಡುತ್ತ ಕುಳಿತಿದ್ದರು. ಅವರಿಗೆ ನನ್ನ ಪರಿಚಯ ಮಾಡುತ್ತಾ "ಈತ ನನ್ನ ತಂಗಿಯ ಮಗ ಪುಣೆಯಲ್ಲಿರುವ. ತುಂಬಾ ಚುರುಕು ಹುಡುಗ. ಪದವೀಧರನಾಗಿ ಅಲ್ಲಿಯ ಒಂದು ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ" ಎಂದು ಹೇಳುತ್ತ ಪಾಟೀಲರಿಗೆ ನಮಸ್ಕಾರ ಮಾಡಲು ಹೇಳಿದರು. ನಾನು ಹಾಗೆಯೇ ಮಾಡಿದೆ, ಆತ ಹೋದ ಮೇಲೆ ಉಸಿರುಬಿಟ್ಟರು. "ಎಷ್ಟಾದರೂ ಊರ ಪಾಟೀಲ. ಸತ್ಯ ಸಂಗತಿ ಗೊತ್ತಾದರೆ

ಅದರ ದುರ್ಲಾಭ ಪಡೆಯಬಹುದೆಂದು ಈ ಪ್ರವರ ಹೇಳಬೇಕಾಯ್ತು" ಎಂದರು. ಮಧ್ಯಾಹ್ನ ನನಗಾಗಿ ಭೋಜನಕೂಟವನ್ನು ಏರ್ಪಡಿಸಿದ್ದರು. ಎಲ್ಲ ವಿವರಗಳನ್ನು ನನ್ನಿಂದ ಕೇಳಿಕೊಂಡು ಒಂದೇ ವಾಕ್ಯದಲ್ಲಿ, "ನನಗೆ ಬಹಳ ಸಂತೋಷವಾಯ್ತು. ನನ್ನ ಕೊನೆಯ ಆಸೆ ಎಂದರೆ ಭಾರತ ಸ್ವಾತಂತ್ರ್ಯವಾಗಬೇಕು, ಕರ್ನಾಟಕ ಏಕೀಕರಣವಾಗಬೇಕು. ಅದನ್ನು ನೋಡಿ ನಾನು ಹೋಗಬೇಕು" ಎಂದು ಹೇಳಿದರು. ಅಂದೇ ಸಾಯಂಕಾಲ ಹೊರಟು ಹುಬ್ಬಳ್ಳಿಗೆ ರಾತ್ರಿ ಎಂಟು ಗಂಟೆಗೆ ತಲುಪಿದೆ. ಆಗ ವೀರನಗೌಡರ ಹರಿಜನ ಆಶ್ರಮ ಹೊಸೂರಿನಲ್ಲಿತ್ತು. ಅಲ್ಲಿಯೇ ತಂಗಿದೆ. ಶ್ರೀಮತಿ ಲೀಲಾತಾಯಿ ಮಾಗಡಿಯವರೂ ಅಲ್ಲಿದ್ದರು. ಅವರ ಸಂಗಡ ಚರ್ಚೆಮಾಡಿ ಮರುದಿನ ಬೇರೆ ಕಡೆಗೆ ಹೋದೆ. ಎರಡು ದಿವಸ ಗಾಂಧೀಚೌಕ್‌ದಲ್ಲಿಯೇ ಇದ್ದು, ಗುಜರಾತಿ ಹೊಟೇಲ್‌ದಲ್ಲಿ (ಎರಡನೆಯ ಅಂತಸ್ತು) ತಂಗಿದ್ದೆ. ಅದರ ಹತ್ತಿರವೇ ನನ್ನ ಅಣ್ಣನ ಮನೆಯಿತ್ತು. ಆಗಾಗ ಹೋಗಿ ಬರುತ್ತಿದ್ದೆ. ಅವರ ಮನೆಯ ಹತ್ತಿರವೇ ಡಿ. ಬಿ. ಮಹಾಶಬ್ದೆ ದಂಪತಿಗಳು ಇರುತ್ತಿದ್ದರು. ಆದರೆ ಅವರು ಊರಲ್ಲಿರಲಿಲ್ಲ. ಅವರ ಮನೆ ಕೀಲಿಕೈ ನನ್ನ ಅಣ್ಣನ ಹತ್ತಿರ ಇತ್ತು. ಅಲ್ಲಿ ನನಗೆ ಇರಲು ಹೇಳಿದರು. ಅಲ್ಲಿಗೇ ಊಟ, ಉಪಹಾರ ತಂದು ಕೊಡುತ್ತಿದ್ದರು. ಒಂದು ದಿನ ಓರ್ವ ಸಿ.ಐ.ಡಿ. ಪೊಲೀಸ್ ಆ ಮನೆಯ ಮುಂದೆ ಕುಳಿತುಬಿಟ್ಟ. ಆಗ ಮಧ್ಯಾಹ್ನ ಒಂದು ಗಂಟೆಯಾಗಿರಬಹುದು. "ಇದು ತುಂಬಾ ಗಂಡಾಂತರದ ಸ್ಥಳ. ಸಧ್ಯ ಆ ಪೊಲೀಸ್ ಊಟಕ್ಕೆ ಹೋಗಿರುವ, ನೀನು ಈಗಲೇ ಕಂಬಿ ಕೀಳಲೇಬೇಕು" ಎಂದು ಅಣ್ಣ ಹೇಳಿದ. ಆಗ ಊಟವಾಗಿರಲಿಲ್ಲ. ಆ ಮನೆ ವಿಠೋಬಾ ಗಲ್ಲಿಯಲ್ಲಿತ್ತು. ಆಯ್ತು, ನಾನು ಕೂಡಲೇ ಹೊರಟೇ ಬಿಟ್ಟೆ. ಎಲ್ಲಿ ಹೋಗುವುದೆಂಬುದೇ ಗೊತ್ತಿರಲಿಲ್ಲ. ಊರ ಸ್ಮಶಾನದ ಮೇಲೆ ಹಾಯ್ದು ಗದಗ ರೈಲ್ವೆ ಗ್ರೌಂಡ್‌ದಲ್ಲಿದ್ದ ದವೇಕರ ಅವರ ಮನೆಗೆ ಹೋದೆ. ತುಂಬಾ ದಣಿವು, ಹಸಿವು, ಬಾಯಾರಿಕೆ ಎಲ್ಲವೂ ಆಗಿತ್ತು. ಆತನು ಎಲ್ಲ ವ್ಯವಸ್ಥೆಯನ್ನು ಮಾಡಿದ. ಅಲ್ಲೇ ಊಟ ಮಾಡಿ ಆ ದಿನ ತಂಗಿದೆ. ಹೇಗೋ ಸುದ್ದಿ ತಿಳಿದ ಶ್ರೀರಂಗ ಕಾಮತರು ಬಂದು ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡಿದರು. ಅವರೂ ಭೂಗತರಿದ್ದರು. ಅಂದಿನ ಇಂಪೀರಿಯಲ್ ಬ್ಯಾಂಕಿಗೆ ದಾಳಿ ಮಾಡುವ ಕಾರ್ಯಕ್ರಮವನ್ನು ಹಾಕುತ್ತಿದ್ದರು.

ಆ ಸಮಯಕ್ಕೆ ಬಹುತೇಕ ಎಲ್ಲ ಕಾರ್ಯಕರ್ತರು ಜೇಲಿಗೆ ಹೋಗಿದ್ದರು. ವಿಧ್ವಂಸಕ ಚಟುವಟಿಕೆಗಳು ತೀರ ಕಡಿಮೆಯಾಗಿದ್ದವು. ಆದರೆ ಪ್ರಸಾರ, ಕರಪತ್ರ ಹಂಚುವುದು ನಡೆದಿತ್ತು. ಇಬ್ಬರು ಗದಗಿನ ವಿದ್ಯಾರ್ಥಿಗಳು ರಾಧಾಕೃಷ್ಣ ಗುಡಿಯ ಅಟ್ಟದ ಮೇಲೆ ವಾಸಿಸುತ್ತಿದ್ದರು. ಅವರ ಹೆಸರು ಸುಬ್ಬಣ್ಣನವರು, ಇನ್ನೊಬ್ಬ ಎಂ. ಜಿ. ಆಚಾರ್ಯರು. ಇವರು ಕೇಶವರಾವ ಕುಲಕರ್ಣಿಯವರರ ಪರಿಚಯಸ್ಥರು. ಅವರ ಕೋಣೆಯಲ್ಲಿ ನನಗೂ ಇರಲು ಏರ್ಪಾಡು ಮಾಡಿದರು. ನಾನು ಯಾರು, ಏನು ಕೆಲಸ ಮಾಡುವವ ಎಂಬ ಯಾವ ವಿವರಗಳನ್ನೂ ಕೇಳಬಾರದೆಂದು ಅವರಿಗೆ ಕಟ್ಟುಪ್ಪಣೆ ಮಾಡಿದ್ದರು. ಇವರು ಬಂದಾಗ ನಿಮ್ಮಲ್ಲಿ ತಂಗುವರು. ಅವರಿಗೆ ಸ್ಥಳಕೊಟ್ಟು ಅವರ ಸಾಮಾನುಗಳನ್ನು ಇಟ್ಟುಕೊಳ್ಳಲು ಹೇಳಿದ್ದರು. ಅದರಂತೆ ನಮ್ಮ

ಸಾಹಿತ್ಯವನ್ನು ಅಲ್ಲಿಡಹತ್ತಿದೆ. ಅವರ ಮೂಲಕವೇ ಬೇರೆ ಬೇರೆ ಕಡೆಗೆ ಕಳಿಸುವ ಏರ್ಪಾಡು ಮಾಡುತ್ತ, ಧರ್ಮ ಸಂಯೋಗದಿಂದ ಒಂದು ರಾತ್ರಿ ಪೊಲೀಸ್‌ರು ಆ ಕೋಣೆಗೆ ಮುತ್ತಿಗೆ ಹಾಕಿ ಝಡತಿ ಮಾಡುವಾಗ ತುಂಬಾ ಕಾಯ್ದೆಬಾಹಿರವಾದ ಚಳುವಳಿಗೆ ಸಂಬಂಧಿಸಿದ ಸಾಹಿತ್ಯದ ಗಂಟೇ ಸಿಕ್ಕಿತು. ಪಾಪ, ಈ ವಿದ್ಯಾರ್ಥಿಗಳಿಗೆ ಅದೇನೂ ಗೊತ್ತಿರಲಿಲ್ಲ. ಅಲ್ಲಿಯ ಸಾಹಿತ್ಯವನ್ನೆಲ್ಲ ಕೈವಶ ಮಾಡಿಕೊಂಡು, ಆ ಇಬ್ಬರೂ ವಿದ್ಯಾರ್ಥಿಗಳನ್ನು ಕೈದು ಮಾಡಿ ಖಟ್ಲೆ ನಡೆಸಿ ಅವರಿಬ್ಬರಿಗೂ ಆರು ತಿಂಗಳ ಶಿಕ್ಷೆಯಾಯ್ತು. ಮುಂದೆ ನಾನು ವಿಸಾಪೂರ ಜೇಲಿಗೆ ಹೋದಾಗ ಅವರ ಭೇಟಿಯಾಗಿ ಎಲ್ಲ ವಿವರಗಳನ್ನು ತಿಳಿದುಕೊಂಡರು. ಅವರು ನನ್ನ ಸಂಗಡ ಎರಡು ತಿಂಗಳಿದ್ದು ಮುಂದೆ ಬಿಡುಗಡೆಯಾಯಿತು. ಅವರಲ್ಲಿ ಎಂ. ಜಿ. ಆಚಾರ್ಯರು ಮುಂದೆ ನಾಲ್ಕು ತಿಂಗಳಲ್ಲಿ ಸ್ವರ್ಗಸ್ಥರಾದರು. ಸುಬ್ಬಣ್ಣನವರು ಈಗಲೂ ಹುಬ್ಬಳ್ಳಿಯಲ್ಲಿದ್ದು ಸರ್ಕಾರದವರು ಸ್ವಾತಂತ್ರ್ಯ ಯೋಧರಿಗೆ ಕೊಡಮಾಡಿದ ಗೌರವ ಧನವನ್ನು ಸ್ವೀಕರಿಸುತ್ತಿದ್ದಾರೆ. ಈಗ ಭೇಟಿಯಾದಾಗ ಹಿಂದಿನ ಘಟನೆಗಳನ್ನು ಸಂತೋಷದಿಂದ ಮೆಲುಕು ಹಾಕುವರು.

ಆಗ ಹೆಚ್ಚಾಗಿ ನಮ್ಮ ಕೆಲಸವೆಂದರೆ ಸಿದ್ಧಮಾಡಿದ ಸಾಹಿತ್ಯಗಳನ್ನು ಹಂಚುವುದು ಮತ್ತು ವಿದ್ಯಾರ್ಥಿಗಳನ್ನು ಸಂಘಟನೆ ಮಾಡಿ ಅವರ ಮೂಲಕ ಕಾರ್ಯ ಮಾಡಿಸುವುದು. ಒಮ್ಮೆ ಧಾರವಾಡದಿಂದ ಹುಬ್ಬಳ್ಳಿಯವರೆಗಿರುವ ಮೈಲುಗಲ್ಲುಗಳ ಮೇಲೆ ಬರೆದುದನ್ನು ಅಳಿಸಿ ಅಲ್ಲಿ 'Q' ಬರೆಸಲಾಗಿತ್ತು. (Q ಎಂದರೆ Quit India) ಅದರಂತೆ ಅಲ್ಲಲ್ಲಿ 'Q' ಬರೆಸಲಾಗಿತ್ತು. ಯಾವುದಾದರೂ ದಿನಾಚರಣೆ ಮಾಡುವಾಗ ಧ್ವಜವಂದನೆ ಮಾಡಿಸುವುದು, ಶಕ್ಯವಾದರೆ ಒಬ್ಬಿಬ್ಬರನ್ನು ಜೇಲಿಗೆ ಕಳಿಸುವುದು. ವಿಧ್ವಂಸಕ ಚಟುವಟಿಕೆಗಳು ತೀರ ಕಡಿಮೆಯಾಗಿದ್ದರೂ ಹಾವೇರಿ ತಾಲೂಕಿನಲ್ಲಿಯ ಮಹಾದೇವಪ್ಪ ಮೈಲಾರರವರ ತಂಡವು ತುಂಬಾ ಚಟುವಟಿಕೆಗಳನ್ನು ನಡೆಸಿತ್ತು. ಆಗ ಗಾಂಧೀಜಿಗೆ 75 ವರ್ಷ. ಕಾರಣ 75 ವಿಧ್ವಂಸಕ ಕಾರ್ಯಮಾಡಿ ಅದನ್ನು ಗಾಂಧೀಜಿಗೆ ಅರ್ಪಿಸುವ ಕಾರ್ಯಕ್ರಮ ಅವರದಾಗಿತ್ತು. ಬಹುಶಃ ಎಪ್ಪತ್ತೈದನೆಯ ಕಾರ್ಯಕ್ರಮವೆಂದರೆ ಹೊಸರಿತ್ತಿಯ ಬಸವಣ್ಣ ದೇವರ ಗುಡಿಯಲ್ಲಿ ಕೂಡಿಸಿಟ್ಟಿದ್ದ ಹಪ್ತೇದ ಹಣವನ್ನು ಹೊಡೆಯಬೇಕೆಂಬ ಕಾರ್ಯಕ್ರಮವನ್ನು ಹಾಕಿದ್ದರು. ಅದರಲ್ಲಿ ಮಹಾದೇವಪ್ಪನ ಸಂಗಡ ಇನ್ನಿಬ್ಬರು ಪ್ರಾಣತೆತ್ತಿದ ವರ್ತಮಾನ ಬಂತು, ಆಗ ನಾನು ತಬೀಬ್‌ಲ್ಯಾಂಡದ ಓರ್ವ ಮಿತ್ರನ ಮನೆಯಲ್ಲಿದ್ದೆ. ಅನಂತರಾವ ಸಾವಕಾರರೂ ಇದ್ದರು. ಆ ವಾರ್ತೆಯನ್ನು ಕೇಳಿ ನಾವು ತುಂಬಾ ಮರುಗಿದ್ದೆವು.

ಸರ್ಕಾರದವರು ಇನ್ನೊಂದು ಕಾನೂನು ಜಾರಿ ಮಾಡಿದ್ದರು. "ಭೂಗತ ಕಾರ್ಯಕರ್ತರು ಓಡಿಹೋಗಲು ಅಥವಾ ತಪ್ಪಿಸಿಕೊಳ್ಳಲು ಯತ್ನಿಸಿದರೆ ಅವರ ಮೇಲೆ ಗುಂಡು ಹಾರಿಸಬಹುದು" ಎಂಬ ಆಜ್ಞೆ ಹೊರಡಿಸಿದ್ದರು. ವೀರಪ್ಪ ಸುತಗಟ್ಟಿ (ಬೆಳಗಾವಿ ಜಿಲ್ಲೆ) ಅವರು ನನ್ನ ಪರಮ ಮಿತ್ರರು. ಅವರೂ ಭೂಗತರಿದ್ದು ಕಾರ್ಯಮಾಡುತ್ತಿದ್ದರು. ಅವರ ಹೆಂಡತಿಯೂ ಜೇಲಿಗೆ ಹೋಗಿದ್ದಳು. ಅವರು ಅಡ್ಡಾಡುವಾಗ ಒಂದು ಸಲ ಪೊಲೀಸ್‌ರು ಅವರ ಮೇಲೆ ಗುಂಡು

ಹಾರಿಸಿದರು. ಸುದೈವದಿಂದ ಅದು ಅವರ ರಟ್ಟೆಗೆ ಬಡಿದು ಹೋಯಿತು. ಅವರನ್ನು ದವಾಖಾನೆಗೆ ಹಾಕಿದಾಗ ಕೈದು ಮಾಡಲ್ಪಟ್ಟರು.

ದಿನಾಲೂ ಒಂದಿಲ್ಲಾ ಒಂದು ಘಟನೆ ನಡೆಯುತ್ತಲೇ ಇದ್ದವು. ಕಾರ್ಯಕರ್ತರು, ವಿದ್ಯಾರ್ಥಿಗಳು ಸಂಪರ್ಕಿಸುತ್ತಿದ್ದರು. ಕಾರ್ಯಕ್ರಮಗಳನ್ನು ಗೊತ್ತು ಮಾಡಿ ಅವು ಕಾರ್ಯರೂಪದಲ್ಲಿ ಬರುವಂತೆ ಮಾಡುತ್ತಿದ್ದರು. ಈ ಕಾರ್ಯಕ್ರಮವೆಂದರೆ ಒಂದು ಚಿಕ್ಕ ನಂದಾದೀಪ ಇಟ್ಟಂತಿದ್ದವು.

ಒಮ್ಮೆ ನನ್ನನ್ನು ಕಿಲ್ಲೆ (ಹುಬ್ಬಳ್ಳಿ) ಯಲ್ಲಿರುವ ದತ್ತಾತ್ರೇಯ ಗುಡಿ ಪಕ್ಕದ ಒಂದು ಕಟ್ಟಡದ ಅಂತಸ್ತಿನಲ್ಲಿಡಲಾಗಿತ್ತು. ಮಲಗಿದಾಗ ಒಂದೆರಡು ಚಿಕ್ಕ ಹೆಂಟೆಗಳು ಬಿದ್ದವು. ಅದೊಂದು ಜೀರ್ಣವಾದ ಮನೆಯಿತ್ತು. ಯಥಾಪ್ರಕಾರ ನಾನು ಬೆಳಿಗ್ಗೆ ಐದು ಗಂಟೆಗೆ ಮನೆಯಿಂದ ಹೊರಬಂದಾಗ ಆ ಕಟ್ಟಡ ಕುಸಿಯಿತು. ನನ್ನ ಸಾಮಾನುಗಳೆಲ್ಲ ಪುನಃ ಸ್ವಾಹಾ ಆದವು.

ಆ ಸಮಯಕ್ಕೆ ಬಳ್ಳಾರಿಯ ಕಾರ್ಯಕರ್ತರಿಂದ ಕೂಡಲೇ ಬರಲು ನನಗೆ ಸಂದೇಶ ಬಂತು. ರಾತ್ರಿ ಒಂಬತ್ತು ಗಂಟೆಗೆ ಟ್ರೇನ್ ಇತ್ತು. ಅದಕ್ಕೆ ಹೊರಡಬೇಕೆಂಬ ನಿರ್ಧಾರ ಮಾಡಿದೆ. ಓರ್ವ ಕಾರ್ಯಕರ್ತನನ್ನು ರೈಲು ನಿಲ್ದಾಣಕ್ಕೆ ಕಳಿಸಿ ಅಂದಿನ ಇಂಟರ್‌ಕ್ಲಾಸ್ ಡಬ್ಬಿಯಲ್ಲಿ ನನ್ನ ಹಾಸಿಗೆ, ಟಿಕೇಟ್ ತೆಗೆದುಕೊಂಡು ಅದರ ಮುಂದೆ ನಿಲ್ಲಲು ಹೇಳಿದ್ದೆ. ಒಂದು ಚಿಕ್ಕ ಪ್ರಶ್ನೆ ಬಂತು, ರಾತ್ರಿ ಊಟದ್ದು. ಕಿಲ್ಲೆಯಲ್ಲಿದ್ದ ನನ್ನ ಅಕ್ಕನ ಮನೆಗೆ ಹೋದೆ. ತುಸು ಆತಂಕದಿಂದ ಆಶ್ಚರ್ಯಪಟ್ಟರು. ನನಗೆ ಹಸಿವಾಗಿದೆ ಊಟ ಕೊಡಲು ಹೇಳಿದೆ. ಅಲ್ಲಿ ಊಟ ಮಾಡಿ ರೈಲು ನಿಲ್ದಾಣಕ್ಕೆ ಹೋಗಿ ಒಂದು ಪ್ಲಾಟ್‌ಫಾರ್ಮ್ ಟಿಕೇಟ್ ತೆಗೆದು ಪ್ರವೇಶಿಸಿದೆ. ನನ್ನ ಕೈಯಲ್ಲಿದ್ದ ಟಿಕೇಟ್ ಆ ಕಾರ್ಯಕರ್ತರಿಗೆ ಕೊಟ್ಟು, ನನ್ನ ಟಿಕೇಟ್ ತೆಗೆದುಕೊಂಡು ಮೇಲೆ ಮಲಗಿದೆ. ಗಾಡಿ ಬಿಡುವವರೆಗೆ ಆತನಿದ್ದು ಸಾಮಾನುಗಳನು ಸುರಕ್ಷಿತವಾಗಿ ಕಳಿಸಲ್ಪಟ್ಟವು ಎಂದು ವರದಿ ಮಾಡಿದ. ಮರುದಿನ ಬೆಳಿಗ್ಗೆ ಬಳ್ಳಾರಿಯಲ್ಲಿಯ ಕಾರ್ಯಕರ್ತರ ಜೊತೆಗೆ ಚರ್ಚಿಸಿ ಕಾರ್ಯಕ್ರಮ ಗೊತ್ತು ಮಾಡಿ ಗದಗಿಗೆ ಬೆಳಗಿನ ಮೂರು ಗಂಟೆಗೆ ಬಂದೆ. ಅಂದಿನ ರಾತ್ರಿ ಒಂದು ಸಿನೆಮಾ ಥಿಯೇಟರಿನಲ್ಲಿ ಕಳೆದೆ. ಮರುದಿನ ಅಲ್ಲಿಯ ಕಾರ್ಯಕರ್ತನನ್ನು ಭೇಟಿಯಾಗಿ ಅವರ ವರದಿ ತೆಗೆದುಕೊಂಡು ಧಾರವಾಡಕ್ಕೆ ವಾಪಸ್ ಬಂದೆ. ಧಾರವಾಡದಲ್ಲಿ ಸಾಮಾನ್ಯವಾಗಿ ಎಲ್ಲಿಗೆ ಹೋಗಬೇಕು ಎಂಬ ಸಮಸ್ಯೆ ತೀಕ್ಷ್ಣವಾಗಿರಲಿಲ್ಲ. ನನ್ನ ಇಬ್ಬರು ಆತ್ಮೀಯ ಮಿತ್ರರು "ಬೇಕಾದಾಗ ಬಂದರೂ ತಮ್ಮ ಮನೆ ಮುಕ್ತದ್ವಾರ" ಎಂದು ಹೇಳಿದರಲ್ಲದೆ, ಅದರ ಪರಿಣಾಮ ಏನೇ ಆದರೂ ಅದನ್ನು ನಾವು ಸಂತೋಷದಿಂದ ಅನುಭವಿಸುವೆವು ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಒಬ್ಬರು ಆರ್. ಜಿ. ಹುಕ್ಕೇರಿ, ಇನ್ನೊಬ್ಬರು ಪತ್ತಾರ ಮಾಸ್ತರ (ಕೆ. ಈ. ಬೋರ್ಡ್ಸ್ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು).

ಆಗ ಶ್ರೀನಿವಾಸರಾವ ದಾಬಡೆ, ಶಕುಂತಲಾನ ಸೋದರಮಾವ ಅವರು ಧಾರವಾಡ ಜಿಲ್ಲಾ ನ್ಯಾಯಾಧೀಶರ ಶಿರಸ್ತೇದಾರರು. ಮಾಳಮಡ್ಡಿಯಲ್ಲಿ ಅವರ ವಾಸ. ಅವರ ತಂಗಿ ಸುಬ್ಬಕ್ಕ. ಅವಳ ಪ್ರೀತಿ ನನ್ನ ಮೇಲೆ ಅಷ್ಟಿಷ್ಟಲ್ಲ. ನಾನು ಧಾರವಾಡದಲ್ಲಿ ಎಲ್ಲಿಯೇ ಇದ್ದರೂ ಅಲ್ಲಿಗೆ ಬಂದು ಭೇಟಿಯಾಗಿ ಯೋಗಕ್ಷೇಮ ಕೇಳಿಕೊಂಡು ಹೋಗುವಳು. ಒಂದು ಸಲ ಅವಳು "ಹೇಗಾದರೂ ಮಾಡಿ ಮನೆಗೆ ಬಂದು ಹೋಗು, ಅತ್ತಿಗೆ ನಿನ್ನನ್ನು ನೋಡಬಯಸಿದ್ದಾಳೆ" ಎಂದು ಹೇಳಿದಳು. "ನಿನ್ನ ಅಣ್ಣ ಸರಕಾರಿ ಅಧಿಕಾರಿ, ಆತನ ಅಪ್ಪಣೆ ಪಡೆ" ಎಂದೆ. ಆತನ ಒಪ್ಪಿಗೆ ಪಡೆದೇ ಬಂದಿರುವೆ ಎಂದು ಹೇಳಿದ ಮೇಲೆ ಮರುದಿನ ರಾತ್ರಿ ಹತ್ತು ಘಂಟೆಗೆ ಬರುವುದಾಗಿ ಹೇಳಿದೆ. ಆ ಪ್ರಕಾರ ಅಲ್ಲಿಗೆ ಹೋದಾಗ ರಾತ್ರಿ ಹತ್ತು ಘಂಟೆಯಾಗಿತ್ತು. ಅಣ್ಣ, ಅತ್ತಿಗೆ, ಮಕ್ಕಳು ನಿಜವಾಗಿ ಸಂತೋಷಪಟ್ಟರು. ಊಟ ಉಪಚಾರ ಆದಮೇಲೆ ಅಟ್ಟದ ಮೇಲೆ ಸುಬ್ಬಕ್ಕ (ಅಕ್ಕ)ನ ಸಂಗಡ ಮಾತನಾಡುತ್ತ ಮಲಗಿದ್ದೆ. ಒಟ್ಟಾರೆ ಅಣ್ಣನಿಗೆ ತುಂಬಾ ಅಸಮಾಧಾನವಾಗಿತ್ತು. ನಾನು ಬಿಸಿ ತುಪ್ಪವಾಗಿದ್ದೆ, ನಿದ್ರೆ ಮಾಡದೆ ಕೆಳಗೆ, ಮೇಲೆ ಅಡ್ಡಾಡಹತ್ತಿದ. ಕೊನೆಗೆ ನಾನಿದ್ದಲ್ಲಿಗೆ ಬಂದು "ನೀನೇನೊ ದೇಶ ಸೇವೆ ಮಾಡುವಿ. ನಿನ್ನ ಬಗ್ಗೆ ನಮಗೆ ತುಂಬಾ ಆದರಾಭಿಮಾನವಿದೆ. ನಾನು ಸರಕಾರಿ ನೌಕರ, ಒಂದು ವೇಳೆ ನಿನ್ನ ಕೈಸೆರೆ ಇಲ್ಲಿಯೇ ಆದರೆ ನನ್ನ ಗತಿ ಏನು ? ನನ್ನ ಕುಟುಂಬದ ಗತಿ ಏನು ? ನಾನು ಅಂಥ ಸನ್ನಿವೇಶಕ್ಕೆ ಸಿದ್ಧನಿಲ್ಲ" ಎಂದು ಮುಂತಾಗಿ ಒಂದೇ ಸಮನೆ ಮಾತಾಡಹತ್ತಿದರು. ಮುಖ ತುಂಬಾ ಸಪ್ಪೆಯಾಗಿತ್ತು. ಆಗ ರಾತ್ರಿ ಒಂದು ಗಂಟೆ. "ನಿಮಗೆ ನನ್ನಿಂದ ತೊಂದರೆಯಾಗುತ್ತಿದ್ದರೆ ಈ ಕ್ಷಣ ಇಲ್ಲಿಂದ ಹೊರಡುವೆ" ಎಂದು ಹೇಳಿ ಹೊರಟೇ ಬಿಟ್ಟೆ. ಆಗ ಸುಬ್ಬಕ್ಕ, ಅತ್ತಿಗೆ, ಮಕ್ಕಳು ಬಿಕ್ಕಿ ಬಿಕ್ಕಿ ಅತ್ತರು. "ಈಗ ಎಲ್ಲಿಗೆ ಹೋಗುವಿ ?" ಎಂದು ಕೇಳಿದರು. ಅದಾವುದನ್ನು ಕೇಳಬೇಡಿರಿ ಯಾಕೆಂದರೆ ಅದು ನನಗೇ ಗೊತ್ತಿಲ್ಲವೆಂದೆ. ಆ ರಾತ್ರಿ ಓರ್ವ ಗೆಳೆಯನ ಬಾಗಿಲು ಬಡಿದೆ, ಆತ ಒಪ್ಪಲಿಲ್ಲ. ಕೊನೆಗೆ ಪತ್ರಾವಳಿ ಚಾಳದಲ್ಲಿ ಓರ್ವ ಶಿಕ್ಷಕನ ಮನೆಯಲ್ಲಿ ತಂಗಿದ್ದೆ, ಆಗ ರಾತ್ರಿ ಎರಡು ಹೊಡೆದಿತ್ತು. ದಿನದಿಂದ ದಿನಕ್ಕೆ ಕೆಲಸ ಕಡಿಮೆಯಾಗಹತ್ತಿದ್ದರಿಂದ ಭೂಗತರಾಗಿರುವುದೇ ಕೆಲಸವೆಂದು ನನಗೆ ಭಾಸವಾಗಿತ್ತು. ಇಷ್ಟುಹೊತ್ತಿಗೆ ಕರಮರಕರ ಮತ್ತು ಹುಕ್ಕೇರಿಕರ ತಮ್ಮ ಭೂಗತವಾಸ ಜೇಲುವಾಸ ಮುಗಿಸಿ ಹೊರಗೆ ಬಂದಿದ್ದರು. ದಿವಾಕರರು ಮಾತ್ರ ಇನ್ನೂ ಭೂಗತರಾಗಿದ್ದರು.

ಈ ಭೂಗತ ಜೀವನ ನನಗೆ ತುಂಬಾ ಬೇಸರವನ್ನು ತಂದಿತ್ತು. ಸಾಲದ್ದಕ್ಕೆ ಆರೋಗ್ಯವೂ ಅಷ್ಟೊಂದು ಚೆನ್ನಾಗಿರಲಿಲ್ಲ. ಡಾ. ಕಬ್ಬೂರ ಅವರು ತಮ್ಮ ಜೇಲುವಾಸ ಮುಗಿಸಿ ಹೊರ ಬಂದಿದ್ದರು. ಆಗಾಗ ನಾನಿದ್ದಲ್ಲಿಗೆ ಬಂದು ನನ್ನ ಆರೋಗ್ಯ ತಪಾಸಿಸಿ ಉಪಚಾರ ಮಾಡುತ್ತಿದ್ದರು. ಆಗ ಹದಿನಾಲ್ಕು ತಿಂಗಳ ಭೂಗತವಾಸ ಮುಗಿದಿತ್ತು. ಸರ್ಕಾರಕ್ಕೆ ಹಾಜರಾಗುವ ಇಷ್ಟವಿತ್ತು. ಆದರೆ ಅದಕ್ಕೆ ಹಿರಿಯರ ಒಪ್ಪಿಗೆ ಇರಲಿಲ್ಲ. ಶಕುಂತಲಾ ಆಗ ಹಿಂಡಲಗಾ ಜೇಲಿನಲ್ಲಿದ್ದಳು. ಮಗಳು ಭಾರತಿಯ ಪ್ರಥಮ ವರ್ಷದ ಹುಟ್ಟುಹಬ್ಬ 31-10-1943 ಕ್ಕೆ ಬರಲಿತ್ತು. ಒಂದು ವಿಚಾರ ಬಂತು, ಮಗಳ ಹುಟ್ಟುಹಬ್ಬದಂದು ಅವಳನ್ನು ಜೇಲಿನಲ್ಲಿಯೇ ಕಂಡು

ಆಶೀರ್ವದಿಸಬೇಕೆಂಬ ತವಕ ಉಂಟಾಯಿತು. ಅದಕ್ಕಾಗಿ ಬೆಳಗಾವಿಗೆ ಹೋಗಿ ಅಲ್ಲಿ ಕ್ಯಾಂಪ್ ಮಾಡಿ ನಾನು ಭೂಗತನಿದ್ದರೂ ಹೇಗೋ ಪ್ರಯತ್ನ ಮಾಡಿ, ಜೇಲಿನಲ್ಲಿ ಅವಳ ಮತ್ತು ಶಕುಂತಲಾಳನ್ನು ಕಂಡು ಹುಟ್ಟುಹಬ್ಬದ ಉಡುಗೊರೆ ಕೊಟ್ಟು ಬಂದೆ. ಆಗ ನನ್ನ ಸಂಗಡ ನನ್ನ ಮಿತ್ರ ಪಿ. ಕೆ. ಜೋಶಿ ಬಂದಿದ್ದರು. ಇದನ್ನು ಯಶಸ್ವಿಯಾಗಿ ಮಾಡಿಕೊಟ್ಟವರು ಅಂದಿನ ಜೇಲರ್ ನನ್ನ ಪರಮ ಮಿತ್ರ ಬೂವಾಜಿ ಎಂಬುವವರು. ಆಗ ನಾನು ಬೆಳಗಾವಿಯಲ್ಲಿ ಫುಲಬಾಗ್ ಗಲ್ಲಿಯಲ್ಲಿರುತ್ತಿದ್ದೆ, ಸ್ಥಾನಿಕ ಕಾರ್ಯಕರ್ತರ ಸಂಪರ್ಕವಿತ್ತು. ಕು. ಶಕುಂತಲಾ ಥಾಮಣಕರ (ಈಗ ಶಕುಂತಲಾ ಕುರ್ತಕೋಟಿ) ಎಂಬ ವಿದ್ಯಾರ್ಥಿನಿ ಸೈಕ್ಲೋಸ್ಟೈಲ್ ಮೇಲೆ ಬುಲೆಟಿನ್ ತೆಗೆದು ಹಂಚುತ್ತಿದ್ದಳು. ಅವರು ನನ್ನನ್ನು ಕಂಡು ಚರ್ಚಿಸಿ ಆ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ವರದಿ ಒಪ್ಪಿಸಿದಳು. ನಾನು ಇಂಥ ಅನೇಕ ಯಂತ್ರಗಳ ಮೇಲೆ ಕೆಲಸ ಮಾಡಿದ ಅನುಭವವಿದ್ದು, ಅದನ್ನು ನೋಡಿ ಪರೀಕ್ಷಿಸಿ ಸರಿಮಾಡಿ ಕೊಟ್ಟು ಬಂದೆ. ಇಷ್ಟು ಹೊತ್ತಿಗೆ ಶಕುಂತಲಾನ ಬಿಡುಗಡೆ ಬಂದಿತ್ತು. ಕರ್ಮ-ಧರ್ಮ ಸಂಯೋಗದಿಂದ ಬಿಡುಗಡೆಯ ದಿವಸ ನಾನು ಬೆಳಗಾವಿಯಲ್ಲಿಯೇ ಇದ್ದೆ. ಮುಂದೆ ಆ ಫುಲಬಾಗ್ ಗಲ್ಲಿಯ ಕೋಣೆಯಲ್ಲಿ ನಾಲ್ಕು ದಿವಸ ಕಳೆದೆವು. ಅವಳ ಮುಂದಿನ ಕಾರ್ಯಕ್ರಮ ಗೊತ್ತುಮಾಡಬೇಕಿತ್ತು. ನಾನು ಹೇಳಬೇಕೆಂದರೆ ಅವಳ ಆರೋಗ್ಯವೂ ಸುಧಾರಿಸಿತ್ತು. ಆಪ್ತರ ಮನೆಗೆ ಅಲೆದಾಡುವುದಕ್ಕಿಂತ ಪುನಃ ಜೇಲಿಗೆ ಹೋಗುವ ತನ್ನ ಅಂತರಾಳದ ಇಚ್ಛೆಯನ್ನು ಪ್ರಕಟ ಮಾಡಿದಳು. ತಪ್ಪೋ, ಒಪ್ಪೋ ಅದಕ್ಕೆ ನಾನು ಒಪ್ಪಿಗೆ ಕೊಡಲಿಲ್ಲ. ಅವಳು ತುಂಬಾ ವಾದಿಸಿದಳು, ನಾನು ಜಗ್ಗಲಿಲ್ಲ. ನನ್ನ ಇಚ್ಛೆಯ ವಿರುದ್ಧ ಅವಳಿಗೆ ಏನೂ ಮಾಡುವ ಇಷ್ಟವಿರಲಿಲ್ಲ. "ಈಗ ನಿಮ್ಮ ಜೇಲುವಾಸ ಸಮೀಪಕ್ಕೆ ಬಂದಿದೆ. ಇಬ್ಬರೂ ಜೇಲಿನಲ್ಲಿರುವುದು ಎಷ್ಟೊಂದು ಸೊಗಸು" ಎಂದು ಮುಂತಾಗಿ ವಾದಿಸಿದಳು. ಕೊನೆಗೆ ಅವಳು ಸಧ್ಯಕ್ಕೆ ಮುಂಬೈಯಲ್ಲಿರುವ ನನ್ನ ಪರಮ ಮಿತ್ರ ಸತ್ಯಬೋಧ ಸಿಂಗೀತ ಅವರ ಮನೆಗೆ ಹೋಗಿ ಇರಬೇಕೆಂಬ ನಿರ್ಣಯವಾಯ್ತು. ಅಕಸ್ಮಾತ್ ಆತ ಇತ್ತ ಬಂದಿದ್ದ, ಆತನ ಸಂಗಡ ಮುಂಬೈಗೆ ಕಳಿಸಿಕೊಟ್ಟೆ. ನಾನು ವಾಪಸ್ ಧಾರವಾಡಕ್ಕೆ ಬಂದೆ.

# ಅಜ್ಞಾತದಿಂದ ಅಂಧಕಾರಕ್ಕೆ

ನನ್ನ ಕೈದು

ನಾನು ಧಾರವಾಡದಲ್ಲಿದ್ದುದು ಸಾಕಷ್ಟು ಪ್ರಚಾರವಾಗಿತ್ತು. ಪೊಲೀಸರಿಗೂ ಸುಳಿವು ಹತ್ತಿತ್ತು. ಆಗ ನಾವು 26ನೇ ಜನೇವರಿ ಸ್ವಾತಂತ್ರ್ಯ ದಿನವೆಂದು ಆಚರಿಸುತ್ತಲಿದ್ದೆವು. ಅಂದಿನ ಕಾರ್ಯಕ್ರಮವನ್ನು ಅದ್ದೂರಿಯಿಂದ ಮಾಡಬೇಕೆಂದು ಕೆಲವು ವಿದ್ಯಾರ್ಥಿಗಳನ್ನು ಸಂಪರ್ಕಿಸಿದ್ದೆ. ಅಂದು 16-1-1944. ನಾನು ಹೊಸಯಲ್ಲಾಪುರದಲ್ಲಿಯ ಪತ್ತಾರ ಮಾಸ್ತರ ಮನೆಯಲ್ಲಿದ್ದೆ. ವಿಸಾಪೂರದ ಕಾರ್ಯಕರ್ತರು (ಅರಳೀಕಟ್ಟಿ ವಾಸುದೇವಾಚಾರ್ಯ) ಇದಕ್ಕಾಗಿಯೇ ನನ್ನನ್ನು ಕಾಣಲು ಬಂದಿದ್ದರು. ನಾನಿದ್ದಲ್ಲಿಗೆ ಬಂದು ಎಲ್ಲ ವಿವರಗಳನ್ನು ಚರ್ಚಿಸಿ ಹೋದರು. ನನ್ನನ್ನು ಹಿಡಿದುಕೊಟ್ಟವರಿಗೆ ಸರ್ಕಾರವು ಸಂಭಾವನೆ ಕೊಡುವುದನ್ನು ಜಾಹೀರು ಮಾಡಿತ್ತು. ಅವರೇ ಈ ಸುಳಿವನ್ನು ಪೊಲೀಸ್‌ರಿಗೆ ಕೊಟ್ಟಿದ್ದರೆಂಬುದು ನಂತರ ತಿಳಿಯಿತು. ಆ ದಿನ ರಾತ್ರಿ ಎಂಟು ಗಂಟೆಗೆ ಊಟ ಮಾಡಿ ಹೊರಬಿದ್ದೆ. ಕರ್ನಾಟಕ ಕಾಲೇಜು ಹಾಸ್ಟೆಲ್‌ದಲ್ಲಿದ್ದ ರೆಬೆಲೋ ಎಂಬ ವಿದ್ಯಾರ್ಥಿಯ ಕಡೆಗೆ ಬರುವೆನೆಂದು ಹೇಳಿ ಕಳಿಸಿದ್ದೆ. ನನ್ನ ಕಿಸೆಯಲ್ಲಿ 26 ಜನೇವರಿ ಕಾರ್ಯಕ್ರಮ ಮತ್ತು ಒಂದು ಸ್ಟೆನ್ಸಿಲ್ ಪೇಪರ್ ಇತ್ತು. ಕಾರ್ಯಕ್ರಮ ನಿರ್ಧಾರಗೊಳ್ಳುವದಿತ್ತು. ಇನ್ನೇನು ಹೊಸಯಲ್ಲಾಪುರದಿಂದ ರಾಷ್ಟ್ರೀಯ ಹೆದ್ದಾರಿ (ಪುಣೆ-ಬೆಂಗಳೂರು ರಸ್ತೆ) ಕೂಡುವವನಿದ್ದೆ ಅಷ್ಟರಲ್ಲಿ ಕಂಬಳಿ ಮುಸುಕು ಹಾಕಿಕೊಂಡ ವ್ಯಕ್ತಿ ನನ್ನ ಹಿಂದಿನಿಂದ ಓಡಿಬಂದು ನನ್ನನ್ನು ತೆಕ್ಕೆಬಿದ್ದು ತನ್ನ ಮುಸುಕು ತೆಗೆದು "ನಿಮ್ಮನ್ನು ಕೈದು ಮಾಡಿರುವೆ ನಾನು ಬೆಲ್ಲದ ಫೌಜದಾರ್" ಎಂದು ಹೇಳಿದರು. ಅಷ್ಟರಲ್ಲಿ ನಾಲ್ಕೈದು ಪೊಲೀಸ್‌ರು ನನ್ನ ಸುತ್ತುಗಟ್ಟಿದರು. ನನ್ನ ಕಿಸೆ ತಪಾಸಿಸಿ ಅದರಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ವಶಮಾಡಿಕೊಂಡು ಪೊಲೀಸ್ ಚೌಕಿಗೆ ಕರೆದುಕೊಂಡು ಹೋದರು. ಒಂದು ವಿಧವಾಗಿ ಭೂಗತ ಅಧ್ಯಾಯ ಮುಗಿದುದರಿಂದ ನನಗೆ ಸಂತೋಷವೇ ಆಗಿತ್ತು. ರೋಗಿ ಬಯಸಿದ ಔಷಧವನ್ನೇ ಡಾಕ್ಟರು ಕೊಟ್ಟಂತಾಯಿತು.

ಪೊಲೀಸ್ ಕಛೇರಿಯ ಅಧಿಕಾರಿಗಳು ಅನೇಕಾನೇಕ ಪ್ರಶ್ನೆಗಳನ್ನು ಕೇಳಿದರು. ಯಾವುದಕ್ಕೂ ನಿಜವಾಗಿ ನನಗೆ ಗೊತ್ತಿರಲಿಲ್ಲ ಎಂಬ ಉತ್ತರವನ್ನೇ ಹೇಳಿದೆ. ಅಂದಿನ ರಾತ್ರಿ ಹಾಸಿಗೆ ಹೊದಿಕೆ ಇಲ್ಲದೆ ತಿಗಣೆ ತುಂಬಿದ ಪೊಲೀಸ್ ಚೌಕಿಯ ಬೆಂಚಿನ ಮೇಲೆಯೇ ಕಳೆದೆ. ಮರುದಿನ ಬೆಳಿಗ್ಗೆ ನಾಲ್ಕು ಮಂದಿ ಸಶಸ್ತ್ರ ಪೊಲೀಸ್‌ರ ಮಧ್ಯೆ ಮೆರವಣಿಗೆ ಮಾಡುತ್ತ ರವಿವಾರ ಪೇಟೆಯಲ್ಲಿಯ ಹರ್ಶಿ ಮ್ಯಾಜಿಸ್ಟ್ರೇಟ್‌ರ ಮುಂದೆ ಹಾಜರುಮಾಡಿದರು. ನಂತರ ನನ್ನನ್ನು ಬೆಳಗಾವಿ ಜಕಾತಿ ಕಟ್ಟಿ

ಹತ್ತಿರ ಇದ್ದ ಧಾರವಾಡ ಜೇಲಿಗೆ ಕರೆದೊಯ್ದರು. ಆಗ ಅಲ್ಲಿ ಸುಮಾರು ಎರಡನೂರು ಕಚ್ಚಾ (Under trial) ರಾಜಕೀಯ ಕೈದಿಗಳಿದ್ದರು. ಅವರ ಮೇಲಿನ ಖಟ್ಲೆ ಕೋರ್ಟಿನಲ್ಲಿ ನಡೆದಿದ್ದವು. ಕರಮರಕರರು ವಕೀಲರನ್ನು ಸಂಘಟಿಸಿ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಲಿದ್ದರು. ಒಂದು ವಿಧವಾಗಿ ನಾನು ನನ್ನ ಬಳಗದಲ್ಲಿ ಬಿದ್ದಷ್ಟೇ ಸಂತೋಷವಾಯ್ತು. ನನ್ನ ಪರಮ ಮಿತ್ರ ಮಾಗಡಿ ಅಲ್ಲಿಯೇ ಇದ್ದರು. ಅಲ್ಲಿ ನಾನು ಕೇವಲ ಆರು ದಿವಸ ಮಾತ್ರ ಇದ್ದೆ. ಹೀಗೆ ಅಜ್ಞಾತದಿಂದ ಅಂಧಕಾರಕ್ಕೆ ಬಂದೆ.

ನನ್ನ ಕೈದಾದ ವರ್ತಮಾನ ವೃತ್ತಪತ್ರಿಕೆಯಲ್ಲಿಯೂ ಬಂದಿತ್ತು. ಕರಮರಕರ ಅವರು ನನ್ನನ್ನು ಕಾಣಲು ಬಂದರು. ಮತ್ತು ನನ್ನ ಖಟ್ಲೆ ನಡೆಸಲು ವಕೀಲರನ್ನು ಕೊಡಬೇಕೆಂದು ಪರಿಪರಿಯಾಗಿ ಹೇಳಿದರು. "ವಕೀಲರನ್ನು ಕೊಟ್ಟರೆ ನಿನ್ನ ಬಿಡುಗಡೆ ನಿಶ್ಚಿತ" ಎಂದು ಹೇಳಿದರು. ನಾನು ಕೈದಾದಾಗ ನಮ್ಮ ಧೋರಣೆ ಏನಿರಬೇಕು ಎಂಬ ಬಗ್ಗೆ ಹಿಂದಕ್ಕೆ ಮುಂಬೈಯಲ್ಲಿ ಸೇರಿದ ಸಭೆಯಲ್ಲಿ ದೀರ್ಘ ಚರ್ಚೆಯಾಗಿ "ನಾವು ಈ ಸರ್ಕಾರವನ್ನು ಮನ್ನಿಸುವುದಿಲ್ಲ"ವೆಂದು ಸ್ಪಷ್ಟವಾಗಿ ಹೇಳಬೇಕು, ಎಂದು ಮಾರ್ಗದರ್ಶನ ಮಾಡಲಾಗಿತ್ತು. ನಾನು ಅದಕ್ಕೆ ಅಂಟಿಕೊಳ್ಳುವುದಾಗಿ ಕರಮರಕರ ಅವರಿಗೆ ಹೇಳಿದೆ, ವಕೀಲರನ್ನು ಕೊಡಲಿಲ್ಲ. ನನ್ನನ್ನು 19-1-1944 ರಂದು ಅಂದಿನ ಕಲೆಕ್ಟರ್ ಕಂಪೌಂಡ್‌ದಲ್ಲಿದ್ದ ಮೊದಲನೆಯ ವರ್ಗದ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟ್ ಶ್ರೀ ಪಿ. ಬಿ. ಹರ್ಶಿ ಅವರ ಮುಂದೆ ಖಟ್ಲೆ ನಡೆಯಿತು. "ನಾನು ಈ ಸರ್ಕಾರವನ್ನಾಗಲೀ, ಈ ನ್ಯಾಯಾಲಯವನ್ನಾಗಲೀ ಮನ್ನಿಸುವುದಿಲ್ಲ. ನಾನು ಸ್ವತಂತ್ರ ನಾಗರಿಕ" ಎಂದು ಹೇಳಿದೆ. ಮ್ಯಾಜಿಸ್ಟ್ರೇಟ್‌ರು ಕೇವಲ ಐದೇ ನಿಮಿಷದಲ್ಲಿ ನನ್ನ ಖಟ್ಲೆಯ ಬಗ್ಗೆ ತಮ್ಮ ನಿರ್ಣಯವನ್ನು ಕೊಟ್ಟರು. ಎರಡು ವರ್ಷ ಸಶ್ರಮ ಶಿಕ್ಷೆ ಮತ್ತು 500 ರೂ. ದಂಡ. ದಂಡಕೊಡದಿದ್ದಕ್ಕೆ ಪುನಃ ಆರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿದರು. ನಾವು ತತ್ವಗಳನ್ನು ಎಷ್ಟೇ ಗಟ್ಟಿಮುಟ್ಟಾಗಿ ಪಾಲಿಸಬೇಕೆಂಬ ಇಚ್ಛೆಯಿದ್ದರೂ ಅದನ್ನು ಪ್ರತ್ಯಕ್ಷ ಜೀವನದಲ್ಲಿ ತರುವುದು ಕಷ್ಟದ ಕೆಲಸ. ಅವರ ತೀರ್ಪು ಕೇಳಿ ಒಂದು ಕ್ಷಣ (ಮೈಯಲ್ಲಿ ವಿದ್ಯುತ್ ಸಂಚಾರವಾಗಿ) ತಣ್ಣಗಾದೆ, ಮರುಕ್ಷಣವೇ ಸಾವರಿಸಿಕೊಂಡೆ. ನನ್ನನ್ನು ಪೊಲೀಸ್‌ರು ಜೇಲಿಗೆ ಕರೆದುಕೊಂಡು ಹೋದರು. ನನ್ನ ಅನೇಕ ಸಂಗಡಿಗರು ಕಳೆದ ನಾಲ್ಕಾರು ತಿಂಗಳುಗಳಿಂದ ತಮ್ಮ ಖಟ್ಲೆಯ ಬಗ್ಗೆ ಮಾತನಾಡುತ್ತಿದ್ದರು. ಇಷ್ಟು ಬೇಗ ನನ್ನ ತೀರ್ಪು ಆದಾಗ ಮಿತ್ರರೆಲ್ಲ ಅಭಿನಂದಿಸಿದರು. ತಾವು ಅದೆಷ್ಟೋ ದಿವಸ ಈ ಅನಿಶ್ಚಿತ ಸ್ಥಿತಿಯಲ್ಲಿರುವುದೆಂದು ಮರುಗಿದರು. ಮರುದಿನ ನನ್ನನ್ನು ರಾತ್ರಿ ಗಾಡಿಯಿಂದ ವಿಸಾಪೂರ ಜೇಲಿಗೆ ಸ್ಥಳಾಂತರಿಸಲಾಗುವದೆಂಬ ವರ್ತಮಾನ ಬಂತು.

ಆಗ ಹೆಂಡತಿ ಶಕುಂತಲಾ ಮುಂಬೈಯಲ್ಲಿದ್ದಳು. ವೃತ್ತಪತ್ರಿಕೆಯಲ್ಲಿ ಬಂದ ಈ ವರ್ತಮಾನವನ್ನು ನೋಡಿ ಒಂದು ವಿಧವಾಗಿ ಸಂತಸದ ನಿಟ್ಟುಸಿರು ಬಿಟ್ಟು, ದೇವರು ತನ್ನ ಮೊರೆಯನ್ನು ಕೇಳಿದನೆಂದು ತುಪ್ಪದ ದೀಪ ಹಚ್ಚಿ ನಮಸ್ಕಾರ ಮಾಡಿದಳು. ಆಗ ಭೂಗತರಾಗಿರುವುದು ತುಂಬಾ ಗಂಡಾಂತರವಾದುದರಿಂದ ದಾಬಡೆಯವರು ಕೈದಾಗಲೆಂದು ನಿತ್ಯ

ದೇವರನ್ನು ಬೇಡಿಕೊಳ್ಳುತ್ತಿದ್ದಳು. ತಕ್ಷಣ ಮಗಳೊಂದಿಗೆ ಧಾರವಾಡಕ್ಕೆ ಬಂದೇ ಬಿಟ್ಟಳು. ದಾಬಡೆಯವರಿಗೆ ಶಿಕ್ಷೆಯಾದ ಸಮಾಚಾರ ಸ್ಟೇಶನ್‌ದಲ್ಲಿಯೇ ತಿಳಿಯಿತು. ಆಗ ಸಂಜೆಯಾಗುತ್ತಿದ್ದರಿಂದ ಸಾಮಾನುಗಳನ್ನು ಅಲ್ಲಿಯೇ ಇಟ್ಟು ಜೇಲಿಗೆ ಧಾವಿಸಿದಳು. ಆಗ ನಾನು ಜೇಲಿನ ಕಛೇರಿಯಲ್ಲಿ ಜೇಲರ್ ಸಂಗಡ ಹರಟುತ್ತ ಸಂತೋಷದಿಂದ ಕುಳಿತಿದ್ದೆ. ನನ್ನನ್ನು ನೋಡಿ ತುಂಬಾ ಸಮಾಧಾನಪಟ್ಟಳು. ಕೂಡಲೇ ನನಗೆ ಜೇಲಿನಲ್ಲಿ ಬೇಕಾಗುವ ರಾಟಿ, ಹಂಜಿ, ಕೊಬ್ಬರಿ ಎಣ್ಣೆ ಮತ್ತು ಕೆಲವು ಗ್ರಂಥಗಳನ್ನು ತಂದುಕೊಟ್ಟಳು. ಆಗ ಅಲ್ಲಿಯ ಜೇಲರ್ ಕೂಡಾ ತುಂಬಾ ಗೌರವದಿಂದ ನಡೆದುಕೊಳ್ಳುತ್ತಲಿದ್ದರು. ಮರುದಿನ ಅಂದರೆ 21-1-1944 ರಂದು ರಾತ್ರಿ ಗಾಡಿಯಿಂದ ಪುಣೆ ಮಾರ್ಗವಾಗಿ ವಿಸಾಪೂರಕ್ಕೆ ಕರೆದುಕೊಂಡು ಹೋಗಲು ಇಬ್ಬರು ಪೊಲೀಸ್‌ರು ಬಂದರು. ರಾತ್ರಿ 10-30 ಕ್ಕೆ ರೈಲುನಿಲ್ದಾಣ ತಲುಪಿದೆವು, ಅಲ್ಲಿ ಆಪ್ತರು, ಮಿತ್ರರು ಸೇರಿದ್ದರು. ತುಂಬಾ ಸಂತೋಷದ ಮಾತುಕತೆಗಳಾದವು. ಶಕುಂತಲಾ ಮಗುವನ್ನು ಎತ್ತಿಕೊಂಡು ಬಂದಿದ್ದಳು. ಆದರೆ, ಆ ಗದ್ದಲದಲ್ಲಿ ಮಾತನಾಡುವುದೇ ದುಸ್ತರವಾಗಿತ್ತು. ಕಾರಣ ಅವಳಿಗೆ ಪುಣೆಯವರೆಗೆ ನನ್ನ ಸಂಗಡ ಬರಲು ಹೇಳಿದೆ. ಅವಳು ಆ ಸಿದ್ಧತೆಯಿಂದಲೇ ಬಂದಿದ್ದಳು. ರಾತ್ರಿ 10-30 ಕ್ಕೆ ಗಾಡಿ ಬಂತು. ನಾವೆಲ್ಲ ಅಂದರೆ ಇಬ್ಬರು ಪೊಲೀಸ್‌ರು, ಶಕುಂತಲಾ, ಮಗು ಮತ್ತು ನಾನು ಒಂದೇ ಡಬ್ಬಿಯಲ್ಲಿ ಹತ್ತಿದೆವು. ನಮ್ಮಿಬ್ಬರ ಹೊರ್ತು ಎಲ್ಲರೂ ಗಾಢನಿದ್ರೆಯಲ್ಲಿ ಮಲಗಿದ್ದರು. ಈ ಪ್ರಕಾರವಾಗಿ ಮನಬಿಚ್ಚಿ ಮಾತನಾಡಲಿಕ್ಕೆ ನಮಗೆ ಕಳೆದ ಎರಡು ವರ್ಷ ವೇಳೆ ದೊರೆತಿರಲಿಲ್ಲ. ಕಣ್ಣಿಗೆ ಕಣ್ಣು ಹಚ್ಚದೆ ನಮ್ಮ ಹರಟೆ ಸಾಗಿತ್ತು. ಪುಣೆ ನಿಲ್ದಾಣದಲ್ಲಿ ಬೇರೆ ಗಾಡಿ ಹತ್ತಿ ಹೋಗಬೇಕಾಗಿತ್ತು. ಇನ್ನು ಮೂವತ್ತು ತಿಂಗಳ ಅಗಲುವಿಕೆ ಎಂಬ ವಿಚಾರ ತಲೆಯಲ್ಲಿ ಬಂದಾಗ ಶಕುಂತಲಾ ತುಂಬಾ ಸಪ್ಪೆಯಾಗಿದ್ದಳು. ಇಬ್ಬರ ಕಣ್ಣಂಚಿನಲ್ಲಿಯೂ ಗಂಗಾಮಾತೆ ಪ್ರಸನ್ನಳಾಗುವವಳಿದ್ದಳು. ಆದರೆ ಗಂಗೆ ಹರಿಯಲಿಲ್ಲ, ಅಂದಿನ ಗಾಡಿ ತಪ್ಪಿತು.

## ಒಂದು ದಿನದ ದಾಂಪತ್ಯ

ಈ ಗಾಡಿ ಪುಣೆಗೆ ಬರುವ ಪೂರ್ವದಲ್ಲಿಯೇ ಅದು ಹೊರಟು ಹೋಗಿತ್ತು. ಮತ್ತೆ ಸಮಸ್ಯೆಯಾಗಿತ್ತು. ಪೊಲೀಸ್‌ರು ನನ್ನನ್ನು ಕರೆದುಕೊಂಡು ಅತ್ತಿತ್ತ ಪೊಲೀಸ್ ಚೌಕಿಗಳಿಗೆ ಹೋಗಿ ಬಂದರೂ ಸಮಸ್ಯೆ ಬಗೆಹರಿಯಲಿಲ್ಲ. ಕೊನೆಗೆ ಅವರು ಈ ಸಮಸ್ಯೆಯನ್ನು ನನಗೇ ಬಿಟ್ಟರು. ಅದಕ್ಕೆ "ನಿಮ್ಮ ಒಪ್ಪಿಗೆ ಇದ್ದರೆ ನನ್ನ ವ್ಯವಸ್ಥೆ ನಿಶ್ಚಿತವಾಗಿದೆ. ಆದರೆ ಆ ಸಂದರ್ಭದಲ್ಲಿ ನಾನು ಬೇರೆ ಕಡೆ ಮತ್ತು ನೀವು ಬೇರೆ ಇರಬೇಕಾಗುವುದು" ಎಂದು ಹೇಳಿದೆ. ಅವರು ಒಪ್ಪಿದರು. ನಾವೆಲ್ಲರೂ ಟಾಂಗಾದಲ್ಲಿ ಡೆಕ್ಕನ್ ಜಮಖಾನೆಗೆ ಹೊರಟೆವು. ಅಲ್ಲಿಯ ಹಿಂದೀ ವಿದ್ಯಾಲಯದ ಆವಾರದಲ್ಲಿ ಪೊಲೀಸ್‌ರನ್ನು ಇಳಿಸಿ, ನಾವು ಅಂದರೆ ಶಕುಂತಲಾ, ಮಗು ಮತ್ತು ನಾನು ನಮ್ಮ ಮೊದಲಿನ ಭೂಗತ ನಿವಾಸಕ್ಕೆ ಹೋದೆವು. ಅಲ್ಲಿ ಮಿತ್ರರೆಲ್ಲ ಕುಳಿತಿದ್ದರು ಅವರಿಗೆ ತುಂಬಾ ಆಶ್ಚರ್ಯ. ದಾಬಡೆಯವರಿಗೆ ಶಿಕ್ಷೆಯಾದ ವರ್ತಮಾನವನ್ನು ವೃತ್ತಪತ್ರಿಕೆಯಲ್ಲಿ ಓದಿದ್ದರು.

ಅಂಥದರಲ್ಲಿ ಈಗ ಕುಟುಂಬ ಸಹಿತ ಒಂದು ವಿವಾಹಕ್ಕೆ ಹೋದಂತೆ ಬಂದರೆ ಅವರಿಗೇನು ಅನಿಸಿರಬೇಕು ! ಬಹುಶಃ ನಾನು ಜೇಲಿನಿಂದ ಓಡಿ ಬಂದಿರಬೇಕೆಂಬ ವಿಚಾರ ಅವರಿಗೆ ಬಂದಿದ್ದರೆ ಆಶ್ಚರ್ಯವಿಲ್ಲ. ಸತ್ಯಸಂಗತಿಯೆಲ್ಲ ತಿಳಿದ ಮೇಲೆ ಅವರಿಗೆಲ್ಲ ತುಂಬಾ ಸಂತೋಷವಾಯ್ತು. ಆಗ ರಾತ್ರಿ ಎಂಟು ಗಂಟೆ. ಅಲ್ಲಿ ಒಂದು ಸಂತೋಷಕೂಟದ ಏರ್ಪಾಟನ್ನೇ ಮಾಡಿದರು. ರಾತ್ರಿ ಹತ್ತು ಗಂಟೆಯವರೆಗೆ ಊಟ, ಹರಟೆ ಮುಗಿದ ಮೇಲೆ ಮಿತ್ರರೆಲ್ಲ ಆ ಸ್ಥಳವನ್ನು ನಮಗೆ ಒಪ್ಪಿಸಿ ಹೋದರು. ಅಂದು ರಾತ್ರಿ ಕೂಡಾ ತುಂಬಾ ಮನಬಿಚ್ಚಿ ಮಾತಾಡಿ ಸಂತಸದ ಹಕ್ಕಿಗಳಂತೆ ಆ ರಾತ್ರಿ ಕಳೆದೆವು. ಜೀವನದಲ್ಲಿ ಒದಗಿಬಂದಂಥ ರಸ ನಿಮಿಷಗಳೆಲ್ಲ ಮರೆಯುವುದೆಂತು ? ಮರುದಿನ ಬೆಳಿಗ್ಗೆ ಪುನಃ ಇತರ ಮಿತ್ರರೆಲ್ಲ ಸೇರಿದ್ದರು. ಸ್ವತಂತ್ರ ನಾಗರಿಕರಂತೆ ಈ 24 ಗಂಟೆ ಕಳೆದು ಸಂಜೆ ಐದು ಗಂಟೆಯ ಗಾಡಿಯಿಂದ ವಿಸಾಪೂರಕ್ಕೆ ಬೀಳ್ಕೊಟ್ಟರು.

ಇಲ್ಲಿ ಒಂದು ಮಾತು ಹೇಳಲೇಬೇಕು. ಧಾರವಾಡದಿಂದ ಪುಣೆಗೆ ನಾವು ಬರುವಾಗ ನಮ್ಮಿಬ್ಬರ ಮನಸ್ಸಿನಲ್ಲಿ ಒಂದು ಬಗೆಯ ಕೊರಗಿತ್ತು. ಇಬ್ಬರೂ ಮನಸ್ಸು ಬಿಗಿಹಿಡಿದು ಮಾತನಾಡುತ್ತಿದ್ದೆವು. ಪುಣೆ ಸ್ಟೇಶನ್ ಸಮೀಪ ಬಂದಂತೆ ಶಕುಂತಲಾನ ಕಣ್ಣಂಚಿನಲ್ಲಿ ನೀರು ಕಾಣಹತ್ತಿತ್ತು. ಅದರ ಪರಿಣಾಮ ನನ್ನ ಮೇಲೆ ಆಗದೇ ಇರಲಿಲ್ಲ. ಆದರೆ ಕೋಡಿ ಮಾತ್ರ ಹರಿಯಲಿಲ್ಲ. ಒಂದು ವೇಳೆ ಅದೇ ಸಮಯಕ್ಕೆ ಗಾಡಿ ಸಿಕ್ಕು ಬೀಳ್ಕೊಟ್ಟಿದ್ದರೆ ಖಂಡಿತವಾಗಿ ಇಬ್ಬರ ಕಣ್ಣುಗಳಿಂದಲೂ ಕೋಡಿ ಹರಿಯಬಹುದಿತ್ತು. ಆದಾಗಬಾರದೆಂದೇ ದೇವರ ಸಂಕಲ್ಪ. ಅದಕ್ಕಾಗಿ ಅಂದಿನ ಗಾಡಿ ತಪ್ಪಿ ಮರುದಿನ ಹೊರಡುವ ಸನ್ನಿವೇಶ ಕೂಡಾ. ಹೀಗೆ ಒಂದು ದಿನದ ದಾಂಪತ್ಯ. ಅದೂ ಶಿಕ್ಷೆಯಾದ ನಂತರ ! ಸಾಮಾನ್ಯವಾಗಿ ಇದನ್ನು ಹೇಳಿದರೆ ನಂಬುವುದೇ ಕಷ್ಟ ! ಆದರೆ ಇದು ಸತ್ಯ. ಅಂತೂ 23-1-1944 ಕ್ಕೆ ರಾತ್ರಿ ಎಂಟು ಗಂಟೆಗೆ ವಿಸಾಪೂರ ಜೇಲು ತಲುಪಿದೆ.

## ವಿಸಾಪೂರ ತಾತ್ಪೂರ್ತಿಕ ಜೇಲು

ಈಗಿನ ಮಹಾರಾಷ್ಟ್ರ ರಾಜ್ಯದ ಅಹ್ಮದನಗರ ಜಿಲ್ಲೆಯ ಒಂದು ಕುಗ್ರಾಮ ವಿಸಾಪೂರ. ಆಗ ಅದು ಮುಂಬೈ ರಾಜ್ಯದಲ್ಲಿತ್ತು. ಉತ್ತರ ಕರ್ನಾಟಕವೂ ಮುಂಬೈ ರಾಜ್ಯದ ಭಾಗವೇ ಆಗಿತ್ತು. ಹೀಗಾಗಿ ಅಲ್ಲಿ ಕನ್ನಡ, ಮರಾಠಿ, ಗುಜರಾತಿ ಮಾತಾಡುವವರೆಲ್ಲ ಸೇರುತ್ತಿದ್ದರು. ಅನೇಕ ಕರ್ನಾಟಕದ ರಾಜಕೀಯ ಕೈದಿಗಳೂ ಅಲ್ಲಿದ್ದರು. ಇದೊಂದು ತಾತ್ಪೂರ್ತಿಕವಾದ - ಜೇಲ್‌ಭಾಷೆಯಲ್ಲಿಯೇ ಹೇಳಬೇಕೆಂದರೆ "ಟೆಂಪರರಿ ಜೇಲ್". ಜೇಲಿನ ಯಾವ ಗಾಂಭೀರ್ಯತೆಯೂ ಅಲ್ಲಿಲ್ಲ. ಸುತ್ತಲೂ ಗೋಡೆಗಳಿಲ್ಲ, ಎರಡು ಆಳೆತ್ತರ ಮುಳ್ಳುತಂತಿ ಬಿಗಿದಿದ್ದರು. ಕೈದಿಗಳು ವಾಸಿಸುವ ಬ್ಯಾರಕ್ಕುಗಳೆಂದರೆ ಹಳ್ಳಿಯ ಧರ್ಮಶಾಲೆಗಳಂತಿದ್ದವು. ವಿದ್ಯುತ್ ಇರಲಿಲ್ಲ. ಒಂದೊಂದು ಬ್ಯಾರಕ್ಕಿನಲ್ಲಿ ಸುಮಾರು 100 ಕೈದಿಗಳ ವಾಸ. ಅವರಿಗೆಲ್ಲ ಸೇರಿ ಆರು ಕಂದೀಲುಗಳನ್ನು ಕೊಡುತ್ತಿದ್ದರು. ಆದರೆ ಇದೊಂದು ನಿಸರ್ಗ ರಮಣೀಯ ಸ್ಥಳ.

ತಂತಿಗಳಿರುವುದರಿಂದ ಸುತ್ತಲಿನ ದೃಶ್ಯಗಳನ್ನೆಲ್ಲ ಸುಲಭವಾಗಿ ನೋಡಿ ಸವಿಯಬಹುದು. ಜೇಲಿನ ಹಿಂಭಾಗದಲ್ಲಿ ಒಂದು ವಿಶಾಲವಾದ ಕೆರೆಯಿತ್ತು. ಕಣ್ತಪ್ಪಿಸಿ ಕೆಲವರು ಅಲ್ಲಿ ಸ್ನಾನ ಮಾಡುತ್ತಿದ್ದರು.

ರಾತ್ರಿಯಾದುದರಿಂದ ನನ್ನನ್ನು ಖಾಸಗಿ ಪೋಷಾಕಿನಲ್ಲಿಯೇ ಕರೆದುಕೊಂಡು ಹೋಗಿ ಹದಿಮೂರನೇ ಬ್ಯಾರಕ್ಕಿನಲ್ಲಿ ಹಾಕಿ ಬೀಗ ಜಡಿದರು. ಅಲ್ಲಿಯ ಸ್ವಾಗತ ಅವರ್ಣನೀಯ. ಅನೇಕ ಮಿತ್ರರು ಸಂತೋಷದಿಂದ ತಬ್ಬಿಕೊಂಡರು. ಒಂದೆರಡು ತಾಸು ಮಾತಾಡಿರಬೇಕು. ನಾನು ಜೇಲಿಗೆ ಕಳಿಸಿದ ಅನೇಕ ಮಿತ್ರರೂ ಇದ್ದರು. ಹುಬ್ಬಳ್ಳಿಯ ವಿದ್ಯಾರ್ಥಿಗಳಾದ ಸುಬ್ಬಣ್ಣವರ ಮತ್ತು ಎಂ. ಜಿ. ಆಚಾರ್ಯರು ಆನಂದದಿಂದ ನನ್ನನ್ನು ಬರಮಾಡಿಕೊಂಡರು. ಮತ್ತು ಹಿಂದಿನ ಘಟನೆಯ ಮೆಲಕು ಹಾಕಿದರು. ಅಷ್ಟರಲ್ಲಿ ಓರ್ವ ಮಿತ್ರ ಬಂದು 'ಬುರ್ಲಿ ಮಾಸ್ತರ ಫೋನ್ ಬಂದಿದೆ' ಎಂದು ಹೇಳಿದ. ನನಗೆ ಆಶ್ಚರ್ಯ, ಇಂಥ ಜೇಲಿನಲ್ಲಿ ಫೋನು ಹೇಗೆ ಬಂತು ? ಅದಕ್ಕೆ ಅವರ ಉತ್ತರ 'ಮಗ್ಗಲು ಬ್ಯಾರಕ್‌ನಲ್ಲಿರುವ ಬುರ್ಲಿ ಅವರಿಗೆ ಕಿಂಡಿಯಿಂದ ಒದರಿ ಮಾತಾಡುವುದೇ ನಮ್ಮ ಫೋನು' ಎಂದು ಹೇಳಿದರು. ಬುರ್ಲಿ ಆಚಾರ್ಯರು 14 ನೇ ನಂಬರಿನಲ್ಲಿದ್ದರು. ಅವರೂ ತುಂಬಾ ಸಂತೋಷದಿಂದ ಸ್ವಾಗತಿಸಿದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನನಗೆ ಜೇಲಿನಲ್ಲಿ ಬಂದಿರುವೆನೆಂದೇ ಅನಿಸಿರಲಿಲ್ಲ. ಭೂಗತ ಜೀವನದ ಕಷ್ಟಗಳನ್ನು ನೆನೆದರೆ ಇದೊಂದು ಮದುವೆಯ ಮಂಟಪದಂತೆ ಭಾಸವಾಗಿತ್ತು.

ಆ ಜೇಲಿನ ಅಂದಿನ ಸಂಖ್ಯೆ ಸುಮಾರು ಎರಡು ಸಾವಿರ. ಅದರಲ್ಲಿ ಕೆಲವು ಕ್ರಿಮಿನಲ್ ಕೈದಿಗಳಿದ್ದರು. ಸ್ಥಾನಬದ್ಧರ ಸ್ಥಳದಲ್ಲಿ ಮಧು ಲಿಮಯೆ, ಡಾ. ಅಲ್ವಾರಿಸ್ ಇವರೇ ಮೊದಲಾದವರಿದ್ದರು. 13, 14, 15 ಈ ಮೂರೂ ಬ್ಯಾರಕ್‌ಗಳು ಒಂದೇ ಕಂಪೌಂಡಿನಲ್ಲಿದ್ದು ಒಬ್ಬರನ್ನೊಬ್ಬರು ನಿರಾತಂಕವಾಗಿ ಭೆಟ್ಟಿಯಾಗಿ ಮಾತನಾಡಬಹುದಿತ್ತು. ಸ್ಥಾನಬದ್ಧ ಮತ್ತಿತರ ಕೈದಿಗಳನ್ನು ತಂತಿಯ ಮೂಲಕವೇ ನೋಡಬೇಕು. ಹಬ್ಬ ಹರಿದಿನಗಳಲ್ಲಿ ಅವರನ್ನೆಲ್ಲ ನಾವು ಕಾಣುತ್ತಿದ್ದೆವು.

## ಸ್ವಾತಂತ್ರ್ಯ ದಿನಾಚರಣೆ ಮತ್ತು ಲಾಠೀಹಲ್ಲೆ

ನಾನು ಈ ಜೇಲಿಗೆ ಬಂದದ್ದೇ 23-1-1944 ರಂದು. ಆಗ ನಾವು 26 ನೇ ಜನೇವರಿಯನ್ನು ಸ್ವಾತಂತ್ರ್ಯ ದಿನವೆಂದು ಆಚರಿಸುತ್ತಿದ್ದೆವು. ನಾನು ತೀರ ಹೊಸಬ. ಅಲ್ಲಿಯ ಪರಿಸ್ಥಿತಿಯ ಸಂಪೂರ್ಣ ಪರಿಜ್ಞಾನವಿರಲಿಲ್ಲ. ಅಂದಿನ ಕಾರ್ಯಕ್ರಮವೇನೆಂದರೆ, ಬೆಳಿಗ್ಗೆ ಎಂಟು ಗಂಟೆಗೆ ನಾವು ಮೂರೂ ಬ್ಯಾರಕ್ಕಿನವರೆಲ್ಲ ಸೇರಿ ಧ್ವಜವಂದನೆ ಮಾಡುವುದು. ಒಂದು ಚಿಕ್ಕ ರಾಷ್ಟ್ರಧ್ವಜವನ್ನು ಹೇಗೋ ದೊರಕಿಸಿಕೊಂಡಿದ್ದರು. ಅನಂತರ ಎಲ್ಲರೂ ಒಂದೆಡೆ ಸೇರಿದೆವು. ಭಾರತ ಮಾತೆಯ ಫೋಟೋದ ಮುಂದೆ ಕುಳಿತು ಭಜನೆ, ಹಾಡು ಮುಂತಾದ ಕಾರ್ಯಕ್ರಮಗಳು ನೆರವೇರಿದವು. ರಾಜಕೀಯ ಕೈದಿಗಳಿಗೆ ಏನೊಂದೂ ಕೆಲಸವನ್ನು ಕೊಟ್ಟಿರಲಿಲ್ಲ. ಅಲ್ಲಿ ಭಜನೆ, ಪ್ರಾರ್ಥನೆಯ ಸದ್ದು ಎಲ್ಲ ಕಡೆಗೆ ಹರಡಿತ್ತು. ಅದೇ ವೇಳೆಗೆ ಜೇಲ್ ಸುಪರಿಂಟೆಂಡೆಂಟರ ಬೆಳಗಿನ ರೌಂಡ್ (Round)

ಇತ್ತು. ಜೇಲಿನಲ್ಲಿ ಶಬ್ದ ಮಾಡುವುದು ಮಹಾಪರಾಧ. ಪ್ರಾರ್ಥನೆ, ಭಜನೆಯ ಸದ್ದನ್ನು ಕೇಳಿ ಆ ಸಾಹೇಬರ ಗುಂಪು ನಮ್ಮ ಸ್ಥಳಕ್ಕೆ ಬಂತು. ನೂರಕರ ಎಂಬುವವರು ಜೇಲ್ ಮುಖ್ಯಾಧಿಕಾರಿಯಾಗಿದ್ದರು (ಸುಪರಿಂಟೆಂಡೆಂಟರು). ಅವರದೊಂದು ವಿಕ್ಷಿಪ್ತ ಸ್ವಭಾವ, ಶೀಘ್ರಕೋಪಿ. ಒಳಗೆ ಬಂದವರೆ ನಾವಿಟ್ಟ ಸಾಮಾನುಗಳನ್ನೆಲ್ಲ ಅಸ್ತವ್ಯಸ್ತ ಮಾಡಿ ಹೀಗೆ ಹಾಡುವುದು, ಸದ್ದು ಮಾಡುವುದು ಮಹಾಪರಾಧ ಎಂದು ಗುಡುಗುತ್ತಾ ಹೋದರು. ನಮಗೆ ತುಂಬಾ ಅಸಮಾಧಾನವಾಯ್ತು. ಆದರೆ ಮಾಡುವುದೇನು ? ಇಷ್ಟೊಂದು ಜನ ಒಂದು ಕಡೆ ಇದ್ದ ಮೇಲೆ ನಿತ್ಯ ಏನಾದರೊಂದು ಘಟನೆ ನಡೆಯುತ್ತಿತ್ತು. ಈ ಘಟನೆಯನ್ನು ಶಾಂತ ರೀತಿಯಿಂದ ಸಹಿಸಿಕೊಂಡೆವು. ಆದರೆ, ಆ ಅಸಮಾಧಾನ ಇತ್ತು. ಸಂಜೆ 4 ಗಂಟೆಗೆ ಊಟ ಬರುವುದುಂಟು. ಊಟ ಮುಗಿಸಿ ಎಲ್ಲರೂ ಅಡ್ಡಾಡುತ್ತ ಅಂದು ಬೆಳಗಿನ ಘಟನೆಯನ್ನು ಮೆಲಕು ಹಾಕುತ್ತಿದ್ದರು. ಇದೇ ಸಂದರ್ಭದಲ್ಲಿ ಕೆಲವು ರಾಜಕೀಯ ಕೈದಿಗಳು ಓರ್ವ ಜೇಲ್ ಸಿಪಾಯಿಯ ಸಂಗಡ ಬಿರುಸಿನ ಚರ್ಚೆ ನಡೆಸಿದರು. ಆತನೂ ರೊಚ್ಚಿಗೆದ್ದ. ಹೀಗೆ ವಾದ - ಪ್ರತಿವಾದ ನಡೆದು ಪ್ರಸಂಗ ತುಸು ವಿಕೋಪಕ್ಕೆ ಹೋಯಿತು. ಬಿರುಸಿನ ಮಾತು ನಡೆದಾಗ ಒಂದು ವಿಷಾದದ ಘಟನೆ ನಡೆಯಿತು: ಆ ಸಂದರ್ಭದಲ್ಲಿ ಪೊಲೀಸ್‌ನ ಬಟ್ಟೆ ಹರಿಯಿತು. ಆತನಿಗೆ ಅವಮಾನವಾದಂತಾಗಿ ಕೂಡಲೇ ತನ್ನ ಸೀಟಿ (Whistle) ಊದಹತ್ತಿದ. ಹೀಗೆ ಜೇಲಿನಲ್ಲಿ ಒಂದೇ ಸಮನೆ ಸೀಟಿ ಊದಿದರೆ ಏನೋ ಗಂಡಾಂತರವಿದೆಯೆಂದು, ಅದನ್ನು ಕೇಳಿದ ಎಲ್ಲ ಸಿಪಾಯಿಗಳೂ ತಮ್ಮ ಸೀಟಿ ಊದಹತ್ತಿದರು. ಜೇಲಿನ ಅಲಾರಾಂ ಗಂಟೆ ಒಂದೇ ಸಮನೆ ಬಾರಿಸಹತ್ತಿತು. ಅದನ್ನು ಕೇಳಿ ಹೊರಗಿದ್ದ ಎಲ್ಲ ಪೊಲೀಸ್‌ರು, ಅಧಿಕಾರಿಗಳು ಇದ್ದ ಸ್ಥಿತಿಯಲ್ಲಿಯೇ ತಮ್ಮ ಕೈಗೆ ಆಗ ಸಿಕ್ಕ ಬಡಿಗೆ, ಬೆತ್ತ, ಕಟ್ಟಿಗೆ ಮುಂತಾದವುಗಳನ್ನು ಹಿಡಿದುಕೊಂಡು ಧಾವಿಸಿ ಬರಬೇಕೆಂದು ನಿಯಮ. ಅದೇ ಪ್ರಕಾರ ಎಲ್ಲ ಘಟನೆಗಳೂ ನಡೆದವು. ಇಂಥ ಸಂದರ್ಭದಲ್ಲಿ ಕೈದಿಗಳನ್ನು ಒಂದು ಕಡೆಗೆ ಸೇರಗೊಡದೆ ಎಲ್ಲರನ್ನೂ ಅವರವರ ಸ್ಥಳಗಳಲ್ಲಿ ಹಾಕಿ ಬಂದ್ ಮಾಡಬೇಕೆಂಬ ನಿಯಮ. ನಾವೆಲ್ಲರೂ ಹೊರಗೆ ಅಡ್ಡಾಡತೊಡಗಿದ್ದೆವು. ಈ ಘಟನೆ ನಡೆದುದು ನಮ್ಮ ಸ್ಥಳದಲ್ಲಿಯೇ. ಹೀಗಾಗಿ ಒತ್ತಾಯದಿಂದ ಎಲ್ಲರನ್ನು ಒಳಗೆ ಹಾಕಿ ಬಂದ್ ಮಾಡಲು ಪೊಲೀಸ್‌ರೂ, ಅಧಿಕಾರಿಗಳೂ ಒತ್ತಾಯ ಮಾಡಹತ್ತಿದರು. ಒಳಗೆ ಹೋಗಲಿಕ್ಕೆ ಸಹ ಅವಕಾಶ ಕೊಡದೆ ಲಾಠಿ ಹಲ್ಲೆಯನ್ನೇ ಪ್ರಾರಂಭಿಸಿದರು. ಇಂಥ ಪ್ರಸಂಗಗಳಲ್ಲಿ ಒಳ್ಳೆಯ ಅಧಿಕಾರಿಗಳು ವಿವೇಕದಿಂದ ವರ್ತಿಸಿದರೆ, ಅವಿವೇಕಿಗಳು ಇದರ ದುರ್ಲಾಭ ಪಡೆದು ತಮ್ಮ ಮನಬಂದಂತೆ ಜನರನ್ನು ಥಳಿಸುವರು. ಇಲ್ಲಿಯೂ ಹಾಗೆಯೇ ಆಯಿತು. ನಮ್ಮಲ್ಲಿ ಕೆಲವರು ಒಳಗೆ ಹೋಗಿ ತಮ್ಮ ಸ್ಥಾನದಲ್ಲಿ ಕುಳಿತಿದ್ದರು. ಕೆಲವರು ಬರುತ್ತಿದ್ದರು. ಅದೇ ಸಮಯಕ್ಕೆ ಕೆಲವು ಅಧಿಕಾರಿಗಳು ಒಳಗೆ ಪ್ರವೇಶಿಸಿ ಸುಮ್ಮನೆ ಓದುತ್ತಾ ಕುಳಿತ ಕೆಲವರನ್ನು ಮನಸಾರೆ ಥಳಿಸಿದರು. ಉಳಿದವರಾದ ನಾವೆಲ್ಲ ಒಂದೇ ಸಮನೆ ಪ್ರತಿಭಟಿಸುತ್ತಿದ್ದೆವು. ಕೇವಲ ಹತ್ತೇ ನಿಮಿಷಗಳಲ್ಲಿ ಈ ಘಟನೆಗಳೆಲ್ಲ ಜರುಗಿ ವಾತಾವರಣವು ತುಂಬಾ ಗಂಭೀರವಾಯ್ತು. ಜೇಲ್ ಸಂಪೂರ್ಣ ಸ್ತಬ್ಧವಾಯ್ತು. ಹೊಡೆತ ತಿಂದವರು ನರಳುತ್ತಿದ್ದರು.

ಈ ಸಮಾಚಾರವು ಜೇಲ್ ತುಂಬೆಲ್ಲ ಹರಡಿತು. ಅನೇಕರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಆಗ ಅಲ್ಲಿಯೇ ಬೇರೆ ಕಡೆ ಇದ್ದ ಮಧು ಲಿಮಯೆ ಮತ್ತು ಪೀಟರ್ ಅವ್ವಾರಿಸ್ ಮುಂತಾದ ಮುಖಂಡರು ತಮ್ಮ ಕಳವಳ ವ್ಯಕ್ತಪಡಿಸಿದರು. ಮರುದಿನ ಜೇಲಿನ ಎಲ್ಲ ರಾಜಕೀಯ ಕೈದಿಗಳು ಉಪವಾಸ ಮಾಡಿ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡಿದರು. ಈ ಸಂದರ್ಭದಲ್ಲಿ ಕೆಲವರು ಮೂರು ದಿವಸ ಉಪವಾಸ ಮಾಡಿದರು. ಅವರ ಒಂದೇ ಒಂದು ಬೇಡಿಕೆಯೆಂದರೆ - 'ಈ ಲಾಠೀ ಹಲ್ಲೆಯ ಬಗ್ಗೆ ಚೌಕಾಶಿಯಾಗಬೇಕು'. ಕೊನೆಗೆ ಅಧಿಕಾರಿಗಳು ಒಪ್ಪಿ ಚೌಕಾಶಿ ಮಾಡಿದರು. ಅದರಲ್ಲಿ ತಪ್ಪಿತಸ್ಥನೆಂದು ಕಂಡುಬಂದ ಜಮಾದಾರನಿಗೆ ಹಿಂಬಡ್ತಿಯಾಯಿತು.

## ಶಿಕ್ಷೆಯ ಬದಲು ಅಭಿನಂದನೆ

ಅಂದು ಫೆಬ್ರುವರಿ 22 ಮಹಾಶಿವರಾತ್ರಿ, ಅನೇಕರು ಉಪವಾಸ ಮಾಡಿದ್ದರು. ಅಂದೇ ಕಸ್ತೂರ ಬಾ ಅವರು ನಿಧನರಾದ ವಾರ್ತೆ ಬಂತು. ಇಡೀ ಜೈಲೇ ಶೋಕಸಾಗರದಲ್ಲಿ ಮುಳುಗಿತು. ದುಃಖ ಸೂಚಕ ಸಭೆ, ಸೂತ್ರಯಜ್ಞ ನಡೆದವು. ಆಗ ಕಸ್ತೂರಬಾ ನಿಧಿ ಕೂಡಿಸಬೇಕೆಂದು ನಿರ್ಣಯವಾಗಿತ್ತು. ಅದಕ್ಕಾಗಿ ರಾಜಕೀಯ ಕೈದಿಗಳೆಲ್ಲರೂ ನೂಲಿನ ಲಡಿಗಳ ಮೂಲಕ ಕಸ್ತೂರಬಾ ನಿಧಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕೆಂದು ಗೊತ್ತಾಯಿತು. ಆ ಮೇರೆಗೆ ನಾವು ನಮ್ಮ ಬ್ಯಾರಕ್ಕಿನಿಂದ ಒಂದು ಸಾವಿರ ಲಡಿಗಳನ್ನು ನಮ್ರ ಕಾಣಿಕೆಯೆಂದು ಕಳಿಸಿಕೊಟ್ಟೆವು. ಜೇಲಿನಲ್ಲಿ ಈ ಲಡಿಗಳು ವಿನಿಮಯದ ಸಾಧನೆಗಳಾಗಿದ್ದವು. ಇಲ್ಲಿ ಒಂದು ಸಮಾಧಾನದ ಸಂಗತಿಯೆಂದರೆ ಬಹುಶಃ ಎಲ್ಲ ರಾಜಕೀಯ ಕೈದಿಗಳೂ ನೂಲುವವರಿದ್ದರು. ದಿನಾಲು 5-6 ಲಡಿ ತಪ್ಪದೇ ನೂಲುವವರಿದ್ದರು, ಹೀಗೆ ದಿನಗಳು ಉರುಳುತ್ತಿದ್ದವು.

ಅಕ್ಟೋಬರ್ ಎರಡು ಗಾಂಧೀ ಜಯಂತಿ ಬಂತು. ಅಂದು ಒಂದು ಅಚ್ಚುಕಟ್ಟಾದ ಕಾರ್ಯಕ್ರಮ ಮಾಡಬೇಕೆಂದು ನಿರ್ಧಾರ ಮಾಡಿದೆವು. ಅಂದಿನ ತಯಾರಿ ಭರದಿಂದ ನಡೆಯಿತು. ಅಂದಿನ ಕಾರ್ಯಕ್ರಮ ಹೀಗೆ ಹಾಕಲಾಗಿತ್ತು.

| | | |
|---|---|---|
| ಬೆಳಿಗ್ಗೆ | 7 ರಿಂದ 7-30 | ಪ್ರಾರ್ಥನೆ |
| | 7-30 ರಿಂದ 9-30 | ಸ್ವಚ್ಛತೆ |
| | 9-30 ರಿಂದ 10-30 | ಸೂತ್ರ ಯಜ್ಞ |
| ಸಂಜೆ | 4 ಗಂಟೆಗೆ | ಪ್ರಾರ್ಥನಾ ಸಭೆ |

ಅಂದು ಎಲ್ಲರೂ ಸಂಪೂರ್ಣ ಉಪವಾಸ ಮಾಡಬೇಕೆಂದು ನಿರ್ಧಾರವಾಗಿತ್ತು.

ಈ ವಿವರಗಳನ್ನೆಲ್ಲ ತೆಗೆದುಕೊಂಡು ಜೇಲರ್ ಕಡೆಗೆ ಹೋದೆವು. ಅಂದು ಕಕ್ಕಸ ಹಸನುಮಾಡಲು, ಕಸಗೂಡಿಸಲು ಯಾರನ್ನೂ ಕಳಿಸಬಾರದೆಂದು ಬಿನ್ನವಿಸಿದೆವು. ನಮ್ಮ

ಕಾರ್ಯಕ್ರಮಗಳಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟು "ಸುಪರಿಂಟೆಂಡೆಂಟ್‌ರ ತಿರುಗಾಟದ ಸಮಯಕ್ಕೆ ಯಾವ ಗೊಂದಲವೂ ಆಗದಂತೆ ನೋಡಿಕೊಳ್ಳಬೇಕು" ಎಂದು ಬಿನ್ನವಿಸಿದರು. ನಾವು ಗೊಂದಲ ಮಾಡದೇ ಅತ್ಯಂತ ಅಚ್ಚುಕಟ್ಟಾದ ಶಿಸ್ತಿನ ಕಾರ್ಯಕ್ರಮ ಮಾಡುವುದಾಗಿ ಹೇಳಿದೆವು.

ಗಾಂಧೀಜಯಂತಿ ಬಂದೇ ಬಿಟ್ಟಿತು. ನಾವು ಮೂರು ಬ್ಯಾರಕ್‌ದಲ್ಲಿರುವವರೆಲ್ಲ (ಸುಮಾರು 250) ಸೇರಿ ಬೆಳಗಿನ ಪ್ರಾರ್ಥನೆಯಿಂದ ಕಾರ್ಯಕ್ರಮಗಳನ್ನು ಆರಂಭಿಸಿದೆವು. 3-4 ಗುಂಪುಗಳನ್ನು ಮಾಡಿ ಒಂದು ಗುಂಪು ಕಕ್ಕಸ ಸ್ವಚ್ಛ ಮಾಡಿದರೆ, ಇನ್ನೊಂದು ಬ್ಯಾರಕ್ ಒಳಗೆಲ್ಲ ಹಸನು ಮಾಡುವುದಿತ್ತು. ಮತ್ತೊಂದು ಗುಂಪು ಸುತ್ತಲಿನ ಆವರಣ, ಇನ್ನೊಂದು ನೀರಿನ ತೊಟ್ಟಿ ಹಸನು ಮಾಡುವ ಕಾರ್ಯಕ್ರಮಗಳನ್ನು ಹಾಕಿಕೊಂಡು ಎರಡು ತಾಸಿನಲ್ಲಿ ಎಲ್ಲವನ್ನೂ ತುಂಬಾ ಹಸನು ಮಾಡಲಾಯಿತು. ಕಕ್ಕಸಗಳಂತೂ ಗಾಂಧೀಜಿ ಹೇಳುವಂತೆ ಅಲ್ಲಿ ಕುಳಿತು ಗೀತಾ ಪಠಣಕ್ಕೆ ಯೋಗ್ಯವಾದ ಸ್ಥಳದಂತೆ ಸಿದ್ಧವಾದವು. ಒಂದು ಗುಂಪು ಧ್ವಜವಂದನೆಯ ಏರ್ಪಾಟು ಮಾಡಿದ್ದರೆ, ಇನ್ನೊಂದು ಸೂತ್ರಯಜ್ಞದ ಅಂದರೆ ನೂಲುವ ಸ್ಥಳದ ವ್ಯವಸ್ಥೆ ನೋಡಿಕೊಂಡಿದ್ದರು. ಸ್ವಚ್ಛತೆಯ ಕಾರ್ಯಕ್ರಮದ ನಂತರ ಎಲ್ಲರೂ ಸ್ನಾನಮಾಡಿ ಧ್ವಜವಂದನೆಯನ್ನು ಪೂರೈಸಿದರು.

ಇನ್ನು ಸೂತ್ರಯಜ್ಞದ ಸಲುವಾಗಿ ಎರಡು ಬ್ಯಾರಕ್ಕಿನ ನಡುವಿನ ಸ್ಥಳವನ್ನು ಆಯ್ದು ಅದನ್ನು ಹಸನುಮಾಡಲಾಗಿತ್ತು. ಒಂದು ಸಾಲಿನಲ್ಲಿ 23 ರಂತೆ ಹತ್ತು ಸಾಲುಗಳನ್ನು ಮಾಡಲಾಗಿತ್ತು. ಪ್ರತಿಯೊಬ್ಬರೂ ತಮ್ಮ ಹಾಸಿಗೆ ಹಾಸಿ ಅದರ ಮೇಲೆ ಚರಖಾ ಇಟ್ಟು ಸಜ್ಜು ಮಾಡಿದ್ದರು. ಈ ಕಾರ್ಯಕ್ರಮದ ಬಗ್ಗೆ ವಿಶೇಷ ಗಮನ ಕೊಡಲಾಗಿತ್ತು. ಯಾಕೆಂದರೆ ಸುಪರಿಂಟೆಂಡೆಂಟರು ಪರಿವಾರ ಸಮೇತ ಜೇಲಿನಲ್ಲಿ ತಿರುಗಾಡುವುದು ಅದೇ ಸಮಯವಾಗಿತ್ತು. ಸೂತ್ರಯಜ್ಞ 9-30 ರಿಂದ 10-30 ರ ವರೆಗಿತ್ತು. ಅದನ್ನು ಪ್ರಾರಂಭ ಮಾಡುವ ಪೂರ್ವದಲ್ಲಿ "ಇದು ಮೌನ ಕತಾಯಿ ಇದ್ದು ಯಾರೂ ಮಾತನಾಡಬಾರದು ಮತ್ತು ಚರಕದ ಸದ್ದಿನ ಹೊರ್ತು ಬೇರೆ ಯಾವ ಸದ್ದೂ ಇರಬಾರದು. ಆಗ ಯಾರೇ ಬಂದರೂ ಅವರ ಕಡೆಗೆ ಸಹ ನೋಡದೇ ನೂಲುವುದರಲ್ಲಿಯೇ ಮಗ್ನರಾಗಿರಬೇಕು" ಎಂದು ಮುಂತಾದ ಸೂಚನೆಗಳನ್ನು ಕೊಡಲಾಗಿತ್ತು. ನಾವು ನಿರೀಕ್ಷಿಸಿದಂತೆ ನೂಲುವಾಗ ಅಧಿಕಾರಿಗಳ ತಂಡ ಬಂದೇಬಿಟ್ಟಿತು. ನೇರ ನಾವು ಕುಳಿತ ಸ್ಥಳಕ್ಕೆ ಬಂದರು. ಅತ್ತ ಇತ್ತ ನಾಲ್ಕಾರು ಕಡೆಗಳಿಂದ ಪರಿಶೀಲಿಸಿದರು. ಎಲ್ಲರೂ ತಮ್ಮ ಕಾರ್ಯದಲ್ಲಿಯೇ ಮಗ್ನರಾಗಿದ್ದರು. ಮುಂದೆ ಅವರು ಕಕ್ಕಸಗಳನ್ನು ನೋಡಿದರು. ಅವೆಲ್ಲ ಹಸನಾಗಿದ್ದವು. ಅದರಂತೆ ಬ್ಯಾರಕ್ಕಿನಲ್ಲಿ ಒಳಭಾಗವೂ ತುಂಬಾ ಅಚ್ಚುಕಟ್ಟಾಗಿ ಕಾಣುತ್ತಿತ್ತು. ಎಲ್ಲರ ಮನಸ್ಸಿನಲ್ಲಿ ಒಂದು ಬಗೆಯ ಹುರಹುರಿ ಇತ್ತು. ಆದರೆ, ಯಾವುದೇ ಅಪ್ರಿಯ ಘಟನೆಯಾಗದೇ ಅಧಿಕಾರಿಗಳ ಗುಂಪು ವಾಪಸ್ ಕಛೇರಿಗೆ ಹೋಯಿತು. ಮುಂದೆ ಊಟ ಬಂದೇ ಬಿಟ್ಟಿತು. ಅದೇ ಸಮಯಕ್ಕೆ ಸುಪರಿಂಟೆಂಡೆಂಟರಿಂದ ಕರೆ ಬಂತು. ಮತ್ತೇನು ಮಂಗಚೇಷ್ಟೆ ಕಾದಿದೆಯೋ ಎಂದು ಎಲ್ಲರಿಗೂ ಕಳವಳ. ನಾವು ಮೂವರು

ಅವರನ್ನು ಕಾಣಲು ಹೋದೆವು. ನಾವು ವಾಪಸ್ ಬರುವವರೆಗೆ ಯಾರೂ ಊಟ ಮಾಡಬಾರದೆಂದೇ ನಿರ್ಧರಿಸಿ, ಉಳಿದವರು ನಮ್ಮ ದಾರಿಯ ಕಾಯುತ್ತ ಕುಳಿತರು. ಅಲ್ಲದೆ ಅಂದು ಉಪವಾಸವೆಂದು ಸಾರಲಾಗಿತ್ತು.

ಸಾಮಾನ್ಯವಾಗಿ ಕೈದಿಗಳು ಅಧಿಕಾರಿಗಳನ್ನು ಕಾಣಲು ಹೋದರೆ ಕೂಡಲು ಹೇಳುತ್ತಿರಲಿಲ್ಲ. ಅಂದು ನಾವು ಹೋದ ಕೂಡಲೇ ಸಾಹೇಬರು ಮುಗುಳ್ನಗೆ ಬೀರಿ ಸ್ವಾಗತ ಮಾಡಿ ನಮಗೆಲ್ಲ ಅಲ್ಲಿ ಕುಳಿತುಕೊಳ್ಳಲು ಹೇಳಿದರು. ನಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ, 'ಇಂದಿನ ಕಾರ್ಯಕ್ರಮಗಳನ್ನು ನೋಡಿ ನನಗೆ ಪರಮ ಸಂತೋಷವಾಗಿದೆ. ನಾವು ಕೂಡಾ ಭಾರತೀಯರು, ನಮಗೂ ಅಭಿಮಾನವಿದೆ. ದೇಶ ಸ್ವಾತಂತ್ರ್ಯವಾಗಬೇಕೆಂದು ನಮಗೂ ಅನಿಸುತ್ತದೆ. ಆದರೆ, ನಾವು ಇಂದು ಸರಕಾರಿ ನೌಕರರಿದ್ದ ಕಾರಣ ನಮ್ಮ ಪಾತ್ರವನ್ನು ನಾವು ಮಾಡಲೇ ಬೇಕಾಗಿದೆ. ಹೀಗೆ ನೀವು ಸೌಹಾರ್ದ ಭಾವನೆ ಮತ್ತು ಶಿಸ್ತಿನಿಂದ ನಡೆದುಕೊಂಡರೆ ನಿಮ್ಮ ದಿನಗಳು ಸುಗಮವಾಗಿ ಸಾಗುವುದಲ್ಲದೆ ನಮ್ಮ ಸಹಕಾರವೂ ದೊರೆಯುವುದು' ಎಂದು ಮುಂತಾಗಿ ಮನಸಾರೆ ಮಾತನಾಡುತ್ತ "ನಿಮ್ಮ ಎಲ್ಲ ಸ್ನೇಹಿತರಿಗೂ ನನ್ನ ಧನ್ಯವಾದಗಳನ್ನು ತಿಳಿಸಿರಿ. ನಮ್ಮದೊಂದು ವಿನಂತಿ, ದಯವಿಟ್ಟು ಇಂದು ಉಪವಾಸ ಮಾಡದೇ ಊಟ ಮಾಡಬೇಕು" ಎಂದು ಹೇಳಿದರು. ನಾವು ಒಪ್ಪಿದೆವು. ಅವರು ಬಹುಶಃ ಇಷ್ಟೊಂದು ಸೌಮ್ಯವಾಗಿ ಮಾತಾಡಿದ್ದನ್ನು ಯಾರೂ ನೋಡಿರಲಿಲ್ಲ. ಕಛೇರಿಯ ಇತರ ಅಧಿಕಾರಿಗಳಿಗೂ ಸಹ ಆಶ್ಚರ್ಯವಾಯಿತು. ನಮಗಂತೂ ನಮ್ಮ ಕಿವಿಗಳನ್ನೇ ನಂಬದಂತಾಗಿತ್ತು. ಇತ್ತ ಕಛೇರಿಗೆ ನಮ್ಮನ್ನು ಯಾಕೆ ಕರೆಸಿದರು ಎಂಬ ಬಗ್ಗೆ ನಮ್ಮ ಮಿತ್ರರಿಗೆಲ್ಲ ಕಳವಳವಾಗಿತ್ತು. ಅವರು ನಮ್ಮ ದಾರಿ ಕಾಯುತ್ತಾ ಕುಳಿತಿದ್ದರು. ಈ ಎಲ್ಲ ಸಮಾಚಾರವನ್ನು ಅವರಿಗೆ ತಿಳಿಸಲಾಗಿ ಅವರೆಲ್ಲ ತುಂಬಾ ಸಂತೋಷಪಟ್ಟರು. ಆಮೇಲೆ ಎಲ್ಲರೂ ಸೇರಿ ಸಮಾಧಾನದಿಂದ ಊಟ ಮಾಡಿದೆವು. ನಿಜವಾದ ಗಾಂಧೀ ಕಾರ್ಯಕ್ರಮಗಳು ಎಂಥ ಕಠೋರ ಮನಸ್ಸುಗಳನ್ನು ಗೆಲ್ಲಬಲ್ಲವು ಎಂಬ ಪಾಠವನ್ನು ನಾವು ಅಂದು ಪ್ರತ್ಯಕ್ಷ ಪ್ರಯೋಗದಿಂದ ಕಲಿತೆವು.

## ಗಾಂಧಿಯನ್ ಅಧಿಕಾರಿಗಳು

ಅಂದಿನ ಜೇಲ್ ಸುಪರಿಂಟೆಂಡೆಂಟ್‌ರಾದ ನೂರಕರ ಅವರೇ ಜೇಲ್ ಸಿವ್ಹಿಲ್ ಸರ್ಜನ್ನರೂ ಹೌದು. ಅವರದೊಂದು ವಿಕ್ಷಿಪ್ತ ಸ್ವಭಾವ. ಆದರೆ, ಅಲ್ಲಿಯ ಜೇಲರ್ ನಿಕೋಲಸ್ ಎಂಬ ಕ್ರಿಶ್ಚಿಯನ್ನರು, ಸ್ವಭಾವದಿಂದ ತೀರ ಒಳ್ಳೆಯವರು. ಸಾಮಾನ್ಯವಾಗಿ ಯಾವ ಒಳ್ಳೆಯ ಕಾರ್ಯಕ್ಕಾಗಿ ಅವರ ಕಡೆಗೆ ಹೋದರೂ ಅವರು 'ಇಲ್ಲ' ಎನ್ನುತ್ತಿರಲಿಲ್ಲ. ಜೇಲಿನ ನಿಯಮಗಳನ್ನು ಕೈದಿಗಳಿಗೆ ನೆರವಾಗುವಂತೆಯೇ ಅರ್ಥೈಸುತ್ತಿದ್ದರು. ಕ್ರಿಮಿನಲ್ ಕೈದಿಗಳೂ ಸಹ ಅವರ ಬಗ್ಗೆ ತುಂಬ ಆದರ, ಅಭಿಮಾನವನ್ನು ಇಟ್ಟುಕೊಂಡಿದ್ದರು.

ಒಂದು ಸಲ ಒಂದು ವಿಚಿತ್ರ ಘಟನೆ ನಡೆಯಿತು. ಆಗ ಆ ಜೇಲಿನಲ್ಲಿ ಕೆಲವು 'ಹೂರರು' ಎಂಬ ಕ್ರಿಮಿನಲ್ ಕೈದಿಗಳಿದ್ದರು. ನೋಡಲಿಕ್ಕವರು ತುಸು ಕ್ರೂರರಾಗಿಯೇ ಕಾಣುತ್ತಿದ್ದರು. ಒಮ್ಮೆ ಬೆಳಗಿನ ತಿರುಗಾಟ (Round) ಕ್ಕೆ ಸುಪರಿಂಟೆಂಡೆಂಟ್‌ರು ಪರಿವಾರ ಸಮೇತ ಹೋಗಿದ್ದರು. ಅಂದು ಜೇಲರ್ ಬಂದಿರಲಿಲ್ಲ. ಆಗ ಆ ಹೂರ ಕೈದಿಗಳು ತಮ್ಮ ಬೇಡಿಕೆಗಳನ್ನಿಟ್ಟರು. ಅದಕ್ಕೆ ಸಾಹೇಬರು ಒಪ್ಪದೆ ಪ್ರತಿವಾದ ಮಾಡಿದರು. ಹೀಗೆ ವಾದ - ಪ್ರತಿವಾದದಲ್ಲಿ ಬಿರುಸಿನ ಮಾತುಗಳು ಸಿಡಿಯಹತ್ತಿದವು. ವಾತಾವರಣವು ಬಿಸಿಯಾಯಿತು. ಆಗ ಆ ಕೈದಿಗಳು ಕೈಗೆ ಸಿಕ್ಕ ಕಲ್ಲು, ಇಟ್ಟಂಗಿ, ಕಟ್ಟಿಗೆ ತೆಗೆದುಕೊಂಡು ನಿಂತರು. ಪ್ರತ್ಯಕ್ಷ ಹೋರಾಟದ ಪೂರ್ವದಲ್ಲಿ ಸಾಹೇಬರ ಶರ್ಟು ಅಲ್ಲಿಯ ಕೊಕ್ಕಿಗೆ ಸಿಕ್ಕು ಹರಿಯಿತು. ಕೈದಿಗಳು ಕಟ್ಟಿಗೆ ಬೀಸುತ್ತಾ ಕಲ್ಲು ಇಟ್ಟಂಗಿ ತೂರಹತ್ತಿದರು. ಪೊಲೀಸ್‌ರ ಸೀಟಿ, ಜೇಲಿನ ಅಲಾರಂ ಗಂಟೆಯಾಗಿ ಎಲ್ಲ ಪೊಲೀಸ್‌ರೂ, ಹೊರಗಿದ್ದ ಅಧಿಕಾರಿಗಳೂ ಬಂದರು. ವಾತಾವರಣ ಶಾಂತವಾಗಲಿಲ್ಲ. ಅಂದು ಜೇಲರ್ ನಿಕೋಲಸ್ ರಜೆಯ ಮೇಲಿದ್ದರು. ಮನೆಯಲ್ಲಿ ಈ ವಾರ್ತೆ ತಿಳಿಯುತ್ತಲೇ ತಮ್ಮ ಖಾಸಗಿ ಪೋಷಾಕಿನಲ್ಲಿಯೇ ಓಡುತ್ತಾ ಬಂದರು. ಉಳಿದ ಅಧಿಕಾರಿಗಳೆಲ್ಲ ತಮ್ಮ ಕೈಗೆ ಸಿಕ್ಕ ಲಾಠೀ, ಬಡಿಗೆ ಹಿಡಿದುಕೊಂಡು ಬ್ಯಾರಕ್ ಹೊರಗೇ ನಿಂತಿದ್ದರು. ಒಳಗೆ ಪ್ರವೇಶಿಸುವ ಧೈರ್ಯವಾಗಲಿಲ್ಲ. ಆಗ ಜೇಲರ್ ಕೈಯಲ್ಲಿ ಏನೊಂದೂ ತೆಗೆದುಕೊಳ್ಳದೇ ಒಳಗೆ ಪ್ರವೇಶಿಸಿದರು. "ಇದೆಲ್ಲ ನೀವು ಏನು ನಡೆಸಿರುವಿರಿ ? ನಿಮಗೆ ಇಂದು ಏನಾಗಿದೆ ?" ಎಂದು ಮುಂತಾಗಿ ಆ ಹೂರ ಕೈದಿಗಳನ್ನು ಕೇಳುತ್ತಿದ್ದಂತೆಯೇ ಅವರೆಲ್ಲರ ಕೈಯೊಳಗಿನ ಕಲ್ಲು, ಇಟ್ಟಂಗಿ, ಕಟ್ಟಿಗೆ ತುಂಡು ಕೆಳಗೆ ಬಿದ್ದವು. ಅವರು ಶಾಂತರಾಗಿ ಮಾತನಾಡಹತ್ತಿದರು. ಹೀಗಾಗಿ ನಾವೆಲ್ಲ ಈ ಜೇಲರ್‌ರಿಗೆ ಗಾಂಧಿಯನ್ ಜೇಲರ್ ಎಂದು ಕರೆಯುತ್ತಿದ್ದೆವು.

## ಜೇಲಿನಲ್ಲಿ ದಸರಾ ಹಬ್ಬ

ಜೇಲಿನ ನಿಯಮ, ಕಾನೂನುಗಳು ತುಂಬಾ ಕಠಿಣವಾದವುಗಳು. ಕೈದಿಗಳನ್ನೆಲ್ಲ ಒಂದೆಡೆ ಸೇರಿಸಬಾರದು. ಅವರು ಒಬ್ಬರಿಗೊಬ್ಬರು ಮಾತನಾಡಬಾರದು ಎಂಬ ಕಠೋರ ನಿಯಮ. ಅಲ್ಲಿ ಆಗ 'ಅ', 'ಬ', 'ಕ' ವರ್ಗದವರಿಗೆ ಬೇರೆ ಬೇರೆ ಕಡೆಗೆ ಇಟ್ಟಿದ್ದರು. ಅಲ್ಲದೆ ಸ್ಥಾನಬದ್ಧರು ಎಂಬ ವರ್ಗವೂ ಇತ್ತು. ಕೇವಲ ಸಂಶಯದ ಮೇಲಿಂದ ಕಾಲ ಮರ್ಯಾದೆ ಇರದೆ ಅವರನ್ನು ಬೇರೆ ಕಡೆಗೆ ಇಡಲಾಗಿತ್ತು. ಯಾವಾಗಾದರೊಮ್ಮೆ ಅಪ್ಪಣೆ ಪಡೆದು ಒಬ್ಬಿಬ್ಬರು ಬಿಡುಗಡೆಯಾಗಿ ಹೋಗುತ್ತಿದ್ದರು. ಹೀಗಿರುವಾಗ ಒಮ್ಮೆ ದಸರಾ ಹಬ್ಬವೇ ಬಂತು. ನಾವೆಲ್ಲ ಸೇರಿ ಯಾಕೆ ಬನ್ನಿ ಮುಡಿಯಬಾರದು, ಸಿಹಿ ತಿಂಡಿಮಾಡಿ ಊಟ ಯಾಕೆ ಮಾಡಬಾರದು ಎಂಬ ವಿಚಾರ ಬಂತು. ಈ ಎಲ್ಲ ಸಮಾಚಾರ ತೆಗೆದುಕೊಂಡು ನಾವು ಜೇಲರ ಸಾಹೇಬರ ಕಡೆಗೆ ಹೋದೆವು. ಅವರು ಎಲ್ಲವನ್ನೂ ಶಾಂತ ರೀತಿಯಿಂದ ಕೇಳಿಕೊಂಡು ನಮ್ಮ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಿಕೊಟ್ಟರು. ಆದರೆ ಒಂದೇ ಕರಾರು ಹಾಕಿದ್ದರು. ಸೂಪರಿಂಟೆಂಡೆಂಟ್‌ರ ತಿರುಗಾಟದ ನಂತರ ನಿಮ್ಮ ಚಟುವಟಿಕೆಗಳು ನಡೆಯಲಿ ಎಂದು ಹಸುರು ನಿಶಾನೆ ತೋರಿಸಿದರು.

ಅಂದಿನ ಜೇಲ್ ಅಡಿಗೆ ಮನೆಯನ್ನು ರಾಜಕೀಯ ಕೈದಿಗಳಿಗೆ ಒಪ್ಪಿಸಲಾಗಿತ್ತು. ಅದರಂತೆ ಹೊರಗಿನ ಕಾಂಟ್ರ್ಯಾಕ್ಟರ್‌ರಿಂದ ಎಲ್ಲ ರೇಶನ್ ಸ್ವೀಕರಿಸುವವರೂ ಇವರೇ. ರೇಶನ್ ತೆಗೆದುಕೊಳ್ಳುವಾಗ ಕೆಲಭಾಗ ಕಾಂಟ್ರ್ಯಾಕ್ಟರ್‌ರ ಕಡೆಗೆ ಬಿಡಲಾಗುತ್ತಿತ್ತು. ಹಬ್ಬ, ಹರಿದಿನಗಳಲ್ಲಿ ಅವರಿಂದ ಅದರ ಬದಲು ಒಡೆದ ಗೋದಿ, ಬೆಲ್ಲ, ಕಸಕಸಿ, ಹಾಲು, ಅಕ್ಕಿ ಮುಂತಾದವುಗಳನ್ನು ತೆಗೆದುಕೊಂಡು ಅತ್ಯಂತ ರುಚಿಕಟ್ಟಾದ ಗೋದಿ ಹುಗ್ಗಿ ಮಾಡಲಾಗುತ್ತಿತ್ತು. ದಸರೆಯ ದಿವಸ ಎಲ್ಲರಿಗೂ ಸಂಜೆ ಗೋದಿ ಹುಗ್ಗಿ ಮಾಡಲಾಗುತ್ತಿತ್ತು. ದಸರೆಯ ದಿವಸ ಎಲ್ಲರೂ ಸಂಜೆ 4 ಗಂಟೆಗೆ ಹೊಟ್ಟೆ ತುಂಬಾ ಸಿಹಿ ಊಟ ಮಾಡಿ ಸಂಜೆ ಸೀಮೋಲ್ಲಂಘನಕ್ಕೆ ಒಂದೆಡೆ ಸೇರುವದೆಂದು ಗೊತ್ತಾಯಿತು. ಆದರೆ, ನಮ್ಮೆಲ್ಲರನ್ನು ತಂತಿ ವಿಂಗಡಿಸಿದ್ದರೂ ನಾವು ಒಟ್ಟಾರೆ ಕುಳಿತು ಮಾತನಾಡಿ ಸೀಮೋಲ್ಲಂಘನದ ಔಪಚಾರಿಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸಿದೆವು. ಅದರಂತೆಯೇ ಯುಗಾದಿ ಪ್ರತಿಪದೆಯ ದಿವಸ ಬೆಳಿಗ್ಗೆ ನಾವು ಸ್ನಾನ ಮಾಡುವ ದೋಣಿಯ ನೀರಿನಲ್ಲಿ ಬೇವಿನ ತಪ್ಪಲು ಹಾಕಲಾಗುತ್ತಿತ್ತು. ಶಿವರಾತ್ರಿ, ಆಷಾಢ, ಕಾರ್ತೀಕ ಏಕಾದಶಿ ಬಂದಾಗ್ಗೆ ಉಪವಾಸದ ವಸ್ತುಗಳನ್ನೇ ಕೊಡಲಾಗುತ್ತಿತ್ತು.

## ಜೇಲಿನಲ್ಲಿ ಸತ್ಕಾರ

ಆಗ ಜೇಲಿನ ಡಾಕ್ಟರೆಂದರೆ ವಿಜಾಪೂರ ಜಿಲ್ಲೆಯ ಡಾ. ಉಮರ್ಜಿಯವರು. ಅವರಂತೂ ದೇವ ಮನುಷ್ಯರು. ಜೇಲಿನಲ್ಲಿ ಯಾರಿಗಾದರೂ ದುಃಖ, ದುಮ್ಮಾನಗಳು ಬಂದರೆ ಮರಮರನೆ ಮರಗುವರು. ತಮಗೆ ಶಕ್ಯವಿದ್ದ ಎಲ್ಲ ಸಹಾಯವನ್ನು ನೀಡುತ್ತಿದ್ದರು. ಒಮ್ಮೆ ಎಲ್ಲ ರಾಜಕೀಯ ಕೈದಿಗಳಿಗೆ ಕಾಲರಾ ಇನಾಕ್ಯುಲೇಶನ್ ಮಾಡಲಾಗಿತ್ತು. ಬಹುಶಃ ಎಲ್ಲರಿಗೂ ಜ್ವರ ಬಂದಿತ್ತು. ನರಳುತ್ತಾ ಮಲಗಿಕೊಂಡಿದ್ದರು. ಯಾರೂ ಊಟ ಕೂಡಾ ಮಾಡಿರಲಿಲ್ಲ. ಆಗ ಈ ಡಾಕ್ಟರು ಅಕಸ್ಮಾತ್ ಬಂದು ಪರಿಸ್ಥಿತಿಯನ್ನು ಕಣ್ಣಾರೆ ನೋಡಿದರು. ಅಲ್ಲಿ ಕಾವಲಿದ್ದ ಪೊಲೀಸ್‌ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಇಷ್ಟೆಲ್ಲ ಜನರಿಗೆ ಸಾಲುವಷ್ಟು ಚಹಾಪುಡಿ, ಸಕ್ರಿ, ಹಾಲು ಕಳಿಸಿ, ಚಹಾಮಾಡಿ ಎಲ್ಲರಿಗೂ ಕೊಡಲು ಹೇಳಿದ್ದರು. ರಾಜಕೀಯ ಕೈದಿಗಳ ಬಗ್ಗೆಯಂತೂ ಅವರ ಸಹಾನುಭೂತಿ ಉಕ್ಕಿ ಬರುತ್ತಿತ್ತು. ಆಕಸ್ಮಿಕವಾಗಿ ಕೂಡಿಬಂದುದೆಂದರೆ ಡಾಕ್ಟರ್ ಹೆಂಡತಿ ನನ್ನ ಹೆಂಡತಿ ಗೆಳತಿಯರು. ಸಾಮಾನ್ಯವಾಗಿ ನನ್ನ ಭೆಟ್ಟಿಗೆ ಬಂದಾಗ ಅವಳು ಅವರಲ್ಲಿಯೇ ಉಳಿಯುತ್ತಿದ್ದಳು. ಒಮ್ಮೆ ಒಂದು ಮೋಜಿನ ಪ್ರಸಂಗ ನಡೆಯಿತು. ಬೆಳಗಿನ ಹತ್ತು ಗಂಟೆಗೆ ನಾವೆಲ್ಲ ಕೆಲಸದಲ್ಲಿ ಮಗ್ನವಾದಾಗ ಓರ್ವ ಪೊಲೀಸ್ ನನ್ನನ್ನು ಕರೆಯಲು ಬಂದ. ಜೇಲಿನಲ್ಲಿ ಪೊಲೀಸ್ ಅಥವಾ ವಾರ್ಡನ್ ಇಲ್ಲದೆ ಯಾವ ಕೈದಿಯೂ ಸ್ವತಂತ್ರವಾಗಿ ಅಡ್ಡಾಡುವಂತಿಲ್ಲ. ಆ ಪೊಲೀಸ್ ನನ್ನನ್ನು ನೇರವಾಗಿ ಡಾಕ್ಟರ್‌ರ ಮನೆಗೇ ಕರೆದುಕೊಂಡು ಹೋದನು. ಡಾಕ್ಟರ್ ದಂಪತಿಗಳು ಮುಗುಳ್ನಗುತ್ತಾ, "ಇಂದು ದಂಪತಿಪೂಜಾ ಮಾಡಬೇಕೆಂದಿರುವೆವು" ಎಂದು ಹೇಳಿ ನನ್ನನ್ನು ಒಳಗೆ ಕರೆದುಕೊಂಡು ಹೋದರು. ಅಲ್ಲಿ ನನಗೆ ಆಶ್ಚರ್ಯ ಕಾದಿತ್ತು. ನನ್ನ ಹೆಂಡತಿ,

ಮಗಳು ಬಂದಿದ್ದರು. ನಮ್ಮನ್ನು ಕೂಡಿಸಿ ಊಟ ಬಡಿಸಿ ತಾವು ತೃಪ್ತಿಗೊಂಡರು. ಜೀವನದಲ್ಲಿಯ ಇಂಥ ಸನ್ನಿವೇಶಗಳನ್ನು ಮರೆಯುವುದೆಂತು ? ಇದೆಲ್ಲ ಜೇಲ್ ಕಾನೂನಿನ ವಿರುದ್ಧವೆಂಬುದು ಬೇರೆ ಹೇಳಬೇಕಾಗಿಲ್ಲ. ನಾನು ಅಲ್ಲಿ 3-4 ತಾಸು ಕಳೆದಿರಬೇಕು. ನನ್ನ ಹೆಂಡತಿಗಂತೂ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಮನೆಯಲ್ಲಿ ಮಗಳನ್ನು ಎತ್ತಿಕೊಂಡು ಎಷ್ಟೋ ಹೊತ್ತು ಮುದ್ದಾಡಿದೆ. ಹೀಗೆ ನನಗೆ ಜೇಲಿನಲ್ಲಿಯೇ ಒಂದು ಬಗೆಯ ಸತ್ಕಾರವಾಯ್ತು.

## ಜೇಲ್ ಜೀವನ

ಒಟ್ಟು ನನಗಾದ ಶಿಕ್ಷೆ ಎರಡು ವರ್ಷ ಆರು ತಿಂಗಳು. ಅದರಲ್ಲಿ ಒಂದು ವರ್ಷ ಅಂದರೆ ಸರಿಯಾಗಿ 365 ದಿವಸ ವಿಸಾಪೂರ ಜೇಲಿನಲ್ಲಿಯೇ ಕಳೆದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇದು ಜೇಲು ಎಂದೇ ನನಗೆ ಅನಿಸಲಿಲ್ಲ.

ಇಲ್ಲಿ ಸಾಕಷ್ಟು ವೃತ್ತಪತ್ರಿಕೆಗಳು ಬರುತ್ತಿದ್ದವು. ಪುಸ್ತಕಗಳಿಗಂತೂ ಯಾವುದೇ ಕೊರತೆ ಇರಲಿಲ್ಲ. ಸಾಕಷ್ಟು ಸಂಗಡಿಗರಿದ್ದರು. ಪ್ರಾರಂಭದ ಎರಡು ತಿಂಗಳು ಬುರ್ಲಿ ಮಾಸ್ತರರಿದ್ದರು. ನಿಜವಾದ ಕೊರತೆಯೆಂದರೆ ನನಗೆ ಮಾರ್ಗದರ್ಶನ ಮಾಡುವಂಥ ವ್ಯಕ್ತಿಗಳು ಅಲ್ಲಿರಲಿಲ್ಲ. ಏನಾದರೂ ಜರುಗಿದರೆ ನನ್ನನ್ನೇ ಕೇಳುವರು. ನಾನು ಯಾರನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ಹಾಗೆ ನೋಡಿದರೆ, ಸ್ಥಾನಬದ್ಧರ ಸ್ಥಳದಲ್ಲಿ ಒಬ್ಬಿಬ್ಬರು ಮುಖಂಡರಿದ್ದರು. ಯಾವಾಗಲಾದರೊಮ್ಮೆ ಅವರ ಭೇಟಿಯಾಗುತ್ತಿತ್ತು. ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ ಮುಂದೆ ಜೇಲ್ ಜೀವನಕ್ಕೆ ತುಂಬಾ ಒಗ್ಗಿಕೊಂಡೆ.

ನಾಸಿಕದ ತರುಣರ ಗುಂಪು ನನ್ನ ಗೆಳೆಯರಾದರು. ನಾವೆಲ್ಲ ಸೇರಿ ಸಾಮೂಹಿಕವಾಗಿ ಓದುವುದನ್ನು ಪ್ರಾರಂಭಿಸಿದೆವು. ಅಲ್ಲಿ ಮರಾಠಿ ಪುಸ್ತಕಗಳು ಬೇಕಾದಷ್ಟು ಬರುತ್ತಿದ್ದವು. ಗೀತಾ ಪ್ರವಚನ, ಭಾರತೀಯ ಸಂಸ್ಕೃತಿ, ಜಾವಡೇಕರರು ಬರೆದ ಆಧುನಿಕ ಭಾರತ ಮುಂತಾದವುಗಳನ್ನು ಓದಿ ಮುಗಿಸಿದೆವು. ಸಾಮಾನ್ಯವಾಗಿ ಊಟವಾದ ಕೂಡಲೇ ಮಧ್ಯಾಹ್ನ ಓದಲು ಕೂಡುವದು. ಆಗ ನನಗೆ ತುಂಬಾ ತೂಕಡಿಕೆ ಬರುತ್ತಿತ್ತು. ಮಿತ್ರರಿಗೆಲ್ಲ ಹೇಳಿ ಅವರ ಸಮ್ಮುಖದಲ್ಲಿಯೇ ಹತ್ತು ನಿಮಿಷ ನಿದ್ರೆಮಾಡಿ ಏಳುತ್ತಿದ್ದೆ. ಮುಂದೆ ತೂಕಡಿಕೆ ಬರುತ್ತಿರಲಿಲ್ಲ. ಅವರಲ್ಲಿ ನಾಸಿಕದ ವೈದ್ಯ ಎನ್ನುವವರು ನನ್ನ ಪರಮ ಮಿತ್ರರಾದರು. ನಾವು ಬಿಡುಗಡೆಯಾದ ಮೇಲೆ ಸಹ ನಮ್ಮ ಪತ್ರ ವ್ಯವಹಾರ ನಡೆದಿತ್ತು. ಅವರು ತೀರ ಸಾಮಾನ್ಯ ಮಧ್ಯಮವರ್ಗದ ಬಡತನದಲ್ಲಿ ಬೆಳೆದು ಬಂದವರು.

ಬುರ್ಲಿ ಮಾಸ್ತರರು ಅಲ್ಲಿರುವವರೆಗೆ ಕಾಂಗ್ರೆಸ್ ಇತಿಹಾಸ ಮತ್ತಿತರ ವಿಷಯಗಳನ್ನು ತಿಳಿಸಿ ಹೇಳುತ್ತಿದ್ದರು. ಅನೇಕ ಟಿಪ್ಪಣಿಗಳನ್ನು ಬರೆದಿಡುತ್ತಿದ್ದರು. ಹೀಗೆ 200 ಪುಟದ ಎರಡು ನೋಟಬುಕ್‌ಗಳಲ್ಲಿ ಪೂರ್ತಿ ಬರೆದಿದ್ದೆ. ಜೇಲಿನ ನಿಯಮದಂತೆ ತಿಂಗಳಿಗೆ ಒಂದೇ ಪತ್ರ ಮಾತ್ರ

ಬರೆಯಲು ಕೊಡುತ್ತಿದ್ದರು. ಅದನ್ನು ಜೇಲ್ ಮೂಲಕವೇ ಕಳಿಸಲಾಗುತ್ತಿತ್ತು. ಬಂದ ಪತ್ರಗಳಲ್ಲಿ ಒಂದೇ ಕೊಡಬೇಕೆಂಬ ನಿಯಮವಿದ್ದರೂ ಎಲ್ಲ ಪತ್ರಗಳನ್ನು ತಂದು ಕೊಡುತ್ತಿದ್ದರು.

ಇದೇ ಸಮಯದಲ್ಲಿ ಮಹಾತ್ಮರ 'ಸೆಂಟ್‌ಪರ್ಸೆಂಟ್ ಸ್ವದೇಶಿ' (ನೂರಕ್ಕೆ ನೂರು ಸ್ವದೇಶಿ) ಎಂಬ ಇಂಗ್ಲೀಷ್ ಹೊತ್ತಿಗೆಯನ್ನು ಕನ್ನಡಿಸಿದೆ. ಅದರಂತೆ ದೇಶಬಂಧು ಚಿತ್ತರಂಜನ್‌ದಾಸ್ ಮತ್ತು ವಿನೋಬಾ ಭಾವೆ ಅವರ ಚರಿತ್ರೆಗಳನ್ನು ಕನ್ನಡಿಸಿದೆ. ಮುಂದೆ ಮಿಂಚಿನ ಬಳ್ಳಿಯವರು ಅದನ್ನು ಪ್ರಕಟಿಸಿದರು. ನನ್ನ ಹೆಂಡತಿಗೆ ಅನೇಕ ವಿಷಯಗಳನ್ನು ತಿಳಿಸಬೇಕಾದುದರಿಂದ ತಿಂಗಳಿಗೊಂದೇ ಪತ್ರ ಸಾಲುತ್ತಿರಲಿಲ್ಲ. ಕಾರಣ ಅವಳ ಸಲುವಾಗಿಯೇ ಒಂದು ನೋಟ್‌ಬುಕ್ ಮಾಡಿ ಅವಳಿಗೆ ಬರೆಯಬೇಕಾದುದನ್ನೆಲ್ಲ ಅದರಲ್ಲಿ ಬರೆಯುತ್ತಿದ್ದೆ. ಮುಂದೆ ಅದನ್ನು ಅವಳಿಗೆ ಕಳಿಸಿಕೊಡುತ್ತಿದ್ದೆ.

ನನ್ನ ಅಭಿಪ್ರಾಯದಲ್ಲಿ ಅಭ್ಯಾಸ ಮಾಡಲಿಕ್ಕೆ ಜೇಲು ಶ್ರೇಷ್ಠವಾದ ಸ್ಥಳ. ಅನೇಕ ಸಲ ಸಾಮಾನ್ಯ ಶಿಬಿರದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೆವು. ಅಲ್ಲದೆ, ವಿಭಿನ್ನ ವಿಷಯಗಳ ಮೇಲೆ ವಿಚಾರ ಸಂಕಿರಣಗಳು ಜರುಗುತ್ತಿದ್ದವು. ಅಲ್ಲಿ ಹಿಂದೀ ವರ್ಗಗಳು ನಡೆಯುತ್ತಿದ್ದವು. ಓದು ಬಾರದ ಕೆಲವು ಹಳ್ಳಿಗರು ಕನ್ನಡ ಕಲಿತುದಲ್ಲದೆ 'ಹಿಂದೀ' ಭಾಷೆಯನ್ನೂ ಕಲಿತುಕೊಂಡರು. ನನ್ನ ಓರ್ವ ಮಿತ್ರ ನಿಂಗಪ್ಪ ಅಂಟಿನ ಎನ್ನುವವರು ಬಿಡುಗಡೆಯಾದ ನಂತರ ಪೂರ್ತಿ ವಿಧಾಯಕ ಕಾರ್ಯಕರ್ತರಾದರು. ಅವರು ಓದುಬಹರ ಕಲಿತದ್ದು ಜೇಲಿನಲ್ಲಿಯೇ. ಮುಖಂಡರ ಹಿಂದೀ ಭಾಷಣವನ್ನೂ ಸಹ ಸರಾಗವಾಗಿ ಕನ್ನಡದಲ್ಲಿ ಹೇಳುತ್ತಿದ್ದರು.

ಆಗ ಜೇಲಿನಲ್ಲಿ ನಮಗೆ ಯಾವ ಕೆಲಸ ಕೊಟ್ಟಿರಲಿಲ್ಲ. ಇದರ ದುಷ್ಪರಿಣಾಮ ಕೆಲವರ ಮೇಲಾದದ್ದುಂಟು. ಕೆಲವರು ಅಭ್ಯಾಸ ಮಾಡುವುದರಲ್ಲಿ ವೇಳೆ ಕಳೆದರೆ, ಬೇರೆ ಕೆಲವರು ನಿದ್ರೆಯಲ್ಲಿಯೂ, ಬಡಿದಾಡುವುದರಲ್ಲಿಯೂ ಕಳೆಯುತ್ತಿದ್ದರು. ಕಾರಣ ನಮಗೆ ಏನಾದರೊಂದು ಕೆಲಸ ಕೊಡಲು ಜೇಲರ್‌ರನ್ನು ಕೇಳಿಕೊಂಡೆವು.

ಅದಕ್ಕೆ ಅವರು "ಯಾರ ಮೇಲೆಯೂ ನಮ್ಮ ಒತ್ತಾಯವಿಲ್ಲ, ಬೇಕಾದವರು ಹೋಗಬಹುದು" ಎಂದು ಹೇಳಿ ಸೆಜ್ಜೆತೆನೆ ಹೊಡೆಯುವ ಕೆಲಸವನ್ನು ಕೊಟ್ಟರು. ಈ ಕೆಲಸಕ್ಕಾಗಿ ನಾವು ಜೇಲಿನ ಹೊರಗೆ ಹೋಗಬೇಕಾಗುತ್ತಿತ್ತು. ಆ ಸೆಜ್ಜೆತೆನೆಯನ್ನು ಸುಮಾರು ಎರಡು ಗಂಟೆ ಹೊಡೆಯುತ್ತಿದ್ದೆವು. ಆ ದಡ್ಡು ಇಂದಿಗೂ ನನ್ನ ಕೈಯಲ್ಲಿದೆ. ನಮ್ಮಲ್ಲಿ ಕೇವಲ 30 ಜನರು ಮಾತ್ರ ಕೆಲಸಕ್ಕೆ ಸಿದ್ಧರಾದರು. ಬೇರೆ ಕೆಲವರು ನಮ್ಮನ್ನು ಯಥೇಷ್ಟವಾಗಿ ಟೀಕೆ ಮಾಡುತ್ತಿದ್ದರು.

ಸಂಜೆ 5 ಗಂಟೆಗೆ ಊಟವಾದರೆ ಮುಂದೆ ಒಂದು ತಾಸು ಬಿಡುವು ದೊರೆಯುತ್ತಿತ್ತು. ಆಗ ಕೆಲವರು ಅತ್ತಿತ್ತ ತಿರುಗಾಡಿದರೂ ಕೆಲವರಿಗಾಗಿ ಸೇವಾದಳದ ವರ್ಗ ನಡೆಸುತ್ತಿದ್ದರು. ಆ ವರ್ಗದಲ್ಲಿ ನಾನೂ ಸೇರಿಕೊಂಡಿದ್ದೆ. ಆ ಒಂದು ತಾಸು ಆಟ, ಪಾಠ ನಡೆಯುವವು. ಸಂಜೆ 6 ಗಂಟೆಗೆ ನಮ್ಮನ್ನೆಲ್ಲ ಒಳಗೆ ಹಾಕಿ ಕೀಲಿ ಹಾಕುವರು. ನಮ್ಮ ಬ್ಯಾರಕ್ಕಿನಲ್ಲಿ ಸುಮಾರು ಎಂಬತ್ತು

ಜನರಿರಬೇಕು. ಅಲ್ಲಿ ವಿದ್ಯುತ್ ಇರಲಿಲ್ಲ. ಕೇವಲ ಆರು ಕಂದೀಲಗಳನ್ನು ಕೊಡುತ್ತಿದ್ದರು. ಒಂದು ಕಂದೀಲಿನ ಸುತ್ತಲೂ ಎಂಟು ಹತ್ತು ಜನ ಕುಳಿತು ಓದುವರು. ಏಳು ಗಂಟೆಗೆ ಸಾಮೂಹಿಕ ಪ್ರಾರ್ಥನೆ ಮಾಡುತ್ತಿದ್ದೆವು. ಈ ಗದ್ದಲದಲ್ಲಿ ಓದುವುದಕ್ಕಿಂತ ನಾನು 7 ಗಂಟೆಗೆ ಮಲಗುವುದನ್ನು ಒಗ್ಗಿಸಿಕೊಂಡೆ. ಬೆಳಿಗ್ಗೆ ಸರಿಯಾಗಿ ಮೂರು ಗಂಟೆಗೆ ಎದ್ದು ನನ್ನ ಓದುಬರಹ ನಡೆಯುತ್ತಿತ್ತು. ಆಗ ಬಹುಶಃ ಯಾರೂ ಏಳುತ್ತಿರಲಿಲ್ಲ. ಆಗ ಬೇಕಾದರೆ ನನ್ನ ಮುಂದೆ ಒಂದಕ್ಕಿಂತ ಹೆಚ್ಚು ಕಂದೀಲು ಇಟ್ಟುಕೊಳ್ಳಬಹುದಿತ್ತು. ನಮ್ಮ ಹತ್ತಿರ ಗಡಿಯಾರ ಇರದಿದ್ದರಿಂದ ನಮ್ಮ ಕಾವಲುಗಾರ ಪೊಲೀಸ್‌ನೇ ನಮ್ಮ ಗಡಿಯಾರ. ಬೆಳಿಗ್ಗೆ 6 ಗಂಟೆಗೆ ಬೀಗ ತೆಗೆಯುತ್ತಿದ್ದರು. ವಿಸಾಪೂರದಲ್ಲಿ ವಿಪರೀತ ಚಳಿ. ಪಕ್ಕದಲ್ಲಿಯೇ ವಿಶಾಲವಾದ ಕೆರೆ. ಸಿಮೆಂಟ್ ಹೌದಿನಲ್ಲಿ ಹಿಂದಿನ ದಿನದ ನೀರಿರುತ್ತಿತ್ತು. ಬಾಗಿಲು ತೆಗೆದ ಕೂಡಲೇ ಕೇವಲ ನಾಲ್ಕೈದು ಜನರು ಮಾತ್ರ ಓಡುತ್ತಾ ಬಂದು ಆ ಕೊರೆಯುವ ಚಳಿಯಲ್ಲಿ ಸಿಮೆಂಟ್ ಹೌದಿನಲ್ಲಿಯ ನೀರಿನಿಂದ ಸ್ನಾನ ಮಾಡುತ್ತಿದ್ದೆವು. ಸ್ನಾನ ಮಾಡಿದ ನಂತರ ಬೆರಳು ಮಡಿಸಲಾಗುತ್ತಿರಲಿಲ್ಲ. ಸಾಮಾನ್ಯವಾಗಿ ಇತರರು ಮಧ್ಯಾಹ್ನ ಸ್ನಾನ ಮಾಡುವರು. ಸರಿಯಾಗಿ 7 ಗಂಟೆಗೆ ಬೆಳಗಿನ ತಿಂಡಿ ಅಂದರೆ ಜೋಳದ ಗಂಜಿ ಬರುತ್ತಿತ್ತು. ಅದನ್ನೇ ಸವಿಮಾಡಿ ಕುಡಿಯುತ್ತಿದ್ದೆವು. ಸರಿಯಾಗಿ ಹತ್ತು ಗಂಟೆಗೆ ಊಟ ಅಂದರೆ ಎರಡು ರೊಟ್ಟಿ, ನಾಲ್ಕು ಕಪ್ಪಿನಷ್ಟು ಬೇಳೆ. ನಮ್ಮಂಥವರಿಗೆ ಇದು ಸಾಕಷ್ಟಾದರೂ ಕೆಲ ಹಳ್ಳಿಜನರಿಗೆ ಇದು ಯಾತಕ್ಕೂ ಹತ್ತುತ್ತಿರಲಿಲ್ಲ. ಅದಕ್ಕಾಗಿ ನಮ್ಮಲ್ಲಿ ಕೆಲವರು ಕೇವಲ ಒಂದು ಅರ್ಧ ರೊಟ್ಟಿ ತಿಂದು, ಅರ್ಧ ಅವರಿಗೆ ಕೊಡುತ್ತಿದ್ದರು. ಸಂಜೆ ನಾಲ್ಕು ಗಂಟೆಗೆ ಎರಡು ರೊಟ್ಟಿ, ಮೂರ್ನಾಲ್ಕು ಕಪ್ಪಿನಷ್ಟು ತೊಪ್ಪಲುಪಲ್ಲೆ ಅದಕ್ಕೆ ಹಸಿರಾಣಿ ಎನ್ನುತ್ತಿದ್ದರು. ಕೆಲವರಿಗೆ ಇದು ಸೇರುತ್ತಿರಲಿಲ್ಲ. ನನಗದು ತುಂಬಾ ಪ್ರೀತಿಯದಾಗಿತ್ತು. ಈ ಮಧ್ಯೆ ಯಾವಾಗಲಾದರೊಮ್ಮೆ ಔಷಧ ಸಮೇತ ಡಾಕ್ಟರ್ ಬರುತ್ತಿದ್ದರು. ಅವರಲ್ಲಿ ಹೆಚ್ಚಿಗೆ ಔಷಧಿಗಳಿರುತ್ತಿರಲಿಲ್ಲ. ಕೆಲವು ಹಳ್ಳಿಯ ಕಿಲಾಡಿ ಹುಡುಗರು 'ನಮ್ಮ ಡಾಕ್ಟರರು ತಲೆಶೂಲಿ ಎದ್ದರೆ ತಲೆಗೆ, ಹೊಟ್ಟೆ ನೋವಾಗಿದ್ದರೆ ಹೊಟ್ಟೆಗೆ ಅಯೋಡಿನ್ ಬಡಿಯುವರು' ಎಂದು ಚೇಷ್ಟೆ ಮಾಡುತ್ತಿದ್ದರು.

ಅಲ್ಲಿ ಮಲೇರಿಯಾ ಜ್ವರದ ಉಪದ್ರವ ಹೆಚ್ಚಾಗಿತ್ತು. ಅದಕ್ಕಾಗಿ ಕ್ವಿನೈನ್ ಗುಳಿಗೆ ಕೊಡುತ್ತಿದ್ದರು. ಜ್ವರ ಬಂದಕೂಡಲೇ ಆಸ್ಪತ್ರೆಗೆ ಸಾಗಿಸಲಾಗುತ್ತಿತ್ತು. ಬಹಳಷ್ಟು ಜನರು ಮಲೇರಿಯಾ ಪೀಡಿತರಾಗುತ್ತಿದ್ದರು. ಅವರಲ್ಲಿ ಬೆರಳೆಣಿಸುವಷ್ಟು ಜನರಿಗೆ ಮಾತ್ರ ಈ ರೋಗ ತಗುಲಿರಲಿಲ್ಲ. ಅವರಲ್ಲಿ ನಾನೂ ಒಬ್ಬ ಎಂದು ಹೇಳಲು ಅಭಿಮಾನವಾಗುತ್ತದೆ.

## ಕೈ ಬರಹದ ಮಾಸಪತ್ರಿಕೆ

ಸ್ಥಾನಬದ್ಧರಲ್ಲಿದ್ದ ಮಧು ಲಿಮಯೆ ಅವರು ಸೌಮ್ಯವಾದಿಗಳು. ಈ ಬಗ್ಗೆ ಅನೇಕ ಪ್ರಶ್ನೋತ್ತರಗಳನ್ನು ಮರಾಠಿಯಲ್ಲಿ ಬರೆದು ನನ್ನ ಕಡೆಗೆ ಕಳಿಸುತ್ತಿದ್ದರು. ಅವುಗಳನ್ನು ಕನ್ನಡಿಸಿ ನಮ್ಮ ಕಾರ್ಯಕರ್ತರಿಗೆ ಕೊಡುತ್ತಿದ್ದೆ. ಇದಲ್ಲದೆ ಅಲ್ಲಿ ನಾವು ಒಂದು ಕೈ ಬರಹದ ಮಾಸ ಪತ್ರಿಕೆಯನ್ನು ಹೊರಡಿಸುತ್ತಿದ್ದೆವು. ಅದಕ್ಕೆ ನಾನು ಕೆಲ ಲೇಖನಗಳನ್ನು ಬರೆದು ಕೊಡುತ್ತಿದ್ದೆ.

ನಮ್ಮ ಜೊತೆ ಇದ್ದವರು ಹೆಚ್ಚಾಗಿ ಹಳ್ಳಿಗರು. ಅನೇಕರಿಗೆ ಓದು ಬರುತ್ತಿರಲಿಲ್ಲ. ಅಂಥವರಿಗೆ ಪತ್ರ ಬರೆದುಕೊಡುವುದು, ಅವರಿಗೆ ಬಂದ ಪತ್ರಗಳನ್ನು ಓದುವುದು ನನ್ನ ಕೆಲಸವಾಗಿತ್ತು. ಇದಲ್ಲದೆ ಏನಾದರೂ ಅರ್ಜಿ ಬರೆಯಬೇಕಾದರೆ ಅದೂ ನನ್ನ ಕಡೆಗೆ ಬರುತ್ತಿತ್ತು.

ನಿತ್ಯ ಏನಾದರೊಂದು ಚರ್ಚೆ ಇರುತ್ತಿತ್ತು. ಹಿಂಸೆ - ಅಹಿಂಸೆ, ವಿಧ್ವಂಸಕ ಚಟುವಟಿಕೆ, ಗಾಂಧೀ ವಿಚಾರ ಮುಂತಾದವುಗಳ ಬಗ್ಗೆ ಅನೇಕ ಸಲ ಚರ್ಚೆ ನಡೆಯುತ್ತಿತ್ತು. ಎಲ್ಲರೂ ತಾವು ಮಾಡಿದ ಮತ್ತು ಅನುಭವಕ್ಕೆ ಬಂದ ಸಂಗತಿಗಳನ್ನೆಲ್ಲ ವಿವರವಾಗಿ ಹೇಳುತ್ತಿದ್ದರು. ಅಲ್ಲಿಯ ಇನ್ನೊಂದು ಪರಿಪಾಠವೆಂದರೆ ಯಾರದಾದರೂ ಬಿಡುಗಡೆಗೆ ಬಂದರೆ ಅದರ ಹಿಂದಿನ ದಿನ ರಾತ್ರಿ ಅವರಿಗೆ ಬೀಳ್ಕೊಡುವ ಸಮಾರಂಭ ನಡೆಯುವುದು. ಅವರ ಬಗ್ಗೆ ನಾಲ್ಕಾರು ಒಳ್ಳೆಯ ಮಾತುಗಳನ್ನು ಹೇಳಿ ಅವರನ್ನು ಸಂತಸದಿಂದ ಕಳಿಸಿಕೊಡುತ್ತಿದ್ದೆವು. ಅಲ್ಲದೆ, ಅವರ ಕಡೆಯಿಂದ ಅನೇಕ ಪತ್ರ ಮತ್ತು ಸಂದೇಶಗಳನ್ನು ಕಳಿಸುತ್ತಿದ್ದೆವು.

## ಸತ್ಯಾಗ್ರಹಿಯ ಬಲಿದಾನ

ನಾನು ವಿಸಾಪುರ ಜೇಲಿಗೆ ಬಂದ ಎರಡು ತಿಂಗಳೊಳಗೆ ಒಂದು ಮನ ನೋಯಿಸುವ ಘಟನೆ ಜರುಗಿತು. ಮೂರುಸಾವಿರಪ್ಪ ಈಚಗೇರಿ ಎಂಬ ಹುಬ್ಬಳ್ಳಿಯ ತರುಣ ಸತ್ಯಾಗ್ರಹಿ ನಮ್ಮ ಜೊತೆಗಿದ್ದರು. ಒಂದು ಕಾಯಿಲೆಯ ನಿಮಿತ್ತ ಆಸ್ಪತ್ರೆಗೆ ಸಾಗಿಸಲಾಗಿತ್ತು. ಸುಪರಿಂಟೆಂಡೆಂಟ್‌ರೇ ಸಿವ್ಹಿಲ್ ಸರ್ಜನ್‌ರಾಗಿದ್ದರು. ಸಾಮಾನ್ಯವಾಗಿ ಅವರಿಗೆ ರಾಜಕೀಯ ಕೈದಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಅವರ ಮೇಲೆ ಇಲ್ಲಸಲ್ಲದ ಆರೋಪ ಮಾಡುವರು. ಈಚಗೇರಿ ಅವರಿಗೆ ಧನುರ್ವಾಯು ಕೂಡಿಕೊಂಡು ಮೈ ಕೈ ಸೆಟೆದಿತ್ತು. ಆಗ ನಮ್ಮ ಸಿವ್ಹಿಲ್ ಸರ್ಜನ್ ಸಾಹೇಬರ ಅಭಿಪ್ರಾಯವೆಂದರೆ ಅವರು ಬೇಕೆಂತಲೇ ಈ ಸೋಗು ಹಾಕಿರುವರೆಂದು ಅಂದರು. ಈ ಮಾತು ನಮ್ಮ ಮನಸ್ಸಿಗೆ ತುಂಬಾ ನೋವುಂಟು ಮಾಡಿತು. ಮುಂದೆ ಅದೇ ಕಾಯಿಲೆಯಲ್ಲಿಯೇ ಅವರು ತಮ್ಮ ಕೊನೆಯುಸಿರೆಳೆದರು. ನಮಗೆಲ್ಲ ತುಂಬಾ ದುಃಖವಾಯ್ತು. ಅಂದು ಯಾವ ರಾಜಕೀಯ ಕೈದಿಯೂ ಊಟ ಮಾಡದೇ ಉಪವಾಸ ಮಾಡಿ ಸಾಯಂಕಾಲ ದುಃಖ ಸೂಚಕ ಸಭೆ ಮಾಡಲಾಯ್ತು. ಅಂದಿನ ಸಭೆಯಲ್ಲಿ ಬುರ್ಲಿ ಆಚಾರ್ಯರು ತುಂಬಾ ಭಾವಾವೇಶರಾಗಿ ಕಣ್ಣೀರು ಸುರಿಸುತ್ತಾ ನಮ್ಮ ಓರ್ವ ಸತ್ಯಾಗ್ರಹಿಯನ್ನು ಯೋಗ್ಯ ಔಷಧೋಪಚಾರ ಮಾಡದೇ ಇಂಥಾ ಪರಿಸ್ಥಿತಿಗೆ ತಂದರು ಎಂದು ಉದ್ಗಾರ ತೆಗೆದರು.

## ಬುರ್ಲಿ ಆಚಾರ್ಯರ ಜೀವನ

ಅವರು ತುಂಬಾ ನಿಷ್ಠಾವಂತ ಮಾಧ್ವರು. ಮಡಿಮೈಲಿಗೆ ವಿಶೇಷ ಮಾಡುತ್ತಿದ್ದರು. ಅನೇಕ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವವರು. ಇಂಥವರು ಜೇಲಿನಲ್ಲಿ ಹೇಗಿರುವರು ? ಎಂಬ ಬಗ್ಗೆ ನನಗೆ ತುಂಬಾ ಕುತೂಹಲವಿತ್ತು. ಅವರು ನಮ್ಮ ಪಕ್ಕದ ಬ್ಯಾರಕ್ಕಿನಲ್ಲಿರುತ್ತಿದ್ದರು. ದಿನಾಲು

ಏಳೆಂಟು ತಾಸು ನಾವು ಕೂಡಿಯೇ ಕಳೆಯುತ್ತಿದ್ದೆವು. ಎಲ್ಲರಂತೆ ಜೇಲಿನ ಊಟವನ್ನೇ ಸ್ವೀಕರಿಸಿ ನಮ್ಮೆಲ್ಲರ ಸಂಗಡ ಕುಳಿತು ಊಟ ಮಾಡುವರು. ಇಡೀ ದಿವಸ ಒಂದಿಲ್ಲೊಂದು ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ಯಾರಾದರೂ ಅಧಿಕಾರಿಗಳು ಅಥವಾ ಕಮಿಟಿಗಳು ಜೇಲು ಸಂದರ್ಶಿಸಿದರೆ, ರಾಜಕೀಯ ಕೈದಿಗಳ ತೊಂದರೆಗಳನ್ನು ತಪ್ಪದೇ ಹೇಳುತ್ತಿದ್ದರು. ಒಮ್ಮೆ ಮುಂಬೈ ರಾಜ್ಯದ ಗೃಹ ಶಾಖೆಯ ಕಾರ್ಯದರ್ಶಿಗಳಾಗಿದ್ದ ಎಚ್.ವಿ.ಆರ್. ಅಯ್ಯಂಗಾರ್‌ರವರು ಬಂದಿದ್ದರು. ಅವರು ಕನ್ನಡಿಗರು, ಅವರಿಗೆ ಬುರ್ಲಿ ಪರಿಚಿತರು. ನಮ್ಮ ತೊಂದರೆಗಳನ್ನೆಲ್ಲ ಕೂಲಂಕುಷವಾಗಿ ಹೇಳಿದರು. ಬುರ್ಲಿಯವರು ನನಗೊಂದು ಆಸರೆಯಾಗಿದ್ದರು. ಎರಡೇ ತಿಂಗಳು ಅವರ ಸಂಗಡ ಕೂಡಿ ಇರುವ ಸದವಕಾಶ ದೊರಕಿತ್ತು. ಅತ್ಯಂತ ಸಾತ್ವಿಕ ಸ್ವಭಾವದವರು. ಬಡತನದ ಬವಣೆಯಲ್ಲಿ ಬೆಂದವರು. ಅವರದು ಯಾವಾಗಲೂ ಒಂದು ವಿಶಿಷ್ಟ ಬಗೆಯ ನಗೆ.

## ರವಿವಾರದ ಸಂತಸ

ಸಾಮಾನ್ಯವಾಗಿ ರವಿವಾರ ಸಂತಸದ ದಿನ. ಅಂದು ಜೇಲಿನಲ್ಲಿ ಅಷ್ಟೊಂದು ಬಿಗುವು ಇರುತ್ತಿರಲಿಲ್ಲ. ಅಧಿಕಾರಿಗಳಿಗೆಲ್ಲ ರಜೆ ಇರುತ್ತಿತ್ತು. ಅಂದು ಕೆಲಸಕ್ಕೆ ರಜೆ. ಅಂದಿನ ಸಂಜೆ ಊಟಕ್ಕೆ ಪ್ರತಿಯೊಬ್ಬರಿಗೆ ಎರಡು ಚಪಾತಿ, ಎರಡು ತುಂಡು ಬೆಲ್ಲ ಕೊಡಲಾಗುತ್ತಿತ್ತು. ಅದರಲ್ಲಿ ಪ್ರತಿಯೊಬ್ಬರು ಒಂದು ಚಪಾತಿಯನ್ನು ಸಾಮೂಹಿಕಕ್ಕೆ ಕೊಡುತ್ತಿದ್ದರು. ಒಂದು ವಸ್ತ್ರವನ್ನು ಹಾಸಿ ಅದರ ಸುತ್ತಲು ನಾಲ್ಕಾರು ಜನರು ಕುಳಿತು ಸಾಮೂಹಿಕವಾಗಿ ಬಂದ ಚಪಾತಿಗಳನ್ನೆಲ್ಲ ಕೈಯಿಂದ ತಿಕ್ಕಿ ಅದರಲ್ಲಿ ಬೆಲ್ಲ ಕೂಡಿಸಿ ಮಾಲೇದಿ ಉಂಡಿ ಮಾಡುವರು. ಊಟದ ಸಮಯಕ್ಕೆ ಎಲ್ಲರಿಗೂ ಒಂದೊಂದರಂತೆ ಉಂಡಿ ಕೊಡುವರು. ಅದನ್ನು ಸವಿ ಮಾಡಿಕೊಂಡು ತಿನ್ನುವುದು. ಇದು ಎಷ್ಟು ಸೊಗಸು ಎಂಬುದನ್ನು ಅನುಭವಿಸಿಯೇ ನೋಡಬೇಕು.

ಸಾಮಾನ್ಯವಾಗಿ ಜೇಲಿನಲ್ಲಿದ್ದವರ ಮೇಲೆಲ್ಲಾ ಅವರ ಶೀಲ, ಚಾರಿತ್ರ್ಯದ ಮೇಲೆ ಕ್ಷಕಿರಣ ಹಾಕಿದಂತಾಗಿ ಅವರ ನಿಜಸ್ವರೂಪ ಹೊರಬೀಳುತ್ತಿತ್ತು. ತಿನ್ನುಣ್ಣುವುದರಲ್ಲಿ ಇದು ಹೆಚ್ಚಾಗಿ ಪ್ರಕಟವಾಗುವುದು. ನಾಲಿಗೆ ಬಿಗಿ ಹಿಡಿದವನಿಗೆ ಈ ಯಾವ ತೊಂದರೆಗಳೂ ಇರುತ್ತಿರಲಿಲ್ಲ. ಜೇಲಿನ ನಿಯಮ ಎಷ್ಟೇ ಕಟ್ಟುನಿಟ್ಟಾಗಿದ್ದರೂ ತಂಬಾಕು ಸೇದುವವರು ಧಾರಾಳವಾಗಿ ತರಿಸಿ ಸೇದುವರು. ಕೆಲವರು ನಿತ್ಯ ಚಹಾ ಮಾಡಿಕೊಂಡು ಕುಡಿಯುವರು. ಸಂಜೆ ಊಟವಾದ ನಂತರ ಅವರ ಈ ಕಾಯಕ ಪ್ರಾರಂಭ. ಚಹಾಪುಡಿ, ಸಕ್ಕರೆ, ಹಾಲು ದೊರಕಿಸುತ್ತಿದ್ದರು. ಉರುವಲಕ್ಕೆ ನಮಗೆ ಕೊಟ್ಟ ಕರಟೇ ಗತಿ. ನಾನೂ ಆಗ ಚಹಾ ಕುಡಿಯುತ್ತಿದ್ದೆ. ಮೊದಲನೆಯ ದಿವಸ ತಂದು ಕೊಟ್ಟಾಗ ಕುಡಿದೆ. ಮುಂದೆ ಈ ಎಲ್ಲ ವಿಚಾರ ತಿಳಿದ ಮೇಲೆ ನಿರಾಕರಿಸಿದೆ. ಇದರಲ್ಲಿ ಕಾವಲುಗಾರನಿಗೂ ಪಾಲು ಹೋಗುತ್ತಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಜೇಲಿನಲ್ಲಿದ್ದುದರಿಂದ ಕೆಲ ಅಡಚಣೆಗಳು ಸ್ವಾಭಾವಿಕವಾಗಿ ಇರುವವೇ. ನಮಗೆ ಬೇರೆ ಕೆಲಸವೇ ಇರದಿದ್ದರಿಂದ ಇಂಥ ವಿಷಯಗಳ ಬಗ್ಗೆ ವಿಚಾರಣೆ ನಡೆಯುತ್ತಿತ್ತು.

## ದೊಡ್ಡವರ ಸಣ್ಣತನ

ಒಂದು ಸಲ ಇಂಥ ನಮ್ಮ ಎಲ್ಲ ತೊಂದರೆಗಳನ್ನು ಕ್ರೋಢೀಕರಿಸಿ ಜೇಲ್ ಅಧಿಕಾರಿಗಳ ಕಡೆಗೆ ಒಂದು ಶಿಷ್ಟ ಮಂಡಳ ಕಳಿಸಬೇಕೆಂದು ಗೊತ್ತಾಯಿತು. ಅದಕ್ಕಾಗಿ ಮೂರು ಹೆಸರುಗಳು ಸೂಚಿಸಲ್ಪಟ್ಟವು. ಅದರಲ್ಲಿ ನನ್ನ ಹೆಸರಿತ್ತು. ಒಂದು ವಿಚಿತ್ರ ಸಮಸ್ಯೆ ಹೀಗಿತ್ತು. ನಮಗೆಲ್ಲ ಜೇಲಿನ ಪೋಷಾಕು ಕೊಟ್ಟಿದ್ದು ಎದೆಯ ಎಡಭಾಗಕ್ಕೆ ಒಂದು ಅರಿವೇ ಗುಂಡಿ ಹಚ್ಚಿ 4", 3" ಒಂದು ಕಟ್ಟಿಗೆ ತುಂಡಿನ ಮೇಲೆ ನಮ್ಮ ನಂಬರ ಬರೆದು ಅದರ ಮೇಲ್ಗಡೆ ಒಂದು ತೊಗಲಿನ ಹಿಡಿಕೆ ಹಚ್ಚಿ ಅದನ್ನು ಆ ಗುಂಡಿಗೆ ನೇತು ಹಾಕಿಕೊಳ್ಳಬೇಕೆಂಬ ಹೊಸ ನಿಯಮ ಬಂದಿತು. ಜೇಲ್ ಅಧಿಕಾರಿಗಳು ಇದನ್ನು ಕಾರ್ಯರೂಪದಲ್ಲಿ ತರಲು ಟೊಂಕ ಕಟ್ಟಿದ್ದರು. ಇದು ತೀರ ಅಪಮಾನಕರವಾದದ್ದೆಂದು ನಮಗೆಲ್ಲ ಅನ್ನಿಸಿ, ಈ ಬಗ್ಗೆ ಬಲವಾಗಿ ವಿರೋಧಿಸಿದೆವು. ಕೊನೆಗೆ ಗುಪ್ತ ಮತದಾನದಿಂದ ಎಲ್ಲರ ಅಭಿಪ್ರಾಯ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಗೊತ್ತಾಯಿತು. ಅಂದರೆ, ಇದನ್ನು ವಿರೋಧಿಸಿ ಸತ್ಯಾಗ್ರಹವನ್ನು ಮಾಡುವುದು. ಈ ಮಧ್ಯೆ ನಮ್ಮ ಶಿಷ್ಟಮಂಡಳದ ಸದಸ್ಯರು ಅಧಿಕಾರಿಗಳ ಕಡೆಗೆ ಹೋದಾಗ ಆದಷ್ಟು ಮಟ್ಟಿಗೆ ಸತ್ಯಾಗ್ರಹವಾಗದಂತೆ ನೋಡಿಕೊಳ್ಳಲಾಗುವುದೆಂದು ಹೇಳಿದರು. ಆದರೆ ಇಲ್ಲಿ ಅವರು ಮಾತನಾಡುವಾಗ ತುಂಬಾ ಗಂಭೀರವಾಗಿ ನಾವು ಸತ್ಯಾಗ್ರಹ ಮಾಡಲೇಬೇಕು ಎಂದು ಪ್ರತಿಪಾದಿಸುವರು. ನನಗೆ ಇದೊಂದು ಅರ್ಥವಾಗುತ್ತಿರಲಿಲ್ಲ. ಇದು ದ್ವಿಮುಖ ಧೋರಣೆಯಾಗುವುದಿಲ್ಲವೇ ? ಎಂದು ನಾನು ಅವರ ಈ ಧೋರಣೆಯನ್ನು ಖಂಡಿಸಹೋದೆ. ಅದಕ್ಕೆ ಅವರು ಕೊಟ್ಟ ಉತ್ತರ ಇನ್ನೂ ವಿಚಿತ್ರ, "ಇದು ಒಂದು ರಾಜಕಾರಣ. ಅಧಿಕಾರಿಗಳ ಮುಂದೆ ಹಾಗೆ ಹೇಳಿ ಇಲ್ಲಿ ಸತ್ಯಾಗ್ರಹದ ಬಗ್ಗೆ ಪ್ರತಿಪಾದಿಸಿದರು. ಕೊನೆಗೆ ನಾನು ಹೇಳಿದ ಒಂದು ಮಾತಿನ ಕಡೆಗೆ ನಿಮ್ಮ ಗಮನ ಸೆಳೆಯಬಯಸುವೆ" ಎಂದು ಹೇಳುತ್ತಾ, "ಈಗ ನಾವು ಮತ ತೆಗೆದುಕೊಂಡಿದ್ದರಲ್ಲಿ ಒಬ್ಬನೇ ಒಬ್ಬನು ಈ ಕಾರ್ಯಕ್ರಮಕ್ಕೆ ವಿರುದ್ಧವಿದ್ದರೂ ನಾವು ಸತ್ಯಾಗ್ರಹ ಮಾಡುವಂತಿಲ್ಲ" ಎಂಬುದನ್ನು ಎತ್ತಿ ತೋರಿಸಿದರು. "ಎಲ್ಲರೂ ಸತ್ಯಾಗ್ರಹಕ್ಕೆ ಒಪ್ಪಿಗೆ ಕೊಟ್ಟರೆ ಹೇಗೆ ?" ಎಂದು ವಾದಿಸಿದೆ. ಕೊನೆಗೆ ತೀರ ಖಾಸಗಿಯಾಗಿ ಬಾಯಿಬಿಟ್ಟರು, "ಯಾರು ಏನೇ ಮತ ಕೊಟ್ಟರೂ ನನ್ನ ಮತ ವಿರುದ್ಧ ಇರುವುದು" ಎಂದು ನಗುತ್ತಾ ಹೇಳಿದರು. 'ಇಂಥ ನಿಮ್ಮ ಧೋರಣೆಗೆ ನಾನಂತೂ ಒಪ್ಪಲಾರೆ' ಎಂದು ಸ್ಪಷ್ಟೀಕರಿಸಿದೆ. ಅದಕ್ಕೆ ಅವರು "ನೀನಿನ್ನೂ ಚಿಕ್ಕವ. ರಾಜಕಾರಣವೆಂದರೆ ಹೀಗೆಯೇ ಇರುತ್ತದೆ. ನಿನಗಿನ್ನೂ ಅನುಭವ ಸಾಲದು" ಎಂದು ಮುಂತಾಗಿ ಹೇಳಿದರು. ಕೊನೆಗೂ ನನ್ನ ಮನಸ್ಸು ಇದಕ್ಕೊಪ್ಪಲಿಲ್ಲ. ಹೇಗೋ ಆ ಸಮಸ್ಯೆ ಬಗೆಹರಿಯಿತು. ಇಂಥ ಅನೇಕ ಸಮಸ್ಯೆಗಳು ಬಂದಾಗ ದೊಡ್ಡವರ ಸಣ್ಣತನ ಮತ್ತು ಸಣ್ಣವರ ದೊಡ್ಡಸ್ತನದ ಪ್ರತ್ಯಕ್ಷ ದರ್ಶನವಾಗುತ್ತಿತ್ತು.

## ಗಾಂಧೀಜಿಯ ಉಪವಾಸ

ಗಾಂಧೀಜಿಯವರು ಇಪ್ಪತ್ತೊಂದು ದಿವಸ ಉಪವಾಸ ಮಾಡುವರೆಂಬ ವಾರ್ತೆ ಬಂತು. ನಮಗೆಲ್ಲಾ ತುಂಬಾ ಕಳವಳವಾಯ್ತು. ಈ ಸಂದರ್ಭದಲ್ಲಿ ನಮ್ಮ ಕರ್ತವ್ಯವೇನು ? ನಾವು

ಏನು ಮಾಡಬೇಕು ? ಎಂಬ ಬಗ್ಗೆ ನಾವೆಲ್ಲ ರಾಜಕೀಯ ಕೈದಿಗಳು ಒಂದೆಡೆ ಸೇರಿ ಚರ್ಚೆ ಪ್ರಾರಂಭಿಸಿದೆವು. ವ್ಯಾವಹಾರಿಕವಾಗಿದ್ದವರು : 'ನಾವೆಲ್ಲ ಒಂದು ದಿವಸ ಸಹಾನುಭೂತಿ ತೋರಿಸಲು ಉಪವಾಸ ಮಾಡಬೇಕು. ಮುಂದೆ ಬೇಕಾದರೆ ಸರತಿಯ ಉಪವಾಸ ಇಪ್ಪತ್ತೊಂದು ದಿವಸ ನಡೆಸಬೇಕು' ಎಂದು ಸೂಚಿಸಿದರು. ಆದರೆ, ಕೆಲವರು ಇದನ್ನು ಬಲವಾಗಿ ವಿರೋಧಿಸುತ್ತಾ 'ಮಹಾತ್ಮಾ ಗಾಂಧೀಜಿಯವರು ಉಪವಾಸ ಮಾಡುವಾಗ ನಾವು ಕೇವಲ ಒಂದೇ ದಿವಸ ಉಪವಾಸ ಮಾಡಿ ಕೈ ತೊಳೆದುಕೊಳ್ಳುವುದು ಯೋಗ್ಯ ಮಾರ್ಗವಲ್ಲ. ನಮ್ಮ ಜೀವ ಹೋದರೂ ಪರವಾಗಿಲ್ಲ, ನಾವೆಲ್ಲ ಇಪ್ಪತ್ತೊಂದು ದಿವಸ ಉಪವಾಸ ಮಾಡಲೇಬೇಕು' ಎಂದು ಮುಂತಾಗಿ ಬಲವಾಗಿ ಪ್ರತಿಪಾದಿಸಿದರು. ಇದನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ತರುವುದು ನಮ್ಮಿಂದ ಸಾಧ್ಯವಿಲ್ಲವೆಂದು ಇದನ್ನು ಕೈಬಿಟ್ಟೆವು. ಮೊದಲಿನ ನಿರ್ಣಯಕ್ಕೆ ಅಂಟಿಕೊಂಡು ಒಂದು ದಿನ ಎಲ್ಲರೂ ಉಪವಾಸ ಮಾಡಿದೆವು. ನಾವು ಉಪವಾಸ ಮಾಡಿದರೂ ನಮ್ಮ ಪಾಲಿನ ಊಟವನ್ನು ನಮ್ಮ ಬ್ಯಾರಕ್ಕಿನಲ್ಲಿಯೇ ಇಟ್ಟುಹೋಗುವುದುಂಟು. ಅದೇ ಪ್ರಕಾರ ಅಂದಿನ ನಮ್ಮ ಊಟವನ್ನೆಲ್ಲ ಅಲ್ಲಿ ತಂದಿಟ್ಟು ಕೀಲಿ ಹಾಕಿಕೊಂಡು ಹೋದರು.

ಮಧ್ಯರಾತ್ರಿ ನಾವೆಲ್ಲ ಮಲಗಿದಾಗ ಓರ್ವ ಮಿತ್ರ ನನ್ನನ್ನು ಬಡಿದೆಬ್ಬಿಸಿದ ಮತ್ತು ಒಂದು ದೃಶ್ಯವನ್ನು ತೋರಿಸುವುದಾಗಿ ಕರೆದುಕೊಂಡು ಹೋದ. ಅಂದು ಭಾವನಾಪರವಶನಾಗಿ 21 ದಿವಸ ಉಪವಾಸ ಮಾಡಬೇಕೆಂದು ಪ್ರತಿಪಾದಿಸಿದವನ ಕಂಬಳಿ ಮುಸುಕನ್ನು ತೆಗೆದ. ಆತನ ಬಾಯಿಯಲ್ಲಿ ರೊಟ್ಟಿ ಇದ್ದುದು ನಮಗೆ ಕಂಡುಬಂತು. ಮಾತನಾಡುವುದು ಸುಲಭ. ಆದರೆ ಅದನ್ನು ಕೃತಿಗಿಳಿಸುವುದು ತುಂಬಾ ಕಠಿಣ ಕೆಲಸವೆಂದು ನಾವೆಲ್ಲ ಮನಗಂಡೆವು. ಆತ ಸಹಜವಾಗಿ ಲಜ್ಜಿತನಾದ.

## ನೈತಿಕ ಮಟ್ಟದ ಜೀವನ

ಜೇಲಿನಲ್ಲಿ ನಾನು ಹೆಚ್ಚಾಗಿ ಹಳ್ಳಿಗರ ಮಧ್ಯದಲ್ಲಿದ್ದೆ. ಅನೇಕ ತರುಣ ವಿದ್ಯಾರ್ಥಿಗಳಿದ್ದರು. ಓದು ಬರಹದಲ್ಲಿ ಹಿಂದಿದ್ದರೂ ಕೆಲವರು ನೈತಿಕ ದೃಷ್ಟಿಯಿಂದ ತುಂಬಾ ಉನ್ನತ ಸ್ಥಾನದಲ್ಲಿದ್ದರು. ಗರಗದ ನ್ಯಾಮಣ್ಣ ಕುರಕುರಿ, ಹಾವೇರಿಯ ಬಸಪ್ಪ, ರಾಚಪ್ಪ, ಶಾಂತಾ ಅವಘಾನ, ಪಂಚಾಕ್ಷರಿ ವಳಸಂಗ, ಬೆಳಗಾವಿ ಜಿಲ್ಲೆಯ ಇಮಾಮ್‌ಸಾಹೇಬ ಮೊದಲಾದವರಿದ್ದರು. ರೋಣದ ಶಿವಪ್ಪ ನೆಲ್ಲೂರ ಮತ್ತು ಆತನ ಮಿತ್ರರಿದ್ದರು. ಇವರೆಲ್ಲ ಆತ್ಮೀಯ ಮಿತ್ರರಾಗಿದ್ದರು. ಅನೇಕ ಸಲ ನಮ್ಮ ಮುಂದಿನ ಜೀವನ ಮುಂತಾದವುಗಳ ಬಗ್ಗೆ ಚರ್ಚಿಸುತ್ತಿದ್ದೆವು. ಸಾಮಾನ್ಯವಾಗಿ ಜೇಲಿನಲ್ಲಿ ನಮ್ಮವರ ತಕರಾರುಗಳೆಂದರೆ ರೊಟ್ಟಿ ಬೆಂದಿಲ್ಲಾ, ಬೇಳೆ ನೀರಾಗಿದೆ, ತರಕಾರಿ ಚೆನ್ನಾಗಿಲ್ಲ - ಇವು ನಿತ್ಯದವು. ನಾವು ಇಂಥ ವೃತ್ತಿಯನ್ನು ಬಲವಾಗಿ ಖಂಡಿಸುತ್ತಿದ್ದೆವು. ಅದೆಷ್ಟೋ ಸಲ ಮನೆತನದ ವಿಷಯಗಳು ಚರ್ಚೆಗೆ ಬರುತ್ತಿದ್ದವು. ಮನೆಯಲ್ಲಿ ಹೆಣ್ಣುಮಕ್ಕಳು ಅತ್ಯಂತ ಪ್ರೀತಿಯಿಂದ ತನ್ನ ಮನೆಯವರ ಆರೋಗ್ಯ ಚೆನ್ನಾಗಿರಲೆಂಬ ಭಾವನೆಯಿಂದ, ಬೆಳಗಿನಿಂದ ಸಂಜೆಯವರೆಗೆ ಒಂದೇ ಸಮನೆ ಪರಿಶ್ರಮಪಟ್ಟು ಕಾಲಕಾಲಕ್ಕೆ ಊಟ, ಉಪಚಾರ ಸಿದ್ಧಮಾಡುವರು. ಒಂದೊಂದು ಸಲ

ಈ ಗಂಡಸೆಂಬ ಪ್ರಾಣಿ ಹೊರಗೆ ಏನೋ ತಿಂದು ಮನೆಗೆ ಬಂದು ಊಟಕ್ಕೆ ಕುಳಿತಾಗ ಒಂದೊಂದೇ ಟೀಕೆ ಮಾಡುವನು. ಇದು ನಿಜವಾಗಿ ಕೃತಘ್ನತೆಯಲ್ಲವೆ ? ಒಂದು ವೇಳೆ ಅಡಿಗೆಯಲ್ಲಿ ತುಸು ಹೆಚ್ಚು - ಕಡಿಮೆಯಾಗಿದ್ದರೂ ಅದನ್ನು ಸವಿಮಾಡಿಕೊಂಡು ಉಂಡರೆ ಆ ಹೆಣ್ಣುಮಗಳಿಗೆ ಎಷ್ಟೊಂದು ಧನ್ಯತೆ ಎನಿಸುವುದು ! ತ್ಯಾಗ ಮತ್ತು ಸೇವೆ ಇಲ್ಲದ ಯಾವ ಮನೆತನವಾಗಲೀ, ಯಾವ ಸಂಸ್ಥೆಯಾಗಲೀ ಮುಂದೆ ಬರಲಾರದೆಂದು ನನ್ನ ಅಭಿಪ್ರಾಯ. ಆ ದೃಷ್ಟಿಯಿಂದ ಮನೆತನದ ಹೊಣೆ ನಡೆಸುವ ಗೃಹಿಣಿ ನಿಜವಾಗಿ ತ್ಯಾಗದ ಮೂರ್ತಿ. ಅವಳದು ಮೂಕತ್ಯಾಗ, ಮೂಕಸೇವೆ. ಅದೆಷ್ಟೋ ಸಲ ಅವಳು ತಾನು ತಿನ್ನುವುದನ್ನು ಬಿಟ್ಟು ಬೇರೆಯವರಿಗೆ ಬಡಿಸಿ ಕೃತಾರ್ಥಳಾಗುವಳು. ಇಂಥ ಗೃಹಿಣಿಯರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಬೇಕು. ಇದಕ್ಕಾಗಿ ನಾವೇನೂ ಕಷ್ಟಪಡಬೇಕಾಗಿಲ್ಲ. ಅವರು ಮಾಡಿದ ಅಡಿಗೆಯನ್ನು ಸವಿ ಮಾಡಿಕೊಂಡು ಉಂಡರೆ ಅದೇ ಅವರಿಗೆ ನಾವು ಅರ್ಪಿಸುವ ಕೃತಜ್ಞತೆ.

## ಮುಂದಿನ ಜೀವನದ ಕನಸು

ಇದೇ ಸಂದರ್ಭದಲ್ಲಿ ನಮ್ಮ ಮುಂದಿನ ಜೀವನದ ಬಗ್ಗೆ ಚರ್ಚೆ ನಡೆಯುತ್ತಿತ್ತು. ನನ್ನ ವಿಚಾರ ಹೀಗಿತ್ತು. ಕೇವಲ ಕಾಗದಪತ್ರ, ಫೈಲುಗಳ ಸಂಗಡ ಹೋರಾಟ ಸಾಕು. ಪ್ರತ್ಯಕ್ಷ ವಿಧಾಯಕ ಕಾರ್ಯಕ್ಕಿಳಿಯಬೇಕು. ನದಿ ದಂಡೆಯ ಮೇಲಿನ ಒಂದು ಗ್ರಾಮ ಆಯ್ದು, ನದಿ ತೀರದಲ್ಲಿ ಒಂದು ಗುಡಿಸಲಿನಲ್ಲಿ ವಾಸ, ಹಳ್ಳಿಗರೊಡನೆ ಘನಿಷ್ಟ ಸಂಪರ್ಕ, ಉಪಜೀವನಕ್ಕಾಗಿ ಒಂದು ಉದ್ಯೋಗ. ಅದು ಒಕ್ಕಲುತನವೂ ಆಗಬಹುದು. ನಮ್ಮ ಶೀಲ, ಚಾರಿತ್ರ್ಯದ ಪ್ರಭಾವ ಗ್ರಾಮವಾಸಿಗಳ ಮೇಲೆ ಬೀಳಬೇಕು. ಹೀಗೆ ಏನೇನೋ ಕನಸು ಕಾಣುತ್ತಿದ್ದೆನು.

ನನ್ನ ದೃಷ್ಟಿಯಲ್ಲಿ ಜೇಲು ಒಂದು ಕಾರ್ಯಕರ್ತರ ತರಬೇತಿ ಕೇಂದ್ರ. ಓದಲು, ಬರೆಯಲು, ಅಧ್ಯಯನ ಮಾಡಲು, ಚಿಂತನೆ ಮಾಡಲು, ಧ್ಯಾನ - ಜಪ ಮಾಡಲು ಆದರ್ಶ ಸ್ಥಳ. ಹಾಗೆ ನೋಡಿದರೆ ಇದನ್ನು ಉಪಯೋಗ ಮಾಡಿಕೊಳ್ಳುವವರ ಕೈಯಲ್ಲಿದೆ. ನಿರಕ್ಷರಿಗಳು ಸರಾಗವಾಗಿ ಓದಹತ್ತಿದರು, ಬರೆಯ ಹತ್ತಿದರು, ಹಿಂದಿಯಲ್ಲಿ ನಿಷ್ಣಾತರಾದರು. ವಿಧಾಯಕ ಕಾರ್ಯಗಳಲ್ಲಿ ಅರ್ಧಮರ್ಧ ವಿಶ್ವಾಸವಿದ್ದವರು ಉತ್ತಮ ದರ್ಜೆಯ ರಚನಾತ್ಮಕ ಕಾರ್ಯಕರ್ತರಾದರು. ಆದರೆ, ಕೆಲವು ಆಲಸಿಗಳು ನಿದ್ರೆ, ಬಡಿದಾಟದಲ್ಲಿಯೇ ವೇಳೆ ಕಳೆಯುವರು. ಹೀಗೆ ಸೆರೆಮನೆಯು ಒಂದು ವಿಧವಾಗಿ ಸೋಜಿಗದ ಸಾಮ್ರಾಜ್ಯವಾಗಿತ್ತು.

## ಸಾಮಾನ್ಯರ ಜೀವನ

ಜೇಲಿನಲ್ಲಿ ಒಂದು ದೊಡ್ಡದಾದ ಕೊರತೆಯೆಂದರೆ ಖಾಸಗಿ ಸ್ಥಳ (Privacy) ಎಲ್ಲಿಯೂ ದೊರೆಯುವುದಿಲ್ಲ. ಹಾಂ, ಹೌದು ಕಕ್ಕಸದಲ್ಲಿ ಮಾತ್ರ ದೊರೆಯುತ್ತಿತ್ತು. ನಿತ್ಯ ಏನಾದರೂ ಹರಟೆ, ಚೇಷ್ಟೆ, ಜೇಲಿನ ಸಮಸ್ಯೆಗಳಲ್ಲಿ ವೇಳೆ ಕಳೆದರೆ, ಎಂದಾದರೊಂದು ದಿನ ಮನೆಯಿಂದ

ಪತ್ರ ಬಂದು ಅದರಲ್ಲಿ ಹೆಂಡತಿ, ಮಕ್ಕಳ ಕಾಯಿಲೆ, ಬೇರೆ ಮನೆತನದ ಸಮಸ್ಯೆಗಳು ಬಂದಾಗ ಮಾತ್ರ ತುಸು ಚಿಂತಿತರಾದಂತೆ ಕಾಣುವರು. ಕೆಲವರು ಕಕ್ಕಸದಲ್ಲಿ ಕುಳಿತಾಗ ಪ್ರತ್ಯಕ್ಷ ಅಳುವುದನ್ನು ಕೇಳಿರುವೆ. ಅವರಿಗೆ ಎಷ್ಟೊಂದು ವೇದನೆಯಾಗಿರಬೇಕು. ಸಾಮಾನ್ಯವಾಗಿ ಮನೆಯಿಂದ ಕ್ಷೇಮ ಸಮಾಚಾರದ ಪತ್ರ ಬಂದರೆ ನಾಲ್ಕು ದಿವಸ ಉತ್ಸಾಹದಲ್ಲಿ ಕಳೆಯುವರು. ಭೆಟ್ಟಿಗೆ ಬಂದರೆ ಎಂಟು ದಿವಸ. ಹೀಗೆ ದಿನಗಳು ಓಡುತ್ತಿದ್ದವು. ತಿಂಗಳಿಗೆ ಒಂದು ಭೆಟ್ಟಿ. ಕೇವಲ ಹತ್ತೇ ನಿಮಿಷ ಕೊಟ್ಟರೂ ಅನೇಕ ಆಪ್ತೇಷ್ಟರು ಬಂದು ಕಾಣುವರು. ನನ್ನ ಹೆಂಡತಿಯಂತೂ ತಪ್ಪದೇ ಬರುವಳು. ಶಕ್ಯವಾದಾಗ ಬೇರೆ ಆಪ್ತರನ್ನು ಕರೆದುಕೊಂಡು ಇಲ್ಲವಾದರೆ ತಾನು ಮತ್ತು ಮಗು ಬರುವರು.

ತಡಕೋಡ ಗ್ರಾಮದ ವೆಂಕಣ್ಣ ಭಟ್ಟರು ತೀರ ಬಡತನದಲ್ಲಿ ಬೆಳೆದವರು, ದೊಡ್ಡ ಕುಟುಂಬ. ಅದನ್ನೆಲ್ಲ ಬಿಟ್ಟು ಜೇಲಿನ ಜೀವನಕ್ಕೆ ಒಗ್ಗಿಕೊಂಡದ್ದನ್ನು ಮತ್ತು ಅಂಥವರು ನಿಶ್ಚಿಂತೆಯಿಂದ ವೇಳೆ ಕಳೆಯುವುದನ್ನು ನೋಡಿದರೆ ನನಗೆ ಅಂಥವರ ಬಗ್ಗೆ ಅಭಿಮಾನವೆನಿಸುತ್ತಿತ್ತು. ಇಂಥ ಎಷ್ಟೋ ಸಾಮಾನ್ಯ ಕಾರ್ಯಕರ್ತರು ನನ್ನ ಸಂಗಡಿಗರಿದ್ದರು. ಅವರ ಕುಟುಂಬದವರು ನಾನಾತರಹದ ಕಷ್ಟಗಳನ್ನು ಅನುಭವಿಸುತ್ತಿರಲೇಬೇಕೆಂದು ನನ್ನ ಮನಸ್ಸು ಹೇಳುತ್ತಿತ್ತು. ನಿಜವಾಗಿ ಇಂಥವರ ತ್ಯಾಗ, ಅದಕ್ಕಿಂತ ಅವರ ಹೆಂಡಿರು, ಮಕ್ಕಳ ತ್ಯಾಗ ಹೆಚ್ಚಿನ ದರ್ಜೆಯದೆಂದೇ ನನ್ನ ಮತ.

ನನ್ನ ಜೇಲಿನ ಅವಧಿ ಇನ್ನೂ ಸಾಕಷ್ಟಿದ್ದುದರಿಂದ ನಾನು ಬೇರೆ ವಿಚಾರ ಮಾಡದೆ ಜೇಲ್ ಜೀವನಕ್ಕೆ ತುಂಬಾ ಹೊಂದಿಕೊಂಡಿದ್ದೆ. ಆರೋಗ್ಯವೂ ತಕ್ಕಮಟ್ಟಿಗೆ ಚೆನ್ನಾಗಿತ್ತು. ಓದುಬರಹ ಅಭ್ಯಾಸವಂತೂ ನಡೆದಿತ್ತು. ಮುಗ್ಧ ಹಳ್ಳಿಯ ಜನರೆಲ್ಲ ನನಗೆ ತೀರ ಆತ್ಮೀಯರಾದರು. ತಮ್ಮ ಸಮಸ್ಯೆಗಳ ಬಗ್ಗೆ ಆಗಾಗ ಚರ್ಚೆ ಮಾಡುವರು. ಅಂಥವರ ಬಗ್ಗೆ ನನ್ನ ಮನಸ್ಸು ಮಿಡುಕುತ್ತಿತ್ತು. ಹೀಗೆ ದಿನಗಳೆಯುತ್ತಿರುವಾಗ ಒಂದು ದಿವಸ ಕೆಲವು ರಾಜಕೀಯ ಖೈದಿಗಳನ್ನು ಬೆಳಗಾವಿಗೆ ಕಳಿಸಲಿರುವರೆಂಬ ವಾರ್ತೆ ಬಂತು.

## ವಿಸಾಪೂರದಿಂದ ಸ್ಥಳಾಂತರ

ಜೇಲಿನ ಭಾಷೆ ಒಂದು ವೈಶಿಷ್ಟ್ಯಪೂರ್ಣ. ಒಂದು ಜೇಲಿನಿಂದ ಮತ್ತೊಂದು ಜೇಲಿಗೆ ಕಳಿಸುವರೆಂಬುದಕ್ಕೆ 'ಪಾರ್ಟಿ ಹಾಕುವದು' ಎಂದು ಹೇಳುವುದುಂಟು. ಅದೆಷ್ಟೋ ದಿವಸಗಳಿಂದ ನಮ್ಮಲ್ಲಿಯ ಕೆಲವರನ್ನು ಬೆಳಗಾವಿಗೆ ಅಥವಾ ಬೇರೆ ಕಡೆಗೆ ಪಾರ್ಟಿ ಹಾಕುವರೆಂಬ ಗಾಳಿ ಸುದ್ದಿ ಹಬ್ಬಿತ್ತು. ಅದರಲ್ಲಿ ನನ್ನ ಪಾಳಿ ಇರಲಿಕ್ಕಿಲ್ಲವೆಂದು ನಿಶ್ಚಿಂತನಾಗಿದ್ದೆ. ಒಂದು ದಿನ ನಿರ್ದಿಷ್ಟ ವರ್ತಮಾನ ಬಂತು. 24 ಕೈದಿಗಳನ್ನು ಬೆಳಗಾವಿ ಜೇಲಿಗೆ ಪಾರ್ಟಿ ಹಾಕುವರೆಂದೂ ಅದರಲ್ಲಿ ನನ್ನ ಹೆಸರು ಇರುವದೆಂದೂ ಅಧಿಕೃತ ವರ್ತಮಾನ ತಿಳಿಯಿತು. ನನ್ನ ಊರ ಸಮೀಪಕ್ಕೆ ಹೋಗುವೆನೆಂಬ ಒಂದು ಬಗೆಯ ಸಂತೋಷವೆನಿಸುತ್ತಿದ್ದರೂ, ಅಲ್ಲಿಯ ಪರಿಸ್ಥಿತಿಗೆ ಎಷ್ಟೊಂದು ಹೊಂದಿಕೊಂಡಿದ್ದೆನೆಂದರೆ ಅದನ್ನು ಬಿಟ್ಟು ಹೋಗಲು ಮನಸ್ಸು ಒಪ್ಪುತ್ತಿರಲಿಲ್ಲ. ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಹೇಗೆ ಎಂಬ ಯೋಚನೆ ಬರುವುದು ಸ್ವಾಭಾವಿಕ. ನನಗಿಂತಲೂ ನನ್ನ

ಮಿತ್ರರಿಗೆ ಅದರಲ್ಲಿಯೂ ವಿಶೇಷವಾಗಿ ಹೊಂದಿಕೊಂಡು ನಡೆದ ಹಳ್ಳಿಯ ಕಾರ್ಯಕರ್ತರಿಗೆ ತುಂಬಾ ಕಳವಳವಾಯ್ತು. ಕೆಲವರಲ್ಲಿಯಂತೂ ಈ ವರ್ತಮಾನದಿಂದ ನಿರಾಸೆ, ನಿರುತ್ಸಾಹ ತುಂಬಿಕೊಂಡಿತ್ತು. ಕಾಲಚಕ್ರ ತಿರುಗುತ್ತಿತ್ತು, ಹೊರಡುವ ದಿವಸ ಬಂದಿತು. ಅಂದು 1945 ಜನೇವರಿ 23 ಇರಬೇಕು. ಹೋದ ವರ್ಷ ಇದೇ ದಿನ ನಾನು ವಿಸಾಪೂರ ಜೇಲು ಪ್ರವೇಶ ಮಾಡಿದ್ದೆ. ಸರಿಯಾಗಿ ಒಂದು ವರ್ಷಕ್ಕೆ ಇಲ್ಲಿಂದ ನಿರ್ಗಮನ. ಮಧ್ಯಾಹ್ನ ನಮಗೆಲ್ಲ ಬೀಳ್ಕೊಡುವ ಸಮಾರಂಭ ನಡೆಯಿತು. ಚಪಲರಿದ್ದವರು ಮಾತನಾಡಿ ತಮಗಾದ ಅಸಮಾಧಾನವನ್ನು ವ್ಯಕ್ತಪಡಿಸಿದರು. ಆದರೆ, ಆ ಮುಗ್ಧ ಹಳ್ಳಿಯ ಸತ್ಯಾಗ್ರಹಿಗಳು ತಮ್ಮ ಕಣ್ಣೀರಿನಿಂದಲೇ ಬೀಳ್ಕೊಟ್ಟರು. ಪ್ರತ್ಯಕ್ಷ ಹೊರಟು ನಿಂತಾಗ ಪ್ರಾರ್ಥನೆ ಮಾಡುವ ಪದ್ಧತಿ. ಆಗ ಬಿಕ್ಕಳಿಸುವುದು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಇದಾದ ನಂತರ ನನ್ನನ್ನು ತಬ್ಬಿಕೊಂಡು ಅನೇಕರು ದೊಡ್ಡ ಧನಿಯಿಂದ ಅತ್ತರು. ನನ್ನ ಕಣ್ಣಿನಿಂದಲೂ ಧಾರಾಕಾರವಾಗಿ ನೀರು ಹರಿಯಹತ್ತಿತು. ಅಗಲುವಿಕೆಯ ದುಃಖ ಹೇಗಿರುತ್ತದೆಂಬುದನ್ನು ಅಂದಿನ ಆ ಜೇಲುದೃಶ್ಯದಿಂದ ಮನಗಂಡೆ. ಒಂದು ಕ್ಷಣ ಮಾನವರೂ ಈ ಜಗತ್ತಿನಲ್ಲಿ ಬಂದು ಹೀಗೆ ಒಂದು ದಿನ ಹೋಗುವುದಿಲ್ಲವೇ ? ಎಂಬ ಕಲ್ಪನೆಯೂ ಸುಳಿದು ಹೋಯಿತು. ಜೇಲ್ ಬಟ್ಟೆಯನ್ನು ಕಳಚಿ ನಮ್ಮ ಖಾಸಗಿ ಬಟ್ಟೆ ಹಾಕಿಕೊಂಡು ಮಧ್ಯಾಹ್ನ 2 ಗಂಟೆಗೆ ಸಿದ್ಧರಾದೆವು. ಕೈದಿಗಳನ್ನು ಜೇಲಿನಿಂದ ಹೊರಗೆ ಕರೆದುಕೊಂಡು ಹೋಗುವಾಗ ಇಬ್ಬರನ್ನು ಸೇರಿಸಿ ಬೇಡಿ ಹಾಕಿಕೊಂಡು ಹೋಗಬೇಕೆಂಬ ಸಾಮಾನ್ಯ ನಿಯಮ. ಅದರಂತೆ ಇಬ್ಬಿಬ್ಬರನ್ನು ಸೇರಿಸಿ ಬೇಡಿ ತೊಡಿಸಹತ್ತಿದರು, ನನ್ನ ಸರತಿಯೂ ಬಂದಿತು ಕೈ ಮುಂದೆ ಮಾಡಿದೆ. ಆದರೆ ಯಾವ ಬೇಡಿಯೂ ನನ್ನ ಕೈಗೆ ಕೂಡಲಿಲ್ಲ. ಹಾಗೆಯೇ ಕರೆದುಕೊಂಡು ರೈಲು ನಿಲ್ದಾಣದತ್ತ ನಡೆದರು. ತುಸು ದೂರ ಹೋಗುತ್ತಲೇ ಎಲ್ಲರ ಬೇಡಿಗಳನ್ನು ತೆಗೆದರು. ನಾವು ಉಚ್ಚಸ್ವರದಲ್ಲಿ ರಾಷ್ಟ್ರೀಯ ಪದ್ಯಗಳನ್ನು ಹೇಳುತ್ತಾ ಜಯಕಾರ ಹಾಕುತ್ತಾ ನಡೆದೆವು. ಟ್ರೇನಿನಿಂದ ರಾತ್ರಿ ಪುಣೆ ರೇಲ್ವೆ ಸ್ಟೇಷನ್ ತಲುಪಿದೆವು. ಅಲ್ಲಿ ಸ್ಟೇಷನ್ ಪ್ಲಾಟ್‌ಫಾರ್ಮ್‌ದ ಮೇಲೆ ನಮ್ಮ ಗದ್ದಲ. ನಮ್ಮನ್ನು ನೋಡಲು ಗುಂಪು ಗುಂಪಾಗಿ ಜನರು ಸೇರಿದ್ದರು. ಅಂತೂ ಮರುದಿನ ಬೆಳಿಗ್ಗೆ ಬೆಳಗಾವಿ ತಲುಪಿದೆವು. ಒಂದು ವರ್ಷ ಹೊರಗಿನ ಗಾಳಿ ಮೈಗೆ ತಗುಲಿರಲಿಲ್ಲ. ಒಂದು ವಿಧವಾಗಿ ಅಂದು ತುಂಬಾ ಹಿತಕರವಾಗಿತ್ತು. ಬೆಳಗಾವಿ ಸ್ಟೇಷನ್‌ದ ಮೇಲೆ ಕೆಲಮಿತ್ರರು ನಮ್ಮನ್ನು ಕಂಡು ನಮಗೆಲ್ಲ ತಿಂಡಿ ತರಿಸಿಕೊಟ್ಟರು. ನಮ್ಮನ್ನು ಕರೆದುಕೊಂಡ ಬಂದ ಪೊಲೀಸ್‌ರೂ ನಮ್ಮ ಪರಮ ಮಿತ್ರರಾದರು. ನಮ್ಮ ಮಿತ್ರರು ಕೊಡಿಸಿದ ತಿಂಡಿಯಲ್ಲಿ ಅವರ ಪಾಲೂ ಸ್ವಾಭಾವಿಕವಾಗಿ ಇರುತ್ತಿತ್ತು. ಅಂತೂ ಉತ್ಸಾಹದ ಬುಗ್ಗೆಯಾಗಿ ಬೆಳಗಾವಿಗೆ ಬಂದೆವು.

ತನ್ನ ಹಳ್ಳಿಯ ಶಿಕ್ಷಣವನ್ನು ಮುಗಿಸಿಕೊಂಡು ಓರ್ವ ವಿದ್ಯಾರ್ಥಿಯು ಪಟ್ಟಣದ ಕಾಲೇಜು ಶಿಕ್ಷಣಕ್ಕೆ ಬಂದಂತೆ ನನಗೆ ಭಾಸವಾಯ್ತು. ಈ ಜೇಲು ನನಗೇನೂ ಹೊಸದಲ್ಲ. ಹಿಂದೆ ಮೂರು ತಿಂಗಳು ಜೇಲಿನಲ್ಲಿ ಕಳೆದಿದ್ದೆ.

# ಅಂಧಕಾರದಿಂದ ಅರುಣೋದಯಕ್ಕೆ

## ಬೆಳಗಾವಿ ಜೇಲ್ ಜೀವನ

ಈ ಜೇಲಿನೊಡನೆ ವಿಸಾಪೂರ ಜೇಲಿನ ತುಲನೆ ಮಾಡಿದರೆ ಅದೊಂದು ಕುಗ್ರಾಮ. ಯಾವ ಭವ್ಯತೆಯೂ ಇಲ್ಲ, ಅಚ್ಚುಕಟ್ಟುತನವೂ ಇಲ್ಲ. ಇದೊಂದು ಭವ್ಯವಾದ, ಅಚ್ಚುಕಟ್ಟಾದ ಜೇಲು ಎನಿಸಿತು. ಅಲ್ಲದೆ ನನ್ನ ಊರ ಪಕ್ಕದಲ್ಲಿಯೇ ಬಂದೆನೆಂಬ ಸಂತಸವೂ ಇತ್ತು. ನನಗಿಂತ ಹೆಚ್ಚು ಸಂತೋಷಪಟ್ಟವಳು ನನ್ನ ಹೆಂಡತಿ. ತಿಂಗಳಿಗೊಮ್ಮೆ ಅಲ್ಲಿ ಭೆಟ್ಟಿಗೆ ಬರಬೇಕಾದರೆ ತೀರ ಸುಲಭವಾಯ್ತು. ಜೇಲಿನ ಒಳಗೂ ಅಷ್ಟೊಂದು ಬಿಗುವು ಇರಲಿಲ್ಲ. ಸ್ವಚ್ಛತೆಯಲ್ಲಿ ಎತ್ತಿದ ಕೈ. ಊಟ, ಉಡಿಗೆ ನಿತ್ಯದ ಜೀವನ ತುಂಬಾ ಚೆನ್ನಾಗಿ ನಡೆದಿದ್ದವು. ಆಗ ಇಲ್ಲಿ ಸ್ಥಾನಬದ್ಧರ (ಡೆಟನ್ಯು) ನ್ನೂ, 'ಬ' ವರ್ಗದವರನ್ನೂ ಬೇರೆ ಕಡೆಗಿಟ್ಟಿದ್ದರು. ಅವರಲ್ಲಿ ಅಣ್ಣುಗುರೂಜಿ, ಶ್ರೀರಂಗ ಕಾಮತ, ಅಣ್ಣಾಸಾಹೇಬ ಸಹಸ್ರಬುದ್ಧೆ, ದಿವಾಕರ ರಂಗರಾವ್, ಶಂಕರರಾವ ಗುಳವಾಡಿ, ವಸಂತ ಪರಾಂಜಪೆ, ಶಂಕರ ಕುರ್ತಕೋಟಿ ಇವರೇ ಮೊದಲಾದವರಿದ್ದರು. ನಾವು ಒಳಗೆ ಪ್ರವೇಶಿಸುತ್ತಲೇ ಎಡದ ಬ್ಯಾರಕ್ಕಿನಲ್ಲವರು ಇರುತ್ತಿದ್ದರು. ಅವರು ತಮ್ಮ ಖಾಸಗಿ ಬಟ್ಟೆಯಲ್ಲಿದ್ದರು. ನಮ್ಮನ್ನು 'ಕ' ವರ್ಗದ ರಾಜಕೀಯ ಕೈದಿಗಳನ್ನಿಟ್ಟ 'ಸೆಪರೇಟ್' ಕೋಣೆಯೊಳಗೆ ಕಳಿಸಿದರು. ಜೇಲಿನ ಎರಡನೇ ಸರ್ಕಲ್‌ನಲ್ಲಿ ಅದೊಂದು ಎರಡಂತಸ್ತಿನ ಕಟ್ಟಡ. ಅದು ಇಂಗ್ಲೀಷ್ L ಆಕಾರದಲ್ಲಿತ್ತು. ಬೇರೆ ಬೇರೆ ಕೋಣೆಗಳಿದ್ದುದರಿಂದ ಅದಕ್ಕೆ ಜೇಲ್ ಭಾಷೆಯಲ್ಲಿ 'ಸೆಪರೇಟ್' ಅನ್ನುತ್ತಿದ್ದರು. ಒಂದು ಕೋಣೆಯಲ್ಲಿ ಸಾಮಾನ್ಯವಾಗಿ ಮೂವರನ್ನಿಡುವ ಪದ್ಧತಿ. ಪ್ರತಿಯೊಂದು ಕೋಣೆಯ ಅಗಳಿ ಹಾಕದೆ ಹೊರಮಗ್ಗಲು ಒಂದು ಕೀಲಿ ಹಾಕುತ್ತಿದ್ದರು. ನಾವೆಲ್ಲ ನಿರಾತಂಕವಾಗಿ ಕಟಾಂಜನದಲ್ಲಿ ತಿರುಗಾಡುತ್ತಿದ್ದೆವು. ಕೆಲವರು ಅಲ್ಲಿಯೇ ಮಲಗುವರು. ರಾತ್ರಿ ಎಲ್ಲರೂ ಸೇರಿ ಪ್ರಾರ್ಥನೆ ಮಾಡುತ್ತಿದ್ದೆವು. ಅಲ್ಲಿ ಸುಮಾರು 150 ರಾಜಕೀಯ ಕೈದಿಗಳಿದ್ದರು. ಹಾಗೆ ನೋಡಿದರೆ, ಅಲ್ಲಿಯ ವಾತಾವರಣ ತುಂಬಾ ಚೆನ್ನಾಗಿತ್ತು. ನಿಜವಾಗಿಯೂ ನಾನೊಂದು ಹಾಸ್ಟೆಲ್ ಕೋಣೆಯಲ್ಲಿದ್ದ ಭಾವನೆಯುಂಟಾಗಿತ್ತು. ನಮಗೆ ಓದಲು ಬೇಕಾದಷ್ಟು ಪುಸ್ತಕ, ವೃತ್ತಪತ್ರಗಳಿದ್ದರೆ, ನೂಲುವದಂತೂ ನಡೆದಿತ್ತು. ಓರ್ವ ಸಾಮಾನ್ಯ ನಿತ್ಯ ಎರಡು ಮೂರು ಲಡಿ ನೂಲುತ್ತಿದ್ದರೆ, ಕೆಲವರು ಐದರಿಂದ ಆರು ಲಡಿ ನೂಲುತ್ತಿದ್ದರು. ವೇಳೆ ಕಳೆಯಲು, ಮನಸ್ಸನ್ನು ಸ್ಥಿಮಿತದಲ್ಲಿಡಲು ಅದೊಂದು ಯೋಗ್ಯ ಸಾಧನೆಯಾಗಿತ್ತಲ್ಲದೆ ಲಡಿಗಳು ವಿನಿಮಯದ ಸಾಧನೆಗಳಾಗಿದ್ದವು. ಇಲ್ಲಿ ನನ್ನ ತೀರ ಹತ್ತಿರ ಸಂಗಡಿಗರಾದವರೆಂದರೆ ಅಥಣಿಯ ಪಾಟಣ್ಕರ್, ಆತ ಇನ್ನೂ ಚಿಕ್ಕವ ಆದರೆ ತುಂಬಾ ಚುರುಕು. ನಾವಿಬ್ಬರೂ ಗಂಟೆಗಟ್ಟಲೆ ಮಾತನಾಡುತ್ತಿದ್ದೆವು. ಆತನಿಗೆ ಕನ್ನಡ ಚೆನ್ನಾಗಿ

ಬರುತ್ತಿರಲಿಲ್ಲ. ನನಗೆ ಮರಾಠಿ ಮಾತನಾಡುವ ಇಷ್ಟ ಇರುತ್ತಿರಲಿಲ್ಲ. ಹೀಗಾಗಿ, ಆತನು ಮರಾಠಿಯಲ್ಲಿ, ನಾನು ಕನ್ನಡದಲ್ಲಿ ಹೀಗೆ ನಡೆಯುತ್ತಿತ್ತು ನಮ್ಮ ಸಂಭಾಷಣೆ.

## ಜೇಲ್ ಟೆಲಿಫೋನ್

ನಮ್ಮ ಮತ್ತು ಡೆಟಿನ್ಯು ವಾಸಸ್ಥಳದ ನಡುವೆ ಒಂದು ಪ್ರಭಾವಶಾಲಿ ಗೋಡೆಯಿತ್ತು. ಹೀಗಾಗಿ ನಾನು ಆಗಾಗ ನಮ್ಮ 'ಜೇಲ್ ಟೆಲಿಫೋನ್' (ಒದರಿ ಮಾತನಾಡುವುದು) ಮೂಲಕ ಸಾಕಷ್ಟು ಮಾತನಾಡುತ್ತಿದ್ದೆವು. ಒಂದು ವಿಧವಾಗಿ ಅವರು ನಮಗೆಲ್ಲ ಹಿರಿಯರಾಗಿದ್ದರು. ಅಣ್ಣೂ ಗುರೂಜಿ ಅವರಂತೂ ನಿತ್ಯ ಒಂದು ಸಲವಾದರೂ ನಮ್ಮ ಕ್ಷೇಮಸಮಾಚಾರ ಕೇಳುವರೇ. ನನ್ನ ಸಂಗಡ ಇಲ್ಲಿಯೂ ಅನೇಕ ವಿದ್ಯಾರ್ಥಿಗಳು, ಹಳ್ಳಿಗರಿರುತ್ತಿದ್ದರು. "ದಾಬಡೆ, ಏನಂತಾರ ನಮ್ಮ ಹುಡುಗೂರು" ಎಂದು ಅಣ್ಣು ಗುರೂಜಿಯವರ ನಿತ್ಯ ಕೇಳಿಕೆ. ಆಗ ಜೇಲ್ ಸೂಪರಿಂಟೆಂಡೆಂಟ್ ಅಕೂತ್, ಜೇಲರ್ ಕುರುಳ್ಕರ್ ಎಂಬುವರಿದ್ದರು. ಅಕೂತ್ ಮಾತಿನಲ್ಲಿ ತುಂಬಾ ಮೃದು ಮತ್ತು ಒಳ್ಳೆಯವರೆಂದು ಭಾಸವಾಗುತ್ತಿತ್ತು. ಜೇಲರ್ ಮಾತ್ರ ಕಠೋರ ಎಂದು ಹೆಸರಾಗಿದ್ದರು. ಅವರು ಜೇಲಿನ ಯಾವ ಕಾನೂನಿನ ಅರ್ಥವನ್ನೂ ಕೈದಿಗಳಿಗೆ ಅನುಕೂಲವಾಗುವಂತೆ ಮಾಡುತ್ತಿರಲಿಲ್ಲ. ಅವರು ಅದೆಷ್ಟೋ ಸಲ ಸ್ಪಷ್ಟವಾಗಿ ಹೇಳುತ್ತಿದ್ದರು. ಇಂಥ ಕಾನೂನುಗಳ ಅರ್ಥವನ್ನು ನಾನು ಕೈದಿಗಳಿಗೆ ಅನುಕೂಲವಾಗುವಂತೆ ಮಾಡಬಹುದು ಅಥವಾ ಪ್ರತಿಕೂಲವಾಗುವಂತೆಯೂ ಮಾಡಬಹುದು. ಆದರೆ, ನಾನು ಇಲ್ಲಿ ಸರ್ಕಾರದ ಪ್ರತಿನಿಧಿ. ನಾನು ಸರ್ವಥಾ ಅನುಕೂಲವಾಗುವಂತೆ ಮಾಡುವುದಿಲ್ಲ. ಹೀಗೆಂದು ಹೇಳುತ್ತಾ ಗೀತೆಯೊಳಗಿನ ಒಂದೆರಡು ಶ್ಲೋಕಗಳನ್ನು ಉಸುರುತ್ತಿದ್ದರು.

ಕಾನೂನು ಏನೇ ಇದ್ದರೂ ಹೊರಗಿನಿಂದ ತಿನ್ನುಣ್ಣುವ ಬೇಕಾದ ವಸ್ತುಗಳನ್ನು ತರಿಸಬಹುದಿತ್ತು. ಒಂದು ವೇಳೆ ಅಧಿಕಾರಿಗಳು ನಮ್ಮ ಹೆಸರಿನಿಂದ ಕೊಡಲು ನಿರಾಕರಿಸಿದರೆ ಡೆಟಿನ್ಯೂ ಕೈದಿಗಳ ಹೆಸರಿನಿಂದ ಕೊಟ್ಟು ಅದನ್ನು ನಮ್ಮ ಆಂತರಿಕ ವ್ಯವಸ್ಥೆಯಿಂದ ನಮಗೆ ತಲುಪಿಸುವ ಏರ್ಪಾಟಾಗುತ್ತಿತ್ತು. ಈ ಕೆಲಸವನ್ನು ಅಣ್ಣುಗುರೂಜಿಯವರು ತುಂಬಾ ಕುಶಲತೆಯಿಂದ ಮಾಡುತ್ತಿದ್ದರು. ಒಂದು ಸಂದರ್ಭದಲ್ಲಿ ನಮ್ಮ ಸಂಗಡಿಗರಿಗೆ ಮಂಡಕ್ಕಿ ತಿನ್ನಬೇಕೆನ್ನಿಸಿತು. ನಮ್ಮ ಟೆಲಿಫೋನ್ ಮೂಲಕ ಅಣ್ಣೂ ಗುರೂಜಿಯವರಿಗೆ ತಿಳಿಸಿದೆವು. ಮರುದಿನ ಒಂದು ಅಂಡಿಗಿ ಚುರುಮುರಿ ನಮ್ಮ ಕಂಪೌಂಡಿನಲ್ಲಿ ಗೋಡೆ ಮೇಲಿಂದ ಜಿಗಿದು ಬಂತು. ಇನ್ನೊಂದು ಸಲ ಮಾವಿನ ಹಣ್ಣು ಬೇಡಿದರೆ ಹತ್ತು ಬುಟ್ಟಿ ಹಣ್ಣುಗಳು ಆಕಾಶದಿಂದ ಸುರಿದಂತೆ ಸುರಿದವು.

## ಭಯಂಕರ ವಾರ್ತೆ

ಜೇಲಿನ ಕಾಯ್ದೆಯಂತೆ ತಿಂಗಳಿಗೆ ಒಂದೇ ಭೆಟ್ಟಿ ಕೊಡಬೇಕೆಂಬ ನಿಯಮವಿದ್ದರೂ ಹೆಚ್ಚು ಕಡಿಮೆ ಬಂದವರನ್ನು ಹಾಗೆ ಕಳಿಸುತ್ತಿರಲಿಲ್ಲ. ಹೀಗೆ ಶಕುಂತಲಾ (ನನ್ನ ಹೆಂಡತಿ) ಬೇಕಾದಷ್ಟು

ಸಲ ಬಂದು ಭೆಟ್ಟಿಯಾಗುತ್ತಿದ್ದಳು. ಎಷ್ಟೇ ಹೊತ್ತು ಏನೇ ಮಾತನಾಡಿದರೂ ಅಧಿಕಾರಿಗಳು ತಕರಾರು ಮಾಡುತ್ತಿರಲಿಲ್ಲ. ಆದರೆ, ಏನು ಮಾತನಾಡಬೇಕೆಂಬ ವಿಚಿತ್ರ ಪ್ರಶ್ನೆ ನಮ್ಮ ಮುಂದೆ ಬರುತ್ತಿತ್ತು.

ಒಂದು ಸಲ ಸುಬ್ಬಕ್ಕ (ನನ್ನ ಅಕ್ಕ) ಭೆಟ್ಟಿಗೆ ಬರಬೇಕೆಂದು ನನ್ನ ಅಣ್ಣ ಶೀನಣ್ಣ (ಶ್ರೀನಿವಾಸ ದಾಬಡೆ) ಅವರನ್ನು ಕೇಳಿ ಜೇಲರ್ ಕುರುಳ್ಕರ್ ಅವರಿಗೆ ಒಂದು ಪತ್ರ ತೆಗೆದುಕೊಂಡು ಬಂದಳು. ಅಂದರೆ, ಅವಳು ಕುರುಳ್ಕರ್‌ರವರ ಮನೆಯಲ್ಲಿ ಉಳಿದು ನನ್ನನ್ನು ಕಂಡು ಹೋಗಬೇಕೆಂಬ ಕಲ್ಪನೆಯಿತ್ತು. ಕುರುಳ್ಕರ್ ಮತ್ತು ಶ್ರೀನಿವಾಸರಾವ ಅವರು ಆತ್ಮೀಯ ಸ್ನೇಹಿತರು. ಆಗ ಕುರುಳ್ಕರ್‌ರವರು ಧರ್ಮಸಂಕಟದಲ್ಲಿ ಬಿದ್ದರು. ಕೊನೆಗೆ ತಮ್ಮದೇ ಆದ ಒಂದು ಮಾರ್ಗವನ್ನು ಹುಡುಕಿ ತೆಗೆದರು. ಕೈದಿಗಳ ಭೆಟ್ಟಿಯಾಗಲಿಕ್ಕೆ ಬಂದವರು ಜೇಲ್ ಅಧಿಕಾರಿಗಳ ಮನೆಯಲ್ಲಿರಕೂಡದೆಂಬ ನಿಯಮ. ಆದರೆ, ಭೆಟ್ಟಿಯ ನಂತರ ಇರಬಹುದೆಂಬ ತಮ್ಮದೇ ಆದ ವ್ಯಾಖ್ಯೆಯನ್ನು ಮಾಡಿ ಬೆಳಿಗ್ಗೆ ಹತ್ತು ಗಂಟೆಗೆ ಭೆಟ್ಟಿ ಕೊಟ್ಟರು. ಆ ಭೆಟ್ಟಿಯಲ್ಲಿ ಸುಬ್ಬಕ್ಕನ ಮನೆತನದ ಕ್ಷೇಮ ಸಮಾಚಾರವಾದ ಮೇಲೆ ಧಾರವಾಡದ ನಮ್ಮ ಪರಮ ಆತ್ಮೀಯ ಸ್ನೇಹಿತ ಪೋದ್ದಾರ ಶೀನಪ್ಪನ ಅಮಾನುಷ ಕೊಲೆಯನ್ನೂ, ಅವರ ಸೇವಕನೇ ಮಾಡಿದನೆಂಬ ಭಯಂಕರ ವಾರ್ತೆಯನ್ನೂ ಹೇಳಿದಳು. ಅದನ್ನು ಕೇಳಿ ನಾವೆಲ್ಲ ಸ್ತಂಭೀಭೂತರಾದೆವು. ದಿವಾಕರರು ತುಂಬಾ ಮರುಗಿದರು. ಶೀನಪ್ಪ ಪೋದ್ದಾರ ಧಾರವಾಡದ ಓರ್ವ ಪ್ರತಿಷ್ಠಿತ ರಾಷ್ಟ್ರೀಯ ಭಾವನೆಯವರು. ಆತನ ವ್ಯವಸಾಯ ಪಡಿಯಚ್ಚು ಮಾಡುವುದು. ಅವನು ಹುಟ್ಟಾ ಕಟ್ಟಾಕನ್ನಡಿಗ.

## ವಾರದ ಚರ್ಚೆ ಮತ್ತು ತತ್ವಜ್ಞಾನದ ಆಚರಣೆ

ರವಿವಾರ ಬಂದರೆ ಜೇಲ್ ಅಧಿಕಾರಿಗಳ ಒಪ್ಪಿಗೆ ಪಡೆದು ಡೆಟಿನ್ಯೂ ಕೈದಿಗಳ ಪೈಕಿ ಯಾರಾದರೊಬ್ಬರು ಬಂದು ನಮ್ಮ ಸಂಗಡ ಒಂದೆರಡು ತಾಸು ಕಳೆಯುತ್ತಿದ್ದರು. ದಿವಾಕರ, ತೆಂಡೂಲ್ಕರ್, ಅಣ್ಣಾಸಾಹೇಬ ಸಹಸ್ರಬುದ್ಧೆ, ಅಣ್ಣುಗುರೂಜಿ, ಶ್ರೀರಂಗ ಕಾಮತ, ಕುರ್ತಕೋಟಿ - ಮುಂತಾದವರು ಬಂದು ಹೋಗುತ್ತಿದ್ದರು. ಅವರು ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರಲ್ಲದೆ, ನಮ್ಮ ಸಾಮಾನ್ಯ ಸಮಸ್ಯೆಗಳನ್ನೂ ಸಹ ಬಿಡಿಸಲು ನೆರವಾಗುತ್ತಿದ್ದರು. ಹಾಗೆ ವಿಸಾಪೂರ ಜೇಲಿನಲ್ಲಿಯ ನನ್ನ ಕೊರತೆ ಇಲ್ಲಿ ಸಾಧಾರಣ ಪರಿಹಾರವಾಗಿತ್ತೆಂದು ಹೇಳಬಹುದು.

ತತ್ತ್ವಜ್ಞಾನ ಹೇಳುವುದು ತೀರ ಸುಲಭ. ಆದರೆ ಅದನ್ನು ಕಾರ್ಯರೂಪದಲ್ಲಿ ತರುವುದು ತೀರ ಕಷ್ಟದ ಕೆಲಸ. ಮಹಾತ್ಮಾಗಾಂಧೀಯವರ ತತ್ವಜ್ಞಾನವನ್ನು ಅವರಿಗಿಂತ ಚೆನ್ನಾಗಿ ಹೇಳುವವರು ಸುಲಭವಾಗಿ ಸಿಗುವರು. ಆದರೆ, ಅವುಗಳನ್ನು ಕಾರ್ಯರೂಪದಲ್ಲಿ ತರುವಾಗ ಹಿಂದೆ ಬೀಳುವರು. ಅನೇಕ ಸಲ ಶಿಷ್ಯರೆಂದು ತೋರಿಸಿಕೊಳ್ಳುವವರೂ ಸಹ ತತ್ವಾಚರಣೆಗೆ ಮನ್ನಣೆ ಕೊಡದಿರುವ ಉದಾಹರಣೆಗಳು ಬೇಕಾದಷ್ಟು. ಈ ದ್ವಿಮುಖಿ ಧೋರಣೆ ಜೀವನದಲ್ಲಿ ತೀರ ಸಾಮಾನ್ಯ.

ಹೊರಗೆ ತೋರಿಕೆಗೆ ಎಲ್ಲರೂ ಸರಿ ಸಮಾನರು ಎಂಬ ವಿಚಾರವಿದ್ದರೂ "ನನಗೆ ಒಳ್ಳೆಯದು ಬೇಕು. ನನಗೆ ಹೆಚ್ಚು ಬೇಕು" ಎಂಬ ವೃತ್ತಿಯಿಂದ ದೊಡ್ಡವರೆಂದು ತೋರಿಸಿಕೊಳ್ಳುವವರೂ ಸಹ ಇಲ್ಲಿ ಚಿಕ್ಕವರಾಗಿ ಕಾಣುತ್ತಿದ್ದರು. ಮನೆಯಿಂದ ಏನಾದರೂ ತಿಂಡಿ ಬಂದರೆ ಅದನ್ನು ಪಕ್ಕದವರ ಸಂಗಡ ಹಂಚಿಕೊಳ್ಳುವುದು ಸಾಮಾನ್ಯ ಪದ್ಧತಿ. ಆದರೆ, ಕೆಲವರು ಎಲ್ಲರೂ ಮಲಗಿದ ನಂತರ ಮುಸುಕಿನಲ್ಲಿ ತಿನ್ನುವರು. ಇದು ಉಳಿದವರಿಗೆ ಗೊತ್ತಾಗದೇ ಇರುತ್ತಿರಲಿಲ್ಲ. ಆದರೆ, ಒಳ್ಳೆಯ ಚಾರಿತ್ರ್ಯವುಳ್ಳವರು ಚಿಕ್ಕವರಿದ್ದರೂ ಎದ್ದು ಕಾಣುತ್ತಿದ್ದರು.

## ದಿವಾಕರರ ಸಂದರ್ಶನ

ಒಂದು ರವಿವಾರ ನಾವಿದ್ದ ಸ್ಥಳಕ್ಕೆ ದಿವಾಕರರು ಬಂದರು. ಅವರು ಡೆಟಿನ್ಯು ವಾರ್ಡಿನಲ್ಲಿರುತ್ತಿದ್ದರು. ಕರ್ನಾಟಕದ ಈ ಸಲದ ಚಳುವಳಿಯ ಪ್ರವರ್ತಕರು ಅವರೇ ಇದ್ದುದರಿಂದ ಎಲ್ಲರ ಕುತೂಹಲ ಕೆರಳಿತ್ತು. ಅವರು ಬಂದು ಎರಡು ತಾಸು ನಮ್ಮ ಮಧ್ಯೆ ಕಳೆದರು. ಅದೇ ಮಹಾತ್ಮಾಗಾಂಧೀ ಅವರು ವಿಧ್ವಂಸಕ ಚಟುವಟಿಕೆಗಳನ್ನು ಕಟುವಾಗಿ ಖಂಡಿಸಿದ್ದರು. ಈ ಸಂದರ್ಭದಲ್ಲಿ ಅವರ ಮೇಲೆ ಪ್ರಶ್ನೆಗಳ ಸುರಿಮಳೆಯಾಯಿತು. 'ಈವರೆಗೆ ನಾವು ಮಾಡಿದ ವಿಧ್ವಂಸಕ ಚಟುವಟಿಕೆಗಳು ಗಾಂಧೀ ಕಾರ್ಯಕ್ರಮವೇ ? ಹಾಗಿರದಿದ್ದರೆ ನೀವು ಯಾಕೆ ಈ ಕಾರ್ಯಕ್ರಮಗಳನ್ನು ಕೊಟ್ಟಿರಿ ? ಈ ಪರಿಸ್ಥಿತಿಯಲ್ಲಿ ನಮ್ಮಂಥವರ ಗತಿ ಏನು ?' ಎಂದು ಮುಂತಾಗಿ ಒಂದೇ ಸಮನೆ ಕೇಳಹತ್ತಿದರು. ಅದಕ್ಕೆ ದಿವಾಕರರು 'ನೀವೆಲ್ಲ ಶಾಂತರಾಗಿರಿ, ನಾನು ಎಲ್ಲವನ್ನು ಹೇಳಬೇಕೆಂದೇ ಬಂದಿರುವೆ. ದೇಶದ ಸ್ವಾತಂತ್ರ್ಯದ ಸಲುವಾಗಿ ಕರ್ನಾಟಕವು ಅತ್ಯಂತ ಶಿಸ್ತಿನ ಕಾರ್ಯಕ್ರಮಗಳನ್ನು ಮಾಡಿದೆ. ಈ ಬಗ್ಗೆ ಅನೇಕರು ಪ್ರಶಂಸೆಯನ್ನು ಮಾಡಿದ್ದುಂಟು. ಕೆಲವರು ತಮ್ಮ ಪ್ರಾಣವನ್ನೇ ಬಲಿಕೊಟ್ಟು ತ್ಯಾಗ ಮಾಡಿದರು. ಕಾರಣ ನೀವು ಮಾಡಿದ ಕಾರ್ಯ ಯೋಗ್ಯವಾಗಿದೆ. ಆ ಬಗ್ಗೆ ಪಶ್ಚಾತ್ತಾಪ ಪಡಬೇಕಾಗಿಲ್ಲ. ಮೇಲಾಗಿ ಪಂ. ಜವಾಹರಲಾಲರು ಈಗಾಗಲೇ ನೀವು ಮಾಡಿದ ಕಾರ್ಯಕ್ರಮಗಳ ಹೊಣೆಯನ್ನು ತಾವೇ ತೆಗೆದುಕೊಂಡಿದ್ದಾರೆ' ಎಂದು ಮುಂತಾಗಿ ವಿವರಗಳನ್ನೆಲ್ಲ ತಿಳಿಸಿ ಹೇಳಿದ ಮೇಲೆ ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟರು. ಇದು ಸುಮಾರು ಎರಡು ತಾಸು ನಡೆಯಿತು.

ಕೊನೆಗೆ ದಿವಾಕರರು ನೇರವಾಗಿ ನನ್ನ ಕಡೆಗೆ ಬಂದರು. ಅವರು ನನ್ನನ್ನು ಮುಂಬೈಯಲ್ಲಿ ಬೀಳ್ಕೊಟ್ಟ ನಂತರದ ಎಲ್ಲ ಘಟನೆಗಳನ್ನು ಕೇಳಿಕೊಂಡರು. ಆಗ ಅವರು ನನಗೆ ಒಂದೇ ಒಂದು ಪ್ರಶ್ನೆ ಕೇಳಿದರು. 'ನಿನ್ನ ಕೈದಾದ ಕೂಡಲೇ ನೀನು ಉಳಿದವರಂತೆ ಯಾಕೆ ವಕೀಲರನ್ನು ಕೊಡಲಿಲ್ಲ ? ಹಾಗೆ ಮಾಡಿದ್ದರೆ ನಿನಗೆ ತೀರ ಕಡಿಮೆ ಶಿಕ್ಷೆಯಾಗಬಹುದಿತ್ತು' ಎಂದರು. ಆಗ ನಾನು, ಮುಂಬೈಯಲ್ಲಿ ಅವರ ಸಮ್ಮುಖದಲ್ಲಿ ನಡೆದ ಚರ್ಚೆಯ ಕಡೆಗೆ ಅವರ ಗಮನ ಸೆಳೆದು, 'ನಾವು ಯಾವುದೇ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರವನ್ನಾಗಲೀ, ಅವರ ನ್ಯಾಯಾಲಯಗಳನ್ನಾಗಲೀ ಮನ್ನಿಸುವಂತಿಲ್ಲ. ನಾವು ಸ್ವತಂತ್ರ ನಾಗರಿಕರು' ಎಂಬ

ಧೋರಣೆಯನ್ನನುಸರಿಸಬೇಕೆಂದು ಗೊತ್ತಾಗಿತ್ತು. ಕಾರಣ ನಾನು ಅದಕ್ಕೆ ಅಂಟಿಕೊಂಡೆ. ಈಗ ನನಗಾದ ಶಿಕ್ಷೆಯನ್ನು ಅತ್ಯಂತ ಸಂತೋಷದಿಂದ ಅನುಭವಿಸುತ್ತಿರುವೆ ಎಂದು ಹೇಳಿದಾಗ ಅವರು ನನ್ನ ಬೆನ್ನು ತಟ್ಟಿ, ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು. ಅವರು ಸುಮಾರು ಒಂದು ತಾಸು ನನ್ನ ಸಂಗಡ ಕಳೆದಿರಬೇಕು. ಆಗ ನಮ್ಮ ಊಟ ಬಂತು. ಅದನ್ನೇ ಇಬ್ಬರೂ ಹಂಚಿಕೊಂಡು ಉಂಡೆವು. 'ನನ್ನ ಶಿಕ್ಷೆಯ ಅವಧಿ ಮುಕ್ಕಾಲು ಪಾಲು ಮುಗಿದಿದೆ' ಎಂದೂ ಹೇಳಿದೆ.

## ಆಸ್ಪತ್ರೆಯಲ್ಲಿ ಭೆಟ್ಟಿ

ಜೇಲಿನ ಆಸ್ಪತ್ರೆಯಲ್ಲಿ ಮನೆಯವರ ಭೆಟ್ಟಿ ತೆಗೆದುಕೊಳ್ಳುವುದು ಒಂದು ಸಂಭ್ರಮದ ಸೊಬಗು. ನಾನು ಒಮ್ಮೆ ನನ್ನ ಹೆಂಡತಿಯ ಭೆಟ್ಟಿಯನ್ನು ಅಲ್ಲಿಯ ಆಸ್ಪತ್ರೆಯಲ್ಲಿ ಯಾಕೆ ತೆಗೆದುಕೊಳ್ಳಬಾರದೆಂಬ ವಿಚಾರ ಬಂದು, ಅವಳು ಭೆಟ್ಟಿಗೆ ಬರುವ ಮುನ್ನಾದಿನ ಆಸ್ಪತ್ರೆಯಲ್ಲಿ ಪ್ರವೇಶ ದೊರಕಿಸಿದ್ದೆ. ಆಗ ನನ್ನ ಪರಮ ಮಿತ್ರ ಶಿವರಾಯಪ್ಪ ಮಾನಣ್ಣವರರವರು ನನ್ನ ಆರೈಕೆಗೆಂದೇ ಬಂದಿದ್ದರು. ಅಂತೂ ಮರುದಿನವೇ ಹೆಂಡತಿ ಮಗುವಿನೊಡನೆ ಭೆಟ್ಟಿಗೆ ಬಂದಳು. ಆಸ್ಪತ್ರೆಯಲ್ಲಿ ಮಲಗಿದವರನ್ನು ಭೆಟ್ಟಿಗಾಗಿ ಕಛೇರಿಗೆ ಕರೆಯಿಸದೇ ಅಲ್ಲಿಯೇ ಭೆಟ್ಟಿ ಕೊಡುವ ಪದ್ಧತಿಯಿತ್ತು. ಹೀಗಾಗಿ ಅವಳು ನೇರವಾಗಿ ಜೇಲ್ ಆಸ್ಪತ್ರೆಗೆ ಬಂದಳು. ನನ್ನ ಕೆಲ ಮಿತ್ರರೂ ಬಂದಿದ್ದರು. ಹೀಗಾಗಿ ಸುಮಾರು ಮುಕ್ಕಾಲು ಗಂಟೆಯವರೆಗೆ ಆ ಸಂಭ್ರಮದ ಭೆಟ್ಟಿ ನಡೆಯಿತು.

## ಜೇಲಿನಲ್ಲಿ ದಸರಾ

ಸಾಮಾನ್ಯವಾಗಿ ನಾವು ಜೇಲಿನಲ್ಲಿ ಯಾವ ದೊಡ್ಡ ಹಬ್ಬ ಹರಿದಿನಗಳನ್ನಾಚರಿಸದೆ ಬಿಡುತ್ತಿರಲಿಲ್ಲ. ದಸರಾ, ದೀಪಾವಳಿ, ದೊಡ್ಡ ಏಕಾದಶಿ, ರಮಜಾನ್ ಇವುಗಳನ್ನು ನಮ್ಮದೇ ಆದ ರೀತಿಯಲ್ಲಿ ಆಚರಿಸುತ್ತಿದ್ದೆವು. ಹಾಗೆಯೇ, ಈ ಸಲದ ದಸರಾ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಬೇಕೆಂದು ಅಲ್ಲಿದ್ದ ಕ್ರಿಮಿನಲ್ ಮತ್ತು ರಾಜಕೀಯ ಕೈದಿಗಳು ಸೇರಿ ನಿರ್ಣಯ ತೆಗೆದುಕೊಂಡರು. ಇಂಥ ಪ್ರಸಂಗಗಳಲ್ಲಿ ನಮ್ಮ ಅಣ್ಣು ಗುರೂಜಿಯವರು ತುಂಬಾ ಆಸ್ಥೆವಹಿಸುತ್ತಿದ್ದರು. ಜೇಲ್ ಅಧಿಕಾರಿಗಳನ್ನು ಭೆಟ್ಟಿಯಾಗಿ ವಿವರಗಳನ್ನೆಲ್ಲ ಗೊತ್ತು ಮಾಡಲಾಯ್ತು. ಕ್ರಿಮಿನಲ್ ಕೈದಿಗಳೆಲ್ಲ ಸೇರಿ "ಸತ್ಯಹರಿಶ್ಚಂದ್ರ" ಎಂಬ ನಾಟಕವನ್ನು ಸಿದ್ಧ ಮಾಡಿದರು. ಅದಕ್ಕೆ ಬೇಕಾಗುವ ಸೀರೆ, ಕುಪ್ಪಸ, ಬೇರೆ ಬಟ್ಟೆಗಳನ್ನು ಅಧಿಕಾರಿಗಳ ಮನೆಯಿಂದ ತರಲಾಗಿತ್ತು. ನಾಟಕವು ಮಧ್ಯಾಹ್ನ ಒಂದು ಗಂಟೆಗೆ ಪ್ರಾರಂಭವಾಗಿ 3 ಗಂಟೆಗೆ ಮುಗಿಯಿತು. ಒಂದು ಬ್ಯಾರಕ್ಕಿನಲ್ಲಿ ಎಲ್ಲರೂ ಒಂದೆಡೆ ಸೇರಿದ್ದೆವು. ಆ ಪರದೆ, ಡ್ರೆಸ್ ಎಲ್ಲವನ್ನು ಸಿದ್ಧ ಮಾಡಿದುದನ್ನು ನೋಡಿ ನಮಗೆಲ್ಲ ಆಶ್ಚರ್ಯ.

ಸ್ವಾಭಾವಿಕವಾಗಿ ಅಂದಿನ ಊಟವೂ ವೈಶಿಷ್ಟ್ಯಪೂರ್ಣವಾಗಿತ್ತು. ಅನ್ನ, ಸಾರು, ಚಪಾತಿ ಮತ್ತು ಪ್ರತಿಯೊಬ್ಬರಿಗೆ ಬೆಲ್ಲದ ಪಾಕಿನಲ್ಲಿ ಮಾಡಿದ ಮೂರು ಜಿಲೇಬಿ ಬಡಿಸುವ ಯೋಜನೆಯಿತ್ತು.

ಈ ಜಿಲೇಬಿ ಮಾಡಲು ನಿಷ್ಣಾತ ಕೈದಿಗಳನ್ನು ನೇಮಿಸಲಾಗಿತ್ತು. ಸರಿಯಾಗಿ ನಾಲ್ಕು ಗಂಟೆಗೆ ದಿನದಂತೆ ಅವರವರ ಸ್ಥಳದಲ್ಲಿಯೇ ಅಂದಿನ ಊಟ ಕಳಿಸಲಾಯ್ತು. ಜೇಲಿನಲ್ಲಿ ಅಂದು ಎಂದಿಲ್ಲದ ಉತ್ಸಾಹ ಕಂಡುಬರುತ್ತಿತ್ತು. ಕ್ರಿಮಿನಲ್ ಕೈದಿಗಳಿಗಂತೂ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಊಟದ ನಂತರ ಎಲ್ಲರೂ ಒಂದೆಡೆ ಸೇರಿ ಸಡಗರದಿಂದ ಬನ್ನಿ ಮುಡಿದೆವು. ಆಗ ಜೇಲಿನಲ್ಲಿ ಸುಮಾರು 1800 ಕೈದಿಗಳಿದ್ದರು. ನಮ್ಮಲ್ಲಿ ಒಗ್ಗಟ್ಟು ಮತ್ತು ಅಧಿಕಾರಿಗಳ ಸಹಕಾರವಿದ್ದರೆ ಕಾರ್ಯಕ್ರಮಗಳು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಇಷ್ಟೊಂದು ಸುವ್ಯವಸ್ಥಿತವಾಗಿ ಮತ್ತು ಸಡಗರದಿಂದ ಇಲ್ಲಿಯವರೆಗೆ ಯಾವ ಕಾರ್ಯಕ್ರಮಗಳೂ ಆಗಿರಲಿಲ್ಲವೆಂದು ಅಲ್ಲಿಯ ತೀರ ಹಳೆಯ ಕ್ರಿಮಿನಲ್ ಕೈದಿಗಳು ಹೇಳಿದರು. ತಿಂಗಳೊಪ್ಪತ್ತು ಈ ಉತ್ಸಾಹದಲ್ಲಿ ಕಳೆದವು.

## ಕ್ರಿಮಿನಲ್ ಕೈದಿಗಳು

ಕ್ರಿಮಿನಲ್ ಕೈದಿಗಳ ಬಗ್ಗೆ ಅನೇಕರ ಮನಸ್ಸಿನಲ್ಲಿ ಭಯಂಕರ ಕಲ್ಪನೆಗಳಿರಬಹುದು. ಪ್ರಾರಂಭದಲ್ಲಿ ನನಗೂ ಹಾಗೆ ಅನಿಸಿತ್ತು. ಆದರೆ, ಅವರ ಸಂಪರ್ಕ ಬಂದಂತೆ ಅವರಲ್ಲಿಯ ಮಾನವೀಯತೆಯು ಎದ್ದು ಕಾಣುತ್ತಿತ್ತು. ಅವರು ತಮ್ಮ ಆತ್ಮೀಯ ಅನುಭವಗಳನ್ನು ನಮ್ಮ ಸಂಗಡ ಹಂಚಿಕೊಳ್ಳುತ್ತಿದ್ದರು. ಒಂದು ಚಿಕ್ಕ ಘಟನೆ, ಜೇಲಿನಲ್ಲಿ ಸ್ನಾನ ಮಾಡುವ ಸ್ಥಳದ ಹತ್ತಿರ ಒಂದು ಕಡೆಗೆ ಶಿವಲಿಂಗ ಮತ್ತು ಅದರ ಮುಂದೆ ಬಸವಣ್ಣನ ಮೂರ್ತಿ ಇಡಲಾಗಿತ್ತು. ಪಕ್ಕದಲ್ಲಿಯೇ ಒಂದು ಬಿಲ್ವ ಪತ್ರಿಯ ಗಿಡ. ಅನೇಕ ಕ್ರಿಮಿನಲ್ ಕೈದಿಗಳು ನಿತ್ಯ ಸ್ನಾನಮಾಡಿ ಶಿವಲಿಂಗ ಪೂಜೆ ಮಾಡಿ ಬಿಲ್ವಪತ್ರಿ ಏರಿಸದ ಹೊರತು ಬಾಯಲ್ಲಿ ನೀರು ಹಾಕುತ್ತಿರಲಿಲ್ಲ. ಒಂದು ಸಂದರ್ಭದಲ್ಲಿ ಓರ್ವ ಜೇಲ್ ಅಧಿಕಾರಿ ಆ ದೇವರ ಮೂರ್ತಿಯನ್ನು ತೆಗೆಯಿಸಿಬಿಟ್ಟ. ಆಗ ಅವರಿಗೆ ತುಂಬಾ ಕಳವಳವಾಯ್ತು. ಕೆಲವು ನಿಷ್ಠಾವಂತ ಕೈದಿಗಳು ಆ ಮೂರ್ತಿಯನ್ನು ಪುನಃ ತಂದು ಅಲ್ಲಿಡುವವರೆಗೆ ಬಾಯಲ್ಲಿ ನೀರು ಹಾಕುವುದಿಲ್ಲವೆಂದು ಪಟ್ಟು ಹಿಡಿದರು. ಆಗ ಆ ಜೇಲ್ ಅಧಿಕಾರಿಯ ಕಣ್ತೆರೆದು ಮೊದಲಿನ ಸ್ಥಳದಲ್ಲಿ ಆ ಮೂರ್ತಿಯನ್ನು ಇಡಿಸಿದರು. ಅನಂತರ ಎಲ್ಲರೂ ಸೇರಿ ಸಂತೋಷದಿಂದ ಊಟ ಮಾಡಿದರು.

ಖೂನಿ ಮಾಡಿದವರಿಗೆ ಹತ್ತರಿಂದ ಹದಿನೈದು ವರ್ಷ ಶಿಕ್ಷೆಯಾಗುವುದುಂಟು. ಕೆಲವರನ್ನು ಕಾಲಾಪಾನಿಗೂ ಕಳಿಸುತ್ತಿದ್ದರು. ಅವರಲ್ಲಿ ಬಹಳ ಜನರ ನಡತೆ, ನಡಾವಳಿಗಳು ತುಂಬಾ ಆದರ್ಶವಾದವುಗಳಾಗಿದ್ದವು. ಇಂಥ ಸಚ್ಚಾರಿತ್ರ್ಯೆಯ ಮನುಷ್ಯ ಅಂಥ ಹೇಯ ಕೃತ್ಯವನ್ನು ಹೇಗೆ ಮಾಡಿದ ? ಎಂಬುದೇ ನನ್ನ ಸಮಸ್ಯೆಯಾಗಿತ್ತು. ರೊಚ್ಚಿನ ಭರದಲ್ಲಿ ಇಂಥ ಕೃತ್ಯಗಳನ್ನು ತಾವು ಮಾಡಿದುದನ್ನು ತುಂಬಾ ಸ್ವಾರಸ್ಯವಾಗಿ ಹೇಳುತ್ತಿದ್ದರು. ಅದರ ಬಗ್ಗೆ ತಮ್ಮ ಪಶ್ಚಾತ್ತಾಪವನ್ನು ವ್ಯಕ್ತಮಾಡುತ್ತಿದ್ದರು. ಇತರ ಅಪರಾಧಗಳನ್ನು ಮಾಡಿದ ಕೈದಿಗಳಿಗಿಂತ ಖೂನಿ ಮಾಡಿ ಬಂದವರಲ್ಲಿ ಮಾನವೀಯತೆ ತುಂಬಾ ಎದ್ದು ಕಾಣುತ್ತಿತ್ತು. ಅವರ ಆಚಾರ-ವಿಚಾರ, ನಡೆ-ನುಡಿಗಳು ಆದರ್ಶವಾಗಿ

ಕಾಣುತ್ತಿದ್ದವು. ತಮಗೆ ಒಪ್ಪಿಸಿದ ಕಾರ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ತಮ್ಮ ಮನೆತನದ ಪರಿಸ್ಥಿತಿ ನೆನಪಾದಾಗ ದುಃಖಿಸುತ್ತಿದ್ದರು. ಅವರಲ್ಲಿ ಅನೇಕರು ನನ್ನ ಆತ್ಮೀಯ ಮಿತ್ರರಾದರು.

## ಕರ್ನಾಟಕದ ಸಿಂಹ ಗರ್ಜಿಸಿತು

ನಾನು ಬೆಳಗಾವಿ ಜೇಲಿಗೆ ಬಂದಾಗ ಅಲ್ಲಿಯ ಜೀವನವು ತುಂಬಾ ಸೊಗಸಾಗಿದ್ದರೂ, ಮೊದಲು ರಾಜಕೀಯ ಕೈದಿಗಳು ಅನುಭವಿಸಿದ ಕಷ್ಟಗಳನ್ನು ತುಂಬಾ ತಳಮಳಗೊಂಡು ಬಣ್ಣಿಸುತ್ತಿದ್ದರು.

ಅದು 1942 ರ ಆಂದೋಲನದ ಪ್ರಾರಂಭದ ಕಾಲ. ಜೇಲಿನಲ್ಲಿದ್ದ ಸ್ಥಳಾವಕಾಶಕ್ಕಿಂತ ತುಂಬಾ ಹೆಚ್ಚಾಗಿ ಕೈದಿಗಳು ಬರಹತ್ತಿದರು. ಅದೇ ಹೊಸತಾಗಿ ಬಂದ ಕೆಲ ಬಿಸಿ ನೆತ್ತರದ ತರುಣರು ಜೇಲ್ ಆಡಳಿತ ಸುಗಮವಾಗಿ ನಡೆಯದಂತೆ ವರ್ತಿಸುತ್ತಿದ್ದರು. ಊಟ, ಉಪಚಾರಗಳೂ ಕಡಿಮೆ ದರ್ಜೆಯವು. ಒಬ್ಬರ ಸ್ಥಳದಲ್ಲಿ ಹತ್ತು ಹನ್ನೆರಡು ಜನರನ್ನಿಡುವರು. ರಾತ್ರಿ ಅವರೆಲ್ಲರ ಮಲಮೂತ್ರ ವಿಸರ್ಜನೆ ಅಲ್ಲಿಯೇ ಆಗಬೇಕು. ಆ ಕೋಣೆಯ ತುಂಬಾ ದುರ್ವಾಸನೆ. ಇದಕ್ಕೆ ಕಳಸವಿಟ್ಟಂತೆ ಜೇಲಿನ ದುರಾಡಳಿತ. ಜೇಲಿನಲ್ಲಿ ಕಾಲರಾ ಬೇನೆಯು ಹಬ್ಬಹತ್ತಿತು. ಅನೇಕ ರಾಜಕೀಯ ಕೈದಿಗಳು ಇದಕ್ಕೆ ಆಹುತಿಯಾದರು. ವಾತಾವರಣವು ತುಂಬಾ ಗಂಭೀರವಾಗಿ ಕೈದಿಗಳೂ, ಅಧಿಕಾರಿಗಳೂ ಹೌಹಾರಿದರು. ಯಾರ ಪಾಳಿ ಯಾವಾಗ ಬಂದೀತು ಎಂಬುದನ್ನು ಹೇಳುವುದೇ ಸಾಧ್ಯವಿರಲಿಲ್ಲ.

ಆಗ ಬೆಳಗಾವಿ ಜೇಲಿನಲ್ಲಿ "ಕರ್ನಾಟಕದ ಸಿಂಹ" ಎಂದೇ ಹೆಸರಾದ ಗಂಗಾಧರರಾವ್ ದೇಶಪಾಂಡೆ ಮತ್ತು ಧಾರವಾಡದ ಉತ್ಸಾಹಿ ತರುಣ ಡಾಕ್ಟರ್ ನಾರಾಯಣರಾವ ಕಬ್ಬೂರ ಅವರಿದ್ದರು. ಆಗಿನ ಜೇಲ್ ಸೂಪರಿಂಟೆಂಡೆಂಟ್ ಲ್ಯಾಕ್ಸಟನ್ ಎಂಬ ಆಂಗ್ಲ ಮನುಷ್ಯ. ಯಾವ ಮುಖಂಡರ ಮಾತನ್ನೂ ಆತ ಕಿವಿಯ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ಎಲ್ಲರಿಗೂ ಇದೊಂದು ದೊಡ್ಡ ಸಮಸ್ಯೆಯಾಗಿತ್ತು. ಕೊನೆಗೆ ಅಲ್ಲಿದ್ದ ರಾಜಕೀಯ ಮುಖಂಡರು 'ಜೀವನ ಮರಣದ' ಹೋರಾಟವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದರು. ಸಾಮಾನ್ಯವಾಗಿ ಸಾಯಂಕಾಲ ಎಲ್ಲ ಕೈದಿಗಳನ್ನು ಒಳಗೆ ಹಾಕಿ ಕೀಲಿ ಹಾಕುವ ಪದ್ಧತಿ. ಪೊಲೀಸ್‌ರು ಬಂದಾಗ "ಜೀವವು ಗಂಡಾಂತರದಲ್ಲಿದೆ. ಜೇಲು ಖಾಲಿ ಮಾಡಿರಿ" "Life is in danger, Vacate Jail" ಎಂಬ ಘೋಷಣೆಯನ್ನು ಕೂಗುತ್ತಾ ಎಲ್ಲರೂ "ಬಂದಿ" ನಿರಾಕರಿಸಬೇಕು. ಈ ಸತ್ಯಾಗ್ರಹ ಮಾಡುವಾಗ ಯಾವ ಕಷ್ಟನಷ್ಟಗಳು ಬಂದರೂ ಅವುಗಳನ್ನು ಧೈರ್ಯದಿಂದ ಎದುರಿಸಬೇಕು. ಹೀಗೆಂದು ನಿರ್ಧಾರವನ್ನು ಜೇಲಿನ ಮೂಲೆ ಮೂಲೆಗೂ ತಲುಪುವಂತೆ ಮಾಡಲಾಯ್ತು. ಆ ದಿನ ಹಿರಿಯ ರಾಜಕೀಯ ಕೈದಿಗಳು ಮೇಲ್ಕಾಣಿಸಿದ ಘೋಷಣೆಯನ್ನು ಉಚ್ಚಸ್ವರದಲ್ಲಿ ಕೂಗುತ್ತ ಬಂದಿ ನಿರಾಕರಿಸಿ ಹೊರಾಂಗಣದಲ್ಲಿ ಕುಳಿತು ಬಿಟ್ಟರು. ಸಾಮಾನ್ಯ ಇಡೀ ಜೇಲಿನಲ್ಲಿ ಇದೇ

ವಾತಾವರಣ ಹಬ್ಬಿತು. ಎಲ್ಲರೂ 'ಬಂದಿ' ನಿರಾಕರಿಸಿದರು. ಘೋಷಣೆಗಳಂತೂ ಗಡಚಿಕ್ಕುವಂತೆ ನಡೆದಿದ್ದವು. ನಿತ್ಯ ಕೆಲವೇ ಪೊಲೀಸ್‌ರು ಈ ಕೆಲಸವನ್ನು ಮಾಡುತ್ತಿದ್ದರು. ಅಂದು ಎಲ್ಲ ಕೈದಿಗಳು 'ಬಂದಿ' ನಿರಾಕರಿಸಿದ್ದನ್ನು ಮೇಲಾಧಿಕಾರಿಗಳಿಗೆ ತಿಳಿಸಿದರು. ಅವರು ಬಂದು ಕೈದಿಗಳ ಮನವೊಲಿಸಲು ಯತ್ನಿಸಿದರು. ಆದರೆ ಅದರ ಪ್ರಯೋಜನವಾಗಲಿಲ್ಲ. ಕೊನೆಗೆ ಮುಖ್ಯ ಅಧಿಕಾರಿಗೆ ತಿಳಿಸಲಾಯ್ತು. ಅವರು ಈ ಪರಿಸ್ಥಿತಿಯನ್ನು ನೋಡಿ ಮಿಲಿಟರಿ ಅಧಿಕಾರಿಗಳಿಗೆ ಫೋನ್ ಮಾಡಿದರು. ಸಶಸ್ತ್ರ ಮಿಲಿಟರಿ ಬಂದಿತು. ಸುಸಜ್ಜಿತ ಬಂದೂಕಧಾರಿ ಸೈನ್ಯವು ಜೇಲು ಪ್ರವೇಶಿಸಿತು. ಇನ್ನೇನು ಗುಂಡುಹಾರಿ ಕೆಲ ಕೈದಿಗಳ ಹೆಣ ಉರುಳುವುದೆಂದು ಅನಿಸಹತ್ತಿತು. ಆದರೂ ಮುಖಂಡರು ಎದೆಗುಂದಲಿಲ್ಲ. ಮಿಲಿಟರಿಯ ಮುಖ್ಯ ಅಧಿಕಾರಿಯು ತನ್ನ ಸೈನ್ಯದೊಡನೆ ಮೊದಲು ಗಂಗಾಧರರಾವ ಇದ್ದ ಕಡೆಗೆ ಪ್ರವೇಶಿಸಿದ. ಆಗ ನಮ್ಮ ಕರ್ನಾಟಕದ ಸಿಂಹ (ಗಂಗಾಧರರಾವ) ತನ್ನ ಇಳಿವಯಸ್ಸಿನಲ್ಲಿಯೂ ಗರ್ಜಿಸಿತು : 'ನೀವು ಗುಂಡು ಹಾಕುವುದನ್ನೇ ನಿರ್ಧರಿಸಿದ್ದರೆ ನನಗೆ ಮೊದಲು ಹಾಕಿರಿ. ನಾನು ಸಾಯಲು ಸಿದ್ಧನಿದ್ದೇನೆ.' ಎಂದು ಹೇಳುತ್ತ ತಮ್ಮ ಎದೆ ತೆರೆದುಕೊಂಡು ಅವರ ಮುಂದೆ ಹಾರಿ ನಿಂತರು. 'ನಿಮಗೆ ಈ ಸಮಸ್ಯೆಯನ್ನು ಬಿಡಿಸುವ ಇಷ್ಟವಿದ್ದರೆ ನಾವು ಸಹಕರಿಸಲು ಸಿದ್ಧ. ಅದಕ್ಕೆ ಮಾರ್ಗಗಳೂ ಇವೆ. ಕೈದಿಗಳೆಲ್ಲ ಇಲ್ಲಿಯ ದುರಾಡಳಿತದಿಂದ, ಹಬ್ಬಿದ ಕಾಲರಾ ಬೇನೆಯಿಂದ ಸಾಯುತ್ತಿರುವಾಗ ಬೇನೆ ನಿವಾರಣೆಯ ಉಪಾಯ ಮಾಡುವುದನ್ನು ಬಿಟ್ಟು ನಿರಪರಾಧಿ ನಿಃಶಸ್ತ್ರ ಕೈದಿಗಳ ಮೇಲೆ ಗುಂಡು ಹಾರಿಸಲಿಕ್ಕೆ ನಿಮಗೆ ನಾಚಿಕೆ ಬರುವುದಿಲ್ಲವೇ ?' ಎಂದು ಗುಡುಗಿದರು. ಈ ಸಿಂಹಗರ್ಜನೆ ಮಿಲಿಟರಿಯವರನ್ನು ವಿಚಾರಕ್ಕೆ ಹಚ್ಚಿತು. ನಿಜಸ್ಥಿತಿಯ ಕಡೆಗೆ ಸರ್ಕಾರದ ಗಮನ ಸೆಳೆಯಲ್ಪಟ್ಟಿತು. ಮಿಲಿಟರಿಯವರು ಗುಂಡು ಹಾರಿಸದೆ ವಾಪಸ್ ಹೋದರು. ಮೇಲಾಧಿಕಾರಿಗಳು ಚೌಕಾಶಿಗೆ ಬಂದರು. ಅಲ್ಲಿಯ ಮುಖಂಡರೊಡನೆ ಚರ್ಚೆ ಮಾಡಿ ರೋಗ ತಡೆಯುವ ಮಾರ್ಗ ಕಂಡುಹಿಡಿದರು. ಅಲ್ಲಿದ್ದ ಡಾ. ಕಬ್ಬೂರರವರು "ಎಂಟೇ ದಿನಗಳಲ್ಲಿ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ತರಬಹುದು" ಎಂದು ಹೇಳಿದರು. ಆಗ ಡಾ. ಕಬ್ಬೂರರವರು ಕೇವಲ ಕೈದಿ ಮಾತ್ರವಾಗಿರದೆ ಓರ್ವ ಸುಪ್ರಸಿದ್ಧ ಡಾಕ್ಟರ್‌ರೂ ಇರುವರೆಂಬ ಕಲ್ಪನೆ ಅವರಿಗೆ ಬಂತು. ಜೇಲ್ ದವಾಖಾನೆಯ ಹಿರಿತನವನ್ನು, ಕೈದಿಗಳಿಗೆ ರೇಶನ್ ಕೊಡುವ ಅಧಿಕಾರವನ್ನು ಅವರಿಗೆ ಒಪ್ಪಿಸಲಾಯ್ತು. ಕೈದಿಗಳೆಲ್ಲ ಒಳಗೆ ಬಂದೀಯಾಗದೆ ಕಂಪೌಂಡ್‌ನಲ್ಲೆಲ್ಲ ತಿರುಗಾಡಬಹುದಿತ್ತು. ಕೇವಲ ಕಂಪೌಂಡ್ ಗೇಟಿಗೆ ಕೀಲಿ ಹಾಕಲಾಗುತ್ತಿತ್ತು. ಡಾ. ಕಬ್ಬೂರವರು ಆಹಾರದಲ್ಲಿಯೂ ಸಾಕಷ್ಟು ಪರಿವರ್ತನೆ ಮಾಡಿದರು. ಅವಶ್ಯವಿದ್ದವರಿಗೆ ಹಾಲು, ನಿಂಬೆಹಣ್ಣು, ಚಪಾತಿ ಮುಂತಾದವುಗಳನ್ನು ಕೊಡಲಾಗುತ್ತಿತ್ತು. ಡಾ. ಕಬ್ಬೂರವರು ಹೇಳಿದಂತೆ ಎಂಟೇ ದಿವಸಗಳಲ್ಲಿ ಕಾಲರಾ ಬೇನೆ ಹಿಡಿತದಲ್ಲಿ ಬಂದಿತು. ಜೇಲು ದುರಾಡಳಿತವು ಕೊನೆಗೊಂಡಿತು ಎಂದು ಮುಂತಾಗಿ ಈ ಘಟನೆಯನ್ನು ಕತೆ ಮಾಡಿ ಹೇಳುತ್ತಿದ್ದರು. ಇಂಥ ಅನೇಕಾನೇಕ ಜೇಲ್ ಕತೆಗಳನ್ನು ಅಲ್ಲಿಯವರು ಹೇಳುತ್ತಿದ್ದರು.

## ಡಾ. ಕಬ್ಬೂರ ಅವರ ಧೈರ್ಯ

ಜೇಲಿನಲ್ಲಿ ಯಾರಿಗೂ ಹೆದರದೇ ಅತ್ಯಂತ ಧೈರ್ಯವಾಗಿ ಮಾತನಾಡುವವರೇ ಡಾ. ಕಬ್ಬೂರವರೆಂದು ಹೆಸರಾಗಿದ್ದರು. ಅವರು 'ಕ' ವರ್ಗದಲ್ಲಿದ್ದರು. ಅಲ್ಲಿಯ ಜೇಲರ್‌ನಿಗೂ ಅವರಿಗೂ ಆಗುತ್ತಿರಲಿಲ್ಲ. ಆದರೆ 'ಬ' ವರ್ಗದ ಕೈದಿಗಳು ಆ ಜೇಲರ್ ಒಳ್ಳೆಯವನೆಂಬ ಭಾವನೆಯಲ್ಲಿದ್ದರು. ಡಾ. ಕಬ್ಬೂರವರು ಒಂದು ಸಲ ಒಂದು ಪುಸ್ತಕದಲ್ಲಿ ಈ ಕೆಳಗಿನಂತೆ ಬರೆದ ಚೀಟಿಯನ್ನಿಟ್ಟು ಆ ಪುಸ್ತಕವನ್ನು 'ಬ' ವರ್ಗಕ್ಕೆ ಕಳಿಸಿದರು. ಆ ಪುಸ್ತಕ ಅಲ್ಲಿರುವಾಗ ಸಹಜವಾಗಿ ಜೇಲರ್ ಅಲ್ಲಿಗೆ ಬಂದರು. ಮಾತನಾಡುತ್ತಾ ಅದೇ ಪುಸ್ತಕದ ಪುಟಗಳನ್ನು ತಿರುವ ಹತ್ತಿದಾಗ ಈ ಚೀಟಿ ಅವರ ಕೈಗೆ ಸಿಕ್ಕಿತು. ಅದರಲ್ಲಿ ಬರೆದದ್ದು ಹೀಗೆ : 'The Jailor has got two sets of teeth, One to show and another to bite with' (ಈ ಜೇಲರ್‌ನಿಗೆ ಎರಡು ಬಗೆಯ ಹಲ್ಲಿನ ಸೆಟ್ಟುಗಳಿವೆ. ಒಂದು ತೋರಿಸಲು ಇನ್ನೊಂದು ಕಚ್ಚಲು) ಈ ಚೀಟಿಯ ಕೆಳಗೆ ಸಹಿ ಇರದಿದ್ದರೂ ಇದನ್ನು ಡಾ. ಕಬ್ಬೂರವರೇ ಬರೆದಿರುವರೆಂದು ಜೇಲರ್ ತಿಳಿದು ಅವರನ್ನು ಕರೆಕಳಿಸಿ ವಿಚಾರಿಸಿದಾಗ ಡಾ. ಕಬ್ಬೂರರವರು "ಹೌದು ಇದನ್ನು ಬರೆದವ ಮತ್ತು ನಾನೇ ಅದನ್ನು ಸಿದ್ಧಮಾಡಬಲ್ಲೆ" ಎಂದು ಧೈರ್ಯವಾಗಿ ಹೇಳಿದರು. ಮುಂದೆ ಆ ಬಗ್ಗೆ ಜೇಲರ್ ಚೌಕಾಶಿಯ ಶಾಸ್ತ್ರ ಮಾಡಿ ಕಾಲಿಗೆ 'ಆಡಾಬೇಡಿ' ಹಾಕಿ ಡಾ. ಕಬ್ಬೂರರನ್ನು ಸೆಪರೇಟಿನಲ್ಲಿ ಕೆಲದಿವಸ ಇಟ್ಟರಂತೆ.

ಇಂಥದ್ದೇ ಇನ್ನೊಂದು ಘಟನೆ. ಒಂದು ಸಲ ಜೇಲರ್ ಕೈದಿಗಳನ್ನು ಥಳಿಸಹತ್ತಿದ. ಅದನ್ನು ರಾಜಕೀಯ ಕೈದಿಗಳು ಪ್ರತಿಭಟಿಸಿದರು. ಅವರ ಒತ್ತಾಯಕ್ಕೆ ಮಣಿದು ಚೌಕಾಶಿ ನಡೆದು ಆ ಅಧಿಕಾರಿ ಎಲ್ಲ ಕೈದಿಗಳ ಮುಂದೆ ನಿಂತು ಕ್ಷಮೆ ಬೇಡಬೇಕೆಂದು ನಿರ್ಧಾರವಾಯ್ತು. ಅದರಂತೆ ಎಲ್ಲ ಕೈದಿಗಳನ್ನು ಒಂದೆಡೆ ಸೇರಿಸಿ ಅವರ ಮುಂದೆ ಆ ಜೇಲರ್ ಕೈ ಜೋಡಿಸಿ ನಿಂತು ಕ್ಷಮೆ ಕೇಳಿದರು.

# ಅರುಣೋದಯದಿಂದ ಸೂರ್ಯೋದಯ

ಪ್ರಾರಂಭದಲ್ಲಿ ನನ್ನದೇ ಕಾರಾಗ್ರಹವಾಸದ ಅವಧಿ ಹೆಚ್ಚು ಎಂದು ತಿಳಿದುಕೊಂಡಿದ್ದೆ. ಆದರೆ, ನನ್ನ ಸಂಗಡಿಗರಲ್ಲಿ ಕೆಲವರ ಅವಧಿ ಕೇಳಿ ಬೆರಗಾದೆ. ಒಬ್ಬನಿಗೆ ಹದಿನಾಲ್ಕು ವರ್ಷ ಶಿಕ್ಷೆಯಿದ್ದರೆ, ಇನ್ನೊಬ್ಬನಿಗೆ ಹತ್ತು ವರ್ಷ, ಮಗದೊಬ್ಬನಿಗೆ ಎಂಟು ವರ್ಷ. ಅವರೊಡನೆ ತುಲನೆ ಮಾಡಿದರೆ ನನ್ನದು ಕೇವಲ ಮೂವತ್ತೇ ತಿಂಗಳು ! ಈ ಜಗತ್ತಿನಲ್ಲಿ ಬಂದಾಗ ತಾನು ಇಲ್ಲಿ ಕಾಯಂ ಇರತಕ್ಕವನೆಂದೇ ಮಾನವ ಏನೇನೋ ವ್ಯವಸ್ಥೆ ಮಾಡಿಕೊಳ್ಳುತ್ತಾನೆ. ಹಾಗೆಯೇ ಜೇಲಿನಲ್ಲಿ ನಮ್ಮ ಅವಧಿ ಎಷ್ಟೇ ಕಡಿಮೆಯಿದ್ದರೂ, ಈ ಸಂಗ್ರಹ ವೃತ್ತಿ ಬಿಡುತ್ತಿರಲಿಲ್ಲ. ಹೀಗಿರುವಾಗ ನನ್ನ ಎರಡು ವರ್ಷದ ಶಿಕ್ಷೆಯ ಅವಧಿ ಮುಗಿಯಿತು. ಇನ್ನು ದಂಡದ ಬಗ್ಗೆ ಆರು ತಿಂಗಳು ಅನುಭವಿಸುವುದಿತ್ತು. ಇಷ್ನೊಂದು (500/- ರೂ.) ಹಣ ತೆತ್ತು, ಬಿಡುಗಡೆಯಾಗಿ ಹೋಗುವ ಕಲ್ಪನೆಯು ನನ್ನ ಕನಸಿನಲ್ಲಿ ಸಹ ಇರಲಿಲ್ಲ. ಆದರೆ, ಹೊರಗಿದ್ದ ನನ್ನ ಗೆಳೆಯರು ಆಗಾಗ ಈ ಬಗ್ಗೆ ನನ್ನ ಹೆಂಡತಿಯ ಸಂಗಡ ಚರ್ಚಿಸುತ್ತಿದ್ದರಂತೆ. ನನ್ನ ಮುಂದೆ ಮಾತ್ರ ಯಾರೂ ಚಕಾರ ಶಬ್ದ ಎತ್ತಿರಲಿಲ್ಲ. ಹಾಗೆ ನೋಡಿದರೆ ನನ್ನ ಸಂಗಡ ಕೆಲಸ ಮಾಡಿದವರೆಲ್ಲ ಅಂದರೆ ದಿವಾಕರ, ಹುಕ್ಕೇರಿಕರ, ಕರಮರಕರ, ಬುರ್ಲಿ ಇವರೆಲ್ಲರ ಬಿಡುಗಡೆಯಾಗಿತ್ತು. ಅದೇ ಕುರ್ತಕೋಟಿಯ ಬಿಡುಗಡೆಯಾಗಿ ತಮ್ಮ ಹೊಚ್ಚ ಹೊಸ ಸಂಸಾರವನ್ನು ಧಾರವಾಡದಲ್ಲಿ ಹೂಡಿದ್ದರು. ಅವರ ನನ್ನ ಮಿತ್ರತ್ವ ಪ್ರಾರಂಭವಾದದ್ದು 1934 ರಿಂದ. ಅದು ಇಂದಿನವರೆಗೆ ಅಚ್ಚಳಿಯದೇ ಹಾಗೇ ನಡೆದುಕೊಂಡು ಬಂದಿದೆ. ಒಂದು ಬಗೆಯಿಂದ ನನ್ನ ಬಿಡುಗಡೆಗೆ ಚಾಲನೆ ಕೊಟ್ಟವರು ಇವರೇ ಎಂದೂ ತಿಳಿಯಿತು. ನನ್ನ ಇನ್ನೊಬ್ಬ ಆತ್ಮೀಯ ಮಿತ್ರ ಆರ್. ಕೆ. ಜೋಶಿಯವರೂ ದಿವಾಕರರ ಮುಂದೆ ಪ್ರಸ್ತಾಪಿಸಿದ್ದರು. ಇವರೆಲ್ಲ ಸೇರಿ ನನ್ನ ಹೆಂಡತಿಗೆ "ದಾಬಡೆ ಖಂಡಿತ ಈ ದಸರೆಗೆ ಬಂದೇ ಬರುವರು" ಎಂದು ಹೇಳಿದ್ದರಂತೆ. ಒಂದು ವೇಳೆ ಹಾಗಾಗಿದ್ದರೆ ನಾನು ಜೇಲಿನಲ್ಲಿಯ ಬೆಲ್ಲದ ಜಿಲೇಬಿಗೆ ಎರವಾಗುತ್ತಿದ್ದೆ. ಆದರೆ, ನನ್ನ ಹೆಂಡತಿಗೆ ಮಾತ್ರ ನಾನು ಅಂದು ಬಾರದೇ ಇದ್ದುದಕ್ಕೆ ತುಂಬಾ ನಿರಾಶೆಯಾಯಿತು. ಮುಂದೆ 15-20 ದಿವಸಗಳಲ್ಲಿ ಈ ವಿಚಾರ ಪೂರ್ತಿ ಹಣ್ಣಾಯಿತು. ಒಂದು ದಿನ ಮಧ್ಯಾಹ್ನ ಸುರೇಂದ್ರ ದಾನಿ ಮತ್ತು ನರಿಬೋಳಿ ಗುಂಡಪ್ಪ ಇವರಿಬ್ಬರೂ ಬಂದು ಜೇಲರ್ ಕುರುಳ್ಕರ್ ಅವರನ್ನು ಕಂಡು ನನ್ನ ಬಿಡುಗಡೆಯ ಪ್ರಸ್ತಾಪ ಮಾಡಿದರು. ಆ ಜೇಲರ್ ಒಂದು ವಿಕ್ಷಿಪ್ತ ವ್ಯಕ್ತಿ. ಕೈದಿಗೆ ನೆರವಾಗುವಂತೆ ಎಂದಿಗೂ ನಿಯಮಗಳನ್ನು

ಅರ್ಥೈಸುತ್ತಿರಲಿಲ್ಲ. ಅವರ ಸಂಗಡ ಚರ್ಚೆ ಮಾಡಿದಾಗ ಅವರು ಹೇಳಿದ್ದು ಹೀಗೆ : 'ನಾನು ಸರ್ಕಾರದ ಪ್ರತಿನಿಧಿ ಹೌದು, ದಾಬಡೆಯವರ ದಂಡದ ಅವಧಿ ಇನ್ನು ಕೇವಲ ನಾಲವತ್ತು ದಿನಗಳು ಮಾತ್ರ ಇವೆ. ನಾನು ಲೆಕ್ಕಹಾಕಿ ಅದಕ್ಕೆ ತಕ್ಕ ಹಣ ಸ್ವೀಕರಿಸಿ ಅವರ ಬಿಡುಗಡೆ ಮಾಡಬಹುದು. ಅಥವಾ ಪೂರ್ತಿ ಹಣವನ್ನು ತೆಗೆದುಕೊಂಡೂ ಬಿಡುಗಡೆ ಮಾಡಬಹುದು. ಸರ್ಕಾರಕ್ಕೆ ನೆರವಾಗಲು ನಾನಿಲ್ಲಿರುವೆ. ಕಾರಣ ನೀವು ಪೂರ್ತಿ 500/- ರೂ. ಕೊಟ್ಟರೆ ಮಾತ್ರ ಅವರ ಬಿಡುಗಡೆ ಮಾಡುವೆ' ಎಂದು ಹೇಳಿ ಗೀತೆಯ ಎರಡು ಶ್ಲೋಕಗಳನ್ನು ಹೇಳಿದರಂತೆ. ಹೀಗೆ ಪೂರ್ತಿ ಹಣ ತುಂಬಲಾಯ್ತು. ಅಂದೇ ಸಂಜೆಗೆ ನನ್ನ ಬಿಡುಗಡೆ ಎಂದು ತಿಳಿದು ಆಶ್ಚರ್ಯವಾಯ್ತು. ಮಿತ್ರರೆಲ್ಲ ಲಗುಬಗೆಯಿಂದ ಸೇರಿ ಬೀಳ್ಕೊಡುವ ಸಮಾರಂಭವನ್ನು ಯಥಾವತ್ತಾಗಿ ಮಾಡಿದರು. ನಾನು ಅಂದು ಸಂಜೆ ಬಿಡುಗಡೆಯಾಗಿ ಹೊರಗೆ ಬಂದೆ.

ಈಗ ಎರಡು ವರ್ಷಗಳ ಹಿಂದೆ ಅಜ್ಞಾತವಾಸದಿಂದ ಅಂಧಃಕಾರದ ಕಡೆಗೆ (ಭೂಗತದಿಂದ ವಿಸಾಪೂರ ಸೆರೆಮನೆಗೆ), ಮುಂದೆ ಅಂಧಃಕಾರದಿಂದ ಅರುಣೋದಯದ ಕಡೆಗೆ (ವಿಸಾಪೂರ ಜೇಲಿನಿಂದ ಬೆಳಗಾವಿ ಜೇಲಿಗೆ), ಈಗ ಅರುಣೋದಯದಿಂದ ಸೂರ್ಯೋದಯದ ಕಡೆಗೆ (ಬೆಳಗಾವಿ ಜೇಲಿನಿಂದ ಪೂರ್ತಿ ಬಿಡುಗಡೆ) ಬಂದಂತೆ ಭಾಸವಾಯಿತು. ಮರುದಿನ ಮೇಲ್ ಗಾಡಿಯಿಂದ ಧಾರವಾಡಕ್ಕೆ ಹೊರಟೆ. ಅದೆಷ್ಟೋ ದಿವಸಗಳಿಂದ ಸ್ವತಂತ್ರವಾಗಿ, ಸ್ವಚ್ಛಂದವಾಗಿ ಪ್ರವಾಸ ಮಾಡಿರಲಿಲ್ಲ. ಹೀಗಾಗಿ ಈ ಪ್ರವಾಸ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡಿತ್ತು. ಮನಸ್ಸಿನಲ್ಲಿ ಇನ್ನು ಏನೇನೋ ಮಂಡಿಗಿ ಮಾಡುತ್ತಿದ್ದೆ. ಗಾಡಿಯು ವೇಗವಾಗಿ ಓಡುತ್ತಿತ್ತು. ಈ ಮೊದಲು ನಾನು ನಾಲ್ಕು ಜನರಲ್ಲಿ ಮಾತನಾಡುವಾಗ "ನಾನು ಜೇಲಿಗೆ ಹೋಗಿಲ್ಲ" ಎಂದು ಹೇಳಲು ತುಸು ನಾಚಿಕೆಯಾಗುತ್ತಿತ್ತು. ಈಗ ನನಗೆ ಸಂಪೂರ್ಣ ಅರ್ಹತೆ ಬಂದಂತೆ ಭಾಸವಾಯ್ತು. ಅಷ್ಟರಲ್ಲಿ ಧಾರವಾಡ ನಿಲ್ದಾಣ ಬಂದಿತ್ತು. ಆಗ ಧಾರವಾಡಕ್ಕೆ ಗಾಡಿ ಮಧ್ಯಾಹ್ನ 12 ಕ್ಕೆ ಬರುತ್ತಿತ್ತು. ನಿಲ್ದಾಣದಲ್ಲಿ ಹೆಂಡತಿ ಶಕುಂತಲಾ, ಮಗಳು ಭಾರತಿ ಬಂದಿದ್ದರು. ಅದರಂತೆಯೇ ಕುರ್ತಕೋಟಿ ದಂಪತಿಗಳು, ಕರಮರಕರ, ಮೊಹರೆ ಹನುಮಂತರಾವ ಇವರೆಲ್ಲ ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಧಾರವಾಡದಲ್ಲಿ ನಾಲ್ಕು ವರ್ಷಗಳ ನಂತರ ಹೆಂಡತಿ, ಮಗಳೊಡನೆ ಟಾಂಗಾದಲ್ಲಿ ಕುಳಿತು ಮನೆಗೆ ಹೋದೆ. ಆಗ ನನ್ನ ಹೆಂಡತಿ ಮದಿಹಾಳದಲ್ಲಿ ತನ್ನ ಅಣ್ಣನ ಮನೆಯಲ್ಲಿರುತ್ತಿದ್ದಳು. ಅಲ್ಲಿ ನನ್ನ ಅತ್ತೆ ಗಂಗಕ್ಕ ಇದ್ದರು. ಅವರೊಬ್ಬ ತ್ಯಾಗದ ಮೂರ್ತಿ. ನಾನು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ.

ಒಂದು ವಿಧವಾಗಿ ಇಷ್ಟು ದಿವಸ, ಮನೆತನದ ಬಗ್ಗೆ ನಿಶ್ಚಿಂತನಾಗಿದ್ದು ಬಾಯಿಂದ ಅಥವಾ ಪತ್ರಗಳ ಮುಖಾಂತರ ದೊಡ್ಡ ತತ್ವಜ್ಞಾನಗಳನ್ನು ಹೇಳುತ್ತಿದ್ದೆ. ಈಗ ಪ್ರತ್ಯಕ್ಷ ಅದನ್ನು ಕೃತಿಗಿಳಿಸುವುದು ಎಷ್ಟು ಕಠಿಣ ಎಂಬ ಅರಿವು ಆಗುತ್ತಿತ್ತು. ಉಪಜೀವನಕ್ಕೆ ಇದೇ ಕ್ಷಣದಿಂದ

ನಾನು ಏನು ಮಾಡಬೇಕು ? ಎಂಬ ಪ್ರಶ್ನೆ ನನ್ನ ಮುಂದೆ ಕುಣಿದಾಡಹತ್ತಿತ್ತು. ಹಳ್ಳಿಗರ ಸೇವೆ, ವಿಧಾಯಕ ಕಾರ್ಯ ಮುಂತಾದವುಗಳು ತಲೆಯಲ್ಲಿ ತಿರುಗುತ್ತಿದ್ದರೂ, ಇಂದೇ ಈ ಕ್ಷಣಕ್ಕೆ ಏನು ಮಾಡಬೇಕು ? ಹೇಗೆ ಉಪಜೀವನ ಸಾಗಿಸಬೇಕು ? ಎಂಬುದೇ ದೊಡ್ಡ ಸಮಸ್ಯೆಯಾಯ್ತು. "ಒಂದು ವಿಧವಾಗಿ ಆ ಕಾಣದ ಭಗವಂತ ನನ್ನ ಬಗ್ಗೆಯಂತೂ ತುಂಬಾ ದಯಾಘನನಾಗಿದ್ದಾನೆ" ಎಂಬ ಭಾವನೆ ನನ್ನಲ್ಲಿ ಮೂಡಿತ್ತು. 'ನನಗೆ ಒಂದು ದಿವಸ ಕೂಡಾ ಬಿಡುವಿರದಂತೆ ನನ್ನ ಕಾರ್ಯಕ್ರಮಗಳನ್ನು ಆತ ನಿರ್ದಿಷ್ಟ ಮಾಡಿಟ್ಟಿರುವನಲ್ಲದೇ ನನ್ನ ಅವಶ್ಯಕತೆಗನುಗುಣವಾಗಿ ಆರ್ಥಿಕ ವ್ಯವಸ್ಥೆಯನ್ನೂ ಮಾಡುವ' ಎಂಬ ಆತ್ಮವಿಶ್ವಾಸ ನನ್ನಲ್ಲಿ ಬೆಳೆದು ಬಂದಿತ್ತು.

ಅದು ಚುನಾವಣೆಯ ಕಾಲ. ಕಾಂಗ್ರೆಸ್ಸು ತನ್ನ ಹುರಿಯಾಳುಗಳನ್ನು ನಿಲ್ಲಿಸಿತ್ತು. ಅದರಲ್ಲಿ ಸೇವೆ ಸಲ್ಲಿಸಬೇಕೆಂದೇ ಹಿರಿಯರು ಇಷ್ಟಪಟ್ಟರು. ನಾನು ಒಪ್ಪಿ ಕಾರ್ಯಕ್ಕೆ ಅಣಿಯಾದೆ. ನಾನು ಹಿಂದೆ ಕಾರ್ಯ ಮಾಡುತ್ತಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಕಛೇರಿಯು ಹುಬ್ಬಳ್ಳಿಗೆ ಸ್ಥಳಾಂತರಿಸಲ್ಪಟ್ಟಿತ್ತು. ಸ್ವಾಭಾವಿಕವಾಗಿ ನಾನು ಅಲ್ಲಿಯೇ ಹೋಗಬೇಕಾಯ್ತು. ಬೆಳಿಗ್ಗೆ 8 ಗಂಟೆಗೆ ಧಾರವಾಡದಿಂದ ಹೊರಟರೆ ವಾಪಸ್ ಬರುವುದು ರಾತ್ರಿ 8-9 ಗಂಟೆಗೆ. ಇದು ನಿತ್ಯದ ಕ್ರಮವಾಯ್ತು.

ಆಗ ನಡೆದದ್ದು ಪ್ರಾಂತಿಕ ಶಾಸನಸಭೆಗಳ ಚುನಾವಣೆ. ಧಾರವಾಡ, ಬೆಳಗಾವಿ, ವಿಜಾಪೂರ, ಕಾರವಾರ ಜಿಲ್ಲೆಗಳು ಮುಂಬೈ ಇಲಾಖೆಯಲ್ಲಿದ್ದವು. ಆದರೆ, ಕಾಂಗ್ರೆಸ್ಸಿನ ದೃಷ್ಟಿಯಿಂದ ಅವು ಕರ್ನಾಟಕದಲ್ಲಿದ್ದವೆಂದು ಹೇಳಬಹುದು. ಈ ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸು ತನ್ನ ಹುರಿಯಾಳುಗಳನ್ನು ನಿಲ್ಲಿಸಿತ್ತು. ಅಧಿಕಾರದ ಗದ್ದುಗೆ ಕಾಣಹತ್ತಿತ್ತು. ಯಥಾಪ್ರಕಾರ ಅಧಿಕಾರಕ್ಕಾಗಿ ಕಚ್ಚಾಟ ಪ್ರಾರಂಭವಾಗಿತ್ತು. ಜಾತಿಯ ಭೂತ ಕುಣಿದಾಡುತ್ತಿತ್ತು. ಆಗ ಎಂ. ಪಿ. ಪಾಟೀಲರು ಪಾರ್ಲಿಮೆಂಟರಿ ಬೋರ್ಡ್ ಚೇರಮನ್‌ರಿದ್ದರೆ, ದಿವಾಕರರು ಕಾರ್ಯದರ್ಶಿಗಳು. ಧಾರವಾಡ ಜಿಲ್ಲೆಯಲ್ಲಿ ಸ್ತ್ರೀಯರಿಗಾಗಿ ಕಾಯ್ದಿಟ್ಟ ಸ್ಥಳವನ್ನು ವೀರನಗೌಡರ ಪತ್ನಿ ನಾಗಮ್ಮ ಅವರ ಬದಲು ಹರಿಜನ ಯಲ್ಲವ್ವ ಸಾಂಬ್ರಾಣಿ ಅವರಿಗೆ ಕೊಡಲಾಯ್ತು. ಅದರಂತೆ ಬಳ್ಳಾರಿಯ ಸ್ತ್ರೀ ಸ್ಥಾನವನ್ನು ಟಿ. ಬಿ. ಕೇಶವರಾವರ ಹೆಂಡತಿಗೆ ಕೊಟ್ಟಿದ್ದರು. ಸ್ಥಾನಿಕ ಮುಖಂಡರು ಅವರನ್ನು ಸೋಲಿಸಿ ಅಲ್ಲಂ ಸುಮಂಗಳಮ್ಮ ಅವರನ್ನು ಆರಿಸಿ ತಂದು ಅವರನ್ನು ಕಾಂಗ್ರೆಸ್ಸಿನಲ್ಲಿ ಸೇರಿಸಲಾಯ್ತು. ಈ ಪ್ರಸಂಗ ಒಮ್ಮೆ ವಿಕೋಪಕ್ಕೆ ಹೋಯಿತು. ಅಂದಿನ ಪಾರ್ಲಿಮೆಂಟರಿ ಬೋರ್ಡ್ ಸಭೆಯು ಹುಬ್ಬಳ್ಳಿಯ ಸರಾಫಕಟ್ಟೆಯ ಅಟ್ಟದ ಮೇಲೆ ಸೇರಿತ್ತು. ಅದಕ್ಕೆ ನಾನು ಪ್ರತ್ಯಕ್ಷದರ್ಶಿ. ಆಗ ಕೆಲ ಬಳ್ಳಾರಿಯ ಮುಖಂಡರೆನ್ನುವವರು ಅನಧಿಕೃತವಾಗಿ ಒಳಗೆ ಬಂದು ಅಲ್ಲಿದ್ದ ಕಾಗದಪತ್ರ, ಫೈಲುಗಳನ್ನು ಸಿಕ್ಕಾಪಟ್ಟೆ ತೂರಾಡಿದರು. ಶಾಂತರುದ್ರಪ್ಪ ಎನ್ನುವವರು ತಮ್ಮ ಛತ್ತರಿಗೆಯಿಂದ ದಿವಾಕರರ ತಲೆಯ ಮೇಲೆ ನಾಲ್ಕು ಪೆಟ್ಟು ಹಾಕಿದರು. ಉಳಿದ ಸದಸ್ಯರು ಅಸಹಾಯಕರಾಗಿ

ಕುಳಿತಾಗ ಟಿ. ಎಸ್. ನಾಯಕ ಮಾಸ್ತರರು ದಿವಾಕರರನ್ನು ತಬ್ಬಿಕೊಂಡು ತಮ್ಮ ಮೇಲೆ ಎರಡು ಪೆಟ್ಟು ತೆಗೆದುಕೊಂಡರು. ಮುಂದೆ ಅಲ್ಲಿಯ ಕಾಂಗ್ರೆಸ್ ಹುರಿಯಾಳು ಸೋತಾಗ ವಿಜಯೋತ್ಸವ ಎಂದು ಛತ್ರಿಯ ಮೆರವಣಿಗೆ ಮಾಡಲಾಯಿತಂತೆ.

ಇಂಥ ಎಷ್ಟೋ ಘಟನೆಗಳು ನಡೆದವು. ಇದಕ್ಕೆ ಮೂಲ ಕಾರಣ ಸ್ವಾರ್ಥ, ಅಧಿಕಾರದ ದಾಹ ಎಂದು ಬೇರೆ ಹೇಳಬೇಕಾಗಿಲ್ಲ. ಕಾಂಗ್ರೆಸ್ಸು ಸಂಸ್ಥೆ ಒಂದಾನೊಂದು ಕಾಲಕ್ಕೆ ತುಂಬಾ ಪವಿತ್ರವಾಗಿದ್ದು, ಅದರಲ್ಲಿ ತ್ಯಾಗ ಮತ್ತು ಸೇವಾ ಭಾವನೆಗಳು ತುಂಬಿ ತುಳುಕುತ್ತಿದ್ದವು. ಕಾಂಗ್ರೆಸ್ಸಿನ ಬಗ್ಗೆ ಜನತೆಯಲ್ಲಿ ತುಂಬಾ ಆದರಾಭಿಮಾನಗಳಿದ್ದವು. ಇನ್ನು ಮುಂದೆ ಕಾಂಗ್ರೆಸ್ಸನ್ನು ಎಲ್ಲ ಬಗೆಯ ಸ್ವಾರ್ಥಸಾಧಕರು ಸೇರಿ ಅದರ ಪಾವಿತ್ರ್ಯವನ್ನು ಹಾಳು ಮಾಡುವರೆಂದು ನನಗೆ ಖಚಿತವಾಯ್ತು. ಕಾರಣ ನಾನು ನನ್ನ ಕರ್ತವ್ಯವನ್ನು ನಿರ್ಧರಿಸಿದೆ. ನಾನು ಮಾತ್ರ ಇನ್ನು ಮುಂದೆ ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗಬಾರದೆಂದೂ, ಯಾವುದೇ ಚುನಾವಣೆಗೆ ನಿಲ್ಲಬಾರದೆಂದೂ ನಿರ್ಧಾರ ಮಾಡಿದೆ. ನನ್ನ ಶೇಷಾಯುಷ್ಯವನ್ನು ನಾನು ಮಹಾತ್ಮರಿಗೆ ಕೊಟ್ಟ ವಚನದ ಮೇರೆಗೆ ವಿಧಾಯಕ ಕಾರ್ಯಗಳಲ್ಲಿಯೇ ಕಳೆಯಬೇಕೆಂಬ ದೃಢನಿರ್ಧಾರಕ್ಕೆ ಬಂದೆ.

# ಉಪಸಂಹಾರ

## ಜೇಲ್ ಹೊರಗಿನ ಬವಣೆಗಳು

ಮಹಾಭಾರತದ ಯುದ್ಧ ಮುಗಿದ ನಂತರ ಭೀಮ ಮತ್ತು ಅರ್ಜುನ ಇವರಿಬ್ಬರಿಗೂ ತಾವೇ ಹೆಚ್ಚು ತ್ಯಾಗ ಮಾಡಿದವರೆಂಬ ಗರ್ವ ಬಂದಿತ್ತಂತೆ. ನಿಜವಾಗಿ ಅವರು ತೋರಿಸಿದ ಶೌರ್ಯಕ್ಕೆ ಈ ಜಯವಲ್ಲ ಎಂಬ ಮಾತನ್ನು ಶ್ರೀಕೃಷ್ಣನು ಅವರಿಗೆ ಮನವರಿಕೆ ಮಾಡಿಕೊಟ್ಟನೆಂಬ ಕತೆ ನನ್ನ ನೆನಪಿಗೆ ಬರುತ್ತದೆ.

ಈ ನಾಲ್ಕು ವರ್ಷ ನೆಲಮನೆ - ಸೆರೆಮನೆಗಳಲ್ಲಿ ನಾನಾ ಬಗೆಯ ಕಷ್ಟನಷ್ಟಗಳನ್ನು ಅನುಭವಿಸಿ ನಾನೇ ಹೆಚ್ಚು ತ್ಯಾಗ ಮಾಡಿದೆನೆಂಬ ಭಾವನೆ ನನ್ನಲ್ಲಿ ಮೂಡದಿದ್ದರೆ ಅದರಲ್ಲಿ ಏನೂ ಅಸ್ವಾಭಾವಿಕವಾದದ್ದಿಲ್ಲ. ಆದರೆ ವಸ್ತುಸ್ಥಿತಿಯೇ ಬೇರೆ. ಹಾಗೆ ನೋಡಿದರೆ ನಾನು ಕಷ್ಟ ಪಟ್ಟದ್ದಾದರೂ ಏನು ? ಎಂಬ ನಿಜಸ್ವರೂಪ ಕಣ್ಮುಂದೆ ಬಂತು. ಈ ಅವಧಿಯಲ್ಲಿ ನನ್ನ ಹೆಂಡತಿ ಆ ಚಿಕ್ಕಮಗುವನ್ನು ಎತ್ತಿಕೊಂಡು ಕೈಯಲ್ಲಿ ಬಿಡಿಗಾಸೂ ಇಲ್ಲದೆ ಮನೆಯಿಂದ ಮನೆಗೆ ಅಲೆದಾಡುವಾಗ ಪಟ್ಟ ಕಷ್ಟ ಅಷ್ಟಿಷ್ಟಲ್ಲ ! ನನಗೆ ಮೂವರು ಅಣ್ಣಂದಿರಿದ್ದಂತೆ ಅವಳಿಗೂ ಮೂವರು ಅಣ್ಣಂದಿರಿದ್ದರೂ ಎಲ್ಲಿ ಹೋಗಿರಬೇಕು ? ಎಂಬ ಸಮಸ್ಯೆಯನ್ನು ಅವ್ಯಾಹತವಾಗಿ ಎದುರಿಸಬೇಕಾಗುತ್ತದೆ. ಎಲ್ಲಿಯೇ ಇದ್ದರೂ ಮಗುವಿನ ಔಷಧೋಪಚಾರ ಮತ್ತು ಆಗಾಗ ನನ್ನ ಭೆಟ್ಟಿಗೆ ಬರಬೇಕಾದ ಪ್ರವಾಸದ ವ್ಯವಸ್ಥೆ ತಾನೆ ಮಾಡಿಕೊಳ್ಳಬೇಕಾಗುತ್ತಿತ್ತು. ಇದು ಅತ್ಯಂತ ಸೂಕ್ಷ್ಮ ವಿಷಯ. ಅದೆಷ್ಟೋ ಸಲ ಕಣ್ಣೀರೇ ಅವಳ ಪಾಲಿನ ಹಣವಾಗುತ್ತಿತ್ತೆಂದು ಅವಳೇ ಹೇಳಿದ್ದುಂಟು.

ಒಮ್ಮೆ ಸಹಜವಾಗಿಯೇ - 'ನೀನು ಈ ಅವಧಿಯಲ್ಲಿ ಯಾವಾಗ ನಿಶ್ಚಿಂತವಾಗಿದ್ದಿ ?' ಎಂದು ಕೇಳಿದಾಗ ಅವಳ ಉತ್ತರ ತುಂಬಾ ಮಾರ್ಮಿಕವಾಗಿತ್ತು. 'ನಾನು ಜೇಲಿನಲ್ಲಿದ್ದ ನಾಲ್ಕು ತಿಂಗಳು ಮಾತ್ರ ತುಂಬಾ ನಿಶ್ಚಿಂತಳಾಗಿದ್ದೆ. ಆಗ ಮಾತ್ರ ಯಾವ ಕಾಳಜಿಯೂ ಇರಲಿಲ್ಲ. ಮಗುವಿಗೆ ಬೇಕಾದ ಹಾಲು, ಆರೈಕೆ ಕೂಡಾ ಚೆನ್ನಾಗಿತ್ತು' ಎಂದು ಹೇಳಿದ್ದಳು. ಅಂದಮೇಲೆ ಜೇಲಿಗೆ ಹೋದ ನಮ್ಮಂಥವರ ತ್ಯಾಗ ಎಂಥದೆಂಬುದನ್ನು ಊಹಿಸಬಹುದು. 'ತನ್ನ ಹೆಂಡಿರು ಮಕ್ಕಳನ್ನು ನೋಡಿಕೊಳ್ಳಲಿಕ್ಕಾಗದೇ ಇವರ ದೇಶಸೇವೆ ಎಂಥದ್ದು ? ನಾವೆಷ್ಟು ದಿವಸ ಈತನ ಹೆಂಡಿರು ಮಕ್ಕಳನ್ನು ನೋಡಿಕೊಳ್ಳಬೇಕು' ಎಂಬ ನಂಜಿನ ಮಾತು ಅವಳ ಕಿವಿಗೆ ಬಂದು ಅಪ್ಪಳಿಸುತ್ತಿದ್ದವು. ಇದರ ಹೊರ್ತು ಕೆಲ ಶಿಷ್ಟರೆಂಬುವರಿಂದ ಇನ್ನೂ ಅನೇಕ ಕಠೋರ ಮಾತುಗಳನ್ನು ಕೇಳಿದ್ದುಂಟು.

ಅವಳ ಶೀಲದ ಬಗ್ಗೆ ಸಹ ಶಂಕಿಸಿದ್ದರು. ಮಗಳ ಕಣ್ಣು ಬೇನೆಯ ಸಮಯಕ್ಕೆ ಅನುಭವಿಸಿದ ಬವಣೆಯನ್ನಂತೂ ದೇವರೇ ಬಲ್ಲ. 'ಇದನ್ನೆಲ್ಲ ಬಿಟ್ಟು ನಮ್ಮಂಥವರೆಲ್ಲ ಸಮದುಃಖಿಗಳು ಒಂದೆಡೆ ಸೇರಿ ಆಶ್ರಮ ಜೀವನ ನಡೆಸಬೇಕೆಂದರೂ ಅದು ಬಹಳ ದಿವಸ ನಡೆಯಲಿಲ್ಲ.'

ತಿಂಗಳಿಗೊಮ್ಮೆ ನನ್ನ ಹೆಂಡತಿ ಭೆಟ್ಟಿಗೆ ಬಂದಾಗ ನಾನು ಅವಳಿಗೆ ಇತರ ಅನೇಕ ಕೆಲಸಗಳನ್ನು ಒಪ್ಪಿಸುತ್ತಿದ್ದೆ. ಹೆಣ್ಣುಮಕ್ಕಳು ಇಷ್ಟೊಂದು ಕೆಲಸ ಹೇಗೆ ಮಾಡಬಹುದೆಂಬ ಕಲ್ಪನೆಯು ಕೂಡಾ ನನ್ನ ತಲೆಯಲ್ಲಿ ಸುಳಿಯುತ್ತಿರಲಿಲ್ಲ. ಆ ಕೆಲಸಗಳನ್ನು ಮಾಡಬೇಕಾದರೆ ಅವಳು ತುಂಬಾ ಪರಿಶ್ರಮ ಪಡಬೇಕಾಗುತ್ತಿತ್ತು. ಸಾಮೂಹಿಕವಾಗಿ ಕೂಡಿಸಿದ ಲಡಿಗಳನ್ನು ನಿರ್ದಿಷ್ಟ ಸ್ಥಳಕ್ಕೆ ತಲುಪಿಸುವುದು, ಇತರ ಅನೇಕ ಮಿತ್ರರ ಮನೆಗೆ ಸಂದೇಶ ತಲುಪಿಸುವುದು ಇತ್ಯಾದಿ. ಇಷ್ಟಕ್ಕೆ ಸುಮ್ಮನಾಗದೆ ಮುಂದೆ ಪುನಃ ಆ ಕೆಲಸಗಳ ಬಗ್ಗೆ ನೆನಪು ಪತ್ರ ಕಳಿಸುತ್ತಿದ್ದೆ.

ಈ ಹೊರಗಿನ ಎಲ್ಲ ಪರಿಸ್ಥಿಯು ನನ್ನ ಗಮನಕ್ಕೆ ಬಂದನಂತರ ನನ್ನ ಅಭಿಪ್ರಾಯದಲ್ಲಿ ಖಂಡಿತ ಪರಿವರ್ತನೆಯಾಯ್ತು. ಈ ಹೊರಗಿನ ಕಷ್ಟ ಪರಂಪರೆಗಳನ್ನು ನೋಡಿದರೆ ನಾನು ಮಾಡಿದೆನೆಂದು ತಿಳಿದ ತ್ಯಾಗ ಹೆಚ್ಚಿನದಲ್ಲ ಎಂಬ ಜ್ಞಾನೋದಯವಾಯ್ತು.

ಇಲ್ಲಿ ಸಾಮಾನ್ಯವಾಗಿ ಒಂದು ಮಾತು ಹೇಳಬೇಕೆಂದರೆ, ಈ ರಾಷ್ಟ್ರೀಯ ಹೋರಾಟದ ಸಮಯಕ್ಕೆ ಹೆಚ್ಚು ತ್ಯಾಗ ಮಾಡಿದವರೆಂದರೆ ಹೆಣ್ಣುಮಕ್ಕಳೆಂದೇ ಧಾರಾಳವಾಗಿ ಹೇಳಬಹುದು. ಈ ಸಂದರ್ಭದಲ್ಲಿ ನಿಜವಾಗಿ ತ್ಯಾಗ ಮಾಡಿದವಳೆಂದರೆ ನನ್ನ ಹೆಂಡತಿ. ಅವಳ ಸಹಕಾರವಿರದಿದ್ದರೆ ನನ್ನಿಂದ ಖಂಡಿತವಾಗಿ ಇಷ್ಟು ಕಾರ್ಯ ಮಾಡುವುದಕ್ಕಾಗುತ್ತಿರಲಿಲ್ಲ ಎಂಬ ಮನವರಿಕೆಯಾಯ್ತು. ಇದರ ಒಂದು ಒಳ್ಳೆಯ ಪರಿಣಾಮವೆಂದರೆ ನಮ್ಮಿಬ್ಬರ ಪ್ರೀತಿ-ವಿಶ್ವಾಸಗಳು ತುಂಬಾ ಬೆಳೆದು ಹೆಮ್ಮರವಾದವು. ನಮ್ಮಲ್ಲಿಯ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಮಾಯವಾಗಿ ಎಂಥ ಪ್ರಸಂಗ ಬಂದರೂ ನಾವು ಅದನ್ನು ಎದುರಿಸಬಲ್ಲೆವು ಎಂಬ ಆತ್ಮವಿಶ್ವಾಸ ನಮ್ಮಿಬ್ಬರಲ್ಲಿ ಮೂಡಿಬಂತು. ಇಂದಿಗೂ ಆ ಕಷ್ಟದ ದಿನಗಳನ್ನು ನೆನೆದರೆ ಆ ಸಾಧ್ವಿಯ ಬಗ್ಗೆ ನನ್ನ ಎರಡೂ ಕೈಗಳು ತಾವಾಗಿಯೇ ಜೋಡಿಸುತ್ತವೆ.

## ಬಿಡುಗಡೆಯ ಪ್ರಥಮ ರಾತ್ರಿ

ನಾನು ಮರಳಿ ಮನೆಗೆ ಬಂದುದನ್ನು ನೋಡಿ ಮನೆಯವರೂ ಅಕ್ಕಪಕ್ಕದವರೂ ಸಂತೋಷಪಟ್ಟರು. ತಾನು ಸಂತೋಷದಲ್ಲಿದ್ದರೆ ಅದರ ಪ್ರತಿಬಿಂಬವು ಸುತ್ತೆಲ್ಲಾ ಮೂಡಿದಂತೆ ಭಾಸವಾಗುತ್ತದೆ. ಅಂದು ಮನೆಗೆ ಅನೇಕ ಕಾರ್ಯಕರ್ತರೂ, ಆತ್ಮೀಯ ಮಿತ್ರರೂ ಬಂದು ತಮ್ಮ ಸಮಾಧಾನವನ್ನು ವ್ಯಕ್ತಮಾಡಿದರು. ಹುಬ್ಬಳ್ಳಿಯ ಆಪ್ತರೂ ಬಂದು ಹೋದರು. ಆಗ ಓರ್ವ ಮಿತ್ರ 'ಇನ್ನು ಮುಂದೆ ದಾಬಡೆಯನ್ನ ಎಲ್ಲಿಯೂ ಬಿಡದೆ, ಗಟ್ಟಿಯಾಗಿ ಹಿಡಿದು ಕೂಡಿಸಿರಿ' ಎಂದು ಚೇಷ್ಟೆ ಮಾಡಿದರು.

ನಾವು ಅಂದು ಟಾಂಗಾದಲ್ಲಿ ಮನೆಗೆ ಬರುವಾಗಲೆ 'ನನ್ನ ಹೆಂಡತಿ ನನ್ನ ಎಲ್ಲ ಕತೆಗಳನ್ನು ಸಂಪೂರ್ಣವಾಗಿ ಕೇಳಲು ಇಂದಿನ ರಾತ್ರಿಯನ್ನು ಮೀಸಲಿಡಬೇಕು' ಎಂದು ಹೇಳುತ್ತಾ 'ನನ್ನ ತಲೆ ಈಗ ತುಂಬಾ ಭಾರವಾಗಿದೆ. ಅದನ್ನೆಲ್ಲ ನಿಮ್ಮ ಮುಂದೆ ಹೇಳಿ ನನ್ನ ತಲೆ ಹಗುರ ಮಾಡಿಕೊಳ್ಳಬೇಕೆಂದಿರುವೆ' ಎಂದು ಮುಂಚಿತವಾಗಿಯೇ ಹೇಳಿಬಿಟ್ಟಿದ್ದಳು. ಅದಕ್ಕೆ ನಾನು ಒಪ್ಪಿದ್ದೆ. ಸಂಜೆ ಊಟ, ಉಪಚಾರ ಮುಗಿದ ನಂತರ ಮಗಳು ಭಾರತಿ ಗಾಢನಿದ್ದೆ ಹೋದಳು. ಅದರಂತೆ ಮನೆಯವರೆಲ್ಲ ಮಲಗಿದರು. ಅನಂತರ ಪ್ರಾರಂಭವಾಯ್ತು ನಮ್ಮ ಸತ್ಯಕಥಾ ನಿರೂಪಣೆ. ಶಕುಂತಲಾ ತನ್ನ ಅನುಭವದ ಗಂಟನ್ನು ಬಿಚ್ಚಿ ಒಂದೊಂದೇ ಘಟನೆಯನ್ನು ಹೇಳುತ್ತಾ 'ನಾನು ಈವರೆಗೆ ಹೇಳಿದ್ದು ಕೇವಲ ಹತ್ತರಲ್ಲಿ ಒಂದು ಭಾಗ ಮಾತ್ರ. ಈಗ ಪೂರ್ತಿ ವಿವರಗಳನ್ನು ಹೇಳುವೆ ಕೇಳಿರಿ. ನೀವು ಬೆಳ್ಳಗಿದ್ದುದನ್ನೆಲ್ಲ ಹಾಲೆಂದೇ ನಂಬುವಿರಿ, ಆದರೆ ಜಗತ್ತು ಹಾಗಿಲ್ಲ. ನಾವು ಒಂದು ಪಕ್ಷ ಕಡಿಮೆಯವರಾದರೆ ನಮ್ಮ ಬಗ್ಗೆ ತಿರಸ್ಕಾರ ಭಾವವನ್ನು ವ್ಯಕ್ತಮಾಡಲು ಹಿಂದೆ-ಮುಂದೆ ನೋಡುವುದಿಲ್ಲ. ಅದೇ ನಮ್ಮ ಕೈ ಮೇಲಾದರೆ ನಮ್ಮ ಕಡೆಗೆ ಬಂದು ತಮ್ಮ ಕಾರ್ಯವನ್ನು ಸಾಧಿಸಿಕೊಂಡು ಹೋಗುವುದುಂಟು. ಈ ನಾಲ್ಕು ವರ್ಷ ನನ್ನ ಆಯುಷ್ಯದಲ್ಲಿಯೇ ಪರೀಕ್ಷೆಯ ಕಾಲ. ನನ್ನ ಮೇಲೆ ಆ ಭಗವಂತನ ಕೃಪೆ ಇತ್ತೆಂದು ನಾನು ಈ ಎಲ್ಲ ಕಷ್ಟಗಳೊಳಗಿಂದ ಪಾರಾಗಿ ಈ ಸುದಿನವನ್ನು ಕಂಡಿದ್ದೇನೆ.' ಅವಳು ತನ್ನ ಸತ್ಯವಾದ ಕಟು ಅನುಭವಗಳನ್ನು ಒಂದೊಂದೇ ವರ್ಣಿಸುವಾಗ ಇಬ್ಬರ ಕಣ್ಣಲ್ಲಿಯೂ ಧಾರಾಕಾರವಾಗಿ ನೀರು. ಆಗ ಇಬ್ಬರೂ ಸೇರಿ ಮನಸಾರೆ ಅತ್ತಿದ್ದೇವೆ ! ನಕ್ಕಿದ್ದೇವೆ ! ಆಶ್ಚರ್ಯಪಟ್ಟಿದ್ದೇವೆ !! ಜಗತ್ತು ಹೀಗೂ ಇರಬಹುದೇ ? ಎಂಬ ಕಲ್ಪನೆಯೂ ಮೂಡಿಹೋಯಿತು. ಅವೆಲ್ಲವನ್ನೂ ಸಾಂಗೋಪಾಂಗವಾಗಿ ಕೇಳಿ ನಾನು ಸ್ತಂಭೀಭೂತನಾದೆ. ಮೊದಲು ಮಾತೇ ಹೊರಡಲಿಲ್ಲ. ಕೊನೆಗೆ ಕಷ್ಟಪಟ್ಟು ಬಾಯಿಬಿಟ್ಟೆ. 'ಹೌದು, ಈ ನಾಲ್ಕು ವರ್ಷ ನಿನ್ನ ತಪಃಶ್ಚರ್ಯದ ಅವಧಿ. ಅನೇಕಾನೇಕ ದುರ್ಧರ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿರುವೆ. ತುಂಬಾ ಕಷ್ಟಪಟ್ಟು ಹೈರಾಣಾಗಿರುವೆ. ನಿನ್ನ ಈ ಎಲ್ಲ ಕತೆಯನ್ನು ಕೇಳಿದನಂತರ ನೀನು ಪಟ್ಟ ಕಷ್ಟಗಳ ಮುಂದೆ ನನ್ನ ತ್ಯಾಗ ಏನೂ ಅಲ್ಲ ಎಂಬ ಭಾವನೆ ಮೂಡಿದೆ.' ಅದಕ್ಕವಳು 'ಈ ಔಪಚಾರಿಕ ಮಾತು ಸಾಕು. ಇಲ್ಲಿಯವರೆಗೆ ಸಮಸ್ಯೆಗಳನ್ನು ಎದುರಿಸಲು ನಿರ್ಣಯ ತೆಗೆದುಕೊಂಡು ಬೇಸತ್ತಿದ್ದೇನೆ. ಇನ್ನು ಮುಂದೆ ಆ ಸಂಪೂರ್ಣ ಭಾರ ನಿಮ್ಮ ಮೇಲೆ ಹಾಕಿ ನಾನು ಮೌನವಾಗಿ ನೀವು ಹೇಳಿದಂತೆ ಕೇಳುವುದಷ್ಟೆ ನನ್ನ ಪಾತ್ರ' ಎಂದು ಉಸುರಿದಳು. ನಾನು ಒಪ್ಪಿದೆ. ಮುಂದೆ ನಾನು : ಈ ನಿನ್ನ ಅನುಭವಗಳು ಅಪೂರ್ವವಾಗಿದೆ. ಅವುಗಳನ್ನು ಸುಸಂಬದ್ಧವಾಗಿ ಬರೆದಿಟ್ಟರೆ ನಮ್ಮ ಮಕ್ಕಳು, ಮೊಮ್ಮಕ್ಕಳು ಸಂಪೂರ್ಣವಾಗಿ ತಿಳಿದುಕೊಳ್ಳುವರು ಎಂದು ಹೇಳಿದಾಗ ಅವಳು 'ನಾನು ಸಾಹಿತಿಯಲ್ಲ, ಅಷ್ಟೊಂದು ಬರೆಯಲು ಸಾಧ್ಯವಾದೀತೆಂದು ಅನಿಸುವುದಿಲ್ಲ, ಬೇಕಾದರೆ ಒಂದು ಒಪ್ಪಂದಕ್ಕೆ ಬರೋಣ. ನನ್ನ ಅನುಭವಗಳನ್ನು ಸಾಂಗೋಪಾಂಗವಾಗಿ ಹೇಳುವೆ ನೀವು ಅದನ್ನು ಬರೆದು ತೆಗೆಯಬೇಕು ಎಂದಳು. ಅದಕ್ಕೆ ನಾನು ಒಪ್ಪಿದೆ. ಇಷ್ಟೆಲ್ಲ ಮಾತು ಮುಗಿಸಿದಾಗ ಬೆಳಗಿನ ಕೋಳಿ ಕೂಗಿತು.

# ಆತ್ಮ ನಿವೇದನೆ

ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ಕೆಳ ಮಧ್ಯಮ ವರ್ಗದ ಬಡಕುಟುಂಬದಲ್ಲಿ ಬೆಳೆದು ಬಂದವ. ನಾನು ಹುಟ್ಟಿದ್ದು ಗುಳೇದಗುಡ್ಡದಲ್ಲಿ 15-5-1915. ಪ್ರಾಥಮಿಕ ಶಿಕ್ಷಣ ಕೆರೂರಿನಲ್ಲಿ. ಮಾಧ್ಯಮಿಕ ಶಿಕ್ಷಣ ಹುಬ್ಬಳ್ಳಿಯಲ್ಲಿ. ಇಬ್ಬರು ಅಣ್ಣಂದಿರ ಸಂಗಡ ಹುಬ್ಬಳ್ಳಿಯಲ್ಲಿರುತ್ತಿದ್ದೆ. ನಾವಿರುತ್ತಿದ್ದ ಕೋಣೆಗೆ ತಿಂಗಳಿಗೆ ಕೇವಲ ಒಂದೂವರೆ ರೂಪಾಯಿ ಬಾಡಿಗೆ. ಶಾಲೆಯಲ್ಲಿ ಮಾಫೀ ವಿದ್ಯಾರ್ಥಿ, ಇಬ್ಬರೂ ಪ್ರತಿ ತಿಂಗಳಿಗೆ ನಾಲ್ಕಾಣೆ (25 ಪೈಸೆ) ಆಟದ ಫೀ ಕೊಡಬೇಕಾದರೆ ಸಾಕುಬೇಕಾಗುತ್ತಿತ್ತು. 1934 ರಲ್ಲಿ ಧಾರವಾಡಕ್ಕೆ ಬಂದು ಅಲ್ಲಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಕೆಲಸಕ್ಕೆ ಸೇರಿದೆ. 1941 ರಲ್ಲಿ ಸತ್ಯಾಗ್ರಹಕ್ಕೆ ಧುಮುಕಿದೆ. ಒಟ್ಟು ಈ ಹೋರಾಟದಲ್ಲಿ ನನಗಾದ ಶಿಕ್ಷೆ 33 ತಿಂಗಳು, ಭೂಗತವಾಗಿದ್ದುದು 18 ತಿಂಗಳು.

'ಮಾಡು ಇಲ್ಲವೆ ಮಡಿ' 'Do or Die' ಎಂಬ ಮಂತ್ರವನ್ನು ರಾಷ್ಟ್ರಕ್ಕೆ ಕೊಟ್ಟ ಮಹಾತ್ಮಾ ಗಾಂಧೀಜಿಯವರ ಕೊನೆಯ ಹೋರಾಟದಲ್ಲಿ ನನ್ನ ಪಾತ್ರವೇನು ? ನಾನು ಸಾಧಿಸಿದ್ದೇನು ? ಎಂದು ನನ್ನನ್ನು ನಾನೇ ಅನೇಕ ಸಲ ಕೇಳಿಕೊಂಡಿದ್ದೇನೆ. ನನ್ನ ಪಾತ್ರವನ್ನು ಸರಿಯಾಗಿ ಮಾಡಿದ್ದೇನೆ. ಈ ಹೋಮದಲ್ಲಿ ನನ್ನ ಕುಟುಂಬದವರ ಪಾತ್ರ ಸರಿಯಾಗಿತ್ತೇ ? ಮುಂತಾದ ವಿಷಯಗಳ ಬಗ್ಗೆ ಆತ್ಮನಿರೀಕ್ಷಣೆಯನ್ನು ಮಾಡಿಕೊಂಡಿದ್ದೇನೆ.


ಈ ಹೋರಾಟದಲ್ಲಿ ಕೆಲವರು ತಮ್ಮ ಪ್ರಾಣವನ್ನೇ ಬಲಿಕೊಟ್ಟರು. ಇಂಥವರಲ್ಲಿ ನನ್ನ ಆತ್ಮೀಯ ಮಿತ್ರ ಮಹಾದೇವ ಮೈಲಾರ ಮತ್ತು ಆತನ ಇಬ್ಬರು ಸಂಗಡಿಗರು ಬರುವರು. ಕೆಲವರು ನಗೆಮೊಗದಿಂದ ನೇಣುಗಂಬವನ್ನೇರಿದರು. ಅನೇಕರು ಪೊಲೀಸ್‌ರ ನಾನಾ ಬಗೆಯ ಚಿತ್ರಹಿಂಸೆಗಳಿಗೆ ಒಳಗಾದರು. ನನ್ನ ಪರಮಮಿತ್ರ ಹಾವೇರಿಯ ವಿರುಪಾಕ್ಷಪ್ಪ ಅಂಗಡಿ ಅವರು ಮೂವತ್ತು ಛಟಗೀ ಏಟು ತಿಂದು, ಹತ್ತು ವರ್ಷ ಕೃಷ್ಣನ ಜನ್ಮಸ್ಥಳವಾದ ಮಥುರಾ ಜೇಲಿನಲ್ಲಿ ಕಳೆದರು. ಇಂಥ ಘಟನೆಗಳನ್ನು ನೆನೆಸಿಕೊಂಡರೆ, ಇದರ ಮುಂದೆ ನಾನು ತೀರ ಚಿಕ್ಕವನಾಗಿ ಕಾಣುತ್ತೇನೆ. ಹಾಗೆ ನೋಡಿದರೆ ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ದೇಶದ ಸ್ವಾತಂತ್ರ್ಯದ ಸಲುವಾಗಿ ನನ್ನ ಅಳಿಲು ಸೇವೆಯನ್ನು ಸಲ್ಲಿಸಬೇಕೆಂಬುವವ. ಈ ಹೋರಾಟದ ಪ್ರಾರಂಭದ ದಿನಗಳಲ್ಲಿ ನಾನು ಮುಂಬೈನಲ್ಲಿದ್ದೆ. ನನ್ನಂಥ ಚಿಕ್ಕ ಕಾರ್ಯಕರ್ತರ ಮೇಲೆ ಸರ್ಕಾರದ ವಕ್ರದೃಷ್ಟಿ ಬೀಳಲಿಕ್ಕಿಲ್ಲವೆಂದು ನನ್ನ ಕಲ್ಪನೆಯಿತ್ತು. ಆದರೆ ಅಂದಿನ ಸರ್ಕಾರ ನನ್ನ ಮೇಲೆ ವಾರಂಟ್ ಹೊರಡಿಸಿ ಅದರ ಪ್ರತಿಯನ್ನು

ಧಾರವಾಡದ ನನ್ನ ವಾಸಸ್ಥಳಕ್ಕೆ ಅಂಟಿಸಿ, ನನ್ನನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವುದೆಂದು ಸಾರಿ, ಒಂದು ವಿಧವಾಗಿ ಅವರೇ ನನ್ನ ಈ ಅಲ್ಪಸೇವೆಗೆ ಮಾನ್ಯ ಕೊಟ್ಟಂತಾಯ್ತು.

ಅಂದು ನಮ್ಮ ಉತ್ತರ ಕರ್ನಾಟಕದಲ್ಲಿ ಅಖಂಡವಾಗಿ ನಡೆದ ವಿಧ್ವಂಸಕ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಭಾಗವಹಿಸಬೇಕೆಂದು ಒಂದೇ ಸಮನೆ ತವಕ ಪಡುತ್ತಿದ್ದೆ. ಆದರೆ, ಆಗ ನನಗೆ ಮುಂಬೈ ಬಿಟ್ಟು ಕದಲಲು ಅಪ್ಪಣೆ ದೊರೆಯಲಿಲ್ಲ ಎಂದು ಒದ್ದಾಡಿದೆ. ಮುಂದೆ ನಾನು ಧಾರವಾಡಕ್ಕೆ ಬಂದಾಗ ಈ ಚಟುವಟಿಕೆಗಳೆಲ್ಲ ಶಾಂತವಾಗಿದ್ದವು. ಒಟ್ಟಾರೆ ಈ ಮಹಾಹೋಮದಲ್ಲಿ ಪ್ರತ್ಯಕ್ಷ ವಿಧ್ವಂಸಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸುಸಂಧಿ ನನಗೆ ದೊರೆಯಲಿಲ್ಲ ಎಂಬ ಕೊರಗು ನನ್ನಲ್ಲಿ ಉಳಿದೇ ಬಿಟ್ಟಿತು. ಅಂದ ಬಳಿಕ ಈ ಚಳುವಳಿಯಲ್ಲಿ ನಾನು ಮಾಡಿದ್ದಾದರೂ ಏನು ? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಈ ಚಳುವಳಿಯಲ್ಲಿ ಯಾವ ಕಾರ್ಯಕ್ರಮಗಳನ್ನು ಮಾಡಬಹುದು ಎಂಬ ಅಧಿಕೃತ ಪಟ್ಟಿಯನ್ನು ಸಿದ್ಧಮಾಡಿ ನಮ್ಮ ರಾಜ್ಯದ ಕಾರ್ಯಕರ್ತರಿಗೆಲ್ಲ ಕಳಿಸಿದ್ದು, ಅಂಥ ಕಾರ್ಯಕರ್ತರು ಮುಂಬೈಗೆ ಬಂದಾಗ ಅವರಿಂದ ಸಂಪೂರ್ಣ ವರದಿಗಳನ್ನು ಪಡೆದು ಕ್ರೋಢೀಕರಿಸಿ ಅಂದಿನ ನಮ್ಮ ಆಜಾದ ರೇಡಿಯೋಕ್ಕೆ ಬಿತ್ತರಿಸಲು ಕೊಟ್ಟಿದ್ದು. ಈ ಕಾರ್ಯಕರ್ತರಿಗೆ ಮುಖಂಡರ ಸಂಪರ್ಕ ಮಾಡಿಸಿಕೊಟ್ಟಿದ್ದು, ಬೇರೆ ಬೇರೆ ಭಾಗಗಳಲ್ಲಿ ಗುಪ್ತಸಭೆ ಸೇರಿದಾಗ ಅಲ್ಲಿ ಪ್ರತ್ಯಕ್ಷ ಹಾಜರಿದ್ದು ಕಾರ್ಯಕ್ರಮಗಳ ವಿವರಗಳನ್ನು ಸಿದ್ಧಪಡಿಸಿದ್ದು, ಆಗಾಗ ವಿದ್ಯಾರ್ಥಿಗಳಿಗೆ ಸಾಮೂಹಿಕ ಕಾರ್ಯಕ್ರಮಗಳನ್ನು ಹಾಕಿಕೊಟ್ಟಿದ್ದು, ರಾಜ್ಯದಲ್ಲಿಯ ಹಿರಿಯರನ್ನು ಕಂಡು ಈ ಚಳುವಳಿಯ ಬಗ್ಗೆ ಎಲ್ಲ ಅಧಿಕೃತ ವಿವರಗಳನ್ನು ಕೊಟ್ಟು ಇದರ ಬಗ್ಗೆ ಅವರಲ್ಲಿ ಸದ್ಭಾವನೆಯನ್ನುಂಟುಮಾಡಿದ್ದು, ಶಕ್ಯವಾದಲ್ಲಿ ಅವರಿಂದ ಈ ಕಾರ್ಯಕ್ರಮಗಳಿಗೆ ನೆರವಾಗಬಲ್ಲ ಸಾಹಿತ್ಯವನ್ನು ಬರೆಯಿಸಿ ಪ್ರಕಟಿಸಿದ್ದು, ಸ್ಥಾನಿಕ ಕಾರ್ಯಕರ್ತರೊಡನೆ ಮತ್ತು ಹಳ್ಳಿಯ ಕಾರ್ಯಕರ್ತರೊಡನೆ ಘನಿಷ್ಟ ಸಂಪರ್ಕವನ್ನಿಟ್ಟುಕೊಂಡು ಅವರಲ್ಲಿ ಈ ಚಳುವಳಿಯ ಬಗ್ಗೆ ಏನಾದರೂ ತಪ್ಪು ಕಲ್ಪನೆಗಳು ಮೂಡಿದ್ದರೆ ಅವುಗಳನ್ನು ನಿವಾರಿಸಿದ್ದು, ಜೇಲಿಗೆ ಹೋದ ಕಾರ್ಯಕರ್ತರ ಮತ್ತು ಹುತಾತ್ಮರ ಕುಟುಂಬದವರನ್ನು ಸಂಪರ್ಕಿಸಿ ಅವರ ಯೋಗಕ್ಷೇಮವನ್ನು ಕೇಳಿದ್ದು, ಇಷ್ಟೆಲ್ಲಾ ಕಾರ್ಯಗಳನ್ನು ಹಮ್ಮಿಕೊಂಡು ಭೂಗತವಾಗಿದ್ದುಕೊಂಡೇ ಅಲೆದಾಡಿದ್ದು, ಇವೇ ಮೊದಲಾದವುಗಳು ನನ್ನ ಕಾರ್ಯಗಳಾಗಿದ್ದವು. ಎಲ್ಲಕ್ಕಿಂತ ಹೆಚ್ಚಿನದೆಂದರೆ ನಮ್ಮಂಥ ಭೂಗತ ಕಾರ್ಯಕರ್ತರನ್ನು ಸರ್ಕಾರವು ಒಂದೇ ಸಮನೆ ಶೋಧಿಸುತ್ತಿರುವಾಗ ಅವರ ಕಣ್ಣಿಗೆ ಇಂಗು ಹಚ್ಚಿ ಅಲೆದಾಡಿದ್ದೇ ಒಂದು ಬಗೆಯಾಗಿ ದೊಡ್ಡ ಕೆಲಸವಾಗಿತ್ತು. ಒಂದು ಸಮಾಧಾನದ ಸಂಗತಿಯೆಂದರೆ, ಅಂದಿನ ನಮ್ಮ ಭೂಗತ ಕಾಂಗ್ರೆಸ್ ಸಂಘಟನೆಯು ಎಂದಿಗಿಂತ ಸುಸಂಘಟಿತ ಮತ್ತು ಪ್ರಭಾವಶಾಲಿಯಾಗಿತ್ತೆಂದು ಹೇಳಬಹುದು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ಕಾರ್ಯಕ್ಕೆ ಅಂದು ಜನತೆಯ

ಬೆಂಬಲವಿತ್ತಂದೇ ನಮ್ಮಂಥವರಿಗೆ ಕೆಲಸ ಮಾಡಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ನಮ್ಮಂಥ ಕಾರ್ಯಕರ್ತರು ಅನೇಕ ವಿಚಿತ್ರ ಸಮಸ್ಯೆಗಳನ್ನು ಎದುರಿಸಬೇಕಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಹೀಗಿರುವಾಗ ನಮ್ಮವರೆಂದೇ ಸೋಗು ಹಾಕಿದವರ ಕಾರಸ್ಥಾನದಿಂದಲೇ ಧಾರವಾಡದಲ್ಲಿ ನನ್ನನ್ನು 16-1-1944 ರಂದು ಸೆರೆಹಿಡಿದರು. ನನಗೆ ಕೇವಲ ನಾಲ್ಕಾರು ತಿಂಗಳು ಶಿಕ್ಷೆ ಮಾಡಿ ಕಳಿಸಬಹುದೆಂದು ನನ್ನ ಗ್ರಹಿಕೆಯಿತ್ತು. ಆದರೆ ಅಂದಿನ ಸರ್ಕಾರ ನನಗೆ ಮೂವತ್ತು ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿತು. ನಾನು ಮಾಡಿದ ಕಾರ್ಯಕ್ಕೆ ಅವರೇ ಒಂದು ಬಗೆಯ ಮನ್ನಣೆ ಕೊಟ್ಟಂತಾಯ್ತು. ನನಗೆ ಮಾತ್ರ ಅದರಿಂದ ಸಂಪೂರ್ಣ ಸಮಾಧಾನವಾಯಿತಲ್ಲದೇ ಈ ಶಿಕ್ಷೆಯ ಅವಧಿಯನ್ನು ಸಂತೋಷದಿಂದ ಕಳೆದೆನೆಂದು ಹೆಮ್ಮೆಯಿಂದ ಹೇಳಬಲ್ಲೆ. ಇನ್ನು ನನ್ನ ಕುಟುಂಬ ಅಂದರೆ ನನ್ನ ಹೆಂಡತಿ ಮತ್ತು ಮಗಳು ಈ ಅವಧಿಯಲ್ಲಿ ನಾನಾ ತರಹದ ಕಷ್ಟನಷ್ಟಗಳನ್ನು ಅನುಭವಿಸಿದರಲ್ಲದೆ ನಾಲ್ಕು ತಿಂಗಳು ಜೇಲುವಾಸವನ್ನೂ ಅನುಭವಿಸಿದರು. ಅವರಿಗೆ ಸಹಕಾರ ನೀಡಿದ ಅಪರಾಧಕ್ಕಾಗಿ ನನ್ನ ಅತ್ತೆ ಗಂಗಾಬಾಯಿ ದಾನಿ ಮತ್ತು ನನ್ನ ಬೀಗ ಲಕ್ಷ್ಮಣ ದಾನಿಯವರೂ, ಹದಿನೈದು ದಿವಸಗಳ ಚಿಕ್ಕ ಕಾರಾಗೃಹವಾಸವನ್ನು ಅನುಭವಿಸಬೇಕಾಯ್ತು. ಭಾರತ ಮಾತೆಯ ಅಡಿದಾವರೆಗಳಲ್ಲಿ ಅರ್ಪಿಸಿದ ಇದು ನಮ್ಮ ಅಲ್ಪಸೇವೆ ಎಂದು ನಮ್ರವಾಗಿ ನಾನು ಹೇಳಬಲ್ಲೆ.



1954 ರಲ್ಲಿ ಮಂಡಿಹಾಳ ಗ್ರಾಮದ ರೈತರೊಡನೆ
ಸರ್ವಶ್ರೀ ನರಸಿಂಹ ದಾಬಡೆ, ಬೆಟದೂರ ವಕೀಲರು, ಡಿ. ಜಿ. ಹೊಳ್ಳಿವರ
ಮತ್ತಿತರ ಗ್ರಾಮದ ಜನರ ಸಂಗಡ

ಸರ್ವೋದಯ ಕಾರ್ಯದ ಸ್ಮೃತಿ

# ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ

## (1948 ರಿಂದ 1956)

ಅದು 1948 ಕಾಲ. ಭಾರತಕ್ಕೆ ಸ್ವರಾಜ್ಯ ಪ್ರಾಪ್ತಿಯಾಗಿ ಒಂದು ವರ್ಷ ಆಗುವದರಲ್ಲಿತ್ತು. ಆಗ ಧಾರವಾಡ, ಬೆಳಗಾವಿ, ವಿಜಾಪುರ, ಕಾರವಾರ ಜಿಲ್ಲೆಗಳು ಮುಂಬೈ ರಾಜ್ಯದಲ್ಲಿದ್ದವು. ಅಂದಿನ ಮುಂಬೈ ರಾಜ್ಯದ ಶ್ರೇಷ್ಠ ಗಾಂಧೀವಾದಿಗಳಾದ ಸರ್ವಶ್ರೀ ಮೊರಾರ್ಜಿ ದೇಸಾಯಿ, ವೈಕುಂಠಲಾಲ ಮೆಹತಾ, ಅಣ್ಣಾಸಾಹೇಬ ಸಹಸ್ರಬುದ್ದೆ, ಅಪ್ಪಾಸಾಹೇಬ ಪಟವರ್ಧನ, ಶ್ರೀ ಹುಕ್ಕೇರಿಕರ ಇವರೇ ಮೊದಲಾದವರು ಯೋಚಿಸಿ ಈ ರಾಜ್ಯದ ಕೆಲವು ಕ್ಷೇತ್ರಗಳಲ್ಲಿಯಾದರೂ ಗಾಂಧೀ ಕಾರ್ಯಕ್ರಮವನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ತರಬೇಕೆಂದು ನಿರ್ಣಯಿಸಿ ರಾಜ್ಯಮಟ್ಟದ ಒಂದು ಸರ್ವೋದಯ ಸಮಿತಿಯನ್ನು ಶ್ರೀ ಮೊರಾರ್ಜಿ ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ರಚಿಸಿದರು. ರಾಜ್ಯದ ಕೆಲವು ಜಿಲ್ಲೆಗಳಲ್ಲಿಯ ತೀರ ಹಿಂದುಳಿದ ಭಾಗವನ್ನು ತೆಗೆದುಕೊಂಡು ಅಲ್ಲಿ ಈ ಕಾರ್ಯಕ್ರಮದ ಪ್ರಯೋಗವನ್ನು 27 ಜಿಲ್ಲೆಗಳಲ್ಲಿ ಮಾಡಬೇಕೆಂದು ನಿರ್ಧರಿಸಿದರು. ಈ ಯೋಜನೆಗೆ ಸರ್ವೋದಯ ಯೋಜನೆ ಎಂದು ನಾಮಕರಣ ಮಾಡಲಾಯ್ತು

**ಸರ್ವೋದಯದ ಹುಟ್ಟು** : ಮಹಾತ್ಮಾ ಗಾಂಧೀಯವರು ದಕ್ಷಿಣ ಆಫ್ರಿಕೆಯಲ್ಲಿದ್ದಾಗಿನ ಸಂಗತಿ. ಜಾನ್ ರಸ್ಕಿನ್ ಬರೆದ Unto this Last (ಕೊನೆಯವನಿಗೆ ಮೊದಲು ಅಥವಾ ಅಂತ್ಯೋದಯ) ಎಂಬ ಹೊತ್ತಿಗೆ ಓದಿ ತುಂಬಾ ಪ್ರಭಾವಿತರಾದರು. ಅದನ್ನು ಗುಜರಾತಿ ಭಾಷೆಯಲ್ಲಿ ಭಾಷಾಂತರಿಸಿ ಅದಕ್ಕೆ ಸರ್ವೋದಯ ಎಂದು ನಾಮಕರಣ ಮಾಡಿದರು.

ಈ ಸಿದ್ಧಾಂತದ ಮೂಲ ತತ್ವಗಳು ಮೂರು :

1. **ಎಲ್ಲರ ಹಿತದಲ್ಲಿಯೇ ನನ್ನ ಹಿತವೂ ಅಡಕವಾಗಿದೆ** : ನನಗೆ ಒಂದು ಕೊಡ ನೀರು ಬೇಕಾದರೆ ಊರಲ್ಲಿ ಒಂದು ಬಾವಿ ತೋಡಿ ಅಥವಾ ಬೋರು ಹಾಕಿದರೆ ಎಲ್ಲರ ಸಂಗಡ ನನಗೂ ನೀರು ದೊರೆಯುವದು.

2. **ಸಮಾಜದಲ್ಲಿ ಮೇಲು ಕೀಳು ಎಂಬ ಭಾವನೆಯಿಲ್ಲ, ಎಲ್ಲರ ದರ್ಜೆ ಸಮಾನ** : ಓರ್ವ ವಕೀಲ ಅಥವಾ ಡಾಕ್ಟರ್ ಮತ್ತು ಓರ್ವ ನಾಪಿತ ಅಥವಾ ಭಂಗಿ ಇವರ ಕಾರ್ಯ ಭಿನ್ನ ಇದ್ದರೂ ಸಮಾಜದಲ್ಲಿ ಅವರ ದರ್ಜೆ ಸರಿಸಮಾನ.

3. ಶ್ರಮದ ಕೆಲಸ ಅತ್ಯಂತ ಶ್ರೇಷ್ಠ : ಹೊಲ ಸಾಗುವಳಿ ಮಾಡುವ ಒಕ್ಕಲಿಗ ಅಥವಾ ಕೂಲಿ ದುಡಿದು ಶ್ರಮ ಮಾಡುವವ ಇವರ ಕಾರ್ಯ ಶ್ರೇಷ್ಠವಾದದ್ದು.

ಈ ತತ್ವಗಳನ್ನು ತಕ್ಷಣದಿಂದ ಕಾರ್ಯರೂಪದಲ್ಲಿ ತರಲು ಗಾಂಧೀಜಿ ಪ್ರಾರಂಭಿಸಿದರು.

ನಮ್ಮ ಸರ್ವೋದಯ ಯೋಜನೆಯ ಮೂಲ ಕಾರ್ಯವೆಂದರೆ ಗಾಂಧೀಪ್ರಣೀತ ವಿಧಾಯಕ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವದು.

ಅ. ವಿಧಾಯಕ ಕಾರ್ಯಕ್ರಮಗಳು :

1. ಖಾದಿ ಗ್ರಾಮೋದ್ಯೋಗ
2. ಅಸ್ಪೃಶ್ಯತಾ ನಿವಾರಣೆ
3. ಜಾತೀಯ ಐಕ್ಯ
4. ಹಿಂದು ಮುಸ್ಲಿಂ ಸದ್ಭಾವನೆ
5. ಸ್ತ್ರೀ ಸಂಘಟನೆ
6. ಮೂಲ ಶಿಕ್ಷಣ
7. ಪ್ರೌಢ ಮತ್ತು ಬಾಲ್ಯ ಶಿಕ್ಷಣ
8. ರೈತ ಕೂಲಿಕಾರ ಸಂಘಟನೆ
9. ಸ್ವದೇಶಿ ಪ್ರಚಾರ
10. ಶರೀರ ಶ್ರಮಕ್ಕೆ ಪ್ರಾಧಾನ್ಯತೆ
11. ಉಚ್ಚ ವಿಚಾರ ಸಾದಾ ಜೀವನ
12. ಗ್ರಾಮ ಸ್ವಾವಲಂಬನೆ
13. ನ್ಯಾಯದಾನ - (ಕೋರ್ಟಿಗೆ ಹೋಗದೆ)

ಇವುಗಳನ್ನು ಕಾರ್ಯರೂಪದಲ್ಲಿ ತರಲು ಸ್ವಂತ ಪರಿಶ್ರಮ, ಸತ್ಯಾಗ್ರಹ, ಉಪವಾಸ ಯಾವುದೇ ಪರಿಸ್ಥಿತಿಯಲ್ಲಿ ಅಹಿಂಸೆಯ ಮಾರ್ಗಗಳನ್ನು ಅನುಸರಿಸಬೇಕು. ಹಿಂಸೆಗೆ ಎಂದಿಗೂ ಆಸ್ಪದವಿಲ್ಲ. ಬೆಂಕಿ ಹಚ್ಚುವದು, ಕಲ್ಲು ತೂರಾಟ ಇವುಗಳು ವರ್ಜ್ಯ. ಅತ್ಯಂತ ಶಾಂತರೀತಿಯಿಂದ ಸತ್ಯಾಗ್ರಹ. ಅವಶ್ಯ ಬಿದ್ದರೆ ಪಿಕೆಟಿಂಗ್ ಕಾಯ್ದೆ ಭಂಗ ಅದು ಸವಿನಯವಿರಬೇಕು.

ಇಂಥ ಗಾಂಧೀ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿಯೇ ಮುಂಬೈ ರಾಜ್ಯದ 27 ಜಿಲ್ಲೆಗಳ ನಿರ್ದಿಷ್ಟ ಕ್ಷೇತ್ರಗಳಲ್ಲಿ ಸರ್ವೋದಯ ಯೋಜನೆ ಪ್ರಾರಂಭವಾಯ್ತು. (1948).

ಹಾಗೆ ಆಗಿನ ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿಯೂ ಈ ಕಾರ್ಯದ ಶುಭಾರಂಭ. ಜಿಲ್ಲೆಗೆ ಒಬ್ಬ ಗಾಂಧೀವಾದಿ ಸಂಚಾಲಕನನ್ನು ನೇಮಿಸುವದು. ಆತ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತರಲು ತನ್ನ ಬಜೆಟ್ ಕೊಟ್ಟು ಅವಶ್ಯವಿದ್ದ ಸಿಬ್ಬಂದಿ ನೇಮಿಸುವದು. ಇದೆಲ್ಲ ಸರಕಾರದ ಮಂಜೂರಿಯಿಂದ ಆಗತಕ್ಕದ್ದು. ಹಾಗೆ ಕೆಳಗಿನಂತೆ ಕಾರ್ಯದ ಪ್ರಾರಂಭ

| | |
|---|---|
| ಧಾರವಾಡ ಜಿಲ್ಲೆ ಸಂಚಾಲಕ | ಶ್ರೀ ಎಸ್.ಕೆ. ಕಲ್ಲಾಪುರ |
| ಬೆಳಗಾವಿ ಜಿಲ್ಲೆ ಸಂಚಾಲಕ | ಶ್ರೀ ಶ್ರೀರಂಗ ಕಾಮತ |
| ಕಾರವಾರ ಜಿಲ್ಲೆ ಸಂಚಾಲಕ | ಶ್ರೀವಾಮನ ಅನಂತ ಹೊದಿಕೆ |
| ವಿಜಾಪುರ ಜಿಲ್ಲೆ ಸಂಚಾಲಕ | ಶ್ರೀ ಗುರುರಾವ ಜೋರಾಪುರ |

ಹೀಗೆ ಈ ಯೋಜನೆಯ ಶ್ರೀ ಗಣೇಶಾಯನಮಃ ಆಯಿತು.

**ಧಾರವಾಡ ಜಿಲ್ಲೆ :** ಧಾರವಾಡ ತಾಲೂಕಿನ ಅತ್ಯಂತ ಹಿಂದುಳಿದ ಮಲೆನಾಡುಭಾಗದ 44 ಗ್ರಾಮಗಳನ್ನು (ಯಾದಿ ಕೊನೆಗೆ ಕೊಟ್ಟಿದೆ) ಆಯ್ದು ಅಲ್ಲಿ ಈ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತರಬೇಕೆಂದು ಗೊತ್ತಾಯ್ತು.

ಈ ಕಾರ್ಯದ ಶ್ರೀ ಗಣೇಶಾಯನಮಃ ಆದದ್ದು ಅರವಟಿಗೆ ಗ್ರಾಮದಲ್ಲಿ. ಅಲ್ಲಿ ಹೆಸರಿಗೆ ಮಾತ್ರ 15-20 ಜನಸಂಖ್ಯೆ ಇತ್ತು. ಅಪಾರ ಭೂಮಿ ಪಡ ಬಿದ್ದಿತ್ತು. ಮಲೇರಿಯಾ ಬೇರೆ ಹಬ್ಬಿತ್ತು. ಅಲ್ಲಿ ವಸಾಹತು ಯೋಜನೆಯಿಂದ ಪ್ರಾರಂಭ. ಸುತ್ತಮುತ್ತಲೂ ಇದ್ದ ನಿರ್ಗತಿಕರನ್ನು ತರಲಾಯ್ತು. ಅವರ ಸಲುವಾಗಿ ಒಂದು ಹೌಸಿಂಗ್ ಸೊಸೈಟಿ ಸ್ಥಾಪಿಸಿ ತನ್ಮೂಲಕ 18 ಮನೆಗಳನ್ನು ಕಟ್ಟಿಸಿಕೊಡಲಾಯ್ತು. ಅವರಿಗೆ ಸಾಗುವಳಿ ಮಾಡಲು ಪ್ರಾರಂಭದಲ್ಲಿ ಆರು ಕಾರ್ಯಕರ್ತರನ್ನು ನೇಮಿಸಲಾಯ್ತು. ಈ ಕಾರ್ಯದ ಸಂಪೂರ್ಣ ಸಂಘಟನೆ ಮಾಡುವದಲ್ಲದೆ ಅಲ್ಲಿ ಮಕ್ಕಳ ಶಿಕ್ಷಣ, ಬಾಲವಾಡಿ, ಔಷಧೋಪಚಾರ ಮುಂತಾದ ಕಾರ್ಯಕ್ರಗಳನ್ನೂ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ನರಸಿಂಹ ದಾಬಡೆ ಅವರನ್ನು ಇದರ ಪ್ರಚಾರಕ ಮತ್ತು ಸಂಘಟಕ ಎಂದು ನೇಮಿಸಲಾಯ್ತು. ಆಗ ಎಸ್. ಕೆ. ಕಲ್ಲಾಪುರ ಅವರು ಜಪಾನಕ್ಕೆ ಹೋಗುವ ಸಂದರ್ಭ ಬಂದ ಕಾರಣ ಅವರು ದಾಬಡೆ ಅವರಿಗೆ ಸಂಚಾಲಕತ್ವದ ಹೊಣೆ ಹೊರಿಸಿ ಹೋದರು.

ದಾಬಡೆ ಅವರು ಅಧಿಕಾರಕ್ಕೆ ಬಂದ ಕೂಡಲೇ ಎಲ್ಲದಕ್ಕೂ ಮೊಟ್ಟ ಮೊದಲು ಮಾಡಿದ ಕೆಲಸವೆಂದರೆ ಧಾರವಾಡದಲ್ಲಿದ್ದ ಕೇಂದ್ರ ಕಛೇರಿಯನ್ನು ಅರವಟಿಗೆಗೆ ಸ್ಥಳಾಂತರಿಸಿದ್ದು ಮತ್ತು ಈ ಕೆಳಗಿನ ಉಪಕೇಂದ್ರಗಳನ್ನು ಪ್ರಾರಂಭಿಸಿದ್ದು.

1. ಅರವಟಿಗೆ ಮುಖ್ಯ ಕೇಂದ್ರ
2. ಮಂಡಿಹಾಳ ಉಪಕೇಂದ್ರ

3. ಕುಂಬಾರಕೊಪ್ಪ ಉಪಕೇಂದ್ರ
4. ಕಡಬಗಟ್ಟಿ ಉಪಕೇಂದ್ರ
5. ನಿಗದಿ ಉಪಕೇಂದ್ರ
6. ಹೊಲ್ತೀಕೋಟಿ ಉಪಕೇಂದ್ರ
7. ಲಾಳಗಟ್ಟಿ ಉಪಕೇಂದ್ರ
8. ಅಳ್ನಾವರ ಉಪಕೇಂದ್ರ

ಹೀಗೆ ಕಾರ್ಯಕರ್ತರ ಸಂಖ್ಯೆಯೂ ಬೆಳೆಯಿತು. ಎಲ್ಲ ಕೇಂದ್ರ, ಉಪಕೇಂದ್ರಗಳಲ್ಲಿ ಈ ಕೆಳಗಿನಂತೆ ನಿತ್ಯ ಕಾರ್ಯಕ್ರಮಗಳು ಪ್ರಾರಂಭವಾದ ಮೇಲೆ ಎಲ್ಲ ಕಾರ್ಯಕರ್ತರೂ ಸಂಪೂರ್ಣ ಖಾದಿಧಾರಿಗಳಾದರು.

| | |
|---|---|
| ಪ್ರಾರ್ಥನೆ | ಬೆಳಿಗ್ಗೆ 6-00 |
| ಶರೀರ ಶ್ರಮ | 6-30 ರಿಂದ 7-30 |
| ಕಛೇರಿ ಕೆಲಸ | 10 ರಿಂದ 1 |
| ಸೂತ್ರ ಯಜ್ಞ | 3 ರಿಂದ 4 |
| ಕಛೇರಿ ಕೆಲಸ | 4 ರಿಂದ 6 |
| ಪ್ರಾರ್ಥನೆ | ಸಂಜೆ 6 ಗಂಟೆಗೆ |

ಹೀಗೆ ಶಿಸ್ತಿನಿಂದ ಕಾರ್ಯಕ್ರಮಗಳು ಪ್ರಾರಂಭವಾದವು.

**ವಸಾಹತು ಯೋಜನೆ :** ಅರವಟಿಗೆಗೆ ಬಂದ ಜನರ ಸಲುವಾಗಿ ಒಂದು ವಸಾಹತು ಯೋಜನೆಯನ್ನು ಸರಕಾರದಿಂದ ಮಂಜೂರು ಮಾಡಿಸಿ ಸ್ಥಾನಿಕ ಟೆನೆಂಟ್ ಫಾರ್ಮಿಂಗ್ ಸೊಸೈಟಿಯ ಮೂಲಕ ಅದರ ಕಾರ್ಯಚರಣೆ ಪ್ರಾರಂಭವಾಯ್ತು. ಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ಸೊಸೈಟಿಗೆ ಒಪ್ಪಿಸಲಾಯ್ತು. ಸಾವಕಾಶವಾಗಿ ಭೂಮಿ ಸಾಗುವಳಿಯಾಗಹತ್ತಿತು. ಜನರು ಬರಹತ್ತಿದರು, ಗ್ರಾಮ ಬೆಳೆಯಹತ್ತಿತು. ಇದಕ್ಕೆಲ್ಲ ಸಂಚಾಲಕರ ನೇತೃತ್ವವೇ ಕಾರಣವಾಗಿತ್ತು.

ಇದೇ ಸಮಯಕ್ಕೆ ಧಾರವಾಡದ ಹಳ್ಯಾಳ ರಸ್ತೆ ಮೇಲಿರುವ ಹೊಲ್ತೀಕೋಟೆ ಎಂಬ ಬೇಚಿರಾಕ ಗ್ರಾಮವನ್ನು ಆಯ್ದು ಅಲ್ಲಿಯ ಮೂಲ ನಿವಾಸಿಗಳನ್ನು ಸುತ್ತಲಿನ ಗ್ರಾಮದಿಂದ ತರಲಾಯ್ತು. ಆ ಊರು ಪೂರ್ತಿ ಬೇಚಿರಾಕ, ಒಬ್ಬ ಮನುಷ್ಯನೂ ಇರಲಿಲ್ಲ. ಒಂದು ಇಂಚೂ ಸಾಗುವಳಿ ಭೂಮಿ ಇರಲಿಲ್ಲ.

ಈ ಬಗ್ಗೆ 1950 ರಲ್ಲಿ ಅರವಟಗೆಯಲ್ಲಿ ಒಂದು ಪತ್ರಿಕಾ ಗೋಷ್ಠಿಯನ್ನು ಕರೆಯಲಾಗಿತ್ತು. ಪ್ರತಿನಿಧಿಗಳು ಪ್ರತ್ಯಕ್ಷವಾಗಿ ರೈತರು ಸಾಗುವಳಿ ಮಾಡಿದ ಹೊಲಗಳಲ್ಲಿ ಅಡ್ಡಾಡಿದರು. ಅಲ್ಲಿಯೇ ಒಬ್ಬ ರೈತನಿಗೆ ಒಂದು ಎಕರೆಯಂತೆ 20 ಎಕರೆ ಭೂಮಿಯಲ್ಲಿ ಬೆಳೆಸಿದ ಕಬ್ಬಿನ ಬೆಳೆಯನ್ನು ನೋಡಿ ಸಂತೋಷಪಟ್ಟರು. ಈ ಗೋಷ್ಠಿಗೆ ಆಕಾಶವಾಣಿ ಧಾರವಾಡ ಕೇಂದ್ರದ ಮುಖ್ಯ ಅಧಿಕಾರಿಗಳೂ ಬಂದಿದ್ದರು.

ಹೊಲ್ತೀಕೋಟೆಯಲ್ಲಿಯೂ ಒಂದು ವಸಾಹತು ಯೋಜನೆ ಮಂಜೂರು ಮಾಡಿ ಅಲ್ಲಿಯೂ ಒಂದು ಟೆನೆಂಟ್ ಫಾರ್ಮಿಂಗ್ ಸೊಸೈಟಿ ಸ್ಥಾಪಿಸಿ ತನ್ಮೂಲಕ ಸಾಗುವಳಿ ಮತ್ತಿತರ ಚಟುವಟಿಕೆಗಳು ಪ್ರಾರಂಭವಾದವು.

ಈ ಭಾಗಗಳಲ್ಲಿ ಖಾಸಗಿ ಭೂಮಿ, ಸರಕಾರಿ ಭೂಮಿ, ಫಾರೆಸ್ಟ್ ಭೂಮಿ ಎಲ್ಲಾ ಪಡ ಬಿದ್ದಿತ್ತು. ಖಾಸಗಿ ಭೂಮಿಯನ್ನು ಆಯಾ ಮಾಲೀಕರಿಂದ 30 ವರ್ಷ ಲೀಜ್ ಮೇಲೆ ಬರೆಯಿಸಿಕೊಳ್ಳಲಾಯ್ತು. ಅಲ್ಲಿಗೆ ಬಂದ ರೈತರಿಗೆ ಭೂಮಿಯನ್ನು ಕೊಟ್ಟಿದ್ದಲ್ಲದೆ ಸಾಗುವಳಿಗೆ ಬೇಕಾಗುವ ಎಲ್ಲ ಸವಲತ್ತುಗಳನ್ನೂ ಸೊಸೈಟಿ ಮೂಲಕ ಕೊಡಲಾಯ್ತು.

ಹೀಗೆ ಎರಡು ವಸಾಹತು ಯೋಜನೆಗಳು ಒಂದು ಅರವಟಗೆಯಲ್ಲಿ, ಇನ್ನೊಂದು ಹೊಲ್ತೀಕೋಟೆಯಲ್ಲಿ ಪ್ರಾರಂಭವಾದವು. ಒಂದು ವಿಧವಾಗಿ ಇದೇ ಇಲ್ಲಿಯ ಸರ್ವೋದಯ ಯೋಜನೆಯ ಪ್ರಮುಖ ಕಾರ್ಯಕ್ರಮವೆಂದರೆ ತಪ್ಪಾಗಲಿಕ್ಕಿಲ್ಲ.

ಸರ್ವೋದಯದ ಸಲಹಾಸಮಿತಿ ಸದಸ್ಯರು :

1. ಬುರ್ಲಿ ಬಿಂದುಮಾಧವ
2. ಡಿ. ಎನ್. ಚಂದಾವರಕರ
3. ಫಕೀರಪ್ಪ ಕಟ್ನೂರ
4. ಮುಕ್ತುಂ ಸಾಹೇಬ ಮಂಡ್ಯಾಳ
5. ನರಸಿಂಹ ದಾಬಡೆ

ತಿಂಗಳಿಗೊಮ್ಮೆ ಸೇರಿ ಕಾರ್ಯದ ಪ್ರಗತಿಯ ಪರಿಶೀಲನೆ ಮಾಡುವದು, ಸಲಹೆ ಸೂಚನೆ ಕೊಡುವದು ಇದರ ಕೆಲಸ.

ಇದರ ಪರಿಣಾಮ ಸುತ್ತಲಿನ ಗ್ರಾಮಗಳಲ್ಲಿ ಆಯಿತು. ಅರವಟಗೆ ಪಕ್ಕದಲ್ಲಿ ಕುಂಬಾರಕೊಪ್ಪ ಎಂಬ ಗ್ರಾಮವಿದ್ದು ಅಲ್ಲಿಯೂ ಕೆಲ ಪಡ ಭೂಮಿ ಇತ್ತು. ಅಲ್ಲಿ ಒಂದು ಟೆನೆಂಟ್ ಫಾರ್ಮಿಂಗ್ ಸೊಸೈಟಿ ಸ್ಥಾಪಿಸಿ ಸಾಗುವಳಿ ಪ್ರಾರಂಭವಾಯ್ತು. ಇದಕ್ಕೆ ಸರಕಾರದ ಬೇರೆ ಸಹಾಯವಿರಲಿಲ್ಲ. ಅದರಂತೆ ಮಂಡಿಹಾಳ ಪಕ್ಕದಲ್ಲಿ ನಾಗಲಾವಿ ಎಂಬ ಬೇಚಿರಾಕ

ಗ್ರಾಮವಿದ್ದು ಅಲ್ಲಿಯೂ ಒಂದು ಟೆನೆಂಟ್ ಫಾರ್ಮಿಂಗ್ ಸೊಸೈಟಿ ಸ್ಥಾಪಿಸಿ ತನ್ಮೂಲಕ ಸಾಗುವಳಿ ಕೆಲಸ ಪ್ರಾರಂಭ ಮಾಡಲಾಯಿತು. ಹೀಗೆ ಇಲ್ಲಿಯ ಪಡ ಭೂಮಿ ಸಾವಕಾಶವಾಗಿ ಫಲ ಕೊಡಹತ್ತಿತು. ಅಲ್ಲಲ್ಲಿ ಕೆರೆ, ಕಾಲುವೆಗಳು ಆದವು. ಹೀಗೆ ಇದರ ಒಟ್ಟು ಪರಿಣಾಮವನ್ನು ತೆಗೆದರೆ ಸುಮಾರು 2000 ಎಕರೆ ಪಡಭೂಮಿ ಸಾಗುಮಾಡಲಾಯಿತೆಂದು ಹೇಳಬಹುದು.

ಇದರಂತೆಯೇ ಇನ್ನೊಂದು ಮಹತ್ವದ ಕಾರ್ಯವೆಂದರೆ ಕೂಲಿಕಾರರ ಸಂಘಟನೆ.

**ಫಾರೆಸ್ಟ್ ಲೇಬರ್ ಸೊಸೈಟಿ :** ಮೊಟ್ಟಮೊದಲು ಇದನ್ನು ಅಳ್ನಾವರದಲ್ಲಿ ಸ್ಥಾಪಿಸಲಾಯ್ತು. ಆಗಿನ ಮುಂಬೈ ಸರಕಾರವು ಇದಕ್ಕೆ ಸಾಕಷ್ಟು ಉತ್ತೇಜನ ಕೊಡುತ್ತಲಿತ್ತು. ಈ ಸೊಸೈಟಿಗಳಿಗೆ ಕೊಡಬೇಕಾದ ಅರಣ್ಯ (ಅದಕ್ಕೆ ಕೂಪ ಎಂಬ ಹೆಸರು) ಲಿಲಾವು ಮಾಡದೇ ಒಂದು ಬೆಲೆ ನಿರ್ದಿಷ್ಟ ಮಾಡಿ (ಅಷ್ಟಕ್ಕೆ) ಸಂಘಗಳಿಗೆ ಕೊಡಲಾಗುತ್ತಿತ್ತು ಮತ್ತು ಆ ಹಣವನ್ನು ಸಾವಕಾಶವಾಗಿ ಕಂತುಗಳ ಮೂಲಕ ವಸೂಲು ಮಾಡಲಾಗುತ್ತಿತ್ತು. ಹೀಗೆ ಈ ಸಂಘಗಳು ಧಾರವಾಡ ಮತ್ತು ಕಾರವಾರ ಜಿಲ್ಲೆಯಲ್ಲಿಯೇ ಬೆಳೆದವು. ಈ ನಮ್ಮ ಯೋಜನೆಯಡಿಯಲ್ಲಿ ಕೆಳಗಿನ ಸೊಸೈಟಿಗಳು ಅಸ್ತಿತ್ವದಲ್ಲಿ ಬಂದವು.

1. ಅಳ್ನಾವರ ಫಾ. ಲೇ. ಸೊಸೈಟಿ
2. ಧಾರವಾಡ ಗೊಂದಲಿಗರ ಫಾ. ಲೇ. ಸೊಸೈಟಿ
3. ಕಲಘಟಗಿಯಲ್ಲಿ ಲಮಾಣಿಗರ ಫಾ. ಲೇ. ಸೊಸೈಟಿ
4. ಧುಂಡಸಿ ಲಮಾಣಿಗರ ಫಾ. ಲೇ. ಸೊಸೈಟಿ
5. ಹಳ್ಯಾಳದ ಫಾ. ಲೇ. ಸೊಸೈಟಿ

ಹೀಗೆ ಐದು ಅಡವಿ ಕೂಲಿಕಾರರ ಸಂಘಗಳು ಕಾರ್ಯ ಮಾಡಹತ್ತಿದವು. ಅಡವಿಯಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಅಲ್ಲಿ ವಾಸ ಮಾಡಲು ಸ್ಥಳ, ಕುಡಿಯುವ ನೀರು ಮತ್ತಿತರ ಸವಲತ್ತುಗಳನ್ನು ಮಾಡಲಾಗುತ್ತಿತ್ತು. ಸರಕಾರಿ ಅಧಿಕಾರಿಗಳೂ ತುಂಬಾ ನೆರವಾಗುತ್ತಿದ್ದರು. ಈ ಸಂಘಟನೆಯಲ್ಲಿ ಹೆಚ್ಚು ಸಹಾಯ ಮಾಡಿದವರೆಂದರೆ ಅಳ್ನಾವರದ ಬಾಬುರಾವ ಬಡಾಸ್ಕರ ಮತ್ತು ಹಳ್ಯಾಳದ ಬಾರ್ಬೋಜಾ ಎಂಬವರು.

1955ರಲ್ಲಿ ಅಳ್ನಾವರದಲ್ಲಿ ಕರ್ನಾಟಕ ಅರಣ್ಯ ಕೂಲಿಕಾರರ ಸಮ್ಮೇಳನವನ್ನು ಸೇರಿಸಿ, ಅಂದಿನ ಮೈಸೂರು ರಾಜ್ಯದ ಅರಣ್ಯ ಇಲಾಖೆಯ ಮಂತ್ರಿ ಶ್ರೀ ರುದ್ರಪ್ಪ ಇವರನ್ನು ಉದ್ಘಾಟಿಸಲು ಕರೆಯಲಾಗಿತ್ತು. ಮುಂಬೈ ರಾಜ್ಯದ ಉಪಮಂತ್ರಿಗಳಾದ ಶ್ರೀ ವಾಂದ್ರೇಕರರವರೂ ಬಂದಿದ್ದರು. ಇದರ ಮುಖ್ಯ ಉದ್ದೇಶವೆಂದರೆ ಹೊಸದಾಗಿ ಸ್ಥಾಪಿತವಾಗಲಿರುವ ಮೈಸೂರು ರಾಜ್ಯದಲ್ಲಿ ಈ ಸಂಘಟನೆ ನಡೆಯಬೇಕೆಂಬುದೇ ಆಗಿತ್ತು. ಈ ಸಮ್ಮೇಳನಕ್ಕೆ ಧಾರವಾಡ, ಕಾರವಾರ,

ಬೆಳಗಾವಿಯಿಂದ ಪ್ರತಿನಿಧಿಗಳು ಬಂದಿದ್ದರು. ಈ ಪ್ರದರ್ಶನವನ್ನು ಪ್ರೊ. ಮಾಳವಾಡ ಅವರು ಉದ್ಘಾಟಿಸಿದರು. ಪ್ರದರ್ಶನದಲ್ಲಿ ಹೆಚ್ಚಾಗಿ ಅಡವಿಯಲ್ಲಿ ದೊರೆಯುವ ಪದಾರ್ಥಗಳು ಮತ್ತು ಕೂಲಿ ಕೆಲಸ ಮಾಡುವ ಲಮಾಣಿಗರ ವೇಷ-ಭೂಷಣಗಳನ್ನು ಪ್ರದರ್ಶಿಸಲಾಗಿತ್ತು.

ಸಮ್ಮೇಳನದ ಮುಖ್ಯ ಉದ್ದೇಶವೆಂದರೆ ಈ ಯೋಜನೆಯನ್ನು ಮೈಸೂರು ಸರಕಾರದವರೂ ಮುಂದುವರಿಸಬೇಕೆಂಬುದಾಗಿತ್ತು.

ಅಡವಿ ಕೂಲಿಕಾರರ ಯೋಜನೆಯ ಸ್ಪಷ್ಟೀಕರಣ ಮಾಡಲು ಒಮ್ಮೆ 1954ರಲ್ಲಿ ದಟ್ಟಡವಿಯಲ್ಲಿ ಪತ್ರಿಕಾ ಗೋಷ್ಠಿಯನ್ನು ಕರೆಯಲಾಗಿತ್ತು. ಅನೇಕ ಪ್ರತಿನಿಧಿಗಳು ಬಂದು ತಮ್ಮ ವರದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು.

**ಶ್ರಮದಾನ ಅಥವಾ ಶರೀರ ಶ್ರಮ :** ಈ ಕಾರ್ಯಕ್ಕೆ ಅಗ್ರಸ್ಥಾನ ಕೊಡಲಾಗಿತ್ತು. ನಿತ್ಯ ಕಾರ್ಯಕರ್ತರು ಒಂದು ಗಂಟೆ ತಪ್ಪದೇ ಶರೀರ ಶ್ರಮದ ಕಾರ್ಯವನ್ನು ಮಾಡುತ್ತಲಿದ್ದರು. ಅರವಟಿಗೆ ಗ್ರಾಮದಲ್ಲಿ ಇದರ ಪರಿಣಾಮ ಎದ್ದು ಕಾಣುತ್ತಲಿತ್ತು. ಅರವಟಿಗೆ ಕೇಂದ್ರ ಕಛೇರಿಯ ಪಕ್ಕಕ್ಕೆ ಗುಡ್ಡ ಅಂಟಿಕೊಂಡಿತ್ತು. ಕೆಲವು ದಿನಗಳ ಮೇಲೆ ನೋಡಲು ಅದು 10 ಫೂಟು ದೂರ ಸರಿದಿತ್ತು. ಕಛೇರಿಗೆ ಮಳೆಗಾಲದಲ್ಲಿ ಹೋಗುವುದೇ ದುಸ್ತರವಾಗಿತ್ತು. ಅಲ್ಲಿ ಹೋಗಲು ರಸ್ತೆ, ನೀರು ಹರಿಯಲು ಕಾಲುವೆ, ಧ್ವಜಾರೋಹಣಕ್ಕೆ ಬಯಲು ಸಿದ್ಧವಾಯಿತು. ಚಿಕ್ಕ ಕಚ್ಚಾ ಪೂಲುಗಳನ್ನು ಕಟ್ಟಲಾಯಿತು. ಅರವಟಿಗೆಯಿಂದ ಕಂಬಾರಗಣವಿ ರೈಲು ನಿಲ್ದಾಣ 2 ಮೈಲು. ಆದರೆ ಕಂಟಿಯಲ್ಲಿಯೇ ಹೋಗಬೇಕಾಗುತ್ತಿತ್ತು. ಅಲ್ಲಿಗೆ ಹೋಗಲು ಕಚ್ಚಾ ರಸ್ತೆ ಮಾಡಲಾಯಿತಲ್ಲದೇ ಮಾರ್ಗದಲ್ಲಿ ಎರಡು ಚಿಕ್ಕ ಕಚ್ಚಾ ಪೂಲುಗಳನ್ನೂ ಮಾಡಲಾಯ್ತು. ಹೀಗೆ ಆ ಮಾರ್ಗ ಸರಳವಾಯ್ತು.

ಈ ಸಂದರ್ಭದಲ್ಲಿ ಕೆಲವು ಕಾನೂನು ಉಲ್ಲಂಘನೆಯ ಕಾರ್ಯಗಳೂ ಆದವು. ಅಂದರೆ ಮಾರ್ಗದಲ್ಲಿ ಬರುವ ಕೆಲವು ಗಿಡಗಳನ್ನು ಸರಕಾರದ ಒಪ್ಪಿಗೆ ಇಲ್ಲದೆ ಕಡಿಯಲಾಯ್ತು. ಈ ಬಗ್ಗೆ ಫಾರೆಸ್ಟ್ ಅಧಿಕಾರಿಗಳು ಸಂಚಾಲಕರ ಮೇಲೆ ಖಟ್ಲೆ ಹಾಕಿದರು. ಡಿ. ಎಫ್. ಓ. ಅವರ ಮುಂದೆ ಆ ಪ್ರಕರಣ ಬಂದಾಗ ಜನಹಿತದ ಸಲುವಾಗಿ ಮಾಡಿದ್ದು ಸ್ತುತ್ಯವೆಂದು ಅವರೇ ಹೇಳಿದರು. ಹೀಗೆ ಅಧಿಕಾರಿಗಳೂ ನಮ್ಮ ಕಾರ್ಯದಲ್ಲಿ ನೆರವಾಗುತ್ತಲಿದ್ದರು.

ಹೀಗೆ ಅನೇಕ ಚಿಕ್ಕ ಗ್ರಾಮಗಳಿಗೆ ಕೂಡಾ ಕಚ್ಚಾ ರಸ್ತೆ ಮಾಡಲಾಯ್ತು. ಹೊಲ್ತಿಕೋಟಿಯಿಂದ ಹಳ್ಯಾಳ ರಸ್ತೆವರೆಗೆ ಕಚ್ಚಾ ದಾರಿ ಮಾಡಲಾಯಿತಲ್ಲದೇ ಊರಲ್ಲಿ ಸಹ ವಿಶಾಲವಾದ ಮಾರ್ಗ ನಿರ್ಮಾಣ ಮಾಡಲಾಯ್ತು. ಇದರಂತೆ ಕಡಬಗಟ್ಟಿ, ಕುಂಬಾರಕೊಪ್ಪ, ಕೋಗಿಲಗೇರಿ, ಅಂಬೊಳ್ಳಿ, ನಾಗಲಾವಿ, ಲಾಳಗಟ್ಟಿ, ಸಲಕಿನಕೊಪ್ಪ ಇವುಗಳಿಗೆ ಕೂಡುದಾರಿ ಮಾಡಲಾಯ್ತು.

ಯಾವ ಸಭೆ, ಸಮ್ಮೇಳನವಾದರೂ ಪ್ರಾರಂಭದಲ್ಲಿ ಎಲ್ಲರೂ ಸೇರಿ ಒಂದು ಗಂಟೆ ಶರೀರ ಶ್ರಮ ಮಾಡಿಯೇ ಮುಂದಿನ ಕಾರ್ಯಕ್ರಮ ಪ್ರಾರಂಭವಾಗುತ್ತಲಿತ್ತು.

ಹೀಗೆ ಒಮ್ಮೆ ಕೇವಲ ಶರೀರ ಶ್ರಮದ ಬಗ್ಗೆಯೇ 15 ದಿವಸದ ಶಿಬಿರವನ್ನು ಸಂಘಟಿಸಲಾಗಿತ್ತು. ಶಿಬಿರದ ಎಲ್ಲ ಕೆಲಸಗಳನ್ನು ಅಂದರೆ ಕಸ ಗುಡಿಸುವುದು, ಸಾರಿಸುವದು, ಅಡಿಗೆ ಮಾಡುವದು, ಹಿಟ್ಟು ಬೀಸುವದು, ಭಾಂಡಿ ತೊಳೆಯುವದು ಈ ಎಲ್ಲ ಕೆಲಸಗಳನ್ನು ಸೇವಕರಿಲ್ಲದೇ ಶಿಬಿರವಾಸಿಗಳೇ ಮಾಡುತ್ತಿದ್ದರು. 25 ಶಿಬಿರವಾಸಿಗಳಿದ್ದರು. ಹಾಗೆ ಇದೊಂದು ಯಶಸ್ವಿಯಾದ ಶಿಬಿರವೆಂದು ಹೇಳಬಹುದು. ಅರವಟಿಗೆಯಲ್ಲಿ ಹದಿನೈದು ದಿನಗಳವರೆಗೆ ಶಿಬಿರ ನಡೆಯಿತು.

ಗಾಂಧೀ ಜಯಂತಿ ಮುಂತಾದ ದಿನಗಳನ್ನು ಆಚರಿಸುವಾಗ ಸಹ ಊರವರನ್ನು ಕೂಡಿಕೊಂಡು ಊರ ಮಾರ್ಗ ಹಸನು ಮಾಡುವದು, ಶಾಲೆ, ಬಾವಿ ಸುತ್ತಲೂ ಸ್ವಚ್ಛಮಾಡುವದು, ಗುಡಿ-ಗುಂಡಾರಗಳನ್ನು ನಿರ್ಮಲಗೊಳಿಸುವದು ಇತ್ಯಾದಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿತ್ತು.

ಶರೀರಶ್ರಮದ ಸಂಗಡವೇ ನಿತ್ಯ ಎರಡು ಹೊತ್ತು ಗಾಂಧೀಜೀಯವರ ಪ್ರಾರ್ಥನೆ ನಡೆಯುತ್ತಲಿತ್ತು. ಈ ಪ್ರಾರ್ಥನೆ ಸಂಸ್ಕೃತದಲ್ಲಿದ್ದು ಅದು ತಮಗೆ ಏನೂ ತಿಳಿಯುವದಿಲ್ಲವೆಂದು ಹಳ್ಳಿಯವರು ಹೇಳಿದಾಗ, ಆ ಇಡೀ ಸಂಸ್ಕೃತದ ಪ್ರಾರ್ಥನೆಯನ್ನು ಪದ್ಯರೂಪದಲ್ಲಿ ಕನ್ನಡಿಸಿ ಗ್ರಾಮಸ್ಥರಿಗೆ ಕೊಡಲಾಯ್ತು. ಅವರು ಭಕ್ತಿಯಿಂದ ಪ್ರಾರ್ಥನೆ ಮಾಡುತ್ತಲಿದ್ದರು.

**ಜನ ಸಂಪರ್ಕ :** ಗ್ರಾಮದಲ್ಲಿಯ ರೈತರ, ಕೂಲಿಕಾರರ ಹೆಚ್ಚು ಸಂಪರ್ಕ ಇಟ್ಟುಕೊಳ್ಳಲು ಪ್ರಯತ್ನ ಮಾಡಲಾಗುತ್ತಿತ್ತು. ಇದಕ್ಕಾಗಿ 1952-53 ಈ ಎರಡು ವರ್ಷ ಗಾಂಧೀಜಯಂತಿ ಸಮಯಕ್ಕೆ ಎಂಟು ದಿವಸದ ಪಾದಯಾತ್ರೆ ಇಟ್ಟು, ಇಡೀ ಸರ್ವೋದಯ ಕ್ಷೇತ್ರದಲ್ಲಿ ಕಾಲ್ನಡಿಗೆಯಿಂದ ಅಡ್ಡಾಡಿ ರಾತ್ರಿ ಒಂದು ಗ್ರಾಮದಲ್ಲಿ ಮುಕ್ಕಾಂ ಮಾಡಿ, ಬೆಳಿಗ್ಗೆ ಹಳ್ಳಿಗರನ್ನು ಕೂಡಿಕೊಂಡು 2 ತಾಸು ಶ್ರಮದ ಕೆಲಸ ಮಾಡಲಾಗುತ್ತಿತ್ತು. ಆಗ ಊರ ರಸ್ತೆ ಮಾಡುವದು, ಅತ್ಯಂತ ಹೊಲಸಾದ ಸ್ಥಳವನ್ನು ಶುಚಿಯಾಗಿಡುವದು, ಊರ ಕಸಗುಡಿಸುವದು ಇತ್ಯಾದಿ ಕೆಲಸಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಈ ಪಾದಯಾತ್ರೆಯಲ್ಲಿ 12 ಜನರು ಇರುತ್ತಿದ್ದರು ನಿತ್ಯ 8 ರಿಂದ 10 ಮೈಲು ನಡೆಯುತ್ತಿದ್ದರು. ಸಾಮಾನ್ಯವಾಗಿ ಕಾರ್ಯಕ್ರಮ ಹೀಗಿತ್ತು -

| | |
|---|---|
| ಬೆಳಿಗ್ಗೆ 5-6 | ಪ್ರಾತಃರ್ವಿಧಿ |
| 7:00 - 8.00 | ಶರೀರಶ್ರಮ |
| 8.00 - 9.00 | ಸ್ನಾನ |
| 9.00 | ಉಪಹಾರ |

9.30 - 11.00 ಹಳ್ಳಿಗರ ಸಮಸ್ಯೆಗಳ ವಿಚಾರ

1.00 ಊಟ, ವಿಶ್ರಾಂತಿ

4.00 ಮುಂದಿನ ಊರಿಗೆ ಪ್ರಯಾಣ

ರಾತ್ರಿ ಆ ಊರು ಮುಟ್ಟಿದ ಕೂಡಲೇ ಅಲ್ಲಿ ಒಂದು ಸಾರ್ವಜನಿಕ ಸಭೆ ಮಾಡಿ, ಹಳ್ಳಿಗರ ಸಮಸ್ಯೆಗಳ ಬಗ್ಗೆ ಚರ್ಚೆ ಮತ್ತು ಭೂದಾನ ಬೇಡಿಕೆ ಇಡಲಾಗುತ್ತಿತ್ತು. ಈ ಪಾದಯಾತ್ರೆಯಲ್ಲಿ 50 ಎಕರೆ ಭೂದಾನ ದೊರಕಿತ್ತು. ಹೀಗೆ ಜನ ಜಾಗೃತಿ ಮಾಡುವಲ್ಲಿ ಇದು ತುಂಬಾ ಉಪಯುಕ್ತವಾಗಿತ್ತು. ಹಳ್ಳಿಗರು ಭಕ್ತಿಯಿಂದ ಪಾದಯಾತ್ರಿಗಳಿಗೆ ಸ್ವಾಗತ ಮಾಡುತ್ತಿದ್ದರು.

ನ್ಯಾಯದಾನ : ಇದೂ ಒಂದು ಮಹತ್ವದ ಕಾರ್ಯಕ್ರಮವೇ ಆಗಿತ್ತು. ಗಂಡ-ಹೆಂಡತಿಯರ ಬಡಿದಾಟ, ಅತ್ತೆ-ಸೊಸೆಯರ ಜಗಳ, ಹಣ-ಭೂಮಿಯ ಜಗಳಗಳು ಇದರಲ್ಲಿ ಒಳಗೊಂಡಿದ್ದವು.

ಒಂದು ನ್ಯಾಯದಾನದ ರಜಿಸ್ಟರ್ ಮಾಡಿ ಅದರಲ್ಲಿ ನೋಂದಣಿ ಮಾಡಲಾಗುತ್ತಿತ್ತು. ಈ ನ್ಯಾಯವಿಚಾರ ಇದ್ದ ದಿವಸ ಆ ಊರ ಪಂಚರನ್ನು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ರಾತ್ರಿ 9 ಗಂಟೆಗೆ ಈ ಕಮೀಟಿ ಸೇರುವದು. ವಾದಿ, ಪ್ರತಿವಾದಿಗಳು ತಮ್ಮ ವಾದವನ್ನು ಮಂಡಿಸುತ್ತಲಿದ್ದರು. ಆ ಬಗ್ಗೆ ಪಂಚರೂ ತಮ್ಮ ವಿಚಾರ ಹೇಳುತ್ತಿದ್ದರು. ಮಹತ್ವದ ಮಾತೆಂದರೆ ಈ ಸಭೆ ರಾತ್ರಿ ಎಷ್ಟೋ ಸಲ 1 ಗಂಟೆಯವರೆಗೆ ನಡೆಯುತ್ತಿತ್ತು ಮತ್ತು ಸತ್ಯ ಸಂಗತಿ ಪ್ರತ್ಯಕ್ಷ ನಿದರ್ಶನಕ್ಕೆ ಬರುತ್ತಿತ್ತು.

ಚರ್ವಿತಚರ್ವಣವಾದ ನಂತರ ತಪ್ಪು ಮಾಡಿದವ ತಾನು ಮಾಡಿದ್ದನ್ನು ಒಪ್ಪುತ್ತಲಿದ್ದ. ಹೀಗೆ ಸತ್ಯಸಂಗತಿ ಸಭೆಯ ಮುಂದೆ ಬರುತ್ತಲಿತ್ತು. ಇನ್ನು ತಪ್ಪಿತಸ್ಥನಿಗೆ ಶಿಕ್ಷೆ ಕೊಡುವುದರ ಬಗ್ಗೆ ಪಂಚರು ವಿಚಾರಮಾಡಿ ನಿರ್ಣಯ ಕೊಡುತ್ತಲಿದ್ದರು. ಈ ಎಲ್ಲ ಕಾರ್ಯದಲ್ಲಿ ಸಂಚಾಲಕರು ಪಂಚರಿಗೆ ನೆರವಾಗುತ್ತಲಿದ್ದರು. ಶಿಕ್ಷೆಯ ನಮೂನೆಯೇನೆಂದರೆ,

1. ಶಾಲೆಯ ಕಟ್ಟಡದ ಸುತ್ತಲೂ ಹೊಲಸಿದ್ದುದನ್ನು, ಕಸ ಹುಲ್ಲುಗಳನ್ನು ತೆಗೆದು ಸ್ವಚ್ಛ ಮಾಡುವದು.
2. ಗುಡಿ, ಬಾವಿ ಸುತ್ತ ಹಸನು ಮಾಡುವದು.
3. ಊರ ರಸ್ತೆ ಗುಡಿಸುವದು
4. ಕಛೇರಿ ಸುತ್ತಲೂ ಹಸನು ಮಾಡುವದು

ಮುಂತಾದ ಶಿಕ್ಷೆ ಕೊಡಲಾಗುತ್ತಿತ್ತು. ಇದನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ತರಲಾಗುತ್ತಿತ್ತು.

ಕೆಲವು ಸಂದರ್ಭಗಳಲ್ಲಿ ಧಾರವಾಡದ ಕೋರ್ಟಿಗೆ ಹೋದ ನ್ಯಾಯಗಳನ್ನೂ ಅರವಟಿಗೆಗೆ ಕಳಿಸಲಾಗುತ್ತಿತ್ತು. ಸಾಮಾನ್ಯವಾಗಿ ಈ ನ್ಯಾಯದಾನ ಅರವಟಿಗೆ ಗ್ರಾಮದಲ್ಲಿ ಹೆಚ್ಚಾಗಿ ನಡೆಯುತ್ತಲಿತ್ತು.

ಜನಸಂಪರ್ಕ : ಇದೊಂದು ಅತ್ಯಂತ ಮಹತ್ವದ ಕಾರ್ಯಕ್ರಮ. ಊರಿನ ಎಲ್ಲ ಸಾರ್ವಜನಿಕ ಕೆಲಸಗಳಲ್ಲಿಯೂ ನಮ್ಮ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸುವರು. ಹೋಳಿ ಹಬ್ಬದಲ್ಲಿ ಊರವರ ಸಂಗಡವೇ ಹೋಳಿ, ಅವರೊಂದಿಗೇ ಬನ್ನಿ ಮುಡಿಯುವದು, ಊರ ಜಾತ್ರೆಯಲ್ಲಿ ಸಹ ನಮ್ಮ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಊರಲ್ಲಿ ದೊಡ್ಡಾಟ ಅಥವಾ ನಾಟಕವಾದರೆ ಅದರಲ್ಲಿಯೂ ನಮ್ಮ ಕಾರ್ಯಕರ್ತರ ಭಾಗವಿರುತ್ತಿತ್ತು. ಒಮ್ಮೆ ಅರವಟಿಗೆಯಲ್ಲಿ ಒಂದು ದೊಡ್ಡಾಟದಲ್ಲಿ ದಾಬಡೆಯವರ ಮಗ ಪ್ರಕಾಶ 10 ವರ್ಷದ ಬಾಲಕ ರಾಮನ ಪಾತ್ರ ವಹಿಸಿದ್ದರೆ, ನಮ್ಮ ಇನ್ನೊಬ್ಬ ಕಾರ್ಯಕರ್ತ ಆರ್. ಎಸ್. ಉಪಾಧ್ಯೆ ಮುಖ್ಯ ಪಾತ್ರವನ್ನು ವಹಿಸಿದ್ದ. ಇದರ ಮುಖ್ಯ ಪ್ರಭಾವವೆಂದರೆ ಅವರಿಗೇ ಬಿಟ್ಟರೆ ಅವರಲ್ಲಿ ಅನೇಕ ಅನಾಚಾರಗಳು, ಕುಡಿತ, ಸೇದುವದು ನಡೆಯುತ್ತಿದ್ದವಲ್ಲದೇ ಸಿಕ್ಕಲ್ಲಿ ಮಲಮೂತ್ರ ವಿಸರ್ಜನೆಯಾಗುತ್ತಲಿತ್ತು. ನಾವೆಲ್ಲರಿರುತ್ತಿದ್ದರಿಂದ ಇಂಥ ಕೆಟ್ಟ ಕೆಲಸಗಳು ಆಗುತ್ತಿರಲಿಲ್ಲ. ಅಲ್ಲದೆ ಈ ಎಲ್ಲ ಕಾರ್ಯಕ್ರಮಗಳು ಅತ್ಯಂತ ಶಿಸ್ತಿನಿಂದ ನಡೆಯುತ್ತಲಿದ್ದವು.

ಇದಲ್ಲದೆ ಸಂಚಾಲಕರು ನಿತ್ಯ 3-4 ಮನೆಗಳಿಗೆ ಹೋಗಿ ಅವರ ಸಂಗಡ ಅವರ ಮನೆತನದ ಎಲ್ಲ ವಿಷಯಗಳನ್ನು ಚರ್ಚಿಸುತ್ತಲಿದ್ದರು. ಇದರಿಂದ ಜನತಾ ಸಂಪರ್ಕ ಸಹಜವಾಗಿ ಆಗುತ್ತಲಿತ್ತು.

ಸಂಚಾಲಕರ ಮಗ (ಗೋಪಾಲ)ನ ಜಾವಳವನ್ನು 1956 ರಲ್ಲಿ ಅರವಟಿಗೆಯಲ್ಲಿ ಮಾಡಿದಾಗ ಅವರೇ ಸ್ವತಃ ಹೋಗಿ ಮನೆಗೊಬ್ಬರಂತೆ ಊಟಕ್ಕೆ ಆಮಂತ್ರಣ ಕೊಟ್ಟು ಬಂದರು. ಊರವರೆಲ್ಲ ಕುಟುಂಬ ಸಮೇತ ಊಟಕ್ಕೆ ಬಂದರು. ಈ ಪರಿಸ್ಥಿತಿಯಿಂದ ಹೇಗೋ ಭಗವಂತ ಪಾರು ಮಾಡಿದ.

ಹೀಗೆಯೇ ಕೆಲವು ಗ್ರಾಮಗಳಿಗೆ ಭೆಟ್ಟಿ ಕೊಟ್ಟಾಗ ಊರವರ ಸಂಗಡ ಒಂದೆರಡು ತಾಸು ಊರ ಸಮಸ್ಯೆಯ ಬಗ್ಗೆ ಚರ್ಚೆಯಾಗುತ್ತಲಿತ್ತು.

**ಮುಖಂಡರ ಭೆಟ್ಟಿ** : ಈ ಸರ್ವೋದಯ ಕ್ಷೇತ್ರವನ್ನು ನೋಡಲಿಕ್ಕೆಂದೇ ಅನೇಕ ಮುಖಂಡರು ಇಲ್ಲಿಗೆ ಬಂದು ಹೋದದ್ದುಂಟು. ಅವರಲ್ಲಿ ಪ್ರಮುಖರೆಂದರೆ,

1. ಶ್ರೀ ಮೊರಾರ್ಜಿ ದೇಸಾಯಿ
2. ಶ್ರೀ ಬಿ. ಜಿ. ಖೇರ
3. ಶ್ರೀ ಎಮ್. ಪಿ. ಪಾಟೀಲ
4. ಶ್ರೀ ಕೆ. ಎಫ್. ಪಾಟೀಲ

5. ಶ್ರೀ ವೈಕುಂಠ ಮೆಹತಾ
6. ಶ್ರೀ ಆರ್. ಎಸ್. ಹುಕ್ಕೇರಿಕರ
7. ಮುಂಬೈಯ ಉಪಮುಖ್ಯಮಂತ್ರಿ ಶ್ರೀ ವಾಂದ್ರೇಕರ
8. ಶ್ರೀ ಕೆ. ಎ. ವೆಂಕಟರಾಮಯ್ಯ
9. ಡಾ. ನಾ. ಭಿ. ಕಬ್ಬೂರ
10. ಕೇಂದ್ರ ಮಂತ್ರಿ ಶ್ರೀ ದ. ಪ. ಕರಮರಕರ
11. ಕಲೆಕ್ಟರ್ ಶ್ರೀ ಸಾಠೆ
12. ಶ್ರೀ ವೀರನಗೌಡ ಪಾಟೀಲ
13. ಶ್ರೀ ಮೊಹರೆ ಹನುಮಂತರಾವ
14. ಶ್ರೀ ಟಿ. ಎಸ್. ನಾಯಿಕ್
15. ಶ್ರೀ ಶ್ರೀರಂಗ ಕಾಮತ್
16. ಶ್ರೀ ವಿ. ಟಿ. ಮಾಗಡಿ
17. ಶ್ರೀವಾಮನ ಅನಂತ ಹೊದಿಕೆ
18. ಶ್ರೀ ಭೀಮಪ್ಪ ನಾಯಕ, ಮಂತ್ರಿಗಳು

ಈ ಕೇಂದ್ರದ ಮೌಲ್ಯಮಾಪನ ಮಾಡಲು ಶ್ರೀ ವೈಕುಂಠಲಾಲ್ ಮೆಹತಾ ಅವರ ಹಿರಿತನದಲ್ಲಿ ಎಂಟು ಜನ ಮುಖಂಡರು ಬಂದು ಎಲ್ಲ ಕೇಂದ್ರಗಳನ್ನು ನೋಡಿ ಪರಿಶೀಲಿಸಿ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು. ಕೆಲವು ಮುಖಂಡರಂತೂ ಇದೊಂದು ಪುಣ್ಯಕ್ಷೇತ್ರ ಎಂದೇ ವರ್ಣಿಸಿದರು.

ಶಾಲಾ, ಕಾಲೇಜು ವಿದ್ಯಾರ್ಥಿಗಳಂತೂ ದಗ್ಗುದುಳಿಯುತ್ತಲಿದ್ದರು. ಒಮ್ಮೆ ಕರ್ನಾಟಕ ಕಾಲೇಜು ಪ್ರಿನ್ಸಿಪಾಲರಾದ ಪ್ರೊ. ವ್ಹಿ. ಕೆ. ಗೋಕಾಕ್ ಅವರು ತಮ್ಮ 50 ವಿದ್ಯಾರ್ಥಿಗಳೊಡನೆ ಬಂದು ತಾಸೆರಡುತಾಸು ಸುತ್ತಾಡಿ ಎಲ್ಲ ಚಟುವಟಿಕೆಗಳನ್ನು ನೋಡಿ ನಾವು ಕೊಟ್ಟ ಉಪಹಾರವನ್ನು ತುಂಬಾ ಮೆಚ್ಚಿಕೊಂಡು "ಈ ಕಷಾಯದ ಫಾರ್ಮುಲಾ ಏನು ?" ಎಂದು ಕೇಳಿದರಲ್ಲದೆ ಅದು ತುಂಬಾ ರುಚಿಕಟ್ಟಾಗಿತ್ತೆಂದು ಹೇಳಿದರು.

ಇದಲ್ಲದೇ ಅಧಿಕಾರಿಗಳು, ಸಹಕಾರಿ ಖಾತೆಯ ಅಧಿಕಾರಿಗಳು, ಲೆಕ್ಕ ತಪಾಸಿಗರು, ಸಣ್ಣ ದೊಡ್ಡ ಅಧಿಕಾರಿಗಳೂ ಆಗಾಗ್ಗೆ ಬರುತ್ತಲೇ ಇದ್ದರು.

ಯಾರೇ ಬಂದರೂ ಅತಿಥಿ ಸತ್ಕಾರ ದಾಬಡೆ ಅವರ ಮನೆಯಲ್ಲಿಯೇ ಆಗುತ್ತಿತ್ತು. ಹೆಚ್ಚು ಜನರು ಬಂದರೆ ಬೇರೆ ಕಾರ್ಯಕರ್ತರ ಮನೆಗೆ ಕಳಿಸಲಾಗುತ್ತಿತ್ತು. ಹಾಗೆ ನೋಡಿದರೆ ನಿತ್ಯ ಒಂದಿಬ್ಬರು ಅತಿಥಿಗಳು ಇದ್ದೇ ಇರುತ್ತಿದ್ದರು. ಅಲ್ಲಿ ಬಂದರೆ ಬೇರೆ ಕಡೆಗೆ ಹೋಗುವದೇ ಸಾಧ್ಯವಿಲ್ಲ. ಅಲ್ಲಿಯ ಕಾರ್ಯಕರ್ತರೇ ನೋಡಿಕೊಳ್ಳಬೇಕಾಗುತ್ತಿತ್ತು.

ಒಂದು ಸಲ ಅರವಟಿಗೆಯಲ್ಲಿ 20 ಎಕರೆ ಕಬ್ಬು ಬೆಳೆ ಬಂದ ಮೇಲೆ ಕಬ್ಬಿನ ಗಾಣ ಹಾಕಲಾಗಿತ್ತು. ಆಗ ಪತ್ರಿಕಾ ಪ್ರಕಟಣೆ ಕೊಟ್ಟು ಜನರನ್ನು ಬರಮಾಡಿಕೊಳ್ಳಲಾಗಿತ್ತು. ಅನೇಕರು ಬಂದು ಹೊಟ್ಟೆತುಂಬಾ ಕಬ್ಬಿನ ಹಾಲು ಕುಡಿದು ಬೆಲ್ಲ ತಿಂದು ಸಂತೋಷಪಟ್ಟರು.

ನೂರಾರು ವಿದ್ಯಾರ್ಥಿಗಳು, ಶ್ರೀಸಾಮಾನ್ಯರೂ ಬರುತ್ತಿದ್ದರು. ಈ ಕಾರ್ಯಕ್ರಮ ಒಂದು ತಿಂಗಳು ನಡೆಯಿತು. ಬಂದ ಅತಿಥಿಗಳಿಗೆ ಎಲ್ಲ ಚಟುವಟಿಕೆ ತೋರಿಸಲು ಒಂದು ನಿರ್ದಿಷ್ಟ ವ್ಯವಸ್ಥೆಯನ್ನೇ ಮಾಡಲಾಗಿತ್ತು. ಜನರೆಲ್ಲ ಬಂದು ನಮ್ಮ ಕಾರ್ಯವನ್ನು ನೋಡಿ ಸಂತೋಷಪಟ್ಟರೆ ಅದೇ ನಮಗೆ ಸೌಭಾಗ್ಯವಾಗಿತ್ತು.

ಅರವಟಿಗೆಯಲ್ಲಿ ಕಾರ್ಯಕರ್ತರ ನಾಲ್ಕು ನಿವಾಸಗಳಿದ್ದವು. ಅವು ತೀರ ಸಾದಾ, ಅಂದರೆ ಪಾಯಾ ಹಾಕಿ ಮೇಲಿನ ಕಟ್ಟಡವನ್ನೆಲ್ಲ ಬಿದರಿನಿಂದಲೇ ಮಾಡಿ ಸಾರಿಸಲಾಗಿತ್ತು. ಮನೆಯ ಸುತ್ತಲೂ ಸುಂದರ ಹೂ ತೋಟ, ತುಳಸಿ ಸಮೃದ್ಧವಾಗಿ ಬೆಳೆಯುತ್ತಲಿತ್ತು. ಕೆಲವು ನಿಷ್ಠಾವಂತ ಆಚಾರ್ಯರು ತುಳಸಿ ತೆಗೆದುಕೊಂಡು ಹೋಗಲಿಕ್ಕೆಂದೇ ಅರವಟಿಗೆವರೆಗೆ ಬಂದು ಹೋಗುತ್ತಲಿದ್ದರು. ಧಾರವಾಡದಿಂದ ಅರವಟಿಗೆಗೆ 75 ಪೈಸೆ ಬಸ್ ಚಾರ್ಜ ಇತ್ತು (12 ಮೈಲು). ಆದರೆ ನಿತ್ಯ ಕೇವಲ ಮೂರು ಸಲ ಮಾತ್ರ ಬಸ್ಸು ಬರುತ್ತಲಿತ್ತು. ಇದು ಧಾರವಾಡ ಅಳ್ನಾವರ ಮಾರ್ಗದಲ್ಲಿಯೇ ಇದ್ದ ಗ್ರಾಮ.

ಈ ಊರ ಪಕ್ಕದಲ್ಲಿಯೇ ಅಡವಿ ಗೌಳಿಗರು ವಾಸಿಸುತ್ತಲಿದ್ದರು. ಅವರದೇ ಒಂದು ಹಾಲಿನ ಸಹಕಾರಿ ಸಂಘ ಮಾಡಿ ಅದರಿಂದ ನಿತ್ಯ ಧಾರವಾಡಕ್ಕೆ ಹಾಲು ಮಾರಾಟಕ್ಕೆ ಕಳಿಸಲಾಗುತ್ತಿತ್ತು.

ಸಾಮಾನ್ಯವಾಗಿ ಕಾರ್ಯಕರ್ತರೆಲ್ಲ ಸಂಪೂರ್ಣ ಖಾದಿಧಾರಿಗಳಾಗಿದ್ದರು. ಕೆಲವು ದಿವಸ ಅರವಟಿಗೆಯಲ್ಲಿ ಒಂದು ಖಾದಿ ಅಂಗಡಿ ಪ್ರಾರಂಭಿಸಲಾಗಿತ್ತು. ಮುಂದೆ ಅದನ್ನು ಅಳ್ನಾವರಕ್ಕೆ ಸ್ಥಳಾಂತರಿಸಲಾಯ್ತು.

**ಬಜೆಟ್ :** ವರ್ಷಕ್ಕೊಮ್ಮೆ ಮುಂದಿನ ವರ್ಷದ ಬಜೆಟ್ ಸಿದ್ಧತೆ ಮಾಡಿಕೊಂಡು ಮುಂಬೈಗೆ ಚರ್ಚೆಗೆ ಆಮಂತ್ರಿಸಲಾಗುತ್ತಿತ್ತು. ಇದರ ಉಸ್ತುವಾರಿಯನ್ನು ಸಹಕಾರಿ ಖಾತೆಯವರು ನೋಡುತ್ತಲಿದ್ದರು.

ಸಹಕಾರಿ ರಜಿಸ್ಟ್ರಾರ್‌ರು ಅಲ್ಲಿ ಹಾಜರಿರುತ್ತಿದ್ದರು ಮತ್ತು ಸ್ವತಃ ಶ್ರೀ ಮೊರಾರ್ಜಿ ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಈ ಚರ್ಚೆ ನಡೆದು ನಿರ್ದಿಷ್ಟಪಡಿಸಲಾಗುತ್ತಿತ್ತು. ಹಾಗೆ ಪಾಸಾದ ಬಜೆಟ್ ಹಣವನ್ನು ಕಾಲಕಾಲಕ್ಕೆ ಸಹಕಾರಿ ಖಾತೆಯ ಮೂಲಕ ಬಿಡುಗಡೆ ಮಾಡಲಾಗುತ್ತಿತ್ತು ಮತ್ತು ನಮ್ಮ ದೃಷ್ಟಿಯಲ್ಲಿ ಇದೊಂದು ಸುವ್ಯವಸ್ಥಿತವಾಗಿ ನಡೆದ ಗಾಂಧೀ ಕಾರ್ಯಕ್ರಮವೆಂದೇ ಹೇಳಬಹುದು.

ಈ ಯೋಜನೆಯ ವೈಶಿಷ್ಟ್ಯವೆಂದರೆ ಇಲ್ಲಿಯ ಸಂಚಾಲಕರ ನಿರ್ಣಯಕ್ಕೆ ಹೆಚ್ಚು ಬೆಲೆ ಕೊಡಲಾಗುತ್ತಿತ್ತು. ಅಧಿಕಾರಿಗಳು, ಮತ್ತಿತರರು ಅವರ ನಿರ್ಣಯಕ್ಕೆ ಹೊಂದಿಕೊಂಡು ನಡೆಯಲು ಪ್ರಯತ್ನಿಸುತ್ತಿದ್ದರು. ಅರವಟಿಗೆಗೆ ಮುಖ್ಯ ಕೇಂದ್ರ ಬಂದಮೇಲೆ ಅಂಚೆ ಕಛೇರಿಯಲ್ಲದೆ, ಪಕ್ಕದಲ್ಲಿಯೇ ಕೋಗಿಲಗೇರಿ ರೈಲು ನಿಲ್ದಾಣವೂ ಬಂತು.

ಒಮ್ಮೆ ಬಜೆಟ್ ಮಾಡುವ ಪೂರ್ವದಲ್ಲಿ ಆಯಾ ಜಿಲ್ಲೆಯ ಅಧಿಕಾರಿಗಳನ್ನು ಕರೆದು ಅವರ ಸಹಕಾರ ದೊರಕಿಸಲು ಹೇಳಲಾಗಿತ್ತು. ಅದರಂತೆ 1954 ರಲ್ಲಿ ಧಾರವಾಡ ಜಿಲ್ಲೆಯ ಅಧಿಕಾರಿಗಳ ಸಭೆಯನ್ನು ಅರವಟಿಗೆಯಲ್ಲಿ ಕರೆಯಲಾಯ್ತು. ಆಗ ಧಾರವಾಡ ಕಲೆಕ್ಟರ್ ಸಾಠೆ ಸಾಹೇಬರಿದ್ದರು. ಅವರ ಸಂಗಡ ವಿಚಾರ ವಿನಿಮಯ ಮಾಡಿಯೇ, ಸಭೆ ಕರೆಯಲಾಗಿತ್ತು. ಅಂದಿನ ಸಭೆಗೆ ಕಾರಣಾಂತರದಿಂದ ತಮಗೆ ಬರಲಾಗುವದಿಲ್ಲವೆಂದು, ತಮ್ಮ ಪ್ರತಿನಿಧಿ ಪ್ರಾಂತ ಸಾಹೇಬರನ್ನು ಕಳಿಸುವದಾಗಿ ಹೇಳಿ ಅವರ ಸಂಗಡ ವಿವರವನ್ನು ಚರ್ಚಿಸಲು ಹೇಳಿದರು.

ಒಟ್ಟು 20 ಅಧಿಕಾರಿಗಳಿಗೆ ಆಮಂತ್ರಣ ಕೊಡಲಾಗಿತ್ತು. ಅದೆಲ್ಲವನ್ನೂ ಅವರ ಸಂಗಡ ಚರ್ಚೆ ಮಾಡಲಾಯ್ತು. ಸಭೆ ಮಧ್ಯಾಹ್ನ 3 ಗಂಟೆಗೆ ಅರವಟಿಗೆ ಕೇಂದ್ರ ಕಛೇರಿಯಲ್ಲಿ ಕರೆಯಲಾಗಿತ್ತು. ಈ ಬಗ್ಗೆ ಮುಖ್ಯ ಅಧಿಕಾರಿಗಳು ಬಂದವರಿಗೆಲ್ಲ ಕುರ್ಚಿಯ ವ್ಯವಸ್ಥೆ ಮಾಡಬೇಕೆಂದು ಪಟ್ಟು ಹಿಡಿದರು. ಆಗ ಸಂಚಾಲಕರು ನಾನಾ ಬಗೆಯಿಂದ ತಿಳಿಸಿ ಹೇಳಲು ಪ್ರಯತ್ನಿಸಿದರು. ಕುರ್ಚಿಗಳಿಲ್ಲದೇ ನಿಮ್ಮದೆಂಥಾ ಸಭೆ ಎಂದು ಚೇಷ್ಟೆ ಮಾಡಿದರು. ಕೊನೆಗೆ ಈ ವಿಷಯವನ್ನು ಸಾಠೆ ಸಾಹೇಬರ ಕಡೆಗೆ ಒಯ್ಯಲಾಯ್ತು. ಸಾಠೆ ಸಾಹೇಬರು ಅಧಿಕಾರಿಗಳಿಗೆ ಚೆನ್ನಾಗಿ ಬುದ್ಧಿ ಹೇಳಿ ಚಿಕ್ಕ ಗ್ರಾಮದಲ್ಲಿ ಎಲ್ಲಿಂದ ಇಷ್ಟು ಕುರ್ಚಿ ತರುವದು ? ಅದು ಸಾಧ್ಯವಿಲ್ಲವೆಂದು ಅವರೇ ಹೇಳಿದರು. ಮುಂದೆ ಅವರಿಗೆಲ್ಲ ಕುಳಿತುಕೊಳ್ಳಲು ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಯಿತಲ್ಲದೆ ನಮ್ಮ ಕಷಾಯ, ಅಲ್ಪೋಪಹಾರವನ್ನೂ ಇಡಲಾಗಿತ್ತು. ಅಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಧೂಮಪಾನ ವರ್ಜ್ಯವಿತ್ತು. ಹೀಗೆ ಅವರೆಲ್ಲರ ಸಂಗಡ ಚರ್ಚೆ ಮಾಡಿ ನಮ್ಮ ಬಜೆಟ್ ಸಿದ್ಧಮಾಡಲಾಗಿತ್ತು.

**ಧೂಮಪಾನ ವರ್ಜ್ಯ :** ಅರವಟಿಗೆಗೆ ನಮ್ಮ ಕೇಂದ್ರ ಕಛೇರಿ ಸ್ಥಳಾಂತರವಾಗುವವರೆಗೆ ಅಲ್ಲಿಯ ಕಛೇರಿಯಲ್ಲಿ ಸಹ ಧೂಮಪಾನವು ನಡೆಯುತ್ತಲೇ ಇತ್ತು. ಶಾಲಾ ಮಾಸ್ತರರು ಕೈಯಲ್ಲಿ

ಬೀಡಿ ಹಿಡಿದುಕೊಂಡೇ ಶಿಕ್ಷಣ ಹೇಳುವರು. ಕಛೇರಿ, ಶಾಲೆಗಳಲ್ಲೆಲ್ಲ ಕೊರೆ ಬೀಡಿಗಳು ಬಿದ್ದಿರುತ್ತಿದ್ದವು. ಕೇಂದ್ರ ಕಛೇರಿ ಅರವಟಿಗೆಗೆ ಬಂದಕೂಡಲೇ ಈ ಧೂಮಪಾನ ವರ್ಜ್ಯದ ನಿಯಮ ಜಾರಿ ಮಾಡಲಾಯ್ತು. ಪ್ರಾರಂಭದಲ್ಲಿ ತುಸು ಅಡಚಣೆಯಾದರೂ ಮುಂದೆ ಕಛೇರಿಯ ಕಂಪೌಂಡಿನಲ್ಲಿ ಕಾಲಿಡಬೇಕಾದರೆ ಕೈಯಲ್ಲಿಯ ಬೀಡಿ ಒಗೆದೇ ಬರುತ್ತಲಿದ್ದರು.

ಒಮ್ಮೆ ಒಂದು ಮೋಜಿನ ಘಟನೆ ಆಯಿತು. ಕಲೆಕ್ಟರ್ ಶ್ರೀ ಸಾಠೆ ಸಾಹೇಬರು ಅರವಟಿಗೆಗೆ ಬರುವ ಕಾರ್ಯಕ್ರಮ ಗೊತ್ತಾಯಿತು. ಅವರ ಬಾಯಿಯಲ್ಲಿ ಯಾವಾಗಲೂ ಚಿರೂಟು ಇರಲೇಬೇಕು. ಜನರಿಗೆ ಮತ್ತು ಕಾರ್ಯಕರ್ತರಿಗೆಲ್ಲ ಈ ಸಮಸ್ಯೆ ಹೇಗೆ ಪರಿಹರಿಸುವುದೆಂದು ಕುತೂಹಲ ಕಾದಿತ್ತು. ಅವರು ಬಂದೇ ಬಿಟ್ಟರು. ಅವರನ್ನು ಬರಮಾಡಿಕೊಳ್ಳಲು ಸ್ವತಃ ಸಂಚಾಲಕರೇ ಹೋಗಿ ಅವರಿಗೆ ಅತ್ಯಂತ ನಮ್ರವಾಗಿ ಒಂದು ವಿನಂತಿ ಮಾಡಿಕೊಂಡರು. ಅದೇನೆಂದರೆ ಈ ನಮ್ಮ ಕ್ಷೇತ್ರದಲ್ಲಿ ಯಾರೂ ಧೂಮಪಾನ ಮಾಡುವಂತಿಲ್ಲ ಎಂಬ ನಿಯಮವಿದೆ ಎಂದು ಹೇಳಲಾಯ್ತು. ಅದಕ್ಕೆ ಸಾಠೆ ಸಾಹೇಬರು ಒಪ್ಪಿ ಬಾಯಿಯಲ್ಲಿಯ ಚಿರೂಟನ್ನು ಎಸೆದು ಕ್ಷೇತ್ರದಲ್ಲಿ ಕಾಲಿಟ್ಟರು. ಸುಮಾರು ಒಂದೂವರೆ ತಾಸು ಎಲ್ಲ ಕಡೆಗೆ ತಿರುಗಾಡಿ ಚರ್ಚೆ ಮಾಡಿ ವೇಳೆ ಕಳೆದರು. ಆಗ ಖಂಡಿತ ಬಾಯಿಯಲ್ಲಿ ಚಿರೂಟು ಇರಲಿಲ್ಲ. ಕೊನೆಗೆ ತಮ್ಮ ಕಾರು ಹತ್ತಿದ ಮೇಲೆ ಈಗ ನಾನು ಚಿರೂಟು ಹಚ್ಚಬಹುದೆ ? ಎಂದು ಚೇಷ್ಟೆ ಮಾಡಿ ಹಚ್ಚಿಕೊಂಡು ಹೋದರು. ಸೇದುವ ಅಧಿಕಾರಿಗಳು, ಆಡಿಟರ್‌ರು ಬಂದರೆ ಹೊರಗೆ ಹೋಗಿ ತಮ್ಮ ಚಟ ತೀರಿಸಿಕೊಂಡು ಒಳಗೆ ಬರುತ್ತಿದ್ದರು. ಮುಂದೆ ಊರವರಿಗೆ ಮತ್ತು ಎಲ್ಲರಿಗೂ ಇದರ ರೂಢಿ ಆಯಿತು. ಜನರು ಕಛೇರಿಯ ಕಂಪೌಂಡ್ ಸೇರಬೇಕಾದರೆ ಬೀಡಿ ಚೆಲ್ಲಿಯೇ ಬರುತ್ತಿದ್ದರು.

ರೈತನ ದೌರ್ಜನ್ಯ : ಅರವಟಿಗೆಯಲ್ಲಿ ಒಮ್ಮೆ ನಮ್ಮ ಫಾರ್ಮ್ ಹೌಸಿನಲ್ಲಿಟ್ಟ ಒಂದು ಭತ್ತದ ಚೀಲ ಕಳುವಾಯ್ತು. ಊರ ಹಿರಿಯರನ್ನು ಕರೆದು ತಿಳಿಸಲಾಯ್ತು. ಪ್ರತಿಯೊಂದು ಮನೆ ತಪಾಸಿಸಬೇಕೆಂದು ಪಂಚರು ಹೊರಟರು. ಸ್ವಾಭಾವಿಕವಾಗಿ ಅವರ ಸಂಗಡ ಸಂಚಾಲಕರೂ ಇದ್ದರು. ಕೊನೆಗೆ ಅದು ಓರ್ವ ರೈತನ ಮನೆಯಲ್ಲಿ ಸಿಕ್ಕಿತು. ಜನರಿಗೆಲ್ಲ ಆತನೇ ಕದ್ದವನೆಂದು ಮೊದಲೇ ಗೊತ್ತಿದ್ದರೂ ಇಷ್ಟೆಲ್ಲ ಕಾರ್ಯ ಮಾಡಲೇಬೇಕಾಯ್ತು. ಭತ್ತದ ಚೀಲ ಸಿಕ್ಕ ಕೂಡಲೇ ಅದರ ಪಂಚನಾಮೆ ಪ್ರಾರಂಭವಾಯ್ತು. ಆಗ ಭತ್ತದ ಚೀಲ ಕದ್ದ ರೈತ ರಭಸದಿಂದ ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಬಂದು ಸಂಚಾಲಕರ ಮುಖದ ಮೇಲೆ ನಾಲ್ಕು ಪೆಟ್ಟು ಹಾಕಿದ. ಕೂಡಿದ ಜನರು ರೊಚ್ಚಿಗೆದ್ದು ಅವನ ಮೇಲೆ ಬೀಳಲು ಹೋರಟರು. ಆಗ ಸಂಚಾಲಕರೇ ಅವರಿಗೆಲ್ಲ ಸಮಾಧಾನ ಹೇಳಿ ಶಾಂತ ಮಾಡಿದರು. ಓರ್ವ ರೈತನಂತೂ ತನ್ನ ಬಂದೂಕನ್ನೇ ತೆಗೆದುಕೊಂಡು ಬಂದ. ಅಂತೂ ಇಡೀ ಊರು ಮಮ್ಮಲ ಮರುಗಿತು. ಈ ಸುದ್ದಿ ಪತ್ರಿಕೆಯಲ್ಲಿಯೂ ಬಂದಿತು. ಅನೇಕರ ಸಾಂತ್ವನ ಸಂದೇಶಗಳು ಬಂದವು. ಎಸ್. ಕೆ. ಕಲ್ಲಾಪುರ, ಡಾ. ಕಬ್ಬೂರ, ಸಾಲಿರಾಮಚಂದ್ರರಾವ

ಇವರೇ ಮುಂತಾದವರು ಬಂದು ಹೋದರು. ಸಾಂತ್ವನ ಸಂದೇಶ ನೀಡಿದರು. ಅನೇಕ ಮಿತ್ರರೂ ಕಾಗದ ಬರೆದು ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು. ಇದು ಸಂಚಾಲಕರ ಜೀವದ ಮೇಲೆಯೇ ಗಂಡಾಂತರವೆಂದು ಬಹಳ ಜನ ಭಾವಿಸಿದರು.

**ಸರ್ವೋದಯದ ಅವಸಾನ :** ಅದು 1956ರ ಕಾಲ. ಕರ್ನಾಟಕವು ಬೇರೆ ಪ್ರಾಂತವಾಯ್ತು. ಮುಂಬೈ ಪ್ರಾಂತದ ನಾಲ್ಕು ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಕಾರವಾರ, ವಿಜಾಪುರ ಇವು ಮೈಸೂರು ರಾಜ್ಯದಲ್ಲಿ ಸೇರಿದವು. ಹೀಗೆ ಮುಂಬೈ ರಾಜ್ಯದಿಂದ ನಾವು ಬೇರೆಯಾದೆವು. ಏನೋ ಒಂದು ಆಭಾಸ. ಇನ್ನು ಮುಂದೆ ಸರ್ವೋದಯ ಯೋಜನೆ ಮುಂದುವರಿಯಲಾಗದೆಂಬ ಭಾವನೆ ಮೂಡಿತು. ಹಾಗೆ ಹಾರಿಕೆ ಸುದ್ದಿಯೂ ಬಂತು. ಒಮ್ಮೆ ನಮ್ಮ ಅಂದಿನ ಮೈಸೂರು ಮಂತ್ರಿಗಳಾಗಿದ್ದ ಎಮ್. ಪಿ. ಪಾಟೀಲರು ಸಂಚಾಲಕರನ್ನು ಕರೆಯಿಸಿ ಅತ್ಯಂತ ಆತ್ಮೀಯತೆಯಿಂದ ಮಾತನಾಡಿ ಇನ್ನು ಮಂದೆ ಈ ಸರ್ವೋದಯ ಯೋಜನೆ ಮುಂದುವರಿಸುವುದು ಸಾಧ್ಯವಿಲ್ಲ, ಇದಕ್ಕೆ ನಿಷ್ಠಾವಂತ ಕಾರ್ಯಕರ್ತರು ಬೇಕು. ಅದು ಸಿಗುವುದು ಸಾಧ್ಯವಿಲ್ಲ ಎಂದು ಹೇಳಿದರು. ಆಗ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ನಾಲ್ಕೂ ಜಿಲ್ಲೆಗಳ ಸರ್ವೋದಯದ ಸಂಚಾಲಕರಾದ ನರಸಿಂಹ ದಾಬಡೆ, ಶ್ರೀರಂಗ ಕಾಮತ ಇವರ ಬದಲು ಜಯದೇವ ಕುಲಕರ್ಣಿ, ಮಡಗಾಂವಕರ, ಜೋರಾಪುರ, ಗುರುರಾವ ನಾಲ್ವರೂ ಹೋಗಿ ನಿಜಲಿಂಗಪ್ಪನವರನ್ನು ಕಂಡರು. ಯಾವ ಉಪಯೋಗವೂ ಆಗದೆ ಶರಣು ಹೊಡೆದು ಬಂದರು.

**ಸರ್ವೋದಯ ಶಿಕ್ಷಣ ಟ್ರಸ್ಟ್ ಉಗಮ :** ಈ ಯೋಜನೆ ಅಂತ್ಯವಾಗಬಹುದೆಂಬ ಅಂದಾಜು ಕಾರ್ಯಕರ್ತರಿಗೆ ಇದ್ದೇ ಇತ್ತು. ಕಾರಣ ನಮ್ಮ ಇಲ್ಲಿಯ ಸೇವೆಗೆ ಒಂದು ಕಾಯಂ ಸ್ವರೂಪ ಕೊಡಬೇಕೆಂದು ಸರ್ವೋದಯ ಶಿಕ್ಷಣ ಟ್ರಸ್ಟ್ ಎಂಬ ಸಂಸ್ಥೆಯನ್ನು ರಜಿಸ್ಟರ್ ಮಾಡಿಸಲಾಯಿತು. ನರಸಿಂಹ ದಾಬಡೆ ಅವರು ಅದರ ಸೋಲ್‌ಟ್ರಸ್ಟಿ ಇರಬೇಕೆಂದೂ ನಿರ್ಣಯವಾಯಿತು. ಅದರ ಮೂಲ ಉದ್ದೇಶ ಹಿಂದುಳಿದ ಈ ಭಾಗದಲ್ಲಿ ಶಿಕ್ಷಣ ಪ್ರಸಾರ ಮಾಡುವುದೇ ಆಗಿತ್ತು.

ಹೀಗೆ ಇದರ ಪ್ರಾರಂಭ 1956ರಲ್ಲಿ ಅಳ್ನಾವರ ಗ್ರಾಮದಲ್ಲಿ 16 ವಿದ್ಯಾರ್ಥಿಗಳಿಂದ ಒಂದು ಮಾಧ್ಯಮಿಕ ಶಾಲೆ ಕಾರ್ ಶೆಡ್ಡಿನಲ್ಲಿ ಪ್ರಾರಂಭವಾಯ್ತು. ಮುಂದೆ ಅದು ಹಬ್ಬುತ್ತಿತ್ತು.

ಅಳ್ನಾವರದಲ್ಲಿ ಒಂದು ಗಂಡು ಹುಡುಗರ ಶಾಲೆಯಲ್ಲದೆ, ಒಂದು ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆ, ಮುಗದದಲ್ಲಿ ಒಂದು, ಸಾಧನಕೇರಿಯಲ್ಲಿ ಒಂದು, ಹೀಗೆ ನಾಲ್ಕು ಮಾಧ್ಯಮಿಕ ಶಾಲೆಗಳು ಅಸ್ತಿತ್ವದಲ್ಲಿ ಬಂದವು. ಮುಂದೆ ಇದು ಬೆಳೆಯುತ್ತ ನಡೆಯಿತು.

**ಉಪಸಂಹಾರ :** ಅಂತೂ ಎಂಟು ವರ್ಷ ಈ ಸರ್ವೋದಯ ಯೋಜನೆ ಕಾರ್ಯ ಮಾಡಿತು. ಇದರ ಪರಿಣಾಮವೇನಾಯ್ತು ಎಂಬುದನ್ನೂ ಯೋಚನೆ ಮಾಡುವ ಅವಶ್ಯಕತೆಯಿದೆ.

1948 ರಿಂದ 1956ರ ವರೆಗೆ ಎಂಟು ವರ್ಷ ಸಾಮಾನ್ಯವಾಗಿ ಸರಾಸರಿ 25 ಕಾರ್ಯಕರ್ತರು ಈ ಕ್ಷೇತ್ರದಲ್ಲಿ ಶ್ರಮವಹಿಸಿ ದುಡಿದರು. ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದರು. ಆ ದೃಷ್ಟಿಯಿಂದ ಅವರಿಗೆ ಕೊಡುತ್ತಿದ್ದ ಗೌರವಧನ ತೀರ ಕಡಿಮೆ ಎಂದೇ ಹೇಳಬಹುದು. ಇದರ ಪರಿಣಾಮವೆಂದರೆ ನಿರ್ಜನ ರೋಗಪೀಡಿತ ಕ್ಷೇತ್ರವು ಜನರಿಂದ ತುಂಬಿತು. ರೋಗರುಜಿನಗಳು ಕಡಿಮೆಯಾದವು. ಸುಮಾರು ಪಡಬಿದ್ದ 2000 ಎಕರೆ ಭೂಮಿ ಸಾಗುವಳಿಯಾಯ್ತು. ಅನೇಕ ನಿರ್ಗತಿಕ ಕುಟುಂಬಗಳು ನೆಮ್ಮದಿಯಿಂದ ಬಾಳಹತ್ತಿದವು. ಅದರಂತೆ ಕೂಲಿಕಾರರ ಸಂಘಟನೆಯೂ ಆಯಿತು. ಜನಸಂಪರ್ಕ ಹೆಚ್ಚು ಬೆಳೆಯಿತು. ರೈತರು, ಕೂಲಿಕಾರರು ಮುಂದೆ ಬರತೊಡಗಿದರು. ಈ ಕಾರ್ಯಕರ್ತರು ತಮ್ಮ ಜೀವನದ ಇರುವಿಕೆಯಲ್ಲಿಯೇ ಬದಲಾವಣೆ ಕಂಡು ಅತ್ಯಂತ ನೆಮ್ಮದಿಯಿಂದ ಬಾಳಹತ್ತಿದರು. ಅವರ ನೈತಿಕ ಮಟ್ಟ ಮೇಲಕ್ಕೇರಿತು.

ಅದರಂತೆ ಗ್ರಾಮಾಂತರದಲ್ಲಿ ಕುಡಿತ ಕಡಿಮೆಯಾಯಿತು. ಸಂಪರ್ಕವಿದ್ದ ಕೆಲವು ರೈತರು ಆದರ್ಶ ಜೀವನ ಸಾಗಿಸಹತ್ತಿದರು.

ಇಲ್ಲಿ ಒಂದು ಘಟನೆಯ ಉಲ್ಲೇಖ ಅವಶ್ಯ ಕಾಣುತ್ತದೆ. ಒಂದು ದಿನ ಒಬ್ಬ ಕುಡುಕ ಹರಿಜನ ಇನ್ನು ಮುಂದೆ ಕುಡಿಯುವದಿಲ್ಲವೆಂದು ಪ್ರತಿಜ್ಞೆ ಮಾಡಿದ. ಒಂದು ಸಲ ಆತ ಅಂತ್ಯಸಂಸ್ಕಾರಕ್ಕೆ ಹೋಗಿ ರಾತ್ರಿ 12ಕ್ಕೆ ಮನೆಗೆ ಬಂದ. ಎಲ್ಲರೊಡನೆ ತುಂಬಾ ಕುಡಿದೇ ಬಂದಿದ್ದ. ರಸ್ತೆಯಲ್ಲಿ ಒದರಾಡಹತ್ತಿದ. ಆತನ ಮನೆ ಸಂಚಾಲಕರ ಮನೆಯ ಹಿಂಭಾಗದಲ್ಲಿತ್ತು. ಆಗ ಸಂಚಾಲಕರು ಕೈಯಲ್ಲಿ ಒಂದು ಬೆಡ್‌ಲ್ಯಾಂಪ್ ಹಿಡಿದು ಆತನ ಮನೆಗೆ ಹೋದರು. ಆತ ಬಾಗಿಲು ಗಡದ್ದು ಹಾಕಿಕೊಂಡ. ಬಾಗಿಲು ತೆಗೆಯುವವರೆಗೆ ನಿನ್ನ ಮನೆಯ ಮುಂದೇ ಕೂಡುತ್ತೇನೆ ಎಂದು ಸಂಚಾಲಕರು ಹೇಳಿದರು. ಆಗ ಅವನು ಹೀಗೆ ಹೇಳಿದ - "ನಾನು ಇಂದು ಶೆಗಣಿ ತಿನ್ನುವ ಕೆಲಸ ಮಾಡಿರುವೆ. ಇಂಥ ಪರಿಸ್ಥಿತಿಯಲ್ಲಿ ನನ್ನ ಮುಖವನ್ನೂ ನಿಮಗೆ ತೋರಿಸುವ ಇಚ್ಛೆಯಿಲ್ಲ. ನಾಳೆ ಬೆಳಿಗ್ಗೆ ಸರಿಯಾಗಿ 8 ಗಂಟೆಗೆ ಸ್ನಾನ ಮಾಡಿ ಶುದ್ಧವಾಗಿ, ನಿಮ್ಮ ದರ್ಶನಕ್ಕೆ ಬರುವೆ ಕ್ಷಮಿಸಿರಿ. ಈಗ ಮನೆಗೆ ಹೊರಡಿ" ಎಂದು ದೈನ್ಯದಿಂದ ಬೇಡಿಕೊಂಡ. ಸಂಚಾಲಕರು ಒಪ್ಪಿ ವಾಪಸ್ ಹೋದರು. ಮರುದಿನ ಬೆಳಿಗ್ಗೆ ಸ್ನಾನ ಮಾಡಿ ಮಡಿಬಟ್ಟೆ ಉಟ್ಟು ಹಣೆಗೆ ವಿಭೂತಿ ಹಚ್ಚಿಕೊಂಡು ಕಣ್ಣೀರು ಸುರಿಸುತ್ತ ಬಂದು ಶಿರಸಾಷ್ಟಾಂಗ ನಮಸ್ಕಾರ ಹಾಕಿದ. "ಇದೊಂದು ಸಲ ಕ್ಷಮಿಸಿರಿ. ಇನ್ನು ಜೀವನದಲ್ಲಿ ಎಂದೆಂದಿಗೂ ಈ ದುರುಗಿಯ ಸಹವಾಸ ಮಾಡುವದಿಲ್ಲ." ಎಂದು ಹೇಳಿ ಗಾಂಧೀಜಿ ಫೋಟೊ ಮುಟ್ಟಿ ಪ್ರತಿಜ್ಞೆ ಮಾಡಿದ, ಮುಂದೆ ಆತ ಒಬ್ಬ ಒಳ್ಳೆಯ ನಾಗರಿಕನಾದ. ಇಂಥ ಅನೇಕ ಉದಾಹರಣೆಗಳಿವೆ.

ಕೆಲವರು ಏನೇ ಆದರೂ ಯಾವ ಸುಧಾರಣೆಯೂ ಆಗಲಿಲ್ಲ, ತೀರ ಬೇಜವಾಬ್ದಾರಿಯಿಂದ ನಡೆದುಕೊಂಡದ್ದೂ ಉಂಟು.

ಒಂದು ಮಾತು ಮಾತ್ರ ಖಂಡಿತ. ಅಲ್ಲಿಯ ಜನರಿಗೆ, ರೈತರಿಗೆ, ಕೂಲಿಕಾರರಿಗೆ ಸರ್ವೋದಯದ ಒಂದು ದೊಡ್ಡ ಆಸರೆಯಿತ್ತು. ತಮಗೆ ಏನೇ ಆಪತ್ತು ಬಂದರೂ ಸರ್ವೋದಯ ಕಾರ್ಯಕರ್ತರ ಹತ್ತಿರ ಬಂದು ತಮ್ಮ ಸುಖ-ದುಃಖಗಳನ್ನು ಹೇಳುತ್ತಲಿದ್ದರು. ಕಾರ್ಯಕರ್ತರು ಶಕ್ಯವಾದ ಉಪಾಯಗಳನ್ನು ಸೂಚಿಸುತ್ತಿದ್ದರು. ಅನೇಕ ಸಲ ತಾವೇ ಅಧಿಕಾರಿಗಳ ಕಡೆಗೆ ಹೋಗಿ ನಿಜಸ್ಥಿತಿಯನ್ನು ತಿಳಿಹೇಳಿ ಅವರ ತೊಂದರೆ ಕಡಿಮೆಯಾಗುವಂತೆ ಮಾಡಿದ್ದುಂಟು. ಆ ದೃಷ್ಟಿಯಿಂದ ಅಲ್ಲಿಯ ಜನರು, ರೈತರು, ಕೂಲಿಕಾರರು ಹೀಗೆ ಅನಾಥರಾದರೆಂದು ಹೇಳಬಹುದು. ಮುಂದೆ ಒಂದೊಂದೇ ಅನೇಕ ಸಮಸ್ಯೆಗಳು ಏಳಹತ್ತಿದವು.

ಈ ಯಜ್ಞದಲ್ಲಿ ಮನಸಿಟ್ಟು ದುಡಿದ ಕಾರ್ಯಕರ್ತರು ಶ್ರೇಷ್ಠ ದರ್ಜೆಯ ಪ್ರಾಮಾಣಿಕ ಕಾರ್ಯಕರ್ತರಾಗಿ ತಮ್ಮ ಜೀವನವನ್ನೂ ನೆಮ್ಮದಿಯಿಂದ ಸಾಗಿಸುತ್ತಿರುವರು.

**ಮುಕ್ತಾಯ :** ಹೀಗೆ ಸರ್ವೋದಯ 1956ರಲ್ಲಿ ಮುಕ್ತಾಯವಾಯಿತು. ಅದರ ಎಲ್ಲ ಲೆಕ್ಕಪತ್ರ ಮತ್ತು ಸಂಪೂರ್ಣ ಚಾರ್ಜನ್ನು ಅಂದಿನ ತಹಶೀಲ್ದಾರರಿಗೆ ಒಪ್ಪಿಸಿ ಈ ಕ್ಷೇತ್ರಕ್ಕೆ ಶರಣು ಹೊಡೆದು ಹೋದರು.

**ಕೃತಜ್ಞತೆ :** ಹಳ್ಳಿಗರು ಮತ್ತು ರೈತರು ಕಾರ್ಯಕರ್ತರನ್ನು ಹಾಗೆಯೇ ಹೋಗಗೊಡಲಿಲ್ಲ. ಅವರು ಹೊರಡುವ ಪೂರ್ವದಲ್ಲಿ ಸರ್ವೋದಯ ಸಂಚಾಲಕರಿಗೆ ಮತ್ತು ಕಾರ್ಯಕರ್ತರಿಗೆ ಸತ್ಕಾರ ಮಾಡಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಆಗ ಸಂಚಾಲಕರಿಗೆ 3500 ರೂ. ನಿಧಿ ಸಮರ್ಪಿಸಿದರು. ಅದನ್ನು ಅದೇ ಸಭೆಯಲ್ಲಿ ಸರ್ವೋದಯ ಶಿಕ್ಷಣ ಟ್ರಸ್ಟಿಗೆ ಒಪ್ಪಿಸಿ, ಸರ್ವೋದಯ ಕ್ಷೇತ್ರಕ್ಕೆ ಸಂತೋಷದಿಂದ ವಿದಾಯ ಹೇಳಿ ಕಾರ್ಯಕರ್ತರು ಹೊರಟರು.

**ಸರ್ವೋದಯ ಕ್ಷೇತ್ರದಲ್ಲಿದ್ದ ಗ್ರಾಮಗಳು :**

| | | |
|---|---|---|
| 1. ಅರವಟಿಗೆ | 2. ಹೊಲ್ತೀಕೋಟೆ | 3. ಹೂಲಿಕೇರಿ |
| 4. ಕಡಬಗಟ್ಟಿ | 5. ಕಾಶೀನಟ್ಟಿ | 6. ಕೋಗಿಲಗೇರಿ |
| 7. ಕುಂಬಾರಕೊಪ್ಪ | 8. ಮನಗುಂಡಿ | 9. ಜೈಭಾರತ ಕಾಲನಿ |
| 10. ಕಂಬಾರಗಣವಿ | 11. ಅಂಬೊಳ್ಳಿ | 12. ಡೋರಿ |
| 13. ಬೆಣಚಿ | 14. ಧೋಪೇನಟ್ಟಿ | 15. ಬಾಲಗೇರಿ |
| 16. ಮಣಕಾಪುರ | 17. ಹಿಂಡಸಗೇರಿ | 18. ಜೋಡಗೇರಿ |
| 19. ಮುಗದ | 20. ದಡ್ಡಿಕಮಲಾಪುರ | 21. ಮಂಡಿಹಾಳ |
| 22. ವರಾವ ನಾಗಲಾವಿ | 23. ಕ್ಯಾರಕೊಪ್ಪ | 24. ರಾಮಾಪೂರ |
| 25. ಕಲ್ಲಾಪುರ | 26. ಹಿರೇಮಲ್ಲಿಗವಾಡ | 27. ಚಿಕ್ಕಮಲ್ಲಿಗವಾಡ |

| | | |
|---|---|---|
| 28. ಸಲಕಿನಕೊಪ್ಪ | 29. ಬಾಡ | 30. ನಿಗದಿ |
| 31. ಮಲ್ಲೂರ | 32. ದೇವರಹುಬ್ಬಳ್ಳಿ | 33. ದೇವಗಿರಿ |
| 34. ಕಲಕೇರಿ | 35. ಲಾಳಗಟ್ಟಿ | 36. ಮುರಕಟ್ಟಿ |
| 37. ಹಳ್ಳೀಗೇರಿ | 38. ಅಂಬ್ಳೀಕೊಪ್ಪ | 39. ಬಣದೂರ |
| 40. ಹುಣಸಿಕಟ್ಟಿ | 41. ಮಾವಿನಕೊಪ್ಪ | 42. ಈರಾಪುರ |
| 43. ತೇಗೂರ | 44. ಮನ್ಸೂರ | |

ಒಟ್ಟು 44 ಹಳ್ಳಿಗಳು, ಅದರಲ್ಲಿ 14 ಹಳ್ಳಿಗಳಲ್ಲಿ ಜನಸಂಖ್ಯೆಯೇ ಇರಲಿಲ್ಲ.

**ದುಡಿದ ಕಾರ್ಯಕರ್ತರು :**

ಶ್ರೀ ನರಸಿಂಹ ದಾಬಡೆ - ಸಂಚಾಲಕ

| | | |
|---|---|---|
| ಶ್ರೀ ವಿ. ಎಸ್. ಮಿರ್ಜಿ | ಶ್ರೀ ಡಿ. ಜಿ. ಹೊನ್ನಾವರ | ಶ್ರೀ ಶ್ರೀನಿವಾಸ ಕಾಸರಗೊಡ |
| ಶ್ರೀ ಎಸ್. ಆರ್. ಭಾಗವತ | ಶ್ರೀಮತಿ ರಾಧಾ ಭಾಗವತ | ಶ್ರೀಮತಿ ಆರ್. ಲಲಿತಮ್ಮ |
| ಶ್ರೀಮತಿ ಕನಕವಲ್ಲಿ ಕೃಷ್ಣಾಪುರ | ಶ್ರೀಮತಿ ವರಮಹಾಲಕ್ಷ್ಮಿ ಜಂಬೆ | ಶ್ರೀಮತಿ ಲಕ್ಷ್ಮೀಬಾಯಿ |
| ಶ್ರೀ ಆರ್. ಎಸ್. ಉಪಾಧ್ಯೆ | ಶ್ರೀ ಸಿದ್ದಣ್ಣಾ ಕುಲಕರ್ಣಿ | ಶ್ರೀ ದೇಸಾಯಿ ವಿ. ಹೆಚ್. |
| ಶ್ರೀ ಎಮ್. ಜಿ. ಪಾಟೀಲ | ಶ್ರೀ ಸಿ. ಬಿ. ಐರಸಂಗ | ಶ್ರೀ ವೆಂಕಟೇಶ ಹಾವನೂರ |
| ಶ್ರೀ ಪರಮಾನಂದ ದೇಶನೂರ | ಶ್ರೀ ಭೀಮರಾವ ಬೇವೂರ | ಶ್ರೀ ಗುತ್ತಲದ ದೇಶಪಾಂಡೆ |
| ಶ್ರೀ ವೆಂಕಣಭಟ್ಟ ಜೋಶಿ | ಶ್ರೀ ಮಾರ್ತಾಂಡ ಶಾಸ್ತ್ರೀ ತಡಕೋಡ | ಶ್ರೀ ಬಿಂದುಮಾಧವ ಮುತಾಲಿಕ ದೇಸಾಯಿ |
| ಶ್ರೀ ವಡವಿ | ಶ್ರೀ ಪಾಂಡಪ್ಪ ಹಾಲಭಾವಿ | ಶ್ರೀ ಚಾಮರಾಜ |
| ಶ್ರೀ ಎಲ್. ಎಸ್. ಜೋಶಿ | ಶ್ರೀ ನರಸಿಂಹ ಜೋಶಿ | |

# ಅನುಬಂಧ

## ಆತ್ಮೀಯರ ಅಂತಃಕರಣ

ನೀವು ಪುಸ್ತಕಕ್ಕೆ ಆಶೀರ್ವಾದ ಬರೆಯಲು ತಿಳಿಸಿದ್ದೀರಿ. ಪ್ರಥಮತಃ ನಿಮ್ಮ ಕ್ಯಾಮರಾದಂಥ ಸ್ಮೃತಿ ಪಟಲವು ಮೆಚ್ಚತಕ್ಕದ್ದು. ಮಹಾತ್ಮಾ ಗಾಂಧೀಯವರು ನಿಮ್ಮ ಮೂಲಕ ವಿಧಾಯಕ ಕಾರ್ಯದ ಮಹತ್ವನ್ನು ತೋರಿಸಿಕೊಟ್ಟಿದ್ದು ಎಲ್ಲರೂ ಅರಿಯತಕ್ಕದ್ದಾಗಿದೆ. ಮೂರನೇಯದಾಗಿ "ಈ ನನ್ನ ಸಣ್ಣ ಕಾರ್ಯದಿಂದ ಅತಿ ಕಠಿಣ ಸ್ವರಾಜ್ಯ ಹೇಗೆ ಸಿಕ್ಕೀತು ?" ಮೊದಲಾದ ವಿಕಲ್ಪಗಳಿಗೆ ಆಸ್ಪದ ಕೊಡದೆ, ನೀವು ನಿಷ್ಠೆ - ಪ್ರೇಮದಿಂದ ನಿತ್ಯದ ಕರ್ತವ್ಯಗಳನ್ನು ಮಾಡುತ್ತಿದ್ದುದು ಅನುಕರಣೀಯವಾಗಿದೆ.

ಇನ್ನೇನು, ನಾವು ಪ್ರತಿಯೊಬ್ಬರೂ ನಮ್ಮ ಜೀವನ ಚಿತ್ರವನ್ನು ಬರೆಯುತ್ತಿದ್ದು, ಹಿಂದೆ ಬರೆದ ಪುಸ್ತಕವನ್ನು ಓದಿ ಸಂತೋಷ ಪಡಬಹುದು. ಆದರೆ ಇವತ್ತಿನ ಜೀವನದ ಪುಟವನ್ನು ಜ್ವಾಜಲ್ಯವಾಗಿ ಬರೆಯುವದು ಅವಶ್ಯಪ್ರಾಯವು. ಇಂದಿನ ಪರಿಸ್ಥಿತಿಯಂತೆ ಕರ್ತವ್ಯವಿದ್ದ ಕರ್ಮಗಳನ್ನು ಮಾಡಿಯೂ, ಸ್ಥೂಲ ಕೆಲಸವಿಲ್ಲದಿದ್ದರೆ ಉಚ್ಚತಮ ಭಾವನೆ, ವಿಚಾರ ಮಾಡುತ್ತಲೂ ಇವತ್ತಿನ ಜೀವನದ ಪುಟವನ್ನು ಬರೆಯಬಹುದು.

● **ಶ್ರೀ ಸ. ಸ. ಗಣಪತ ಮಹಾರಾಜ**

ಕನ್ನೂರ

❖❖❖

# ಸ್ವಾತಂತ್ರ್ಯ ಸಂಗ್ರಾಮದ ನೆನಹುಗಳು

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರ ಪಾತ್ರ ಗಣನೀಯವಾದದ್ದು, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಅರ್ಧ ಶತಮಾನವಾಯಿತು. ಈ ಸಂದರ್ಭದಲ್ಲಿ ಕರ್ನಾಟಕದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾದ ನರಸಿಂಹ ದಾಬಡೆಯವರು ತಮ್ಮ ನೆನಹುಗಳನ್ನು ಪ್ರಸ್ತುತ ಗ್ರಂಥದಲ್ಲಿ ಒಂಬತ್ತು ಅಧ್ಯಾಯಗಳಲ್ಲಿ ತೆರೆದಿಟ್ಟಿದ್ದಾರೆ. ಕೊನೆಯ ಅಧ್ಯಾಯದಲ್ಲಿ ಅವರ ಶ್ರೀಮತಿ ಶಕುಂತಲಾ ದಾಬಡೆಯವರ ಸ್ಮೃತಿ ಚಿತ್ರಗಳು ಪ್ರಕಟವಾಗಿವೆ.

ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದಾಗ ಇಡೀ ದೇಶದ ಜನತೆ ಅವರ ಕರೆಗೆ ಎಚ್ಚೆತ್ತುಕೊಂಡು ತನು-ಮನಗಳಿಂದ ಹೋರಾಟಕ್ಕಿಳಿದುದು ಈಗ ಇತಿಹಾಸದ ಭಾಗವಾಗಿದೆ. ರಾಷ್ಟ್ರದ ಜನತೆಯನ್ನು ಅಹಿಂಸಾತ್ಮಕ ಹೋರಾಟದಲ್ಲಿ ತೊಡಗಿಸಿ ಬ್ರಿಟಿಷ್ ವಸಾಹತುಶಾಹಿಯನ್ನು ಭಾರತದಿಂದ ತೊಲಗುವಂತೆ ಮಾಡಿದ

ಗಾಂಧೀಜಿಯವರು ದೇಶದ ಯುವಜನರ ಮೇಲೆ ಗಾಢವಾದ ಪ್ರಭಾವ ಬೀರಿದ ಕಾಲವದು. ನರಸಿಂಹ ದಾಬಡೆಯವರು ಮಹಾತ್ಮಾ ಗಾಂಧೀಜಿಯವರನ್ನು ಕಂಡು ಅವರಿಂದ ಪ್ರೇರಿತರಾದ ಸಂದರ್ಭವು ಬಹಳ ಮುಖ್ಯವಾದುದು. ಗಾಂಧೀ ದರ್ಶನದಿಂದ ತಮ್ಮ ಚೇತನದಲ್ಲಿ ನವೀನ ಜೀವನ ಸಂಸ್ಕಾರ ಪಡೆದ ನರಸಿಂಹ ದಾಬಡೆ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಜೇಲಿನಲ್ಲಿ ಕಠಿಣ ಶಿಕ್ಷೆ ಅನುಭವಿಸಿದರು. 1942ರ ಚಲೇಜಾವ್ ಚಳುವಳಿಯಲ್ಲಿ ಮಾಡು ಇಲ್ಲವೆ ಮಡಿ ಎಂಬ ಕೊನೆಯ ಹೋರಾಟದಲ್ಲಿ ಬ್ರಿಟಿಷ್ ಸತ್ತೆಯನ್ನು ನಡುಗಿಸಲು ನರಸಿಂಹ ದಾಬಡೆ ಬಹುಮುಖ್ಯ ಕಾರ್ಯ ಮಾಡಿದರು. ಭೂಗತರಾಗಿ ಕರಪತ್ರಗಳನ್ನು ಹಂಚುವದು, ಸರಕಾರಿ ಯಂತ್ರವನ್ನು ನಿಲ್ಲಿಸಲು ಉಗ್ರ ಹೋರಾಟ ಮಾಡುವುದನ್ನು ನಡೆಸುತ್ತಿದ್ದ ನರಸಿಂಹ ದಾಬಡೆ ಅವರ ದೇಶ ಭಕ್ತಿ ಅಪರೂಪವಾದದ್ದು. ಕರ್ನಾಟಕ ಚರಿತ್ರೆಯಲ್ಲಿ ಅವರು ಮಾಡಿದ ಸ್ವಾತಂತ್ರ್ಯ ಹೋರಾಟ ಉಲ್ಲೇಖನೀಯವಾದದ್ದು.

ಉತ್ತರ ಕರ್ನಾಟಕ ವಿಶೇಷವಾಗಿ ಹುಬ್ಬಳ್ಳಿ-ಧಾರವಾಡಗಳಲ್ಲಿ ಭೂಗತರಾಗಿ ಬಹುಮುಖ ಚಟುವಟಿಕೆ ನಡೆಸಿ ಪೊಲೀಸ್‌ರ ಕಣ್ಣಿಗೆ ಮಣ್ಣೆರಚಿ, ಚಳುವಳಿ ನಡೆಸುತ್ತಿದ್ದ ನರಸಿಂಹ ದಾಬಡೆ ಕೊನೆಗೂ (1944) ಪೊಲೀಸ್‌ರಿಗೆ ಸೆರೆಸಿಕ್ಕರು. ಅಜ್ಞಾತದಿಂದ ಅಂಧಃಕಾರಕ್ಕೆ ಬಂದಂತಾಗಿ ಕಂಗೆಟ್ಟರು. ನರಸಿಂಹ ದಾಬಡೆ ಅವರ ಶ್ರೀಮತಿ ಶಕುಂತಲಾ ದಾಬಡೆಯವರೂ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದರು. ಇಡೀ ಮನೆತನವೇ ಜೈಲಿನಲ್ಲಿ ಕಳೆದ ಅನುಭವಗಳನ್ನು ದಾಬಡೆಯವರು ಎಳೆ ಎಳೆಯಾಗಿ ಬಿಡಿಸಿದ್ದಾರೆ. ಪೊಲೀಸ್‌ರ ಲಾಠಿ ಪ್ರಹಾರ, ಕ್ರೌರ್ಯ, ದೌರ್ಜನ್ಯ, ಅಮಾನವೀಯತೆಗಳನ್ನು ಸಹನೆಯಿಂದ ಸಹಿಸಿಕೊಂಡ ನರಸಿಂಹ ದಾಬಡೆ ಹೃದಯದಲ್ಲಿರುವ ಭಾರತ ಸ್ವಾತಂತ್ರ್ಯದ ಬಗೆಗಿನ ಉತ್ಕಟ ಭಾವನೆಗಳು ಹೃದಯಸ್ಪರ್ಶಿಯಾಗಿ ಇಲ್ಲಿ ಹರಿದು ಬಂದಿವೆ.

ಶಕುಂತಲಾ ದಾಬಡೆ ಅವರ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳೂ ಈ ಪುಸ್ತಕದಲ್ಲಿ ಸೇರಿರುವುದು ತುಂಬ ಔಚಿತ್ಯಪೂರ್ಣವಾದದ್ದು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಸಾಮಾನ್ಯ ಮಹಿಳೆ ಚಳುವಳಿಯಲ್ಲಿ ಭಾಗವಹಿಸಿ ಪತಿಯೊಂದಿಗೆ ನಡೆಸಿದ ಹೋರಾಟ, ತೋರಿದ ದೇಶಭಕ್ತಿ ಆಶ್ಚರ್ಯವನ್ನುಂಟು ಮಾಡುತ್ತದೆ. ಧಮನಿ, ಧಮನಿಗಳಲ್ಲಿ ಭಾರತೀಯ ಸಂಸ್ಕೃತಿ ಪ್ರಜ್ಞೆ, ದೇಶಾಭಿಮಾನ ಹರಿದುಬಂದು, ಒಂದು ಪುಟ್ಟ ಮಗುವನ್ನು ಎತ್ತಿಕೊಂಡು ಜೇಲಿಗೆ ತೆರಳಿದ ಶಕುಂತಲಾ ದಾಬಡೆ ಸ್ತ್ರೀ ಜನಾಂಗಕ್ಕೆ ಸ್ಫೂರ್ತಿದಾಯಕರಾಗಿದ್ದಾರೆ. ಸರ್ವೋದಯ, ಗಾಂಧೀ ವಿಚಾರಧಾರೆಯ ಅನುಯಾಯಿಗಳು, ಖಾದಿ ಪ್ರಚಾರ, ಪಾನ ನಿರೋಧ, ಗ್ರಾಮ ವಿಕಾಸಗಳ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡ ನರಸಿಂಹ ದಾಬಡೆ, ಭಾರತವು ಗಾಂಧೀ ತತ್ವಾನುಷ್ಠಾನ ಮರೆತುದೇ ಪ್ರಸ್ತುತ ಪರಿಸ್ಥಿತಿಗೆ ಕಾರಣವೆಂಬ ಆಶಯ ಪ್ರಕಟಪಡಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನು ತಮ್ಮ ಇಳಿ ವಯಸ್ಸಿನಲ್ಲೂ ನರಸಿಂಹ ದಾಬಡೆ ಅಭಿಮಾನದಿಂದ ಸ್ಫೂರ್ತಿದಾಯಕವಾಗುವಂತೆ ಹೇಳಿದ್ದಾರೆ. ಅವರ ರಾಷ್ಟ್ರಭಕ್ತಿ, ತ್ಯಾಗಪೂರ್ಣ ಜೀವನ ಇಲ್ಲಿ ವರ್ಣಿತವಾಗಿದೆ. ನರಸಿಂಹ ದಾಬಡೆ ಹಾಗೂ ಶಕುಂತಲಾ ದಾಬಡೆ ದಂಪತಿಗಳ ಹೋರಾಟದ ಸ್ಮೃತಿಗಳು, ಕರ್ನಾಟಕದ ಸ್ವಾತಂತ್ರ್ಯ ಇತಿಹಾಸಕಾರರಿಗೆ ಆಕರ ಸಾಮಗ್ರಿಯನ್ನೊದಗಿಸುತ್ತವೆ. ಹಾಗೆಯೇ ದೇಶಭಕ್ತ ಮನೆತನದ ಹಾಗೂ ಚೇತನದ ವಿವರಗಳು ರಾಷ್ಟ್ರೀಯತೆಯ ಸ್ಫೂರ್ತಿಯನ್ನು ಪ್ರೇರೇಪಿಸುತ್ತವೆ. ನರಸಿಂಹ ದಾಬಡೆ ಅವರ ಆತ್ಮಚರಿತ್ರೆಯ ಭಾಗಗಳು ದೇಶದ ಚರಿತ್ರೆಯ ಭಾಗವೂ ಆಗಿರುವದು ಈ ಗ್ರಂಥದ ವೈಶಿಷ್ಟ್ಯವಾಗಿದೆ.

● **ಡಾ. ಜಿ. ಎಮ್ ಹೆಗಡೆ**

ದಿ. 12-5-1996 ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

❖❖❖

ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು ಗ್ರಂಥದಲ್ಲಿ ಮುಖ್ಯವಾಗಿ ನೋವು ಓದಿ ಕಣ್ಣೀರು ಮಿಡಿಯುವಂತಹ ಚಿತ್ರಣವೆಂದರೆ ಈ ಹೋರಾಟಗಾರರು ಸೆರೆಮನೆಯಲ್ಲಿರುವಾಗ ಇವರ ಧರ್ಮಪತ್ನಿ, ಸೋದರಿ ಸೌಭಾಗ್ಯವತಿ ದಿ. ಶಕುಂತಲಾ ಅವರು ಪಟ್ಟ ಪಾಡೇನು, ಕಷ್ಟಕಾರ್ಪಣ್ಯದಿಂದ ಕುಟುಂಬವನ್ನು ನೋಡಿಕೊಂಡು ಹೋದ ಬಗೆ ಏನು ? ಅವರ ತ್ಯಾಗವೇನು ? ಕಣ್ಣೀರನ್ನೇ ಕುಡಿದು ತಮ್ಮ ತುತ್ತಿನ ಚೀಲವನ್ನು ತುಂಬುವಂತೆ ಉಂಡ ಅನುಭವವೇನು ? ಈ ಎಲ್ಲ ಅನುಭವಗಳ ಅಭಿವ್ಯಕ್ತಿ, ರತ್ನ ದರ್ಪಣವೆನಿಸುವಂತೆ ಈ ಗ್ರಂಥ ನಮ್ಮ ಮೇಲೆ ಪ್ರಭಾವ ಬೀರುತ್ತದೆ.

ನಾನು ಈ ಗ್ರಂಥವನ್ನು ಓದುವಾಗ ನನ್ನ ಸೋದರ ಶ್ರೀ ನರಸಿಂಹ ದಾಬಡೆ ನನ್ನ ನಾದಿನಿ ದಿ. ಸೌ. ಶಕುಂತಲಾದೇವಿ ಅವರು ಪಟ್ಟ ಕಷ್ಟದ ಅಧ್ಯಾಯಗಳನ್ನು ಪುಟ ಪುಟಕ್ಕೂ ಕಣ್ಣೀರು ಒರೆಸಿಕೊಳ್ಳುತ್ತ ಈ ಕರುಣರಸದ ಸತ್ಯ ಕಥೆಯನ್ನು ನನ್ನ ಹೃದಯ ಸಂಪುಟದಲ್ಲಿಟ್ಟುಕೊಂಡಿದ್ದೇನೆ. ಏಕೆಂದರೆ ಅದೇ ನನ್ನ ಬಾಳಬುತ್ತಿ, ಬುದ್ಧಿಗೂ ಶಕ್ತಿ. ಇಂದಿನ ತರುಣ ಜನಾಂಗ ಈ ಗ್ರಂಥವನ್ನು ಅವಶ್ಯವಾಗಿ ತಮ್ಮ ಮುಂದಿನ ದಾರಿ ನಡೆಯಲು ಕೈಗೋಲಿನಂತೆ ಬಳಸಬೇಕು.

● **ಶ್ರೀ ಎನ್. ಕೆ. ಕುಲಕರ್ಣಿ**

ಧಾರವಾಡ

# ನೋವುಗಳೇ ಹೆಚ್ಚು

ಧಾರವಾಡದ ಶ್ರೀ ನರಸಿಂಹ ದಾಬಡೆ ಒಬ್ಬ ನಿಸ್ಪೃಹ ಸ್ವಾತಂತ್ರ್ಯ ಸೇನಾನಿಯೇ ಆಗಿದ್ದರು. 1942 ರ ಚಲೇಜಾವ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರು ಒಟ್ಟು 33 ತಿಂಗಳು ಕಾರಾಗೃಹ ವಾಸ ಅನುಭವಿಸಿದರು. ಅವರು ಅಲ್ಲಿದ್ದ ಕಾಲದಲ್ಲಿನ ಕಷ್ಟಗಳನ್ನು, ಅನುಭವಗಳನ್ನು ತುಂಬಾ ಆತ್ಮೀಯವಾಗಿ ತಮ್ಮದೇ ಶೈಲಿಯಲ್ಲಿ ಪರಿಚಯಿಸಿದ್ದಾರೆ. ಹಿರಿಯ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರ ನಿಜಲಿಂಗಪ್ಪನವರು ಹೇಳಿದಂತೆ ಇಲ್ಲಿ ನೋವುಗಳೇ ಹೆಚ್ಚು, ನಲಿವುಗಳೇ ಕಡಿಮೆ. ನಿಜವಾದ ಹೋರಾಟಗಾರರಿಗೆ ಕರ್ನಾಟಕದ ಚೆನ್ನಪ್ಪ ವಾಲಿ, ಮಹಾದೇವ ಮೈಲಾರರಂಥವರ ರೋಮಾಂಚನಕಾರಿ ಚರಿತ್ರೆಗಳು ನಡೆದು ಕರ್ನಾಟಕಕ್ಕೆ ಕೀರ್ತಿ ತಂದಿವೆ. ದಾಬಡೆಯವರದು ಅಂಥದಕ್ಕೇ ಒಂದು ಕಥೆ ಎಂದಿದ್ದಾರೆ. 26 ರ ಹರೆಯದಲ್ಲಿಯೇ ಮಹಾತ್ಮಾ ಗಾಂಧೀಯವರಿಂದ ದೀಕ್ಷೆ ಪಡೆದು ತಮ್ಮನ್ನು ಸ್ವಾತಂತ್ರ್ಯ ಚಳುವಳಿಗೆ ಧಾರೆ ಎರೆದುಕೊಂಡಿದ್ದ ನರಸಿಂಹ ದಾಬಡೆಯಂಥವರ ಬದುಕು ಸ್ವಂತದ್ದರ ಬಗ್ಗೆ ಎಂದು ನೆನೆಸಿಯೂ ಇರಲಿಲ್ಲ ಎಂಬುದನ್ನು ಈ ಕಿರು ಪುಸ್ತಕದಲ್ಲಿ ಮನಗಾಣುವಂತೆ ದಾಬಡೆಯವರೇ ಪರೋಕ್ಷವಾಗಿ ಬಿಂಬಿಸಿದ್ದಾರೆ.

● ಪ್ರಜಾವಾಣಿ

ದಿ. 6-9-96 ಹುಬ್ಬಳ್ಳಿ

◆◆◆

# ಸ್ವಾರ್ಥರಹಿತ ನೋಟ

ಶ್ರೀ ನರಸಿಂಹ ದಾಬಡೆಯವರ ಸ್ವಾತಂತ್ರ್ಯ ಸಂಗ್ರಾಮದ ನೋವು-ನಲಿವುಗಳ ಕೃತಿಯಲ್ಲಿ ಕಾಣಸುವ ಚಿತ್ರವು ನಿಚ್ಚಳವಾಗಿದೆ. ಶ್ರೀ ನರಸಿಂಹ ದಾಬಡೆಯವರು ಜೀವನವನ್ನೇ ಕಾರಾಗೃಹದಲ್ಲಿ ಕಳೆದರು. ಸಂಸಾರವನ್ನು ಕಳೆದುಕೊಂಡರು. ಅವರೇ ಬರೆದ ಮನನೀಯ ಕೃತಿ ಸ್ವಾತಂತ್ರ್ಯ 'ಸಂಗ್ರಾಮದ ನೋವು-ನಲಿವುಗಳು' ಒಬ್ಬ ಹೋರಾಟಗಾರನ ಮನೋವೇದನೆಯ ಕಥೆಯಾಗಿದೆ.

1941ರಲ್ಲಿ ಗಾಂಧೀಜಿಯವರಿಂದ ದೀಕ್ಷೆ ಪಡೆದು ಚಳುವಳಿಯಲ್ಲಿ ಧುಮುಕಿದ ದಾಬಡೆ ಸ್ವಾತಂತ್ರ್ಯ ಹೋರಾಟದಲ್ಲಿ 33 ತಿಂಗಳ ಕಠಿಣ ಶಿಕ್ಷೆ ಅನುಭವಿಸಿದರು. ಸರ್ವೋದಯ ಸಂಚಾಲಕರಾಗಿದ್ದ ದಾಬಡೆಯವರು ಜೇಲಿನಲ್ಲಿ ಕಷ್ಟ ಕಂಡರು. 26ನೇ ವಯಸ್ಸಿನಲ್ಲಿ ಗಾಂಧೀಜಿಯವರನ್ನು ಕಂಡು ಜೀವನವನ್ನು ರಚನಾತ್ಮಕ ಕಾರ್ಯಕ್ಕೆ ಮುಡುಪಾಗಿಡು ಎಂಬ ಆಶೀರ್ವಾದ ಪಡೆದರು. ಅವರೊಂದಿಗೆ ಹೋರಾಟಕ್ಕಿಳಿದ ಅವರ ಪತ್ನಿ ಶಕುಂತಲಾ

ದಾಬಡೆಯವರದ್ದು ಕರುಣಾಜನಕ ಕಥೆ. ಎಲ್ಲೂ ಬೀಗದ, ಎಲ್ಲೂ ಕಷ್ಟ ಅನುಭವಿಸಿದ್ದು ಹೇಳಿಕೊಳ್ಳದ ದಾಬಡೆಯವರದ್ದು ಸ್ವಾರ್ಥರಹಿತ ನೋಟ. "ಮಹಾತ್ಮಾ ಗಾಂಧೀ ಅವರು ಹೂಡಿದ ಕೊನೆಯ ಹೋರಾಟದಲ್ಲಿ ನನ್ನ ಪಾತ್ರವೇನು ? ನಾನು ಸಾಧಿಸಿದ್ದೇನು ?" ಎಂದು ನನ್ನನ್ನು ನಾನೇ ಅನೇಕ ಸಲ ಕೇಳಿಕೊಂಡಿದ್ದೇನೆ ಎನ್ನುತ್ತಾರೆ ನರಸಿಂಹ ದಾಬಡೆ. ಮಹಾದೇವ ಮೈಲಾರ ಮತ್ತಿತರರು ಪ್ರಾಣ ಕಳೆದುಕೊಂಡರು. ಕೆಲವರು ನಗೆ ಮೊಗದಿಂದ ನೇಣುಗಂಬ ಏರಿದರು. ಅವರನ್ನೆಲ್ಲ ನೆನೆಸಿಕೊಂಡರೆ ಅವರ ಮುಂದೆ ನಾನು ಚಿಕ್ಕವನಾಗಿ ಕಾಣುತ್ತೇನೆ ಎಂದು ದಾಬಡೆಯವರು ಹೇಳುವುದು ಸೌಜನ್ಯತೆಯ ಪ್ರತೀಕವಾಗಿದೆ. ಇದೊಂದು ಮನನೀಯ ಕಥೆ.

● ಗಂಗಾಧರ ಮೊದಲಿಯಾರ್

22-12-1996 ಪ್ರಜಾವಾಣಿ, ಬೆಂಗಳೂರು

❖❖❖

## ಗಾಂಧೀಜಿಗೆ ಮಾತುಕೊಟ್ಟಂತೆ ನಡೆದುಕೊಂಡ ದಾಬಡೆ

ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವು ದಾಖಲು ಮಾಡುತ್ತ ನರಸಿಂಹ ದಾಬಡೆಯವರು ಆ ಹೋರಾಟದ ಇಣುಕುಗಳನ್ನು ಅಕ್ಷರಗಳಲ್ಲಿ ಜೀವಂತವಾಗಿ ಓದುಗರ ಮನಃಪಟಲದ ಮೇಲೆ ಚಿತ್ರಿತವಾಗುವಂತೆ ಮಾಡಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಕಾಯಾ, ವಾಚಾ, ಮನಸಾ, ಪಾಲ್ಗೊಂಡು ದೇಶವನ್ನು ಗುಲಾಮಗಿರಿಯಿಂದ ಪಾರು ಮಾಡಿದ ಮಹನೀಯರಲ್ಲಿ ನಮ್ಮ ನರಸಿಂಹ ದಾಬಡೆಯಂಥವರು ಮಾರ್ಗದರ್ಶಕರಾಗಿ ಇರುವದೇ ಒಂದು ಭಾಗ್ಯ.

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡದ್ದನ್ನೇ ಬಂಡವಾಳ ಮಾಡಿಕೊಂಡು ಎಲ್ಲ ಅನುಕೂಲ ಐಷಾರಾಮಗಳನ್ನು ಅನುಭವಿಸುತ್ತಿರುವವರು ನಮ್ಮ ಮುಂದೆ ಲೆಕ್ಕವಿಲ್ಲದಷ್ಟು ಇದ್ದಾರೆ. ಆದರೆ ರಾಷ್ಟ್ರಪಿತನನ್ನು ಕಂಡು ಅವರಿಂದ ಅನುಜ್ಞೆ ಪಡೆದು ಅವರಿಗೆ ಕೊಟ್ಟ ಮಾತಿನಂತೆ ನಡೆದುಕೊಂಡವರು ಕೆಲವೇ ಬೆರಳೆಣಿಕೆಯಷ್ಟು ಮಾತ್ರವೇನೋ !

ಶ್ರೀ ನರಸಿಂಹ ದಾಬಡೆಯವರು ಗಾಂಧೀಜಿಯವರ ಅನುಜ್ಞೆಯನ್ನು ಪೂರ್ಣವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರು. ಅವರಿಗೆ ಅಂದು ಸೇವಾಗ್ರಾಮದಲ್ಲಿ ಕೊಟ್ಟ ವಚನಕ್ಕೆ ಬದ್ಧರಾಗಿ ಖಾದಿ ಮತ್ತು ಸರ್ವೋದಯ ಕಾರ್ಯಕ್ರಮಗಳಿಗೆ ತಮ್ಮನ್ನು ಅವರು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ವಿಧಾಯಕ ಕಾರ್ಯಗಳಲ್ಲಿ ಶ್ರೇಯಸ್ಸು ಕಂಡಿದ್ದಾರೆ. ಇತರ ಅನೇಕರಂತೆ ರಾಜಕೀಯಕ್ಕಿಳಿದಿದ್ದರೆ ದಾಬಡೆಯವರು ಏನೇನೋ ಆಗಬಹುದಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ದೀರ್ಘ ಕಾಲದ ಜೈಲು ಶಿಕ್ಷೆ ಅನುಭವಿಸಿದರು. ಭೂಗತ ಹೋರಾಟದಲ್ಲಿ ಪಡಬಾರದ ಕಷ್ಟಪಟ್ಟರು. 1941 ರ ಸತ್ಯಾಗ್ರಹದಲ್ಲಿ ಅವರನ್ನು ಮೂರು ತಿಂಗಳು ಬೆಳಗಾವಿ ಜೈಲಿನಲ್ಲಿ ಸಶ್ರಮ ಶಿಕ್ಷೆಗೆ ಒಳಪಡಿಸಲಾಯಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನರಸಿಂಹ ದಾಬಡೆಯವರು ಭೂಗತರಾಗಿ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ನಡೆಸಿ ಕೊನೆಗೆ ಬಂಧಿಸಲ್ಪಟ್ಟು 30 ತಿಂಗಳ ಕಾಲ ಜೈಲು ಶಿಕ್ಷೆಗೆ ಗುರಿಯಾದರು.

ವಿಸಾಪೂರ ಬೆಳಗಾವಿ ಜೈಲುಗಳಲ್ಲಿ ತಾವು ಒಟ್ಟು 33 ತಿಂಗಳು ಅನುಭವಿಸಿದ ಶಿಕ್ಷೆಯನ್ನು, ಹದಿನೆಂಟು ತಿಂಗಳು ಭೂಗತರಾಗಿ ನಡೆಸಿದ ಹೋರಾಟವನ್ನು ತಮ್ಮ ಕೃತಿಯಲ್ಲಿ ದಾಬಡೆ ಅವರು ಜೀವಂತವಾಗಿ ಚಿತ್ರಿಸಿದ್ದಾರೆ. ಹೀಗೆ ಚಿತ್ರಿಸಿದ್ದನ್ನು ಅವರ ಒಕ್ಕಣಿಕೆಯಲ್ಲಿ ಓದುವದೇ ಚಂದ.

ನರಸಿಂಹ ದಾಬಡೆ ಅವರು ಭೂಗತರಾಗಿದ್ದಾಗ ಅವರಿಗೆ ಮಗಳು ಹುಟ್ಟಿದಳು. ಹುಟ್ಟಿದ ಏಳು ತಿಂಗಳ ನಂತರ ತಮ್ಮ ಮಗುವನ್ನು ಅವರು ಭೂಗತರಾಗಿಯೇ ಕಂಡರು. ಮಗು ಜನಿಸಿದ ಸುದ್ದಿ ತಿಳಿದ ಕೂಡಲೆ ಅವರು ಸೂಚಿಸಿದ ಹೆಸರು "ಭಾರತಿ". ರಾಷ್ಟ್ರೀಯತೆಯ ಸಂಕೇತವಾಗಿ ಅವರು ತಮ್ಮ ಮಗಳಿಗೆ ಈ ಹೆಸರನ್ನು ಸೂಚಿಸಿದ್ದರು. ಪತ್ನಿ ಶಕುಂತಲಾ ಆ ಹೆಸರನ್ನು ಇಟ್ಟರು.

ಭಾರತಿಗೆ ಏಳು ತಿಂಗಳು ತುಂಬವ ವೇಳೆಗೆ ಶಕುಂತಲಾ ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಬಂಧನಕ್ಕೊಳಗಾದರು. ಭಾರತಿಯನ್ನು ಎತ್ತಿಕೊಂಡೇ ಅವರು ಜೈಲಿಗೆ ತೆರಳಿದರು.

'ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು' ಶ್ರೀ ನರಸಿಂಹ ದಾಬಡೆ ಅವರ ಹೋರಾಟವನ್ನಷ್ಟೇ ಸಾದರಪಡಿಸುವದಿಲ್ಲ. ಈ ಹೊತ್ತಿಗೆಯು ಸ್ವಾತಂತ್ರ್ಯ ಹೋರಾಟದ, ಅದರಲ್ಲಿಯೂ ಕರ್ನಾಟಕದಲ್ಲಿ ಆ ದಿನಗಳಲ್ಲಿ ನಡೆದ ಘಟನಾವಳಿಗಳ ಸ್ಥೂಲ ದರ್ಶನವನ್ನು ಸೂಕ್ಷ್ಮವಾಗಿ ಮೂಡಿಸುತ್ತದೆ.

● **ಶ್ರೀ ಸುಭಗ**

ಕರ್ಮವೀರ ವಾರಪತ್ರಿಕೆ, ಬೆಂಗಳೂರು

◆◆◆

# ಸ್ವಾತಂತ್ರ್ಯಯೋಧನ ಮನ ಮಿಡಿಯುವ ಕಥೆ

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಯಾವ ಕಷ್ಟ ನಷ್ಟಗಳಿಗೂ ಹೆದರದೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅದರ ಫಲಾಪೇಕ್ಷೆಗೆ ಹಾತೊರೆಯದೆ, ರಾಜಕೀಯ ನಾಯಕತ್ವವನ್ನೂ ಅಪೇಕ್ಷೆ

ಪಡದೆ, ಸಾಮಾನ್ಯ ಜೀವನ ನಡೆಸಿದ ಒಬ್ಬ ಸ್ವಾತಂತ್ರ್ಯ ಯೋಧನ ಆತ್ಮಕಥೆ ಇಲ್ಲಿದೆ. ಮಹಾತ್ಮಾ ಗಾಂಧೀಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಅನೇಕ ಯುವಕರಲ್ಲಿ ಶ್ರೀ ನರಸಿಂಹ ದಾಬಡೆ ಒಬ್ಬರು. ಆದರೆ ಅವರು ಮುನ್ನಡೆದ ರೀತಿ ಮಾತ್ರ ವೈಶಿಷ್ಟ್ಯಪೂರ್ಣವಾದುದಾಗಿದೆ. ತಮ್ಮ ಹೋರಾಟದ ಜೀವನದಲ್ಲಿ ಸಂಪೂರ್ಣ ಸಹಾನುಭೂತಿ ಮತ್ತು ಸಹಯೋಗವನ್ನು ನೀಡಿದ ಪತ್ನಿಯನ್ನು ಪಡೆದದ್ದೂ ಶ್ರೀ ದಾಬಡೆಯವರ ವೈಶಿಷ್ಟ್ಯವೇ. ನಾಳಿನ ಬಾಳು ಏನೆಂಬುದನ್ನು ವಿಚಾರ ಮಾಡದೇ ಶ್ರೀ ದಾಬಡೆಯವರು ಜೇಲಿಗೆ ಹೋದಾಗ ಅವರ ಪತ್ನಿ ಶಕುಂತಲಾಬಾಯಿಯವರು ಅನುಭವಿಸಿದ ಸಂಕಟ ಮತ್ತು ಮನೋವೇದನೆಗಳು ಈ ಪುಸ್ತಕದಲ್ಲಿ ಯಥಾವತ್ತಾಗಿ ನಿವೇದಿಸಲ್ಪಟ್ಟಿವೆ. ಅವುಗಳನ್ನು ಓದುವಾಗ ಯಾರ ಕಣ್ಣಲ್ಲೂ ನೀರು ಉದುರದೆ ಇರಲಾರದು. ಶ್ರೀ ನರಸಿಂಹ ದಾಬಡೆಯವರು ತಾವು ಸಾಹಿತಿ ಅಲ್ಲ ಎಂದು ಬರೆದಿದ್ದಾರೆ. ಆದರೆ ಅವರು ಸಾಹಿತಿ ಅಲ್ಲವಾದುದರಿಂದಲೇ ಜೈಲಿಗೆ ಹೋಗಿ ದೈಹಿಕ ಕಷ್ಟಗಳನ್ನು ಅನುಭವಿಸಿದ್ದಲ್ಲದೆ, ಕೌಟುಂಬಿಕ ಮತ್ತು ಮನೋವೇದನೆಗಳನ್ನೂ ಎಷ್ಟರ ಮಟ್ಟಿಗೆ ಅನುಭವಿಸಿದರು ಎಂಬುದಕ್ಕೆ ಈ ಗ್ರಂಥ ಕೈಗನ್ನಡಿಯಾಗಿದೆ. ಸಾವಿರ, ಸಾವಿರ ಸ್ವಾತಂತ್ರ್ಯ ಯೋಧರ ಕುಟುಂಬಗಳು ಎಂಥ ಮೈನಡುಗಿಸುವ ಪರೀಕ್ಷಾ ಪ್ರಸಂಗಗಳಲ್ಲೂ ಎದೆಗೆಡದೆ ಮುನ್ನಡೆದುದರಿಂದಲೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತು ಎಂಬ ಚಿತ್ರ ಇದನ್ನೋದಿದಾಗ ಕಣ್ಮುಂದೆ ಕಟ್ಟುತ್ತದೆ. ಅವುಗಳಿಗೆಲ್ಲ ಇದೊಂದು ಮಾದರಿಯಾಗಿದೆ. ಪುಸ್ತಕಕ್ಕೆ ನೋವು-ನಲಿವು ಎಂದು ಹೆಸರಿಟ್ಟಿದ್ದರೂ ನೋವನ್ನೇ ನಲಿವನ್ನಾಗಿ ಭಾವಿಸಿದ ಬಾಳಿನ ಕತೆ ಇದಾಗಿದೆ ಎಂಬುದನ್ನು ಮರೆಯುವಂತಿಲ್ಲ. ಇದು ದಾಬಡೆಯವರ ವೈಯಕ್ತಿಕ ಜೀವನವಾಗಿದ್ದರೂ ಇನ್ನೂ ಅನೇಕ ಸ್ವಾತಂತ್ರ್ಯಯೋಧರು ಇಂಥ ದಿವ್ಯವನ್ನು ಅನುಭವಿಸಿದ್ದಾರೆಂಬಲ್ಲಿ ಸಂದೇಹವಿಲ್ಲ. ಅವರೆಲ್ಲರೂ ಅಲ್ಲದಿದ್ದರೂ ಅನೇಕರಾದರೂ ತಮ್ಮ ಅನುಭವಗಳನ್ನು ಈ ರೀತಿ ಬರೆದರೆ ಅದು ಆ ಪೀಳಿಗೆಯು ದೇಶಕ್ಕಾಗಿ ಮಾಡಿದ ತ್ಯಾಗದ ಸತ್ಯ ಚಿತ್ರಣವಾದೀತು.

● **ಶ್ರೀ ಸುರೇಂದ್ರ ದಾನಿ**
ಖಾದಿ ಜಗತ್ತು, ಹುಬ್ಬಳ್ಳಿ

❖❖❖

## ದಾಬಡೆ ದಂಪತಿಗಳು - ಅನುಭವ ಕಥನ

ನಮ್ಮ ಪರಿವಾರದ ಬಳಗದ ಹಿರಿಯರೂ, ಸ್ವಾತಂತ್ರ್ಯ ಯೋಧರೂ ಆದ ಶ್ರೀ ನರಸಿಂಹ ದಾಬಡೆಯವರು ತಮ್ಮ ಹೋರಾಟ ಜೀವನದ ಅನುಭವಗಳನ್ನು ನೆನೆಪಿಸಿಕೊಂಡು ಈ ಪುಸ್ತಕ

ಬರೆದಿದ್ದಾರೆ. ಇದರ ಕೆಲ ಭಾಗ ಈ ಮೊದಲು ಪರಿವಾರ ಪತ್ರಿಕೆಯಲ್ಲಿ ನೆನಪಿನ ಸುರುಳಿ ಮಾಲಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿ ಪ್ರಕಟವಾಗದ ಇನ್ನೂ ಹೆಚ್ಚಿನ ಕೆಲಭಾಗಗಳೂ ಈ ಪುಸ್ತಕದಲ್ಲಿ ಸೇರಿಸಲ್ಪಟ್ಟಿವೆ. ಇದನ್ನು ಒಂದು ರೀತಿಯಲ್ಲಿ ಆತ್ಮ ಚರಿತ್ರೆಯೆಂದರೂ ಸಲ್ಲುತ್ತದೆ. ಶ್ರೀ ದಾಬಡೆಯವರು ತಮ್ಮ ಕ್ರಿಯಾಶೀಲ ಜೀವನದ ನೆನಪುಗಳನ್ನೆಲ್ಲ ಇದರಲ್ಲಿ ಕ್ರಮವಾಗಿ ಸಂಗ್ರಹಿಸಿದ್ದಾರೆ. ನಮ್ಮ ಪರಿವಾರದ ಬಳಗದಲ್ಲಿ ಇಂಥ ಗ್ರಂಥ ಹೊರಬರುತ್ತಿರುವುದು ಇದೇ ಮೊದಲು.

ಶ್ರೀ ನರಸಿಂಹ ದಾಬಡೆಯವರು ಹರೆಯದ ಹುಮ್ಮಸ್ಸಿನಲ್ಲಿಯೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮ್ಮಿಕ್ಕಿದರು. ಸುಖ ಸಂತೋಷಗಳ ನಿಶ್ಚಿಂತ ಜೀವನದ ಕನಸನ್ನು ಹೋಮ ಮಾಡಿ ಕಷ್ಟ ಕಾರ್ಪಣ್ಯಗಳ ಜೀವನವನ್ನು ಆರಿಸಿಕೊಂಡರು. ಸಂಸಾರ ರಥವನ್ನು ಸಾಗಿಸುವಾಗ ಇಬ್ಬರೂ ಕಣ್ಣೀರಿನಲ್ಲೇ ಕೈತೊಳೆಯುತ್ತಿದ್ದರೂ ಧೃತಿಗೆಡದೆ ದೇಶಭಕ್ತಿಯ ವ್ರತವನ್ನು ಮುನ್ನಡೆಸಿಕೊಂಡು ಬಂದರು. ಈ ಜೀವನದ ನೆನಪುಗಳನ್ನು ಶ್ರೀ ದಾಬಡೆಯವರು ಮತ್ತು ಅವರ ಪತ್ನಿ ದಿ. ಶಕುಂತಲಾಬಾಯಿಯವರು ಯಾವ ಕೃತಕತೆ ಅಥವಾ ಉತ್ಪ್ರೇಕ್ಷೆ ಇಲ್ಲದೆ ಬರೆದಿದ್ದಾರೆ. ಓದುತ್ತ ಹೋದಂತೆ ಸ್ವಾಭಾವಿಕವಾಗಿಯೇ ಹೃದಯ ಮಿಡಿಯುತ್ತದೆ.

ಶ್ರೀ ನರಸಿಂಹ ದಾಬಡೆಯವರು ಜೇಲಿನಲ್ಲಿದ್ದಾಗ ಸಂಸಾರವನ್ನು ನಡೆಸಲು ಅವರ ಪತ್ನಿ ಅನುಭವಿಸುತ್ತಿದ್ದ ಕಷ್ಟಕಾರ್ಪಣ್ಯಗಳು, ಪರಸ್ಪರರು ಭೆಟ್ಟಿ ಆದಾಗ ತಮ್ಮ ದುಃಖ-ದುಮ್ಮಾನ ಮತ್ತು ಅಸಹಾಯಕತೆಗಳ ವಿನಿಮಯದಲ್ಲೇ ಕಂಡುಕೊಳ್ಳುತ್ತಿದ್ದ ಮನಸ್ಸಿನ ಸಮಾಧಾನ, ಬಂಧು ಬಳಗದವರ ಅಸಡ್ಡೆ ಮತ್ತು ಚುಚ್ಚು ಮಾತುಗಳಿಗೆ ಕಿವುಡುಗಿವಿ ಮಾಡುವದು ಮೊದಲಾದವುಗಳು ಎಂಥ ಕಠಿಣ ಮನಸ್ಸನ್ನೂ ಕೆದಕುವಂತಿವೆ. ಓದುತ್ತ ಹೋದಂತೆ ಈ ಅಪರಾಧಕ್ಕೆ ನಾವೂ ಕೆಲಮಟ್ಟಿಗಾದರೂ ಕಾರಣವೇನೋ ಎಂದು ನಮ್ಮ ಮೈಯನ್ನು ನಾವೇ ಮುಟ್ಟಿಕೊಳ್ಳುವಂತಾಗುತ್ತದೆ.

ಪತಿ-ಪತ್ನಿಯರಿಬ್ಬರ ಆತ್ಮಕಥೆಯೂ ಒಂದೇ ಗುಚ್ಛದಲ್ಲಿ ಬಂದ ಒಂದು ಅಪರೂಪದ ಕೃತಿಯಾಗಿದೆ.

● ಪರಿವಾರ ಪತ್ರಿಕೆ
ಹುಬ್ಬಳ್ಳಿ

◆◆◆

ನನ್ನ ದೃಷ್ಟಿಯಲ್ಲಿ ಶ್ರೀ ನರಸಿಂಹ ದಾಬಡೆಯವರು ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳನ್ನು ಮನಮುಟ್ಟುವಂತೆ ಬಣ್ಣಿಸಿದ್ದಾರೆ. ಹಾಗೆಯೇ ಇದೊಂದು ಅತ್ಯಂತ ಶ್ರೇಷ್ಠವಾದ, ಅಪೂರ್ವವಾದ ಗ್ರಂಥವಿದ್ದು, ಇಂದಿನ ತರುಣರು ಅದರಲ್ಲಿಯೂ ವಿದ್ಯಾರ್ಥಿಗಳು ಓದಿ ಮನನ

ಮಾಡಿಕೊಂಡು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾವಿರಾರು ಜನರು ತಮ್ಮ ನೆತ್ತರನ್ನು ಹೇಗೆ ಹರಿಸಿದ್ದರು ಎಂಬುದನ್ನು ತಿಳಿದುಕೊಳ್ಳಬೇಕು.

ಇದರಲ್ಲಿ 10 ಅಧ್ಯಾಯಗಳಿದ್ದು, ಮಹಾತ್ಮರ ಪಾವನ ದರ್ಶನದಿಂದಲೇ ಪ್ರಾರಂಭವಾಗುತ್ತದೆ. ಮುಂದೆ ವೈಯಕ್ತಿಕ ಸತ್ಯಾಗ್ರಹದ ವಿವರಗಳು, ಜೈಲಿನಲ್ಲಿ ಜರುಗಿದ ಅನೇಕಾನೇಕ ಘಟನೆಗಳನ್ನು ಮನಮುಟ್ಟುವಂತೆ ಬಣ್ಣಿಸಿದ್ದಾರೆ. ಮುಂದೆ ಅವರ ಮತ್ತು ಇತರ ಕಾರ್ಯಕರ್ತರ ಭೂಗತವಾಸದ ರೋಮಾಂಚಕ ಘಟನೆಗಳನ್ನು, ಅದರಲ್ಲಿ ಒಂದಕ್ಷರವೂ ಅತಿರಂಜಿತ ಅಥವಾ ಸ್ವಕಪೋಲ ಕಲ್ಪಿತವಿರದೆ ಪ್ರತ್ಯಕ್ಷ ತಾವು ಅನುಭವಿಸಿದ ಕೆಲವು ಘಟನೆಗಳನ್ನು ಹೆಕ್ಕಿ ಚಿತ್ರಿಸಿದ್ದಾರೆ.

ನನ್ನ ದೃಷ್ಟಿಯಲ್ಲಿ ಶ್ರೀ ನರಸಿಂಹ ದಾಬಡೆಯವರು ಈ ಗ್ರಂಥವನ್ನು ಪ್ರಕಟಿಸಿ ನಮ್ಮ ಸಮಾಜಕ್ಕೆ ತುಂಬ ಉಪಕಾರ ಮಾಡಿದ್ದಾರೆ. ಜೀವನ ಮೌಲ್ಯಗಳು ನಶಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಈ ಗ್ರಂಥವು ಗಾಂಧೀ ತತ್ವಗಳನ್ನು ಎತ್ತಿ ತೋರಿಸುತ್ತದೆ. ಶಾಲಾ ಮಕ್ಕಳು ಓದಲೇಬೇಕಾದ ಗ್ರಂಥವಿದು.

**● ಶ್ರೀ ಕೆ. ಎಸ್. ರಾಜಪ್ಪಾ**
ಕಾರ್ಯಾಧ್ಯಕ್ಷರು
ಅಖಿಲ ಭಾರತ ಸ್ವಾತಂತ್ರ್ಯಯೋಧರ ಸಂಘ

**● ಶ್ರೀ ಎನ್. ಆರ್. ಮಠದ**
ಪ್ರಧಾನ ಕಾರ್ಯದರ್ಶಿ
ಅಖಿಲ ಭಾರತ ಸ್ವಾತಂತ್ರ್ಯಯೋಧರ ಸಂಘ

❖❖❖

ಈ ಗ್ರಂಥವನ್ನೋದುವಾಗ ಬಾಲ್ಯದಲ್ಲಿ ನಾನು ಕಣ್ಣಾರೆ ಕಂಡ ಸ್ವಾತಂತ್ರ್ಯ ಹೋರಾಟದ ಚಿತ್ರ ಕಣ್ಣಿಗೆ ಕಟ್ಟಿದಂತಾಯಿತು. ಶ್ರೀಮಾನ್ ದಾಬಡೆಯವರು ಭೂಗತ ಕೆಲಸಗಾರರಾಗಿ, ಮನೆ ಮಡದಿ ಮಕ್ಕಳನ್ನು ಮರೆತು, ಜೀವನದ ಹಂಗು ತೊರೆದು ಹೋರಾಡಿದುದನ್ನು ಓದಿದಾಗ ಅಂದಿನ ತ್ಯಾಗಮಯ ಹೋರಾಟದ ಭಾರತ ಇಂದಿನ ಭೋಗಮಯ ಹೋರಾಟದ ನೆನಪು ಮನಸ್ಸಿಗೆ ನೋವನ್ನು ಉಂಟು ಮಾಡಿತು. ಸೋದರಿ ಶಕುಂತಲಾ, ಧಾರವಾಡ ಜಿಲ್ಲಾ ಮಹಿಳಾ ಮಂಡಳದ ಕಾರ್ಯದಲ್ಲಿ ಉತ್ಸಾಹದಿಂದ ನನ್ನೊಂದಿಗೆ ಕಾರ್ಯ ಮಾಡುತ್ತಿದ್ದರು. ಕಸ್ತೂರಬಾ ಫಂಡ್ ಕೂಡಿಸುವಾಗ ಬಗಲಲ್ಲಿ ಗೋಪಾಲನನ್ನು ಎತ್ತಿಕೊಂಡು, ಭಾರತಿಯ ಕೈ ಹಿಡಿದು ಉರಿಯುವ ಬಿಸಿಲಲ್ಲಿ ಮಾಳಮಡ್ಡಿ ಗುಡ್ಡವನ್ನಿಳಿದು ಬರುತ್ತಿದ್ದ ದೃಶ್ಯ ಇಂದಿಗೂ ನನ್ನ ಕಣ್ಣೆದುರು ನಿಲ್ಲುತ್ತದೆ. ಈ ದಂಪತಿಗಳ ಜೀವನದ ಅನುಭವಗಳನ್ನೋದಿದಾಗ ಶ್ರೀರಾಮ ವನವಾಸ, ಪಾಂಡವರ ವನವಾಸ ನೆನಪಿಗೆ ಬಂದಿತು. ಈ ಗ್ರಂಥ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿದೆ. ಈ ಗ್ರಂಥವನ್ನು ಓದಲು ಪ್ರಾರಂಭಿಸಿದಾಗ ಮುಗಿಸುವವರೆಗೆ ಕೆಳಗೆ ಇಡಲು

ಮನಸ್ಸಾಗಲಿಲ್ಲ. ಶಕುಂತಲಾ ಅವರು ಕೈಯಲ್ಲಿ ಕಾಸಿಲ್ಲದೆ, ಜೊತೆಗೆ ಪತಿ ಇಲ್ಲದೆ, ಪಿತ್ರಾರ್ಜಿತ ಆಸ್ತಿ ಇಲ್ಲದೆ, ಚಿಕ್ಕಮಗಳೊಂದಿಗೆ ಜೈಲು ವಾಸವನ್ನನುಭವಿಸಿ ತವರು ಮನೆ, ಆಪ್ತರ ಮನೆ, ಸ್ನೇಹಿತರ ಮನೆಗಳಲ್ಲಿ ವಾಸ ಮಾಡಿ, ಪತಿಯ ಭೇಟಿಗೆ ಜೈಲಿಗೆ ಹೋಗಿ ಬರುತ್ತಿದ್ದ ಭಾಗ ಹೃದಯಸ್ಪರ್ಶಿಯಾಗಿದೆ. ಆರ್ಥಿಕ ತೊಂದರೆಯಿಂದ ಬಳಲುತ್ತಿದರೂ ಅದನ್ನು ಪರಿಗಣಿಸದೆ, ತೋರಗೊಡದೆ ಸದಾ ನಗುಮುಖದಿಂದ ಇರುತ್ತಿದ್ದ ಸೋದರಿಯ ತ್ಯಾಗಮಯ ಜೀವನ ಆದರ್ಶಪ್ರಾಯವಾಗಿದೆ.

**● ಶ್ರೀಮತಿ ಶಾಂತಾದೇವಿ ಮಾಳವಾಡ**
ಧಾರವಾಡ

◆◆◆

## ಶ್ರೀ ದಾಬಡೆಯವರನ್ನು ನಾವು ವಂದಿಸೋಣ

ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ತಮ್ಮ ಸಾಹಸವನ್ನು ಮೆರೆದು ಸರ್ವಸ್ವವನ್ನೂ ತ್ಯಾಗ ಮಾಡಿ ಹೋರಾಡಿದ ಸಾಮಾನ್ಯ ಸತ್ಯಾಗ್ರಹಿಗಳು ಅಪಾರ. ಅಂಥವರಲ್ಲಿ ಒಬ್ಬರು ಶ್ರೀನರಸಿಂಹ ದಾಬಡೆಯವರು. ಬಡ ಕುಟುಂಬದಲ್ಲಿ ಹುಟ್ಟಿ, ದೇಶದ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ, ಅಪಾರ ತ್ಯಾಗ ಮಾಡಿ, ಕಷ್ಟನಷ್ಟ ಅನುಭವಿಸಿ, ಭೂಗತ ಕಾರ್ಯಕರ್ತರಾಗಿ ನಂತರ ಸೆರೆಸಿಕ್ಕು ದೀರ್ಘಕಾಲ ಜೈಲುವಾಸ ಅನುಭವಿಸಿದ ಸತ್ಯಾಗ್ರಹಿ ಶ್ರೀ ದಾಬಡೆ. ಮಹಾತ್ಮಾಜಿ ಅವರಿಂದಲೇ ಖುದ್ದು ಆಶೀರ್ವಾದ ಪಡೆದು ಸಂಗ್ರಾಮಕ್ಕೆ ಪ್ರವೇಶಿಸಿದರು. 1940 ರ ವ್ಯೆಯಕ್ತಿಕ ಸತ್ಯಾಗ್ರಹ, ಅನಂತರ 1942 ರ ಚಲೇಜಾವ್ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ವಿಶೇಷ. ತಂದೆಯ ಮರಣ, ಮಗುವಿನ ನಿಧನ, ಜೀವನೋಪಾಯಕ್ಕೆ ದಾರಿಯಿಲ್ಲದ ಸ್ಥಿತಿ, ಪೊಲೀಸ್‌ರು ಹಿಡಿಯುವ ಆತಂಕ, ಏನೇ ಕಷ್ಟ, ಸಂಕಟ ಬರಲಿ, ತಮ್ಮ ಧ್ಯೇಯವನ್ನು ಬಿಡದ ಸಾಹಸಿ ಶ್ರೀ ದಾಬಡೆ. ಗಂಡ ಜೇಲಿನಲ್ಲಿದ್ದಾಗ, ತಾನು ಧೈರ್ಯ ತಂದುಕೊಂಡು, ಎಳೆಯ ಕೂಸನ್ನು ಎತ್ತಿಕೊಂಡು ಜೈಲಿಗೆ ಹೋದ ವೀರ ಮಹಿಳೆ ಶ್ರೀಮತಿ ಶಕುಂತಲಾ ದಾಬಡೆ. ಈ ದಂಪತಿಗಳು ಸತ್ಯಾಗ್ರಹ ಸಮರದಲ್ಲಿ ಅನುಭವಿಸಿದ ಕಷ್ಟ ನಷ್ಟಗಳು ಹಾಗೆಯೇ ತಾವು ಮಹಾಕಾರ್ಯದಲ್ಲಿ ಒಂದು ದೊಡ್ಡ ಯಜ್ಞದಲ್ಲಿ ಭಾಗವಹಿಸುತ್ತಿದ್ದೇವೆ ಎಂಬ ಹಿರಿಮೆ, ನಲಿವು ಎಲ್ಲವನ್ನೂ ಈ ಪುಸ್ತಕ ತುಂಬ ಸರಳವಾಗಿ, ಆತ್ಮೀಯವಾಗಿ ತಿಳಿಸುತ್ತದೆ. ಶ್ರೀಮತಿ ಶಕುಂತಲಾ ಅವರು ಬರೆದಿರುವ ಒಂದು ಅಧ್ಯಾಯವಂತೂ ಒಬ್ಬ ಹೆಣ್ಣುಮಗಳು ದೇಶಕ್ಕಾಗಿ ಎಂತಹ ತ್ಯಾಗ ಮಾಡಿದಳು, ಎಂಥ ಸೇವೆ ಮಾಡಿದಳು ಎನ್ನುವದನ್ನು ಕನ್ನಡಿ ಹಿಡಿದು ತೋರಿಸುತ್ತದೆ. ಇವತ್ತು ಇದೆಲ್ಲ ನಂಬಿಕೆಗೂ ಮೀರಿದ

ಸಂಗತಿಗಳಾಗಿವೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಅವಕಾಶ ದೊರೆತಿದ್ದ ನನ್ನಂಥವನಿಗೆ ಇದೆಲ್ಲ ಆ ಹಿಂದಿನ ರೋಮಾಂಚಕಾರಿಯಾದ ಹಾಗೂ ಹೃದಯವನ್ನು ಕರಗಿಸುವಂಥ ನೆನಪುಗಳನ್ನು ತಂದುಕೊಡುತ್ತದೆ. ಅತ್ಯಂತ ಸಾಮಾನ್ಯ ವ್ಯಕ್ತಿಗಳೂ ಎಂತಹ ಸಾಹಸವನ್ನು ಮೆರೆದರು ! ಶ್ರೀ ದಾಬಡೆ ಅವರು ಅಂದಿನ ಉತ್ಸಾಹವನ್ನು ನೆನಪಿಸಿಕೊಟ್ಟಿದ್ದಾರೆ ಈ ಸತ್ಯ ಕಥನದಲ್ಲಿ.

ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಅನಂತರ ಎರಡು ಗುಂಪುಗಳಾಗಿ ಒಡೆದು ಹೋದರು. ಅನೇಕರು ರಾಜಕೀಯಕ್ಕೆ ಹೋಗಿ ಅಧಿಕಾರದ ಬೆನ್ನು ಹತ್ತಿದರು. ಎಷ್ಟೋ ಜನ ತಮ್ಮ ತ್ಯಾಗಕ್ಕೆ ಬೇಕಾದಷ್ಟು ಪ್ರತಿಫಲ ಪಡೆದರು. ಕೆಲವರು ಏನೂ ಮಾಡದೆಯೆ ಫಲ ಅನುಭವಿಸಿದರು. ಇನ್ನು ಕೆಲವರು ಗಾಂಧೀನಿಷ್ಠರು, ರಚನಾತ್ಮಕ ಕಾರ್ಯದಲ್ಲಿಯೇ ನಿಂತರು. ಈ ಗುಂಪಿಗೆ ಸೇರಿದವರು ಶ್ರೀ ದಾಬಡೆ. ಸ್ವಾತಂತ್ರ್ಯಾನಂತರ ಶಿಕ್ಷಣ, ಗ್ರಾಮಸೇವೆ, ಖಾದಿ ಮುಂತಾದವುಗಳನ್ನು ಹಿಡಿದು ಅದರಲ್ಲೇ ತಾವು ಹಣ್ಣಾಗುವವರೆಗೂ ದುಡಿದರು. ಸೇವೆಯೆ ಅವರ ಬಾಳು.

ಶ್ರೀ ದಾಬಡೆ ಈ ಪುಸ್ತಕ ಬರೆದು ಉಪಕಾರ ಮಾಡಿದ್ದಾರೆ. ಇಂದಿನ ಜನ ಇದನ್ನು ಓದಬೇಕು. ಇವತ್ತು ನಮ್ಮ ಸಾರ್ವಜನಿಕ ಜೀವನ ದಿಕ್ಕುದೆಸೆ ಇಲ್ಲದೆ ಓಡುತ್ತಿದೆ. ನಮ್ಮ ಭ್ರಷ್ಟಾಚಾರ, ಅಧಿಕಾರದ ಆಸೆ ಎಲ್ಲ ಒಳಗೆ ಕಿತ್ತು ತಿನ್ನುತ್ತಿವೆ. ಈಗಂತೂ ಭಯೋತ್ಪಾದನೆ, ಪಕ್ಕದ ರಾಷ್ಟ್ರಗಳಿಂದ ಅಪಾಯ ಎಲ್ಲವೂ ನಮ್ಮ ಸ್ವಾತಂತ್ರ್ಯಕ್ಕೆ ಕೇಡುಂಟು ಮಾಡುತ್ತಿವೆ. ದೇಶಕ್ಕಾಗಿ ದಾಬಡೆ ಹೇಗೆ ಹೋರಾಡಿದರೋ ದೇಶದ ಉಳಿವಿಗಾಗಿ ನಾವೂ ಹಾಗೆಯೇ ಹೋರಾಡಬೇಕಾಗಿದೆ. ಅಂಥವರಿಗೆ ಈ ಪುಸ್ತಕ ಸ್ಫೂರ್ತಿ ಕೊಡುತ್ತದೆ. ತಮ್ಮ ರೋಮಾಂಚಕ ಅನುಭವವನ್ನು ನಮಗೆ ತಿಳಿಸಿರುವ ಶ್ರೀ ದಾಬಡೆ ಅವರನ್ನು ನಾವು ವಂದಿಸುವದರ ಜೊತೆಗೆ ಅವರಿಗೆ ಭಗವಂತ ಆಯುರಾರೋಗ್ಯ ಕರುಣಿಸಲೆಂದು ಹಾರೈಸೋಣ.

● ಶ್ರೀ ಜಿ. ನಾರಾಯಣ
ಬೆಂಗಳೂರು

❖❖❖

## ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು

ದೇಶದ ಸ್ವಾತಂತ್ರ್ಯ ಹೋರಾಟ ಒಂದು ರೋಮಾಂಚಕ ಕಥನವಾಗಿ ಮೂಡಿ ಬಂದಿದೆ. ಈ ಕೃತಿಯಲ್ಲಿ. ಶ್ರೀ ನರಸಿಂಹ ದಾಬಡೆ ಅವರನ್ನು ದೂರದಿಂದ ಬಲ್ಲೆ. ಅವರ ಸರಳತೆ,

ನೀತಿಯುಕ್ತ ಬದುಕು, ಗಾಂಧೀಪರ ನಿಲುವು ಅನುಭವಿಸಿದ್ದೇನೆ. ಅವರು ಉತ್ತಮ ವಾಗ್ಮಿಗಳು. ಆದರೆ ಉತ್ತಮ ಲೇಖಕರು ಎಂಬುದನ್ನು ತಮ್ಮ ಪುಸ್ತಕದ ಮೂಲಕ ಸಾಬೀತು ಮಾಡಿದ್ದಾರೆ.

ಆಳರಸರ ಗುಂಡಿಗೆ ಎದೆಯೊಡ್ಡಿ, ಲಾಠಿಗೆ ಬೆನ್ನು ನೀಡಿ, ಮಡದಿ ಮಕ್ಕಳ ಮೋಹ ತೊರೆದು ದೇಶಭಕ್ತಿಯಲ್ಲಿ ಮಿಂದು ದೇಶದ ಹಿತಕ್ಕಾಗಿ ಬಾಳಿದ ಹಿರಿಯ ಚೇತನ ನರಸಿಂಹ ದಾಬಡೆ ಅವರ ಹೋರಾಟದ ವರ್ಣನೆ ರೋಮಾಂಚನವನ್ನುಂಟು ಮಾಡುತ್ತದೆ. ಶ್ರೀಮತಿ ಶಕುಂತಲಾ ದಾಬಡೆ ಅವರ ಸ್ಮೃತಿ ಚಿತ್ರಗಳಂತೂ ಮನ ಮಿಡಿಯುತ್ತವೆ.

ಸ್ವಾತಂತ್ರ್ಯದ ನಂತರ ಹುಟ್ಟಿದ ನನ್ನಂಥವರಿಗೆ ಸ್ವಾತಂತ್ರ್ಯ ಹೋರಾಟದ ನೋವು ತಿಳಿಯದು. ನಾವು ದಾಬಡೆಯವರಂತಹ ಸ್ವಾತಂತ್ರ್ಯ ಸೇನಾನಿಗಳ ಜೀವನ ಚರಿತ್ರೆ ಓದಬೇಕು. ಅಂದಾಗ ಸ್ವಾತಂತ್ರ್ಯದ ಅರ್ಥ, ಅದಕ್ಕೆ ತೆತ್ತ ಬೆಲೆಯ ಪರಿಚಯವಾದೀತು. ಅಂತಹ ಜಾಗೃತಿ ಮೂಡಿಸುವ ಕೆಲಸ ಶ್ರೀ ನರಸಿಂಹ ದಾಬಡೆ ಅವರ ಪುಸ್ತಕ ಓದುವದರಿಂದಾಗುವದು.

**● ಶ್ರೀ ಎಚ್. ಕೆ. ಪಾಟೀಲ**
ಜಲಸಂಪನ್ಮೂಲ ಮಂತ್ರಿ, ಬೆಂಗಳೂರು

❖❖❖

ನಿಮ್ಮ ಸಹಧರ್ಮಿಣಿಯ ಸಾಹಸವೂ ಉಲ್ಲೇಖನೀಯ. ಅದನ್ನು ಪ್ರತ್ಯೇಕವಾಗಿಯೇ ಪ್ರಕಟಿಸಬೇಕಿತ್ತೆಂದು ನನ್ನ ಮತ. ಮಹಾರಾಷ್ಟ್ರದಲ್ಲಿ ಅದರಲ್ಲಿಯೂ ಪುಣೆ, ಮುಂಬೈಯಲ್ಲಿಯ ಅನುಭವಗಳನ್ನು ನಾನು ತುಂಬಾ ಸೂಕ್ಷ್ಮವಾಗಿ ಹೆಚ್ಚು ಆಸಕ್ತಿಯಿಂದ ಓದಿದೆ. ನಿಮ್ಮ ಸ್ವಾತಂತ್ರ್ಯ ಹೋರಾಟದ ತಿರುಳು ಕರುಳು ಮುಟ್ಟಿತು. ಇಂಥ ಗ್ರಂಥಗಳು ಕನ್ನಡದಲ್ಲಿ ಇನ್ನೂ ಹೆಚ್ಚು ಹೆಚ್ಚು ಬರಬೇಕು. ನಿಮಗೆ ಪರಮಾತ್ಮನು ಇನ್ನೂ ಹೆಚ್ಚು ಆಯುರಾರೋಗ್ಯ ನೀಡಲಿ, ಸಮಾಜ ಸೇವೆಯ ಅವಕಾಶ ನೀಡಲಿ ಎಂದು ಪ್ರಾರ್ಥಿಸುವೆ. ಬೇರೆ ವಿಷಯಗಳ ಲೇಖನಗಳು ಬರಬೇಕು. ಇಲ್ಲಿಗೆ ಮುದ್ದಾಂ ಬರಬೇಕು. 87 ವರ್ಷದಲ್ಲಿಯ ನಿಮ್ಮ ವಿಲ್‌ಪವರ್ ನಿಜವಾಗಿ ಪ್ರಶಂಸನೀಯ. ನಿಮಗೆ ಜಯವಾಗಲಿ.

**● ಶ್ರೀ ಕೆ. ಎಸ್. ಹೆಗಡೆ**
ಪುಣೆ

ಈ ಸ್ಮರಣೆ, ಸ್ಫೂರ್ತಿದಾಯಕ ಚಿತ್ರವನ್ನು ಶ್ರೀ ದಾಬಡೆ ಅವರು ನೀಡದಿದ್ದರೆ, ಇಂದಿನ ತರುಣ ಪೀಳಿಗೆ ಸ್ಫೂರ್ತಿದಾಯಕ ಆದರ್ಶ ಜೀವನ ಚಿತ್ರಕ್ಕೆ ಎರವಾಗಬೇಕಾಗುತ್ತಿತ್ತು. ಅವರ ಹತ್ತಿರ ವಯಸ್ಸಿನವರಿಗೆ ಶ್ರೀ ದಾಬಡೆ ಅವರ ಜೀವನ ಬೆಲೆ ಗೊತ್ತಾಗುತ್ತಿರಲಿಲ್ಲ. ಆತ್ಮಚರಿತ್ರೆಯ ಸಾಹಿತ್ಯ ಸೌರಭಕ್ಕೆ ಇದೊಂದು ಚಿಕ್ಕ ಕಾಣಿಕೆ ಎಂಬ ಭಾವ ಉದಯಿಸುತ್ತಿರಲಿಲ್ಲ. ಗೃಹಿಣಿಯರ ಮೂಢ ತ್ಯಾಗದ ಮೂಕಸೇವೆಯ ಚೆಲುವು ಕಾಣುತ್ತಿರಲಿಲ್ಲ.

ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು ಎಂಬಲ್ಲಿ ನೋವುಗಳಿಗೆ ಒತ್ತು ಕೊಡಲಾಗಿದೆ. ಆದರೆ ವಸ್ತು ಸ್ಥಿತಿಯೇ ಬೇರೆ. ಮಹಾತ್ಮಾಜೀಯವರ ಅಪ್ಪಣೆ ಪಡೆದು ಹುಮ್ಮಸ್ಸಿನಿಂದ ಸತ್ಯಾಗ್ರಹ ಮಾಡಿದರು, ಜೈಲು ಕಂಡರು. ಜೈಲಿನ ಶಿಕ್ಷೆ ಕಡಿಮೆ ಮಾಡಲು ವಶೀಲಿ ಮಾಡಲಿಲ್ಲ, ಕ್ಷಮಾಪಣೆ ಪತ್ರವನ್ನು ಇವರು ಕೊಡಲಿಲ್ಲ. ಇವರ ಪತ್ನಿಯೂ ಈ ಪತ್ರವನ್ನು ಕೊಡಲು ಒಪ್ಪದೆ ಜೈಲಿಗೆ ಸೇರಿದರು. ಭೂಗತರಾಗಿ ಅನೇಕ ಕಷ್ಟಗಳನ್ನು ಆನಂದದಿಂದ ಸಹಿಸಿ 18 ತಿಂಗಳ ಕಾಲ ತಲೆ ಮರೆಸಿಕೊಂಡ ಸಾಹಸಿ ಇವರು. ಸುದೈವದಿಂದ ಇವರ ಜೈಲುವಾಸವು ಆನಂದಮಂದಿರವಾಗಿತ್ತು. ಅವರೇ "ನನ್ನ ದೃಷ್ಟಿಯಲ್ಲಿ ಜೈಲು ಒಂದು ಕಾರ್ಯಕರ್ತರ ತರಬೇತಿ ಕೇಂದ್ರ. ಓದಲು, ಬರೆಯಲು, ಅಧ್ಯಯನ ಮಾಡಲು, ಚಿಂತನೆ ಮಾಡಲು, ಧ್ಯಾನ-ಜಪ ಮಾಡಲು ಆದರ್ಶ ಸ್ಥಳ. ಸೆರೆಮನೆಯು ಒಂದು ವಿಧವಾಗಿ ಸೋಜಿಗದ ಸಾಮ್ರಾಜ್ಯವೇ ಸರಿ" (ನೋ.ನ.ಪು.-72) ಎಂದು ಜೈಲಿನ ಜೀವನವನ್ನು ಹೊಗಳಿದ್ದಾರೆ. ಸ್ವಾತಂತ್ರ್ಯ ದೊರೆತ ಮೇಲೂ ಮುಂದೇನು ? ಎಂಬ ವಿಚಾರ ಸುಳಿಯಲ್ಲಿ ಸಿಕ್ಕಾಗಲೂ ಅಧಿಕಾರ ಕಟ್ಟಡದ ರಾಜಕಾರಣದಿಂದ ದೂರ ಇರಬೇಕೆಂಬ ನಿರ್ಧಾರ, ಯಾವ ಚುನಾವಣೆಗೂ ನಿಲ್ಲಬಾರದೆಂಬ ನಿಶ್ಚಯ. ಇದು ಸಾಮಾನ್ಯ ಮಾತಲ್ಲ. ಯೋಗಾಯೋಗದಿಂದ ಸರ್ವೋದಯ ಸಂಚಾಲಕರಾಗಿ ಅರವಟಿಗೆ ಎಂಬ ಹಳ್ಳಿಯಲ್ಲಿ ಕಾರ್ಯ ಮಾಡುವ ಸುಸಂಧಿ. ಸರ್ವೋದಯ ಯೋಜನೆ ನಿಂತ ಮೇಲೆ ಖಾದಿ ಆಯೋಗದ ನಿರ್ದೇಶಕರಾಗಿ 17 ವರ್ಷಗಳವರೆಗೆ ಬೇರೆ ಬೇರೆ ರಾಜ್ಯಗಳಲ್ಲಿ ಕಾರ್ಯ ಮಾಡುವ ಹುದ್ದೆ. ಇದೆಲ್ಲ ಅನಾಯಾಸವಾಗಿ ದೊರೆತವು. ಹೀಗೆ ಕರುಣಾಳು ಬೆಳಕು ಇವರ ಕೈಹಿಡಿದು ನಡೆಸಿತು. ದೇವನು ಮನುಷ್ಯನ ಮುಖಾಂತರ ಮಾತನಾಡುವನು (God speaks through the acts of men & women) ಎಂಬ ಗಾಂಧೀಜಿಯ ನುಡಿ ಶ್ರೀ ದಾಬಡೆ ಅವರ ಜೀವನದಲ್ಲಿ ಸತ್ಯ ಸಂಗತಿ ಆಯಿತು. ಸ್ವಸಂತೋಷದಿಂದ ಕಷ್ಟಗಳನ್ನು ಅಪ್ಪುವ ಜೀವಿಗೆ ನೋವು ಎಲ್ಲಿದೆ ? ಸತ್ಯಾಗ್ರಹಿಗೆ ಸೋಲೆಂಬುದೇ ಗೊತ್ತಿಲ್ಲ ಎಂದು ಸಾರಿದ ಗಾಂಧೀಜಿಯ ಅನುಯಾಯಿಗೆ ನೋವು ಎಲ್ಲಿಂದ ಬಂತು ? ಆದುದರಿಂದ ಈ ಪುಸ್ತಕಕ್ಕೆ 'ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳ' ಬದಲು 'ನಲಿವು ನೋವುಗಳು' ಎಂಬ ಶೀರ್ಷಿಕೆ ಒಪ್ಪುವುದು ಎಂದು ನನ್ನ ಭಾವನೆ.

● ಶ್ರೀ ವ್ಹಿ. ಕೆ. ಹೋಳಿಕಟ್ಟಿ

ಧಾರವಾಡ

# ಹಾರ್ದಿಕ ಅಭಿನಂದನೆಗಳು

ನಿಮ್ಮಂಥವರು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಪಟ್ಟ ಪಾಡೆಲ್ಲವೂ ಅಲಿಖಿತವಾಗಿ ಉಳಿದಿದ್ದರೆ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸಕ್ಕೆ ಒಂದು ಕೊರತೆ ಉಂಟಾಗುತ್ತಿತ್ತು. ಆ ದೃಷ್ಟಿಯಿಂದ ನಾವೆಲ್ಲರೂ ನಿಮಗೆ ಚಿರಋಣಿ.

ನೀವು ಸಾಹಿತಿಯಾಗದಿದ್ದರೂ ಸಾಹಿತಿಯಲ್ಲಿರಬೇಕಾದ ಭಾವನಾ ತೀವ್ರತೆ, ಅನುಭವಗಳ ಯಥಾವತ್ತಾದ ಕಥನ, ಭಾಷೆಯ ಮೇಲಿನ ಹಿಡಿತ ಇವೆ.

● ಶ್ರೀ ಎಸ್. ಜಿ. ನಾಡಿಗೇರ
ಧಾರವಾಡ

◆◆◆

# ಹೀಗಿದ್ದಳು ನಮ್ಮ ಅವ್ವ

ಈ ಪುಸ್ತಕ ಪ್ರಕಟಿಸುವ ವಿಚಾರ ಬಂದಾಗ ಎಲ್ಲರಂತೆ ನನಗೂ "ಬರೆದುಕೊಡು ನಿಮ್ಮ ಅವ್ವನ ಬಗ್ಗೆ" ಎಂದು ಹೇಳಿದರು ನಮ್ಮ ತಂದೆ. ಅತ್ಯಂತ ಆತ್ಮೀಯಳಾದ ತಾಯಿಯ ಬಗ್ಗೆ ಬರೆಯುವದು ಏನನ್ನು ? ಎಂಬುದು ಪ್ರಥಮ ಪ್ರಶ್ನೆಯಾದರೆ, ಹೇಗೆ ಬರೆಯಬೇಕೆನ್ನುವದು ಎರಡನೆಯ ಪ್ರಶ್ನೆ. ಎಲ್ಲಿಂದ ಪ್ರಾರಂಭಿಸಬೇಕು ? ಇದು ಮೂರನೇ ಪ್ರಶ್ನೆ.

ಈ ಪುಸ್ತಕದಲ್ಲಿ ನಮ್ಮ ತಂದೆ ಬರೆದುದನ್ನು ನಾವೆಲ್ಲ ಮಕ್ಕಳು ಸಣ್ಣವರಿದ್ದಾಗಿನಿಂದ ಕೇಳುತ್ತ ಬಂದಿದ್ದೇವೆ. ಅದನ್ನು ಕೇಳುತ್ತ ಭಾವನಾಪರವಶ ಆದದ್ದೂ ಉಂಟು. ನಂತರ ವಿಮರ್ಶಾತ್ಮಕ ದೃಷ್ಟಿ ಆರಂಭವಾಯಿತು. ಇದು ನನ್ನ ಬೆಳವಣಿಗೆಯೊಂದಿಗೆ ಉಂಟಾದ ಬದಲಾವಣೆ. ನಮ್ಮ ಬುದ್ಧಿ ಬೆಳೆದಂತೆ ವಿಚಾರದೃಷ್ಟಿಯಲ್ಲಿ ಕೂಡಾ ಬದಲಾಗುವುದು ಸ್ವಾಭಾವಿಕ. ಮೊದಲಿನ ತನ್ಮಯತೆ ಈಗ ಬಾರದು. ಕಾರಣ ಈ ವಯಸ್ಸಿನಲ್ಲಿ ನಾವು ಜೀವನವನ್ನು ನೋಡುವ ದೃಷ್ಟಿ ಬೇರೆ ಆಗುತ್ತದೆ.

ನನ್ನ ತಾಯಿ ಹುಟ್ಟಿದ್ದು ತೀರ ಮಧ್ಯಮ ವರ್ಗದ ಕುಟುಂಬದಲ್ಲಿ. ಮದುವೆ ನಂತರ ಪತಿಯ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆದವಳು. ಅದು ಸ್ವಾತಂತ್ರ್ಯ ಆಂದೋಲನವೂ ಹೌದು, ಹಳ್ಳಿಗಾಡಿನ ಜೀವನವೂ ಹೌದು. ಭಾಷೆ ತಿಳಿಯದ ಪರರಾಜ್ಯದಲ್ಲಿಯ ವಾಸವೂ ಹೌದು. ಯಾವಾಗಲೂ ಸಾದಾ ಜೀವನ. ಒಂದೆರಡು ಬಣ್ಣದ ಖಾದಿ ಸೀರೆ. ಅದರಲ್ಲಿ ವೈವಿಧ್ಯತೆಯಂತೂ ಇಲ್ಲವೇ ಇಲ್ಲ. 1957ರಲ್ಲಿ ಹಳ್ಳಿ ಬಿಡುವಾಗ ಅಲ್ಲಿಯವರು ಇವರಿಬ್ಬರಿಗೆ ಸತ್ಕಾರ ಮಾಡಿದಾಗ

ತಾಯಿಗೆ ಕೊಟ್ಟ ಆ ಟೋಪು ಸೆರಗಿನ ಖಾದಿ ಸೀರೆ ಒಂದೇ ಅವಳುಟ್ಟ ಬೆಲೆ ಬಾಳುವ ಸೀರೆ. ಆಕೆಯ ಸುಂದರ ಬಣ್ಣಕ್ಕೆ ಯಾವ ಬಣ್ಣದ ಸೀರೆಯೂ ಮೆರಗು ಕೊಡುತ್ತಿತ್ತು. ಅಂಥ ಸುಂದರ ಬಣ್ಣ ಅವಳದು.

ಎಲ್ಲದರಲ್ಲಿ ತಾನು ಮುಂದಿರಬೇಕು ಎನ್ನುವ ವಿಚಾರ ಅವಳದು. ಅದಕ್ಕಾಗಿ ಅವಳ ಪರಿಶ್ರಮ ಹೇಳತೀರದು. ಬಳಗದವರಲ್ಲಿ ಎಲ್ಲಿ ತೊಂದರೆ ಎನಿಸಿದರೂ ಅವಳ ಸಹಾಯಹಸ್ತ ಸಿದ್ಧ. ನಮ್ಮ ದೊಡ್ಡ ಮಾಮಾನ ಮಗ ದಿ. ಕೃಷ್ಣ ಒಮ್ಮೆ ಹೇಳಿದ ಮಾತು "ಎಲ್ಲ ಕಡೆ ಪ್ರಯತ್ನ ಪಟ್ಟೆ, ಬರೀ ನಕಾರ. ಕೊನೆಯದಾಗಿ ಇಲ್ಲಿ ಅಕ್ಕನ (ನನ್ನ ತಾಯಿಯನ್ನು ಎಲ್ಲರೂ ಕರೆಯುತ್ತಿದ್ದುದು) ಬಳಿ ಬಂದಿದ್ದೇನೆ. ಇಲ್ಲಿ ನಕಾರ ಇಲ್ಲ." ಇಷ್ಟೊಂದು ವಿಶ್ವಾಸ ಅವಳಲ್ಲಿ.

ಅಂದಿನ ಸೇವಾದಳ ಕಾರ್ಯಕರ್ತರಿಗೆಲ್ಲ ಆಕೆ ಹಿರಿಯತ್ತಿಗೆ. ಯಾವ ಕೆಲಸಕಾರ್ಯ ಬಂದರೂ ಶಕುಂತಲಾಬಾಯಿ ಇದ್ದರೆ ಯಶ ಖಂಡಿತ. ಸೇವಾದಳದ ಶಿಬಿರ ಎಲ್ಲಿಯೇ ಜರುಗಲಿ ಶಕುಂತಲಾಬಾಯಿಯವರು ಇದ್ದರೆ ಎಲ್ಲ ಸ್ವಯಂ ಸೇವಕಿಯರೂ ಹಾಜರು. ಇದೇ ಕಾರಣದಿಂದ ಶಿಬಿರದ ಮುಂದಾಳತ್ವ ಇವಳ ಕೈಯಲ್ಲಿಯೇ. ಹೀಗಾಗಿ ಇತರರಿಗೆ ನಿಶ್ಚಿಂತೆ. ಎಂಥೆಂಥ ಶಿಬಿರಗಳಲ್ಲಿ ಆಕೆ ಸಂಪೂರ್ಣ ಅಡಿಗೆ ಮನೆಯ ಆಧಾರವಾಗಿ ನಿಂತು ಸ್ವತಃ ಅನ್ನಪೂರ್ಣೇಶ್ವರಿ ಎನಿಸಿದ್ದಳು.

ಹಿಂದೆ ಅಂದರೆ 1950 ರ ಸುಮಾರಿಗೆ ಧಾರವಾಡದಲ್ಲಿಯ ಮಹಿಳಾ ಮಂಡಳಕ್ಕೆ ಕಟ್ಟಡವಿರಲಿಲ್ಲ. ಅದಕ್ಕಾಗಿ ಧನ ಸಂಗ್ರಹ ಆರಂಭವಾಯಿತು. "ನಾವೇ ಎಲ್ಲರೂ ಸೇರಿ ಒಂದು ನಾಟಕ ಆಡೋಣ. ಅದು ಒಂದು ಧನ ಸಂಗ್ರಹದ ದಾರಿ" ಎಂದರು ಕೂಡಿದ ಮಹಿಳೆಯರು. ಅದಕ್ಕೆ ಸಿದ್ಧರಾದರು ಕೆಲವರು. ಅದರಲ್ಲಿ ನನ್ನ ತಾಯಿ ಒಬ್ಬಳು. ಶ್ರೀಮತಿ ಸುಶೀಲಾಬಾಯಿ ಹಳಪೇಟೆ ಅವರು ಇದ್ದರು. ಮತ್ತೆ ಯಾರ್‍ಯಾರಿದ್ದರೆಂದು ನನಗೆ ನೆನಪಿಲ್ಲ. ಅದರ ಸೆಕ್ರೆಟರಿಯಾಗಿದ್ದವರು ಶ್ರೀಮತಿ ಶಾಂತಾಬಾಯಿ ಮಾಳವಾಡ. ನಾಟಕ ತಕ್ಷಣವೇ ಸಿದ್ಧ ಮಾಡಿ ಕೊಟ್ಟರು ನಮ್ಮ 'ನಾನೀಕಾಕಾ' ಅರ್ಥಾತ್ ಎನ್ಕೆಯವರು. ನಾಟಕ ನೋಡಲು ನಾನೂ ಹೋಗಿದ್ದೆ. ನಾಟಕ ಪೂರ್ತಿ ತಿಳಿಯದಿದ್ದರೂ ಅದರಲ್ಲಿಯ ಕೆಲವು ಸಂಭಾಷಣೆ ಕಂಠಪಾಠ ಮಾಡಿ ಅವಳೆದುರು ಹೇಳಿ ನಗಿಸುತ್ತಿದ್ದೆ. ಇಂದು ಆ ಜಿಲ್ಲಾ ಮಹಿಳಾ ಮಂಡಳದ ಕಟ್ಟಡ ನೋಡಿದಾಗಲೆಲ್ಲ ನನಗೆ ನನ್ನ ತಾಯಿ ನೆನಪಾಗುತ್ತಾಳೆ. ಅವಳ ಬೆವರ ಹನಿ ಅಲ್ಲಿರುವದು ನನಗೆ ಗೋಚರಿಸಿ ಅದೊಂದು ಪವಿತ್ರಸ್ಥಾನವಾಗಿ ಕಾಣುತ್ತದೆ.

ಆಕೆಗೆ ತನ್ನದೊಂದು ಮನೆ ಬೇಕು ಎನ್ನುವ ಆಸೆ ಬಹಳವಿತ್ತು. ತಂದೆಯವರು ರಜತಗಿರಿಯಲ್ಲಿ ಜಾಗ ತೆಗೆದುಕೊಂಡಾಗ ಸಾಕಷ್ಟು ಸಲ ಅಲ್ಲಿ ಓಡಾಡಿ ಬಂದಳು. ಒಮ್ಮೆ ಅಲ್ಲಿ ರೂಮು ಕಟ್ಟಿಸಲು ಕೊಟ್ಟ ಹಣ ಕೂಡ ಮಾಯವಾಯಿತು. ಬಹಳ ನೊಂದುಕೊಂಡಳು. ಅದೇ ಸ್ಥಳದಲ್ಲಿ ಅವಳು ತೀರಿಕೊಂಡು 30 ವರುಷಗಳ ನಂತರ ನಮ್ಮ ಮನೆ ಸಿದ್ಧವಾದಾಗ,

ನನಗೆ ಅದೇ ದೃಶ್ಯ ನೆನಪಾಗಿ ಇದೆಲ್ಲ ಅವಳ ಹಾಗೂ ತಂದೆಯವರ ಆಶೀರ್ವಾದ ಎಂದು ನಮ್ಮ ಮನೆಗೆ ಆಶಿಷ ಎಂದು ನಾಮಕರಣ ಮಾಡಿ ಸದಾ ಅವರ ಆಶೀರ್ವಾದದಲ್ಲಿದ್ದೇವೆ.

ಹೀಗೆಯೇ ಬರೆಯುತ್ತಾ ಹೋದರೆ ಕೊನೆ ಇಲ್ಲ. ಸದಾ ಅವಳ ಆಶೀರ್ವಾದ ಇದ್ದೇ ಇರುವಾಗ ಇದಕ್ಕೂ ಅವಳ ಆಶೀರ್ವಾದವಿದೆ ಎಂದು ಭಾವಿಸಿ ನನ್ನ ಲೇಖನಕ್ಕೆ ಪೂರ್ಣವಿರಾಮ ಕೊಡುತ್ತೇನೆ.

● **ಸೌ. ಭಾರತಿ ಶಂಕರ ಜೋಶಿ**

ಧಾರವಾಡ.

❖❖❖

# ಧೈರ್ಯವಂತೆ ನನ್ನ ಅವ್ವ

ನನ್ನ ತಾಯಿಗೆ ನಾನು "ಅವ್ವಾ" ಎಂದೇ ಕರೆಯುತ್ತಿದ್ದೆ. ನಾವು ಮೂವರಲ್ಲಿ ನನ್ನ ಮೇಲೆ ಅವಳದು ಹೆಚ್ಚಿನ ಮಮತೆ, ಪ್ರೀತಿ. ಯಾಕೆಂದರೆ ನಾನು ಚಿಕ್ಕವನಿದ್ದಾಗ ಅಶಕ್ತನಿದ್ದೆ.

ನನ್ನ ಅವ್ವ ಅಂದರೆ ನನಗೊಂದು ಸ್ಫೂರ್ತಿಯ ನೆಲೆ. ಅವಳೊಬ್ಬ ಅಸಾಮಾನ್ಯ ವ್ಯಕ್ತಿ. ಸದಾ ಬೇರೆಯವರಿಗೆ ಸಹಾಯ ಮಾಡುವದೇ ಚಿಂತೆ. ನನ್ನ ತಂದೆ ಅಣ್ಣಾವರದಲ್ಲಿ ಒಂದು ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ನಿಜವಾಗಿ ಅದರ ಪಾಲನೆ ಪೋಷಣೆಯನ್ನು ನನ್ನ ಅವ್ವನೇ ಮಾಡುತ್ತಿದ್ದಳು. ಅದನ್ನು ಒಮ್ಮೆ ಆರ್ಥಿಕ ಮುಗ್ಗಟ್ಟಿನಿಂದ ಬಂದ್ ಮಾಡಬೇಕೆಂದು ನನ್ನ ತಂದೆ ಮತ್ತು ಅದರ ನಿಯಂತ್ರಕರು ಸೇರಿ ನಿರ್ಣಯ ಮಾಡಿದ್ದರು. ಆಗ ನನ್ನ ಅವ್ವ ಬಡದಾಡಿ ಸರಿಪಡಿಸಿದಳು. "ನಿಮಗೆ ಆರ್ಥಿಕ ಮುಗ್ಗಟ್ಟು ಇದ್ದರೆ ನಾನು ನನ್ನ ಬಂಗಾರದ ಬಳೆ ಕೊಡಲು ಸಿದ್ಧ" ಎಂದು ಹೇಳಿ ಪರಿಸ್ಥಿತಿಯನ್ನು ಸರಿಪಡಿಸಿದಳು.

ಒಮ್ಮೆ ಅರವಟಿಗೆಯಲ್ಲಿ ಒಂದು ಭಯಂಕರ ಪ್ರಸಂಗ ಬಂತು. ಅದೇನೆಂದರೆ, ಕಛೇರಿಯಲ್ಲಿಟ್ಟ ಭತ್ತದ ಚೀಲ ಕಳುವಾಗಿತ್ತು. ನನ್ನ ತಂದೆ ಊರೊಳಗಿನ ಎಲ್ಲ ಮನೆ ಝಡತಿ ಮಾಡಬೇಕೆಂಬ ನಿರ್ಣಯ ತೆಗೆದುಕೊಂರು. ಆಗ ಓರ್ವ ರೈತ ಈ ಸಂದೇಶದೊಡನೆ ನಮ್ಮ ಮನೆಗೆ ಬಂದು ಹೇಳಿದ. "ಹೀಗೆ ಝಡತಿ ಮಾಡಿದರೆ ದಾಬಡೆಯವರ ಖೂನ ಆಗುವದು. ಕಾರಣ ಅದನ್ನು ಬಿಡಲು ಹೇಳಿರಿ." ಆಗ ನನ್ನ ಅವ್ವಾ ತುಂಬಾ ಧೈರ್ಯದಿಂದ "ದಾಬಡೆ ಅವರ ಜೀವ ನಿಮ್ಮ ಕೈಯಲ್ಲಿಲ್ಲ, ಅದು ಭಗವಂತನ ಕೈಯಲ್ಲಿದೆ" ಎಂದು ಹೇಳಿದಳು. ಅಲ್ಲದೆ ಒಮ್ಮೆ ನಿರ್ಣಯ ತೆಗೆದುಕೊಂಡ ಮೇಲೆ ದಾಬಡೆ ಅವರು ಅದನ್ನು ಬದಲು ಮಾಡುವದಿಲ್ಲ. ಆಗ ನಾನು ಕೇವಲ ಏಳು ವರುಷದವ. ಮನೆಯಲ್ಲಿ ಆಗ ನಾವಿಬ್ಬರೇ ಇದ್ದೆವು. ನಿಜವಾಗಿ ನನ್ನ ಮೇಲೆ ಆಕಾಶವೇ ಕಡಿದುಕೊಂಡು ಬಿದ್ದಂತೆ ಆಗಿತ್ತು.

ನಾವು 1956ರಲ್ಲಿ ಧಾರವಾಡಕ್ಕೆ ಬಂದು 1964ರಲ್ಲಿ ಕೇರಳದ ತ್ರಿವೇಂದ್ರಂಕ್ಕೆ ಹೋದೆವು. ಅಲ್ಲಿ ಮಾತ್ರ ನನ್ನ ಅವ್ವ ನೀರಿನಿಂದ ಹೊರಗೆ ಬಿದ್ದ ಮೀನಿನಂತೆ ಒದ್ದಾಡಿದಳು. ಹೊಸ ಪರಿಸರ ಹೊಂದಿಕೊಳ್ಳುವದು ಸುಲಭವಿರಲಿಲ್ಲ. ಅಲ್ಲಿದ್ದಾಗ ಒಮ್ಮೆ ಮಾತ್ರ ಅಂದರೆ ನಮ್ಮಕ್ಕ ಕುಂಜೂಳನ್ನು ಹೆತ್ತಾಗ ತುಂಬಾ ಸಂತಸದಲ್ಲಿದ್ದಳು. ಮುಂದೆ 1967 ರಲ್ಲಿ ಮಾನಸಿಕ ಸಮಾಧಾನ ಪಡೆಯಲು ಆನಂದಾಶ್ರಮ, ಬಾಗೇವಾಡಿ, ಕೊಲ್ಲಾಪುರ, ಕನ್ನೂರ ಗುರುಸ್ಥಾನಗಳಿಗೆ ಹೋಗಿ ಬಂದಳು. ಕೊನೆಯ ಸಲ ಕನ್ನೂರ ಆಶ್ರಮಕ್ಕೆ ಹೋದಾಗ ಅವ್ವಾ 4-4-67 ರಂದು ಗುರುಪಾದದಲ್ಲಿ ಲೀನವಾದ ತಂತಿ ಬಂತು. ಅಂದೇ ನನ್ನ ಮೇಲಿನ ಪ್ರೀತಿ ವಾತ್ಸಲ್ಯದ ಸೆಲೆ ಬತ್ತಿದಂತಾಯ್ತು. ಧನ್ಯ ಜೀವಿ ನನ್ನ ಅವ್ವ !

● ಪ್ರಕಾಶ ದಾಬಡೆ

❖❖❖

## ಅವ್ವನ ಸೆರಗಿನ ನಂಟು

ನಮ್ಮವ್ವ. ಅವಳ ಬಗ್ಗೆ ನಾನು ಸ್ವತಃ ನೋಡಿದ್ದಕ್ಕಿಂತ ಕೇಳಿದ್ದೇ ಹೆಚ್ಚು. ಏಕೆಂದರೆ ಅವಳು ನಮ್ಮನ್ನೆಲ್ಲ ಬಿಟ್ಟು ನಡೆದಾಗ ನಾನಿನ್ನೂ ಬಹಳ ಸಣ್ಣವ. ಒಂಬತ್ತು ವರ್ಷವೋ, ಹತ್ತೋ ಇರಬೇಕಷ್ಟೆ. ತಾಯಿ ಮಮತೆಯನ್ನು ನಾನುಂಡಿದ್ದು ತೀರಾ ಸ್ವಲ್ಪ.

ಆ ಸ್ವಲ್ಪ ಸಮಯದ ಮಾತೃವಾತ್ಸಲ್ಯವನ್ನೇ ಇಂದಿಗೂ ಮೆಲಕು ಹಾಕುತ್ತಿರುತ್ತೇನೆ ನಾನು. ಅಚ್ಚ ಬಿಳುಪಿನ, ಹಸಿರು ಕಂಗಳ ಅವ್ವನ ಮುಖ ನನ್ನ ಹೃದಯದಲ್ಲಿ ಯಾವಾಗಲೂ ಸ್ಥಿರವಾಗಿದೆ.

ಒಂದು ವಿಷಯ ನನಗೆ ಅವ್ವನ ಬಗ್ಗೆ ನೆನಪಿರುವದು, ಅಥವಾ ಅವ್ವನ ಜೊತೆ ಇದ್ದ ನನ್ನ ಬಾಲ್ಯದ ಬಗ್ಗೆ ಅನ್ನಿ. ಅವಳ ಸೀರಿಯೆಂದರೆ ನನಗೆ ಮಹಾಪ್ರಾಣ. ಇಡೀ ದಿನ ಸೆರಗಿನ ತುದಿ ಹಿಡಿದು ಬಾಯೊಳಗೆ ತುರುಕಿಕೊಂಡು ಚೀಪುತ್ತಿರುತ್ತಿದ್ದೆ. ಒಮ್ಮೊಮ್ಮೆಯಂತೂ ಯಾವುದೋ ಧ್ಯಾನದಲ್ಲಿ ಸೆರಗನ್ನು ಸಿಂಬಿ ಸಿಂಬಿ ಮಾಡಿ ಬಾಯಿ ಹಿಡಿಯುವಷ್ಟು ತುರುಕಿಕೊಂಡು ಕೂತಿರುತ್ತಿದ್ದೆ. ಕೈ ಒರಸಲೆಂದು ಸೆರಗಿಗೆ ತಡಕಾಡಿದರೆ ಅದೆಲ್ಲಿ ಸಿಗಬೇಕು ? "ಲೇ ಗೋಪಿ, ಬಿಡ್ತೀಯಿಲ್ಲೊ ! ನನ್ನ ಸೆರಗು ಪೂರ್ತಿ ಎಂಜಲಾ ಮಾಡಿಟ್ಟೆ ನೋಡು" ಎಂದು ಜಬರಿಸಿದಾಗಲೇ ನನಗೆ ಖಬರು. "ನೀ ಎಲ್ಲಾದ್ರೂ ದೇಶ ಬಿಟ್ಟು ಹೋಗ್ತೀಯಂದ್ರ ಎರಡು ಸೀರೆ ಸೂಟ್‌ಕೇಸಿನೊಳಗ ಹಾಕಿಡ್ತೀನಿ. ಅವ್ವನ ನೆನಪಾದಾಗೆಲ್ಲ ಸೆರಗು ಚೀಪ್ಕೋತ ಕೂತಿಯಂತ" ಎಂದು ಹಗಲೆಲ್ಲ ನನಗೆ ಹೇಳುತ್ತಿದ್ದಳು. ಈಗ ವಿದೇಶದಲ್ಲಿರುವಾಗ ಅವಳ ಮಾತು ಮತ್ತೆ ಮತ್ತೆ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತದೆ.

'ಚೌಲದಾಗ ಡೌಲ ಮಾಡು' ಇದು ನಮ್ಮವ್ವನ ಜೀವನ ವಾಕ್ಯವಾಗಿತ್ತು. ಬೂಟು ಹಾಳಾಯಿತೆಂದು, ಅಂಗಿ ಹರಿಯಿತೆಂದು ಹೊಸದು ಬೇಡಿದಾಗಲೆಲ್ಲ ಈ ಮಾತನ್ನೇ ಹೇಳುತ್ತಿದ್ದಳವಳು. "ಹೊಸಾ ಅಂಗಿ, ಹೊಸಾ ಡ್ರೆಸ್ ಮನುಷ್ಯನ ಚೆಂದ ಹೆಚ್ಚಿಸೋದಿಲ್ಲ. ಅವನ ನಡೆ ನುಡಿಯಾಗ ಶೋಭಾ ಇರ್ತದ. ಹೊಲಿಗೆ ಬಿಚ್ಚಿದ ಅಂಗಿಯನ್ನೂ ಚಲೋತ್ನಾಗ ಹೊಲ್ದು ಹರಕು ಕಾಣದಂತೆ ಹಾಕಿ ಡೌಲಾಗಿ ಓಡಾಡಬಹುದು. ಹಾಗೆ ಇರೋದನ್ನು ಕಲೀಬೇಕು. ಸಾಮಾನು ಹೆಚ್ಚೆಚ್ಚು ತಗೋತ ಹೋದ್ಹಾಂಗ ತೃಪ್ತಿ ಬರೋದಿಲ್ಲ. ಬದಲಿಗೆ ಇನ್ನೂ ಬೇಕೂ ಅನ್ನೋ ಆಸೆನೇ ಜಾಸ್ತಿಯಾಗ್ತದ. ಇದ್ದದ್ರಾಗ ಸೊಗಸು ಮಾಡಿ ಉಟ್ಟುಕೊಂಡ್ರ ಅದರಾಗ ಖರೇ ಖುಷಿ ಇರ್ತದ" ಅವಳ ಈ ಮಾತು ಎಷ್ಟು ಸತ್ಯ ! ನಮ್ಮೆಲ್ಲರ ಜೀವನದಲ್ಲಿ ಈ ತತ್ತ್ವವನ್ನು ಅಳವಡಿಸಿಕೊಂಡೆವೆಂದರೆ ಈ ಭೂಮಿ ಇನ್ನೆಷ್ಟೋ ಕಾಲ ಜೀವಿಗಳನ್ನು ಸಲಹುತ್ತಿರಬಹುದಲ್ಲವೇ ? ನಮ್ಮವ್ವನಿಗೆ ಓದುವ ಹುಚ್ಚು ಬಹಳವಿತ್ತು. ಓದಿದ ಕತೆಗಳನ್ನು ತನ್ನವೇ ಕತೆಗಳನ್ನಾಗಿ ಮಾಡಿ, ರಸಭರಿತವಾಗಿ ಎಷ್ಟು ಬಾರಿ ನನಗೆ ಹೇಳಿದ್ದಿಲ್ಲ ? ಅಕ್ಕ ಮದುವೆಯಾಗಿ ಹೋಗಿದ್ದಳು. ಅಣ್ಣ ಪ್ರಕಾಶ ಹಾಸ್ಟೆಲಿನಲ್ಲಿದ್ದ. ಹೀಗಾಗಿ ಪ್ರತಿರಾತ್ರಿ ಮಗ್ಗುಲಲ್ಲಿ ಮಲಗಿ ಕತೆ ಕೇಳುತ್ತ ನಿದ್ದೆ ಹೋಗುತ್ತಿದ್ದೆ. ಆಕೆ ಅಲ್ಪ ಸ್ವಲ್ಪ ಬರೆಯುವ ರೂಢಿಯನ್ನೂ ಇಟ್ಟುಕೊಂಡಿದ್ದಳು. ಕೇರಳದ ದೇವಸ್ಥಾನಗಳ ಬಗ್ಗೆ ಅವಳು ಬರೆದಿದ್ದು ಆ ದಿನಗಳಲ್ಲಿ ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದವು.

ಆದರೆ ಯಾಕೋ ಆಮೇಲೆ ಅವ್ವನಿಗೆ ಪದೇ ಪದೇ ಆರಾಮವಿರುತ್ತಿರಲಿಲ್ಲ. ಇದರಿಂದ ಓದುವದು, ಬರೆಯುವದು, ನನಗೂ ಕತೆ ಹೇಳುವದು ಎಲ್ಲ ಕಡಿಮೆಯಾಗಿಹೋಯ್ತು. ಎಷ್ಟೋ ಬಾರಿ ಅಡಿಗೆಯನ್ನೂ ಅಣ್ಣನೇ ಮಾಡಬೇಕು. ಅವ್ವ ಮಲಗಿದಳೆಂದರೆ ನಾನೂ ಸಪ್ಪೆ ಮುಖ ಹಾಕಿಕೊಂಡು ಮೂಲೆ ಹಿಡಿದು ಕುಳಿತುಬಿಡುತ್ತಿದ್ದೆ. ಆಗೆಲ್ಲ ಒಂಟಿತನ, ಬೇಸರ ಇವೇ ನನ್ನ ಸಂಗಾತಿಗಳು. ಎಲ್ಲರಂತೆ ನಮ್ಮವ್ವನೂ ಯಾವಾಗಲೂ ಆರಾಮವಾಗಿರಬಾರದೇ ಎಂದು ದೇವರಲ್ಲಿ ಮೊರೆಯಿಟ್ಟಿದ್ದು ಎಷ್ಟು ಬಾರಿಯೋ ! ತ್ರಿವೇಂದ್ರಮ್‌ನಲ್ಲಿದ್ದಾಗ ಒಮ್ಮೆ ಅಣ್ಣ ಟೂರಿಗೆ ಹೋಗಿಬಿಟ್ಟಿದ್ದ. ಅವ್ವನಿಗೆ ಧಿಡೀರ್ ಹುಶಾರು ತಪ್ಪಿತು. ಆಟವಾಡಿಕೊಂಡು ಬಂದ ನಾನು ಅವ್ವನ್ನ ನೋಡಿ ಬೆಚ್ಚಿ ಬಿದ್ದೆ. ಏನು ಮಾಡಬೇಕೋ ತಿಳಿಯಲಿಲ್ಲ. ಹತ್ತಿರದ ಬ್ರಾಹ್ಮಣರ ಹೋಟೆಲ್ಲಿಗೆ ಹೋಗಿ ಇಡ್ಲಿ ತಂದು ತಿನ್ನಿಸಲು ಪ್ರಯತ್ನಿಸಿದೆ. ಅಳುವೊಂದು ನುಗ್ಗಿ ಬರುತ್ತಿತ್ತು. "ದೇವ್ರೇ ! ಅಣ್ಣ ಬೇಗ ಮನೆಗೆ ಬರಲಪ್ಪಾ" ಒಂದೇ ಧ್ಯಾನ. ಪುಣ್ಯ ನನ್ನದು. ಅಣ್ಣ ಮನೆಗೆ ಬಂದೇ ಬಿಟ್ಟ. ಆ ಕ್ಷಣದಲ್ಲಿ ನನಗೆ ಅಣ್ಣ ಬೇರೆಯಲ್ಲ ದೇವರು ಬೇರೆಯಲ್ಲ. ಅಷ್ಟು ಮನಸ್ಸು ನಿರಾಳವಾಯಿತು.

● ಡಾ. ಗೋಪಾಲ ದಾಬಡೆ
ಬೇಲಾಫೀಲ್ಡ್, ಜರ್ಮನಿ.

# ಧನ್ಯ ಜೀವಿ ಅಕ್ಕ

ಅಕ್ಕ ಬರೆದ ಅವಳ ಆತ್ಮಚರಿತ್ರೆಯನ್ನು ಒಂದು, ಎರಡು, ಮೂರು ಸಲ ಓದಿದೆ. ಅದನ್ನು ಮನನ ಮಾಡಿದಂತೆ ಅಕ್ಕನ ಸರಳ ಜೀವನ, ಅಪಾರ ತ್ಯಾಗ, ಕರ್ತವ್ಯನಿಷ್ಠೆ ನೋಡಿ ನನ್ನ ಕೈಗಳು ತಾವಾಗಿಯೇ ಮೇಲೆದ್ದು ಮನದಲ್ಲಿಯೇ ಅವರ ಪಾದಕ್ಕೆ ನಮಸ್ಕರಿಸಿದೆ.

ಇಲ್ಲಿ ಒಂದು ಸಂಗತಿ ಹೇಳಲೇಬೇಕು. ಅದು ಬಹುಶಃ 1956 ನೇ ಇಸ್ವಿ. ಆಗ ದಾಬಡೆ ಅವರು ಇನ್ನೂ ಅರವಟಿಗೆಯಲ್ಲಿಯೇ ಇದ್ದರು. ಅವರ ಮತ್ತು ಅಕ್ಕನ ಬಗ್ಗೆ ತುಂಬಾ ಕೇಳಿದ್ದೆ. ಒಂದು ಕಾರಣದ ನಿಮಿತ್ತ ನಾನು ಅರವಟಿಗೆಗೆ ಅಕ್ಕನ ಭೆಟ್ಟಿಗೆಂದೇ ಹೋದೆ. ದಾಬಡೆ ಅವರು ಊರಲ್ಲಿರಲಿಲ್ಲ. ಮನೆಯ ಪಡಸಾಲೆಯಲ್ಲಿ ಒಂದು ವರುಷದ ಮಗು ಗೋಪಾಲ ಆಟವಾಡುತ್ತಿದ್ದ. ಆತನಿಗೆ ಮುತ್ತಿಟ್ಟು ಒಳಗೆ ಹೋದೆ. ಅಕ್ಕನ ಪ್ರಥಮ ದರ್ಶನ, ಅವರನ್ನು ನೋಡುತ್ತಲೆ ಅವರ ಬಗ್ಗೆ ಗೌರವ ಪೂಜ್ಯ ಭಾವನೆ ಉಕ್ಕಿ ಅವರಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದೆ. ಅಕ್ಕ ಸಂತೋಷದಿಂದ ನನ್ನ ಬೆನ್ನಮೇಲೆ ಕೈಯಾಡಿಸುತ್ತ "ನಿನ್ನ ಬಾಳು ಬಂಗಾರವಾಗಲಿ" ಎಂದು ಹರಸಿದರು. ಆಗ ನನ್ನನ್ನು ಬೀಳ್ಕೊಡುವಾಗ ಒಂದು ಖಣ, ತಾಂಬೂಲ, ಟೆಂಗಿನಕಾಯಿ ಕೊಟ್ಟು ಮನಸಾ ಹರಸಿದರು.

ಮುಂದೆ ಹನ್ನೊಂದು ವರುಷಗಳ ನಂತರ ತಮ್ಮ ಸ್ಥಾನವನ್ನೇ ನನಗೆ ಬಿಟ್ಟು ಕೊಟ್ಟು ನನ್ನ ಕೃತಾರ್ಥಳನ್ನಾಗಿ ಮಾಡಿದರು. ಈ ಮಹಾತ್ಯಾಗಕ್ಕೆ ಏನನ್ನಬೇಕೋ ಗೊತ್ತಿಲ್ಲ. ನಾನು ಈ ಮನೆಗೆ ಬಂದು ಇಪ್ಪತ್ತಾರು ವರುಷಗಳು ಉರುಳಿದವು. ಈ ಅವಧಿಯಲ್ಲಿ ಈ ಮನೆತನದ ಎಲ್ಲ ಸುಖ ದುಃಖಗಳಲ್ಲಿ ಸಹಭಾಗಿಯಾಗಿರುವೆ. ನಾನು ಈ ಮನೆಗೆ ಬರುವ ಪೂರ್ವದಲ್ಲಿಯೇ "ನನ್ನಿಂದ ಸಂತಾನಾಪೇಕ್ಷೆ ಇಲ್ಲ" ಎಂಬುದನ್ನು ಸ್ಪಷ್ಟೀಕರಿಸಿದ್ದರು. ಅದಕ್ಕೆ ನನ್ನ ಒಪ್ಪಿಗೆಯೂ ಇತ್ತು. ನಾನು ಅಕ್ಕನ ಮೂರು ಮಕ್ಕಳಾದ ಭಾರತಿ, ಪ್ರಕಾಶ ಮತ್ತು ಗೋಪಾಲ ಇವರನ್ನು ನನ್ನ ಸ್ವಂತ ಮಕ್ಕಳೆಂದೇ ತಿಳಿದಿದ್ದೇನೆ ಮತ್ತು ಅದರಂತೆ ನಡೆದಿದ್ದೇನೆ. ಅವರೂ ಸಹ ನನ್ನ ಸಂಗಡ ಅನ್ಯೋನ್ಯವಾಗಿಯೇ ಇರುವರು. ಈಗ ನಾನು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಐವರು ಮೊಮ್ಮಕ್ಕಳು ಹಾಗೂ ಓರ್ವ ಮರಿಮೊಮ್ಮಗಳನ್ನು ಪಡೆದು ಧನ್ಯಳಾಗಿರುವೆ. ನನಗೆ ಯಾವ ಕೊರತೆಯೂ ಇಲ್ಲದೆ ಅತ್ಯಂತ ಸಮಾಧಾನ ಮತ್ತು ಸಂತಸದಲ್ಲಿರುವೆ. ಅದೆಷ್ಟೋ ಸಲ ನನ್ನಷ್ಟಕ್ಕೆ ನಾನೇ 'ಧನ್ಯೋಸ್ಮಿ' ಎಂದುಕೊಂಡಿದ್ದೇನೆ. ಈ ಅವಧಿಯಲ್ಲಿ ಅನೇಕ ಘಟನೆಗಳು ಜರುಗಿವೆ. ಧಾರವಾಡದ ತೇಜಸ್ವಿನಗರದಲ್ಲಿ ಸ್ವಂತ ಮನೆಯಾಗಿದೆ. ಪ್ರಕಾಶ, ಗೋಪಾಲ ಇವರ ಮದುವೆ ಅಲ್ಲದೆ ಇಬ್ಬರು ಮೊಮ್ಮಕ್ಕಳಾದ ಕುಂಜು, ರಂಜು ಇವರ ವಿವಾಹವೂ ಆಗಿ ಮರಿಮೊಮ್ಮಗಳು ದೀಪಾ ಬಂದಿದ್ದಾಳೆ. ಇದರ ಹೊರತು ನಿವೇದಿತಾ, ವಿವೇಕಾನಂದ, ಪೂಜಾ ಎಂಬ ಮೊಮ್ಮಕ್ಕಳು ಇರುವರು.

ನನ್ನ ಸೊಸೆಯರಾದ ಸೌ. ತ್ರಿಶೂಲಾ ಮತ್ತು ಸೌ. ಶಾರದಾ, ಅಳಿಯಂದಿರಾದ ಶಂಕರರಾಯರೂ ನನಗೆ ಮಕ್ಕಳಂತೇ ಅನ್ಯೋನ್ಯವಾಗಿರುವರು. ನನ್ನ ಆರೋಗ್ಯ ಅಷ್ಟೊಂದು ಚೆನ್ನಾಗಿರದಿದ್ದರೂ ಬದರಿ ಕೇದಾರದ ಯಾತ್ರೆಯನ್ನೂ ಮಾಡಿಸಿದ್ದಾರೆ. ಹಾಗೆ ನೋಡಿದರೆ ಈ ಅವಧಿ ನನ್ನ ಜೀವನದಲ್ಲಿಯೇ ಸುವರ್ಣಯುಗವೆಂದು ಭಾವಿಸಿರುವೆ. ನನ್ನ ದೃಷ್ಟಿಯಲ್ಲಿ ಇದೆಲ್ಲ ನನ್ನ ಅಕ್ಕನ ಆಶೀರ್ವಾದದ ಫಲವೆಂದೇ ಸ್ವೀಕರಿಸಿರುವೆ. ಧನ್ಯ ಜೀವಿ ಅಕ್ಕಾ (ಶಕುಂತಲಾ). ಅವಳಿಗೆ ನನ್ನ ಸಹಸ್ರ ಸಹಸ್ರ ನಮನ.

**● ಪದ್ಮಿನಿ ನರಸಿಂಹ ದಾಬಡೆ**

ಧಾರವಾಡ

❖❖❖

# ಕರ್ಮಯೋಗಿ ಶಕುಂತಲಾ

ನಮ್ಮಿಬ್ಬರದೂ ಒಂದೇ ಹೆಸರು. ಅವರು ಶಕುಂತಲಾ ದಾಬಡೆ, ನಾನು ಶಕುಂತಲಾ ಕುರ್ತಕೋಟಿ. ಹೀಗೆ ನಾವು ಸುಮಾರು ಎರಡು ದಶಕಗಳ ಕಾಲ ಧಾರವಾಡದಲ್ಲಿ ಕೂಡಿ ಅನೇಕ ಸಂದರ್ಭಗಳಲ್ಲಿ ಕಾರ್ಯ ಮಾಡಿದ್ದುಂಟು. ನಾವಿಬ್ಬರೂ ಖಾಸಾ ಒಡಹುಟ್ಟಿದ ಅಕ್ಕತಂಗಿಯರಂತೆ ಇದ್ದೆವು. ನಾನು ಅವರಿಗೆ ಶಕುತಾಯಿ ಎನ್ನುತ್ತಿದ್ದೆ.

ನನಗೆ ಆಗಾಗ್ಗೆ ಅವರ ನೆನಪು ಆಗುತ್ತದೆ. ಆಗ ನನ್ನ ಕಣ್ಣ ಮುಂದೆ ಅವರ ಪ್ರತ್ಯಕ್ಷ ಮೂರ್ತಿ ಬಂದು ನಿಂತಂತಾಗುವದು. ಅವರ 9 ವಾರಿ ಖಾದಿ ಸೀರೆ, ಬ್ಲೌಸ್, ಬುಚಡಾ, ಹಣೆಯ ಮೇಲೆ ದೊಡ್ಡ ಕುಂಕುಮ, ಕೈಯಲ್ಲಿ ಸಾದಾ ಕಾಜಿನ ಬಳೆ, ಸರಳ ಸೌಜನ್ಯ ಮೂರ್ತಿ, ಮುಖದ ಮೇಲೆ ನಿಷ್ಪಾಪ ಭಾವ. ಯಾವಾಗಲೂ ನಗೆಮುಖ. ಆಗ ಅವರು ಮಾಳಮಡ್ಡಿ ಹುದ್ದಾರ ಕಂಪೌಂಡಿನಲ್ಲಿ ಒಂದು ಚಿಕ್ಕ ಮನೆಯಲ್ಲಿದ್ದರು. ಭಾರತಿ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದಳು. ಅದು 1947ನೇ ಇಸ್ವಿ, ಸ್ವಾತಂತ್ರ್ಯ ಸಿಕ್ಕ ವರ್ಷ. ಆಗ ಕಾರ್ಯಕರ್ತರು ತುಂಬಾ ಕಷ್ಟದಲ್ಲಿರುತ್ತಿದ್ದರು. ದಾರಿ ಹುಡುಕುತ್ತಲಿರುತ್ತಿದ್ದರು. ಜನರ ಸಹಾನುಭೂತಿ ಬೇಕಾದಷ್ಟಿದ್ದರೂ ಆರ್ಥಿಕ ದೃಷ್ಟಿಯಿಂದ ತುಂಬಾ ಅಡಚಣಿಯಲ್ಲಿರುತ್ತಿದ್ದರು. ಆಗ ಇವರ ಕುಟುಂಬದ ಸಮಾಧಾನಕರ ಜೀವನ ನೋಡಿ ನನಗೆ ಸಂತೋಷವಾಗುತ್ತಿತ್ತು.

ಯಾವಾಗಲಾದರೊಮ್ಮೆ ಕಾಲೇಜಿನಲ್ಲಿರುವಾಗ ಇವರ ಮನೆಗೆ ಹೋದರೆ ನನಗೆ ತುಂಬು ಹೃದಯದ ಸ್ವಾಗತ. ಊಟದ ಸಮಯವಿದ್ದರೆ ನಾವು ಮೂವರೂ ಕೂಡಿಯೇ ಊಟಕ್ಕೆ ಕೂಡುವದು. ಇದೊಂದು ಕೌಟುಂಬಿಕ ವಾತಾವರಣ. ನಾವೆಲ್ಲ ನಕ್ಕೋತ ಹರಟೆ ಹೊಡಕೋತ ಇದ್ದಾಗ ಅವರು ತಮ್ಮ ಕೆಲಸಗಳನ್ನು ಮಾಡುತ್ತಿದ್ದರು.

ನನ್ನ ಮತ್ತು ಶಕುತಾಯಿ ಅವರ ಪ್ರಥಮ ಭೆಟ್ಟಿ ದಾಬಡೆ ಅವರು ಹಿಂಡಲಗಾ ಜೇಲಿನಲ್ಲಿದ್ದಾಗ (1945). ಅವರ ಭೆಟ್ಟಿಗೆ ಮಗಳು ಭಾರತಿಯನ್ನೂ ಕರೆದುಕೊಂಡೇ ನನ್ನ ಮನೆಗೆ (ತಂದೆಯ ಮನೆ ಟಿಳಕವಾಡಿ) ಬಂದರು. ಭಾರತಿ ತೀರ ಚಿಕ್ಕವಳು. ಮಧ್ಯಾಹ್ನ ಊಟ ಮಾಡಿ ಸಂಜೆ ಅವರ ಭೆಟ್ಟಿಗೆಂದು ಹಿಂಡಲಗಾ ಜೇಲಿಗೆ ಹೋದೆವು. ಅವರೂ ನಕ್ಕೋತ ಬಂದರು. ನಮ್ಮ ಎಡಬಲಕ್ಕೆ ಜೇಲರ್ ಸಿಪಾಯಿ ಕುಳಿತಿದ್ದರು. ಅಂತೂ ಹದಿನೈದು ನಿಮಿಷದ ಭೆಟ್ಟಿ. ಶಾಸ್ತ್ರ ಮಾಡಿ ಮನೆಗೆ ಬಂದೆವು. ಊಟ ಮಾಡಿ ಮಲಗಿದೆವು. ಮರುದಿನ ಬೆಳಿಗ್ಗೆ ಯಥಾ ಪ್ರಕಾರ ನನ್ನ ತಂದೆ ಎದ್ದು ಬಾವಿ ನೀರು ಜಗ್ಗಿ ಕಾಯಲಿಕ್ಕೆ ಇಟ್ಟರು. ನನ್ನ ತಂಗಿ ತಮ್ಮಂದಿರು ತಮಗೆ ಒಪ್ಪಿಸಿದ ಕೆಲಸ ಮಾಡಹತ್ತಿದರು. ಶಕುತಾಯಿ ಎದ್ದು ತಾವೂ ಕೆಲಸ ಮಾಡಿ ಸ್ನಾನ ಮಾಡಿಬಂದರು. ನಮ್ಮ ಈ ಮನೆಯ ವಾತಾವರಣ ಅವರಿಗೆ ಹಿಡಿಸಿದ್ದರಿಂದ ನಾನು ಅವರಿಗೆ ನಮ್ಮ ಎಲ್ಲಾ ವಿವರಗಳನ್ನು ಹೇಳಿದೆ. ನಾನು 13 ವರ್ಷದವಳಿದ್ದಾಗ್ಗೆ ನನ್ನ ತಾಯಿ ತೀರಿ ಹೋದದ್ದು, ನಾವೆಲ್ಲ ಹಂಚಿಕೊಂಡು ಮನೆ ಕೆಲಸ ಮಾಡುವದು, ಇತ್ಯಾದಿ. ಮಧ್ಯಾಹ್ನ ಊಟವಾದ ಮೇಲೆ ತನಗೂ ಸೈಕಲ್ ಕಲಿಸಬೇಕೆಂದು ದುಂಬಾಲು ಬಿದ್ದರು. ಸೈಕಲ್ ಹೊಡೆಯಲು ಕಚ್ಚಿ ಹಾಕಿ ಸಿದ್ಧರಾಗಿ ರಸ್ತೆಯ ಮೇಲೆ ಸೈಕಲ್ ತಂದು ನಿಂತರು. ನಾನು ಹಿಂದೆ ಹಿಡಿದೆ. ಹೊಡೆಯಲು ಬಾರದೆ ಎರಡು ಸಲ ಬಿದ್ದರು. ಆದರೂ ಉತ್ಸಾಹ ಕುಗ್ಗಲಿಲ್ಲ. ಮಧ್ಯಾಹ್ನ ಉರಿ ಬಿಸಿಲು. ಅವರ ಮುಖ ಕೆಂಪಗಾಗಿತ್ತು. ಅಂದು ನಾವೆಲ್ಲ ಸೇರಿ ಒಂದು ಸಿನೇಮಾ ನೋಡಿ ಬಂದೆವು. ಮರುದಿನ ಬೆಳಿಗ್ಗೆ ಉಪಹಾರ ಮಾಡಿ ಭಾರತಿಯನ್ನು ಕರೆದುಕೊಂಡು ಹೊರಟುಬಿಟ್ಟರು.

ಮುಂದೆ ನಮ್ಮ ಪ್ರೀತಿ, ವಿಶ್ವಾಸ ಹೀಗೆಯೇ ಬೆಳೆದು ಹೆಮ್ಮರವಾಯಿತು. ನಾನು ಧಾರವಾಡಕ್ಕೆ ಬಂದು ಮನೆ ಮಾಡಿದೆ. ಕುರ್ತಕೋಟಿ ನಾನು ಕೂಡಿಯೇ ಅವರ ಮನೆಗೆ ಆಗಾಗ್ಗೆ ಹೋಗುತ್ತಲಿದ್ದೆವು, ಇಲ್ಲವೇ ಅವರು ನಮ್ಮ ಮನೆಗೆ ಬರುತ್ತಿದ್ದರು. ಕುರ್ತಕೋಟಿ ಮತ್ತು ದಾಬಡೆ ಅವರು ಕಾಂಗ್ರೆಸ್ ಕೆಲಸ ಮಾಡುತ್ತಿದ್ದರು. ಕುರ್ತಕೋಟಿ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಇದ್ದರೆ, ದಾಬಡೆ ಸೆಕ್ರೆಟರಿ ಇದ್ದರು. ಸ್ವಾತಂತ್ರ್ಯ ಸಿಕ್ಕ ದಿವಸ ಅಂದರೆ 15-8-1947 ರ ರಾತ್ರಿ ನಾವೆಲ್ಲ ಸೇರಿ ಡಿ. ಸಿ. ಅವರ ಕಚೇರಿಗೆ ಮಧ್ಯರಾತ್ರಿ ಹೋಗಿದ್ದೆವು. ಅಲ್ಲಿ ಧ್ವಜವಂದನೆ ಮಾಡಿ ಊರಲ್ಲೆಲ್ಲ ಧ್ವಜ ಹಿಡಿದು ಮೆರವಣಿಗೆ ಮಾಡಿ ಬಂದೆವು.

ಮುಂದೆ ಮುಂಬೈ ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ಮುಖ್ಯಮಂತ್ರಿ ಆದಾಗ ರಾಜ್ಯದ 27 ಜಿಲ್ಲೆಗಳಲ್ಲಿ ಸರ್ವೋದಯ ಯೋಜನೆಯನ್ನು ಪ್ರಾರಂಭಿಸಿದರು. ಆಗ ನಾವು ಮುಂಬೈಯಲ್ಲಿದ್ದೆವು. ಧಾರವಾಡ ಜಿಲ್ಲೆಯಲ್ಲಿಯೂ ಈ ಯೋಜನೆ ಪ್ರಾರಂಭವಾಯ್ತು. ಆಗ ದಾಬಡೆ ಅವರು ಕುಟುಂಬ ಸಮೇತ ಅರವಟಿಗೆಯೆಂಬ ಕುಗ್ರಾಮಕ್ಕೆ ಹೋದರು. ಭಾರತಿ ಧಾರವಾಡದಲ್ಲಿ ಹಾಸ್ಟೆಲ್‌ನಲ್ಲಿದ್ದಳು, ಪ್ರಕಾಶ ಅಲ್ಲಿಯ ಶಾಲೆಗೇ ಹೋಗುತ್ತಿದ್ದ. ಅಲ್ಲಿ ಅವರು ಸಂಚಾಲಕರಾಗಿ ಕಾರ್ಯ ಮಾಡುತ್ತಿದ್ದರು.

ಶಕುತಾಯಿ ಅವರ ಮನಸ್ಸಿನಲ್ಲಿ ತಾವು ಬಹಳ ಕಲಿಯಲಿಲ್ಲ ಎಂಬ ಕೊರಗು ಇತ್ತು. ಒಮ್ಮೆ ನಾವು ಭೆಟ್ಟಿಯಾದಾಗ ಅವರೇ ಈ ಪ್ರಸ್ತಾಪವೆತ್ತಿ "ನಿನ್ಹಾಂಗ ನಾನೂ ಕಲಿತು ಪೂರ್ತಿ ಸಮಾಜಸೇವಾ ಮಾಡಿದ್ರ ಅದೊಂದು ಹಾದಿ ಆಗ್ತಿತ್ತು. ಅಥವಾ ನಿಶ್ಚಿಂತೆಯಿಂದ ಜೀವನ ಮಾಡಿದ್ರ ಅದೂ ಒಂದು ಹಾದಿ. ಈಗ ನನ್ನದು ಎರಡೂ ಅರ್ಧೋಟ." ಹೀಗೆ ಅವರ ಅಭಿಪ್ರಾಯವಿದ್ದರೂ ಕೆಲಸವನ್ನು ಶಾಂತರೀತಿಯಿಂದ ಮಾಡಿ ದಾಬಡೆ ಅವರಿಗೆ ತುಂಬಾ ನೆರವಾಗುತ್ತಿದ್ದರು. ಅವರು ಅಲ್ಲಿದ್ದಾಗ ಅನೇಕ ಕಠಿಣ ಪ್ರಸಂಗಗಳನ್ನು ತುಂಬಾ ಧೈರ್ಯದಿಂದ ಎದುರಿಸಿದರು. ತಾವೇ ಅನೇಕ ಕೆಲಸಗಳನ್ನು ಕೈಗೆತ್ತಿಕೊಂಡರು. ಹಳ್ಳಿಗರೊಡನೆ ಬೆರೆತು ಕಾರ್ಯ ಮಾಡುತ್ತಲಿದ್ದರು. ಹಾಗೆ ಅವರು ನನ್ನ ದೃಷ್ಟಿಯಲ್ಲಿ ನಿಜವಾದ ಕರ್ಮಯೋಗಿ.

**● ಶಕುಂತಲಾ ಕುರ್ತಕೋಟಿ**

ಬೆಂಗಳೂರು

❖❖❖

# ತಾಳ್ಮೆ ಮತ್ತು ಪ್ರೀತಿ ಸ್ವಭಾವದ ಶಕುತಾಯಿ

ಸೌ. ಶಕುಂತಲಾ ದಾಬಡೆಯವರನ್ನು ಶಕುತಾಯಿ ಎಂದು ಮೊದಲು ಸಂಬೋಧಿಸಿದ್ದು ಬಹುಶಃ ನಾನೇ ಇರಬೇಕು. ಚಲೇಜಾವ್ ಚಳುವಳಿಯ ಕಾಲದಲ್ಲಿಯ ಧಾರವಾಡದ ಒಂದು ಸಭೆಯಲ್ಲಿ ಭಾಗವಹಿಸಿದ ಅಪರಾಧಕ್ಕಾಗಿ ಸೌ. ಶಾಂತಾಬಾಯಿ ಕರಮರಕರ, ಪದ್ಮಾವತಿಬಾಯಿ ಬುರ್ಲಿ, ಶಕುತಾಯಿ ಮತ್ತು ಅವರ ತಾಯಿ ಗಂಗಾಬಾಯಿ ಇವರನ್ನು ಹಿಂಡಲಗಾ ಜೇಲಿಗೆ ತರಲಾಯಿತು. ನಾನಾಗಲೇ ಅಲ್ಲಿ ದಾಖಲಾಗಿದ್ದೆ. ಶಕುತಾಯಿಯ ಒಂದು ವರ್ಷದ ಮಗಳು ಅವರ ಜೊತೆಯಲ್ಲಿದ್ದಳು. ಜೇಲಿನಲ್ಲಿ ಬಂಧಿಯಾದ ನಮ್ಮಂಥ ರಾಜಕೀಯ ಕೈದಿಗಳಿಗೆ ಇಂಥ ಮಕ್ಕಳೆಂದರೆ ಚಿಕ್ಕವರಿಗೆ ಗೊಂಬೆ ಸಿಕ್ಕಷ್ಟು ಸಂತೋಷ.

ಎತ್ತರೆತ್ತರ ಜೈಲು ಗೋಡೆಗಳ ಮಧ್ಯ ಬಂಧಿಗಳಾಗಿರುವವರಲ್ಲಿ ಯಾರು ಹಿರಿಯರು ? ಯಾರು ಕಿರಿಯರು ? ಯಾರು ವರಿಷ್ಠರು ? ಯಾರು ಕನಿಷ್ಠರು ? ಆದರೆ ಯಾವುದೇ ಪರಿಸ್ಥಿತಿಯಲ್ಲಿ ಮನುಷ್ಯನ ಅಹಂಕಾರಕ್ಕೆ ಕೊನೆ ಸಾಧ್ಯವೆ ? ಇಂಥ ಪರಿಸ್ಥಿತಿಯಲ್ಲಿ ಶಕುತಾಯಿ ನನ್ನ ತೀರ ಹತ್ತಿರದ ಸ್ನೇಹಿತೆಯಾದಳು. ಆಂದೋಲನದ ಕಾಲದಲ್ಲಿ ಮನೆಯ ಜನರಿಗೂ ಈ ಚಳುವಳಿಕಾರರು ಒಂದು ತಲೆನೋವಾಗಿ ಕಂಡಿರಬೇಕು. ನಾವು ಮಹಿಳೆಯರು ಮಧ್ಯಮ ವರ್ಗದವರು, ಗ್ರಾಮೀಣ ಜೀವನದ ಪರಿಚಯ ನಮಗಾಗಬೇಕು. ದುಡಿಯುವ ಬಡಜನರೊಡನೆ ನಾವು ಎಷ್ಟರ ಮಟ್ಟಿಗೆ ಹೊಂದಾಣಿಕೆ ಮಾಡಬಹುದು ಎಂಬುದನ್ನು ಪರೀಕ್ಷಿಸಬೇಕು ಎಂಬ

ವಿಚಾರ ನಮ್ಮ ಮುಂದಾಳುಗಳ ತಲೆಯಲ್ಲಿ ಬಂತು. ಸರ್ವಶ್ರೀ ನರಸಿಂಹ ದಾಬಡೆ, ಶ್ರೀರಂಗ ಕಾಮತ, ಬಾಬುರಾವ ಕಾಮತ ಇನ್ನಿತರರು ಗ್ರಾಮೀಣ ಜೀವನದ ಅನುಭವ ಪಡೆಯಲು ನಮ್ಮನ್ನು ಹಳ್ಳಿಗಳಿಗೆ ಕಳುಹಿಸಿದರು. ಮೊರಬದ ಜನ ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಂಡರು. ನಮ್ಮನ್ನು ಪ್ರೋತ್ಸಾಹಿಸಿದರು. ಅಲ್ಲಿಯ ಜನ ನಮಗಾಗಿ ಇರಲು ಮನೆಯ ವ್ಯವಸ್ಥೆ ಮಾಡುವದರ ಜೊತೆಗೆ ದವಸ, ಧಾನ್ಯವನ್ನೂ ಪೂರೈಸಿದರು. ನಾವು 8-10 ಜನ ಆಶ್ರಮ ಜೀವನದ ಪ್ರಯೋಗದಲ್ಲಿ ತೊಡಗಿದೆವು. ಬೆಳಿಗ್ಗೆ ಬೇಗ ಎದ್ದು ಮನೆಯ ಸ್ವಚ್ಛತೆ, ಅರ್ಧ ಕಿ.ಮೀ. ದೂರದ ಕೆರೆಯಿಂದ ದೊಡ್ಡ ಕೊಡಗಳಲ್ಲಿ ನೀರು ತರುವದು, ಕಾಳು ಆರಿಸಿ ಬೀಸುವ ಕಲ್ಲಿನಿಂದ ಹಿಟ್ಟು ಮಾಡುವದು, ಗಂಜಿ ಮಾಡಿ ನಾಷ್ಟಾ ಮಾಡಿ ಸಾಮೂಹಿಕ ವಾಚನ, ಚರ್ಚೆ, ಮತ್ತು ಲೇಖನ ಕಾರ್ಯದಲ್ಲಿ ತೊಡಗುವದು, ಹೀಗೆ ದಿನಚರಿಯಾಗಿತ್ತು.

ನಮ್ಮ ಗುಂಪಿನಲ್ಲಿ ಶ್ರೀಪಾದ ನವಲೆ, ಪಾಟೀಲ, ಪರಸನಗೌಡ, ಹನುಮಂತಪ್ಪಾ, ವಿಮಲ ಪಾಠಕ ಇತ್ಯಾದಿ ಸದಸ್ಯರಿದ್ದರು. ನಾಲ್ಕಾರು ತಿಂಗಳ ನಂತರ ನಮ್ಮ ಗುಂಪು ಚಿಕ್ಕದಾಗುತ್ತ ನಡೆಯಿತು. ವಿಮಲ ಪಾಠಕ ಕಸ್ತೂರಬಾ ಕೇಂದ್ರದ ತರಬೇತಿಗಾಗಿ ಹೋದಳು. ನವಲೆ ಮತ್ತು ಪಾಟೀಲ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಲು ಹೋದರು. ಪರಸನಗೌಡ್ರು ಮನೆಯ ಕೃಷಿಯ ಜವಾಬ್ದಾರಿ ವಹಿಸಲು ಹೋದರು. ಅಷ್ಟರಲ್ಲಿ ಸ್ವಾತಂತ್ರ್ಯ ಚಳುವಳಿಯ ರಭಸ ಕಡಿಮೆ ಆಗಿತ್ತು. ನರಸಿಂಹ ದಾಬಡೆ, ಶ್ರೀರಂಗ ಕಾಮತ ಇತ್ಯಾದಿ ಜೈಲಿನಿಂದ ಬಿಡುಗಡೆಯಾಗಿದ್ದರು. ಅನೇಕರು ತಮ್ಮ ಪೂರ್ವಾಯುಷ್ಯದ ಎಳೆ ಹಿಡಿದು ಮುಂದೆ ಸಾಗುವ ಪ್ರಯತ್ನಕ್ಕೆ ತೊಡಗಿದರು. ಈ ಸಂಕ್ರಮಣಕಾಲದಲ್ಲಿ ಶಕುತಾಯಿಯ ವ್ಯಕ್ತಿತ್ವದ ಮೆರಗು ಮಿಂಚಿ ಬಂತು. ನಾವು ಯಾರೇ ಕಾರ್ಯಕರ್ತರು ಆಕೆಯ ಮನೆಗೆ ಹೋದರೂ ಅತ್ಯಂತ ಉತ್ಸಾಹದಿಂದ ನಮ್ಮ ಸ್ವಾಗತದ ಭರವಸೆ ಇತ್ತು. ಬಂದು ಹೋಗುವ ಅತಿಥಿಗಳ ವ್ಯವಸ್ಥೆ ಮಾಡುವಲ್ಲಿ ಆಕೆ ಅವಿಶ್ರಾಂತ ಶ್ರಮಿಸಿದಳು. ನಗುಮುಖದಿಂದ ಅನ್ನ ಸಾರು ಮಾಡಿ ಊಟ ಮಾಡಿಸುವಲ್ಲಿ ಆಕೆ ಎಂದೂ ಹಿಂದೆ ಮುಂದೆ ನೋಡಲಿಲ್ಲ. ಹೀಗಾಗಿಯೇ ಈ ಸಾಧ್ವಿಯ ಜೊತೆ ನನ್ನ ಸ್ನೇಹ ಕೊನೆಯವರೆಗೆ ಉಳಿಯಿತು. ಅತ್ಯಂತ ತಾಳ್ಮೆ ಮತ್ತು ಪ್ರೀತಿಯ ಸ್ವಭಾವದ ಶಕುತಾಯಿ ನನ್ನಂಥ ಅನೇಕ ಜನರ ಮನಸ್ಸಿನಲ್ಲಿ ಪ್ರೀತಿ - ಗೌರವದ ಸ್ಥಾನವನ್ನು ಪಡೆದುದರಲ್ಲಿ ಆಶ್ಚರ್ಯವೇನು ?

ಶಕುತಾಯಿಯ ಸ್ಮೃತಿಗೆ ಅನೇಕಾನೇಕ ವಂದನೆಗಳು.

**● ಪ್ರಮೀಳಾ ಶ್ರೀರಂಗ ಕಾಮತ**

**ಬೆಳಗಾವಿ**

# ದಾಬಡೆ ಕುಟುಂಬದ ರೂವಾರಿ ಸ್ವಾತಂತ್ರ್ಯ ಯೋಧೆ

ಸ್ವಾತಂತ್ರ್ಯಯೋಧ ನರಸಿಂಹ ದಾಬಡೆ ಅವರು ನನ್ನ ಹಿರಿಯ ಅಣ್ಣನೆಂದೇ ನನ್ನ ಭಾವನೆ. ದಿ. ಶಕುಂತಲಾ ಅವರು ನನ್ನ ಅತ್ತಿಗೆ. ದಿ. ಶಕುತಾಯಿ ಅವರು ಸಂಗ್ರಾಮದ ಸಮಯಕ್ಕೆ ಪಡಬಾರದ ಕಷ್ಟಪಟ್ಟಿದ್ದಕ್ಕೆ ನಾನು ಪ್ರತ್ಯಕ್ಷದರ್ಶಿ. ಕ್ವಿಟ್ ಇಂಡಿಯಾ ಚಳುವಳಿಯ ಸಮಯಕ್ಕೆ ಶ್ರೀ ದಾಬಡೆ ಅವರು 18 ತಿಂಗಳು ಭೂಗತರಾಗಿದ್ದು ಮುಂದೆ ಸೆರೆಮನೆ ಸೇರಿದರು. 1942ರಲ್ಲಿ ಅವರಿಗೆ ಭಾರತಿ ಜನಿಸಿದಾಗ ದಾಬಡೆ ಅವರು ಭೂಗತರಾಗಿದ್ದರು. ಆ ಸಮಯಕ್ಕೆ ಶಕುತಾಯಿ ಅವರು ಎಲ್ಲಿಯೇ ಇದ್ದರೂ ಪೋಲಿಸರ ಕಿರುಕುಳ ತಪ್ಪಿದ್ದಲ್ಲ. ಕೊನೆಗೆ ಚಿಕ್ಕಮಗುವಿನೊಡನೆ ಅವರೂ ಸೆರೆಮನೆ ಸೇರಿದರು. ಅವರ ಮಗಳ ಪ್ರಥಮ ಜನ್ಮದಿನವನ್ನು ಹಿಂಡಲಗಾ ಸೆರೆಮನೆಯಲ್ಲಿಯೇ ಆಚರಿಸಿದರು. ಆಶ್ಚರ್ಯದ ಮಾತೆಂದರೆ ಈ ಸಮಾರಂಭಕ್ಕೆ ಭೂಗತರಾಗಿದ್ದ ದಾಬಡೆಯವರೂ ಪ್ರತ್ಯಕ್ಷ ಜೇಲಿಗೆ ಬಂದು ಮಗಳನ್ನು ಆಶೀರ್ವದಿಸಿದರು.

ಈ 1942 ರ ಚಳುವಳಿಯಲ್ಲಿ ನವಲಗುಂದ ತಾಲೂಕಿನ ಮೊರಬ ಗ್ರಾಮದ ನೂರಾರು ಯೋಧರು ಸಕ್ರಿಯವಾಗಿ ಭಾಗವಹಿಸಿದ್ದರು. ಅವರ ನಾಯಕರಾಗಿದ್ದ ದಿ|| ಮಾಸ್ತಿ ಗೋವಿಂದ ರೆಡ್ಡಿ ಅವರು ಜೇಲಿನಲ್ಲಿರುವವರ ಹೆಂಡತಿ ಮಕ್ಕಳ ಕಷ್ಟಸುಖಗಳನ್ನು ಕುರಿತು ಮತ್ತು ಅವರಿಂದಾಗಿ ಅವರ ಕುಟುಂಬದವರಿಗೆ ಆಗುತ್ತಿದ್ದ ತೊಂದರೆಯನ್ನರಿತು ಅದನ್ನು ತಪ್ಪಿಸಲು ತಮ್ಮ ಪರಿಚಿತ ಜೇಲುವಾಸಿಗಳಾಗಿದ್ದವರ ಹೆಂಡಂದಿರಾದ ಶಕುಂತಲಾ ದಾಬಡೆ, ಪ್ರಮೀಳಾತಾಯಿ ಕಾಮತ, ಬಾಬು ಕಾಮತರ ಪತ್ನಿ ಮತ್ತು ಅಂಥ ತೊಂದರೆಗೊಳಗಾಗಿದ್ದ ಕೆಲವು ಮಹಿಳೆಯರನ್ನು ತಮ್ಮೂರಾದ ಮೊರಬಕ್ಕೆ ಕರೆದುಕೊಂಡು ಹೋಗಿ ಒಂದು ಆಶ್ರಮದ ಜೀವನವನ್ನೇ ಪ್ರಾರಂಭಿಸಿದ್ದರು, ಮತ್ತು ಅದರ ಸಂಪೂರ್ಣ ವೆಚ್ಚವನ್ನು ಅವರೇ ವಹಿಸುತ್ತಿದ್ದರು. ಆಗ ನಾನು ನನ್ನ ಮಿತ್ರ ಡಿ. ಎ. ಕುಲಕರ್ಣಿ ಮತ್ತು ಕುರ್ಲಗೇರಿ ವಿಠ್ಠಪ್ಪ ಮೊದಲಾದವರು ಕರ್ನಾಟಕ ಕಾಲೇಜದಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳು. ಈ ಚಳುವಳಿಯಲ್ಲಿ ಶಕ್ತ್ಯಾನುಸಾರ ಭಾಗವಹಿಸುತ್ತಿದ್ದೆವು. ಹೀಗಾಗಿ ಆಗ ಅವರೆಲ್ಲರ ಪರಿಚಯ ನನಗಾಯ್ತು. ಆಗ ಭಾರತಿ ಎರಡು ವರ್ಷದ ಚಿಕ್ಕ ಮಗು, ತುಂಬಾ ಹಟಮಾರಿ. ನಾನೇ ಅವಳನ್ನು ಸಂಭಾಳಿಸುತ್ತಿದ್ದೆ. ಹೀಗಾಗಿ ಇಂದಿಗೂ ಅವಳು ನನ್ನನ್ನು ತನ್ನ ಕಕ್ಕನೆಂದೇ ಕಾಣುತ್ತಾಳೆ. ಆಕೆಯ ಗಂಡ ಡಾ. ಶಂಕರರಾಯ ನನ್ನ ಅಳಿಯನಂತೇ ಇರುವರು. ಆದರೆ ಶಕುತಾಯಿ ಮಾತ್ರ ನಮ್ಮೆಲ್ಲರನ್ನೂ ಅನಾಥರನ್ನಾಗಿ ಮಾಡಿ ದಿವಂಗತರಾದರು. ಆ ಮಹಾತಾಯಿಯ ಪುಣ್ಯ ಫಲದಿಂದ ಅವರ ಮಕ್ಕಳು, ಮೊಮ್ಮಕ್ಕಳು ಸುಖ ಸಂತೋಷದಿಂದಿದ್ದಾರೆ. ಧನ್ಯಜೀವಿ ಶಕುಂತಲಾ ದಾಬಡೆ ಅವರಿಗೆ ನನ್ನ ಸಹಸ್ರನಮನ.

● ಬಿ. ವ್ಹಿ. ಪಾಟೀಲ

ಧಾರವಾಡ

# ಆದರ್ಶ ಮಹಿಳೆ

ದಾಬಡೆ ದಂಪತಿಗಳು ಅರವಟಿಗೆಯಲ್ಲಿದ್ದಾಗ ಅದೇ ಲಗ್ನವಾಗಿ ನಾವು ಅರವಟಿಗೆಗೆ ಬಂದೆವು. ನಿಜವಾಗಿ ಹೇಳಬೇಕೆಂದರೆ ನಾನು ನಮ್ಮ ತಂದೆ ತಾಯಿಯನ್ನು ಈ ದಂಪತಿಯಲ್ಲಿ ಕಂಡೆನು. ನನ್ನ ಹೆಂಡತಿ ಶಾಂತಾಳಿಗೆ ಎಲ್ಲದರಲ್ಲಿಯೂ ಕೈ ಹಿಡಿದು ಮಾರ್ಗದರ್ಶನ ಮಾಡಿದವರೇ ಶಕುತಾಯಿ. ನಾವು ಅರವಟಿಗೆಯಲ್ಲಿದ್ದಾಗ ನಾವೆಲ್ಲ ಒಂದೇ ಕುಟುಂಬದವರಂತೆ ಇದ್ದೆವು.

ಗೋಪಾಲನ ಜಾವಳ ಅರವಟಿಗೆಯಲ್ಲಿ ಆಯ್ತು. ಆಗ ದಾಬಡೆ ಅವರು ಊರಲ್ಲಿ ಮನೆಗೊಬ್ಬರಂತೆ ಸಮಾರಂಭಕ್ಕೆ ಊಟಕ್ಕೆ ಹೇಳಿ ಬಂದರು. ಆದರೆ ಅವರೆಲ್ಲರೂ ಕುಟುಂಬ ಸಮೇತ ಬಂದು ಕುಳಿತರು. ಆಗ ಅಕ್ಕ ಎಳ್ಳಷ್ಟೂ ಗಾಬರಿಯಾಗದೆ ಎಲ್ಲರನ್ನೂ ನಗುತ್ತಾ ಸ್ವಾಗತಿಸಿದಳು. ದೇವರ ಮುಂದೆ ತುಪ್ಪದ ದೀಪ ಹಚ್ಚಿ ಸಮೃದ್ಧಿಯಾಗಲೆಂದು ಬೇಡಿಕೊಂಡಳು. ನಾವೆಲ್ಲ ಓಡಾಡಿ ಬಡಿಸುತ್ತಿದ್ದೆವು. ಸುಮಾರು 200 ಜನರಾದರೂ ಅಂದು ಉಂಡಿರಬೇಕು. ಆ ಕಾರ್ಯಕ್ರಮ ತುಂಬಾ ಯಶಸ್ವಿಯಾಯಿತು. ಇದನ್ನು ನಾವು ಕಣ್ಣಾರೆ ಕಂಡದ್ದು.

ನಾವು ತುಂಬಾ ಮೋಜಿನಿಂದ ವೇಳೆ ಕಳೆಯುತ್ತಿದ್ದೆವು. ಸಂಜೆ ಊಟವಾದ ಮೇಲೆ ಅಣ್ಣಾ (ದಾಬಡೆ), ಪ್ರಕಾಶನಿಗೆ ಮಲಗುವ ಮೊದಲು ಕತೆ ಹೇಳಬೇಕು. ಆತ ಅವರಿಗೆ ಕಾಲಿಗೆ ಎಣ್ಣೆ ಹಚ್ಚಬೇಕು. ಈ ಕಾರ್ಯಕ್ರಮ ನಿತ್ಯ ನಡೆಯುತಲಿತ್ತು. ಕತೆ ಕೇಳಲು ಅಕ್ಕ (ಶಕುಂತಲಾ) ನಮ್ಮನ್ನೆಲ್ಲ (ಲಲಿತಕ್ಕ, ರಾಧಾ, ಕನಕವಲ್ಲಿ, ಶಾಂತಾ) ಕರೆಯುತ್ತಿದ್ದರು. ನಾವು ತುಂಬಾ ಉತ್ಸುಕತೆಯಿಂದ ಕೇಳುತ್ತಿದ್ದೆವು. ನಮಗೆಲ್ಲ ನಿಜವಾಗಿಯೂ ಅವರ ಕೈಯಲ್ಲಿ ಕೆಲಸ ಮಾಡಲು ತುಂಬಾ ಹುರುಪು. ಯಾಕೆಂದರೆ ಅವರೂ ನಮ್ಮ ಸಂಗಡವೆ ಕೆಲಸ ಮಾಡುತ್ತಿದ್ದರು.

ದಾಬಡೆ ಅವರು ಭೂಗತರಾಗಿದ್ದಾಗ (1942-44) ನಾನು ತೀರ ಚಿಕ್ಕವ. ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದೆ. ಆಗ ಧಾರವಾಡದಲ್ಲಿ ಆಗಾಗ್ಗೆ ದಾಬಡೆ ಅವರು ನಮ್ಮ ಮನೆಗೆ ಬರುತ್ತಿದ್ದರು. ಅಕ್ಕ 1943ರಲ್ಲಿ ಸತ್ಯಾಗ್ರಹ ಮಾಡಿದಾಗ್ಗೆ ನಾನು ಅದರ ಪ್ರತ್ಯಕ್ಷದರ್ಶಿ. ಅಕ್ಕ (ಶಕುಂತಲಾ) ಓರ್ವ ಆದರ್ಶ ಮಹಿಳೆ. ಅವರಿಗೆ ನಮ್ಮ ಸಹಸ್ರ ನಮನ.

● **ಪರಮಾನಂದ ದೇಶನೂರ**

ಬೆಂಗಳೂರು

# ನಗೆಮೊಗದ ಭಗಿನಿ

ನನ್ನ ಮಿತ್ರ ನರಸಿಂಹ ದಾಬಡೆ ಅವರ ಲಗ್ನ 1939 ರಲ್ಲಿ ಬಾಗಲಕೋಟೆಯಲ್ಲಿ ಆದಾಗ ನಾನು ಶಕುಂತಲಾಬಾಯಿ ಅವರನ್ನು ಪ್ರಪ್ರಥಮ ನೋಡಿದ್ದು. ಅವರ ವೈಶಿಷ್ಟ್ಯವೆಂದರೆ ಯಾವಾಗಲೂ ನಗೆಮುಖ. ಅವರು ಧಾರವಾಡಕ್ಕೆ ಬಂದ ಮೇಲೆ ಮಾಳಮಡ್ಡಿಯಲ್ಲಿ ರೈಲು ನಿಲ್ದಾಣದ ಪಕ್ಕದ ಕಚೇರಿಯ ಹಿಂದಿನ ಕೋಣೆಯಲ್ಲಿ ಇರುತ್ತಿದ್ದರು. ಮುಂದಿನ ಕೋಣೆಯಲ್ಲಿ ನನ್ನ ಇನ್ನೊಬ್ಬ ಮಿತ್ರ ಶ್ರೀನಿವಾಸರಾವ ಮತ್ತು ನಾನು ಇರುತ್ತಿದ್ದೆವು. ಆಗಾಗ್ಗೆ ನಾವೆಲ್ಲ ಸೇರಿ ಸಾಯಂಕಾಲ ಅಡ್ಡಾಡಲು ಹೋಗುತ್ತಲಿದ್ದೆವು. ಅಲ್ಲದೆ ಮೇಲಿಂದ ಮೇಲೆ ಒಟ್ಟಾರೆ ಸೇರಿ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಲಿದ್ದೆವು. ನಿಜವಾಗಿ ನಾವು ಅಣ್ಣ ತಂಗಿಯರಂತೆ ಇದ್ದೆವು.

ಆಗ ಮಾಳಮಡ್ಡಿಯಲ್ಲಿ ನಳ ಇರಲಿಲ್ಲ. ನಮ್ಮ ಹಿತ್ತಲದಲ್ಲಿಯೇ ಭಾವಿ ಇತ್ತು. ರಾಟಾಳದಿಂದ ತಿರುಗಿಸಿ ನೀರು ಜಗ್ಗಬೇಕು. ಹೀಗೆ ಬೆಳಿಗ್ಗೆ ನೀರು ಜಗ್ಗಲಿಕ್ಕೇ ನಾವೆಲ್ಲ ಮಿತ್ರರು ಸೇರುತ್ತಿದ್ದೆವು. ನಾವು ಅಲ್ಲಿಯೇ ತಣ್ಣೀರಿನ ಸ್ನಾನವನ್ನು ಮುಗಿಸುತ್ತಿದ್ದೆವು. ಒಂದು ಸಂದರ್ಭದಲ್ಲಿ ಒಂದು ದೊಡ್ಡ ತಾಮ್ರದ ಕೊಡ ಜಗ್ಗಿ ಕಟ್ಟೆಯ ಮೇಲೆ ಇಡಲಾಗಿತ್ತು. ಸಹಜ ಮಾತಿಗೆ ಮಾತು ಬಂದು ಇದನ್ನು ಹಲ್ಲಿನಿಂದ ಎತ್ತಬೇಕೆಂದು ಒಬ್ಬರು ಸೂಚಿಸಿದರು. ಎಲ್ಲರೂ ಸ್ಥಬ್ದರಾದರು. ಆದರೆ ದಾಬಡೆ ಅವರು ಮುಂದೆ ಬಂದು ಪ್ರಯತ್ನ ಮಾಡುವದಾಗಿ ಹೇಳಿದರು. ಅಷ್ಟು ದೊಡ್ಡ ಕೊಡವನ್ನು ಹಲ್ಲಿನಿಂದ ಎತ್ತಿಕೊಂಡೇ ಮನೆಗೆ ಹೋದರು. ನಮಗೆಲ್ಲ ತುಂಬಾ ಆಶ್ಚರ್ಯವಾಯಿತು. ಆಗ ಶಕುತಾಯಿ ದಾಬಡೆಯವರಿಗೆ ದೃಷ್ಟಿ ತೆಗೆದದ್ದು ನೋಡಿ ನಾವು ನಕ್ಕಿದ್ದೆವು. ಅದಕ್ಕೆ ಅವರು "ಸಾಮಾನ್ಯ ಕೈಯಿಂದ ಸಹ ಎತ್ತಲು ದೊಡ್ಡದಾದ ಕೊಡವನ್ನು ಹಲ್ಲಿನಿಂದ ಎತ್ತಿಕೊಂಡು ಬಂದರೆ ದೃಷ್ಟಿಯಾಗದೇ ಇರುತ್ತದೆಯೇ ?" ಎಂದು ನಗುತ್ತಲೇ ಹೇಳಿದರು. ಮುಂದೆ ದಾಬಡೆ ಅವರು ವಿಸಾಪುರ ಜೇಲಿನಲ್ಲಿದ್ದಾಗ, ಅವರನ್ನು ಭೆಟ್ಟಿಯಾಗಲು ವಿಸಾಪೂರಕ್ಕೆ ಹೋಗುವಾಗ, ಇಲ್ಲಿ ಇಳಿದು ಒಂದು ದಿನ ಇದ್ದು ಹೋಗುತ್ತಲಿದ್ದರು. ಹೀಗೆ ನಾವು ಅಣ್ಣ ತಂಗಿ ಪ್ರೀತಿ, ವಿಶ್ವಾಸದಿಂದ ಇದ್ದೆವು.

● ಕೆ. ಆರ್. ಸಂಗಮ

ಪುಣೆ

# ಧನ್ಯಜೀವಿ ಶಕುತಾಯಿ

ಶ್ರೀ ನರಸಿಂಹ ದಾಬಡೆ ಅವರು ನನ್ನ ಹಿರಿಯ ಅಣ್ಣಾ. ಅಂದ ಮೇಲೆ ದಿ. ಶಕುಂತಲಾಬಾಯಿ ನನ್ನ ಖಾಸಾ ಅತ್ತಿಗೆ (ವೈನಿ) ಎಂದೇ ನನ್ನ ಭಾವನೆ. 1940 ರಿಂದ ಈ ದಂಪತಿಗಳ ಸಂಪರ್ಕ ನನಗೆ. ಅವರ ಬಗ್ಗೆ ಅನೇಕಾನೇಕ ಘಟನೆಗಳು ನನ್ನ ಚೀಲದಲ್ಲಿವೆ. ಆದರೆ ಇಲ್ಲಿ ಕೇವಲ ಒಂದೆರಡೇ ಘಟನೆಗಳನ್ನು ಹೇಳಬಯಸುವೆ.

ಮುಖ್ಯವಾಗಿ ದಿ. ಶಕುತಾಯಿ ಅವರ ಶ್ರದ್ಧೆ-ಆತ್ಮವಿಶ್ವಾಸ-ಧೈರ್ಯ ಅಪ್ರತಿಮವಾದದ್ದು. ನಾನು ಗಂಡನ ಸಂಗಡ ಬಡಿದಾಡುವ ಅನೇಕ ಕುಟುಂಬಗಳನ್ನು ಕಂಡಿರುವೆ. ಆದರೆ ಅವನ ಕಾರ್ಯವನ್ನು ತಾನು ಮಾಡಿ ಶ್ರೇಯಸ್ಸನ್ನು ಅವನಿಗೆ ಬಿಟ್ಟದ್ದು ತೀರ ವಿರಳ. ನನ್ನ ನಿದರ್ಶನಕ್ಕೆ ಬಂದದ್ದು ಇವರದೊಂದೇ ಅಂಥ ಉದಾಹರಣೆ ಎಂದು ಹೇಳಬಹುದು.

1940ರಲ್ಲಿ ದಾಬಡೆಯವರು ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಮಾಡಿ ಜೇಲಿಗೆ ಹೋಗಲು ಮಹಾತ್ಮರ ಒಪ್ಪಿಗೆ ಪಡೆದು ಸಿದ್ಧರಾಗಿ ಕುಳಿತಿದ್ದರು. ಅಲ್ಲಿಯವರೆಗೆ ಶಕುತಾಯಿ ಪೂರ್ಣ ಖಾದಿಧಾರಿ ಇರಲಿಲ್ಲ. ಆಗ ಅವರು ಒಂದು ದೃಢ ಪ್ರತಿಜ್ಞೆಯನ್ನೇ ಮಾಡಿದರು. ಆಗ ನಾನು ಅದಕ್ಕೆ ಪ್ರತ್ಯಕ್ಷದರ್ಶಿ. "ಇಂದಿನಿಂದ ನಾ ಸಂಪೂರ್ಣ ಖಾದಿಧಾರಿಯೇ ಆಗುವೆ". ಆಗ ನಾವಿಬ್ಬರೂ ಖಾದಿ ಭಾಂಡಾರಕ್ಕೆ ಹೋಗಿ 2 ಸೀರೆ ತಂದು ಕೊಟ್ಟೆವು. ಆಗಿನ ಕಾಲದ ಖಾದಿ ಸೀರೆ ಅಂದರೆ ಅದನ್ನು ತೋಯಿಸಿದರೆ ಒಂದು ದೊಡ್ಡ ಬಕೀಟು ತುಂಬಾ ಆಗುತ್ತಿತ್ತು. ಅವರ ಆರೋಗ್ಯ ಅಷ್ಟು ಚೆನ್ನಾಗಿ ಇರಲಿಲ್ಲ. ಬಟ್ಟೆ ಒಗೆಯಲು ಕೆಲಸದವರನ್ನು ಹಚ್ಚಬೇಕೆಂದರೆ ದಾಬಡೆಯವರ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಅನುಕೂಲ ಇರಲಿಲ್ಲ. ತಾವೇ ಕಷ್ಟಪಟ್ಟು ಒಗೆದುಕೊಳ್ಳುತ್ತಿದ್ದರು. ಅಲ್ಲದೆ ಮಗಳ ಲಗ್ನ 1963 ರಲ್ಲಿ ನಿಶ್ಚಯವಾದಾಗ, ಬೀಗರ ಸಂಗಡ ಮಾತಾಡುತ್ತ "ನಮ್ಮ ಮಗಳ ಲಗ್ನದಲ್ಲಿ ಖಾದಿ ಹೊರತು ಬೇರೆ ಬಟ್ಟೆ ಬರಕೂಡದು. ವಧು - ವರ ಎಲ್ಲರೂ ಖಾದಿಧಾರಿಗಳೇ ಆಗಬೇಕು" ಹೀಗೆ ಹೇಳಿದವರು ದಾಬಡೆಯವರಲ್ಲ, ಶ್ರೀಮತಿ ಶಕುಂತಲಾಬಾಯಿ ! ಅವರು ಹಟಹಿಡಿದು ಸಂಪೂರ್ಣ ಖಾದಿಮಯ ಮಾಡಿ ಲಗ್ನ ಮಾಡಿದರು. ಇದರ ಶ್ರೇಯಸ್ಸು ಮಾತ್ರ ದಾಬಡೆ ಅವರಿಗೆ ಬಿಟ್ಟುಕೊಟ್ಟರು.

ಇನ್ನೊಂದು ಸಂದರ್ಭ ಅವರು ಅರವಟಿಗೆಯಲ್ಲಿದ್ದಾಗ. ಅದು ಅವರ ಪರೀಕ್ಷೆಯ ಕಾಲವೆಂದೇ ನನ್ನ ಮತ. ಒಂದು ಸಂದರ್ಭದಲ್ಲಿ ದಾಬಡೆ ಅವರ ಜೀವ ಗಂಡಾಂತರದಲ್ಲಿತ್ತು. ಆಗ ಅಲ್ಲಿಯ ಓರ್ವ ಪುಢಾರಿ "ದಾಬಡೆ ಜೀವ ನನ್ನ ಕೈಯಲ್ಲಿದೆ" ಎಂದು ಊರಲ್ಲೆಲ್ಲಾ ಒದರಾಡುತ್ತ ಇದ್ದ. ಆಗ ಊರವರು ಶಕುತಾಯಿ ಅವರನ್ನು ಭೇಟಿಯಾಗಿ ಹೇಳಿದ್ದೇನೆಂದರೆ 'ದಾಬಡೆ ಅವರ ಜೀವ ನನ್ನ ಕೈಯಲ್ಲಿ ಅದ. ನಾನು ನೋಡೇ ಬಿಡ್ತೇನಿ ಅಂತಾ ಊರಲ್ಲೆಲ್ಲ ಒದರಾಡುತ್ತ ಅಡ್ಡಾಡುತ್ತಿದ್ದ ಆ ಪುಢಾರಿ. ಕಾರಣ ನಾವು ಆತನನ್ನು ಇದೇ ಹೋಳೀ ಹುಣ್ಣಿಮೆ

ಕರಿ ದಿವಸ ಮುಕ್ತಾಯ ಮಾಡಬೇಕೆಂದಿದ್ದೇವೆ. ಅದಕ್ಕೆ ನಿಮ್ಮ ಮೌನ ಸಮ್ಮತಿ ಸಿಕ್ಕರೆ, ಸಾಕು' ಎಂದು ಪ್ರಸ್ತಾಪವೆತ್ತಿದ್ರು. ಅದಕ್ಕೆ ಶಕುತಾಯಿಯವರು ಕ್ಷಣ ಸಹ ವಿಚಾರ ಮಾಡದೆ ಹೀಗೆ ಹೇಳಿದರು, 'ನೀವು ಸರ್ವಥಾ ಇಂಥ ಕೆಲಸವನ್ನು ಮಾಡಬೇಡಿರಿ. ಇದಕ್ಕೆ ನಾನು ಒಪ್ಪುವದು ಸಾಧ್ಯವೇ ಇಲ್ಲ. ಆ ಪುಢಾರಿಗೆ ಹೇಳಿರಿ - ದಾಬಡೆ ಅವರ ಜೀವ ನಿನ್ನ ಕೈಯಲ್ಲಿಲ್ಲ, ಅದು ಭಗವಂತನ ಕೈಯಲ್ಲಿದೆ.' ಇದನ್ನು ಕೇಳಿ ಅವರು ತೆಪ್ಪಗೆ ವಾಪಸ್ ಹೋದರು. ಈ ಸಮಾಚಾರವನ್ನು ವಿವರವಾಗಿ ನನಗೆ ಊರಿನವರೇ ಹೇಳಿದರು. ದಾಬಡೆ ಅವರಿಗೆ ಸಹ ಇದು ಎಷ್ಟೋ ವರ್ಷ ಗೊತ್ತಿರಲಿಲ್ಲ. ಮುಂದೆ ಗೊತ್ತಾದಾಗ ಶಕುತಾಯಿ ಅವರನ್ನು ಅಭಿನಂದಿಸಿದರು.

ಗಂಡನ ಕೆಲಸವನ್ನು ತಾನು ಮಾಡಿ ಶ್ರೇಯಸ್ಸನ್ನು ಮಾತ್ರ ಆತನಿಗೆ ಬಿಟ್ಟ ಉದಾಹರಣೆ ನಾನು ನೋಡಿದ್ದು ಇದೊಂದೇ ಎಂದು ಹೇಳಬಲ್ಲೆ.

ಧನ್ಯಜೀವಿ ಶಕುತಾಯಿ, ನನ್ನ ಅತ್ತಿಗೆ.

• ಬಾಬೂರಾವ ಬಡಾಸ್ಕರ
ಅಳ್ನಾವರ

◆◆◆

# ಧೀರ ಮಹಿಳೆ

ನರಸಿಂಹ ದಾಬಡೆಯವರು ಸ್ವಾತಂತ್ರ್ಯದ ನಂತರ ಗ್ರಾಮೀಣ ವಿಕಾಸಕ್ಕಾಗಿ ನಿಯೋಜಿಸಿದ ಸರ್ವೋದಯ ಯೋಜನೆಯ ಜಿಲ್ಲಾ ಸಂಚಾಲಕರಾಗಿ ನಿಯೋಜಿತರಾದರು. ಧಾರವಾಡ ತಾಲೂಕಿನ ನವನಿರ್ಮಾಣಗೊಂಡ ಅರವಟಿಗೆ ಗ್ರಾಮದಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿ ಅಲ್ಲಿಗೆ ವಾಸ್ತವ್ಯಕ್ಕಾಗಿ ಹೋದರು. ಆಗ ಶ್ರೀಮತಿ ಶಕುಂತಲಾ ಬಾಯಿಯವರು ಅವರನ್ನು ಹಿಂಬಾಲಿಸಿದರು.

ಅಲ್ಲಿ ಗ್ರಾಮ ನಿವಾಸಿಗಳ ಯೋಗಕ್ಷೇಮ, ಕಾರ್ಯಕರ್ತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಅನೇಕ ಆತಂಕದ ಕ್ಷಣಗಳನ್ನು ಎದುರಿಸುವಲ್ಲಿ ಧೈರ್ಯ ಕಳೆದುಕೊಳ್ಳದೆ ತಮ್ಮ ಪತಿಯೊಡನೆ ಜಾಗರೂಕರಾಗಿ ಸಮಸ್ಯೆಗಳನ್ನು ಎದುರಿಸುವಲ್ಲಿ ಸಹಾಯ ಮಾಡುತ್ತಿದ್ದರು. ದಾಬಡೆಯವರು ಧಾರವಾಡದಿಂದ ಅರವಟಿಗೆಗೆ ಹೋದನಂತರ ನನ್ನ ಗೆಳೆಯರಲ್ಲಿ ಹಲವರನ್ನು ತಮ್ಮ ಸಹಾಯಕ್ಕಾಗಿ ತೆಗೆದುಕೊಂಡರು. ನಾನು ಮಾತ್ರ ನನ್ನ ಶಿಕ್ಷಣವನ್ನು ಮುಂದುವರೆಸಿ ನನ್ನ ಪದವಿ ಪರೀಕ್ಷೆಯಲ್ಲಿ ಯಶಸ್ವಿಯಾದೆ. ಆಗ ಮುಂದೇನು ಮಾಡಬೇಕೆಂಬ ಸಮಸ್ಯೆಯು ಬಂದಿತು.

ಆಗ ನನ್ನೆಲ್ಲ ಗೆಳೆಯರು ಸರ್ವೋದಯ ಕ್ಷೇತ್ರದಲ್ಲಿ ಶೈಕ್ಷಣಿಕ ಕಾರ್ಯ ಕೈಗೊಳ್ಳಬೇಕೆಂಬ ನಿರ್ಧಾರ ಮಾಡಿದರು. ಅದಕ್ಕಾಗಿ ಸರ್ವೋದಯ ಶಿಕ್ಷಣ ಟ್ರಸ್ಟ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ದಾಬಡೆಯವರು ಸೋಲ್‌ಟ್ರಸ್ಟಿ ಎಂದು ಅವರ ಮಾರ್ಗದರ್ಶನದಲ್ಲಿ ಅಳ್ನಾವರ ಗ್ರಾಮದಲ್ಲಿ ಒಂದು ಪ್ರೌಢ ಶಾಲೆಯನ್ನು ಪ್ರಾರಂಭಿಸಲಾಯಿತು. ನಾನು ಅದರ ಪ್ರಥಮ ಮುಖ್ಯಾಧ್ಯಾಪಕನಾಗಿ ನಿಯುಕ್ತನಾದೆನು. ಈ ಸಂಸ್ಥೆಯ ನಿರ್ಮಾಣ, ಅದರ ಕಾರ್ಯಗಳ ನಿಶ್ಚಯ, ಅದರ ಸಮಸ್ಯೆಗಳಿಗೆ ಪರಿಹಾರಗಳನ್ನು ನಿರ್ಧರಿಸುವಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ನನ್ನ ಕಾರ್ಯದಲ್ಲಿ ಅವರು ಧೈರ್ಯ, ಸ್ಫೂರ್ತಿ ಕೊಡುವಲ್ಲಿ ಯಾವಾಗಲೂ ನನ್ನ ರಕ್ಷಣೆಗಾಗಿ ಇರುತ್ತಿದ್ದರು. ಅವರು ತಮ್ಮ ಜೀವನದ ಕೊನೆಯವರೆಗೂ ಆ ಸಂಸ್ಥೆಯ ಸಕ್ರಿಯ ಸದಸ್ಯರಾಗಿ ಅದನ್ನು ಮುನ್ನಡೆಸುವಲ್ಲಿ ಹೆಣಗಿದರು. ಅದರ ಪರಿಣಾಮ ಇಂದು ಆ ಸಂಸ್ಥೆಯು ಸಾವಿರಾರು ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಹೆಮ್ಮರವಾಗಿದೆ.

ನನಗೆ ವೈಯಕ್ತಿಕವಾಗಿ ಅವರು ಮಾಡಿದ ಉಪಕಾರ, ಸಹಾಯ, ಸಹಕಾರಗಳು ಎಂದಿಗೂ ಮರೆಯಲಾರದಂಥವುಗಳು. ನನ್ನ ಗೃಹಜೀವನ, ವೈಯಕ್ತಿಕ ಸಮಸ್ಯೆ, ಸಾಮಾಜಿಕ ಜೀವನದ ಪ್ರತಿಯೊಂದು ಘಟ್ಟಗಳಲ್ಲಿಯೂ ಅವರ ಮಾರ್ಗದರ್ಶನವಿರುವದರಿಂದ ಅವುಗಳಲ್ಲಿ ಯಶಸ್ವಿಯಾದೆ. ಅವರ ಸ್ಮರಣೆ ನನಗೆ ಎಂದೆಂದಿಗೂ ಮರೆಯಲಾರದ ಒಂದು ಸವಿ ನೆನಪು.

ಧಾರವಾಡ **● ಎಚ್. ಆರ್. ಕನವಳ್ಳಿ**

❖❖❖

# ಎಂಥ ಗಟ್ಟಿ ನಮ್ಮಕ್ಕ

ನಾನು ಮದಿಹಾಳ (ಧಾರವಾಡದ ಒಂದು ಭಾಗ) ದಲ್ಲಿ ಹುಟ್ಟಿ ಬೆಳೆದವ. ನಮ್ಮ ಮನೆಯ ಪಕ್ಕದಲ್ಲಿಯೇ ದಾನಿ ಮಾಸ್ತರರು ಅಂದರೆ ದಿ. ಶಕುಂತಲಾ ಅವರ ತಂದೆ ಶ್ರೀ ಭೀಮರಾವ ದಾನಿ ಇರುತ್ತಿದ್ದರು. ನಾವು ಅಕ್ಕ, ತಮ್ಮರಂತೆಯೇ ಕೂಡಿಯೇ ಬೆಳೆದು ಬಂದವರು. ನಾವು ಅವಳನ್ನು ಸೋನಕ್ಕಾ ಎಂದೇ ಸಂಬೋಧಿಸುತ್ತಿದ್ದೆವು.

ನನಗೆ ದಾಬಡೆ ಅವರ ಪರಿಚಯವಾದದ್ದು 1935ರಲ್ಲಿ. ಆಗ ಅವರು ಧಾರವಾಡದಲ್ಲಿ ಕೆ.ಪಿ.ಸಿ.ಸಿ. ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ದಾಬಡೆ ಅವರು ನನ್ನ ಮಮತೆಯ ಅಕ್ಕನ ಯಜಮಾನರಾದ ಮೇಲೆ ನಮ್ಮ ಸಂಬಂಧ, ಮಿತ್ರತ್ವ ತುಂಬಾ ಗಾಢವಾಗಿಯೇ ಬೆಳೆಯಿತು.

ನನ್ನ ಮನಸ್ಸಿನ ಚೀಲದಲ್ಲಿ ಅಕ್ಕ ಶಕುಂತಲಾ ಬಗ್ಗೆ ಅನೇಕಾನೇಕ ಘಟನೆಗಳಿವೆ. ಅವಳ ಕರ್ತೃತ್ವ ಶಕ್ತಿ, ನಿಸ್ವಾರ್ಥ ಸೇವೆ, ಪ್ರಸಂಗಾವಧಾನ ಇವನ್ನೆಲ್ಲ ಹೇಳಲು ನನ್ನ ಒಂದು ಬಾಯಿ ಸಾಲದು. ಚಳುವಳಿಯಲ್ಲಿ ಅವರ ನಿಸ್ಸೀಮ ದೇಶಭಕ್ತಿ ಮತ್ತು ಪ್ರಸಂಗಾವಧಾನವನ್ನು ತೋರುವ ಒಂದೇ ಘಟನೆಯನ್ನು ಹೇಳಬಯಸುವೆ.

ಅದು ಕ್ವಿಟ್ ಇಂಡಿಯಾ ಚಳುವಳಿಯ ಕಾಲ. ನಾನು ಬಹಳ ದಿನಗಳಿಂದ ಮುಂಬೈಯಲ್ಲಿಯೇ ಇದ್ದೆ. ಆ ಚಳುವಳಿ ಕಾಲಕ್ಕೆ ನಾನು ದಾಬಡೆಯವರೊಡನೆ ಹಾಸುಹೊಕ್ಕಾಗಿ ಕೆಲಸ ಮಾಡಿದೆ. ಅದು ಬಹುಶಃ 1943 ಡಿಸೆಂಬರ್‌ದ ಕೊನೆಯ ಭಾಗ. ಅದೇ ತಾನೆ ಹಿಂಡಲಗಾ ಸೆರೆಮನೆಯಿಂದ ಸೋನಕ್ಕಾ ಚಿಕ್ಕಮಗು ಭಾರತಿಯೊಡನೆ ತನ್ನ ಜೇಲುವಾಸ ಮುಗಿಸಿ ಬಂದಿದ್ದರು. ದಾಬಡೆಯವರು ಇನ್ನೂ ಭೂಗತರಾಗಿಯೇ ಇದ್ದು ಬೆಳಗಾವಿಯಲ್ಲಿಯೇ ಇದ್ದರು. ನಾನು ಅಕಸ್ಮಾತ್ ಅಲ್ಲಿಗೆ ಹೋಗಿದ್ದೆ. ಅವರು ಫುಲಬಾಗ್ ಗಲ್ಲಿಯ ಒಂದು ಕೋಣೆಯಲ್ಲಿ ತಮ್ಮ ಹೆಂಡತಿಯೊಡನೆ ನಡೆಸಿದ ದೀರ್ಘ ಚರ್ಚೆಯ ವಿಷಯ ಹೀಗಿತ್ತು.

ಸೋನಕ್ಕಾ : ನಾನೇನೋ ಇವತ್ತು ಜೇಲಿನಿಂದ ಬಿಡುಗಡೆಯಾಗಿ ಬಂದೀನಿ. ಮತ್ತ ನಮ್ಮ ಸಮಸ್ಯೆ ಶುರು ಆತು. ಎಲ್ಲಿಗೆ ಹೋಗಬೇಕು ? ಅನ್ನೋದು. ನನಗಂತೂ ಜೇಲs ಛಲೋ ಅನಸ್ತದ. ಯಾರ ಮನಿ ಅಂದ್ರೂ ಅವರ ಸಮಸ್ಯೆ ಅವರಿಗೆ ಇದ್ದs ಇರ್ತದ. ಮತ್ತ ಮ್ಯಾಲೆ ನಮ್ಮ ಒಜ್ಜಾ ಅವರ ಮ್ಯಾಲ ಹಾಕಲಿಕ್ಕೆ ಮನಸ್ಸು ಒಪ್ಪೂದಿಲ್ಲ.

ದಾಬಡೆ : ನೀನು ಹೇಳೋದು ಸರಿ. ಈಗ ಚಳುವಳಿ ಇಳಿಗತಿಯಲ್ಲದ. ಅಲ್ಲದೆ ನಾನು ಇಷ್ಟರಲ್ಲಿಯೇ ಭೂಗತದಿಂದ ಸಿಕ್ಕು ಬಿದ್ದು ಜೇಲಿಗೆ ಹೋಗಬೇಕಾಗಬಹುದು. ಕಾರಣ ನೀನು ಮಗುವಿನೊಡನೆ ಹೊರಗೆ ಇರಬೇಕು. ಇದು ನನ್ನ ಮತ.

ಸೋನಕ್ಕಾ : ಈ ಚಳುವಳಿ ಮುಗಿಯೋತನಕ, ಮತ್ತ ನಮ್ಮ ದೇಶಕ್ಕ ಸ್ವತಂತ್ರ್ಯ ಸಿಗೂತನಕ ನಾನು ಜೇಲಿನಾಗ ಇರಲಿಕ್ಕೆ ಸಿದ್ಧ ಇದ್ದೀನಿ. ಬ್ಯಾರೆ ಕಡೆ ಎಲ್ಲಿಯೂ ಬ್ಯಾಡ. ಇದಕ್ಕ ನಿಮ್ಮ ಪರವಾನಿಗೆ ಬೇಕು.

ದಾಬಡೆ : ಪರವಾನಿಗೆ ಕೊಡಲು ನನ್ನ ಕೈಯಲ್ಲೇನಿದೆ ? ದೇಶ ಸೇವೆ ನಮ್ಮನ್ನೆಲ್ಲ ಎಲ್ಲೆಲ್ಲಿ ಮುಟ್ಟಿಸುತ್ತದೆಯೋ ಆ ಪರಮಾತ್ಮನೇ ಬಲ್ಲ.

ಎಂದಾಗ ಚಿಕ್ಕ ತಮ್ಮನ ಸ್ಥಾನದಲ್ಲಿರುವ ನಾನು ಅವರಿಬ್ಬರ ಮನೋಭಾವ ಅರಿತು "ತಾಯಿ ಮಗಳಿಬ್ಬರೂ ಬೇರೆ ಯಾವ ವಿಚಾರವನ್ನೂ ಮಾಡದೆ ನಮ್ಮಲ್ಲಿ ಇದ್ದುಬಿಡಿ. ಸೋನಕ್ಕ ಹ್ಯಾಂಗೂ ನಿನಗ ಒಂದು ಬದಲಾವಣೆ ಅವಶ್ಯಕತೆ ಅದ. ಕೆಲವು ದಿನ ಆದ್ರೂ ನಮ್ಮ ಜೊತೆ ಇರಬೇಕು" ಎಂದೆ. ಕೊನೆಗೆ ಸೋನಕ್ಕಾ ಮಗುವಿನೊಡನೆ ಕೆಲವು ದಿವಸ ಮುಂಬೈಯಲ್ಲಿ ನಮ್ಮ ಮನೆಯಲ್ಲಿಯೇ ಇರಬೇಕೆಂಬ ನಿರ್ಣಯಕ್ಕೆ ಬಂದರು. ಅವರು ನನ್ನ ಸಂಗಡ ಮುಂಬೈಗೆ ಬಂದರು. ನನ್ನ ಅಕ್ಕ ಮನೆಯ ಹಿರಿಯಳಾಗಿ ನಮ್ಮನ್ನೆಲ್ಲ ಸಲುಹಿದಳು.

ಮುಂದೆ ಹದಿನೈದೇ ದಿವಸಗಳಲ್ಲಿ ದಾಬಡೆ ಅವರು ಕೈದಾದ ವರ್ತಮಾನ ಪೇಪರಿನಲ್ಲಿ ಬಂತು. ಈ ಸಮಾಚಾರವನ್ನು ಅವರಿಗೆ ಹೇಗೆ ಹೇಳುವುದು, ಹೇಳಿದರೆ ಅದರ ಪರಿಣಾಮ ಏನಾಗಬಹುದು ? ಎಂದು ನಾನು ನನ್ನ ಹೆಂಡತಿ ಪಿಸು ಮಾತಿನಲ್ಲಿ ಮಾತಾಡುತ್ತಿರುವಾಗ ಅವರು ಬಂದು "ನೀವು ನನ್ನಿಂದ ಏನೋ ಮುಚ್ಚಿಡುತ್ತಿದ್ದೀರಿ. ಏನಿದ್ದರೂ ಹೇಳಿರಿ" ಎಂದು ಪಟ್ಟು ಹಿಡಿದರು. ಆಗ ನಾನೇ ಆ ಸುದ್ದಿ ಬಂದ ಮುಂಬೈ ಕ್ರಾನಿಕಲ್ ಪೇಪರನ್ನು ಅವರ ಮುಂದೆ ಇಟ್ಟೆ. ಮುಂದೆ ಅದರ ಪರಿಣಾಮ ಏನಾಗಬಹುದೆಂಬುದನ್ನು ನಿರೀಕ್ಷಿಸುತ್ತಿದ್ದೆ. ಆಗ ಅವರು ಸೀದಾ ದೇವರ ಮನೆಗೆ ಹೋಗಿ ತುಪ್ಪದ ದೀಪ ಹಚ್ಚಿ ಕೈ ಮುಗಿದರು. ನಮಗೆಲ್ಲ ಆಶ್ಚರ್ಯವಾಯಿತು. ಈ ಸುದ್ದಿ ಕೇಳಿದ ಕೂಡಲೇ ಅವರು ಖಿನ್ನರಾಗಿ ಕಣ್ಣೀರು ಸುರಿಸಬಹುದೆಂದು ನಾವು ತಿಳಿದಿದ್ದೆವು. ಆಗ ಅವರು ನಮ್ಮಿಬ್ಬರನ್ನು ಆ ದೇವರ ಮನೆಯಲ್ಲಿಯೇ ಕೂಡ್ರಿಸಿ ಹೇಳಿದರು.

"ಈಗ ಭೂಗತರಾಗಿದ್ದ ಕಾರ್ಯಕರ್ತರು ಕೈದು ತಪ್ಪಿಸಹತ್ತಿದರೆ ಅವರ ಮೇಲೆ ಗುಂಡು ಹಾರಿಸಲು ಸರಕಾರದ ಆಜ್ಞೆ ಹೊರಟಿದೆ. ಕಾರಣ ಅವರು ಆದಷ್ಟು ಬೇಗ ಕೈದಾಗಲೆಂದು ನಿತ್ಯ ನಾನು ಪ್ರಾರ್ಥನೆ ಮಾಡುತ್ತಲಿದ್ದೆ. ನನ್ನ ಪ್ರಾರ್ಥನೆಗೆ ಇಂದು ಭಗವಂತ ವರ ಕೊಟ್ಟನೆಂದು ದೇವರಿಗೆ ತುಪ್ಪದದೀಪ ಹಚ್ಚಿ ಸಂತೋಷದಿಂದ ನಮಸ್ಕರಿಸಿದೆ" ಎಂದಾಗ ನಮಗೆ ಆಡಲು ಶಬ್ದ ಹೊರಡದೆ ಸ್ಥಬ್ದರಾಗಿ ನಿಂತೆವು. ಇದು ಎಂಥ ಪ್ರಸಂಗಾವಧಾನ ! 'ಧನ್ಯ ಜೀವಿ ಸೋನಕ್ಕಾ' ಎಂದು ನಾವಿಬ್ಬರೂ ಅವರಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿ ಅವರನ್ನು ಧಾರವಾಡಕ್ಕೆ ಬೀಳ್ಕೊಟ್ಟೆವು.

● ಸತ್ಯಬೋಧ ಸಿಂಗೀತ
ಮುಂಬೈ

❖❖❖

ಪರತಂತ್ರದ ನೋವು ಹೇಗಿರುತ್ತದೆಂಬುದನ್ನು ಸ್ವಾನುಭವದಿಂದ ಪ್ರತ್ಯಕ್ಷವಾಗಿ ಕಂಡುಂಡು ಈ ಪುಸ್ತಕದಲ್ಲಿ ಒಡಮೂಡಿಸಿದ ಮಾತುಗಳು ಇಂದಿನ ಪೀಳಿಗೆಗೆ ಕಲ್ಕಿಯ ಪಾಠಗಳಂತೆ ಇವೆ. ಸ್ವಾತಂತ್ರ್ಯದ ನಂತರ ಜನಿಸಿದವರಿಗೂ ಮುಂದೆಂದೂ ತಮ್ಮ ಜನ್ಮದುದ್ದಕ್ಕೂ ಪರತಂತ್ರದ ನೆನಪು ಬರದಿರಲೆಂದು ಇಂತಹ ಪುಸ್ತಕ ದಾರಿದೀಪವಾದೀತಲ್ಲವೇ !

ಈಗ ಈ ಪುಸ್ತಕದಲ್ಲಿಯ ಸರಿಯಾದ ತಿರುಳನ್ನರಿತು ಈಗಿನ ಹಾಗೂ ಮುಂದಿನ ಪೀಳಿಗೆಗೆ ಸ್ವಾತಂತ್ರ್ಯದ ಕಷ್ಟಸುಖಗಳೇನೆಂಬ ತಿಳುವಳಿಕೆ ಬರಲೆಂಬ ಸದುದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರದವರು ಈ ಪುಸ್ತಕಕ್ಕೆ ಮರುಜನ್ಮವಿತ್ತಂತೆ ಮರುಮುದ್ರಣವನ್ನು ಮಾಡಿಸಿ ಪ್ರಕಟಿಸಿದ್ದು

ನಿಜಕ್ಕೂ ಶ್ಲಾಘನೀಯ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸರಕಾರದವರು ಶಾಲೆ, ಕಾಲೇಜುಗಳಲ್ಲಿ ಇದನ್ನು ಪಠ್ಯಪುಸ್ತಕವೆಂದು ಪರಿಗಣಿಸಿದರೆ ಸ್ವಾತಂತ್ರ್ಯ ಸಂಗ್ರಾಮದ ಸವಿನೆನಪುಗಳಿಗೆ ಬೆಲೆ ಬರುವದುಂಟು.

ಬೆಂಗಳೂರು

● ಶ್ರೀ ಎನ್. ಕೆ. ಜೋಶಿ

❖❖❖

ನಮ್ಮ ರಾಷ್ಟ್ರ ರಾಜಕೀಯವಾಗಿ ಸ್ವತಂತ್ರವಾಗಿ ಐದು ದಶಕಗಳ ಮೇಲಾದರೂ ಸೇವೆ, ತ್ಯಾಗ, ರಾಷ್ಟ್ರನಿಷ್ಠೆ, ಭಕ್ತಿಸಮರ್ಪಣತೆಯಿಂದ ಹೋರಾಡಿ ಕಷ್ಟಪಟ್ಟವರ ಸುಖ-ದುಃಖಗಳನ್ನು ಬಿಂಬಿಸುವ ಸಾಹಿತ್ಯ, ಸಮಾಜದ ಕೊನೆಯ ಮನುಷ್ಯನವರೆಗೆ ಬಂದಿಲ್ಲ.

ಸ್ವಾತಂತ್ರ್ಯ ಪ್ರಾಪ್ತಿಯ ನೋವು ನಲಿವುಗಳು ಈ ಪುಸ್ತಕದಲ್ಲಿ ಲೇಖಕರ ಬರಹದ ಶೈಲಿ, ಸರಳ ವಿಚಾರಗಳ ಅಭಿವ್ಯಕ್ತಿ ಸುಲಭ. ಹೋರಾಟದ ಕಾಲದಲ್ಲಿ ಧೈರ್ಯ, ತಾಳ್ಮೆ, ಸಮಯೋಚಿತ ಕುಶಲತೆಯ ವರ್ತನೆ ಇವು ಓದುಗರ ಮನಸ್ಸು, ಹೃದಯ, ಬುದ್ಧಿಗೆ ನೇರವಾಗಿ ಮುಟ್ಟಿ ಚಿಂತನ ಜಾಗೃತಿಗೆ ಪ್ರೇರಕವಾಗಿವೆ.

ಶ್ರೀಮತಿ ಶಕುಂತಲಾ ತಾಯಿಯವರು ತಮ್ಮ ದಾಂಪತ್ಯದ ಜೀವನದುದ್ದಕ್ಕೂ ಅನುಭವಿಸಿದ ಸುಖದುಃಖದ ಘಟನೆಗಳನ್ನು ಕೇಳಿದ ನೀವು, ಚೆನ್ನಾಗಿ ಪಚನ ಮಾಡಿಕೊಂಡು ಓದುಗರ ಮನ, ಬುದ್ಧಿ, ಹೃದಯಗಳಿಗೆ ಚೆನ್ನಾಗಿ ಮುಟ್ಟುವಂತೆ ಸಂಯೋಜಿಸಿದ್ದೀರಿ.

ಅನೇಕ ತಲೆಬರಹಗಳು ಬಾಲ್ಯದಿಂದ ಬಾಸಿಂಗ ಕಟ್ಟುವವರೆಗೆ, ಧಾರವಾಡದಲ್ಲಿ ದಾಂಪತ್ಯ ಜೀವನ, ಸಂತಸ ತಂದ ಬಂಧನದ ಮುಕ್ತಿ, ಧರ್ಮಪತ್ನಿಗೆ ನೀನೂ ಜೈಲಿಗೆ ಹೋಗು ಎಂದು ಕೊಟ್ಟ ಅಪ್ಪಣೆ, ಅದನ್ನು ಧೈರ್ಯದಿಂದ ಪಾಲಿಸಿದ ವೀರ ರಾಷ್ಟ್ರೀಯ ಮಹಿಳೆ ಶಕುಂತಲಾ ತಾಯಿಯವರ ಕೆಚ್ಚು, ನೀವು ಸರ್ವೋದಯ ಆಂದೋಲನಕ್ಕೆ ಅರ್ಪಿತವಾದಾಗ ಧರ್ಮಪತ್ನಿಯ ದಿಟ್ಟ ಸಹಕಾರ ಇವೆಲ್ಲ ಸ್ಮರಣೀಯ ಸಂಗತಿಗಳು.

ಶಕುಂತಲಾ ತಾಯಿಯವರ ಸಾಹಸ, ಸೇವೆಯ ಸಮಗ್ರ ಜೀವನ ಚಲನಚಿತ್ರವಾಗಬೇಕು. ಪ್ರೇಕ್ಷಕರ ಮನಸ್ಸಿನ ಮೇಲೆ ಅವರ ಸೇವೆ, ತ್ಯಾಗ, ಸಮರ್ಪಣೆ, ಸಂದೇಶ ಅಚ್ಚೊತ್ತಿದಂತಾಗುವದು.

**ಶ್ರೀ ವೀರಪ್ಪ ಕೌತಾಳ ನೇಗಿಲ ಯೋಗಿ**
ಸ್ವಾತಂತ್ರ್ಯಯೋಧ, ಗದಗ

ತಮ್ಮೊಂದಿಗೆ ಆದರ್ಶವನ್ನು ಮೈಗೂಡಿಸಿಕೊಂಡು ಸಾಧನೆಮಾಡಿ ಮಡಿದ ತಮ್ಮ ಧರ್ಮಪತ್ನಿ ದಿ. ಶಕುಂತಲಾ ಅವರು ಮತ್ತು ತಾವು ಪ್ರಾತಃಸ್ಮರಣೀಯರು.

ಪಾರತಂತ್ರ್ಯದಿಂದ ಭಾರತಾಂಬೆಯನ್ನು ಮುಕ್ತಗೊಳಿಸಲು ಸ್ವಾತಂತ್ರ್ಯ ಹೋರಾಟದಲ್ಲಿ ಜೀವನವನ್ನು ಪಣಕ್ಕಿಟ್ಟ ತಾವು ಚಿರಸ್ಮರಣೀಯರು.

ತಮ್ಮ ಹಾಗೂ ತಮ್ಮ ಧರ್ಮಪತ್ನಿ ದಿ. ಶಕುಂತಲಾರ ಬದುಕಿನ ಪ್ರಸಂಗಗಳನ್ನು ಕುರಿತು ಪ್ರಕಟಿಸಿರುವ ಈ ಕೃತಿ, ಕಾಲಹರಣಕ್ಕೆ ಓದುವ ಕೃತಿಯಲ್ಲ. ಲಿಂಗಭೇದವಿಲ್ಲದೆ ವಯಸ್ಕರಿಗೆ ಹಾಗೂ ವೃದ್ಧರಿಗೆ ದಾರಿದೀಪವಾಗಿದೆ.

**● ಶ್ರೀ ಜಿ. ಎಂ. ಮಠದ**
ಚೌಡದಾನಪುರ, ತಾ. ರಾಣೆಬೆನ್ನೂರ

❖❖❖

## ವಿಶಿಷ್ಟ ಮಾದರಿಯ ಅಪರೂಪದ ಆತ್ಮಚರಿತ್ರೆ

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅನೇಕ ಗ್ರಂಥಗಳು ಬಂದಿವೆ. ಇತಿಹಾಸಕಾರರು ವಿವಿಧ ಆಕರಗಳನ್ನು ಶೋಧಿಸಿ ಸಂಗ್ರಹಿಸಿ ಬರೆದಿದ್ದಾರೆ, ಅವರಲ್ಲಿ ಸ್ವತಃ ಭಾಗವಹಿಸಿದ ಅನೇಕ ಮಹನೀಯರು ತಮ್ಮ ಅನುಭವಗಳನ್ನು ಬರೆದಿದ್ದಾರೆ. ಈ ಮಾದರಿಯ ಸಾಹಿತ್ಯ ಇನ್ನೂ ಬರುತ್ತಲೂ ಇದೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಬೇಕೆಂಬ ಯಾವ ಉದಾತ್ತ ಧ್ಯೇಯ ಪ್ರೇರಣೆಗಳನ್ನು ಹೊಂದದೆ ಪತಿಯು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿರುವುದರಿಂದ ಪತ್ನಿಯಾದ ತಾನೂ ಅವನನ್ನು ಅನುಸರಿಸುವದು ತಮ್ಮ ಧರ್ಮವೆಂಬ ಪವಿತ್ರ ಭಾವನೆಯಿಂದ ಅದರ ನೋವು ನಲಿವುಗಳನ್ನು ಅನುಭವಿಸಿದ ಒಬ್ಬ ಗೃಹಿಣಿಯ ಅನಿಸಿಕೆಗಳ ನಿರೂಪಣೆ ಇಲ್ಲಿದೆ. ಈ ದೃಷ್ಟಿಯಿಂದ ಇದೊಂದು ವಿಶಿಷ್ಟ ಮಾದರಿಯ ಅಪರೂಪದ ಪುಸ್ತಕ. ಕನ್ನಡ ಸಾಹಿತ್ಯಕ್ಕೇ ಹೊಸದು ಎಂದರೂ ಅತಿಶಯೋಕ್ತಿ ಅಲ್ಲ.

ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳಲ್ಲಿ ಶ್ರೀ ನರಸಿಂಹ ದಾಬಡೆಯವರದು ಪ್ರಮುಖ ಹೆಸರು. ಅವರು ಬಾಲ್ಯದಿಂದಲೇ ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಜೀವನವನ್ನು ಮೀಸಲಿಟ್ಟವರಲ್ಲಿ ಒಬ್ಬರು. ಆದರೆ ಅವರ ಪತ್ನಿ ದಿ. ಶಕುಂತಲಾ ಇಂಥ ಯಾವುದೇ ಬಾಹ್ಯ ಪ್ರೇರಣೆಯಿಂದ ಪ್ರೇರಿತರಾದವರಲ್ಲ, ಪತಿಯನ್ನು ಶ್ರದ್ಧೆ, ನಿಷ್ಠೆಗಳಿಂದ ಅನುಸರಿಸುವದು ಪತ್ನಿಯ ಧರ್ಮ. ಆದ್ದರಿಂದ ಪತಿಯ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳಲ್ಲಿ ತಾನು ಸಕ್ರಿಯವಾಗಿ ಸಹಕರಿಸಬೇಕು ಎಂಬ ಒಂದೇ ಒಂದು ಉದ್ದೇಶದಿಂದ ನಡೆಸಿದ ಜೀವನದ ನೆನಪುಗಳು ಇಲ್ಲಿವೆ.

ಅವರು ಯಾವ ಸತ್ಯಾಗ್ರಹವನ್ನೂ ಸಂಘಟಿಸಲಿಲ್ಲ, ಯಾವ ಚಳುವಳಿಯಲ್ಲೂ ಮುಂಚೂಣಿಯ ಪಾತ್ರ ವಹಿಸಲಿಲ್ಲ, ಮಾಲೆ ಹಾಕಿಕೊಳ್ಳಲಿಲ್ಲ, ಮೆರವಣಿಗೆ ಮಾಡಿಸಿಕೊಳ್ಳಲಿಲ್ಲ. ಆದರೂ ಅವರು ಜೇಲಿಗೆ ಹೋದರು. ಒಂಭತ್ತು ತಿಂಗಳ ಮಗುವನ್ನು ಬಗಲಲ್ಲಿ ಎತ್ತಿಕೊಂಡೇ ನಾಲ್ಕು ತಿಂಗಳ ಜೇಲುವಾಸವನ್ನು ಅನುಭವಿಸಿದರು. ಪತಿಯು ಭೂಗತರಾಗಿ, ಜೈಲಿನಲ್ಲಿ ಕೈದಿಯಾಗಿ ಕಷ್ಟವನ್ನು ಅನುಭವಿಸುತ್ತಿರುವಾಗ ಧೈರ್ಯ, ಮನೋಸ್ಥೈರ್ಯಗಳಿಂದ ಕುಟುಂಬವನ್ನು ನಡೆಸಿದರು. ಈ ಸಾಹಿತ್ಯವನ್ನು ಬರಹಕ್ಕಿಳಿಸಿದ ಶ್ರೀ ದಾಬಡೆಯವರು "ಸ್ವಾತಂತ್ರ್ಯ ಹೋರಾಟದಲ್ಲಿ ಪ್ರತ್ಯಕ್ಷ ಭಾಗವಹಿಸಿದ ನಾವು ಪಟ್ಟ ಕಷ್ಟ ನಷ್ಟಗಳಿಗಿಂತ ನಮ್ಮ ಮನೆಯ ಗೃಹಿಣಿಯರು, ಹೆಣ್ಣುಮಕ್ಕಳು ಅನುಭವಿಸಿದ ನೋವು ಕ್ಲೇಶಗಳು ಹೆಚ್ಚಿನವು" ಎಂದು ತೆಗೆದ ಉದ್ಗಾರ ಸೂಕ್ತವಾಗಿದೆ.

ಚಳುವಳಿಗಾರರು ಪ್ರತ್ಯಕ್ಷ ಹೋರಾಟದಲ್ಲಿ ಭಾಗವಹಿಸಿ ಕಷ್ಟ-ನಷ್ಟಗಳನ್ನು ಅನುಭವಿಸುತ್ತಿರುವಾಗ ಇತ್ತ ಅವರ ಮನೆಯವರು ಅದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ಜೀವನದ ಸಮಸ್ಯೆಗಳನ್ನು ಹೇಗೆ ಎದುರಿಸುತ್ತಿದ್ದರು. ಅವರಲ್ಲಿ ಉದ್ವೀಪನಗೊಳ್ಳುತ್ತಿದ್ದ ಭಾವನೆ ಅನಿಸಿಕೆಗಳೇನು ಎಂಬುದರ ಪ್ರತ್ಯಕ್ಷ ಚಿತ್ರ ಇಲ್ಲಿದೆ. ಆದ್ದರಿಂದಲೇ ಇದು ಕನ್ನಡ ಸಾಹಿತ್ಯದಲ್ಲಿ ಈವರೆಗೆ ಇಲ್ಲದ ಹೊಸ ಸಾಹಿತ್ಯ.

● ಸಂಯುಕ್ತ ಕರ್ನಾಟಕ

❖❖❖

ಉದಾತ್ತ ಮತ್ತು ತತ್ವಬದ್ಧ ತಲೆಮಾರೊಂದು ಆಗಿಹೋಗಿದೆ. ಈಗೇನಿದ್ದರೂ ಅದರ ಚಹರೆಗಳ ನೆನಪು ಮಾತ್ರ ಎಂಬಂತೆ ನಮ್ಮ ಪ್ರಪಂಚ ಬದಲಾಗಿದೆ. ಅಗಾಧ ವ್ಯತ್ಯಾಸವಿರುವ ಈ ಎರಡೂ ಯುಗಗಳ ನಡುವೆ ಕೊಂಡಿಯಂತಿರುವುದು ಆ ಕಾಲದ ಮನಸ್ಸುಗಳ ಕುರಿತಾದ ನೆನಪುಗಳೇ. ಅಂಥ ಒಂದು ನೆನಪು, ದಿ. ಶಕುಂತಲಾ ದಾಬಡೆ ಅವರ ಈ ಆತ್ಮಕಥನ. ಶಕುಂತಲಾ ಅವರು ನಿರೂಪಿಸಿದ ಈ ಕಥನವನ್ನು ಅವರ ಪತಿ ನರಸಿಂಹ ದಾಬಡೆ ಬರೆದಿದ್ದಾರೆ.

ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ಆದ ರೀತಿಯ ಕಾಣಿಕೆ ಸಲ್ಲಿಸಿದ, ತಮಗಾಗಿ ಏನನ್ನೂ ಬಯಸದೆ ಕಷ್ಟಪರಂಪರೆಗೆ ಒಡ್ಡಿಕೊಂಡ ಶಕುಂತಲಾರ ಬದುಕು ಈ ಕಥನದಲ್ಲಿ ಕಣ್ಣಿಗೆ ಕಟ್ಟುತ್ತದೆ. ಆ ಬದುಕೇ ಒಂದು ಹೃದಯಂಗಮ ಕಥನ.

● ಕನ್ನಡ ಪ್ರಭ

"ಸಂಘರ್ಷ-ಸಹಯೋಗ-ಸಂತೃಪ್ತಿ" ಪೂರ್ತಿ ಓದಿದೆ. ಓದುತ್ತಾ ಕಣ್ಣು ಹನಿಗೂಡಿದವು. ನೀರುಗೂಡದೇ ಪುಸ್ತಕ ಓದಲಾಗಲಿಲ್ಲ.

ಸಂಘರ್ಷದಲ್ಲಿ ಅರ್ಥಾತ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮನೆಯವರೆಲ್ಲರನ್ನು ತೊಡಗಿಸುವುದರಲ್ಲಿ, ಜೇಲುವಾಸವನ್ನು ಅನುಭವಿಸುವುದರಲ್ಲಿ, ತ್ಯಾಗಮಯ ಜೀವನಕ್ಕೆ ತೊಡಗಿಸುವುದರಲ್ಲಿ ಯಶಸ್ವಿಯಾದಿರಿ. ಅದೇನೂ ಸಣ್ಣ ಮಾತಲ್ಲ, ನೀವೇ ಧನ್ಯರು. ಬಹುಕಡಿಮೆ ಜನ ಇದರಲ್ಲಿ ಸಫಲರಾಗುತ್ತಾರೆ. ನೀವೂ ಅವರಲ್ಲೊಬ್ಬರು.

ಸಂಘರ್ಷಮಯ ಜೀವನವಂತೂ ದುಃಖಮಯ. ಹೇಗೂ ದುಃಖ ತಪ್ಪಿದ್ದಲ್ಲ. ಅದನ್ನೇ ಆನಂದದಾಯಕ ಮಾಡಿಕೊಳ್ಳುವುದಾದರೆ ಎಷ್ಟು ಚೆನ್ನ ಎನಿಸುತ್ತದೆ. ಮೇಲೆ ಹೇಳಿದಂತೆ ಹೇಳುವುದು ಸುಲಭ. ಆದರೆ ಮಾಡುವುದು ಕಷ್ಟಕರ. ಇದರಲ್ಲಿ ಸಂತೃಪ್ತಿಯನ್ನು ಕಂಡವರು ನಿಜವಾಗಿ ಆಧ್ಯಾತ್ಮ ಅಧಿಷ್ಠಾನ ಉಳ್ಳವರೆನ್ನಬೇಕು. ಹೆಜ್ಜೆ ಹೆಜ್ಜೆಗೂ ಈಶ್ವರಾರ್ಪಣೆ ಭಾವ ಕಂಡುಬರುತ್ತದೆ. ಇದು ಆಧ್ಯಾತ್ಮದ ಅಧಿಷ್ಠಾನವಲ್ಲದೇ ಮತ್ತೇನು ? ಆ ಸಂಘರ್ಷಮಯ ಕರಾಳ ದಿನಗಳನ್ನು ಪರಿವಾರದವರೆಲ್ಲ ಎದುರಿಸಿದರು. ಅದೇ ಹೆಗ್ಗಳಿಕೆಯ ಮಾತು. ದೇವರ ಮುಂದೆ ತುಪ್ಪದ ದೀಪ ಹಚ್ಚಿದವರು ಆತನಿಗೆ ಶರಣು ಹೋಗುವ ಶರಣ ಪ್ರಗತಿ ತತ್ವ ಅಲ್ಲಿ ಜೀವಂತ ತತ್ವವಾಯಿತು.

ಸಂಘರ್ಷಮಯ ಜೀವನದಲ್ಲಿ ಸಹ ಪಾರಸ್ಪರಿಕ ಸಹಯೋಗ ಇತ್ತು. ನಿಮ್ಮಿಬ್ಬರಲ್ಲಿ ನಿಮ್ಮ ಸ್ನೇಹಿತರಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಸ್ವಾತಂತ್ರ್ಯ ನಂತರದ ರಚನಾತ್ಮಕ ಕಾರ್ಯದಲ್ಲಿ ಸಹ ಜೀವಂತ ತತ್ವವಾಯಿತು. ಹೀಗೆ ಪುಸ್ತಕದ ಶೀರ್ಷಿಕೆ ಅನ್ವರ್ಥವಾಯಿತು.

● **ಶ್ರೀ ಸತ್ಯವ್ರತ,** ಗಾಂಧೀವಾದಿ
ವಲ್ಲಭನಿಕೇತನ, ಗಾಂಧೀಭವನ, ಬೆಂಗಳೂರು

❖❖❖

"Truth is stranger than fiction" ಎನ್ನುವಂತೆ ಈ ಸತ್ಯಕಥೆ ಒಂದು ಕಾದಂಬರಿಗಿಂತಲೂ ಹೆಚ್ಚು ಕುತೂಹಲಕಾರಕವಾಗಿದೆ. ಓದಲು ಶುರುಮಾಡಿದರೆ ಕೊನೆಯ ಪುಟದವರೆಗೂ ಓದಿಸಿಕೊಂಡು ಹೋಗುತ್ತದೆ. ಇದನ್ನು ಇಂದಿನ ಪೀಳಿಗೆಯವರಷ್ಟೇ ಅಲ್ಲ, ಹಿರಿಯರೂ ಓದಲೇಬೇಕಾದಷ್ಟು ಉದ್ಬೋಧಕರವಾಗಿದೆ. ಸ್ವಾತಂತ್ರ್ಯ ಆಂದೋಲನದ ಘನಘೋರ ಚಿತ್ರದ ಪೂರ್ಣ ಪರಿಚಯ ಕಣ್ಮುಂದೆ ಕಟ್ಟುತ್ತದೆ. ಆತ್ಮಚರಿತ್ರೆಯ ನಾಯಕಿಯ ದೇಶಾಭಿಮಾನ, ಸಂಕಟಗಳನ್ನು ಎದುರಿಸುವ ಕೆಚ್ಚೆದೆ, ತಾಳ್ಮೆ, ಕಷ್ಟಸಹಿಷ್ಣುತೆ, ಮಮತೆ, ಅಂತಃ ಕರಣ, ಸಾಮಾಜಿಕ ಕಳಕಳಿ, ಕ್ಷಮಾಗುಣ ಮುಂತಾದ ಮಾನವೀಯ ಮೌಲ್ಯಗಳು ಎದ್ದು

ಕಾಣುತ್ತವೆ. ಗೀತೆಯ ಸ್ಥಿತಃಪ್ರಜ್ಞದ ಅನೇಕ ಲಕ್ಷಣಗಳು ದಿ. ಶಕುಂತಲಾ ಅವರಲ್ಲಿ ಮನೆ ಮಾಡಿಕೊಂಡದ್ದನ್ನು ಓದುಗರು ಕಂಡುಕೊಳ್ಳುವರು. ಕೆಲವು ಸನ್ನಿವೇಶಗಳು ಹೃದಯ ತಂತಿಯನ್ನು ಮಿಡಿದು ಸಂತಸ ಕೊಡುತ್ತವೆ. ಇನ್ನೂ ಕೆಲವು ಕರುಳನ್ನು ಹಿಚುಕಿ ಕಣ್ಣೀರು ತರುತ್ತವೆ.

● ಶ್ರೀ ಮಾರ್ತಾಂಡರಾವ ವರಗಿರಿ

ತೇಜಸ್ವಿನಗರ, ಧಾರವಾಡ

❖❖❖

"ಸಂಘರ್ಷ-ಸಹಯೋಗ-ಸಂತೃಪ್ತಿ" ದಿ. ಶಕುಂತಲಾ ದಾಬಡೆ ಅವರ ಆತ್ಮಚರಿತ್ರೆ. ಅವರು ಹೇಳಿದ್ದು, ನೀವು ಬರೆದದ್ದು ಓದಿದೆ. ಸಂಪೂರ್ಣ ತೃಪ್ತಿಕೊಟ್ಟಿತು. ಆದರ್ಶ ಜೀವನದ ಕಷ್ಟ ಹಾಗೂ ಸಂತೃಪ್ತಿ ಎರಡೂ ಚೆನ್ನಾಗಿ ವ್ಯಕ್ತವಾಗಿವೆ. ತರುಣ ದಂಪತಿಗಳಿಗೆ ಇಂಥ ಜೀವನ ಚರಿತ್ರೆಗಳು ಒಳ್ಳೆಯ ಪೌಷ್ಟಿಕ. ಜೀವನದಲ್ಲಿ ಬರುವ ಸಂಕಟಗಳನ್ನು ಜೊತೆ ಜೊತೆಯಾಗಿ ಎದುರಿಸಿ ಗೆಲ್ಲುವುದೇ ನಿಜವಾದ ದಾಂಪತ್ಯ ಎಂಬ ಸಂದೇಶ ಮನಮುಟ್ಟುವಂತೆ ವ್ಯಕ್ತವಾಗಿದೆ. ಇದನ್ನು ಪ್ರಕಟಿಸಿ ಉತ್ತಮ ಕೆಲಸ ಮಾಡಿರುವಿರಿ, ಕನ್ನಡ ಸಾಹಿತ್ಯಕ್ಕೆ ಯುಕ್ತ ಕೊಡುಗೆ.

● ಡಾ. ವಾಮನ ಬೇಂದ್ರೆ

ಧಾರವಾಡ

❖❖❖

ಇದೊಂದು ಸಾಹಸದ ವೀರಗಾಥೆ. ಇಂಥವರು ಪ್ರಾತಃಸ್ಮರಣೀಯರೇ ಸರಿ. ಅರವಟಿಗೆಯಲ್ಲಿ ನಡೆದ ಘಟನೆ ದಾಬಡೆಯವರ ಜೀವಕ್ಕೆ ಕುತ್ತಾಗಿ ಬಂತು. ಆಗ ಶ್ರೀಮತಿಯವರು ಪಟ್ಟ ಕಳವಳ ಹೇಳತೀರದು. ಇಂಥ ಅನೇಕ ಘಟನೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಈ ಪುಸ್ತಕ ಎಲ್ಲ ಗ್ರಂಥಾಲಯಗಳಲ್ಲಿ ಇರಬೇಕು. ಇಂದಿನ ಪೀಳಿಗೆ ಓದಿ ಸ್ವಾತಂತ್ರ್ಯ ಹೋರಾಟದ ಅರ್ಥ ಮಾಡಿಕೊಳ್ಳಬೇಕು. ನಿಮ್ಮ ದಾಂಪತ್ಯ ಜೀವನ ಆದರ್ಶಪ್ರಾಯ.

● ಶ್ರೀ ಬಿ. ಆರ್. ವಾಡಪ್ಪಿ

ಧಾರವಾಡ

"ಸಂಘರ್ಷ-ಸಹಯೋಗ-ಸಂತೃಪ್ತಿ" ಪುಸ್ತಕವನ್ನು ಓದಿದಾಗ ನನ್ನ ಕಣ್ಣಲ್ಲಿ ನೀರು ಮಿಡಿಯಿತು. ನಿಮ್ಮ ಕೈಹಿಡಿದ ಆಕೆಯ ನೋವು - ನಲಿವುಗಳು, ಆತ್ಮಾಭಿಮಾನ, ಬಂಧು ಬಳಗದ ಮೂದಲಿಕೆ, ಆರ್ಥಿಕ ಮುಗ್ಗಟ್ಟು, ನಿಮ್ಮ ಬಗ್ಗೆ ಇದ್ದ ಮೆಚ್ಚುಗೆ - ಎಲ್ಲವನ್ನು ಓದಿದಾಗ ನನ್ನ ಹೆಂಡತಿ ಅನುಭವಿಸಿದ ಕಷ್ಟಗಳ ಅರಿವಾಯ್ತು. ಆದರೆ ಸೋದರಿ ದಿ. ಶಕುಂತಲಾ ಅವರ ದುಃಖ, ದುಮ್ಮಾನಗಳು ಅಳತೆ ಮೀರಿದ್ದು. ಅವರ ಆತ್ಮಾಭಿಮಾನ ಅದಕ್ಕೂ ಹೆಚ್ಚಿನದು. ಅವರ ಈ ಸರಳ, ಸುಂದರ ಆತ್ಮಚರಿತ್ರೆಯನ್ನು ಬರೆದುಕೊಂಡು ಪುಸ್ತಕರೂಪದಲ್ಲಿ ಪ್ರಕಟಿಸಿ ನಮ್ಮೆಲ್ಲರ ಪ್ರೀತ್ಯಾದರಗಳಿಗೆ ನೀವು ಪಾತ್ರರಾಗಿದ್ದೀರಿ.

**● ಶ್ರೀ ಎಚ್. ಎಸ್. ದೊರೆಸ್ವಾಮಿ**
ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಬೆಂಗಳೂರು

❖❖❖

ನಿಮ್ಮ ಪತ್ನಿ ದಿ. ಶಕುಂತಲಾ ದಾಬಡೆ ಅವರ ಆತ್ಮಚರಿತ್ರೆಯನ್ನು ಹೇಳುವ 'ಸಂಘರ್ಷ-ಸಹಯೋಗ-ಸಂತೃಪ್ತಿ' ಎಂಬ ಪುಸ್ತಕವನ್ನು ಓದಿದಂತೆ ಹಿಂದೂ ಸ್ತ್ರೀ ತನ್ನ ಪತಿಗೆ ಸಂಪೂರ್ಣ ಸಮರ್ಪಣ ಮಾಡಿದ್ದು ವೇದ್ಯವಾಯ್ತು.

ನಿಮ್ಮ ಪತ್ನಿ ಜೇಲಿಗೆ ಹೋಗುವ ಮೊದಲು ನಡೆಸಿದ ಜೀವನ ಹಾಗೂ ಅನುಭವಿಸಿದ ಯಾತನೆ, ಸಾಮಾಜಿಕ, ಆರ್ಥಿಕ ತೊಂದರೆ, ಒಮ್ಮೆ ಮಗಳಿಗೆ ಕಣ್ಣು ಬೇನೆ ಬಂದಾಗ ಅವಳ ಚಿಕಿತ್ಸೆಗೆ, ಔಷಧ ಖರ್ಚು ಸಲುವಾಗಿ ಪೇಚಾಡಿದ್ದನ್ನು ಓದಿ ನನ್ನ ಹೃದಯ ಕರಗಿ ನೀರಾಯ್ತು. ಆ ಕಾಲಕ್ಕೆ ನಿಮ್ಮ ಪತ್ನಿ ಇತರರ ಬಿರುನುಡಿಗಳಿಂದ ಎಷ್ಟೊಂದು ಸಂಕಟ, ಹಿಂಸೆ ಅನುಭವಿಸಿದರು. ಆ ಕಾಲಕ್ಕೆ ಅವರು ನಿಮಗಿಂತ ನೂರುಪಟ್ಟು ಹೆಚ್ಚು ಕಷ್ಟ ಹಾಗೂ ಯಾತನೆ ಅನುಭವಿಸಿದ್ದಾರೆ.

ನೀವು ನಿಜವಾಗಿ ಕಷ್ಟ ಅನುಭವಿಸಿದ್ದು ಹಾಗೂ ಸಾಹಸಪಟ್ಟದ್ದು ಅರವಟಿಗೆಯಲ್ಲಿ. ಸರ್ವೋದಯ ಕಾರ್ಯ ಕೈಗೆತ್ತಿಕೊಂಡಾಗ ಸಮಾಜಸೇವೆ, ಅಂತ್ಯೋದಯ ವಗೈರೆ ಮಾಡಿದಾಗ. ಅದನ್ನು ಮಾಡುವಾಗ ನಿಮ್ಮ ತ್ಯಾಗ, ಕಷ್ಟ, ಸಹಿಷ್ಣುತೆ, ಪ್ರಾಮಾಣಿಕತೆ, ಶಿಸ್ತು, ಸಂಯಮತೆ ಹಸ್ತಶುದ್ಧಿ ಇವು ನಿಜವಾಗಿಯೂ ಪ್ರಶಂಸನೀಯ. ಇದರಲ್ಲಿ ಸಹ ನಿಮ್ಮ ಅರ್ಧಾಂಗಿಯ ಪಾತ್ರ ಮೆಚ್ಚತಕ್ಕದ್ದು. ಒಟ್ಟಿನಲ್ಲಿ ನಿಮ್ಮ ಸಹಧರ್ಮಿಣಿಯ ಸಹಾಯ ಮತ್ತು ಸಹಕಾರ ನಿಮಗೆ ಸಿಗದಿದ್ದರೆ ನೀವು ಜೀವನದಲ್ಲಿ ಇಷ್ಟೊಂದು ಸಮಾಜ, ಸಾರ್ವಜನಿಕ ಹಾಗೂ ದೇಶಸೇವೆ ಮಾಡಿ ಯಶಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಅವರ ಪುಣ್ಯ ಫಲದಿಂದ ನಿಮಗೆ ಒಳ್ಳೆಯ ಮಕ್ಕಳು ದೊರಕಿದ್ದಾರೆ. ಸ್ವರ್ಗೀಯ ಶಕುಂತಲಾ ತಾಯಿಗೆ ನನ್ನ ಸಹಸ್ರ ನಮನಗಳು.

ಈ ಚರಿತ್ರೆಯನ್ನು ಕನ್ನಡ ನಾಲ್ಕು ಅಥವಾ ಐದನೇ ತರಗತಿಗೆ ಪಠ್ಯಪುಸ್ತಕವಾಗಿ ಓದುವಂತೆ ಮಾಡಿದರೆ ಒಳ್ಳೆಯದು.

● ಶ್ರೀ ಎಸ್. ಆರ್. ನೇಸ್ವಿ
ಸ್ವಾತಂತ್ರ್ಯಯೋಧರು, ಹಂಸಭಾವಿ

❖❖❖

ದಿ. ಶಕುಂತಲಾ ತಾಯಿಯವರ ಚರಿತ್ರೆಯಾದ "ಸಂಘರ್ಷ-ಸಹಯೋಗ-ಸಂತೃಪ್ತಿ" ಓದಿ ನನಗೆ ಅತೀವ ಆನಂದವಾಯಿತು. ಈ ಪುಸ್ತಕವನ್ನು ಸ್ವಾತಂತ್ರ್ಯೋತ್ತರ ಜನಿಸಿದ ಪೀಳಿಗೆಯವರು ಓದಿ ಜೀರ್ಣಿಸಿಕೊಳ್ಳುವದು ಅತ್ಯಂತ ಅವಶ್ಯವಿದೆ. ಆದ್ದರಿಂದ ಶಾಲೆ ಕಾಲೇಜುಗಳಲ್ಲಿ ಈ ಪುಸ್ತಕವನ್ನು ಪಠ್ಯಪುಸ್ತಕ ಇಲ್ಲವೇ ಶೀಘ್ರ ವಾಚನ (Rapid reader) ಎಂದಾದರೂ ಶಿಕ್ಷಣ ಇಲಾಖೆಯವರು ಕಡ್ಡಾಯಗೊಳಿಸಬೇಕು.

ಈ ಪುಸ್ತಕ ಓದಿ ಪುರಾಣದಲ್ಲಿ ಓದುವ ಮಹಾಸಾಧ್ವಿಗಳಾದ ಸೀತಾ, ಸಾವಿತ್ರಿಯವರ ಚಿತ್ರವು ಕಣ್ಮುಂದೆ ಕಟ್ಟಿದಂತೆ ನನಗನಿಸಿತು. ಒಂದು ದೃಷ್ಟಿಯಲ್ಲಿ ಶಕುಂತಲಾ ತಾಯಿಯವರು ತಮ್ಮ ಪತಿಯು ಭೂಗತರಾದಾಗ ಅಥವಾ ಜೇಲಿನಲ್ಲಿರುವಾಗ ಒಬ್ಬಂಟಿಗರಾಗಿದ್ದು, ಅನುಭವಿಸಿದ ಕಠೋರ ಕಹಿ ಅನುಭವಗಳು ಆ ಸೀತಾಮಾತೆಗೆ ಬಂದಿಲ್ಲವಾದ್ದರಿಂದ ಅಷ್ಟರಮಟ್ಟಿಗೆ ಇವರು ಅವರಿಗಿಂತಲೂ ಒಂದು ಗುಂಜಿ ಹೆಚ್ಚೆಂದು ನಾನು ಎದೆತಟ್ಟಿ ಹೇಳುವೆ. ಸಾವಿತ್ರಿಯಂತೆ ತಮ್ಮ ಪಾತಿವ್ರತ್ಯ ಮತ್ತು ಭಗವಂತನಲ್ಲಿಯ ಅನನ್ಯ ಭಕ್ತಿಯಿಂದಲೇ ಶ್ರೀ ದಾಬಡೆ ಅವರ ಪ್ರಾಣರಕ್ಷಣೆ ಮಾಡಿದ್ದಾರೆಂದರೆ ಅತಿಶಯೋಕ್ತಿ ಅಲ್ಲ.

ಈ ಚರಿತ್ರೆಗೆ ರಾಜ್ಯ ಸರಕಾರವಾಗಲೀ ಕನ್ನಡ ಸಾಹಿತ್ಯ ಪರಿಷತ್ತಾಗಲೀ ಪಾರಿತೋಷಕ ನೀಡಲು ಅತ್ಯಂತ ಯೋಗ್ಯವೆಂದು ನನ್ನ ಖಚಿತ ಅಭಿಪ್ರಾಯ.

● ಡಾ. ಅನಂತ ಹುಯಿಲಗೋಳ
ಹುಬ್ಬಳ್ಳಿ

❖❖❖

ನಿಮ್ಮ ಪುಸ್ತಕ 'ಸಂಘರ್ಷ-ಸಹಯೋಗ-ಸಂತೃಪ್ತಿ' ತಕ್ಕೊಂಡು ಮನೆಗೆ ಬಂದು ಕುತೂಹಲದಿಂದ ಒಂದೆರಡು ಪುಟ ತಿರುವುತ್ತಿದ್ದಂತೆಯೇ ಪುಸ್ತಕ ತಾನೇ ಓದಿಸಿಕೊಂಡು

ಹೋಯಿತು. ಓದಿ ಮುಗಿಸಿದಾಗ ಮಧ್ಯರಾತ್ರಿ ಮೀರಿತ್ತು. ಲೇಖಕರು ಇಲ್ಲಿ ಸಂಪೂರ್ಣ ಪಾರದರ್ಶಕತೆ ತೋರಿಸಿದ್ದಾರೆ. ಅಂತರಂಗ, ಬಹಿರಂಗಗಳ ಭೇದವಿಲ್ಲ. ಓದುಗರಿಗೆ ದೇಶಭಕ್ತಿಯ ಯಥಾರ್ಥ ದರ್ಶನವಾಗುವಂತಿದೆ. ಈ ಕೃತಿಯ ಕಥಾನಾಯಕಿ ಸಂಪೂರ್ಣ ಜೀವನವನ್ನೇ ಯೋಗವಾಗಿ ಸ್ವೀಕರಿಸಿದ ಸಾಧಕರು. ಈ ಕಥಾನಕದಲ್ಲಿ ಸುಖ-ದುಃಖ, ಅಪೇಕ್ಷೆ, ಅಭೀಪ್ಸೆ, ಪ್ರೇಮ, ಸಂಘರ್ಷ ಜೊತೆಗೆ ಸಂತೃಪ್ತಿಯಿದೆ. ಓದುಗ ಮಾತ್ರ ಸನ್ನಿವೇಶಗಳ ಅಲೆಗಳೊಡನೆ ಭಾವನಾಲೋಕಕ್ಕೆ ತೇಲಿ ಹೋಗುತ್ತಾನೆ.

**● ಡಾ. ಶ್ರೀಕೃಷ್ಣ ನಾರಾಯಣ ವೈದ್ಯ**
**ಹುಬ್ಬಳ್ಳಿ**

❖❖❖

ದಿ. ಶಕುಂತಲಾ ದಾಬಡೆ ಅವರ ಆತ್ಮಕಥೆ ಒಂದು ಅಮೂಲ್ಯವಾದ ಡಾಕ್ಯುಮೆಂಟ್. ಅದು ಒಬ್ಬ ವ್ಯಕ್ತಿಯ ಆತ್ಮಚರಿತ್ರೆ ಕಥೆಯೇನೋ ಸರಿ, ಆದರೆ ಅದು ಒಂದು ಚಳುವಳಿಯ ಒಂದು ಪರ್ವಕಾಲದ ಇಡೀ ದೇಶದ ಒಂದು ಚರಿತ್ರೆಯನ್ನು ನಮ್ಮ ಮುಂದೆ ತೆಗೆದು ತೋರಿಸುತ್ತದೆ. ಅದು ನನಗೆ ಬಹು ಆಕರ್ಷಕವಾಗಿದೆ. ಯಾಕೆಂದರೆ ನಾನೂ ಆ ಕಾಲದಲ್ಲಿಯೇ ಬೆಳೆದವನು ಮತ್ತು ಭಾಗವಹಿಸಿದವನು. ನಾನು ಜೇಲಿಗೆ ಮಾತ್ರ ಹೋಗಿರಲಿಲ್ಲ. ಆದರೆ ನೀವು ದಂಪತಿಗಳು ಈ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿ ನಿಂತು ಅಹಿಂಸಾ ಯುದ್ಧದಲ್ಲಿ ಮುಖ್ಯ ಪಾತ್ರವಹಿಸಿದ ಅಸಾಧಾರಣ ಯೋಧರು. ನೀವು ಸ್ವಾತಂತ್ರ್ಯ ಹೋರಾಟಗಾರರೆಂಬುದು ನನಗೆ ತಿಳಿದಿತ್ತು. ಆದರೆ ನಿಮ್ಮ ಹೋರಾಟದ ವಿವರಗಳು ನನಗೆ ತಿಳಿದಿರಲಿಲ್ಲ. ಈ ಆತ್ಮಕಥೆಯು ಆ ಕೊರತೆಯನ್ನು ನಿವಾರಿಸಿದೆ. ಅದನ್ನು ಓದಿದಂತೆ ನಿಮ್ಮ ಜೀವನದ ಸಾರ್ಥಕತೆಯನ್ನು ಕಂಡು ಅಭಿಮಾನವೆನಿಸುತ್ತದೆ. ಬಹು ಕಠಿಣವಾದ ಜೀವನ ನಡೆಸಿ ಒಂದು ಉನ್ನತ ಆದರ್ಶವನ್ನು ಸಾಧಿಸಿದ್ದೀರಿ. ಜೇಲಿಗೆ ಹೋದವರು ಲಕ್ಷಾವಧೀ ಜನ. ಆದರೆ ಗಾಂಧೀ ಆದರ್ಶವನ್ನು ಪ್ರತಿದಿನ ಜೀವನದಲ್ಲಿ ಅಳವಡಿಸಿಕೊಂಡು ಅವರ ತತ್ವಗಳನ್ನು ಅನುಷ್ಠಾನ ಮಾಡಿದಂತಹ ಜೀವನ ಅಪರೂಪ. ಇದನ್ನು ದಾಖಲಿಸಿ ನೀವು ಒಂದು ಅಪೂರ್ವ ಕೊಡುಗೆಯನ್ನು ಕೊಟ್ಟಿದ್ದೀರಿ. ನಿಮ್ಮದು ಬಡತನದ ಜೀವನ. ಆದರೆ ಅದರಲ್ಲಿ ಪ್ರೀತಿ - ವಿಶ್ವಾಸಗಳಿಗೆ ಎಂದೂ ಕೊರತೆ ಇರಲಿಲ್ಲ ಎಂಬ ವಿಷಯ ಪುಸ್ತಕದ ಪ್ರತಿ ಪುಟದಲ್ಲಿ ಒಡೆದು ಕಾಣಿಸುತ್ತದೆ. ಅದರಲ್ಲಿಯೂ ನೀವು ಅರವಟಿಗೆ ಗ್ರಾಮಕ್ಕೆ ಹೋಗಿ ಸರ್ವೋದಯದ ಕೆಲಸ ಮಾಡಿದ್ದು, ಅತಿ ಅದ್ಭುತ ಸಾಧನೆ ಎಂದು ನಾನು ತಿಳಿಯುತ್ತೇನೆ. ನೀವು ಆ ಹಳ್ಳಿಯಲ್ಲಿ ನಡೆಸಿದ ರಾಷ್ಟ್ರ ನಿರ್ಮಾಣ ಕೆಲಸ ಇದೆಯಲ್ಲ ಅದು ಬಹು ಅಪರೂಪ. ಇಂತಹ ಕಾರ್ಯವನ್ನು ಗಾಂಧೀಜಿ, ವಿನೋಬಾ, ಕುಮಾರಪ್ಪ

ಮೊದಲಾದವರು ಮಾಡಿದಂಥ ಕೆಲಸವನ್ನೇ ನೀವು ಕರ್ನಾಟಕದ ಒಂದು ಕುಗ್ರಾಮದಲ್ಲಿ ಮಾಡಿದ್ದೀರಿ. ಪಡಬಿದ್ದ ಪ್ರದೇಶದಲ್ಲಿ ಜೀವ ತುಂಬಿದಿರಿ. ಅಲ್ಲಿಯ ಜನರಿಗೆ ಹೊಸ ಸಂಸ್ಕೃತಿಯನ್ನು ಪರಿಚಯಿಸಿದಿರಿ. ಶಿಕ್ಷಣ ಸಂಸ್ಥೆಯನ್ನು ಕಟ್ಟಿದಿರಿ. ಖಾದಿಗ್ರಾಮೋದ್ಯೋಗಗಳನ್ನು ಬೆಳೆಸಿದಿರಿ. ನೀವು ನಿಮ್ಮ ಧರ್ಮಪತ್ನಿಯೊಡನೆ ನಡೆಸಿದ ಈ ತ್ಯಾಗಮಯ ಸೇವೆಯನ್ನು ನಾವೆಲ್ಲ ಸದಾ ನೆನೆಯುತ್ತೇವೆ.

**● ಪ್ರೊ. ಎಸ್. ಕೃಷ್ಣಸ್ವಾಮಿ**
ಬೆಂಗಳೂರು.

◆◆◆

'ಸಂಘರ್ಷ-ಸಹಯೋಗ-ಸಂತೃಪ್ತಿ' ದಿ. ಶಕುಂತಲಾ ದಾಬಡೆ ಅವರ ಆತ್ಮಚರಿತ್ರೆ ಓದಿದೆ. ನಾನು ಓದಿದೆ ಅನ್ನುವುದಕ್ಕಿಂತ ಓದಲು ಪ್ರಾರಂಭಿಸಿದೆ. ಆಗ ಆ ಸಾಲುಗಳೇ ನನ್ನನ್ನು ಓದಿಸತೊಡಗಿದವು. ಕೊನೆಯವರೆಗೂ ಈ ಪುಸ್ತಕ ನನ್ನನ್ನು ಕಟ್ಟಿಹಾಕಿತು. ಇದೊಂದು ಅದ್ಭುತ, ಅಮೋಘ, ಅವಿಸ್ಮರಣೀಯ ಆತ್ಮಕಥೆ. ಎಷ್ಟೋ ದೊಡ್ಡವರ ಆತ್ಮಚರಿತ್ರೆ ಕಥೆಗಳನ್ನು ಓದಿರುವೆ. ಈ ಪುಸ್ತಕವು ಕೇವಲ ಚರಿತ್ರೆ ಅಥವಾ ಕಥೆಯಾಗಿ ಕಂಡುಬರಲಿಲ್ಲ. ಹೃದಯದ ಆಳದಲ್ಲಿ ನೆಲಕಚ್ಚಿ ಕುಳಿತ ಬದುಕಿನ ಮೌಲ್ಯಗಳನ್ನು, ಆತ್ಮವಿಶ್ವಾಸವನ್ನು ತಾನು ಮುಳುಗಿ ಅದನ್ನು ಜಾಲಾಡಿ ಎತ್ತಿ ತಂದು ಶುದ್ಧ ನೀರಿನಿಂದ ತೊಳೆದು ಮುಂದೆ ನಿಲ್ಲಿಸಿ ಸ್ವರೂಪ ದರ್ಶನ ನೀಡಿದ ಪಾತಾಳಗರಡಿ ಇದು.

ಸಾನೇ ಗುರೂಜಿ ಅವರ ಶಾಮನ ತಾಯಿಯ ನಂತರ ಈ ತಾಯಿಯ ಆತ್ಮಕಥೆ ಅದ್ಭುತ - ಅಮೋಘ - ಅವಿಸ್ಮರಣೀಯ. ಹುಟ್ಟಿನಿಂದಲೇ ಮೈಗೂಡಿಬಂದ ಮೌಲ್ಯಗಳಿಗೆ ಮತ್ತಷ್ಟು ಪುಟವಿಟ್ಟು ಬಂಗಾರಗೊಳಿಸಿದೆ. ತಮ್ಮ ಕಾಣಿಕೆ ಪ್ರಶಂಸನೀಯ. ದಾಬಡೆಜೀ, ಇಂಥ ಸತಿ ದೊರೆತದ್ದು ತಮ್ಮ ಪುಣ್ಯ. ಒಬ್ಬರೊಬ್ಬರನ್ನರಿತು ಭಾವಕಾವಗಳಿಗೆ ಸ್ಪಂದಿಸಿ ಬದುಕಿ ಬಾಳಿದ ನಿಮ್ಮಿಬ್ಬರ ಜೀವನವು ಇಂದಿನ ಪರಿಸ್ಥಿತಿಯಲ್ಲಿ ಪ್ರತಿ ಕುಟುಂಬಕ್ಕೆ ದಾರಿದೀಪವಾಗಿದೆ. ಈ ಆತ್ಮಚರಿತ್ರೆ ಪ್ರತಿ ಮಹಿಳೆಯಲ್ಲಿ ಮೌಲ್ಯ, ಆತ್ಮವಿಶ್ವಾಸವನ್ನು ಜಾಗೃತಗೊಳಿಸುವ ದಾರ್ಶನಿಕ ಗ್ರಂಥವಾಗಿದೆ.

**● ಸ್ವಾಮಿಭಕ್ತ ತೀರ್ಥ**
ಅಧ್ಯಕ್ಷರು, ಸತ್ಸಂಗ ಸಮಾಜ, ಪಾಚ್ಛಾಪೂರ. ಜಿ. ಬೆಳಗಾವಿ

◆◆◆

# ಸತಿ - ಪತಿಯರ ಆದರ್ಶ ಮತ್ತು ಸಾಹಸದ ಜೀವನ

"ಸಂಘರ್ಷ-ಸಹಯೋಗ-ಸಂತೃಪ್ತಿ" ಈ ಹೊತ್ತಿಗೆಯನ್ನು ನಾವಿಬ್ಬರೂ (ಗಂಡ-ಹೆಂಡರು) ಕಣ್ಣೀರು ಸುರಿಸುತ್ತಲೇ ಓದಿದೆವು. ಅಕ್ಕ ಶಕುಂತಲಾ ಸುಖಕ್ಕಿಂತ ದುಃಖ ದುಮ್ಮಾನಗಳನ್ನು ಧೈರ್ಯದಿಂದ ಎದುರಿಸಿದ್ದೇ ವಿಶೇಷ. ತನ್ನ ಪತಿಯ ಸಾಹಸಮಯ ಜೀವನದಲ್ಲಿ ಕಿಂಚಿತ್ತು ಹಿಂದೆ ಬೀಳದೆ ಹೆಜ್ಜೆಯ ಮೇಲೆ ಹೆಜ್ಜೆಹಾಕಿ ಕ್ಲಿಷ್ಟಮಯ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸಿದರು. ಏನೇ ಆದರೂ ರಾಷ್ಟ್ರೀಯ ಕಾರ್ಯಕ್ಕೆ ಹಿಂದೇಟು ಹಾಕಲಿಲ್ಲ.

ಶ್ರೀ ದಾಬಡೆ ಅವರು ಚಲೇಜಾವ್ ಆಂದೋಲನದ ಸಮಯಕ್ಕೆ ಪಡಬಾರದ ಕಷ್ಟಪಟ್ಟಿದ್ದಾರೆ. ಅಕ್ಷರಶಃ ಮಹಾತ್ಮರ ವಾಣಿ 'do or die' ಕಾರ್ಯರೂಪಕ್ಕಿಳಿಸಿದ್ದಾರೆ. ಅಂತೆಯೇ ಇರುಳಿನಲ್ಲಿ ದಾರಿ ಸವೆಸುತ್ತಾ ನಿಶಾಚರರ ಜೀವನವನ್ನು ಒಂದೂವರೆ ವರುಷ ಅಜ್ಞಾತವಾಸವನ್ನು ಕಳೆದರು. ನನಗೂ ಅಜ್ಞಾತವಾಸದ ಕಲ್ಪನೆ ಇದೆ. ಒಂದೂವರೆ ತಿಂಗಳು ಅಜ್ಞಾತವಾಸವು ನನ್ನನ್ನು ಕಂಗೆಡಿಸಿ ಬೇಸರವನ್ನುಂಟು ಮಾಡಿತು.

ಸ್ವರಾಜ್ಯ ಪ್ರಾಪ್ತಿ ನಂತರ ಸಹ ಇವರು ಸುಖದ ಸುಪ್ಪತ್ತಿಗೆಯಲ್ಲಿ ಕಾಲಕಳೆಯದೆ, ಒಂದು ಕುಗ್ರಾಮದಲ್ಲಿ ಸರ್ವೋದಯ ಕಾರ್ಯದಲ್ಲಿ ನಿರತರಾಗಿ ಹಳ್ಳಿಗರ ಸೇವೆಯನ್ನು ಮನಮುಟ್ಟಿ ಮಾಡಿದ್ದಾರೆ. ಅವರ ಈ ಎಲ್ಲ ಕಾರ್ಯಗಳಲ್ಲಿ ದಿ. ಶಕುಂತಲಾ ದಾಬಡೆ ಅವರು ಕಾಯಾ, ವಾಚಾ, ಮನಸಾ ದುಡಿದು ಸಹಕಾರ ಮಾಡಿ ಆ ಕಾರ್ಯವು ಯಶಸ್ವಿಯಾಗುವಂತೆ ಮಾಡಿದ್ದಾರೆ. ಅವರ ಸಹಕಾರವಿರದಿದ್ದರೆ ದಾಬಡೆ ಅವರಿಂದ ಇಷ್ಟು ಕಾರ್ಯ ಸಾಧ್ಯವಾಗುತ್ತಿರಲಿಲ್ಲ. ಈ ದಂಪತಿಗಳಿಗೆ ನನ್ನ ಸಹಸ್ರ ನಮನ.

**● ಶ್ರೀ ಎಸ್. ವ್ಹಿ. ಟೇಂಬೆ**
ಸ್ವಾತಂತ್ರ್ಯಯೋಧರು, ಹುಬ್ಬಳ್ಳಿ.

❖❖❖

ವಂದನೆಗಳು. ತಾವು ಕೃಪೆಯಿಟ್ಟು ಕಳಿಸಿದ 'ಸಂಘರ್ಷ-ಸಹಯೋಗ-ಸಂತೃಪ್ತಿ' ಪುಸ್ತಕವನ್ನು ಒಂದೇ ಸಲಕ್ಕೆ ಓದಿ ಮುಗಿಸಿದೆ. ಇಲ್ಲಿ ಚಿತ್ರಿಸಿದ ಬದುಕು ದ್ವಾಪರ, ತ್ರೇತಾಯುಗಗಳದ್ದೇನೋ ಎನ್ನಿಸುವ ಮಟ್ಟಿಗೆ ನಿರ್ಮಲವಾಗಿದೆ.

ನಿಮಗೆ ನೆನಪಿರಬಹುದು. ಸುಮಾರು 1946-47ರ ಸಮಯ. ಧಾರವಾಡ ತಾಲೂಕಾ ಕಾಂಗ್ರೆಸ್ ಕಮಿಟಿಯ ಕಛೇರಿ, ನಮ್ಮ ಮನೆಯ ಎದುರು ಶ್ರೀ ಅಗಳಗಟ್ಟಿ ಹುಚ್ಚಾಚಾರ್ಯರ ಮನೆಯ ಅಟ್ಟದ ಮೇಲಿತ್ತು. ಆಗ ನನಗೆ ಹತ್ತು ವರ್ಷ. ನಾವೆಲ್ಲ ಹುಡುಗರು ರಾಷ್ಟ್ರೀಯ

ಸೇವಾದಳದಲ್ಲಿ ಸ್ವಯಂಸೇವಕರಾಗಿದ್ದೆವು. ನನಗೆ ನೆನಪಿದ್ದಂತೆ ಆಗ ಯಾವುದೋ ಒಂದು ಚುನಾವಣೆ ನಡೆಯುತ್ತಿತ್ತು. ಶ್ರೀ ರಾ. ಶ್ರೀ. ಹುಕ್ಕೇರಿಕರ, ಆ.ರು. ನೇಸ್ವಿ, ಅಂದಾನೆಪ್ಪ ದೊಡ್ಡಮೇಟಿ ಹಾಗೂ ಎಸ್. ಎಸ್. ಜವಳಿಯವರೆಲ್ಲ ಸ್ಪರ್ಧಿಸಿದ್ದರು. ವಿರೋಧಿಗಳಾಗಿ ಸರ್ ಎಸ್. ಟಿ. ಕಂಬಳಿಯವರಿದ್ದರು. ನಾವೆಲ್ಲ ಹುಡುಗರು ನಿಮ್ಮಿಂದ ಕರಪತ್ರಗಳನ್ನು, ಪ್ರಚಾರ ಪತ್ರಗಳನ್ನು ಪಡೆದುಕೊಂಡು ಊರಲ್ಲೆಲ್ಲ ಹಂಚುತ್ತಿದ್ದೆವು.

ಆ ದಿನಗಳಲ್ಲಿ ನೀವು, ನಿಮ್ಮ ಶ್ರೀಮತಿ ಶಕುಂತಲಾರವರು, ಶಂಕರ ಕುರ್ತಕೋಟಿ, ಶಕುಂತಲಾ ಕುರ್ತಕೋಟಿಯವರು, ಸುರೇಂದ್ರ ದಾನಿಯವರು, ನಂದೋಳಿಯವರು, ಎಲ್.ಎನ್., ಎಸ್. ಎನ್. ಕುಲಕರ್ಣಿ ಸಹೋದರರು, ಪತ್ರಯ್ಯನವರು, ಅವಧಾನಿ, ಬುರ್ಲಿಯವರು ಆದಿಯಾಗಿ ತುಂಬ ಉತ್ಸಾಹದಿಂದ ಚುನಾವಣೆ ಕೆಲಸದಲ್ಲಿ ನಿರತರಾಗಿರುತ್ತಿದ್ದಿರಿ. ನಾವೆಲ್ಲ ಎಳೆಯರು ನಿಮ್ಮ ಸುತ್ತಲೂ ಸುತ್ತುತ್ತ, ನಿಮಗೆಲ್ಲ ನಮ್ಮ ನಾಯಕ ಪೂಜೆ ಸಲ್ಲಿಸುತ್ತ, ಧನ್ಯರಾಗುತ್ತಿದ್ದೆವು.

ನಿಮ್ಮ ಶ್ರೀಮತಿ ದಿ. ಶಕುಂತಲಾ ದಾಬಡೆಯವರನ್ನು ನೋಡಿದ ನೆನಪು ನನಗಿದೆ. ಮಸುಕಾಗಿದ್ದ ಅವರ ವಾತ್ಸಲ್ಯಮಯ ಸುಂದರ ವ್ಯಕ್ತಿತ್ವ, ಈ ಪುಸ್ತಕವನ್ನೋದಿದ ಮೇಲೆ ಇನ್ನೊಮ್ಮೆ ಪ್ರಕಟವಾಗಿ ಸ್ಪಷ್ಟವಾಗಿ ಪ್ರಕಟವಾಯಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರದೇ ಹೆಚ್ಚಿನ ತ್ಯಾಗ, ಹೆಚ್ಚಿನ ಬಲಿದಾನ ಎಂಬ ನಿಮ್ಮ ಮಾತು ನೂರಕ್ಕೆ ನೂರು ಸತ್ಯ. ಪುಸ್ತಕ ನನ್ನ ಅಂತಃಕರಣವನ್ನು ಸಾಕಷ್ಟು ಕಲಕಿದ ಮೇಲೆ ಮೂಡಿದ ಮೆಚ್ಚುಗೆಯ ಭಾವನೆ, ಶ್ರೀಮತಿ ಶಕುಂತಲಾ ಅವರನ್ನು ನಾನು ನೋಡಿದ್ದೆ ಎಂಬ ಹೆಮ್ಮೆಯಲ್ಲಿ ಪರಿವರ್ತಿತವಾಯಿತು.

ನಿಮಗೆಲ್ಲ ದೇವರು ಒಳ್ಳೆಯದನ್ನು ಮಾಡಲಿ, ಧಾರವಾಡಕ್ಕೆ ಬಂದು 'ನೋವು - ನಲಿವು'ಗಳನ್ನು ತರಿಸಿಕೊಳ್ಳುತ್ತೇನೆ.

● ಶ್ರೀ ಶ್ರೀನಿವಾಸ ವೈದ್ಯ
ಬೆಂಗಳೂರು.

◆◆◆

ಸರ್ವೋದಯ ನಾಯಕ, ಅಪ್ರತಿಮ ಸ್ವಾತಂತ್ರ ಸೇನಾನಿ ನರಸಿಂಹ ದಾಬಡೆ ಅವರು ತಮಗೆ ಜೀವನಯಾತ್ರೆಯಲ್ಲಿ ಅಖಂಡವಾಗಿ ಬೆಂಬಲ ನೀಡಿದ ಪತ್ನಿ ಶಕುಂತಲಾ ದಾಬಡೆ ಅವರ ಬದುಕಿನ ಕ್ಷಣಗಳನ್ನು ಚೊಕ್ಕದಾಗಿ ಈ ಪುಸ್ತಕದಲ್ಲಿ ಓದುಗರಿಗೆ ತೆರೆದಿದ್ದಾರೆ. ಹಾಗೆ ನೋಡಿದರೆ, ಇದು ಸಾಹಿತ್ಯಿಕ ಹಿರಿಮೆಯ ಮುಖಪಟ್ಟ ಹೊಂದಿರದಿದ್ದರೂ, ಸರಳವಾಗಿ ಜೀವನ

ವೃತ್ತಾಂತವನ್ನು ತಿಳಿಸುವಲ್ಲಿ ಸಾಫಲ್ಯ ಪಡೆದಿದೆ. ಈ ಮಹಾತಾಯಿ ಗಂಡನ ದೇಶಪ್ರೇಮದ ಹೋರಾಟದಲ್ಲಿ ಅದೆಷ್ಟು ದಿಟ್ಟವಾದ ಶ್ರಮ, ಸಾಧನೆ ಹಾಗೂ ಛಲ ಹೊಂದಿದ್ದರು ಎಂಬುದನ್ನು ವ್ಯಕ್ತಪಡಿಸುವಾಗ ಎಂಥ ಕಲ್ಲುಹೃದಯವಾದರೂ ಮರುಗಿತು ! ನಿಜವಾಗಿ ಹೇಳುವದೆಂದರೆ ತನ್ನ ಅಲ್ಪ ಜೀವಿತದಲ್ಲಿ ಪತಿನಿಷ್ಠೆ ಹಾಗೂ ದೇಶಪ್ರೇಮದ ಸಾಧನೆಗಾಗಿ ಈಕೆ ಎಂಥ ಪರಿಶ್ರಮ, ನೋವಿನ ಜೀವನವನ್ನು ತಮ್ಮದಾಗಿಸಿ, ಎಲ್ಲವೂ ನೆಮ್ಮದಿಯಲ್ಲಿ ಕೊನೆಗೊಂಡಿದೆ ಎಂದು ಹೇಳಿಕೊಳ್ಳುವಷ್ಟರಲ್ಲಿ ಈಕೆ ಇಹಲೋಕವನ್ನು ತ್ಯಜಿಸಿಬಿಟ್ಟಳಲ್ಲ ಎಂಬುದನ್ನು ಯೋಚಿಸಿದರೆ ಕಣ್ಣು ಮಂಜಾಗುತ್ತದೆ. ಬಹುಶಃ ಇದೇ ನೆನಪಿನ ಹನಿಗಳನ್ನು ಒಟ್ಟಾಗಿ ಹಿಡಿದು ಸಮಗ್ರತೆಯೊಂದಿಗೆ ಬರೆದಿದ್ದರೆ ಒಂದು ದಾಖಲಾಬದ್ಧವಾದ ಜೀವನ ಚರಿತ್ರೆಯೇ ಹೊರಬರುತ್ತಿತ್ತು. ಆದರೂ, ಚಿಕ್ಕದಾಗಿ ಮೂಡಿಬಂದ ಈ ಚಿತ್ರಣ ನಮ್ಮ ನಾಡಿನ ಸಹೋದರಿಯರಿಗೆಲ್ಲಾ ಆದರ್ಶಪ್ರಾಯವಾಗಿ ನಿಲ್ಲುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಶ್ರೀ ನರಸಿಂಹ ದಾಬಡೆ ಅವರು ಇಂತಹ ಪತ್ನಿಶ್ರೇಷ್ಠಳನ್ನು ಕಳೆದುಕೊಂಡ ಬಾಳಿನ ಮುಸ್ಸಂಜೆ ದಿನಗಳಲ್ಲಿ ಈ ನೆನಪುಗಳು ಅವರಿಗೆ ಹಾಲಿನಂಥಾ ಬೆಳದಿಂಗಳ ತಂಪನ್ನು ನೀಡಬಹುದು.

● ಶ್ರೀ ಜಯಪ್ರಕಾಶ ಪುತ್ತೂರು
ಬೆಂಗಳೂರು

❖❖❖

ಪುಸ್ತಕಾ ಇಷ್ಟು ಚಂದ ಬರೆದೀದಿ. ನಿನ್ನ ಕೌತುಕ ಮಾಡಲಿಕ್ಕೆ ನನ್ನ ಹತ್ತಿರಾ ಶಬ್ದಾನೇ ಇಲ್ಲಾ. ಅದರ ಹೆಸರು, ಪುಸ್ತಕಕ್ಕೆ ಮುಖ ಒಪ್ಪುವಂಥಾದ್ದು. ಇನ್ನೊಂದು, ಈ ಪುಸ್ತಕಾ ಕೈಯಲ್ಲಿ ಹಿಡಿದರೆ ಓದಿ ಪೂರ್ತಿ ಮುಗಿಸದ ಹೊರ್ತು ಕೆಳಗೆ ಇಡಬೇಕು ಅಂತ ಅನಿಸುವದಿಲ್ಲಾ. ಏ ಕಾಕಾ, ಇಷ್ಟೆಲ್ಲ ಹೆಸರು ಹ್ಯಾಂಗ ನೆನಪಿನಾಗ ಇಟ್ಟುಕೊಂಡು ಬರೆದೀದಿ. ನೀನು ವರ್ಣಿಸುವ ಮುಂದೆ, ನೀನು ಪೊಲೀಸರಿಗೆ ಎದುರು ಹೋಗುವಾಗ, ಜೇಲಿನ ಊಟ, ಅಲ್ಲಿಯ ಇರೋಣ ಕೇಳಿ ಮೈ ಮೇಲೆ ಮುಳ್ಳು ಬರತಾವ ಮತ್ತು ಅಲ್ಲಿಯ ಒಂದೊಂದು ಪ್ರಸಂಗ ಕೇಳಿ (ಚುರಮುರಿ ಅಂಡಿಗೆ ಬಿರುದು) ನನಗೆ ನಾನೇ ತುಂಬಾ ನಕ್ಕೆ. ಸೋನಕ್ಕನ ಕೂಡಿ ಒಂದು ರಾತ್ರಿ ಇದ್ದುದು ಕೇಳಿ ಸಂತೋಷವಾಯಿತು. ನೀನು ಜೇಲಿನಲ್ಲಿದ್ದಾಗ ಅವಳಿಗೆ ಬಂದ ಅನುಭವ ಹೇಳುವಾಗ ತಂತಾನೆ ಕಣ್ಣಲ್ಲಿ ನೀರು ಬಂದವು. ನಿಜವಾಗಿ ನೀವು ಎಷ್ಟು ತ್ರಾಸ ಪಟ್ಟಿರೊಪ್ಪಾ. ನಾನು ಸಣ್ಣಕಿ ಇದ್ದೆ. ನೀನು ಒಮ್ಮೆ ಹುಬ್ಬಳ್ಳಿಗೆ ಬಂದಿದ್ದಿ, ಆವಾಗ ವೇಶಾ ಬದ್ಲಿ ಮಾಡಿ, ನಾನು ನೋಡಿದ್ದೆ ಮತ್ತು ಸೋನಕ್ಕಾ ಬಾಗಲಕೋಟಿಯಲ್ಲಿ ಮಗುವನ್ನ ಹಡಿದಿದ್ದಳು. ಇಷ್ಟ ಗೊತ್ತು. ನೀವು ಆ ಹೊತ್ತಿಗೆ ಇಷ್ಟು ಕಷ್ಟದಲ್ಲಿ ಇದ್ದರಿ ಅಂತ ಆವಾಗ ನನಗೇನು ತಿಳಿತಿದ್ದಿಲ್ಲಾ. ನಾನು ಆವಾಗ

ತಂದಿ ತಾಯಿನ್ನ ಕಳಕೊಂಡು ಪರದೇಶಿ ಆಗಿದ್ದೆ (ಈಗಿನ ಹಾಂಗ ದುಬಾಯಿಗೆ ಹೋಗಿಲ್ಲಾ ಮತ್ತ). ಕಾಕಾ ನೀನೆ ಈ ಪುಸ್ತಕಾ ಬರದೀದಿ ಅಂತ ನಿಮ್ಮ ಮ್ಯಾಲೆ ವಿಶ್ವಾಸ ಅದ ಅಂತ ಒಂದು ಕಾದಂಬರಿ ಥರ ಅದೆ, ಬ್ಯಾರೆಯವರು ಬರಿದಿದ್ದರೆ ನಾನು ಕಾಲ್ಪನಿಕ ಅದೆ ಅಂತ ಸುಮ್ಮನೆ ಬಿಡುತ್ತಿದ್ದೆ. ಆದರೆ, ಇದು ಸತ್ಯ ಘಟನಾ ಇದೆ. ನಿನ್ನಂತೆ ಸಾವಿರಾರು ಜನರು ಲಾಠಿ ತಿಂದು, ಕಷ್ಟಾಪಟ್ಟು ಘಾಸಿ ಹೋಗಿ ನಮ್ಮ ಸ್ವರಾಜ್ಯ ಗಳಿಸಿರಿ. ಈಗಿನ ಮಂದಿಗೆ ಅದರ ಕಿಮ್ಮತ್ತು ಸ್ವಲ್ಪವೂ ಗೊತ್ತಿಲ್ಲಾ. ಅದಕ್ಕೆ ನನಗೆ ಎರಡು ಥರದ ಕೆಟ್ಟ ಅನಸ್ತದ. ನಿಮ್ಮ ಕಷ್ಟಪಟ್ಟಿದ್ದಕ್ಕೆ ಇದೊಂದು ಈ ಅವಿಚಾರಿ ಮಂದಿ ಕೈಯಲ್ಲಿ ರಾಜ್ಯ ಸಿಕ್ಕಿದೆ. ಅದಕ್ಕೆ ನಿನ್ನ ಪರಿವಾರ, ಅದರ ಜೋಡಿ ನಿನ್ನ ಪತ್ರ, ಪುಸ್ತಕಾ ಎಲ್ಲಾ ಸಿಕ್ಕು ಅದರಲ್ಲಿ ಭಾರತಿ ಅಮೆರಿಕೆಗೆ ಹೋಗ್ತಾಳ ಅಂತ ಕೇಳಿ ತುಂಬಾ ಆನಂದವಾಯ್ತು. ಅವಳು 4-5 ತಿಂಗಳದವಳು ಇದ್ದಾಗ ತಾಯಿಯ ಜೋಡಿ ಜೇಲಿಗೆ ಹೋಗಿದ್ದಳು. ಈಗ 40-50 ವರ್ಷದ ಮಗಳ ಜೋಡಿ ಅಮೆರಿಕೆಗೆ ಹೋಗಿದ್ದಾಳೆ. ಆ ಹೊತ್ತಿಗೆ ಯಾರಾದರೂ ಹೇಳಿದರೆ ಯಾರಿಗೂ ವಿಶ್ವಾಸವಾಗುತ್ತಿರಲಿಲ್ಲಾ. ಅಲ್ಲಾ ನಡಿ ಎಲ್ಲಾ ಚಂದ ಆಗೇದ. ನಮ್ಮ ಸೋನಕ್ಕ ಈಗ ಇರಬೇಕಾಗಿತ್ತು. ಎಲ್ಲಾ ದೇವರ ರೀತಿ, ನಮಗೆ ಏನೂ ತಿಳಿಯುದಿಲ್ಲಾ. ಕಾಕಾ ನಾನು ನಿನ್ನ ಸಲುವಾಗಿ ದೇವರ ಹತ್ತಿರ ಇಷ್ಟೇ ಪ್ರಾರ್ಥನೆ ಮಾಡತೀನಿ. ಎಷ್ಟು ಆಯುಷ್ಯ ಕೊಟ್ಟರು ಪರವಾಗಿಲ್ಲಾ ಅದನ್ನು ಮಾತ್ರ ಗಟ್ಟಿಯಿಡು ಅಂತ. ಸೌ. ಕಾಕುಗೆ ನಮಸ್ಕಾರ ಹೇಳು. ಚಿ. ಶಾರದಾಗೆ ಹೇಳು ನಿನ್ನ ಪೂಜಾಂದು ಬಹಳ ನೆನಪು ಬರ್ತದ. ಅವಳ ಡ್ಯಾನ್ಸ್ ಮತ್ತು ನಾಟ್ಯಗಟಾ ಅವಳಿಗೆ ನನ್ನ ಪ್ರೇಮಪೂರ್ವಕ ಆಶೀರ್ವಾದ ಹೇಳು. ಮುಗಿಸತೀನಿ, ನೀನು ಇಷ್ಟು ಚಂದ ಪುಸ್ತಕ ಬರಿದಿದ್ದಕ್ಕೆ ಇನ್ನೊಮ್ಮೆ ನಿನಗೆ ಪ್ರೇಮದ ನಮಸ್ಕಾರ.

● ಶ್ರೀಮತಿ ಸಣ್ಣಕ್ಕಾ
ಪುಣೆ

◆◆◆

ಎರಡು ಪುಸ್ತಕಗಳನ್ನು ಪೂರ್ಣವಾಗಿ ಓದಿದೆನು. ಓದುವಾಗ ನನಗೆ ಸಮಯದ ಅರಿವೇ ಆಗಲಿಲ್ಲ. ಪುಸ್ತಕಗಳನ್ನು ಕೆಳಗಿಡಲು ಮನಸ್ಸೇ ಒಪ್ಪಲಿಲ್ಲ. ವಿಷಯಗಳನ್ನು ಸೊಗಸಾಗಿ ಮಂಡಿಸಿರುವಿರಿ. ಒಂದೇ ಸಮನೆ ಸರಾಗವಾಗಿ ಓದುವಂತಾಯಿತು.

ಮಹಾಪುರುಷರ ಸಂಗ ಅತ್ಯಂತ ದುರ್ಲಭವೆಂದು ಬಲ್ಲವರು ಹೇಳುವರು. ಸುದೈವದಿಂದ ನಿಮ್ಮ ಎಳೆಯ ವಯಸ್ಸಿನಲ್ಲಿಯೇ ಅಂತಹ ಪಾವನ ಪ್ರಸಂಗವೊಂದು ಒದಗಿಬಂದದ್ದು ಸುಕೃತವೆಂದು ತೋರುವದು. ಮಹಾತ್ಮಾ ಗಾಂಧೀಯವರಂತಹ ಮಹಾಮಹಿಮರ ಪರಮದರ್ಶನ

ನಿಮಗೆ ಪ್ರಾಪ್ತವಾಯಿತು. ಅವರಿಂದ ಆಶೀರ್ವಾದವನ್ನು ಪಡೆದಿರಿ. ಅವರ ಸಮ್ಮುಖದಲ್ಲಿಯೇ ನೀವು ಕೊಟ್ಟ ವಚನದಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ಮಾತ್ರವಲ್ಲದೆ, ಅವರಿಗೆ ಅತ್ಯಂತ ಪ್ರಿಯವೆನಿಸಿದ ವಿಧಾಯಕ ಕಾರ್ಯಗಳಲ್ಲಿ ಸಹ ನಿಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟು ಸಾರ್ಥಕ್ಯ ಪಡೆದಿರುವಿರಿ. ನೀವು ಧನ್ಯರು.

ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ಮುಖ್ಯವಾಗಿ "ಚಲೇಜಾವ್ ಚಳುವಳಿ (1942) ಯಲ್ಲಿ ಪಾಲ್ಗೊಂಡು 18 ತಿಂಗಳ ಪರ್ಯಂತ ಅಜ್ಞಾತವಾಸದಲ್ಲಿದ್ದು ಯಶಸ್ವಿಯಾಗಿ ಕಾರ್ಯ ಸಂಘಟಿಸಿರುವಿರಿ. ಉಗ್ರ ಪರಿಸ್ಥಿತಿಗಳು ಒದಗಿ ಬಂದರೂ ಧೃತಿಗೆಡದೆ ಸಾಹಸದಿಂದ ಎದುರಿಸಿರುವಿರಿ. ಅಂದಿನ ವಿದೇಶಿ ಸರ್ಕಾರ ಹಾಗೂ ಪೊಲೀಸ್‌ರಿಗೆ ಸೊಪ್ಪು ಹಾಕದೆ ತಲೆ ಮರೆಸಿಕೊಂಡಿದ್ದು ಮುಂಬೈ ಪ್ರಾಂತ್ಯದ ಹಾಗೂ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಸಂಚರಿಸಿ ಸಹಸ್ರಾರು ಕಾರ್ಯಕರ್ತರುಗಳನ್ನು ಹುರಿದುಂಬಿಸಿ, ಸಂಗ್ರಾಮದಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಿದಿರಿ. ಇದು ಅಭಿನಂದನೀಯವಾದ ಸಂಗತಿ.

ಅಜ್ಞಾತದಿಂದ ಅಂಧಕಾರಕ್ಕೆ ತೆರಳಿದಾಗ 30 ತಿಂಗಳ ಕಾರಾಗೃಹವಾಸ, ಜೈಲಿನಲ್ಲಿ ದೊರೆತ ಅಪೂರ್ವ ಅನುಭವಗಳು, ಶ್ರೇಷ್ಠ ವ್ಯಕ್ತಿಗಳ ಸಮಾಗಮ, ಕಾರಾಗೃಹದಲ್ಲಿ ನಿತ್ಯವೂ ನಡೆಯುತ್ತಿದ್ದ ಅಹಿತಕರವಾದ ಘಟನೆಗಳನ್ನೆಲ್ಲಾ ಸ್ವಾರಸ್ಯವಾಗಿ ಚಿತ್ರಿಸಿರುವಿರಿ. ರೋಮಾಂಚನೀಯವೂ ಆಗಿದೆ.

ವಿಸಾಪುರ ಜೈಲಿನಲ್ಲಿದ್ದಾಗ ನಡೆದ ಸಂಗತಿಗಳು, ಜೈಲು ಡಾಕ್ಟರು ಮನೆಗೆ ಕರೆಸಿ ನಿಮಗೆ (ಕೈದಿಗಳಾಗಿದ್ದರೂ ಸಹ) ಮತ್ತು ನಿಮ್ಮ ಧರ್ಮಪತ್ನಿಯವರಿಗೆ ಕೊಟ್ಟ ಸತ್ಕಾರ ಮತ್ತು "ದಂಪತಿಪೂಜೆ" ಮನೋಜ್ಞವಾಗಿದೆ. ಜೈಲಿನಲ್ಲಿದ್ದಾಗ ಹಲವಾರು ಕಠಿಣ ಪ್ರಸಂಗಗಳಲ್ಲಿ ನೀವು ತೋರುತ್ತಿದ್ದ ಸರಳತೆ, ಸಜ್ಜನಿಕೆ, ಸ್ನೇಹಭಾವಗಳು ಪ್ರಶಂಸನೀಯವಾದವುಗಳಾಗಿವೆ.

ಗಾಂಧೀಜಿ ಸ್ತ್ರೀಶಕ್ತಿಯ ಬಗೆಗೆ ವಿಪುಲವಾಗಿ ಬರೆದಿರುವರು. ಹೆಣ್ಣುಮಕ್ಕಳು ಅಹಿಂಸೆಯ ಪ್ರತೀಕವೆಂದು, ಅವರಿಂದ ಆಗುವ ಕೆಲಸ ಗಂಡಸರಿಂದ ಬಹುಶಃ ಆಗಲಾರದೆಂದು ತಿಳಿಸಿರುವರು. ನಿಮ್ಮ ಪತ್ನಿ ದಿ. ಶ್ರೀಮತಿ ಶಕುಂತಲಾ ದಾಬಡೆ ಅಂತಹ ಸ್ತ್ರೀಶಕ್ತಿಯ ಪ್ರತಿರೂಪವೆಂದು ನನ್ನ ಭಾವನೆ. ಇಂತಹ ಆದರ್ಶಪ್ರಾಯರಾದ ಹೆಣ್ಣುಮಕ್ಕಳು ಅತ್ಯಂತ ವಿರಳ. ಅವರು ತ್ಯಾಗಮೂರ್ತಿಯೇ ಆಗಿದ್ದರು. ಅವರ ಪೂರ್ಣ ಸಹಕಾರ ಹಸ್ತ ದೊರಕದೆಯಿದ್ದರೆ, ನೀವು ಅನೇಕ ಸಾಹಸಕಾರ್ಯಗಳನ್ನು ಕೈಗೂಡಿಸಲು ಸಾಧ್ಯವಾಗುತ್ತಿರಲಿಲ್ಲ.

ಎಳೆಯ ಮಗುವನ್ನು ಕಂಕುಳಲ್ಲಿಟ್ಟುಕೊಂಡು ನಿರ್ಭೀತರಾಗಿ, ಹಸನ್ಮುಖಿಗಳಾಗಿ ಸರ್ಕಾರದ ವಿರುದ್ಧ ಘೋಷಣೆ ಮಾಡುತ್ತಾ ಜೈಲು ಪ್ರವೇಶಿಸಿದ ಸಾಹಸಿ. ಎಳೆ ಮಗುವಿಗೆ ಕುಡಿಯಲು ಹಾಲು ಇಲ್ಲದೆ, ಹಣದ ಸಹಾಯವಿಲ್ಲದೆ ಅಸಹಾಯಕತೆಯಿಂದ ಊರಿಂದೂರಿಗೆ ಅಲೆದಾಟ, ಪರದಾಟ ಮಾಡುತ್ತಾ 4 ವರ್ಷಗಳ ತನಕ ಕಳೆದ ಕರಾಳ ದೃಶ್ಯ, ಅವರು ಅನುಭವಿಸಿದ ದುಃಖ ದುಮ್ಮಾನಗಳು ಕರುಳನ್ನು ಭೇದಿಸುವವು.

ದಿ. ಶಕುಂತಲಾ ದಾಬಡೆ ಅವರ ಆತ್ಮಕಥೆ ಓದುವಾಗ ಹಲವಾರು ಸಲ ದುಃಖ ಉಮ್ಮಳಿಸಿ ಕಣ್ಣೀರು ಸುರಿಸಬೇಕಾಯಿತು. ಇಂತಹ ಸಾಧ್ವೀಮಣಿ, ತ್ಯಾಗಮೂರ್ತಿ, ದೈವೀಭಕ್ತರು ಅವರ ಆದರ್ಶ ಲಾಭ ನನಗೆ ಮತ್ತು ನನ್ನ ಪತ್ನಿಗೆ ತಿರುವಾಂಕೂರಿನಲ್ಲಿ ಆಯಿತು. ನೀವು ಆಗ ಕೇರಳ ರಾಜ್ಯದ ಖಾದಿ ಆಯೋಗದ ನಿರ್ದೇಶಕರೂ ಆಗಿದ್ದ ಸಮಯ. ನಿಮ್ಮ ಮನೆಗೆ ನಾವು ಬಂದು ಆತಿಥ್ಯವನ್ನು ಸ್ವೀಕರಿಸಿದೆವು. ಆ ಸನ್ನಿವೇಶ ನನ್ನ ಮನದಲ್ಲಿ ಹಸಿರು ಹಸಿರಾಗಿ ಇಂದಿಗೂ ಉಳಿದಿದೆ. ಮರೆಯುವಂತಿಲ್ಲ.

ಶ್ರೀಮತಿ ಶಕುಂತಲಾ ದಾಬಡೆ ಅವರು ಇಂದು ಜೀವಂತವಾಗಿಲ್ಲ. ಅಪ್ರತ್ಯಕ್ಷವಾಗಿದ್ದರೂ ಅವರನ್ನು ಸ್ಮರಿಸುತ್ತಾ, ನಮಿಸುತ್ತಾ ಅವರ ಆತ್ಮಕ್ಕೆ ಸದ್ಗತಿ ನೀಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಈ ಆತ್ಮಕಥೆಗಳೆರಡನ್ನೂ ರಚಿಸಿ ನೀವು ಮಹದುಪಕಾರ ಮಾಡಿರುವಿರಿ. ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡುವಂತಹ ಉತ್ತಮ ಕೃತಿಗಳು ಆಗಿವೆ. ಪ್ರತಿಯೊಬ್ಬರೂ ಓದಿ ಲಾಭ ಪಡೆಯಬೇಕೆಂದು ಆಶಿಸುತ್ತೇನೆ.

ನೀವು ಇಂದಿನವರೆಗೆ ಇಳಿವಯಸ್ಸಾಗಿದ್ದರೂ ತತ್ವನಿಷ್ಠರಾಗಿ ಉಳಿದುಕೊಂಡು ಸೇವೆ ಸಲ್ಲಿಸುತ್ತಿರುವಿರಿ. ನೀವು ಚಿರಕಾಲ ಬಾಳಿ ಹೆಚ್ಚು ಸೇವಾ ಕಾರ್ಯ ಮಾಡಲು ಶಕ್ತಿ ನೀಡಲೆಂದು ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸುತ್ತೇನೆ. ನಿಮ್ಮ ಕುಟುಂಬ, ಪರಿವಾರ, ವರ್ಗದವರಿಗೆಲ್ಲಾ ನನ್ನ ಹಾರ್ದಿಕ ಶುಭ ಆಶಯಗಳು.

● **ಶ್ರೀ ಹೆಚ್. ಆರ್. ವೆಂಕಟರಮಣ ಅಯ್ಯರ್**
ಬೆಂಗಳೂರು

◆◆◆

ಭಾರತೀಯ ನಾರಿಯ ನಿರಾಡಂಬರ ನೈಜಜೀವನವನ್ನು ಪ್ರತಿಬಿಂಬಿಸುವ "ಸಂಘರ್ಷ - ಸಹಯೋಗ - ಸಂತೃಪ್ತಿ" ಇದೊಂದು ಅಪರೂಪದ ಪುಸ್ತಕ. ಎಷ್ಟು ಓದಿದರೂ ಮತ್ತೆ ಮತ್ತೆ ಓದಬೇಕೆನ್ನಿಸುತ್ತದೆ. ಇದು ಅತಿಶಯೋಕ್ತಿಯಲ್ಲ.

ಸ್ವಾತಂತ್ರ್ಯ ನಂತರದಲ್ಲಿ ಸ್ವಾತಂತ್ರ್ಯವನ್ನು ಸ್ವೇಚ್ಛೆಯೆಂದು ಅರ್ಥೈಸಿಕೊಳ್ಳುವ ವಿದ್ಯಾವಂತ ಮಹಿಳೆಯರು ಓದಲೇಬೇಕಾದ ಇದೊಂದು ಅಮೂಲ್ಯ ಹೊತ್ತಿಗೆ.

ಶ್ರೀಯುತ ನರಸಿಂಹ ದಾಬಡೆಯವರ ಸರಳ, ಸ್ವಚ್ಛ, ಪಾರದರ್ಶಕ, ಪ್ರಾಮಾಣಿಕ ಜೀವನದುದ್ದಗಲಕ್ಕೂ ಅವರ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಪತಿಗಿಂತ ಒಂದೆರಡು ಹೆಜ್ಜೆ ಮುಂದಿಟ್ಟು

ತ್ಯಾಗಮಯಿಯಾಗಿ, ಅಕ್ಕರೆಯ ತಾಯಿಯಾಗಿ ತನ್ನ ಜೀವನಸಂಘರ್ಷದಲ್ಲಿ ತಿರುಗಿನೋಡದ ಧೀರಮಹಿಳೆಯಾಗಿ ಪತಿಯಿಂದ ನೈಜ, ಸೃಜನಶೀಲ ಸ್ಫೂರ್ತಿ ಪಡೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವ ಪುರುಷನಿಗೂ ಕಡಿಮೆಯಿಲ್ಲದಂತೆ ಧುಮುಕಿ ಅಂದಿನ ಮಹಿಳೆಯರಿಗೆ ಮಾರ್ಗದರ್ಶಿಯಾಗಿ, ಇಂದಿನ ಮಹಿಳೆಯರಿಗೆ ಆದರ್ಶಮಹಿಳೆಯಾಗಿ, ಜ್ಯೋತಿಯಂತೆ ತನ್ನನ್ನು ತಾನು ಸುಟ್ಟುಕೊಂಡು ಬೇರೆಯವರಿಗೆ ಪ್ರಕಾಶ ನೀಡಿದ, ಕಾಯಕವೇ ಕೈಲಾಸವೆಂದು ನೆಚ್ಚಿನಂಬಿದ ಈ ಸಹಧರ್ಮಿಣಿಯ ಆತ್ಮಚರಿತ್ರೆ ಇಂದು ಎಲ್ಲರಿಗೂ ಮಾದರಿ.

ಈ ದಂಪತಿಗಳ ಜೈಲುವಾಸದ ಕಷ್ಟಕಾರ್ಪಣ್ಯ, ನಂತರ ಗಾಂಧೀಜಿಗೆ ಪ್ರಿಯವಾದ ಸರ್ವೋದಯ ಎಂಬ ಮತ್ತೊಂದು ಹೋರಾಟವನ್ನು ಅಪ್ಪಿಕೊಂಡು, ಇದರಲ್ಲಿ ವಿಶೇಷವೆಂದರೆ ಈ ನರಸಿಂಹ ದಾಬಡೆಯವರು ತಮ್ಮ ಶ್ರೀಮತಿಯನ್ನು ಗೌರವ ಸಂಚಾಲಕಿ ಎಂದು ಭಾವನಾತ್ಮಕವಾಗಿ ನೈಜವಾಗಿ ನೇಮಿಸಿದ್ದೊಂದು ಅದಕ್ಕೆ ಪೂರಕವಾಗಿ ಮಣ್ಣಿನಲ್ಲಿ ಮಣ್ಣಾಗಿ ಅವರು ದುಡಿದುದು ಮರೆಯಲಸಾಧ್ಯ.

● ಪ್ರೊ. ಸಂಗನಬಸವ ಮಟ್ಟಿ
ವಿಶ್ರಾಂತ ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ, ಬೆಂಗಳೂರು

# ಸಂಪಾದಕರ ಬಗ್ಗೆ ಒಂದಿಷ್ಟು

೧೯೬೩ ಅಕ್ಟೋಬರ್ ೭ ರಂದು ಅವಿಭಕ್ತ ಕೃಷಿ ಕುಟುಂಬದಲ್ಲಿ ಜನಿಸಿದ ಮೋಹನ ನಾಗಮ್ಮನವರ ಧಾರವಾಡದ ಕರ್ನಾಟಕ ಕಾಲೇಜಿನ ದಿನಗಳಿಂದಲೇ ಚಳುವಳಿಗಳಲ್ಲಿ ತೊಡಗಿಕೊಂಡವರು. ಗೋಕಾಕ ಚಳುವಳಿ, ದಲಿತ ಚಳುವಳಿಗಳ ನಡುವೆ ಬೆಳೆದ ಮೋಹನ ಬರೆಯ ತೊಡಗಿದ್ದು ಅನಿರೀಕ್ಷಿತ ರೀತಿಯಲ್ಲಿ. ಕರಪತ್ರ, ಮನವಿ ಪತ್ರದ ಸಾಹಿತ್ಯದಿಂದ ಕತೆ, ಕವಿತೆ ಮತ್ತು ಪತ್ರಿಕೋದ್ಯಮಕ್ಕೆ ಹೊರಳಿಕೊಂಡ ಮೋಹನರ 'ವಿಧಾನಸೌಧ' (೧೯೯೩), 'ಅಗ್ರಹಾರದ ಒಂದು ಸಂಜೆ' (೧೯೯೬), 'ಮಹಾನಿರ್ಗಮನ' (೨೦೦೩) ಕವನ ಸಂಕಲನ ಪ್ರಕಟಗೊಂಡಿವೆ. 'ಅಗ್ರಹಾರದ ಒಂದು ಸಂಜೆ'ಗೆ ಮುದ್ದಣ ಕಾವ್ಯ ಪ್ರಶಸ್ತಿ, ಕ.ಸಾ.ಪ.ದ ರತ್ನಾಕರವರ್ಣಿ - ಮುದ್ದಣ ಅನಾಮಿಕ ದತ್ತಿ ಪ್ರಶಸ್ತಿ ಹಾಗೂ ಆರ್ಯಭಟ ಪ್ರಶಸ್ತಿ ಸಂದಿವೆ. 'ಸಂಕಟಪುರದ ನಾಟಕ ಪ್ರಸಂಗ' ಕಥಾ ಸಂಕಲನಕ್ಕೆ ವಾರಂಬಳ್ಳಿ ಪ್ರತಿಷ್ಠಾನದ ೧೯೯೯ ರ ಕಥಾ ಪ್ರಶಸ್ತಿ ದೊರೆತಿದೆ. ಸಾಹಿತ್ಯ, ಪತ್ರಿಕೋದ್ಯಮದ ಸೇವೆಗೆ ಕರ್ನಾಟಕ ಸರಕಾರವು ೧೯೯೭ ರ ಡಾ. ಅಂಬೇಡ್ಕರ ಜಯಂತಿ ಸಂದರ್ಭದಲ್ಲಿ ಗೌರವಿಸಿದೆ. ೧೯೯೮ ರ ಧ್ರುವರಾಜ ಕಡಕೋಳ ಸ್ಮಾರಕ ಪ್ರಶಸ್ತಿ, ಸಾಹಿತ್ಯ, ಸಂಘಟನೆಗಾಗಿ ೨೦೦೩ ನೇ ಸಾಲಿನ ನಾಡಚೇತನ ಪ್ರಶಸ್ತಿ, 'ಮಹಾನಿರ್ಗಮನ' ಕೃತಿಗಾಗಿ ೨೦೦೪ ನೇ ಸಾಲಿನ ಡಾ. ಡಿ. ಎಸ್. ಕರ್ಕಿ ಪ್ರಶಸ್ತಿ ಪಡೆದ ಮೋಹನರ ಇನ್ನಿತರ ಕೃತಿಗಳು 'ಸ್ವಾತಂತ್ರ್ಯ ಚಿಂತನೆ' (೨೦೦೦); 'ಬೆಡಗಿನೆದುರಿನ ಬೆರಗು' (೨೦೦೨), 'ಕಥನ ಕುತೂಹಲ' (೨೦೦೩), 'ಬಯಲ ಬೇರ ಚಿಗುರು' (೨೦೦೩), 'ಸ್ವಾತಂತ್ರ್ಯ ಆಂದೋಲನದ ಪ್ರಮುಖ ಧಾರೆಗಳು' (೨೦೦೪), 'ಸ್ವಾತಂತ್ರ್ಯ ಶರಣ್ಯರು' (೨೦೦೫).

ಒಂದು ಅವಧಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದ ಮೋಹನ 'ಲಂಕೇಶ್ ಪತ್ರಿಕೆ'ಯಲ್ಲಿನ ತಮ್ಮ ಬರಹ ವಿಶ್ಲೇಷಣೆಗಳಿಂದ ರಾಜ್ಯದ ಗಮನ ಸೆಳೆದವರು. ಬಸವ ತತ್ವ ಹಾಗೂ ಭಾವೈಕ್ಯತೆಗಾಗಿ ಕರ್ನಾಟಕದಾದ್ಯಂತ ಪಾದಯಾತ್ರೆ ಮಾಡಿದ ಮೋಹನ, ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿ ಆಗ್ರಹಿಸಿದ ಚಳುವಳಿಯ ಮುಂಚೂಣಿಯಲ್ಲಿದ್ದ ಕಾರಣಕ್ಕಾಗಿ ಕೆಲ ಕಾಲ ಬಳ್ಳಾರಿ ಜೈಲಿನ ವಾಸವನ್ನು ಅನುಭವಿಸಿದವರು. ಈಗಲೂ ಈ ಭಾಗದ ರೈತ ಚಳುವಳಿಯ ಪ್ರಮುಖರಲ್ಲೊಬ್ಬರಾಗಿರುವ ಮೋಹನ 'ರಾಜಕೀಯ ರಂಗ' ಪತ್ರಿಕೆಯ ಸಂಪಾದಕರು. ಹಲವು ಶಿಕ್ಷಣ ಸಂಸ್ಥೆಗಳ ಹಾಗೂ ಸಾಮಾಜಿಕ ಸಂಘಟನೆಗಳ ಚುಕ್ಕಾಣಿ ಹಿಡಿದವರು.

ಪ್ರಸ್ತುತ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಮೋಹನ ಅವರು ಅವಿಭಾಜಿತ ಧಾರವಾಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಸಾಕ್ಷ್ಯ ಚಿತ್ರವನ್ನು ಸರ್ಕಾರಕ್ಕೆ ನಿರ್ಮಿಸಿಕೊಟ್ಟಿದ್ದಾರೆ. ಅವರೇ ಸಂಪಾದಿಸಿರುವ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ನರಸಿಂಹ ದಾಬಡೆ ಅವರ ಪತ್ನಿ ದಿ. ಶ್ರೀಮತಿ ಶಕುಂತಲಾ ಅವರ ಜೀವನಗಾಥೆ 'ಸ್ವಾತಂತ್ರ್ಯ ಶರಣ್ಯರು' ಸಂಘವು ನೂರ ಹದಿನಾರನೆಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವುದು ಅಭಿಮಾನದ ಸಂಗತಿ.

ಎಚ್. ಸಿ. ಮೊಗಲಿ

ಕಾರ್ಯಾಧ್ಯಕ್ಷರು, ಕರ್ನಾಟಕ ವಿದ್ಯಾವರ್ಧಕ ಸಂಘ

# ಸಂಘದ ಪದಾಧಿಕಾರಿಗಳು

| | | |
|---|---|---|
| ಅಧ್ಯಕ್ಷರು | : | ಡಾ. ಪಾಟೀಲ ಪುಟ್ಟಪ್ಪ |
| ಉಪಾಧ್ಯಕ್ಷರು | : | ಶ್ರೀ ಎಂ. ಎಂ. ಹೂಲಿ |
| ಗೌರವ ಉಪಾಧ್ಯಕ್ಷರು | : | ಡಾ. ದೇ. ಜವರೇಗೌಡ, ಮೈಸೂರು<br>ಶ್ರೀ ಜಿ. ಜಿ. ದೊಡವಾಡ, ಧಾರವಾಡ<br>ಶ್ರೀ ಧ. ಸುರೇಂದ್ರ ಕುಮಾರ, ಬೆಂಗಳೂರು<br>ಶ್ರೀ ಹೆಚ್. ಇಬ್ರಾಹೀಂ, ಶಿವಮೊಗ್ಗ<br>ಡಾ. ರಾಜನ್ ದೇಶಪಾಂಡೆ, ಧಾರವಾಡ |
| ಕಾರ್ಯಾಧ್ಯಕ್ಷರು | : | ಶ್ರೀ ಎಚ್. ಸಿ. ಮೊಗಲಿ |
| ಕೋಶಾಧ್ಯಕ್ಷರು | : | ಶ್ರೀ ಎಸ್. ಎಂ. ಹೊಳೆಯಣ್ಣವರ |
| ಪ್ರಧಾನ ಕಾರ್ಯದರ್ಶಿ | : | ಪ್ರೊ. ಬಿ. ವ್ಹಿ. ಗುಂಜೆಟ್ಟಿ |
| ಸಹ ಕಾರ್ಯದರ್ಶಿ | : | ಶ್ರೀ ಸದಾನಂದ ಶಿವಳ್ಳಿ |
| ಕಾರ್ಯಕಾರಿ ಸಮಿತಿ ಸದಸ್ಯರು | : | ಶ್ರೀ ಕೃಷ್ಣ ಜೋಶಿ<br>ಶ್ರೀ ಸಿದ್ಧಲಿಂಗ ದೇಸಾಯಿ<br>ಶ್ರೀ ಶಿವಾನಂದ ಭಾವಿಕಟ್ಟಿ<br>ಶ್ರೀ ಬಸವಪ್ರಭು ಹೊಸಕೇರಿ<br>ಶ್ರೀ ಶಂಕರ ಹಲಗತ್ತಿ<br>ಶ್ರೀಮತಿ ವಿಜಯಾ ಲಿಂಬಣ್ಣದೇವರಮಠ<br>ಪ್ರೊ. ಎಸ್. ಸಿ. ಹಿರೇಮಠ<br>ಶ್ರೀ ಮೋಹನ ನಾಗಮ್ಮನವರ<br>ಶ್ರೀಮತಿ ಜಯಶ್ರೀ ಗುತ್ತಲ<br>ಹಾಗೂ<br>ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ<br>ಬೆಂಗಳೂರು (ಸರ್ಕಾರದ ಪ್ರತಿನಿಧಿ) |

# ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆಗಳು

| ಅ.ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ | ಪ್ರಕಟಣೆ ವರ್ಷ |
|---|---|---|---|---|
| *೧. | ಉತ್ತರರಾಮ ಚರಿತ್ರೆ | ಧೋಂಡೋ ನರಸಿಂಹ ಮುಳಬಾಗಲ | ೯ ಆಣೆ | ೧೮೯೨ |
| ೨. | ವೇಣೀ ಸಂಹಾರ | ಧೋಂಡೋ ನರಸಿಂಹ ಮುಳಬಾಗಲ | | ೧೮೯೨ |
| ೩. | ಆರ್ಯ ಕುಲಾಂಗನಾ | ಎಚ್. ತಿಮ್ಮ ಕೃಷ್ಣರಾವ್ | | ೧೮೯೬ |
| ೪. | ಕಂತ, ತಗಾಯಿ, ಇಳಿವತ್ತಿ | ಆರ್. ಎಸ್. ಕುಲಕರ್ಣಿ | ೧ಆ೬ಪೈ | ೧೮೯೬ |
| ೫. | ಮಾಳವಿಕಾಗ್ನಿ ಮಿತ್ರ | ಧೋಂಡೋ ನರಸಿಂಹ ಮುಳಬಾಗಲ | ೪೪ ಪೈ | ೧೮೯೭ |
| ೬. | ಕನ್ನಡ ಸುಶೀಲಾ ಪರಿಣಯಂ (ನಾಟಕ) | ಎಚ್. ಚಿದಂಬರಯ್ಯ | ೪ ಆಣೆ | ೧೮೯೯ |
| ೭. | ಕನ್ನಡಿಗರ ಜನ್ಮ ಸಾರ್ಥಕತೆ | ವಲ್ಲಭ ಮಹಾಲಿಂಗ ತಟ್ಟಿ | ೩ ಆಣೆ | ೧೮೯೯ |
| ೮. | ಹಿತೋಪದೇಶ ಭಾಗ - ೩ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ ಆಣೆ | ೧೯೦೦ |
| ೯. | ಹಿತೋಪದೇಶ ಭಾಗ - ೪ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ ಆಣೆ | ೧೯೦೦ |
| ೧೦. | ಬಾಲ್ಯವಿವಾಹಶಾಸ್ತ್ರ ನಿಷೇಧ | ತಿಮ್ಮಾಜಿ ಅನಂತ ಕಾಳಿ | ೫ ಆಣೆ | ೧೯೦೦ |
| ೧೧. | ನಿದ್ರೆಯಲ್ಲೆಬ್ಬಿಸಲ್ಪಟ್ಟ ಚಂದನದಾಸನು (ನಾಟಕ) | ಗಂಗಾಧರರಾವ ಹುಯಿಲಗೋಳ | ೪ ಆಣೆ | ೧೯೦೧ |
| ೧೨. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೩ ಆಣೆ | ೧೯೦೧ |
| ೧೩. | ವೀರಮಣಿ | ತೋಂಟೇಶ ಅನ್ನದಾನಿ ಮಂಗಳೂರು | ೨ ಆಣೆ | ೧೯೦೨ |
| ೧೪. | ಸತ್ಯರಾಜಾಪೂರ್ವದೇಶ ಯಾತ್ರೆಗಳು | ಅನು : ರಾಮರಾವ್ ಬೆನಗಲ್ | ೮ ಆಣೆ | ೧೯೦೩ |
| ೧೫. | ಸುಭದ್ರಾ ಹರಣಂ | | ೨ ಆಣೆ | ೧೯೦೩ |
| ೧೬. | ಅಭಿನವ ಕಾದಂಬರಿ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೫ ಆಣೆ | ೧೯೦೩ |
| ೧೭. | ಆರ್ಥರ್ ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆಯು | ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ | ೧ ರೂ. | ೧೯೦೪ |
| ೧೮. | ಆರ್ಯವಿದ್ಯಾದರ್ಶನವು | ಗುರುನಾಥ ವೆಂಕಟೇಶ ಕಿತ್ತೂರ | ೮ ಆಣೆ | ೧೯೦೪ |
| ೧೯. | ಚಿತ್ತೂರಿನ ಮುತ್ತಿಗೆ | ಕೃಷ್ಣಾಜಿ ಹ. ಮುದವೇಡಕರ | ೬ ಆಣೆ | ೧೯೦೫ |

| | | | | |
|---|---|---|---|---|
| ೨೦. | ಸುಭದ್ರಾವಿಜಯ ನಾಟಕಂ | ಬಿ. ರಾಮರಾವ್ | ೧೨ ಆಣೆ | ೧೯೦೬ |
| ೨೧. | ಕರ್ನಾಟಕ ಕಥಾಸರಿತ್ಸಾಗರ | ಸೋಮದೇವ ಮಹಾಕವಿ | ೬ ಆಣೆ | ೧೯೦೬ |
| ೨೨. | ಕೃಷಿಕರ್ಮ ಶಾಸ್ತ್ರವು | ರಾಮಚಂದ್ರ ಮಧ್ವ ಮಹಿಷಿ | ೧೨ ಆಣೆ | ೧೯೦೬ |
| ೨೩. | ದಕ್ಷಿಣ ಮುಸಲ್ಮಾನ ರಾಜ್ಯಗಳ ಇತಿಹಾಸವು | ರಾಘವೇಂದ್ರ ಕೃ. ಇನಾಮತಿ | ೬ ಆಣೆ | ೧೯೦೭ |
| ೨೪. | ವಿಜಯನಗರದ ಸಾಮ್ರಾಜ್ಯವು | ವೀರಭದ್ರ ಬಸಪ್ಪಾ | ೧ ರೂ. | ೧೯೦೮ |
| ೨೫. | ಮಾನವಶಾಸ್ತ್ರವು | ಗುಡ್ಡೋ ಮುಕುಂದ ಉದಕಟ್ಟಿ | ೮ ಆಣೆ | ೧೯೦೮ |
| ೨೬. | ಎಂಟು ಸ್ತ್ರೀ ರತ್ನಗಳು | ಗದಿಗೆವ್ವ ಕುರಹಟ್ಟಿ | ೬ ಆಣೆ | ೧೯೦೯ |
| ೨೭. | ನಾಮದಾರ ವಿಲಿಯಮ್ ಎವರ್ಟ್ ಗ್ಲಾಡಸ್ಟನ್ ದೊರೆಗಳ ಚರಿತ್ರೆಯು | ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ | ೧ ರೂ. | ೧೯೦೯ |
| ೨೮. | ವಿಶ್ವ | ಜೀವಾಜಿ ವಿಷ್ಣು ಗೋಲೆ | ೪ ಆಣೆ | ೧೯೧೦ |
| ೨೯. | ಮೋಹಿನಿ ಅಥವಾ ನಿಂದಕರ ನಡವಳಿ | ಗದಿಗಯ್ಯಾ ಹು. ಹೊನ್ನಾಪುರಮಠ | ೮ ಆಣೆ | ೧೯೧೧ |
| ೩೦. | ಕನ್ನಡ ಮಾತು ತಲೆ ಎತ್ತುವ ಬಗೆ | ಬಿ. ಎಂ. ಶ್ರೀಕಂಠಯ್ಯ | | ೧೯೧೧ |
| ೩೧. | ಶಿಕ್ಷಣ ಮೀಮಾಂಸೆ | ವೆಂಕಟೇಶ ಬಿ. ಆಲೂರ | ೨ ರೂ. | ೧೯೧೧ |
| | | ವೆಂಕಟೇಶ ನ. ಮಗದಾಳ | ೪ ಆಣೆ | |
| ೩೨. | ಕೌಸಲ್ಯಾಪರಿಣಯಂ | ಕೆ. ರಾಮಸ್ವಾಮಯ್ಯಂಗಾರ | ೩ ಆಣೆ | ೧೯೧೨ |
| ೩೩. | ಕಾಲಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬ ಆಣೆ | ೧೯೧೨ |
| ೩೪. | ಕರ್ನಾಟಕ ಯಯಾತಿ ನಾಟಕಂ | ಶಾ. ವೆಂಕಟರಮಣಯ್ಯ | ೪ ಆಣೆ | ೧೯೧೩ |
| ೩೫. | ಕವಿಕಾರ್ಯ ಪ್ರಶಂಸೆ | ಮ. ಅ. ರಾಮಾನುಜಯ್ಯಂಗಾರ | ೩ ಆಣೆ | ೧೯೧೩ |
| ೩೬. | ಸರಸ್ವತೀ | ಅನು : ಲಿಂಗೋ ರಾಮಚಂದ್ರ ಅಕ್ಕೂರ | ೧೨ ಆಣೆ | ೧೯೧೩ |
| ೩೭. | ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೫ ಆಣೆ | ೧೯೧೪ |
| ೩೮. | ಪ್ರಾಚೀನ ಹಿಂದೂಸ್ತಾನ | ವೆಂಕಟೇಶ ಮಗದಾಳ | ೧ ರೂ. | ೧೯೦೪ |
| ೩೯. | ಪಂ. ಈಶ್ವರಚಂದ್ರ ವಿದ್ಯಾಸಾಗರ ಇವರ ಚರಿತ್ರವು | ಕೆ. ರಾಮಸ್ವಾಮಯ್ಯಂಗಾರ | ೧ ರೂ. | ೧೯೧೭ |
| ೪೦. | ಅಶೋಕ ಅಥವಾ ಪ್ರಿಯದರ್ಶಿನಿ | ಎಂ. ಪಿ. ಪೂಜಾರ | ೧ ರೂ. ೬ಆ. | ೧೯೧೯ |
| ೪೧. | ಬೇಗಮ ಸಮರೂ | ಎಸ್. ಎ. ಕುಲಕರ್ಣಿ | ೬ ಆಣೆ | ೧೯೨೦ |
| ೪೨. | ಹಜರತ ಮಹಮ್ಮದ ಪೈಗಂಬರರು | ಎಮ್. ಪಿ. ಪೂಜಾರ | ೬ ಆಣೆ | ೧೯೨೦ |

| | | | |
|---|---|---|---|
| ೪೩. ಅಮೆರಿಕೆಯೊಳಗಿನ ಬಡ ವಿದ್ಯಾರ್ಥಿಗಳು | ಶ್ರೀನಿವಾಸ ಪಾಂಡುರಂಗ ಕೋಟಿ | ೫ ಆಣೆ | ೧೯೨೦ |
| *೪೪. ಮದುವೆ | ಮ. ಪ್ರ. ಪೂಜಾರ | ೨ ಆಣೆ | ೧೯೨೦ |
| *೪೫. ಹರೀಶನ ಪ್ರೇಮ | | ೪ ಆಣೆ | ೧೯೨೦ |
| ೪೬. ಇಸೋಪನ ಚರಿತ್ರೆ | ತ. ನಾ. ಅಮ್ಮಿನಭಾವಿ | ೩ ಆಣೆ | ೧೯೨೦ |
| ೪೭. ಪಂಡಿತರಾಜ | ಕೇಶವ ರಂಗಭಟ್ಟ ಜೋಶಿ | ೪ ಆಣೆ | ೧೯೨೦ |
| ೪೮. ವಿದ್ಯಾರಣ್ಯ ಸ್ವಾಮಿಗಳು | ಭೀ. ಜೀ. ಹುಲಿಕವಿ | ೧ ರೂ. | ೧೯೨೨ |
| ೪೯. ಅಭಿಷೇಕ ನಾಟಕ | ಪಾನ್ಯಂ ಸುಂದರಶಾಸ್ತ್ರಿ | ೬ ಆಣೆ | ೧೯೨೪ |
| ೫೦. ಕರ್ನಾಟಕ ಸ್ವಪ್ನವಾಸವದತ್ತಂ | ಅನು : ಭೀ. ಜೀ. ಹುಲಿಕವಿ | ೬ ಆಣೆ | ೧೯೨೫ |
| ೫೧. ಸತ್ಕಥಾ ಕುಸುಮಮಂಜರಿ | ನಾರಾಯಣ ವೆಂಕಟೇಶ ಕುರಡಿ | ೧೦ ಆಣೆ | ೧೯೨೫ |
| ೫೨. ದಿವಾಣ ಬಹಾದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆಯು | | | ೧೯೨೫ |
| ೫೩. ಭಾಸಕವಿ ಅಭಿಷೇಕ ನಾಟಕ | ಅನು : ಪಾನ್ಯ ಸುಂದರಶಾಸ್ತ್ರಿ | ೬ ಆಣೆ | ೧೯೨೫ |
| ೫೪. ರಘುವಂಶ (ಕಾಳಿದಾಸ ವಿರಚಿತ) | ಅನು : ಕಲಮಡಿ ನರಹರಿರಾಯರು | ೨ ರೂ. | ೧೯೨೮ |
| ೫೫. ಆರ್ಯರ ಶಿಕ್ಷಣ ಪದ್ಧತಿ | ಎಸ್. ಎನ್. ನರಹರಯ್ಯ | ೪ ಆಣೆ | ೧೯೨೮ |
| ೫೬. ಭೀಷ್ಮಾಚಾರ್ಯ | ಮ. ಪ್ರ. ಪೂಜಾರ | ೫ ಆಣೆ | ೧೯೨೮ |
| ೫೭. ಜೈನಧರ್ಮ ಪರಿಭಾಷೆ | ಮಹಾದೇವ ಪ್ರಭಾಕರ ಪೂಜಾರ | ೧ರೂ.೪ಆ | ೧೯೩೦ |
| ೫೮. ನರಗುಂದ ಬಂಡಾಯ | ಪಂ. ಭೀ. ಜೀ. ಹುಲಿಕವಿ | ೧ ರೂ. | ೧೯೩೦ |
| ೫೯. ವೇಣೀಬಂಧನ | ತಮ್ಮಾಜಿ ನಾ. ಅಮ್ಮಿನಭಾವಿ | ೪ ಆಣೆ | ೧೯೩೭ |
| ೬೦. ಕರ್ನಾಟಕ ಜನಜೀವನ | ಬೆಟಗೇರಿ ಕೃಷ್ಣಶರ್ಮ | ೨ ರೂ. | ೧೯೩೯ |
| ೬೧. ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ | ಪ್ರೊ. ಸ. ಸ. ಮಾಳವಾಡ | ೨ ರೂ. | ೧೯೩೯ |
| ೬೨. ಕಾವ್ಯಾವಲೋಕನ | ಪ್ರೊ. ಎಸ್. ಎಸ್. ಬಸವನಾಳ | | ೧೯೩೯ |
| ೬೩. ಶಬ್ದಾನುಶಾಸನ ಭಾಗ - ೧ | ಕುಂಡಲಗಿರಿ ಆಚಾರ್ಯ | | ೧೯೪೧ |
| ಶಬ್ದಾನುಶಾಸನ ಭಾಗ - ೨ | ಕುಂಡಲಗಿರಿ ಆಚಾರ್ಯ | | ೧೯೪೧ |
| ೬೪. ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಭಾಗ - ೨ | ಶಿ. ಶಿ. ಬಸವನಾಳ | ೨ ರೂ. | ೧೯೪೧ |
| ೬೫. ಕರ್ನಾಟಕ ವಿದ್ಯಾವರ್ಧಕ ಸಂಘ ಐವತ್ತು ವರ್ಷ | | | ೧೯೪೧ |

| | | | |
|---|---|---|---|
| ೬೬. | ಜೀವನ ವಾಙ್ಮಯ ವಿಮರ್ಶೆ | ಗಳಗನಾಥ | ೧ರೂ.೮೫. ೧೯೪೧ |
| *೬೭. | A CULTURAL HISTORY OF KARNATAKA | ಕರಮರಕರ ಎ. ಪಿ. ಹಾಗೂ ಕಲಮದಾನಿ | ೫ ರೂ. ೧೯೪೬ |
| *೬೮. | ನಾನು ಓದುವುದೇನು ? | ವಿವಿಧ ಲೇಖಕರು | ೧ ರೂ. ೧೯೬೮ |
| ೬೯. | ಕಾರ್ಯಾಲಯ ದೀಪಿಕೆ | | ೨೦ ರೂ. ೧೯೭೬ |
| ೭೦. | ಅಸಂಗತ ನಾಟಕಗಳು | ಕೀರ್ತಿನಾಥ ಕುರ್ತಕೋಟಿ | ೧ ರೂ. ೧೯೭೬ |
| ೭೧. | ಲಾವಣಿ ಸಾಹಿತ್ಯ | ಸಿಂಪಿ ಲಿಂಗಣ್ಣ | ೧ ರೂ. ೧೯೭೬ |
| ೭೨. | ಚೆನ್ನವೀರ ಕಣವಿ ಕಾವ್ಯದೃಷ್ಟಿ | ಗೌರೀಶ ಕಾಯ್ಕಿಣಿ | ೪ ರೂ. ೧೯೭೭ |
| *೭೩. | ಆಲ್ಬರ್ಟ್ ಐನ್‌ಸ್ಟೀನ್ | ಡಾ. ಎಂ. ಆಯ್. ಸವದತ್ತಿ ಡಾ. ವಿ. ಎಂ. ಪೂಜಾರ | ೩ ರೂ. ೧೯೮೧ |
| ೭೪. | ರುಚಿ | ಡಾ. ಕೆ. ಕೃಷ್ಣಮೂರ್ತಿ | ೧.೮೦ ೧೯೮೧ |
| ೭೫. | ಜಾನಪದ | ಡಾ. ಜೀ. ಶಂ. ಪರಮಶಿವಯ್ಯ | ೧.೮೦ ೧೯೮೧ |
| *೭೬. | ಬಾಣ ಕಾದಂಬರಿ | ಗಂಗಾಧರ ಮಡಿವಾಳೇಶ್ವರ ತುರಮರಿ | ೩೫ ರೂ. ೧೯೯೫ (೧೦ ನೇ ಮುದ್ರಣ) |
| *೭೭. | ಕನ್ನಡ ಕರ್ನಾಟಕ ಏನು ಮಾಡಬೇಕು ? | ಡಾ. ಪಾಟೀಲ ಪುಟ್ಟಪ್ಪ | ೨ ರೂ. ೧೯೯೫ |
| *೭೮. | ಕಾವ್ಯಯಾನ | ಡಾ. ಬಸವರಾಜ ಸಾದರ | ೩೦ ರೂ. ೨೦೦೦ |
| *೭೯. | ಸ್ವಾತಂತ್ರ್ಯ ಚಿಂತನೆ | ಮೋಹನ ನಾಗಮ್ಮನವರ | ೫೦ ರೂ. ೨೦೦೦ |
| *೮೦. | ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು | ಡಾ. ಬಸವರಾಜ ಸಾದರ | ೧೫೦ ರೂ. ೨೦೦೨ |
| *೮೧. | ಗೋಕಾಕ ವರದಿ ಹೋರಾಟದ ಕಥೆ | ಡಾ. ಪಾಟೀಲ ಪುಟ್ಟಪ್ಪ | ೧೫ ರೂ. ೨೦೦೨ |
| *೮೨. | ಕಥನ ಕುತೂಹಲ | ಮೋಹನ ನಾಗಮ್ಮನವರ | ೬೦ ರೂ. ೨೦೦೩ |
| *೮೩. | ಬಯಲ ಬೇರ ಚಿಗುರು | ಮೋಹನ ನಾಗಮ್ಮನವರ | ೧೫೦ ರೂ. ೨೦೦೩ |
| *೮೪. | ಮಾನವ್ಯಕವಿ ಬಿ.ಎ. ಸನದಿ | ಬಿ. ಫ್ಹಿ. ಗುಂಜೆಟ್ಟಿ | ೧೦ ರೂ. ೨೦೦೩ |
| *೮೫. | ಕನ್ನಡದ ಪೋಷಕರು | ಡಾ. ಜಿ. ಡಿ. ಜೋಶಿ | ೫೦ ರೂ. ೨೦೦೫ |
| *೮೬. | ಸ್ವಾತಂತ್ರ್ಯ ಶರಣ್ಯರು | ಮೋಹನ ನಾಗಮ್ಮನವರ | ೧೦೦ ರೂ. ೨೦೦೫ |

(* ಮಾರಾಟಕ್ಕೆ ಲಭ್ಯವಿವೆ)

# ನಿಜಲಿಂಗಪ್ಪನವರ ಹಾರೈಕೆ

ಶ್ರೀ ನರಸಿಂಹ ದಾಬಡೆಯವರನ್ನು ಸಾಕಷ್ಟು ವರ್ಷಗಳಿಂದ ಅವರ ನಾನಾ ಬಗೆಯ ನಿಃಸ್ವಾರ್ಥ ಸೇವೆಯನ್ನೂ, ಅದರಲ್ಲೂ ಮಹಾತ್ಮಾ ಗಾಂಧೀಜಿಯವರ ಹಳ್ಳಿಗಳಿಗೆ ಸಂಬಂಧಿಸಿದ ವಿಧಾಯಕ ಕಾರ್ಯಕ್ರಮಗಳ ಬಗ್ಗೆ ಅವರಿಗಿದ್ದ ನಂಬಿಕೆ, ಉತ್ಸಾಹ, ಆಸಕ್ತಿಗಳನ್ನೂ ಕಂಡಿದ್ದೇನೆ. ಕೇವಲ ಚಿಕ್ಕ ವಯಸ್ಸಿನಿಂದಲೇ ಅವರ ಜೀವನವು ರಾಷ್ಟ್ರದ ಸೇವೆಗೆ ಮುಡಿಪಾಗಿದೆ. ಇದಕ್ಕೆ ಬುನಾದಿಯಾದ ಕಾರಣ, ಗಾಂಧೀಜಿಯವರ ಸಮ್ಮುಖದಲ್ಲಿ ತಾನು ವಿಧಾಯಕ ಕಾರ್ಯಕ್ರಮಗಳಲ್ಲಿ ದುಡಿಯಲು ಕೊಟ್ಟ ಭಾಷೆ.

ಶ್ರೀ ದಾಬಡೆಯವರು ಚಿಕ್ಕ ವಯಸ್ಸಿನಿಂದಲೂ ಕಾಂಗ್ರೆಸ್‌ಸಂಸ್ಥೆಯ ವಿವಿಧ ಶಾಖೆಗಳಲ್ಲಿ ದುಡಿದಿರುತ್ತಾರೆ. ಶ್ರೀ ದಾಬಡೆಯವರು ಬರೆದಿರುವ ಗ್ರಂಥ 1942ನೇ ಇಸ್ವಿಯ ಗಾಂಧೀಜಿಯವರ ನೇತೃತ್ವದಲ್ಲಿ ಮುಂಬೈಯಲ್ಲಿಯಲ್ಲಿ ಅಗಸ್ಟ್ 8ನೇ ದಿನಾಂಕ ಕಾಂಗ್ರೆಸ್ ಕೈಗೊಂಡ "ಮಾಡು ಇಲ್ಲವೆ ಮಡಿ"ಯ ನಿರ್ಧಾರದ ನಂತರ ಹಿಂದೂಸ್ತಾನದಲ್ಲಿ ನಡೆದ ಭೀಕರ ಚಳುವಳಿಯಲ್ಲಿ ನಡೆದ ಪ್ರಸಂಗಗಳಲ್ಲಿನ ಒಂದು ಕಥೆ. ಅನೇಕರು ಭೂಗತರಾಗಿ ಚಳುವಳಿ ಮುಂದುವರಿಸಿದರು. ಅನೇಕರು ಕಾರಾಗೃಹಕ್ಕೆ ದಾಖಲಾದರು. ಶ್ರೀ ದಾಬಡೆಯವರು ಕರ್ನಾಟಕದಲ್ಲಿ ನಡೆದ ಭೂಗತ ಚಳುವಳಿಯಲ್ಲಿ ಮುಂಬೈಯಲ್ಲಿ ಶ್ರೀ ರಾಮರಾವ ಹುಕ್ಕೇರಿಕರ ಮುಂತಾದ ಮುಖಂಡರೊಡನೆ ಕಾರ್ಯ ಮಾಡಿದ ನಂತರ ಕಾರಾಗೃಹದಲ್ಲಿ ತಾವು ಅನುಭವಿಸಿದ ಕಷ್ಟಗಳನ್ನು ಶ್ರೀಯುತರು ನಮಗೆ ಗೊತ್ತುಮಾಡಿ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಚನ್ನಪ್ಪ ವಾಲಿ, ಮಹದೇವ ಮೈಲಾರರಂಥವರ ರೋಮಾಂಚನಕಾರಿ ಚರಿತ್ರೆಗಳು ನಡೆದು ಕರ್ನಾಟಕಕ್ಕೆ ಕೀರ್ತಿ ತಂದವು. ಶ್ರೀ ದಾಬಡೆಯವರದೂ ಅಂಥದ್ದೇ ಒಂದು ಕಥೆ.

ಇದನ್ನು ಓದಲು ಪ್ರಾರಂಭಿಸಿದರೆ ಕೊನೆಯವರೆಗೂ ಬಿಡುವಂತಿಲ್ಲ. ಈ ಅನುಭವಗಳಲ್ಲಿ ನೋವುಗಳೇ ತುಂಬಿವೆ. ನಲಿವುಗಳು ಸ್ವಾಭಾವಿಕವಾಗಿ ಕಡಿಮೆ. ಬಹುಶಃ ಇವರ ಕುಟುಂಬ ಶ್ರೀಮತಿ ಶಕುಂತಲಾ ಅವರನ್ನೂ, ಮಗುವನ್ನೂ ಕಂಡಾಗ ಕೆಲವು ಸಾರೆ ನಲಿವು ಎನಿಸಿರಬಹುದು. ಶ್ರೀಮತಿ ಶಕುಂತಲಾರವರು ತಮ್ಮ ಪತಿರಾಯರಿಗೆ ಈ ಎಲ್ಲ ಅನುಭವಗಳಲ್ಲಿಯೂ ನೀಡಿದ ಸಹಾಯ, ಸಹಕಾರ ಹೆಮ್ಮೆಪಡುವಂಥದ್ದು. ನನ್ನ ಅಭಿಪ್ರಾಯದಲ್ಲಿ ನಮ್ಮ ಶ್ರೀಮತಿಯರ ಈ ಬಗೆಯ ಸಹಾಯ ಸಹಕಾರವಿಲ್ಲದಿದ್ದರೆ ನಾವು ಯಶಸ್ವಿ ಹೋರಾಟಗಾರರೇ ಆಗುತ್ತಿರಲಿಲ್ಲ.

ಶ್ರೀ ದಾಬಡೆಯವರ "ನೋವು ನಲಿವು" ಓದಿದಾಗ ನನಗೆ ನನ್ನ ಕೆಲವು ಸಾರೆಯ ಕಾರಾಗೃಹಗಳ ಜ್ಞಾಪಕವಾಯಿತು. ಇದನ್ನು ಓದಿ ಒಂದು ರೀತಿಯ ಸಂತೋಷವೂ ಆಯಿತು.

**ಎಸ್. ನಿಜಲಿಂಗಪ್ಪ**
ಮಾಜಿ ಮುಖ್ಯಮಂತ್ರಿಗಳು

